ಕರ್ನಾಟ ಪುಸ್ತಕಮಾಲೆ-೧
ಸರಣಿ ಸಂಪಾದಕ: ಆರ್ವಿಯಸ್ ಸುಂದರಂ

ಕನಕದಾಸರ ನಳಚರಿತ್ರೆ

ವ್ಯಾಖ್ಯಾನ
ಗೀತಾ ನಾವಲ್

ಕರ್ನಾಟ
ಅಭಿಜಾತ ಕನ್ನಡ ಕೇಂದ್ರ

Nalacharitre – Vyakhyana

A commentary by Geetha Naval on Nalacharitre

© 2026 Tattva Heritage Foundation

First Edition: July 2026

ISBN: 978-81-985025-9-9

Series Editor: R. V. S. Sundaram
Karṇāṭa Classical Series 1

Karṇāṭa: Centre for Classical Kannada (karnata.org)
Executive Board
R.V.S Sundaram, Gil Ben-Herut, and Manish Maheshwari

Published by
Tattva Heritage Foundation
Kolkata, India

All rights reserved. No part of this publication may be reproduced, stored, or transmitted in any form without the prior written permission of the publisher.

The views and interpretations expressed in this book are those of the author. The publisher does not take responsibility for any errors or omissions.

For permissions, enquiries, rights-related matter, please contact:

Manish Maheshwari
Tattva Heritage Foundation
namaste@tattvaheritage.org

Typeset by Nethravati, Usharani, Mysuru.

Cover design by Sathi Patel, Puducherry.

Printed at Keerthan Graphics, Mysuru.
Ph. 9916226213

ಅಧಿಕೃತ ಮಾರಾಟಗಾರರು

ಅಭಿರುಚಿ ಪ್ರಕಾಶನ

386, 14ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಸರಸ್ವತಿಪುರಂ, ಮೈಸೂರು–09

ಚರವಾಣಿ: 99805 60013

ಮುನ್ನುಡಿ

ಕನ್ನಡ ಭಾಷಾ ಸಾಹಿತ್ಯಗಳ ಪ್ರಾಚೀನತೆ, ವೈಶಿಷ್ಟ್ಯ, ವೈವಿಧ್ಯ ಮತ್ತು ಶ್ರೀಮಂತಿಕೆಗಳ ಬಗೆಗಿನ ಅರಿವು ಅತ್ಯಗತ್ಯ. ಪ್ರಪಂಚದ ಯಾವ ಭಾಷೆಯ ಸಾಹಿತ್ಯಕ್ಕೆ ಹೋಲಿಸಿದರೂ ಕನ್ನಡದ್ದು ಕಡಮೆ ಸಾಧನೆಯೇನಲ್ಲ. ಆಧುನಿಕ ಸಂದರ್ಭದ ಅಗತ್ಯಗಳಿಗನುಗುಣವಾಗಿ ಕನ್ನಡ ಭಾಷೆಯನ್ನು ರೂಪಿಸಿಕೊಂಡು ಅದನ್ನು ಪ್ರಪಂಚ ಭಾಷೆಯನ್ನಾಗಿ ಮಾಡುವುದು ನಮ್ಮ ಗುರಿಯಾಗಬೇಕು. ಅದರ ಜತೆಗೆ ಕನ್ನಡದ ಭವ್ಯ ಪರಂಪರೆಯನ್ನು ಕೂಡ ಅರ್ಥಮಾಡಿಕೊಳ್ಳುವುದು ಅಗತ್ಯ. ಇದಕ್ಕೆ ಸಮಗ್ರದೃಷ್ಟಿ ಬೇಕು.

ಅಭಿಜಾತ ಕನ್ನಡ ಪರಂಪರೆಯ ದೃಷ್ಟಿಯಿಂದ ನೋಡಿದಾಗ ಕನ್ನಡದ ಕೊಡುಗೆ ಅಪೂರ್ವವಾದುದು. ಒಂಬತ್ತನೆಯ ಶತಮಾನದಷ್ಟು ಹಿಂದೆಯೇ 'ಕವಿ ರಾಜಮಾರ್ಗ'ದಂತಹ ಕಾವ್ಯಮೀಮಾಂಸೆ ರಚಿತವಾಗಿರುವುದು ಮಹತ್ತ್ವದ ಸಂಗತಿ. ಈ ಕೃತಿಯ ಹಿರಿಮೆಯನ್ನು ಗಮನಿಸಲೇಬೇಕಾಗಿದೆ. ಕನ್ನಡನಾಡು, ನುಡಿ, ಜನ, ಭಾಷೆ, ವಿವಿಧ ಭಾಷಾರೂಪಗಳು, ನಾಡಿನ ಹರವು, ಅಲ್ಲಿಯ ಜನರ ಚತುರತೆ ಮೊದಲಾದ ಹಲವು ವಿಷಯಗಳಿಗೆ ಕವಿರಾಜಮಾರ್ಗ ಒಂದು ದಾಖಲೆಯಾಗಿದೆ. ಹಾಗಾಗಿ ಇದೊಂದು ಮಾಹಿತಿಕೇಂದ್ರವೆನ್ನಬಹುದು. ಇದರ ಇನ್ನೊಂದು ವಿಶೇಷ ಎಂದರೆ ಭಾರತೀಯ ಕಾವ್ಯ ಸಂಪ್ರದಾಯವನ್ನೂ ಪರಿಚಯಿಸಿ ಅದರೊಂದಿಗೆ ಕನ್ನಡ ಭಾಷಾಭಿವ್ಯಕ್ತಿಯ ಸ್ವಂತಿಕೆಯನ್ನು ಮಿಲನಗೊಳಿಸಿರುವುದು. ಆದುದರಿಂದ ಈ ಕೃತಿ ಭಾರತೀಯ ಕಾವ್ಯಮೀಮಾಂಸೆಗೂ ಪ್ರಮುಖ ಕೊಡುಗೆ ಎನ್ನಬಹುದು.

ನೂರಾರು ವರ್ಷಗಳ ಹಿಂದೆಯೇ ಇಂದಿಗೂ ಪ್ರಸ್ತುತವೆನಿಸುವ ಕಾವ್ಯ ಮೀಮಾಂಸೆ, ಛಂದಸ್ಸು, ವ್ಯಾಕರಣ ಮೊದಲಾದವನ್ನು ಪರಿಚಯಿಸುತ್ತದೆ ಕವಿರಾಜ ಮಾರ್ಗ. ಛಂದೊಂಬುಧಿ, ಶಬ್ದಮಣಿದರ್ಪಣದಂತಹ ಶಾಸ್ತ್ರಗ್ರಂಥಗಳನ್ನು ನೀಡಿರು ವುದು ಕನ್ನಡದ ಹಿರಿಮೆ. ಕನ್ನಡಕ್ಕೆ ಶಾಸ್ತ್ರಗ್ರಂಥಗಳ ಸುದೀರ್ಘ ಪರಂಪರೆಯೇ ಇದೆ. ಛಂದಸ್ಸು, ವ್ಯಾಕರಣಗಳಲ್ಲದೆ ಅಶ್ವಶಾಸ್ತ್ರ, ಗಜಶಾಸ್ತ್ರ, ಸೂಪಶಾಸ್ತ್ರ, ಮದನತಿಲಕ, ಲಾಸ್ಯರಂಜನಂ ಮೊದಲಾದ ವಿಶಿಷ್ಟಶಾಸ್ತ್ರಗಳಿಂದ ಕನ್ನಡ ಭಾಷೆ ಸಂಪದ್ಭರಿತವಾಗಿದೆ.

ಶಾಸ್ತ್ರಗ್ರಂಥಗಳು ಮಾತ್ರವಲ್ಲದೆ ವಡ್ಡಾರಾಧನೆ, ಚಾವುಂಡರಾಯ ಪುರಾಣ ದಂತಹ ಗದ್ಯಗ್ರಂಥಗಳು, ವಿಕ್ರಮಾರ್ಜುನ ವಿಜಯ, ಆದಿಪುರಾಣದಂತಹ ಚಂಪೂ ಕೃತಿಗಳು, ವಚನ ಸಾಹಿತ್ಯ, ಹರಿದಾಸ ಸಾಹಿತ್ಯ, ಬಸವಪುರಾಣ, ಕುಮಾರ ವ್ಯಾಸ ಭಾರತದಂತಹ ಷಟ್ಪದಿ ಕಾವ್ಯಗಳು, ಸಾಂಗತ್ಯ, ತ್ರಿಪದಿ ಛಂದಸ್ಸುಗಳಲ್ಲಿ ರಚಿತಾದ ಕೃತಿಗಳು ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿವೆ.

ಹಳಗನ್ನಡ ಕೃತಿಗಳನ್ನು ಅರ್ಥಮಾಡಿಕೊಳ್ಳಲು, ಸರಿಯಾಗಿ ಗ್ರಹಿಸಲು ಪರಿ ಶ್ರಮ ಅಗತ್ಯವೆಂಬುದು ನಿಜ. ಆದರೆ ಕನ್ನಡ ಭಾಷೆಯ ವಿಶಿಷ್ಟಸಾಹಿತ್ಯವನ್ನು ಕಡೆಗಣಿ ಸುವುದು ಸರಿಯಲ್ಲ. ಈ ಸಾಹಿತ್ಯದ ಬಗೆಗೆ ಅಭಿರುಚಿಯನ್ನು ಬೆಳೆಸಲು ಹಾಗೂ ಅಧ್ಯಯನ ಮಾಡಲು ಮಾರ್ಗಗಳನ್ನು ಹುಡುಕಬೇಕು. ಹಲವು ಹಳಗನ್ನಡ ಕಾವ್ಯಗಳಿಗೆ ಗದ್ಯಾನುವಾದಗಳನ್ನು ಪ್ರಕಟಿಸುವ ಮೂಲಕ ಕನ್ನಡ ಸಾಹಿತ್ಯ ಪರಿಷತ್ತು ಅತ್ಯುತ್ತಮ ಸೇವೆ ಮಾಡಿದೆ. ಕವಿರಾಜಮಾರ್ಗ, ಪಂಪಭಾರತ, ಗದಾಯುದ್ಧ, ಯಶೋಧರ ಚರಿತೆ ಮೊದಲಾದ ಕೃತಿಗಳಿಗೆ ಬಂದಿರುವ ವ್ಯಾಖ್ಯಾನಗಳು ಆ ಕೃತಿಗಳನ್ನು ಅರ್ಥಮಾಡಿ ಕೊಂಡು ಅಭಿರುಚಿ ಬೆಳೆಸಿಕೊಳ್ಳುವ ನಿಟ್ಟಿನಲ್ಲಿ ಸಹಾಯಕವಾಗಿವೆ.

‘ಕರ್ಣಾಟ’ ಎಂಬ ಹೆಸರಿನಲ್ಲಿ ಅಭಿಜಾತ ಕನ್ನಡ ಕೇಂದ್ರವನ್ನು ಸ್ಥಾಪಿಸುವ ಮೂಲಕ ಅಭಿಜಾತ ಕನ್ನಡ ಕೃತಿಕಾರರ ಅದ್ಭುತ ಸಾಧನೆಯನ್ನು ಲೋಕಕ್ಕೆ ತಿಳಿಸುವ ಪ್ರಯತ್ನ ಮಾಡಲಾಯಿತು. ಅಭಿಜಾತ ಕನ್ನಡ ಭಾಷೆ, ಸಾಹಿತ್ಯ, ಶಾಸನಗಳು ಮತ್ತು ಪರಂಪರೆಯ ಅಧ್ಯಯನ ‘ಕರ್ಣಾಟ’ದ ಗುರಿಯಾಗಿದೆ. ಕನ್ನಡ ಮತ್ತು ಇಂಗ್ಲಿಷ್ ಗಳಲ್ಲಿ ಜಾಲತಾಣದ ಮೂಲಕ ಅಭಿಜಾತ ಸಾಹಿತ್ಯದಲ್ಲಿ ಅಭಿರುಚಿಯನ್ನು ಬೆಳೆಸುವ ಪ್ರಯತ್ನ ನಡೆಯುತ್ತಿದೆ. ಹಳಗನ್ನಡ ಪಠ್ಯಗಳನ್ನು ಹಾಗೂ ಶಾಸನಗಳನ್ನು ಜಾಲ ತಾಣಕ್ಕೆ ಅಳವಡಿಸುವುದರ ಜತೆಗೆ ಪಠ್ಯದ ವಿಷಯಗಳನ್ನು ಹುಡುಕುವ ಅವಕಾಶವನ್ನೂ ಕಲ್ಪಿಸಲಾಗಿದೆ.

‘ಕರ್ಣಾಟ’ದ ವಿವಿಧ ಯೋಜನೆಗಳಲ್ಲಿ ಅಭಿಜಾತ ಸಾಹಿತ್ಯದಲ್ಲಿ ಆಸಕ್ತರು, ಸಂಶೋಧಕರು, ಅನುವಾದಕರು, ಸಂಪಾದಕರು, ವ್ಯಾಖ್ಯಾನಕಾರರು ಪಾಲ್ಗೊಳ್ಳು ತ್ತಿದ್ದಾರೆ. ‘ಕರ್ಣಾಟ’ ಅನೇಕ ಉಪಯುಕ್ತ ಯೋಜನೆಗಳನ್ನು ಹಮ್ಮಿಕೊಂಡಿದೆ. ಇವುಗಳಲ್ಲಿ ಪ್ರಮುಖವಾದವು:

೧. ಪಂಪಭಾರತದ ಇಂಗ್ಲಿಷ್ ಭಾಷಾಂತರ

೨. ಗಿರಿಜಾಕಲ್ಯಾಣದ ಇಂಗ್ಲಿಷ್ ಭಾಷಾಂತರ

೩. ಲಾಸ್ಯರಂಜನಂ ಗ್ರಂಥದ ಇಂಗ್ಲಿಷ್ ಭಾಷಾಂತರ

೪. ಅಭಿಜಾತ ಕನ್ನಡ ಪಠ್ಯಗಳ ಡೇಟಾಬೇಸ್
(ಕನ್ನಡ ಮತ್ತು ಇಂಗ್ಲಿಷ್‌ಗಳಲ್ಲಿ)

೫. ಕನ್ನಡ ಶಾಸನ ಪದಕೋಶ (ಕನ್ನಡ ಮತ್ತು ಇಂಗ್ಲಿಷ್‌ಗಳಲ್ಲಿ)

೬. ಕನ್ನಡ ಪಂಡಿತ ಪರಂಪರೆ (ಕನ್ನಡ ವಿದ್ವತ್ತಿನ ಪ್ರಪಂಚಕ್ಕೆ ಕೊಡುಗೆ ನೀಡಿದ ೬೦ ಜನ ವಿದ್ವಾಂಸರ ಸಾಧನೆ.

ಈ ಯೋಜನೆಗಳ ಜತೆಗೆ ಹಳಗನ್ನಡ ಕೃತಿಗಳಿಗೆ ವ್ಯಾಖ್ಯಾನ ಮತ್ತು ಗದ್ಯಾನುವಾದವನ್ನು ಸಿದ್ಧಪಡಿಸುವ ಕೆಲಸವೂ ಮುಂದುವರಿದಿದೆ. ಈ ನಿಟ್ಟಿನಲ್ಲಿ ಕನಕ ದಾಸರ 'ರಾಮಧ್ಯಾನಚರಿತೆ' ಮತ್ತು 'ಚೂಡಾರತ್ನಶತಕ'ದ ವ್ಯಾಖ್ಯಾನಗಳು ಸಿದ್ಧ ವಾಗಿವೆ. ಈ ಸರಣಿಯಲ್ಲಿ ಸಿದ್ಧವಾಗಿರುವ ಮತ್ತೊಂದು ಕೃತಿ ಕನಕದಾಸರ 'ನಳಚರಿತ್ರೆ'. ಇದನ್ನು ಸಿದ್ಧಪಡಿಸಿದವರು ಡಾ. ಗೀತಾ ನಾವಲ್ ಶ್ರೀನಿವಾಸ್. ಇವರು ಸರ್ಕಾರಿ ಕಾಲೇಜು ಪ್ರಾಂಶುಪಾಲರಾಗಿದ್ದು ನಿವೃತ್ತರಾದರು. ಸಾಹಿತ್ಯ ಮತ್ತು ಸಂಗೀತದಲ್ಲಿ ಕೃಷಿ ಮಾಡಿರು ವುದಲ್ಲದೆ ಅನೇಕ ಕೃತಿಳನ್ನು ಪ್ರಕಟಿಸಿದ್ದಾರೆ. ನವೋದಯ ಸಾಹಿತ್ಯ, ನವ್ಯ ಸಾಹಿತ್ಯ, ಕರ್ನಾಟಕ ಸಂಗೀತ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. 'ಸಂಕೀರ್ತನ ಲಕ್ಷಣ'ವನ್ನು ತೆಲುಗಿನಿಂದ ಕನ್ನಡಕ್ಕೆ, ಕಂಬರಾಮಾಯಣದ ಅರಣ್ಯಕಾಂಡವನ್ನು ತಮಿಳಿನಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ. 'ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸಂಗೀತದ ಪರಿಕಲ್ಪನೆ' ಎಂಬ ವಿಷಯವನ್ನು ಕುರಿತು ಸಂಶೋಧನೆ ಮಾಡಿ ಪಿಎಚ್.ಡಿ. ಪದವಿ ಪಡೆದಿದ್ದಾರೆ.

ಅತ್ಯಂತ ಜನಪ್ರಿಯವಾದ 'ನಳಚರಿತ್ರೆ'ಯ ಶಬ್ದಾರ್ಥ, ಗದ್ಯಾನುವಾದ ಹಾಗೂ ವಿಶೇಷ ವಿಚಾರಗಳನ್ನು ಸಿದ್ಧಪಡಿಸಿ ಕೊಟ್ಟಿದ್ದಕ್ಕೆ ಡಾ. ಗೀತಾ ನಾವಲ್ ಶ್ರೀನಿವಾಸ್ ಅವರಿಗೆ ಧನ್ಯವಾದಗಳು.

ಆರ್ವಿಯಸ್. ಸುಂದರಂ

PREFACE

The Story of Nala and Damayanti in Indian Culture

What makes a story a classic? While some of the contributing factors may may be too enigmatic to articulate, others can be identified. For example, a story deemed a classic must have both a sense of antiquity and a certain weightiness. It should also have a compelling storyline and interesting characters, and involve some romance and adventure. Most important, it should—despite its "larger-than-life" aspect—deal with problems that are recognizable to many, if not all of us.

The story of Nala and Damayanti has all of the above. Appearing for the first time in Vyasa's Mahabharata, a canonical text with a huge circulation, it has been around for more than two thousand years. The plot has a neat and very satisfying narrative arc. Starting with the early lives of its regal and attractive male and female protagonists, the story goes on to describe their fabulous wedding and happy marriage, the crisis that erupts and painfully separates them, and their final reunion and recovery of everything they lost, in what feels like an all-too-happy ending. Along the meandering path of the story of Nala and Damayanti, romance and adventure abound: we learn of how Damayanti chooses Nala despite the heated competition of divine suitors; how Nala becomes possessed by a demon and in a frantic binge of gambling loses everything the young couple has—even his own recognizable appearance; and how finally Damayanti, with her soft yet commanding manner, manages to bring the couple back together and retrieve all they had lost.

But perhaps it is the underlying, less visible themes of the story that account for its great appeal to Indians: the story of Nala and Damayanti, and especially Nala's uneven affairs throughout the story, affirm what might be a suspicion that permeates not just the Mahabharata but also Indian culture in general, namely that at a basic level, human beings are controlled by forces greater than what is immediately visible. These could be external forces of fate, divine creatures, a sibling's rivalry, or—more disturbingly—the internal tides of the human will, driven by dark urges that are difficult to recognize and control.

Other themes are that of hope and of optimistic assurance in love, a love that extends beyond romance and develops into a more committed and sober reality: a lifelong partnership. Damayanti adamantly holds on to this love, and Nala learns to come back to it, to own it. It is this love that pulls the power couple together at the beginning and at the end brings them back together again, and it is this love that society holds as its most elementary bond, one that connects people and enables them to commit to each other.

In the Mahabharata, this story is told to Yudhishthira during the Pandavas' forest exile as a way to comfort him and give him hope that even a monarch like himself, one who has lost everything in a game of dice, can come back. Indeed, the Mahabharata loves repetitions, reverberations, and retellings, and the story of Nala and Damayanti is among its most developed—and loved—side narratives.

Later in history, the story of Nala and Damayanti would gain its own independence, appearing in multiple forms (literature, songs, drama, paintings), from sophisticated Sanskrit compositions to poignant folk epics and dramas, and it can be found in many regions and languages as well, probably too many to detail. In

many of these forms the central themes and characters were adapted to fit different local sensibilities, interests, and concerns. The Kannada Nala Caritre is such a work. It was composed in the sixteen century by the famous poet Kanakadasa, and it gives us a glimpse of how the story was read in the court of King Chenigaraya at that time.

I am extremely happy with the publication of this edition, created by R. V. S. Sundaram and his accomplished team. It makes available a fascinating and important work, accompanied with a new commentary.

Gil Ben-Herut
University of South Florida
January 2026

Recommended readings:

For a fascinating exploration of Nala’s interior instability, see: Shulman, David Dean. "On Being Human in the Sanskrit Epic: The Riddle of Nala." In The Wisdom of Poets: Studies in Tamil, Telugu, and Sanskrit, edited by David Dean Shulman, 131−58. New Delhi, New York: Oxford University Press, 2001.

On retellings and repetition in the Mahaharata, see: Ramanujan, A. K. "Repetition in the Mahābhārata." In Essays on the Mahābhārata, edited by Arvind Sharma, 419–43. Leiden: E. J. Brill, 1991. For the bewildering richness of the story’s retellings, see the following edited volume: Wadley, Susan Snow. Damayanti and Nala: The Many Lives of a Story. New Delhi, Bangalore: Chronicle Books; Distributed by Orient Blackswan, 2011.

ಪ್ರಸ್ತಾವನೆ

ಕನಕದಾಸರು: ಕವಿಚರಿತೆ

ಸಂತರೂ ಚಿಂತನಶೀಲ ಕವಿಯೂ ಕೀರ್ತನಕಾರರೂ ಆಗಿ ಹೆಸರಾದ ಕನಕದಾಸರು ಭಾಗವತ ಸಂಪ್ರದಾಯದ ಕರ್ನಾಟಕದ ಹರಿದಾಸ ಪರಂಪರೆಯಲ್ಲಿ ಏಕೈಕ ಬ್ರಾಹ್ಮಣೇತರ ದಾಸರೆಂದು ಗುರುತಿಸಲ್ಪಟ್ಟವರು. ತಮ್ಮ ಕಾಲ, ಜಾತಿ, ಮತ, ಕೌಟುಂಬಿಕ ವಿವರ ಮುಂತಾದವುಗಳ ಕುರಿತಂತೆ ಅವರು ಸ್ವತಃ ಏನನ್ನೂ ಪ್ರಕಟವಾಗಿ ಘೋಷಿಸಿಕೊಂಡಿಲ್ಲ. ಅವರ ಕೃತಿಗಳು ಹಾಗೂ ಕೃತಿಗಳಿಂದ ಲಭ್ಯ ವಾಗುವ ಕೆಲ ವಿವರಗಳ ಹಿನ್ನೆಲೆಯಲ್ಲಿ ವಿದ್ವಾಂಸರು, ಅವರ ಕಾಲವನ್ನು ಹಾಗೂ ಜೀವನದ ಕೆಲವು ಸ್ಥೂಲ ಅಂಶಗಳನ್ನು ಕುರಿತು ಚರ್ಚಿಸಿದ್ದಾರೆ; ಮತ್ತು ಅಂತಿಮ ವಾಗಿ ಅವರ ಕಾಲವನ್ನು ಕ್ರಿ. ಶ. ಸುಮಾರು 1508 ರಿಂದ 1606 ರ (98 ವರ್ಷ ಗಳು) ಒಳಗಿರಬಹುದೆಂದು ನಿಶ್ಚಯಿಸಿದ್ದಾರೆ. ‘ಕುಲದ ನೆಲೆ ಏನಾದರೂ ಬಲ್ಲಿರಾ?’ ಎಂಬ ಪ್ರಶ್ನೆಯನ್ನು ಮಾನವ ಜಗತ್ತಿನೆದುರು ಇಟ್ಟು ತಾವು ಮೌನಮುನಿಯಂತೆ ತೆರಳಿದ ಕನಕದಾಸರು ಇಂದಿಗೂ ಅನೇಕ ಕಾರಣಗಳಿಂದ ಸಮಕಾಲೀನ ರಾಗುತ್ತಲಿರುವ ವಿಶಿಷ್ಟರು. ಯಾವುದೇ ಪ್ರತಿಭಾವಂತ ಕವಿಯ ಲೋಕಜ್ಞಾನ, ಕಲ್ಪನಾತ್ಮಕತೆ ಅನುಭವ ಶ್ರೀಮಂತಿಕೆಗಳ ಹಿಂದೆ ಅವರು ಹುಟ್ಟಿ ಬೆಳೆದ ಪರಿಸರದ ಪ್ರಭಾವ ಹಾಗೂ ಅಧ್ಯಯನಶೀಲತೆ ಬಹು ಮುಖ್ಯವಾಗಿ ವರ್ತಿಸುತ್ತವೆ. ಕನಕ ದಾಸರನ್ನು ಆ ನೆಲೆಯಿಂದ ತಿಳಿಯುವ ಪ್ರಯತ್ನವೂ ಸಾಕಷ್ಟು ನಡೆದಿದೆ.

ಮಧ್ಯಕಾಲೀನ ಕರ್ನಾಟಕದ ರಾಜಕಾರಣವೂ ಜಾತಿ, ಮತ ಹಾಗೂ ಧಾರ್ಮಿಕ ಪರಿಸರಗಳೂ, ಸಾಂಸ್ಕೃತಿಕ ಸಂಗತಿಗಳೂ ಕನಕದಾಸರನ್ನು ತೀವ್ರವಾಗಿ ಪ್ರಭಾವಿಸಿವೆಯಾದರೂ ಅವರು ಇವೆಲ್ಲವುಗಳ ಸಾಕ್ಷಿರೂಪವಾಗಿ ಕಾಣುವುದಕ್ಕಿಂತ ಹೆಚ್ಚಾಗಿ ಅಂತರಂಗದ ಅನುಸಂಧಾನಕ್ಕೆ ಕಿವಿಗೊಟ್ಟಂತೆ ಇರುವುದನ್ನು ವಿಶೇಷವಾಗಿ

ಗಮನಿಸಬೇಕಿದೆ. ಅವರ ಭಾಷೆ ಭಾವಾಭಿವ್ಯಕ್ತಿ ಹಾಗೂ ಜೀವನಾನುಭವಗಳ ಮೇಲೆ ಪ್ರಭಾವ ಬೀರಿರಬಹುದಾದ ಕೆಲವಂಶಗಳನ್ನು ಮೊದಲಿಗೆ ಗುರುತಿಸಿಕೊಳ್ಳುವ ಆವಶ್ಯಕತೆಯಿದೆ.

ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ 'ಬಾಡ' ಎಂಬೊಂದು ಸಣ್ಣ ಗ್ರಾಮ ಕನಕದಾಸರ ಜನ್ಮಸ್ಥಳವಾದರೂ, ಅವರು ನೆಲೆಸಿ ಖ್ಯಾತನಾಮರಾದದ್ದು ಕಾಗಿನೆಲೆಯಲ್ಲಿ. ಇದು ಅವರ ಆರಾಧ್ಯ ದೈವ ಆದಿಕೇಶವನ ಸನ್ನಿಧಿಯೂ ಹೌದು. ಅತಿ ಸುಂದರ ಪ್ರಕೃತಿ ಸೌಂದರ್ಯದ ಈ ಪ್ರದೇಶವನ್ನು ಜನಪದರು 'ಕಣ್ಣಿದ್ದವ ಕಾಗಿನೆಲೆಯನ್ನು ನೋಡಬೇಕು'ಎಂಬ ಮೆಚ್ಚು ನುಡಿಯಿಂದ ಸಮ್ಮಾನಿಸಿದ್ದಾರೆ. ಇದನ್ನು ಜನಪ್ರಿಯ ಶಿಲಾ ಶಾಸನವೊಂದು ಹೀಗೆ ವರ್ಣಿಸಿದೆ:

ಸಿರಿನೆಲೆ ಗುಣದ ನೆಲೆ ಭಾ 1
ಸುರಕೀರ್ತಿನೆಲೆ ವಿವೇಕವಿಭವದ ನೆಲೆ ವಿ ||
ಸ್ತರಿಪ ಜಯವಧುಗೆ ನೆಲೆಯೆನೆ 1
ಕರವೆಸೆಗುಂ ಕಾಗಿನೆಲೆ ಧರಿತ್ರೀತಳದೊಳ್ ||
ದಳಿತಾಂಭೋಜ ಸರೋವರಪ್ರತತಿಯಿಂದುದ್ಯಾನ ಸಂದೋಹದಿಂ 1
ಫಳಭರಾನ್ವಿತ ರಮ್ಯಶಾಳಿವನದಿಂ ನೀಳಾಭ್ರಸುಂ-ಡ ಸಂ ||
ಕುಳದಿಂ ಸುತ್ತಿದ ಪೂರ್ಣವಾರ್ಧಿಪರಿಖಾವಿಭ್ರಾಜಿಯಿಂ ದೀರ್ಘಿಕಾ1
ವಳಿಯಿಂ ಕಣ್ಗೆಸೆದಿಂತು ಕಾಗಿನೆಲೆ (ನಿ)ತ್ಯಾನೀಕದಿಂದೊಪ್ಪುಗುಂ ||
(ಚಾಲುಕ್ಯ ವಿಕ್ರಮಾಂಕನ ದತ್ತಿ ಶಿಲಾಶಾಸನ:
ಉದ್ಧೃತ-ಕಟ್ಟಿ ಶೇಷಾಚಾರ್ಯ-ಕವಿ ಕನಕದಾಸರು ಪು.26)

"ಸೌಂದರ್ಯದಲ್ಲಿ, ಗುಣ, ವೈಭವ, ವಿವೇಕ, ಕೀರ್ತಿಗಳಿಗೆ ಉನ್ನತೋನ್ನತವಾದ ನೆಲೆ ಕಾಗಿನೆಲೆ. ಜಯ ವಧುವೇ ಇಲ್ಲಿ ಸದಾ ನೆಲೆಸಿದ್ದಾಳೆ; ಅರಳಿದ ತಾವರೆಗಳಿಂದ ತುಂಬಿದ ಸರೋವರಗಳಿಂದಲೂ, ನಳನಳಿಸುವ ಉದ್ಯಾನ ವನಗಳಿಂದಲೂ, ಫಲಾವೃತವಾದ ಭತ್ತದ ಗದ್ದೆಗಳಿಂದಲೂ, ಸುತ್ತಮುತ್ತ ಎಲ್ಲೆಲ್ಲೂ ಆವರಿಸಿ ತುಂಬಿ ಹರಿಯುವ ಶುಭ್ರ ನೀರತೊರೆಗಳಿಂದಲೂ ಕಾಗಿನೆಲೆಯು ನಿತ್ಯ

ಸಂಪತ್ಸಮೃದ್ಧಿಯಿಂದ ಶೋಭಿಸುತ್ತಿದೆ" ಎಂದು ಈ ಮೇಲಿನ ಶಾಸನ ಪದ್ಯಗಳು ಕಾಗಿನೆಲೆಯನ್ನು ವರ್ಣಿಸಿವೆ. ಕನಕದಾಸರಲ್ಲಿ ಕವಿ ಹೃದಯವನ್ನು ಇಂತಹ ಪರಿಸರವು ಅನೂಹ್ಯವಾಗಿ ದೀಪ್ತಗೊಳಿಸಿರಬಹುದು.

ಕನಕದಾಸರು 'ದಾಸ'ನೆಂಬ ಅಭಿಧಾನವನ್ನು ಧರಿಸುವುದಕ್ಕೂ ಮುನ್ನ 'ತಿಮ್ಮಪ್ಪ'ನೆಂಬ ಹುಟ್ಟು ಹೆಸರಿನ ವೀರನಾಗಿ ಜನಮನದಲ್ಲಿ ಪ್ರಸಿದ್ಧರಾಗಿದ್ದಂತೆ ತೋರುತ್ತದೆ. ವಿಜಯನಗರ ಸಾಮ್ರಾಜ್ಯದ ಆಡಳಿತಕ್ಕೆ ಒಳಪಟ್ಟಿದ್ದ ಮಾಂಡಲಿಕ ಬೀರಪ್ಪನು ತಿರುಪತಿಯ ತಿಮ್ಮಪ್ಪನ ಒಕ್ಕಲಾಗಿದ್ದುದರಿಂದ ಮಗನಿಗೂ ತಿಮ್ಮಪ್ಪನೆಂದೇ ಹೆಸರಿಟ್ಟರು. ಎಳವೆಯಿಂದಲೂ ಕತ್ತಿವರಸೆ, ಕುಸ್ತಿ, ಬೇಟೆ, ಮಲ್ಲಯುದ್ಧ ಮೊದಲಾದ ಶೌರ್ಯಪ್ರಧಾನ ಚಟುವಟಿಕೆಗಳಲ್ಲಿ ಪ್ರಾವೀಣ್ಯವಿದ್ದುದರಿಂದ ತಿಮ್ಮಪ್ಪ ಕಾಲಕ್ರಮೇಣ ಜನಮಾನಸದಲ್ಲಿ ಮಹಾ ಪರಾಕ್ರಮಿ ಎಂದು ಹೆಸರಾದ, ದಣ್ಣಾಯಕನೂ ಆದ. ಹೀಗೆ ಮಹಾಶೂರ ತಿಮ್ಮಪ್ಪದಣನಾಯಕ ಭೂಶೋಧನಾ ಕಾರ್ಯದಲ್ಲಿ ಮಗ್ನನಾಗಿರುವಾಗೊಮ್ಮೆ ಆಕಸ್ಮಿಕವಾಗಿ ತನಗೆ ದೊರೆತ ಅಪಾರ ನಿಧಿ ನಿಕ್ಷೇಪವನ್ನು ಕಾಗಿನೆಲೆಯ ಆದಿಕೇಶವನ ಮೂರ್ತಿ ಪ್ರತಿಷ್ಠಾಪನೆಗೂ ಮತ್ತಿತರ ಧರ್ಮಕಾರ್ಯ ಗಳಿಗೂ ವಿನಿಯೋಗಿಸಿ ಕನಕನೆಂದೂ, ಕನಕನಾಯಕನೆಂದೂ ಗೌರವಯುತ ಅಭಿಧಾನಗಳಿಗೆ ಪಾತ್ರನಾದ. ಸಹಜಶೂರನೂ ಶಸ್ತ್ರಾಸ್ತ್ರ ಪ್ರವೀಣನೂ ಕದನ ಕುತೂಹಲಿಯೂ ಆಗಿದ್ದ ಈತನಿಗೆ ಆನೆಗೊಂದಿ ಸಂಸ್ಥಾನದ ಮಹಾರಾಜನಿಂದ ಬಂಕಾಪುರದ ಅಧಿಪತ್ಯದ ಹೊಣೆಗಾರಿಕೆಯೂ ಸಂದು 'ಮೊನೆಗಾರ ಧಣಿ'ಯೆಂಬ ಯೋಗವೂ ಪ್ರಾಪ್ತವಾಯಿತು. ಹೀಗೆ ಸಾಮಾಜಿಕ ವಾಗಿಯೂ ರಾಜಕೀಯವಾಗಿಯೂ ಪ್ರಬಲ ಸ್ಥಾನಗಳಲ್ಲಿದ್ದ ಕನಕನಾಯಕನಿಗೆ ಒಮ್ಮೆ ಯುದ್ಧ ಸಂದರ್ಭದಲ್ಲಿ ಮಾರಣಾಂತಿಕವಾದ ಏಟುಬಿತ್ತು. ಅರೆಪ್ರಜ್ಞಾವಸ್ಥೆಯಲ್ಲಿ ಸಹಿಸಲಸಾಧ್ಯವಾದ ನೋವಿನಿಂದ ಕನವರಿಸುತ್ತಿದ್ದಾಗ ಕನಸಿನಲ್ಲಿ 'ದಾಸನಾಗು' ಎಂದು ದೈವಪ್ರೇರಣೆ ಆಯಿತಂತೆ. ಬಳಿಕ ಖಡ್ಗ ತೊರೆದು ತಾಳ ಹಿಡಿದು ಮಧುಕರ ವೃತ್ತಿಯ ಕನಕದಾಸ ನಾಗುವುದಕ್ಕೆ ಈ ಘಟನೆಯೇ ಪ್ರೇರಣೆಯಾಯಿತು.

ಧುರದಲ್ಲಿ ನಾಲ್ಕು ಸಾವಿರ ನಿಲ್ಲಲದನು ದೆಸೆಗೆ
ಪರಿಹರಿಸುತಿಹೆ ಎಲೊ ಹರಿಯೆ

ಪರಬಲವ ನೋಡಿದರೆ ಉರಿದು ಬೀಳುವ ಮನ
ಸೆರೆಹಾಕಿ ನಿಲಿಸಿದೆಯೊ ಹರಿಯೆ
ಮೊನೆಗಾರ ಧಣಿಯೆಂಬ ಧೈರ್ಯವ ಬಿಡಿಸಿ ಸೇವ
ಕನ ಮಾಡಿದೆ ಹರಿಯೆ
(ಕನಕದಾಸರ ಹಾಡುಗಳು: ಬೆಟಗೇರಿ ಕೃಷ್ಣಶರ್ಮ, ಪುಟ 201)

ಎಂಬ ನುಡಿ ಕನಕ ನಾಯಕನ ಅಂತರಂಗದ ಪಿಸುನುಡಿಯಾಗಿ ಹೊರಬಿತ್ತು. ಹೀಗೆ ಅಂತಃಪ್ರೇರಣೆಯೋ, ದೈವ ಪ್ರೇರಣೆಯೋ ಅಂತೂ ಶೂರ ದಣ್ಣಾಯಕ ಬದಲಾಗುವ ಕಾಲ ಸನ್ನಿಹಿತವಾಗಿತ್ತು. ಇದರೊಂದಿಗೆ ಕಾಲಾನಂತರದಲ್ಲಿ ಅವನ ತಾಯಿಯೂ, ಮಡದಿಯೂ ತೀರಿಕೊಂಡ ಆಘಾತಗಳೂ ಅವನನ್ನು ಬಾಧಿಸಿ, ಪಾರಮಾರ್ಥಿಕ ವಲಯದತ್ತ ಸೆಳೆದಿರಬಹುದು. ಈ ಎಲ್ಲ ಕತೆಗಳ ನಿಜಾಂಶವೇನೇ ಇರಲಿ. ಸಾಮಾನ್ಯನೊಬ್ಬ ತನ್ನ ಅಸ್ಖಲಿತ ಪ್ರತಿಭೆಯಿಂದ ಅಮೋಘವಾಗಿ ಬದಲಾಗುತ್ತ ಜನಮನದಲ್ಲಿ ಸ್ಥಾಪಿತವಾದ ಬಗೆ ಇದು ಎನ್ನಬಹುದು.

ಈ ಎಲ್ಲ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕನಕದಾಸನು ಆಗ್ಗೆ ವಿಜಯ ನಗರದ ಪ್ರಭಾವಲಯದಲ್ಲಿದ್ದು ಅರಮನೆಯ ರಾಜಗುರುಗಳಾಗಿದ್ದ ಶ್ರೀವೈಷ್ಣವ ಸಂಪ್ರದಾಯದ ಪರಮ ಭಾಗವತ ಭಕ್ತ ತಿರುಮಲೈ ತಾತಾಚಾರ್ಯರಿಂದ ತಪ್ತ ಮುದ್ರಾಂಕನ ವೈಷ್ಣವ ದೀಕ್ಷೆಯನ್ನು ಪಡೆದನು. ಜೊತೆಗೆ, ವಿಜಯನಗರ ಸಾಮ್ರಾಜ್ಯದಲ್ಲಿ ಸಾಳ್ವ ನರಸಿಂಹನ ಕಾಲದಿಂದ ಅಚ್ಯುತರಾಯನ ಕಾಲದವರೆಗೆ ಧರ್ಮಸಂಸ್ಥಾಪನಾಚಾರ್ಯರೆಂದು ಹೆಸರಾಗಿದ್ದ ಕೃಷ್ಣಭಕ್ತ ವ್ಯಾಸರಾಯರ ಗುರುಕಾರುಣ್ಯವೂ ದೊರೆತು ವೇದಾಂತ, ಸಂಸ್ಕೃತ, ಸಾಹಿತ್ಯಗಳಲ್ಲಿ ಆಳವಾದ ಶಿಕ್ಷಣವೂ ದೊರೆಯಿತು. ಸ್ವತಃ ವ್ಯಾಸರಾಯರೇ ಅವನಿಗೆ ದೀಕ್ಷೆನೀಡಿ ಅಂಕಿತ ಪ್ರದಾನವನ್ನೂ ಮಾಡಿದ ಮೇಲೆ ಕನಕದಣ್ಣಾಯಕನು 'ಕನಕದಾಸ' ನಾದನೆಂಬ ಕಥೆ ಪ್ರಚಲಿತವಾಗಿದೆ.

ಸಹಜ ಪ್ರತಿಭೆಯೂ, ಏಕಾಗ್ರನಿಷ್ಠೆಯೂ, ಭಗವದ್ಭಕ್ತಿಯೂ, ಅಸಾಧಾರಣ ಲೋಕಾನುಭವವೂ, ಸೂಕ್ಷ್ಮ ಪರಿವೀಕ್ಷಣಮತಿಯೂ ಕನಕದಾಸರನ್ನು ಚಿಂತನಶೀಲ ಕವಿ, ಕೀರ್ತನಕಾರರನ್ನಾಗಿಸಿರುವುದು ಸಹಜ. ಕೀರ್ತನೆಗಳು ಮುಂಡಿಗೆಗಳು,

ಸುಳಾದಿಗಳಲ್ಲದೆ ಇವರು ರಚಿಸಿರುವ ಮೋಹನತರಂಗಿಣಿ, ನಳಚರಿತ್ರೆ, ಹರಿಭಕ್ತಿಸಾರ, ರಾಮಧಾನ್ಯಚರಿತೆ ಮತ್ತು ನೃಸಿಂಹಸ್ತವ ಮೊದಲಾದ ಐದು ಕಾವ್ಯಗಳಲ್ಲಿ ನಳಚರಿತ್ರೆ ಮತ್ತು ಮೋಹನ ತರಂಗಿಣಿ ಕಾವ್ಯಗಳು ಪೌರಾಣಿಕ ಕಥಾವಸ್ತುವನ್ನು ಆಧರಿಸಿವೆ.

ನಳಚರಿತ್ರೆ :

ಮಾತ್ರಾಷಟ್ಪದಿಯಲ್ಲಿ ಅತ್ಯಂತ ಜನಪ್ರಿಯವಾದದ್ದು ಭಾಮಿನೀಷಟ್ಪದಿ. ಗೇಯಸುಭಗವಾಗಿ, ವಿವಿಧ ರಸಭಾವಗಳನ್ನು ನಿರ್ವಹಿಸುವಲ್ಲಿ ಹಲವು ವಿನ್ಯಾಸಗಳಿಗೆ ಒಗ್ಗುವ ಇದನ್ನು 'ರಾಜಷಟ್ಪದಿ' ಎಂದೂ ಕರೆಯಲಾಗುತ್ತದೆ. ಈ ಮಟ್ಟಿನಲ್ಲೇ 'ನಳಚರಿತ್ರೆ'ಯು ರಚಿತವಾಗಿದೆ. ಇದಕ್ಕೆ ಭಾರತೀಯ ಕಥನಸಾಹಿತ್ಯದ ಆವರಣದಲ್ಲಿ ವಿಶಿಷ್ಟವಾಗಿ ಮನಸೆಳೆದಿದ್ದ ಮಹಾಭಾರತದ 'ನಳೋಪಾಖ್ಯಾನ'ವೇ ಆಧಾರ. ಭಾರತೀಯ ಜನಪದದಲ್ಲಿ ಇದಕ್ಕೂ ಹಿಂದೆ ಸಂಸ್ಕೃತದಲ್ಲಿ ಜನಜನಿತವಾಗಿದ್ದ ಸೋಮದೇವನ 'ಕಥಾಸರಿತ್ಸಾಗರ'ದಲ್ಲಿ, ಗುಣಾಢ್ಯನ 'ಬೃಹತ್ಕಥೆ'ಯಲ್ಲಿ, 'ಶತಪಥ ಬ್ರಾಹ್ಮಣ'ದ 13ನೇ ಖಂಡದಲ್ಲಿ ಹಾಗೂ ಋಗ್ವೇದಗಳಲ್ಲಿ ಆಂಶಿಕವಾಗಿ ಕಥಿತವಾಗಿದ್ದ ನಳಚರಿತ್ರೆಯನ್ನು ಹೊರತುಪಡಿಸಿದರೆ ಕನ್ನಡದಲ್ಲಿ ಹೊರಬಂದ ಇದೇ ಕಥಾವಸ್ತುವಿನ ಮೊತ್ತ ಮೊದಲ ಕೃತಿ ಚೌಂಡರಸನ (ಕ್ರಿ.ಶ.1185–1240) 'ನಳಚಂಪೂ'. ಮಹಾಭಾರತದ ವನಪರ್ವದಲ್ಲಿ ಇಪ್ಪತ್ತೆಂಟು ಅಧ್ಯಾಯಗಳಾಗಿ ಹರಡಿಕೊಂಡಿದ್ದ ನಳೋಪಾಖ್ಯಾನವನ್ನೇ ಆಧರಿಸಿದ್ದರೂ ಕನಕದಾಸರ ನಳಚರಿತ್ರೆಯು ಮೂಲದಂತೆ ವರ್ಣನಾಪ್ರಧಾನ ಕೃತಿಯಲ್ಲ. ಒಂಬತ್ತು ಅಧ್ಯಾಯಗಳ ನಾಲ್ಕು ನೂರ ಎಂಬತ್ತೊಂದು ಪದ್ಯಗಳಲ್ಲಿ ನಳದಮಯಂತಿಯರ ಜೀವನ ಕಥನವು ಸಂಕ್ಷಿಪ್ತವಾಗಿ ಮೈದಳೆದಿದೆ. ಮೇಲ್ನೋಟಕ್ಕೆ ನಳದಮಯಂತಿಯರ ಆದರ್ಶ ದಾಂಪತ್ಯ ಕಥೆಯಾಗಿ ಜನಜನಿತ ವಾಗಿದ್ದರೂ ವಾಸ್ತವವಾಗಿ ಇದು ಶೃಂಗಾರಪ್ರಧಾನ ಕಾವ್ಯವಲ್ಲ. ನಡುಗನ್ನಡ ಕಾಲದ ಭಾರತೀಯ ನೆಲೆಯ ಕೌಟುಂಬಿಕ ಪರಿಸರದಲ್ಲಿ ಕಥಿತವಾಗಿರು ವುದರಿಂದಲೂ, ಸಂದರ್ಭೋಚಿತವಾದ ಜಾನಪದೀಯ ಅಂಶಗಳಿಂದ ಕೂಡಿರುವುದರಿಂದಲೂ ಸಾಮಾನ್ಯ ಜನಮನಕ್ಕೆ ಆಪ್ತವಾಗಿ ಮಿಡಿದಿದೆ. ಕಾವ್ಯಾರಂಭದಲ್ಲಿ "ಶ್ರೀಯರಸ ವರಪುರದ ಚೆನ್ನಿಗರಾಯನಂಕಿತಮಾಗೀ ಪೇಳುವೆನು

ಮಹಾಕಥೆಯ” ಎಂದು ಚೆನ್ನಕೇಶವರಾಯನನ್ನು ಸ್ಮರಿಸಲಾಗಿದೆ. ಕಾವ್ಯಾಂತ್ಯದಲ್ಲಿ ‘ವರಪುರದ ಆದಿಕೇಶವ’ ಎಂಬ ಉಲ್ಲೇಖವಿದೆ. ಪ್ರತಿಯೊಂದು ಸಂಧಿಗಳ ಮುಕ್ತಾಯದಲ್ಲಿಯೂ ವರಪುರದ, ವರಪುರದ ಚೆನ್ನಿಗರಾಯ, ವರಪುರಾಧಿ ಚೆನ್ನ ಕೇಶವ ಮುಂತಾಗಿ ಇಷ್ಟದೈವವನ್ನು ಸ್ಮರಿಸಲಾಗಿದೆ. ಇವರ ಇನ್ನಿತರ ಕೃತಿಗಳು ಮತ್ತು ಕೀರ್ತನೆಗಳಲ್ಲಿರುವ ಇಷ್ಟದೈವ ಸಂಬೋಧನೆಗಳನ್ನೂ ಗಮನದಲ್ಲಿಟ್ಟು ಕೊಂಡು ವಿದ್ವಾಂಸರು ಕನಕದಾಸರ ಕುಲದೈವ ಬಾಡದ ಹಾಗೂ ಕಾಗಿನೆಲೆಯ ಆದಿ ಕೇಶವ ಎಂದು ಅಭಿಪ್ರಾಯಪಟ್ಟಿದ್ದಾರೆ. ಪಠ್ಯವೊಂದನ್ನು ಸಾಹಿತ್ಯಾಂಶಗಳ ಹಿನ್ನೆಲೆಯಲ್ಲಿ ಅರ್ಥೈಸುವಷ್ಟೇ ಮುಖ್ಯವಾಗಿ ಅದು ಗರ್ಭೀಕರಿಸಿಕೊಂಡಿರುವ ಚಾರಿತ್ರಿಕ ನಿಲುವು ಗಳು, ಸಾಂಸ್ಕೃತಿಕ ವಿವರಗಳು ಹಾಗೂ ಒಂದು ಸಾಮಾಜಿಕ ಆವರಣದಲ್ಲಿ ಅದಕ್ಕಿರುವ ಮೌಲ್ಯಗಳು ಮುಂತಾದುವುಗಳನ್ನು ಅಧ್ಯಯನಿಸುವುದಕ್ಕೆ ಈ ಅಂಶಗಳು ಮುಖ್ಯವಾಗಿವೆ.

ಕಥಾಹಂದರ:

ಕನಕದಾಸರ ನಳಚರಿತ್ರೆ ವರ್ಣನಾಪ್ರಧಾನ ಕಾವ್ಯವಲ್ಲ. ಕಥಾಹಂದರವೂ ಮೂಲದಲ್ಲಿಯ ಹಾಗೆಯೇ ಕಿರಿದು. ಪಾಂಡವರು ರಾಜ್ಯಭ್ರಷ್ಟರಾಗಿ ವನಾಂತರ ವಾಸಿಗಳಾಗಿದ್ದಾಗ ಅವರು ತಂಗಿದ್ದ ಕಾಮ್ಯಕವನದೆಡೆ ಬಂದಿದ್ದ ರೋಮಶ ಮುನಿಯು ಧರ್ಮರಾಯನಿಗೆ ಸಾಂದರ್ಭಿಕವಾಗಿ ನಳಮಹಾರಾಜನ ಕಥೆಯನ್ನು ಹೇಳುತ್ತಾನೆ.

ನಳನು ನಿಷಧರಾಜ್ಯದ ಚಕ್ರವರ್ತಿ. ಶೂರನೂ ಧೀರನೂ ಅತಿಚಲುವನೂ ಸುಶೀಲನೂ ಜನಾನುರಾಗಿಯೂ ಆಗಿದ್ದವನು. ವಿದರ್ಭ ರಾಜನಾದ ಭೀಮನ ಏಕೈಕ ಸುಪುತ್ರಿ, ಚೆಲುವೆ, ಯಾಗಪುತ್ರಿ ದಮಯಂತಿಯು ತನ್ನ ಸ್ವಯಂವ ರಾರ್ಥಿಗಳಾಗಿ ಆಗಮಿಸಿದ್ದ ಕೆಲವು ವರಿಷ್ಠರಿಂದ ಎದುರಾದ ಅಡೆತಡೆಗಳನ್ನು ನಿವಾರಿಸಿಕೊಂಡು ಸ್ವಯಂವರದಲ್ಲಿ ನಳನನ್ನು ವರಿಸುತ್ತಾಳೆ. ದ್ಯೂತದಲ್ಲಿ ಪುಷ್ಕರನಿಗೆ ಸೋತ ನಳನು ರಾಜ್ಯ ಭೋಗಗಳೆಲ್ಲವನ್ನೂ ಪಣಕ್ಕಿಟ್ಟು ಸ್ಥಾನಭ್ರಷ್ಟನಾಗಿ ದಮಯಂತಿಯೊಂದಿಗೆ ಕಾಡುಪಾಲಾಗುತ್ತಾನೆ. ಮಕ್ಕಳಿಬ್ಬರನ್ನು ದಮಯಂತಿ ತಂದೆ ಯಲ್ಲಿಗೆ ಕಳುಹುತ್ತಾಳೆ. ಸುಮಸುಂದರಿ ತನ್ನ ಮನದನ್ನೆ ಕಾಡಿನಲ್ಲಿ ತೊಳಲುವುದನ್ನು

ಸಹಿಸದ ನಳ ಅವಳು ತಂದೆಯಲ್ಲಿಗೆ ಹೋಗಲೆಂದು ಹೇಳುತ್ತಾನೆ. ಅವಳು ಒಪ್ಪದ ಕಾರಣ ಕಾಡಿನಲ್ಲಿ ಅವಳೊಬ್ಬಳನ್ನೇ ಏಕಾಂಗಿಯಾಗಿ ಬಿಟ್ಟು ತನ್ನ ಅಗಲಿಕೆಯ ಕಾರಣದಿಂದಲಾದರೂ ಅವಳು ತಂದೆಯಲ್ಲಿಗೆ ತೆರಳುತ್ತಾಳೆಂದು ಭಾವಿಸಿ ಹೊರಟು ಹೋಗುತ್ತಾನೆ. ಕಾಡಿನ ಒಂದೆಡೆ ಅವನಿಗೆ, ಮತ್ತೊಂದೆಡೆ ದಮಯಂತಿಗೆ ಅಪಾಯಗಳು ಮೈದರೆದು ಇಬ್ಬರೂ ಬಳಲುತ್ತಾರೆ. ಕೊನೆಗೆ ಕಾಲಾನಂತರ ಇಬ್ಬರ ಸಮಾಗಮವಾಗುತ್ತದೆ. ತದನಂತರ ನಳನು ಪುಷ್ಕರನೊಂದಿಗೆ ಸಮರದಲ್ಲಿ ಹೋರಾಡಿ ಗೆದ್ದು ರಾಜ್ಯವನ್ನು ಹಿಂಪಡೆಯುತ್ತಾನೆ. ಇವಿಷ್ಟು ಅತ್ಯಂತ ಸಂಕ್ಷಿಪ್ತವಾಗಿ ನಳ–ದಮಯಂತಿಯರ ಕಥೆಯ ಮುಖ್ಯಾಂಶಗಳು.

ಕನ್ನಡದಲ್ಲಿ ನಳದಮಯಂತಿಯರನ್ನು ಕಥಾವಸ್ತುವನ್ನಾಗಿಸಿಕೊಂಡಿರುವ ಹಲವಾರು ಕಾವ್ಯಗಳು, ನಾಟಕಗಳು, ಯಕ್ಷಗಾನ ಪ್ರಸಂಗಗಳು ಇವೆ. ಕಾಲಕಾಲಕ್ಕೆ ಬದಲಾಗುವ ಯುಗಧರ್ಮಕ್ಕನುಗುಣವಾಗಿ ಕಥೆಯು ಒಳಗೊಳ್ಳುವ ವಿವರಗಳ ಪ್ರಧಾನ ಆಶಯಗಳೂ ಬದಲಾಗುತ್ತಿರುತ್ತವೆ. ಹಾಗಾಗಿ ಕನಕದಾಸರ ನಳಚರಿತ್ರೆ ವಿಶೇಷವಾಗಿ ಕಣ್ಸೆಳೆಯುವ ಹಾಗೂ ಕನಕದಾಸರಿಗೆ ವಿಶಿಷ್ಟವಾಗಿರುವ ಅಂಶಗಳನ್ನು ಹೇಗೆ ಒಳಗೊಂಡಿದೆ ಎಂಬುದನ್ನು ಲಕ್ಷಿಸುವುದು ಅವಶ್ಯ. ಕೀರ್ತನಕಾರರಾದ ಕನಕರು ಭಕ್ತಿಪರವಶರಾಗಿ 'ದಾಸನಾಗು' ಎಂದು ಪ್ರಪತ್ತಿ ಮಾರ್ಗವನ್ನು ಸೂಚಿಸಿದರೂ 'ವಿಶೇಷನಾಗು' ಎಂಬ ಒಳ ಎಚ್ಚರದ ದನಿಯನ್ನೆತ್ತಿದ್ದು ಗಮನಾರ್ಹ. ದಾಸಸಾಹಿತ್ಯ ಕ್ಷೇತ್ರದಲ್ಲಿ ಹೀಗೆ ಹೊಸತೊಂದು ಕಾವ್ಯ ಚಿಂತನೆಯನ್ನು ಹರಿಸುತ್ತ 16ನೇ ಶತಮಾನದಾವರಣದಲ್ಲಿ ನಿಂತು ಮತೀಯವಾದ ಬಿಗು ಸನ್ನಿವೇಶಗಳಿಂದಾಚೆ ಮತಮಾನ್ಯ ಭಕ್ತ ಚಿಂತನೆಗಳಿಂದಾಚೆ ಗಮನಹರಿಸಿದ ಕನಕರನ್ನು ವ್ಯಾಸತೀರ್ಥರು 'ಇವನ ನಾಡೆಲ್ಲ ಹುಡುಕಿದರು ಈಡಾರ ಕಾಣೆ' ಎಂದು ಮೆಚ್ಚು ನುಡಿಯಲ್ಲಿ ಅಭಿನಂದಿಸಿದ್ದು ಸಹಜ. ಯಾಕೆಂದರೆ ದಾಸಕೂಟವೆಂಬುದು ತಾವು ಒಪ್ಪಿಕೊಂಡ ಕ್ಷೇತ್ರ ಎಂಬ ಒಂದೆ ಕಾರಣಕ್ಕಾಗಿ ಅಲ್ಲಿದ್ದ ಮಿತಿಗಳನ್ನೂ, ಕಠಿಣವಾದ ಆಚರಣೆಗಳನ್ನೂ, ವಿಧಿವಿಧಾನಗಳನ್ನೂ ಕನಕರು ಸುಮ್ಮನೆ ಒಪ್ಪಿ ಕೊಂಡವರಲ್ಲ.

ನಳಚರಿತ್ರೆಯಂತಹ ಸೀಮಿತವಾದ ಹಾಗೂ ಅದಾಗಲೇ ಹಲವೆಡೆ ಚಿತ್ರಿತಗೊಂಡ ಪಾತ್ರಗಳಿದ್ದ ಕಥಾಪರಿಧಿಯಲ್ಲಿ ಕನಕರು ಸಾಕಷ್ಟು ಸ್ವಂತಿಕೆಯನ್ನು ಮೆರೆದಿದ್ದಾರೆ. ರಾಜಪ್ರಭುತ್ವ, ಪುರುಷಾಹಂಕಾರಗಳು ಸ್ತ್ರೀತ್ವದ ಮಾರ್ದವತೆಯೆದುರು, ವಿವೇಚನಾ ಶಕ್ತಿಯೆದುರು ತಣ್ಣಗಾದ ಪರಿಯನ್ನು ನಳಚರಿತ್ರೆ ತೆರೆದಿಡುತ್ತದೆ. ವಾಲ್ಮೀಕಿ ತನ್ನ ರಾಮಾಯಣ ಕಥಾರಂಭದಲ್ಲಿ ಸೀತಾ ಪಾತ್ರದ ಮಹತ್ವವನ್ನು ಕುರಿತು ಪ್ರಸ್ತಾಪಿಸಿ 'ಸೀತಾಯಾಂ ಚರಿತಂ ಮಹತ್' ಎನ್ನುತ್ತಾ ರಾಮಾಯಣದ ಪ್ರತೀ ಪಾತ್ರದ ಹಿಂದೆಯೂ ಸೀತೆಯ ವ್ಯಕ್ತಿತ್ವದ ಛಾಯೆ ಸರಿದಾಡುವಂತೆ ಮಾಡಿದ್ದಾನೆ. ಅಂತೆಯೇ ನಳಚರಿತ್ರೆಯಲ್ಲೂ ಇದೇ ಛಾಯೆಯ ನಿರ್ವಹಣೆ ಕಂಡುಬರುತ್ತದೆ. ಅದರ ಮುಖ್ಯ ಪಾತ್ರವಾದ ದಮಯಂತಿಯು ಸಾಮಾನ್ಯ ಮಾನವ ಸ್ತ್ರೀಯಲ್ಲ, ಯಾಗಪುತ್ರಿ, ವನಜಾಕ್ಷಿ, ಪರಮ ಪುಣ್ಯಾಂಗನೆ, ಮಹಾಪತಿವ್ರತಾ ಶಿರೋಮಣಿ, ಲೋಕದ ಪರಿಯಲ್ಲ, ಸೊಬಗಿನ ಸೋನೆ, ಬೆಡಗಿನ ಕಾಂತೆ, ಸಾಧ್ವಿ; ಇಂದ್ರ, ಯಮ, ವರುಣ, ವಾಯು ಮೊದಲಾದ ದೇವತಾ ಪುರುಷರು, ಕಲಿಯಂತಹ ನಿಷ್ಕರುಣಿ ಪರೀಕ್ಷಕ, ಭೀಮನೃಪ, ಋತುಪರ್ಣ, ನಳ, ಬಣಜಿಗ ಸಮೂಹ, ಬೇಟೆಗಾರ, ಬ್ರಾಹ್ಮಣ ಯಾತ್ರಿಕ ಮೊದಲಾದ ಪುರುಷರೆಲ್ಲರೂ ಅವಳ ಸೌಂದರ್ಯ, ನಡೆ-ನುಡಿ, ಸಂಯಮದಿಂದ ಪರಿಸ್ಥಿತಿಗಳನ್ನು ನಿಭಾಯಿಸುವ ಜಾಣ್ಮೆ, ದೃಢನಿಲುವು, ರಾಜನೀತಿ ನೈಪುಣ್ಯ, ಸಾಮಾಜಿಕ ಪ್ರಜ್ಞೆ, ಹಾಗೂ ದೂರಾಲೋಚನ ಸಾಮರ್ಥ್ಯಗಳೆದುರು ಕೀಲುಗೊಂಬೆಗಳಂತೆ ವರ್ತಿಸಬೇಕಾಗುತ್ತದೆ. ಸೀಮಿತ ಚೌಕಟ್ಟಿನ ಸ್ತ್ರೀಪಾತ್ರವೊಂದು ರಾಜಪ್ರಭುತ್ವದ ಹಿಂದಿರುವ ಸನ್ನೆಗೋಲಾಗಿ ಸಿದ್ಧಗೊಳ್ಳುವುದನ್ನು ಇಡೀ ಕಾವ್ಯವು ತೆರೆದಿಡುತ್ತದೆ. ದಮಯಂತಿಯು ಈ ಶಕ್ತಿಯ ಒಂದು ಸಣ್ಣ ನಿದರ್ಶನ. ಅವಳು ಸ್ವಯಂವರದ ದಿನದಿಂದ ಪ್ರಕಟವಾಗುತ್ತ ಕಾವ್ಯಾಂತ್ಯದ ವೇಳೆಗೆ ಒಂದು ಬೃಹತ್ ಸ್ತ್ರೀಶಕ್ತಿ ರೂಪವಾಗಿ ಬೆಳೆಯುವುದರತ್ತ ಕನಕರು ನಮ್ಮ ಗಮನ ಸೆಳೆಯುತ್ತಾರೆ. ಈ ಅಂಶವು ಕಥಾ ದೃಷ್ಟಿಯಿಂದ ಮಾತ್ರವಲ್ಲ, ಅದು ಠೇಂಕಾರ ಪ್ರಧಾನವಾದ ಪುರುಷಾಹಂಕಾರಕ್ಕೆ ಎದುರು ದನಿಯಾಗಿ ನಿಂತ ರೂಪಕ ಮಾದರಿ ಎನ್ನಬಹುದು. ಕನಕದಾಸರು ಸ್ತ್ರೀಶಕ್ತಿ ಪರ ದನಿಯೆತ್ತಿರುವುದನ್ನು ಅವರ ಒಂದು ಬಹುಸುಂದರ ಕೀರ್ತನೆಯಲ್ಲಿಯೂ ಕಾಣಬಹುದು. 'ನಿನಗಿಂತ ಕುಂದೇನೋ ನಮ್ಮಮ್ಮ ಜಯಲಕ್ಷ್ಮಿ' ಎಂಬ ಅವರ ಕೀರ್ತನೆಯಲ್ಲಿ ಶ್ರೀದೇವಿ, ಸರಸ್ವತಿ, ಭಾರತಿ ಮೊದಲಾದ ಸ್ತ್ರೀ

ದೈವಗಳನ್ನು ಶ್ರೀಹರಿಯ ಗುಣ ವೈಶಿಷ್ಟ್ಯಗಳಿಗೆ ಪ್ರತಿಮುಖವಾಗಿ ಪರಿಚಯಿಸುವ ಪ್ರಯತ್ನವಿದೆ.

ನೀಲ ವರ್ಣ(ನು) ನೀನಾದರೆ ಆಕೆ
ನೀಲ ಕುಂತಳೆ ತಾನಾದಳು
ಲೋಲ ಕಮಲನಾಭ ನೀನಾದರೆ ಆಕೆ
ಬಾಲ ಕಮಲಮುಖಿ ತಾನಾದಳಯ್ಯ
ಮಚ್ಛಾವತಾರ ನೀನಾದರೆ ಆಕೆ
ಮಚ್ಛಗಂಗಳೆ ತಾನಾದಳು

ಹೀಗೆಯೇ ಶಂಖಪಿಡಿದ Vs ಶಂಖ ಕಂಠಳು; ಗಜವರದ Vs ಗಜಗಮನೆ; ನರಸಿಂಹ Vs ಸಿಂಹಮಧ್ಯಳು (ಕನಕದಾಸರ ಕೀರ್ತನೆಗಳು– ಡಾ. ಟಿ. ಎನ್. ನಾಗರತ್ನ) ಮುಂತಾಗಿ ಪುಂ–ಸ್ತ್ರೀ ಅನ್ವರ್ಥನಾಮಗಳ ಮೂಲಕ ಎರಡು ವಿರುದ್ಧ ಲಿಂಗಗಳ ವೈಶಿಷ್ಟ್ಯ ಮತ್ತು ವೈರುಧ್ಯಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಸೆರೆಹಿಡಿಯುತ್ತಲೇ ಸ್ತ್ರೀಪರ ಗುಣಾಧಿಕ್ಯಗಳನ್ನು ಎತ್ತಿ ಹಿಡಿದಿದ್ದಾರೆ.

ಕನಕದಾಸರ ವೈಚಾರಿಕ ಪ್ರಜ್ಞೆ ಮತ್ತು ಸಾಮಾಜಿಕ ಚಿಂತನೆಗಳಲ್ಲಿ ಒಂದು ಬಗೆಯ ಪ್ರಶ್ನಿಸುವ ನಿಲುವಿನಂತಹ ಒಳಕಾವು ಹರಿಯುವುದನ್ನು ಪ್ರಧಾನವಾಗಿ ಗುರುತಿಸಬಹುದು. ಹಾಗಾಗಿಯೇ ದಮಯಂತಿಯ ಬಾಯಲ್ಲಿ ಇಂದೂ ಸ್ತ್ರೀವಾದಿ ನೆಲೆಯೊಳಗೆ ಎತ್ತಬಹುದಾದ ಪ್ರಶ್ನೆಗಳನ್ನು ಹಾಕಿರುವುದು ಗಮನಾರ್ಹ. ಈ ಕಾರಣದಿಂದಲೇ ಕನಕರು ಇಂದಿಗೂ ಪ್ರಸ್ತುತರಾಗಿ ದನಿ ಮಾಡುತ್ತಾರೆ. ನಳಚರಿತ್ರೆಯಲ್ಲಿ ಈ ದನಿಯನ್ನು ಹುಡುಕ ಹೊರಟರೆ ದಾರಿ ಹಲವು ಕವಲುಗಳಲ್ಲಿ ಮೈದೆರೆಯುತ್ತದೆ. ದಮಯಂತಿಯ ಪಾತ್ರವನ್ನೇ ಗಮನಿಸುವುದಾದರೆ, ಅವಳು ತನ್ನ ಪತಿಯೂ ರಾಜನೂ ಆದ ನಳನಿಗೆ ಅತಿ ವಿಧೇಯಳು. 'ನೆಳಲು ತನುವಿನ ಬಳಿಯೊಳಲ್ಲದೆ ಚಲಿಸುವುದೆ', 'ಅನುದಿನವು ನಾನು ನಿಮ್ಮ ಪದಯುಗವನಜವನು ಭಜಿಸುವುದ ತೊರೆದೀ ತನುವ ಸೈರಿಸಲಾಪೆನೆ' ಎಂಬಿತ್ಯಾದಿಯಾಗಿ ನಳನನ್ನು ಆರಾಧಿಸುತ್ತಾಳಾದರೂ ಅದು ದೈನ್ಯದ ದನಿಯಾಗದಂತೆ ನಿರ್ವಹಿಸಿದವಳು. ಸ್ವಯಂವರದ ಸಮಯದಲ್ಲಿ ಇಂದ್ರನ ಹೇರಾಸೆಯಿಂದ ನಳನನ್ನು ಗುರುತಿಸಲು

ತಬ್ಬಿಬ್ಬುಗೊಂಡಾಗಲೂ ಎದೆಗೆಡದೆ ತಂದೆಯೊಂದಿಗೂ, ತಾನು ನಂಬಿದ ಜ್ಞಾನದಾಯಿ ಸರಸ್ವತಿಯೊಂದಿಗೂ ವಿಷಯದ ಗಂಭೀರತೆಯನ್ನು ಅರಿಯಲು, ಹಾಗೂ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಇಂದ್ರಾದ್ಯರಲ್ಲಿ ಯಾರಾದರೂ ಒಬ್ಬರನ್ನು ವರಿಸಬೇಕೆಂದು ಒತ್ತಾಯ ಬಂದಿದ್ದಾಗಲೂ, ದೇವಲೋಕದ ಪದವಿ, ಐಶ್ವರ್ಯಪ್ರಾಪ್ತಿಯ ಪ್ರಲೋಭನೆಗಳು ಬಂದಾಗಲೂ ತಾಳ್ಮೆಯಿಂದ ತನ್ನ ವೈಚಾರಿಕ ಪ್ರಜ್ಞೆ, ಹಾಗೂ ವ್ಯವಧಾನಗಳನ್ನು ಪ್ರದರ್ಶಿಸುತ್ತಾಳೆ. ನಳನಲ್ಲಿಟ್ಟಿದ್ದ ಆಳವಾದ ನಿಶ್ಚಲ ಪ್ರೀತಿ ಮತ್ತು ಮಾಲಿನ್ಯರಹಿತ ಅಂತಃಸಾಕ್ಷಿಯೇ ಅವಳು ಎಲ್ಲ ಕಷ್ಟಕಾರ್ಪಣ್ಯಗಳೆದುರು ಶಕ್ತಿರೂಪವಾಗಿ ನಿಲ್ಲಲು ಬೆಂಬಲವಾಗಿ ನಿಲ್ಲುತ್ತದೆ. ಕವಿ ಅವಳನ್ನು "ಗುಣದೊಳಗೆ ಶೀಲದಲಿ ಮಾತಿನ ಭಣತಿಯಲಿ ಗಾಂಭೀರ್ಯದಲಿ ವಿತರಣದಲನುಪಮ ವಿದ್ಯೆಯಲಿ ಗುರುಭಕ್ತಿಯಲಿ ಪ್ರಣಿತಿಸಲು ಶರ್ವಾಣಿ ರತಿಯರಿಗೆಣೆಯೆನಿಪ ಸುಂದರಿ" ಎಂದೆಲ್ಲ ಪರಿಚಯಿಸುವಲ್ಲಿಯೇ ಕಾವ್ಯದಲ್ಲಿಯ ಪುರುಷ ಪಾತ್ರಗಳೆದುರು ಸ್ತ್ರೀ ಗುಣಮಹತ್ವವನ್ನು ಎತ್ತಿ ತೋರಿಸಿರುವುದು ಸ್ಪಷ್ಟವಾಗುತ್ತದೆ. ಜೂಜಿನಲ್ಲಿ ನಳನು ಪರಾಭವಗೊಂಡು ರಾಜ್ಯ ರಾಜಭೋಗಭಾಗ್ಯಾಧಿಕ್ಯಗಳನ್ನೆಲ್ಲ ಕಳೆದುಕೊಂಡು ನಿಂತಾ ಗಲೂ ದಿಕ್ಕೆಡದೆ, ತನ್ನ ಮತ್ತು ತನ್ನ ಮಕ್ಕಳ ಭವಿಷ್ಯದ ಗತಿ ಏನಾಯಿತೆಂಬುದರ ಕುರಿತ ಚಿಂತೆಯನ್ನು ಹೊರಗೆಡವದೆ ನಳನನ್ನು ಸಮಾಧಾನಿ ಸುತ್ತ ಅವನಿಗೆ ಪಕ್ಕ ಬಲವಾಗಿ ನಿಲ್ಲಲು ಸಂಕಲ್ಪಿಸುವುದು, ನಳನನ್ನು ಪುನಃ ರಾಜ್ಯದತ್ತ ಸೆಳೆಯಲು ಉಪಾಯ ಮಾಡಿ ಪುನಃ ಸ್ವಯಂವರವನ್ನು ಘೋಷಿಸುವುದು, ಬಾಹುಕನನ್ನು ಹಲವು ಹತ್ತು ಬಗೆಯಲ್ಲಿ ಪರೀಕ್ಷಿಸುವ ರೀತಿ, ಕಾಡಿನಲ್ಲಿ ನಳ ತನ್ನನ್ನು ಏಕಾಂಗಿಯಾಗಿ ಅಗಲಿದಾಗ ದಿಕ್ಕೆಟ್ಟರೂ ಧೃತಿಗೆಡದೆ ಬಣಜಿಗರೊಂದಿಗೆ ಬೆರೆತು ಸಮಾಲೋಚಿಸಿ ತನಗೆ ಸಿಕ್ಕ ಅವಕಾಶವನ್ನೇ ಬಳಸಿಕೊಂಡು ತನ್ನವನನ್ನು ಹುಡುಕುವ ವ್ಯವಧಾನವನ್ನು ತೋರುವ ಬಗೆ;- ಹೀಗೆ ಕನಕದಾಸರು ಅವಳನ್ನು ಕ್ಷಾತ್ರ ತೇಜಸ್ಸಿನ ಮೂರ್ತಿ ರೂಪವಾಗಿಯೂ ಮಾತೃತ್ವದ ನೆಲೆಯ ಸಂಯಮ ರೂಪವಾಗಿಯೂ ಕಲ್ಪಿಸುತ್ತಾರೆ.

ನಳ, ಪುಷ್ಕರರಂತಹ ವೀರಾಧಿವೀರ, ಶೂರ ರಾಜಪ್ರಭುತ್ವದ ಧೋರಣೆ ಗಳು ಈ ಭೂಮಂಡಲದ ಎಲ್ಲ ಪ್ರದೇಶಗಳ ಆಳುವ ವರ್ಗಗಳಲ್ಲೂ ಇರು ವಂಥವೇ. ಈ ಹಿನ್ನೆಲೆಯಲ್ಲೂ ನಳಚರಿತ್ರೆಯಲ್ಲಿಯ ಸಂಭವಗಳು ಪ್ರಸ್ತುತವೆ

ನಿಸುತ್ತವೆ. ಜಾಗತಿಕ ವಾಗಿ ನೋಡುವುದಾದರೆ ಇಂದು ಎಲ್ಲ ದೇಶಗಳ ಗಡಿಗಳಲ್ಲೂ ಯುದ್ಧೋನ್ಮಾದ ತಾಂಡವವಾಡುತ್ತಿವೆ. ಹಿಂದೆ ಈ ರೀತಿಯ ಯುದ್ಧ ಪ್ರಸಂಗಗಳನ್ನು ಕ್ಷಾತ್ರ ತೇಜಸ್ಸಿನ ವೀರಯುಗದ ಮಾದರಿಗಳೆನ್ನಲಾಗುತ್ತಿತ್ತು. ಆದರೆ ಯುದ್ಧವು ಪೈಶಾಚಿಕವಾಗಿ ಮಾನವ ಧರ್ಮವನ್ನು ತುಳಿದು ಹಾಕುತ್ತದೆ. ವ್ಯಕ್ತಿ ವ್ಯಕ್ತಿಗಳ ನಡುವೆ, ಧರ್ಮ, ಮತ, ಜಾತಿ, ವರ್ಗಗಳ ನಡುನಡುವೆ ತಲೆ ಎತ್ತಿರುವ ವಿಘಟನೆ, ಕೌಟುಂಬಿಕ ವಿಘಟನೆ, ಜನಾಂಗೀಯ ದ್ವೇಷಗಳೂ ಮತ್ತೊಂದು ಬಗೆಯ ಯುದ್ಧೋನ್ಮಾದವೇ. ಯಾವ ವ್ಯಕ್ತಿಯೂ ತಾನು ಅಲಂಕರಿಸುವ ಹುದ್ದೆಗೆ ಅನುಗುಣವಾದ ಗೌರವಕ್ಕೆ ತಕ್ಕ ತೂಕದಿಂದ ವರ್ತಿಸುತ್ತಿಲ್ಲ. ಇಡೀ ಸಮಾಜದ ಸಂಸ್ಕೃತಿಯ ತಳಹದಿಯೇ ಭ್ರಷ್ಟಗೊಂಡಿದೆ. ನುಡಿವಳಿಕೆ ನಡವಳಿಕೆಗಳಲ್ಲಿ ಅನೈತಿಕವಾದ, ಅಧಾರ್ಮಿಕವಾದ ಕ್ರಿಯೆಗಳೇ ಭೂತ ಭೇತಾಳಗಳಂತೆ ಮೈವೆತ್ತಿವೆ. ಅಧಿಕಾರ ಲೋಲುಪ್ತಿಯ ಮೈಗಂಟಿಸುವ ಇಂತಹ ಸಾಮಾಜಿಕ ವ್ಯಾಧಿರೂಪವನ್ನು ಪ್ರಪಂಚದ ಎಲ್ಲ ಸಾಹಿತ್ಯಗಳೂ ವಿವಿಧ ಪಾತ್ರಗಳ ಮೂಲಕ ಟೀಕಿಸಿವೆ. ನಳಚರಿತ್ರೆಯಲ್ಲೂ ಇದೇ ಹವೆ ಇದೆ. ಉತ್ತರ ದಿಕ್ಪತಿ ಅಗ್ನಿದೇವ, ಪಶ್ಚಿಮ ದಿಗ್ದೇವತೆ ವರುಣ, ಪೂರ್ವ ದಿಗ್ಪತಿಯೂ ದೇವಲೋಕದ ಅರಸನೂ ಆದ ಇಂದ್ರ, ದಕ್ಷಿಣ ದಿಗ್ಪತಿ ಮೃತ್ಯುದೇವತೆ ಯಮ ಮೊದಲಾದ ವೈದಿಕ ಪುರುಷರು, ಭೂಮಂಡಲಾಧೀಶ ನಳ, ವೀರಾಧಿವೀರ ಪುಷ್ಕರ, ಕಲಿಪುರುಷ– ಈ ಎಲ್ಲರೂ ಅಧಿಕಾರಶಾಹಿ ಭ್ರಷ್ಟರೇ. ಗಂಡು ಗುಣದ ಸಾಮ್ರಾಜ್ಯದಾಹಿ ಹೆಬ್ಬಯಕೆಗಳು, ಸ್ತ್ರೀಲೋಲುಪ್ತಿ, ದರ್ಪ ಠೇಂಕಾರಗಳೆಲ್ಲವೂ ನಳಚರಿತ್ರೆಯ ಸಕಲ ದಿಗ್ಭಾಗಗಳನ್ನು ಆವರಿಸಿಕೊಂಡು ನಳನ ಭೋಗ ದೃಷ್ಟಿಗೆ ರಾಜ ಪ್ರಭುತ್ವವೊಂದೇ ಜೀವನದ ಸಕಲ ಸೌಭಾಗ್ಯವೂ ಆಗಿದೆ. ಭೂಲಲನೆಯೂ ಮಡದಿಯೂ ಅವನ ಹಮ್ಮು ಬಿಮ್ಮುಗಳನ್ನು ಸಾರುವ ಸಾಧನಗಳಷ್ಟೇ.

ನಳಚರಿತ್ರೆಯು ಕ್ಷಣಾರ್ಧದಲ್ಲಿ ಪುರುಷಾಹಂಕಾರವೂ, ಭೋಗ ಭಾಗ್ಯ ಗಳೂ, ಕೈಬಿಟ್ಟು ನಿರ್ಗತಿಕವಾಗಿಸುವ ಬದುಕಿನ ವ್ಯಂಗ್ಯವನ್ನು ಮೆರೆಸಿ ಪ್ರದರ್ಶಿಸುತ್ತದೆ. ಈ ರೀತಿಯ ಚಿತ್ರಣದಲ್ಲಿ ಕನಕದಾಸರು ಭಾರತೀಯ ನೆಲದ ಪೂರ್ವಸಮಾಜದ ಸಾಂಪ್ರದಾಯಿಕ ನೆಲೆಯಿಂದಾಚೆ ಸರಿದಿದ್ದಾರೆನ್ನಲಾಗದು. ರಾಮಾಯಣ, ಮಹಾಭಾರತಗಳಲ್ಲಿಯ ಕಥಾಪ್ರಸಂಗಗಳಲ್ಲಿ ಇದು ವಿಧಿಲಿಖಿತ. ಪೂರ್ವಜನ್ಮ

ದತ್ತಾಂಶ ಇತ್ಯಾದಿ ರೂಪಗಳಲ್ಲಿ ಜನಪದರನ್ನು ಮುಟ್ಟಿರುವಂತೆಯೇ ನಳಚರಿತ್ರೆಯಲ್ಲೂ ಅಂತರ್ಮುಖೀಯವಾಗಿ ಧ್ಯಾನಸ್ಥಗೊಂಡಿದೆ. ಆದರೆ ಲೋಕಚಿಂತನೆಯ ಪರಿಪ್ರೇಕ್ಷ್ಯಗಳಿಗೆ ಮುಖಾಮುಖಿಯಾಗುವಾಗ ಭೀಮನೃಪ, ದಮಯಂತಿ, ಅಯೋಧ್ಯೆಯ ರಾಣಿ ಮುಂತಾದ ಪಾತ್ರಗಳ ಮೂಲಕ ಚಿಂತನಶೀಲ ಪ್ರವೃತ್ತಿಯು ಹಣಕಿ ಹಾಕುತ್ತದೆ. ನಳನ ವಿಷಯವನ್ನೇ ಗಮನಿಸಬಹುದು. ಈ ನೆಲದ ಪುರುಷಾಹಂಕಾರದ ಪೊಳ್ಳು ಗಾಂಭೀರ್ಯವನ್ನೂ ದುರಹಂಕಾರದ ವ್ಯಾಧಿಯನ್ನು ಮೈಗಂಟಿಸಿಕೊಂಡ ನಳಚಕ್ರವರ್ತಿ ಸ್ವಭಾವತಃ ಉದಾರಿ, ತ್ರೈಜಗದಲ್ಲಿ ಕೀರ್ತಿ ಚಡಾಳಿಸಿದ ಮಹಿಮಾವಂತ. ಭೂರಿವಿಕ್ರಮ, ಪರಧರ್ಮ ವಿಚಾರ, ಶಶಿಕುಲಮೌಳಿ, ಘನಗಂಭೀರ, ರಣಧೀರ, ಸದ್ಗುಣ ಹಾರ, ನಿತ್ಯ ನಿರ್ಮಳ ಸಂಚಾರ ಎಂಬೆಲ್ಲ ವಿಶೇಷಣಗಳಿಂದ ಮೈದುಂಬಿದವನು. ಮಡದಿಯನ್ನು ಸಕಾರಣವಾಗಿಯೇ ಕಾಡಿನಲ್ಲಿ ಬಿಟ್ಟಗಲಿದ ನಂತರ ವಿಪರೀತವಾಗಿ ಅವಳ ಕುರಿತು ಚಿಂತಿಸಿದ ಆರ್ದ್ರ ಹೃದಯಿಯೂ ಹೌದು. ಆದರೆ ಅವನ ನಡೆ ಕ್ಷತ್ರಿಯೋಚಿತವೂ ಅಲ್ಲ, ಮಾನವೀಯವೂ ಅಲ್ಲ. ವ್ಯಕ್ತಿ ಗೌರವವಿಲ್ಲದೆ, ವಸ್ತು ಗೌರವವಿಲ್ಲದೆ, ಅಧಿಕಾರ ಗೌರವವಿಲ್ಲದೆ ಘನತೆಯನ್ನು ಕಳೆದುಕೊಂಡವನು. ಅನಾಗರೀಕವಾದ, ಅಸಂಸ್ಕೃತವಾದ, ಅಮಾನವೀಯವಾದ ಮೂರು ನೆಲೆಗಳಲ್ಲೂ ಅವನ ವ್ಯಕ್ತಿತ್ವ ಮಲಿನಗೊಂಡಿದೆ. ಸಮಕಾಲೀನ ಸಮಾಜದಲ್ಲೂ ಈ ಅಂಶಗಳು ಆಳುವ ಗುಣಗಳೊಳಗೆ ಪ್ರವೇಶಿಸಿರುವುದನ್ನು ಅಲ್ಲಗಳೆಯಲಾಗದು. ಕನಕದಾಸರು ಪ್ರಸ್ತುತ ಕಾಲಕ್ಕೆ ಶಬ್ದಿಸುತ್ತಿರುವುದು ಹೀಗೆ.

ಭಾರತೀಯ ಕಥಾ ಪರಂಪರೆಯಲ್ಲಿ ಕಥನ ಕ್ರಮವು ಹೇಳುವ – ಕೇಳುವ ಶೈಲಿಗೆ ಬದ್ಧವಾಗಿರುವುದನ್ನು ಕಾಣುತ್ತೇವೆ. ರೋಮಶ ಮುನಿಯು ಧರ್ಮರಾಯನಿಗೆ ನಳಚರಿತ್ರೆಯನ್ನು ಹೇಳುವ ಕ್ರಮ: ನಳನ ವ್ಯಕ್ತಿತ್ವ ಹಾಗೂ ಅವನು ತನ್ನನ್ನಗಲಿದ ಪರಿಯನ್ನು ದಮಯಂತಿಯು ತಾಯಿಗೆ, ಬಣಜಿಗರಿಗೆ ಮತ್ತಿತರ ಸಾಮಾಜಿಕರಿಗೆ ವಿವರಿಸುವ ಕ್ರಮ: ರಾಜಸಭೆಯಲ್ಲಿ ಯಾತ್ರಾರ್ಥಿ ಬ್ರಾಹ್ಮಣನು ರಾಜನಿಗೆ ದಮಯಂತಿಯ ಕುರಿತು ವಿವರಿಸುವ ಕ್ರಮ ಮುಂತಾದುವು ಔಚಿತ್ಯಪೂರ್ಣ ಕಥಾತಂತ್ರಗಳಾಗಿವೆ.

ನಗರ ವರ್ಣನೆ, ಬೇಟೆ, ಯುದ್ಧಪ್ರಸಂಗಗಳಲ್ಲಿ ಕನಕದಾಸರು ಮೂಲದ ನಲೋಪಾಖ್ಯಾನದಲ್ಲಿಲ್ಲದುದನ್ನು ತಂದಿದ್ದಾರೆ. ದಮಯಂತಿ ನಳನ ಚಿತ್ರವನ್ನು ಮನದೊಳಗೇ ಪುನಃ ಪುನಃ ಅಂತಸ್ಥಗೊಳಿಸಿಕೊಳ್ಳುತ್ತ ಅದನ್ನು ಚಿತ್ರರೂಪದಲ್ಲಿ ದಾಖಲಿಸುವ ಸಂಗತಿಯೂ ಕನಕರ ಕಲ್ಪನೆಯೇ. ದಮಯಂತಿಯು ಮೂಲದಲ್ಲಿ ಸಹೋದರರ ಸಹಜಾತೆ, ಕನಕರಲ್ಲಿ ಅವಳು ಒಬ್ಬಳೇ ಮಗಳು ಯಾಗಪುತ್ರಿ. ಮೂಲದಲ್ಲಿ ಲೋಕ ಸಂಚಾರಿಯಾದ ನಳನು ಪರ್ವತನೊಂದಿಗೆ ಇಂದ್ರನ ಮನೆಗೆ ಹೋಗಿದ್ದಾಗ ದಮಯಂತೀ ಸ್ವಯಂವರದ ವಿಷಯ ಪ್ರಸ್ತಾಪ ಮಾಡುತ್ತಾನೆ. ಕನಕರಲ್ಲಿ ಪರ್ವತನ ಪ್ರಸ್ತಾಪ ಇಲ್ಲ. ನಾರದನೊಬ್ಬನೆ ಪ್ರಸಂಗವಶಾತ್ ಇಂದ್ರ ಸಭೆಗೆ ಹೋಗುತ್ತಾನೆ. ಕನಕದಾಸರಲ್ಲಿರುವ ಹಂಸ ಮತ್ತು ನಳನ ನಡುವಿನ ಪ್ರಶ್ನೋತ್ತರ ಸಂವಾದವು ಭಾರತದಲ್ಲಿಲ್ಲ. ಹಾಗೆಯೇ ದಮಯಂತಿಯ ವಿರಹ ವರ್ಣನೆ, ನಳನು ದಮಯಂತಿಯ ಅಂತಃಪುರವನ್ನು ಪ್ರವೇಶಿಸುವ ಸಂದರ್ಭದಲ್ಲಿ ಅವನಿಗೂ ಮುಂಚೆಯೇ ಸೂಕ್ಷ್ಮ ರೂಪದಲ್ಲಿದ್ದ ಸುರಕನ್ನಿಕೆಯು ಇಂದ್ರಾಜ್ಞೆಯನುಸಾರವಾಗಿ ಅಲ್ಲಿ ಉಪಸ್ಥಿತಳಿದ್ದುದೂ ಭಾರತದಲ್ಲಿಲ್ಲ. ಚೌಂಡರಸನಲ್ಲಿಯೂ ಕನಕರಲ್ಲಿಯೂ ಇದೆ. ಮೂಲದ ನಲೋಪಖ್ಯಾನದಲ್ಲಿಲ್ಲದ ನಳ-ಪುಷ್ಕರ ಯುದ್ಧವರ್ಣನೆ ಕನಕದಾಸರಿಗಿದ್ದ ವೀರಯುಗದ ಅನುಭವವನ್ನು ತೆರೆದಿಡುತ್ತದೆ.

ದಮಯಂತಿಯು ಪ್ರಾಪ್ತ ವಯಸ್ಕಳಾದ ಸಂದರ್ಭದಲ್ಲಿಯೂ, ನಳನ ವಿರಹದಿಂದ ತೊಳಲಾಡುವ ಸಂದರ್ಭದಲ್ಲಿಯೂ ಅರಮನೆಯ ಸ್ತ್ರೀ ಸಂಕುಲವು ಅವಳನ್ನು ಬಹುವಿಧಗಳಲ್ಲಿ ಶೈತ್ಯೋಪಚಾರಗಳಿಗೆ ಒಳಪಡಿಸುವ ರೀತಿ, ಸಂತವಿಸುವಿಕೆಯ ವಿಧಿವಿಧಾನಗಳು: ಪತಿಯನ್ನಗಲಿ ತಪ್ತಳಾಗಿ ಅಯೋಧ್ಯಾ ನಗರಕ್ಕೆ ಬಂದಾಗ ಮಹಾರಾಣಿಯು ಅವಳನ್ನು ನಡೆಸಿಕೊಂಡ ಆಪ್ತ ಸಂತೈಕೆಯ ಕ್ಷಣಗಳು: ಭೀಮನೃಪನು ಅವಳ ಕುರಿತು ವಹಿಸುವ ಕಾಳಜಿ: ದಮಯಂತಿಯು ಭೀಮನೃಪನಲ್ಲಿಗೆ ಮರಳಿ ಬಂದಾಗ, ಅಗಲಿದ್ದ ಮಕ್ಕಳನ್ನು ಮಡಿಲಲ್ಲಿ ಕೂರಿಸಿ ಕೊಳ್ಳುತ್ತಲೇ ಅವಳ ಮೊಲೆಗಳಲ್ಲಿ ಹಾಲು ಸೂಸುವುದು: ನಳನು ಶುದ್ಧಾಚಮನವಿಲ್ಲದೆ ಮರೆದು ನೀರ್ಗುಡಿಯುವುದು- ಈ ಮುಂತಾದ ಸನ್ನಿವೇಶಗಳನ್ನು ವರ್ಣಿಸುವ ಕ್ರಮದಲ್ಲೂ, ವಸ್ತು ಚಿಂತನೆಯ ಕ್ರಮದಲ್ಲೂ ಕನಕದಾಸರು

ಭಾರತೀಯ ಪೂರ್ವ ಸಮಾಜದ ನೆಲದ ನೆನಪಿಗೇ ಬದ್ಧರಾಗಿರುವುದನ್ನು ಗಮನಿಸಬಹುದು.

ಕನಕದಾಸರ ಭಾಷಾವೈಖರಿಯನ್ನು ಇಲ್ಲಿ ವಿಶೇಷವಾಗಿ ಗಮನಿಸಬೇಕು. ಅತ್ಯಂತ ಶಕ್ತ ಅಭಿವ್ಯಕ್ತಿ ರೂಪಗಳಿಗೆ ಕೆಲವು ಪದ ಪ್ರಯೋಗಗಳನ್ನು ನೋಡಬಹುದು.- ಬೀಡಿಕೆ (ಗುಡಾರ), ಕಾಮಗತ್ತಲೆ, ಕೆಂಗರಿಗಣ್ಣ ಮೋರೆ, ಕೈಸದರದವರು, ಕೈಕಂಬಿಯರು, ಬಾಯಬಿಂಕ, ವೈಮಾನಿಕರು, ಕಾಣೆ(ಕಂಡು) ಓಪಾದಿ (ರೀತಿ, ಹಾಗೆ) ಕಾಕಬಳಸು, ನಯಸು (ಮೃದುವಾಗು, ಕರುಣೆದೋರು) ಘನಪಿಟ್ಟಣಿಸು, ಗೌರುಗಹಳೆ, ಗುಜ್ಜುಗೊರಲು, ಧಾತುಗುಂದು, ಬೇಹಾರಿ, ಗರಗರಿಕೆ, ಉಡಿದ ತೊಡೆ, ಕೆಡೆದ ತಲೆ, ಸಿಡಿದ ಹುಬ್ಬು, ಹರಿದ ಕರುಳು, ಬಣ್ಣಗುಂದಿದ ದೇಹ, ಮುಂತಾದುವು. ಬೂವಲ್ಲಭ, ದರೆ-ಮುಂತಾದ ಮಹಾಪ್ರಾಣವಿಲ್ಲದಯೆ ಈ ಪದಗಳನ್ನು ಗಮನಿಸಬೇಕು. ಮನಸೆಳೆಯುವ ಕೆಲವು ವರ್ಣನೆಗಳನ್ನೂ ಗಮನಿಸಬೇಕು. ಖೋಯೆಂದಾಗ ಲರಸಂಚೆಗಳು, ನೂತನದ ಬೇಹಾರಿಗಳು, ಸಾಲುಗಂಬನಿಗಳಲಿ ನೆನೆದರು, ಮುಗಿಲ ತುಡುಕುವ ತೆನೆಗಳ್ ಮೆಳೆಗಳನೊರಸಿ ಮೆಟ್ಟುತ, ಬಿದಿರಮೆಳೆ ಧಗಧಗಿಸೆ, ಕದಳಿಗಳು ಸಿಮಿಸಿಮಿಸೆ, ತರಹರಿಸಿ ನಿಲಲರಿದು, ತೂಳಿದುವು ಮದಕರಿಗಳವರನು –ಇತ್ಯಾದಿ ಇತ್ಯಾದಿ.

ಕೆಲವೆಡೆ ಒಂದೇ ಪದವನ್ನಿಟ್ಟುಕೊಂಡು ಬೇರೆ ಬೇರೆ ಅರ್ಥದ ಪದಗಳನ್ನು ಹುಟ್ಟುಹಾಕುವ ಚಾತುರ್ಯವನ್ನು ಗಮನಿಸಬಹುದು. – ಚೆಲುವಾದ, ಅಗಲವಾದ ಅತಿಶಯವಾದ ಎಂಬರ್ಥದ 'ಆಯತ' – ಪದವನ್ನು ನಿಜಾಯತ, ತರಳಾಯತ, ಆಯತಾಕ್ಷ, ಕಮಲದಳಾಯತಾಂಬಕಿ, ಕರಣಾಯತ (ಕೈಚಳಕ) – ಹೀಗೆ ಹಲವು ಸಂದರ್ಭಗಳಲ್ಲಿ ದಮಯಂತಿಯನ್ನು ವಿವಿಧ ಭಾವರೂಪಗಳಲ್ಲಿ ಸೆರೆಹಿಡಿದಿರುವ ಶೈಲಿಯೂ ಕಣ್ಸೆಳೆಯುತ್ತವೆ. – ತಳೋದರಿ, ಸರೋರುಹಗಂಧಿ, ಜಲಜಮುಖಿ, ರಾಜವದನೆ, ನಳಿನಲೋಚನೆ, ಬಿಸುರುಹಾಕ್ಷಿ, ಸೊಬಗಿನ ಸೋನೆ, ಪುಣ್ಯಾಂಗನೆ, ತಾಮರಸದಳನಯನೆ, ಇಂದುವದನೆ, ಮದನನ ಮೊನೆಯಲಗಿನಲಿ ಬಳಲ್ವ ಸತಿ, ನಗೆಮೊಗದ ಪೊಂಬೊಗರ ಮಿಂಚಿನ ಬೊಗಸೆಗಂಗಳ ಸೆಳೆನಡುವ ಸೆಳ್ಳುಗುರ ಬೆಡಗಿನ ಕಾಂತೆ, ಘನಸತಿ, ಮಹಾಸತಿ, ಮುಂತಾಗಿ.

ಕೊನೆಯದಾಗಿ, ಈ ಕಾವ್ಯದ ಕಥಾರಂಭಕ್ಕೆ ಪೂರಕವಾದ ಅತಿಮುಖ್ಯ ಪಾತ್ರವಾಗಿ ಮೈದಳೆದಿರುವ ರಾಜಹಂಸವನ್ನು ಉಪೇಕ್ಷಿಸಲಾಗದು. ಪ್ರಾಚೀನ ಕಥಾಕ್ರಮಗಳಲ್ಲಿ ಕಥಾನಾಯಕ/ನಾಯಿಕೆಕಯರ ಸಖನೋ, ವಿದೂಷಕನೋ ಆಗಿ ಬರುವ ಪಾತ್ರವನ್ನು ಇಲ್ಲಿ ಹಂಸವು ನಿರ್ವಹಿಸಿದೆ. ಮಾತಿನ ಶೈಲಿ, ನಡವಳಿಕೆ ಯಲ್ಲಿಯ ಸಜ್ಜನಿಕೆ, ಸಂಸ್ಕಾರಗಳಲ್ಲಿ ಅತ್ಯಂತ ಗುಣಶೀಲ ವ್ಯಕ್ತಿತ್ವವಾಗಿ ಹಂಸವು ಚಿತ್ರಿತವಾಗಿದೆ. ಹಲವು ಜನಪದ ನಾಣ್ಣುಡಿಗಳು, ಕೌಟುಂಬಿಕ ಬದ್ಧತೆಯ ಮಾತುಗಳು ರಾಜನಾದ ನಳನಿಗೇ ಗುರು ಸದೃಶವಾಗಿ ನೀತಿ ನಿಯಮಗಳನ್ನು ಕಲಿಸುವಂಥದ್ದಾಗಿ ಹಂಸ ಮನಸೆಳೆಯುತ್ತವೆ. ಅಂದಿನ ಹಂಸ, ಕನ್ನಡದ ಅಂಚೆಯು ಇಂದಿಗೂ ದೂತವಾಹಕವಾದ ಅಂಚೆ (post) ಯಾಗಿ ಕನ್ನಡ ನೆಲದಲ್ಲಿ ಅಚ್ಚ ಳಿಯದೇ ಉಳಿದಿರುವುದು ಈ ನೆಲದ ಕಾವ್ಯಗಳು ತಂದಿತ್ತ ಕೊಡುಗೆ ಎಂಬುದು ಅಭಿಮಾನದ ಸಂಗತಿ.

ಮಹಾಭಾರತದ ನಲೋಪಾಖ್ಯಾನವನ್ನೇ ಮೂಲ ಪಠ್ಯವನ್ನಾಗಿಸಿಕೊಂಡಿ ದ್ದರೂ ಅದರೊಂದಿಗೆ ಶ್ರೀ ಹರ್ಷನ ಸಂಸ್ಕೃತದ 'ನೈಷಧೀಯಚರಿತೆ', ತ್ರಿವಿಕ್ರಮ ಭಟ್ಟನ 'ನಲಚಂಪೂ', ವಾಮನಭಟ್ಟನ 'ನಲಾಭ್ಯುದಯ', ಚೌಂಡರಸನ 'ನಲ ಚಂಪೂ' ಕೃತಿಗಳು ಕನಕಪೂರ್ವದ್ದಾದ ಕಾರಣ ಅವುಗಳ ಪ್ರಭಾವ ಕನಕರ ಮೇಲಿರುವುದನ್ನು ನಿರಾಕರಿಸುವಂತಿಲ್ಲ. ಹಾಗೆಯೇ ಕನಕರ ನಳಚರಿತ್ರೆಯು ನಳಚರಿತ್ರೆಯನ್ನು ಪಠ್ಯವಾಗಿಸಿಕೊಂಡ ಕನ್ನಡದ ಅನೇಕ ಕಥಾಪ್ರಕಾರಗಳಿಗೆ ಪ್ರೇರಣೆಯನ್ನಿತ್ತಿರುವುದನ್ನೂ ಅಲ್ಲಗಳೆಯುವಂತಿಲ್ಲ. ಯಾವುದೇ ಒಂದು ಗ್ರಂಥವು ಬೇರೆ ಬೇರೆ ಭಾಷೆಗಳಲ್ಲಿಯೋ ಅಥವಾ ಅದೇ ಭಾಷೆಯ ಬೇರೆ ಬೇರೆ ಪ್ರಕಾರ ಗಳಲ್ಲಿಯೋ ಪುನರಾವರ್ತಿತಗೊಳ್ಳುತ್ತಿದ್ದಲ್ಲಿ ಅವೆಲ್ಲವನ್ನೂ ಮೂಲ ಕಾವ್ಯ ಪರಂಪರೆಯ ಯಾದಿಯಲ್ಲೇ ಗುರುತಿಸಬೇಕಾಗುತ್ತದೆ. ಅದರ ನಿಜ ಮೌಲ್ಯವೇನು, ಆ ಕಾವ್ಯದ ಹುರುಳೇನು ಎಂಬುದನ್ನು ಕಾಲಕಾಲಕ್ಕೆ ಬದಲಾಗುವ ವಿಮರ್ಶೆಗಳು ಮತ್ತು ವ್ಯಾಖ್ಯಾನಗಳು ನಿರ್ಧರಿಸುತ್ತವೆ. ಒಂದು ಸುಂದರ ಕೃತಿಗೆ ನಿಜವಾದ ಪ್ರಶಸ್ತಿ ಯಾವುದೆಂದರೆ ವ್ಯಾಖ್ಯಾನಗಳೇ. ವಿವಿಧ ಸಾಹಿತ್ಯ ಪ್ರಕಾರಗಳಾಗಿ ಮೈದಳೆಯುವ ವ್ಯಾಖ್ಯಾನಗಳು ಪ್ರತಿಯುಗದ ಪ್ರತಿ ಓದುಗನಿಗೂ ಮೂಲಕೃತಿಯ ಒಳನೋಟ

ಗಳನ್ನು ಆಶಯವನ್ನು ಮತ್ತು ಕೃತಿಯ ವಸ್ತುವನ್ನು ತಲುಪಿಸುತ್ತ ಪಠ್ಯವನ್ನು ಎಲ್ಲ ಕಾಲಕ್ಕೂ ಜೀವಂತವಾಗಿಡುತ್ತದೆ.

ಇದು ಕನಕದಾಸರ ಹೆಸರಾಂತ ಕೃತಿ. ಶಬ್ದಾರ್ಥ, ಗದ್ಯಾನುವಾದ, ಹಾಗೂ ವಿಶೇಷವಿಚಾರ ಸಹಿತ ಓದುಗರಿಗೆ ಹಸ್ತಾಂತರಿಸುವ ಒಂದು ಪ್ರಯತ್ನ ಇದಾಗಿದೆ. ಇದು ಕನ್ನಡ ವಿದ್ವಾಂಸವಲಯದ ಪ್ರತಿಷ್ಠಿತ 'ಕರ್ಣಾಟ'ದ ಮುಖೇನ ಪ್ರಕಟವಾಗು ತ್ತಿರುವುದು ಸಂತಸದ ಸಂಗತಿ. ಈ ಕಾರ್ಯವನ್ನು ಅಭಿಮಾನಪೂರ್ವಕ ವಾಗಿ ನನಗೆ ವಹಿಸಿದ 'ಕರ್ಣಾಟ'ದ ಸಂಸ್ಥಾಪಕರೂ, ಹಿರಿಯ ವಿದ್ವಾಂಸರೂ ಆದ ಡಾ. ಆರ್.ವಿ.ಎಸ್. ಸುಂದರಂ ಅವರಿಗೂ, ಈ ಮಹತ್ವಪೂರ್ಣ ಕಾರ್ಯದಲ್ಲಿ ಅವ ರೊಂದಿಗೆ ಕೈ ಜೋಡಿಸಿರುವ ಮಾನ್ಯಶ್ರೀ ಮನೀಶ್ ಮಹೇಶ್ವರಿ ಅವರಿಗೂ ಗೌರವಪೂರ್ವಕ ಧನ್ಯವಾದಗಳು. ನನ್ನ ಎಲ್ಲಾ ಕೆಲಸ ಕಾರ್ಯಗಳಿಗೆ ಸದಾ ಬೆಂಬಲವಾಗಿ ನಿಂತಿರುವ ನನ್ನ ಪತಿ, ಗೆಳೆಯ ಶ್ರೀ ರಾಜು ಅವರಿಗೂ, ನನ್ನ ಬರೆಹದ ಅಗತ್ಯಗಳಿಗೆ ಸದಾ ಸ್ಪಂದಿಸುವ ಗೆಳತಿ ಡಾ. ಅಕ್ಕಮಹಾದೇವಿ, ಅನೂಪ್ ರಾಜ್, ಅಮಿತ್‌ರಾಜ್ ಸಹೋದರರಿಗೂ, ಡಿ.ಟಿ.ಪಿ. ಕಾರ್ಯದಲ್ಲಿ ಸಹಕರಿಸಿದ ಗೆಳತಿ ಡಾ. ಉಷಾರಾಣಿ ಅವರಿಗೂ ಆಭಾರಿಯಾಗಿದ್ದೇನೆ.

ಕನಕದಾಸ

ನಳಚರಿತ್ರೆ

ಒಂದನೆಯ ಸಂಧಿ

1. ಶ್ರೀರಮಣ ಸರಸಿಜದಳಾಕ್ಷ ಮು
ರಾರಿ ಸಚರಾಚರಭರಿತ ದುರಿ
ತಾರಿ ನಿತ್ಯಾನಂದ ನಿರ್ಜರನಿಕರದಾತಾರ
ವಾರಿಜಾಂಬಕ ವರಗುಣಾಶ್ರಯ
ಮಾರಪಿತ ವೇದಾಂತನುತ ಸಾ
ಕಾರ ಚೆನ್ನಿಗರಾಯ ಪಾಲಿಸು ಜಗಕೆ ಮಂಗಳವ

ಶ್ರೀರಮಣ = ಸಿರಿ ಸ್ವರೂಪಳಾದ ಲಕ್ಷ್ಮಿಗೆ ಒಡೆಯನೇ, ಹರಿಯೇ; ಸರಸಿಜದಳ + ಅಕ್ಷ = ಸರಸ್ಸಿನಲ್ಲಿರುವ ತಾವರೆಯ ದಳಗಳಂತೆ ಕಣ್ಣುಳ್ಳವನೇ; ಮುರ + ಅರಿ = ಮುರನೆಂಬ ರಾಕ್ಷಸನ ವೈರಿಯೇ, ಕೃಷ್ಣನೇ; ಸಚರ + ಅಚರಭರಿತ = ಸದಾ ಚಲನಶೀಲ ಪ್ರವೃತ್ತಿಯ ಅಣು, ರೇಣು, ಜೀವ ಜಂತುಗಳಲ್ಲಿಯೂ, ಸ್ಥಾವರ ಪ್ರವೃತ್ತಿಯ (ಅಚರ) ಸಸ್ಯ ಸಂಕುಲ, ಗಿರಿ ಪರ್ವ ತಾದಿಗಳಲ್ಲಿಯೂ ಸದಾ ತುಂಬಿರು ವವನೇ; ದುರಿತ + ಅರಿ = ಪಾಪವಿನಾಶಕನೇ; ನಿತ್ಯ + ಆನಂದ = ಸದಾ ಕಾಲ ಸಂತೋಷದಿಂದ ಇರುವವನೇ; ನಿರ್ಜರನಿಕರ ದಾತಾರ = ಮುಪ್ಪು ಮುಂತಾದವು ಗಳಿಲ್ಲದಂತಹ ದೇವತೆಗಳ ಸಮೂಹಕ್ಕೆ ಪಿತೃಸ್ಥಾನದಲ್ಲಿರುವಂಥವನೇ; ವಾರಿಜ + ಅಂಬಕ = ಕಮಲದಂತಹ ಕಣ್ಣುಳ್ಳವನೇ; ವರಗುಣಾಶ್ರಯ = ಶ್ರೇಷ್ಠ ಗುಣಗಳಿಗೆ ಆಶ್ರಯಸ್ಥಾನವಾಗಿರುವವನೇ; ಮಾರಪಿತ = ಮನ್ಮಥನ ತಂದೆಯೇ (ಕೃಷ್ಣನೇ); ವೇದಾಂತನುತ = ಉಪನಿಷತ್ತುಗಳಿಂದ ಸ್ತುತಿಸಲ್ಪಟ್ಟವನೇ; ಸ + ಆಕಾರ = ಮೂರ್ತಿ ಸ್ವರೂಪನೇ ಚೆನ್ನಿಗರಾಯನೇ; ಪಾಲಿಸು ಜಗಕೆ ಮಂಗಳವ = ಜಗತ್ತಿಗೆ ಮಂಗಳ ವನ್ನುಂಟುಮಾಡು.

ಸಿರಿ ಸಂಪತ್ತುಗಳ ಸ್ವರೂಪಳಾದ ಲಕ್ಷ್ಮಿಗೆ ಒಡೆಯನೇ, ಹರಿಯೇ, ಸರೋವರದಲ್ಲಿ ಹುಟ್ಟಿದ ತಾವರೆಯ ದಳಗಳಂತೆ ಕಣ್ಣುಗಳನ್ನುಳ್ಳವನೇ, ಮುರನೆಂಬ ರಾಕ್ಷಸನನ್ನು ಕೊಂದವನೇ, ಸದಾ ಚಲನಶೀಲ ಪ್ರವೃತ್ತಿಯ ಅಣು, ರೇಣು, ತೃಣ ಜೀವಜಂತುಗಳಲ್ಲಿಯೂ ಸ್ಥಾವರ ಪ್ರವೃತ್ತಿಯ ಸಸ್ಯಸಂಕುಲ, ಗಿರಿ, ಪರ್ವತಾದಿ ಗಳಲ್ಲಿಯೂ ಸದಾ ಪ್ರತಿಷ್ಠಿತನಾಗಿರುವಂಥವನೇ, ಪಾಪಗಳನ್ನು ಪರಿಹರಿಸುವವನೇ, ಸದಾ ಸಂತೋಷದಿಂದ ಇರುವಂಥವನೇ, ಮುಪ್ಪು ಸಾವುಗಳಿಲ್ಲದ ದೇವತೆಗಳ ಸಮೂ ಹಕ್ಕೆ ಪಿತೃಸ್ಥಾನದಲ್ಲಿರುವವನೇ, ಕಮಲದಂತಹ ಕಣ್ಣುಳ್ಳವನೇ, ಶ್ರೇಷ್ಠ ಗುಣಗಳಿಗೆ ಆವಾಸಸ್ಥಾನವಾಗಿರುವವನೇ, ಮನ್ಮಥನ ತಂದೆಯೇ, ಉಪನಿಷತ್ತುಗಳಿಂದ ಸ್ತುತಿಸಲ್ಪಡುವವನೇ, ಮೂರ್ತಿವತ್ತಾಗಿರುವಂಥವನೇ, ಚೆನ್ನಿಗರಾಯನೇ, ಜಗತತಿಗೆ ಮಂಗಳವನ್ನುಂಟುಮಾಡಿ ರಕ್ಷಿಸು ಎಂದು ಕವಿ ತನ್ನ ಇಷ್ಟದೈವವನ್ನು ಪ್ರಾರ್ಥಿ ಸುತ್ತಿದ್ದಾನೆ.

ಕಾವ್ಯಾರಂಭದ ಈ ಪದ್ಯ ಸ್ತುತಿರೂಪದಲ್ಲಿದೆ. ಸಾಮಾನ್ಯವಾಗಿ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಕವಿಗಳು ಕಾವ್ಯಾರಂಭದ ಮೊದಲಿಗೆ ತಮ್ಮ ಆರಾಧ್ಯ ದೈವವನ್ನು ಆಶೀರ್ವದಿಸುವಂತೆ ಪ್ರಾರ್ಥಿಸುವುದು ವಾಡಿಕೆ. ಅಂತೆಯೇ ಕನಕದಾಸರು ಈ ಕೃತಿಯಲ್ಲಿ ತಮ್ಮ ಆರಾಧ್ಯದೈವವಾದ ಚೆನ್ನಿಗರಾಯ, ಶ್ರೀಹರಿಯನ್ನು ಸ್ತುತಿಸಿದ್ದಾರೆ. ದೇವರ ಗುಣಾತಿಶಯಗಳನ್ನು, ಸೌಂದರ್ಯ ಸಂಪದವನ್ನು, ಅವನ ಅಪ್ರತಿಮ ಸಾಧನೆಗಳನ್ನು ನೆನೆಯುತ್ತ, ಜಗತ್ತಿಗೆ ಮಂಗಳವನ್ನುಂಟುಮಾಡುವಂತೆ ಪ್ರಾರ್ಥಿಸಿದ್ದಾರೆ. 'ಚೆನ್ನಿಗರಾಯ' ಎಂಬುದು ದೇವರ ರೂಪ ಸ್ತುತಿಯಷ್ಟೇ ಆಗಿರದೆ ಈ ಕೃತಿಯಲ್ಲಿ ಕನಕದಾಸರ ಅಂಕಿತ ನಾಮವಾಗಿಯೂ ಬಳಕೆಯಾಗಿದೆ. 'ನಳಚರಿತೆ'ಯ ಆದಿಯ ಲ್ಲಿರುವ 'ಶ್ರೀಯರಸ ವರಪುರದ ಚೆನ್ನಿಗರಾಯ'ನಂಕಿತಮಾಗಿ ಪೇಳುವೆ..... ಸುಜನರಿಗೀ ಮಹಾಕಥೆಯ (1–6) ಎಂಬ ಕವಿ ಮಾತನ್ನು ಗಮನಿಸಬಹುದು.

2. ಶರಧಿಶಯನ ಮುಕುಂದ ಕಂಸಾ
ಸುರಮಥನ ಸುರಮೌನಿವಂದಿತ
ಗಿರಿಧರಾಚ್ಯುತ ವೇಣುನಾದ ವಿನೋದ ಭವದೂರ
ಸರಸಿಜೋದ್ಭವ ನುತ ದಯಾಸಾ

ಗರ ಮುರಾಂತಕ ದೇವ ವರಪುರ
ದರಸ ಚೆನ್ನಿಗರಾಯ ಪಾಲಿಸು ಸಕಲಸಜ್ಜನರ

ಶರಧಿಶಯನ = ಕಡಲನ್ನೇ ಹಾಸಿಗೆಯಾಗಿಸಿಕೊಂಡ ದೇವನೇ; ಮುಕುಂದ = ತಾವರೆಯಂತಹ ಸುಂದರಾಕಾರನೇ; ಕಂಸ + ಅಸುರ + ಮಥನ = ಕಂಸನೆಂಬ ಯದುವಂಶದ ಉಗ್ರಸೇನನ ಮಗನನ್ನು ಅವನ ದುರಹಂಕಾರ ಮತ್ತು ಅಸುರತ್ವದ ಕಾರಣಕ್ಕಾಗಿ ಸಂಹರಿಸಿದವನೇ; ಸುರಮೌನಿವಂದಿತ =ದೇವತೆಗಳಿಂದಲೂ, ಮುನಿ ವೃಂದದಿಂದಲೂ ವಂದಿಸಲ್ಪಟ್ಟವನೇ; ಗಿರಿಧರ + ಅಚ್ಯುತ = ಗೋವರ್ಧನ ಗಿರಿಯನ್ನು ಎತ್ತಿ ಹಿಡಿಯುವುದರ ಮೂಲಕ ಕ್ಷಾತ್ರ ಕರ್ತವ್ಯಕ್ಕೆ ಚ್ಯುತಿಬಾರದಂತೆ ನಿರ್ವಹಿಸಿದವನೇ; ವೇಣುಗಾನ ವಿನೋದಭವದೂರ = ಕೊಳಲಿನ ನಾದವನ್ನು ವಿನೋದಕ್ಕೆಂಬಂತೆ ನುಡಿಸಿದರೂ ಅದರಿಂದ ಪಾಪಿಗಳನ್ನು ಜನ್ಮಬಂಧದಿಂದ ಮುಕ್ತಗೊಳಿಸುವಂಥವನೇ; ಸರಸಿಜ + ಉದ್ಭವನುತ = ಕಮಲದಲ್ಲಿ ಉದ್ಭವಿಸಿದ ಬ್ರಹ್ಮನಿಂದಲೂ ಸ್ತುತಿಸಲ್ಪಟ್ಟವನೇ; ದಯಾಸಾಗರ = ದಯೆಯಸಾಗರವೇ ಆದವನೇ; ಮುರ + ಹಂತಕ = ಮುರನೆಂಬ ರಾಕ್ಷಸನನ್ನು ಸಂಹರಿಸಿದವನೇ, ದೇವ ವರಪುರದರಸ = ಶ್ರೇಷ್ಠವಾದ ದೇವಪುರದರಸನೇ; ಚೆನ್ನಿಗರಾಯ = ದೇವ ಚೆನ್ನಿಗರಾಯನೇ; ಪಾಲಿಸು ಸಕಲ ಸಜ್ಜನರ = ಸಕಲ ಸಜ್ಜನರನ್ನೂ = ರಕ್ಷಿಸು.

ಈ ಪದ್ಯದಲ್ಲಿ ಕವಿ ದೇವರ ಕ್ರಿಯಾಶೀಲ ಪ್ರವೃತ್ತಿಯ ವಿಶೇಷಗಳನ್ನು ಸ್ಮರಿಸುತ್ತಿದ್ದಾನೆ. ಕಡಲನ್ನೇ ಹಾಸಿಗೆಯನ್ನಾಗಿಸಿಕೊಂಡಿರುವಂತಹ ದೇವನೇ, ತಾವರೆಯಂತಹ ಸುಂದರ ವರ್ಣಕಾಂತಿಯನ್ನೂ ಸೌಂದರ್ಯವನ್ನೂ ಉಳ್ಳವನೇ, ಕಂಸನನ್ನು ಕೊಂದವನೇ, ದೇವಾಧಿದೇವತೆಗಳಿಂದಲೂ ಮುನಿವೃಂದದಿಂದಲೂ ವಂದಿಸಲ್ಪಟ್ಟವನೇ, ಗೋವರ್ಧನ ಗಿರಿಯನ್ನು ಎತ್ತಿಹಿಡಿದು ಜನ ಜಾನುವಾರು ಗಳನ್ನು ರಕ್ಷಿಸುತ್ತ ಕ್ಷಾತ್ರ ಕರ್ತವ್ಯವನ್ನು ನಿರ್ವಹಿಸಿದವನೇ, ವಿನೋದಕ್ಕಾಗಿಯೆಂಬಂತೆ ವೇಣುಗಾನವನ್ನು ಮಾಡಿದರೂ ಆ ಮೂಲಕ ಪಾಪಿಗಳನ್ನು ಜನ್ಮಬಂಧನದಿಂದ ಮುಕ್ತಗೊಳಿಸಿದವನೇ, ಕಮಲೋದ್ಭವನಾದ ಬ್ರಹ್ಮನಿಂದಲೂ ಸ್ತುತಿಸಲ್ಪಟ್ಟವನೇ, ದಯಾಸಾಗರನೇ, ಮುರಾರಿಯೇ, ದೇವಪುರದರಸ ಚೆನ್ನಿಗರಾಯನೇ, ಸಕಲ ಜಗದ ಜೀವಿಗಳನ್ನೂ ರಕ್ಷಿಸು.

ವಿಷ್ಣುವನ್ನು'ಶರಧಿಶಯನ' ಎಂದು ಪುರಾಣ ಮತ್ತು ಕಾವ್ಯಗಳಲ್ಲಿ ಕರೆಯುವುದು ರೂಢಿ. ಸೃಷ್ಟಿಯ ಆದಿಯಲ್ಲಿ ವಿಷ್ಣುವು ಶಿವನ ವಾಮಾಂಗದಿಂದ (ಎಡಭಾಗ) ಜನಿಸಿದ. ಒಮ್ಮೆ ಈತ ತಪಸ್ಸಿನಿಂದ ಬಳಲಿದಾಗ ಇವನ ದೇಹದಿಂದ ಬೆವರು ಹರಿಯತೊಡಗಿತು. ತಪಸ್ಸಿನಿಂದ ತಪ್ತನಾಗಿದ್ದ ಇವನು ಆ ಜಲಮಧ್ಯದಲ್ಲಿಯೇ ಮಲಗಿದ. ಆದ್ದರಿಂದ ಅವನಿಗೆ 'ಶರಧಿಶಯನ' ಎಂದು ಹೆಸರಾಯಿತು. ಇದೇ ಅರ್ಥದಲ್ಲಿ ವಿಷ್ಣುವನ್ನು 'ನಾರಾಯಣಾ' ಎಂದೂ ಸಂಬೋಧಿಸುವುದಿದೆ. ನಾರ–ಜಲ, ಅಯನ–ಆಶ್ರಯಸ್ಥಾನ–ಜಲಮಧ್ಯದಲ್ಲಿ ಸ್ಥಾನ ಕಂಡುಕೊಂಡವನು. (ಸಂಸ್ಕೃತ–ಕನ್ನಡ ನಿಘಂಟು–ಜಿ.ಎನ್. ಚಕ್ರವರ್ತಿ)

3. ಉರಗರಿಪುಕೇತನ ವಿಭೀಷಣ
ವರದ ಹರಿ ಸದ್ಭಕ್ತಪೋಷಣ
ದುರಿತಕುಲಗಿರಿವಜ್ರ ನರಕಾಂತಕ ಮಹಾಮಹಿಮ
ಪರಮಪುರುಷ ಯಶೋದೆಯಾತ್ಮಜ
ದುರಿತದುಃಖವಿನಾಶ ವರಪುರ
ದರಸ ಚೆನ್ನಿಗರಾಯ ರಕ್ಷಿಸು ನಮ್ಮನನವರತ

ಉರಗ = ಹಾವು, ರಿಪು = ವೈರಿ, ಕೇತನ = ಬಾವುಟ; ಹಾವಿನ ವೈರಿಯಾದ ಗರುಡನನ್ನು ಬಾವುಟದಲ್ಲಿ ಅಂಕಿಸಿದ ವಿಷ್ಣುವೇ; ವಿಭೀಷಣವರದ = ವಿಭೀಷಣನಿಗೆ (ರಾಮಾವತಾರ ಸಂದರ್ಭದಲ್ಲಿ) ರಾವಣನಿಂದ ರಕ್ಷಿಸುವುದಾಗಿ ಅಭಯವನ್ನು ನೀಡಿದವನೇ; ಹರಿ = ವಿಷ್ಣುವೇ; ಸದ್ಭಕ್ತ ಪೋಷಣ = ಸಜ್ಜನರಾದ ಭಕ್ತರನ್ನು ಪೋಷಿಸುವವನೇ; ದುರಿತ ಕುಲಗಿರಿವಜ್ರ = ಮಂದರಪರ್ವತದಷ್ಟು ಬೃಹತ್ತಾದ ಪಾಪವೆಂಬ ಬೆಟ್ಟವನ್ನು ವಜ್ರಾಯುಧ ಸಮನಾಗಿ ನಾಶಗೊಳಿಸುವವನೇ; ನರಕಾಂತಕ = ನರಕನೆಂಬ ಅಸುರನನ್ನು ಕೊಂದವನೇ; ಮಹಾಮಹಿಮನೇ; ಪರಮಪುರುಷ = ವಿಷ್ಣುವೇ: ಯಶೋದೆಯಾತ್ಮಜ = ಯಶೋದೆಯ ಮಾನಸಿಕ ಪುತ್ರನೇ; ದುರಿತ ದುಃಖವಿನಾಶ = ಪಾಪಕಾರ್ಯಗಳನ್ನು, ಅದರಿಂದುಂಟಾದ ದುಃಖಗಳನ್ನು ನಾಶಗೊಳಿಸುವವನೇ; ವರಪುರದರಸ ಚೆನ್ನಿಗರಾಯ = ವರಪುರದರಸನಾದ ಚೆನ್ನಿಗರಾಯನೇ; ನಮ್ಮನು ಅನವರತ = ನಮ್ಮನ್ನು ಸದಾ; ರಕ್ಷಿಸು = ಕಾಪಾಡು.

ಸರ್ಪದ ವೈರಿಯಾದ ಗರುಡನನ್ನು ಬಾವುಟದಲ್ಲಿ ಅಂಕಿಸಿಕೊಂಡ ವಿಷ್ಣುವೇ, ವಿಭೀಷಣನಿಗೆ ರಾಮಾವತಾರ ಸಂದರ್ಭದಲ್ಲಿ ಖಳನಾದ ರಾವಣನಿಂದ ರಕ್ಷಿಸುವುದಾಗಿ ಅಭಯವನ್ನು ನೀಡಿದವನೇ, ಸಜ್ಜನ ಭಕ್ತಾದಿಗಳನ್ನು ಪೋಷಿಸು ವವನೇ ಪಾಪವೆಂಬ ಮಹಾಪರ್ವತವನ್ನು ತನ್ನ ಕೃಪೆಯೆಂಬ ವಜ್ರಾ ಯುಧದಿಂದ ಇಲ್ಲವಾಗಿಸುವವನೇ; ನರಕಾಸುರನನ್ನು ಕೊಂದವನೇ; ಮಹಾಮಹಿ ಮನೂ ಪರಮ ಪುರುಷನೂ ಯಶೋಧೆಯ ಮಾನಸಿಕ ಪುತ್ರನೂ ಆದ ಕೃಷ್ಣನೇ/ ವಿಷ್ಣುವೇ, ಪಾಪಕಾರ್ಯಗಳಿಂದುದಿಸುವ ದುಃಖಗಳನ್ನು ನಿವಾರಿಸುವ ಚೆನ್ನಿಗ ರಾಯನೇ ನಮ್ಮನ್ನು ಸದಾಕಾಲ ರಕ್ಷಿಸು.

ಕವಿಯು 'ಉರಗರಿಪು' ಎಂಬ ಸಂಬೋಧನೆಯಿಂದ ಗರುಡನನ್ನು ವಿಷ್ಣುವಿನ ಸದ್ಭಕ್ತಿ ಪೋಷಕ ಗುಣವನ್ನು ಎತ್ತಿ ಹಿಡಿಯಲೆಂದೇ ಬಳಸಿಕೊಂಡಿದ್ದಾನೆ. ಗರುಡನು ತನ್ನ ಶ್ರದ್ಧಾಭಾವ ಮತ್ತು ನಂಬಿದ ಕೆಲಸವನ್ನು ನಿಷ್ಠೆಯಿಂದಲೂ ಛಲದಿಂದಲೂ ನಿಭಾಯಿಸುವ ಮೂಲಕ ತಾನು ನಂಬಿದ ದೈವದ ಪ್ರೀತಿಗೆ ಪಾತ್ರನಾದವನು. ಆದ್ದರಿಂದಲೇ ವಿಷ್ಣುವು ಗರುಡನನ್ನು ತನ್ನ ವಾಹನ ವಾಗಿಸಿ ಕೊಂಡದ್ದಲ್ಲದೆ ಬಾವುಟದಲ್ಲಿ ಅಂಕಿಸಿ ತನಗಿಂತ ಮೇಲೆ ಎತ್ತಿ ಹಿಡಿದ.

4. ಕರಿವದನ ಹೇರಂಬ ಲಂಬೋ
ದರ ಗಣಾಧಿಪ ಮೋದಕಪ್ರಿಯ
ಪರಶು ಪಾಶಾಂಕುಶಕರಾಂಕಿತದಿಂದ ರಂಜಿಸುವ
ಸುರನರೋರಗನಮಿತ ಗೌರೀ
ವರಕುಮಾರಕ ವಿದ್ಯೆವಾರಿಧಿ
ವರದ ಗಣಪತಿ ಪಾಲಿಸೆನ್ನಯ ಮತಿಗೆ ಮಂಗಳವ

ಕರಿವದನ = ಆನೆಯ ಮುಖವುಳ್ಳ; ಹೇರಂಬ = ಗಣಪತಿಯೇ; ಲಂಬೋದರ = ಡೊಳ್ಳುಹೊಟ್ಟೆಯವನೇ; ಗಣಾಧಿಪ = ಅಷ್ಟಗಣಗಳ ಅಧಿಪತಿಯೇ; ಮೋದಕ ಪ್ರಿಯ = ಕಡುಬು ಪ್ರಿಯನೇ; ಹರ್ಷವನ್ನುಂಟುಮಾಡುವುದನ್ನು ಆನಂದಿಸುವವನೇ; ಪರಶು = ಹರಿತವಾದ ಕೊಡಲಿ; ಪಾಶ = ದುಷ್ಟರನ್ನು ನಿಗ್ರಹಿಸುವ ಸೂತ್ರ; ಅಂಕುಶ = ಸರ್ವವನ್ನು ಸರಿದಾರಿಯಲ್ಲಿ ನಡೆಸುವ ಚೂಪಾದ

ಆಯುಧಗಳನ್ನು ಧರಿಸಿದವನೇ; ಸುರ = ದೇವತೆ, ನರ = ಮನುಷ್ಯರು, ನಾಗ = ಹಾವುಗಳು ಮೊದಲಾದವರಿಂದ; ನಮಿತ = ಗೌರವಾದರಗಳಿಂದ ನಮಿಸಲ್ಪಟ್ಟವನೇ; ಗೌರೀವರ ಕುಮಾರ = ಗೌರಿಯ ಶ್ರೇಷ್ಠ ಪುತ್ರನೇ; ವಿದ್ಯೆವಾರಿಧಿ = ವಿದ್ಯೆಯ ಸಾಗರವೇ ಆದವನೇ; ವರದ = ವರಗಳನ್ನು ದಯಪಾಲಿಸುವವನೇ; ಪಾಲಿಸು = ಅನುಗ್ರಹಿಸು; ಎನ್ನ ಮತಿಗೆ = ನನ್ನ ಬುದ್ಧಿಗೆ; ಮಂಗಳವ = ಸದಾ ಶ್ರೇಯಸ್ಸನ್ನು.

ಇದು ಗಣಪತಿ ಸ್ತುತಿ. ಆನೆಯ ಮುಖವುಳ್ಳವನೂ ಪ್ರಮಥ ಗಣಗಳಿಗೆ ಅಧಿಪತಿಯೂ; ಡೊಳ್ಳು ಹೊಟ್ಟೆಯವನೂ; ಮೋದಕಪ್ರಿಯನೂ/ಹರ್ಷವನ್ನೀಯುವುದರಲ್ಲೇ ಸಂತೋಷಪಡುವವನೂ ಆದವನೇ; ಕೊಡಲಿ ಹಾಗೂ ದುಷ್ಟರನ್ನು ಅಂಕಿತದಲ್ಲಿಟ್ಟುಕೊಳ್ಳುವುದಕ್ಕೆ ಸಂಕೇತವಾದ ಪಾಶ, ಅಂಕುಶಗಳನ್ನು ಧರಿಸಿದವನೇ; ಸುರಲೋಕ, ನರಲೋಕ, ನಾಗಲೋಕ ಸಮಸ್ತ ರಿಂದಲೂ ನಮಸ್ಕರಿಸಲ್ಪಡುವವನೇ; ವರಗಳನ್ನು ದಯಪಾಲಿಸುವವನೇ; ನನ್ನ ಬುದ್ಧಿಗೆ ಸದಾ ಮಂಗಳವನ್ನುಂಟುಮಾಡು ಎಂಬುದಾಗಿ ವಿದ್ಯಾವಾರಿಧಿಯಾದ, ವಿಘ್ನನಾಶಕನಾದ ಗಣಪತಿಯನ್ನು ಕಾವ್ಯಾರಂಭ ದಲ್ಲಿ ಕವಿ ಪ್ರಾರ್ಥಿಸುತ್ತಿದ್ದಾನೆ.

ಪಾಶ, ಅಂಕುಶ, ಪರಶು ಮುಂತಾದವು ಭಾರತೀಯ ಪೌರಾಣಿಕ ವಲಯ ದಲ್ಲಿ ಬಂಧನ, ಶಿಕ್ಷಣ ಮತ್ತು ಕ್ಷುದ್ರನಾಶನ ಗುಣಗಳ ಸಂಕೇತಗಳಾಗಿವೆ. ಇವು ಆಯಾ ದೇವತೆಗಳ ಸಂಕೇತವಾಗಿದ್ದು ಅವುಗಳಿಂದಲೇ ಆ ದೇವತೆಯ ಶಕ್ತಿ, ಗುಣ, ಸೌಂದರ್ಯಗಳನ್ನು ಗ್ರಹಿಸಬಹುದಾಗಿದೆ.

5. ನಾರಿ ನಳಿನದಳಾಕ್ಷಿ ವರ ಜಂ
ಭಾರಿನುತೆ ಚತುರಾನನಪ್ರಿಯೆ
ಭೂರಿಶುಭಗುಣಭರಿತೆ ಭಕ್ತಾಶ್ರಿತಜನಾಧಾರೆ
ನೀರೆ ನಿಗಮವಿಚಾರೆ ಘನಶೃಂ
ಗಾರೆ ಭಕ್ತರಿಗೊರವ ಕೊಡುವ ಉ
ದಾರೆ ಶಾರದೆ ನಲಿದೊಲಿದು ನೆಲಸೆನ್ನ ಜಿಹ್ವೆಯಲಿ

ನಾರಿ = ಶ್ರೇಷ್ಠಳಾದ ಸ್ತ್ರೀಯೇ; ನಳಿನದಳಾಕ್ಷಿ = ತಾವರೆಯ ದಳಗಳಂತೆ ಕಣ್ಣುಳ್ಳವಳೇ; ವರ + ಜಂಬ + ಅರಿ + ನುತೆ = ಶ್ರೇಷ್ಠನಾದ ಇಂದ್ರನಿಂದ

ಸ್ತುತಿಸಲ್ಪಟ್ಟವಳೇ; ಚತುರ + ಆನನ + ಪ್ರಿಯೆ = ನಾಲ್ಕು ಮುಖವುಳ್ಳ ಬ್ರಹ್ಮನಪ್ರಿಯ ಸತಿಯೇ; ಭೂರಿ = ಶ್ರೇಷ್ಠವಾದ; ಶುಭಗುಣ = ಶುಭಕರವಾದ ಗುಣಗಳಿಂದ; ಭರಿತೆ = ಕೂಡಿದವಳೇ; ಭಕ್ತ + ಆಶ್ರಿತಜನ + ಆಧಾರೆ = ತನ್ನನ್ನಾಶ್ರಯಿಸಿ ಬಂದ ಭಕ್ತರಿಗೆ ಆಶ್ರಯ ನೀಡುವವಳೇ, ನೀರೆ = ಲಾವಣ್ಯವತಿಯೇ; ನಿಗಮ ವಿಚಾರೆ = ವೇದಾದಿಗಳಲ್ಲಿ ಪ್ರಸ್ತಾಪಿಸಲ್ಪಟ್ಟವಳೇ; ಘನ ಶೃಂಗಾರೆ = ಶೃಂಗಾರ ಚತುರಳೇ; ಭಕ್ತರಿಗೊರವ ಕೊಡುವ ಉದಾರೆ = ಭಕ್ತರಿಗೆ ಕೇಳಿದ ವರವನ್ನು ಉದಾರವಾಗಿ ನೀಡುವವಳೇ; ಶಾರದೆ = ಸರಸ್ವತಿಯೇ; ನಲಿದೊಲಿದು = ಪ್ರೀತಿಯಿಂದ ಒಲಿದು; ನೆಲೆಸು + ಎನ್ನ + ಜಿಹ್ವೆಯಲಿ = ನನ್ನ ನಾಲಗೆಗೆ ಒಲಿದು ಅಲ್ಲಿಯೇ ನೆಲೆಸು.

ತಾಯೆ ಶಾರದೇ, ತಾವರೆಯ ಎಸಳಿನಂತಹ ಶುಭ್ರವಾದ, ಸ್ನಿಗ್ಧವಾದ ಕಣ್ಣುಳ್ಳವಳೇ; ಜಂಭಾಸುರನನ್ನು ಕೊಂದು ಪರಾಕ್ರಮಿಯೆನಿಸಿದ ಇಂದ್ರನಿಂದ ಸ್ತುತಿಸಲ್ಪಟ್ಟವಳೂ ನಾಲ್ಮೊಗನಾದ ಬ್ರಹ್ಮನಿಗೆ ಪ್ರಿಯಳಾದವಳೂ ಅತ್ಯಂತ ಶ್ರೇಷ್ಠವಾದ ಶುಭ ಗುಣಸಂಪನ್ನಳೂ ವಿದ್ಯೆಗಾಗಿ ತನ್ನನ್ನಾಶ್ರಯಿಸಿ ಬಂದ ಭಕ್ತರನ್ನು ಆದರಿಸುವವಳೂ ಲಾವಣ್ಯವತಿಯೂ ವೇದಾಗಮಗಳನ್ನು ವಿಚಾರಮಾಡಿ ಚಿಂತಿಸಿ ಅರಿತವಳೂ, ನಿಗಮಾದಿಗಳಲ್ಲಿ ಪ್ರಸ್ತಾಪಿಸಲ್ಪಟ್ಟವಳೂ ಶೃಂಗಾರವಿದ್ಯೆಗಳಲ್ಲಿ ನುರಿತವಳೂ ಬೇಡಿದ ವರಗಳನ್ನು ಪ್ರೀತಿಯಿಂದ ಪ್ರದಾನ ಮಾಡುವಂಥವಳೂ ಆದ ಸರಸ್ವತಿಯೇ ನನ್ನ ನಾಲಗೆಯಲ್ಲಿ ನೆಲೆಸು ಎಂದು ಕವಿ ಪ್ರಾರ್ಥಿಸುತ್ತಿದ್ದಾನೆ.

ವೈದಿಕ ಕಾವ್ಯಗಳಲ್ಲಿ ಸರಸ್ವತಿಯನ್ನು ಹೆಣ್ಣಾಗಿ ಗ್ರಹಿಸುವುದು ವಾಡಿಕೆ. ಅದರಂತೆ ದೇವಿ ಶಾರದೆಯ ವಿವಿಧ ಗುಣಾತಿಶಯಗಳನ್ನು ಈ ಪದ್ಯದಲ್ಲಿ ಎತ್ತಿ ಹಿಡಿಯುವ ಪ್ರಯತ್ನವಿದೆ. ಇಲ್ಲಿ ಧರ್ಮರಾಯಾದಿ ಪಾಂಡವರು ರೋಮಶ ಮುನಿಯನ್ನು ಸಂಧಿಸುವುದು ಕಾವ್ಯಕವನದಲ್ಲಿ. ಅದಿರುವುದು ಸರಸ್ವತೀ ನದಿ ತೀರದಲ್ಲಿ. ಈ ಹಿನ್ನೆಲೆಯಲ್ಲಿ ಕವಿ ಸರಸ್ವತಿಯನ್ನು ಸ್ತುತಿಸುತ್ತಿರುವುದು ಔಚಿತ್ಯ ಪೂರ್ಣವಾಗಿದೆ.

6. ರಾಯರೊಳಗಗ್ಗಳೆಯನಾ ಕೌಂ
ತೇಯನಿಗೆ ರೋಮಶಮಹಾಮುನಿ
ರಾಯ ವಿಸ್ತರಿಸಿದನು ನಳಭೂವರನ ಚರಿತೆಯನು

ಶ್ರೀಯರಸ ವರಪುರದ ಚೆನ್ನಿಗ
ರಾಯನಂಕಿತಮಾಗಿ ಪೇಳುವೆ
ಪ್ರೀಯದಿಂದಾಲಿಸುವ ಸುಜನರಿಗೀ ಮಹಾಕಥೆಯ

ರಾಯರೊಳಗೆ = ಅರಸರಲ್ಲಿ; ಅಗ್ಗಳೆಯನ್ = ಶ್ರೇಷ್ಠನು; ಆ ಕೌಂತೇಯನಿಗೆ = ಆ ಕುಂತಿಯ ಮಗನಾದ ಧರ್ಮರಾಯನಿಗೆ; ರೋಮಶ ಮಹಾಮುನಿರಾಯ = ರೋಮಶ ಮುನಿಯು; ವಿಸ್ತರಿಸಿದನು = ವಿವರವಾಗಿ ಹೇಳಿದನು; ನಳಭೂವರನ = ನಳನೆಂಬ ಶ್ರೇಷ್ಠನಾದ ಮಹಾರಾಜನ; ಚರಿತೆಯನು = ಜೀವನ ಚರಿತ್ರೆಯನ್ನು; ಶ್ರೀಯರಸ = ಲಕ್ಷ್ಮಿಗೆ ಪತಿಯಾದ ನಾರಾಯಣನ; ವರಪುರದ ಚೆನ್ನಿಗರಾಯನ + ಅಂಕಿತಮಾಗಿ = ವರಪುರದ ಚೆನ್ನಿಗರಾಯನ ಅಂಕಿತನಾಮವಾಗಿ; ಪೇಳುವೆ = ಹೇಳುತ್ತೇನೆ; ಪ್ರೀಯದಿಂದ = ಮನಃಪೂರ್ವಕವಾಗಿ; ಆಲಿಸುವ = ಕೇಳುವ; ಸುಜನರಿಗೆ = ಮನಸ್ಸುಳ್ಳವರಿಗೆ.

ಅರಸರಲ್ಲಿ ಶ್ರೇಷ್ಠನೆನಿಸಿದ, ಕುಂತೀಪುತ್ರನಾದ ಧರ್ಮರಾಯನಿಗೆ ರೋಮಶ ಮಹಾಮುನಿಯು ಭೂಶ್ರೇಷ್ಠನೆನಿಸಿದ ನಳಮಹಾರಾಜನ ಜೀವನ ಚರಿತ್ರೆಯನ್ನು ಹೇಳುತ್ತಿದ್ದಾನೆ. ತಾನು ಲಕ್ಷ್ಮೀಪತಿಯಾದ ವರಪುರದ ಚೆನ್ನಿಗರಾಯನನ್ನು ಅಂಕಿತ ನಾಮವನ್ನಾಗಿ ಸ್ವೀಕರಿಸಿ. ಯಾರು ಮನಃಪೂರ್ವಕವಾಗಿ ಆಲಿಸುತ್ತಾರೋ ಅವರಿಗೆ ಈ ಕತೆಯನ್ನು ಹೇಳುತ್ತೇನೆ ಎಂಬುದಾಗಿ ಕವಿಯು ತನ್ನ ಶೋತೃಗಣಕ್ಕೆ ವಿನಂತಿಸಿಕೊಳ್ಳುತ್ತಿದ್ದಾನೆ.

ಭಾರತೀಯ ಜನಪದ ನೆಲೆಯಲ್ಲಿ ಕಥನಪ್ರಕಾರದ ಮೌಖಿಕ ವಿಧಿವಿಧಾನಗಳು ಬೆಳೆದು ಬಂದ ರೀತಿಗೆ ಈ ಶೈಲಿಯು ನಿದರ್ಶನವಾಗಿದೆ.

7. ಪರಮಪುಣ್ಯಚರಿತ್ರೆಯಿದನಾ
ದರಿಸಿ ಕೇಳುವ ನರರ ಜನ್ಮಾಂ
ತರದ ಘನದುಷ್ಕರ್ಮ ದುಃಖವಿನಾಶವಾಗುವುದು
ಕರಿ ತುರಗ ರಥನಿಚಯ ರಾಜ್ಯದ
ಸಿರಿಯ ಸಂಪದವಾಯುವನು ಮುರ
ಹರನು ಮನ್ನಿಸಿ ಕೊಡುವ ಸುಜನರಿಗಿಷ್ಟ ಸಂಪದವ

ಪರಮ ಪುಣ್ಯ ಚರಿತ್ರೆ = ಒಳ್ಳೆಯ ಜೀವನಶೈಲಿಯನ್ನಾಧರಿಸಿದ ಕಥೆ; ಇದನು + ಆದರಿಸಿ = ಇದನ್ನು ಪ್ರೀತಿಯಿಂದ; ಕೇಳುವ = ಆಲಿಸುವ; ನರರ = ಜನರ; ಜನ್ಮಾಂತರದ = ಬಹುಜನ್ಮಗಳಲ್ಲಿ ಮಾಡಿದ; ಘನದುಷ್ಕರ್ಮ = ಮಹಾ ಪಾಪಗಳೂ; ದುಃಖ ವಿನಾಶವಾಗುವುದು = ದುಃಖಗಳೂ ನಾಶವಾಗುತ್ತವೆ. ಕರಿ = ಆನೆ; ತುರಗ = ಕುದುರೆ; ರಥನಿಚಯ = ರಥ ಇತ್ಯಾದಿ ಸಂಪತ್ತನ್ನು; ರಾಜ್ಯದ ಸಿರಿಯ = ಅರಸುತನವೇ ಮುಂತಾದ ಸಂಪತ್ತುಗಳನ್ನೂ; ಆಯುವನು = ಆಯುಸ್ಸನ್ನು; ಮುರಹರನು = ಮುರನೆಂಬ ರಾಕ್ಷಸನನ್ನು ಸಂಹರಿಸಿದ ಕೃಷ್ಣನು/ ಹರಿಯು; ಮನ್ನಿಸಿ = ಆಶೀರ್ವದಿಸಿ; ಕೊಡುವ = ಕೊಡುತ್ತಾನೆ; ಸುಜನರಿಗೆ = ಒಳ್ಳೆಯವರಿಗೆ; ಇಷ್ಟಸಂಪದವ = ಬೇಡಿದ ಸಂಪತ್ತನ್ನು.

ಪರಮಪೂಜ್ಯ ಚರಿತ್ರೆಯಾದ ನಳಮಹಾರಾಜನ ಕಥೆಯನ್ನು ಕೇಳುವಂಥವರ ಜನ್ಮಾಂತರದ ಪಾಪವೂ, ದುಃಖಗಳೂ ಪರಿಹಾರ ಕಾಣುತ್ತವೆ. ಮುರನೆಂಬ ರಾಕ್ಷಸನನ್ನು ಸಂಹರಿಸಿದ ಹರಿಯು ಈ ಸಜ್ಜನರಿಗೆ ಒಲಿದು ಆನೆ ಕುದುರೆ ರಥ ಮುಂತಾದ ಉನ್ನತ ಮಟ್ಟದ ಸಂಪತ್ತನ್ನು ಪ್ರೀತಿಯಿಂದ ನೀಡುತ್ತಾನೆ. ಅವುಗಳನ್ನು ಅನುಭವಿಸಲು ಆಯಸ್ಸನ್ನೂ, ಇಷ್ಟಾರ್ಥದ ಸಿದ್ಧಿಯನ್ನೂ ಪ್ರಸಾದಿಸುತ್ತಾನೆ.

ಸಾಮಾನ್ಯವಾಗಿ, ಪ್ರಾಚೀನ ಭಾರತದಲ್ಲಿ ಕಥಾಶ್ರವಣದ ನಂತರ ಅದರ ಫಲಶ್ರುತಿಯನ್ನು ಹೇಳುವುದು ವಾಡಿಕೆ. ಕೇಳುಗರಿಗೆ, ಕಥೆಯನ್ನು ಕೇಳುವ ಆಸಕ್ತಿಯನ್ನು, ಒಳ್ಳೆಯದನ್ನು ಪಡೆದುಕೊಳ್ಳುವ ಮನೋವೇದಿಕೆಯನ್ನು ಇವು ಒದಗಿಸುತ್ತಿದ್ದುವು ಎಂಬುದು ಜನಪದ ರೂಢಿ.

8. ಜನಪ ಕುರುಭೂಪಾಲನೊಳು ಜೂ
ಜಿನಲಿ ರಾಜ್ಯವ ಸೋತು ಯಮನಂ
ದನನು ತನ್ನನುಜಾತರೊಡನೆಯೆ ಸತ್ಯವನು ಬಿಡದೆ
ವನಿತೆ ಧೌಮ್ಯಮುನೀಂದ್ರ ಮಂತ್ರೀ
ಜನಸಹಿತ ನಡೆತಂದು ಕಾಮ್ಯಕ
ವನದೊಳಗೆ ಸಂಚರಿಸುತಿರ್ದನು ತೀರ್ಥಯಾತ್ರೆಯಲಿ

ಜನ + ಪ =ಜನರನ್ನು ಪಾಲಿಸುವವನಾದ ಧರ್ಮರಾಯನು; ಕುರು ಭೂಪಾಲನೊಳು = ಕುರುವಂಶದ ಮಹಾರಾಜನಾದ ದುರ್ಯೋಧನನಿಗೆ; ಜೂಜಿನಲಿ = ಪಂದ್ಯದಲ್ಲಿ; ರಾಜ್ಯವ ಸೋತು = ಪಣಕ್ಕಿಟ್ಟ ರಾಜ್ಯವನ್ನು ಸೋತು; ಯಮನಂದನನು=ಯಮನ ಮಗನಾದ ಧರ್ಮರಾಯನು; ತನ್ನ + ಅನುಜಾತರ + ಒಡನೆಯೆ = ತನ್ನನ್ನನುಸರಿಸಿ ನಂತರ ಹುಟ್ಟಿದವರೊಂದಿಗೆ (ಕಿರಿಯ ಸಹೋದರರೊಂದಿಗೆ); ಸತ್ಯವನು ಬಿಡದೆ = ಹೇಳಿದ ಮಾತಿಗೆ ತಪ್ಪದೆ; ವನಿತೆ = ತನ್ನ ಹೆಂಡತಿ; ಧೌಮ್ಯ ಮುನೀಂದ್ರ = ಮುನಿಶ್ರೇಷ್ಠರಾದ ಧೌಮ್ಯರು; ಮಂತ್ರಿ ಜನಸಹಿತ = ಮಂತ್ರಿಗಳೇ ಮೊದಲಾದ ಪರಿವಾರದೊಂದಿಗೆ; ನಡೆತಂದು = ಬಂದು; ಕಾಮ್ಯಕ ವನದೊಳಗೆ = ಕಾಮ್ಯಕವೆಂದು ಹೆಸರುಳ್ಳ ವನದೊಳಗೆ ಸಂಚರಿಸುತ್ತಿರ್ದನು = ತಿರುಗಾಡುತ್ತಿದ್ದರು; ತೀರ್ಥಯಾತ್ರೆಯಲಿ = ಪುಣ್ಯ ಕ್ಷೇತ್ರಗಳನ್ನು ದರ್ಶಿಸುವ ನಿಮಿತ್ತ ಕೈಗೊಂಡ ಯಾತ್ರೆಯಲ್ಲಿ.

ಜನರನ್ನು ಧರ್ಮಮಾರ್ಗಪರವಾಗಿ ಪಾಲಿಸುವಂಥವನಾದ ಯಮಸುತ ನಾದ ಧರ್ಮರಾಯನು, ಕುರುವಂಶದ ಮಹಾರಾಜನಾದ ದುರ್ಯೋಧನನಿಗೆ ಜೂಜಿನಲ್ಲಿ ಪಣವನ್ನಾಗಿಟ್ಟಿದ್ದ ರಾಜ್ಯ ಸಮಸ್ತವನ್ನು ಸೋತ ನಂತರ ತಾನು ಹೇಳಿದ ಮಾತಿಗೆ ತಪ್ಪದೆ ತಮ್ಮಂದಿರೊಂದಿಗೂ ಪತ್ನಿಯೊಂದಿಗೂ, ತಮ್ಮ ರಕ್ಷಣೆಗೆಂದು ಅರಣ್ಯವಾಸಕ್ಕಾಗಿ ಹೊರಟುನಿಂತ ರಾಜಪುರೋಹಿತ ಧೌಮ್ಯಮುನಿಯೊಂದಿಗೂ, ಇತರ ಮಂತ್ರಿಮಾಗಧ ಪರಿಜನ ಸಹಿತವೂ ತೀರ್ಥಯಾತ್ರಾರ್ಥವಾಗಿ ಹೊರಟು ಮಾರ್ಗಮಧ್ಯೆ ಕಂಡ ಕಾಮ್ಯಕವನವನ್ನು ಹೊಕ್ಕನು.

9. ಧರಣಿಪತಿ ಚಿಂತಿಸುತ ಹಲುಬಿದ
ನರನ ಹದನೇನೆಂದು ತಪದಲಿ
ಮರೆದು ಕಳೆದನೊ ನಮ್ಮನಿನಿಬರನೆನುತಲಿರಲಂದು
ಸುರಪ ಕಳುಹಿದ ರೋಮಶನು ಮುನಿ
ವರನು ಗಡಣದೊಳೆಯ್ದಿ ರವಿಭಾ
ಸುರಸುತೇಜದೊಳಂದು ಕಾಮ್ಯಕವನಕೆ ನಡೆತಂದ

ಧರಣಿಪತಿ = ಭೂಮಿಯನ್ನು ಆಳುವ ಅರಸನಾದ ಧರ್ಮರಾಯನು; ಚಿಂತಿಸುತ = ಯೋಚಿಸುತ್ತ; ಹಲುಬಿದ = ದುಃಖಿಸಿದ; ನರನ = ಅರ್ಜುನನ; ಹದನು + ಏನೆಂದು = ಸ್ಥಿತಿ ಏನಾಯಿತೋ ಎಂದು; ತಪದಲಿ = ತಪಸ್ಸಿನಲ್ಲಿ; ಮರೆದು ಕಳೆದನೊ = ಮೈಮರೆತು ಹೋದನೋ; ನಮ್ಮನು + ಇನಿಬರನು = ನಮ್ಮ ಇಷ್ಟೂ ಜನರನ್ನು; ಎನುತಲಿ = ಎನ್ನುತ್ತ; ಇರಲಂದು = ಇರುವ ಆ ಸಮಯದಲ್ಲಿ; ಸುರ + ಪ = ಸುರಪತಿಯಾದ ದೇವೇಂದ್ರನು; ಕಳುಹಿದ = ಕಳುಹಿದ; ರೋಮಶನು = ರೋಮಶನೆಂಬ; ಮುನಿವರನು = ಮುನಿಶ್ರೇಷ್ಠನು; ತನ್ನ = ಗಡಣದೊಳ್ + ಎಯ್ದಿ = ತನ್ನ ಮುನಿಸಮೂಹದೊಂದಿಗೆ ಬಂದು; ರವಿ = ಸೂರ್ಯ; ಭಾಸುರ = ಹೊಳೆಯುವ; ತೇಜದೊಳ್ = ತೇಜಸ್ಸಿನಿಂದ; ಅಂದು = ಆಗ; ಕಾಮ್ಯಕ ವನಕೆ = ಕಾಮ್ಯಕವೆಂಬ ವನಕ್ಕೆ; ನಡೆತಂದ = ಬಂದನು.

ಹೀಗೆ ಧರ್ಮರಾಯನು ತನ್ನ ರಾಜಧಾನಿಯಾಗಿದ್ದ ಇಂದ್ರಪ್ರಸ್ಥದ ಪಶ್ಚಿಮಕ್ಕಿರುವ ಸರಸ್ವತೀ ನದೀ ತೀರದಲ್ಲಿರುವ, ಋಷಿಮುನಿಗಳಿಗೆ ಅತಿ ಪ್ರಿಯವಾದ ಕಾಮ್ಯಕವನದಲ್ಲಿ ತಿರುಗಾಡುತ್ತ, ತನ್ನ ಸಹೋದರನಾದ ಅರ್ಜುನನ ಸ್ಥಿತಿ ಏನಾಯಿತು? ತಪೋಮಗ್ನನಾಗಿ ತಮ್ಮ ಪರಿವಾರದವರನ್ನೆಲ್ಲ ಮರೆತುಬಿಟ್ಟನೇ ಎಂದು ಮುಂತಾಗಿ ಚಿಂತಿಸಿ ಕಳವಳಕ್ಕೊಳಗಾದನು. ಆ ಸಮಯದಲ್ಲಿ ಇಂದ್ರನ ಸಂದೇಶಾನುಸಾರ ಅಲ್ಲಿಗೆ ಬಂದ ರೋಮಶ ಮಹಾಮುನಿಯು ತನ್ನ ಮುನಿ ಸಮೂಹದೊಂದಿಗೆ ಸೂರ್ಯ ಕಿರಣಗಳಂತೆ ಬೆಳಗುತ್ತ ಅಲ್ಲಿಗೆ ಆಗಮಿಸಿದನು.

ರೋಮಶ ಮುನಿಯು ಪುರಾಣಗಳ ಅನೇಕ ಸಂದರ್ಭಗಳಲ್ಲಿ 'ಲೋಮಶ' ನೆಂದೇ ಕಾಣಸಿಗುತ್ತಾನೆ. ಇಲ್ಲಿ ಅರ್ಜುನನನ್ನು 'ನರ'ನೆಂದು ಸಂಬೋಧಿಸಲಾಗಿದೆ. 'ನರ' ಎಂಬುವನು ಒಬ್ಬ ಭಗವತ್ ಸ್ವರೂಪನಾದ ದೇವ. ಅವನು ನಾರಾಯಣನ ಸಖ. ಅರ್ಜುನನು ಅವನ ಸ್ವರೂಪನಾಗಿ ಅವತರಿಸಿದ್ದನೆಂದು ಖ್ಯಾತಿ ಇರುವುದರಿಂದ ಅವನನ್ನು ಮಹಾಭಾರತ 'ನರ' ನೆಂದೇ ಸಂಬೋಧಿಸಿದೆ.

10. ಚ್ಯವನ ಗೌತಮ ಕಪಿಲ ಭೃಗು ಭಾ
ರ್ಗವ ಭರದ್ವಾಜಾತ್ರಿ ಕೌಶಿಕ

ಪವನಭಕ್ಷಣ ವಾಮದೇವ ಮರೀಚಿ ಮೈತ್ರೇಯ
ಶ್ರವತಿ ಕಣ್ವಾಂಗಿರಸ ಶುಕ ಗಾ
ಲವ ಪರಾಶರ ದಾಲ್ಭ್ಯ ವರಮುನಿ
ನಿವಹದೊಡನೆಯ್ತಂದನಾ ರೋಮಶಮಹಾಮುನಿಪ

ಕಾಮ್ಯಕವನಕ್ಕೆ ರೋಮಶರೊಂದಿಗೆ ಬಂದ ಇತರ ಮುನಿಗಳನ್ನು ಇಲ್ಲಿ ಹೆಸರಿಸಲಾಗಿದೆ. ಚ್ಯವನ, ಗೌತಮ, ಕಪಿಲ, ಭೃಗು, ಭಾರ್ಗವ, ಭರದ್ವಾಜ, ಅತ್ರಿ, ಕೌಶಿಕ, ಪವನಭಕ್ಷಣ, ವಾಮದೇವ, ಮರೀಚಿ, ಮೈತ್ರೇಯ, ಶ್ರವತಿ, ಕಣ್ವ, ಅಂಗೀರಸ, ಶುಕ, ಗಾಲವ, ಪರಾಶರ, ದಾಲ್ಭ್ಯ; ವರಮುನಿ = ಶ್ರೇಷ್ಠ ಮುನಿಗಳ; ನಿವಹದೊಡನೆ + ಎಯ್ತಂದನ್ + ಆ = ಸಮೂಹದೊಂದಿಗೆ ಬಂದನು; ಆ ರೋಮಶ ಮಹಾ ಮುನಿಪ = ರೋಮಶನೆಂಬ ಮಹಾಮುನಿ.

ಇಂದ್ರ ಹಾಗೂ ಅರ್ಜುನರ ಸಂದೇಶಗಳನ್ನು ಹೊತ್ತಂತಹ ರೋಮಶ ಮಹಾಮುನಿಯು ಚ್ಯವನ, ಗೌತಮ, ಕಪಿಲ, ಭೃಗು, ಭಾರ್ಗವ, ಭರದ್ವಾಜ, ಅತ್ರಿ, ಕೌಶಿಕ, ಪವನಭಕ್ಷಣ, ವಾಮದೇವ, ಮರೀಚಿ, ಮೈತ್ರೇಯ, ಶ್ರವತಿ, ಕಣ್ವ, ಅಂಗೀರಸ, ಶುಕ, ಗಾಲವ, ಪರಾಶರ, ದಾಲ್ಭ್ಯ – ಮುಂತಾದ ಹತ್ತೊಂಬತ್ತು ಮಹಾಮುನಿ ಗಳೊಂದಿಗೆ ಧರ್ಮರಾಯನನ್ನು ಕಾಣಲು ಕಾಮ್ಯಕವನಕ್ಕೆ ಬಂದನು.

ರಾಮಧಾನ್ಯಚರಿತೆಯಲ್ಲೂ ಈ ರೀತಿಯ ಮುನಿಸಮೂಹವೊಂದನ್ನು ಕವಿ ತಂದಿರುವುದನ್ನು ನೆನಪಿಸಿಕೊಳ್ಳಬಹುದು.

11. ಅರಸನನುಜರು ಸಹಿತ ಮುನಿಮು
ಖ್ಯರನು ಕಂಡಿದಿರೆದ್ದು ಚರಣದೊ
ಳೆರಗಿ ಬಿಜಯಂಗೆಯ್ಸಿ ತಂದನು ತಳಿರ ಮಂಟಪಕೆ
ವರಮುನೀಂದ್ರರಿಗರ್ಘ್ಯಪಾದ್ಯೋ
ತ್ಕರದೊಳುಪಚರಿಸುತ್ತ ದರ್ಭಾ
ಸ್ತರಣದಲಿ ಕುಳ್ಳಿರಿಸಿದನು ಭಯಭರಿತಭಕ್ತಿಯಲಿ

ಅರಸನ = ಮಹಾರಾಜನ; ಅನುಜರು = ತಮ್ಮಂದಿರು; ಸಹಿತ = ಜೊತೆಗೆ; ಮುನಿಮುಖ್ಯರನು = ಮುನಿಸಂಕುಲದ ಹಿರಿಯರನ್ನು; ಕಂಡು + ಇದಿರು

+ಎದ್ದು = ಕಂಡು ಎದ್ದು ಎದುರಿಗೆ ಬಂದು; ಚರಣದೊಳ್ + ಎರಗಿ = ಪಾದಗಳಿಗೆ ನಮಸ್ಕರಿಸಿ; ಬಿಜಯಂಗೆಯ್ಸಿ = ಆದರ ಪೂರ್ವಕವಾಗಿ ಆಹ್ವಾನಿಸಿ; ತಂದನು = ಕರೆತಂದನು; ತಳಿರ = ಹಚ್ಚ ಹಸಿರಿನಿಂದ ನೇಯ್ದ; ಮಂಟಪಕೆ = ಸಭಾಮಂಟಪಕ್ಕೆ; ವರ = ಶ್ರೇಷ್ಠರಾದ; ಮುನೀಂದ್ರರಿಗೆ = ಮುನಿಗಳಿಗೆ; ಅರ್ಘ್ಯ = ಕೈ ತೊಳೆಯಲು ಉತ್ತಮವಾದ ನೀರು; ಪಾದ್ಯ = ಕಾಲು ತೊಳೆಯಲು ನೀರು; ಉತ್ಕರದೊಳ್ = ಮುಂತಾದ ಪವಿತ್ರ ಸಾಧನಗಳಿಂದ; ಉಪಚರಿಸುತ್ತ = ಅಕ್ಕಪಕ್ಕದಲ್ಲಿದ್ದುಕೊಂಡು ಆದರದಿಂದ ವಿಚಾರಿಸಿಕೊಳ್ಳುತ್ತ; ದರ್ಭೆ = ದರ್ಭೆಯ; ಆಸ್ತರಣದಲಿ = ಕುಳಿತುಕೊಳ್ಳಲು ಮಾಡಿದ ಚಾಪೆಯಂತಹ ಸಾಧನದಲ್ಲಿ; ಕುಳ್ಳಿರಿಸಿದನು = ಕುಳಿತುಕೊಳ್ಳಲು ಉಪಚರಿಸಿದನು; ಭಯಭರಿತ = ಗೌರವಾದರಗಳಿಂದ ಕೂಡಿದ, ಭಕ್ತಿಯಲಿ = ಆರಾಧನಾ ಪೂರ್ವಕ ಸೇವೆಯಿಂದ.

ಧರ್ಮರಾಯನು ತನ್ನ ತಮ್ಮಂದಿರೊಡಗೂಡಿ, ಮುನಿಶ್ರೇಷ್ಠರ ಆಗಮನ ವನ್ನು ಕಂಡು, ಆದರಪೂರ್ವಕವಾಗಿ ಎದ್ದು ಎದುರು ಬಂದು, ಅವರ ಪಾದಗಳಿಗೆ ಗೌರವದಿಂದ ನಮಸ್ಕರಿಸಿ, ಆಹ್ವಾನಿಸಿ, ಹಚ್ಚ ಹಸಿರಿನಿಂದ ನೇಯ್ದು ಮಾಡಿದ್ದ ಹೊಸ ಚಿಗುರ ಮಂಟಪಕ್ಕೆ ಕರೆತಂದನು. ಅವರಿಗೆ ಕೈಕಾಲು ತೊಳೆಯಲು ಪವಿತ್ರಜಲವನ್ನು ನೀಡಿ ಉಪಚರಿಸುತ್ತ, ಮರ್ಯಾದಾಪೂರ್ವಕವಾಗಿ, ಅಕ್ಕಪಕ್ಕ ದಲ್ಲಿದ್ದುಕೊಂಡು ವಿಚಾರಿಸಿಕೊಳ್ಳುತ್ತ, ದರ್ಭಾಸನಗಳಲ್ಲಿ ಕುಳಿತುಕೊಳ್ಳಲು ಅನುವು ಮಾಡಿ ಭಯ ಭಕ್ತಿಯಿಂದ ಸೇವೆ ಮಾಡಿದನು.

ಜನಸಾಮಾನ್ಯರೆಲ್ಲರಿಗೂ ಮುನಿಜನಾದಿ ಹಿರಿಯ ಮಾನ್ಯರೆಲ್ಲರನ್ನೂ ಒಳಗೊಂಡಂತೆ ರಾಜನೇ ಪ್ರತ್ಯಕ್ಷದೇವತೆ ಎನಿಸಿಕೊಂಡಿದ್ದ ಕಾಲ ಅದು. ಆದರೂ ಸಿದ್ಧಿಸಾಧಕರಾದ ಮುನಿಗಳು ಆಚಾರ್ಯಸಮಾನ ಗೌರವಾನ್ವಿತರಾದ ಕಾರಣ ರಾಜನಾದವನು ಅವರ ಸೇವೆಯಲ್ಲಿ ತೊಡಗಿರುವುದು ಪ್ರಾಚೀನ ಸಮಾಜದ ವಾಡಿಕೆ.

12. ನೀವಘಾಡದ ದೇವಋಷಿಗಳು
ಪಾವನರು ಮೂಲೋಕಕತಿ ಸಂ
ಭಾವನೀಯರು ಸತ್ಯಸಂಧರು ನಿರ್ಮಲಾತ್ಮಕರು
ಆವನರಿವನು ನಿಮ್ಮ ಮಹಿಮೆಯ

ಭಾವಿಸುವಡೆನಗಳವೆ ನಿಮ್ಮ ಪ
ದಾವಲಂಬನಸೇವೆ ದೊರಕಿತು ಧನ್ಯರಾವೆಂದ

ನೀವ್ + ಅಘ + ಆಡದ = ನೀವು ಪಾಪವನ್ನೇ ಮಾಡದ; ದೇವ ಋಷಿಗಳು = ದೇವ ಸಮಾನರಾದ ಋಷಿಗಳು; ಪಾವನರು = ಪವಿತ್ರರು; ಮೂರು + ಲೋಕಕೆ = ಸ್ವರ್ಗ, ಮರ್ತ್ಯ, ಪಾತಾಳವೆಂಬ ಮೂರು ಲೋಕಗಳಲ್ಲಿ; ಅತಿ = ಬಹಳವಾಗಿ; ಸಂಭಾವನೀಯರು = ಗೌರವಾನ್ವಿತರು; ಸತ್ಯಸಂಧರು = ಕೊಟ್ಟ ಮಾತನ್ನು ತಪ್ಪದೆ ನಡೆಸುವಂಥವರು; ನಿರ್ಮಲ = ಪರಿಶುದ್ಧವಾದ; ಆತ್ಮಕರು = ಮನಸ್ಸುಳ್ಳವರು; ಆವನು + ಅರಿವನು = ಯಾರು ತಿಳಿಯಲು ಸಾಧ್ಯ?; ನಿಮ್ಮ ಮಹಿಮೆಯ = ನಿಮ್ಮ ಸಿದ್ಧಿ ಸಾಮರ್ಥ್ಯಗಳನ್ನು?; ಭಾವಿಸುವಡೆ + ಎನಗೆ + ಅಳವೆ = ಅರಿಯುವುದು ನನ್ನ ಅಳತೆಗೆ ಮೀರಿದ ವಿಷಯ; ನಿಮ್ಮ + ಪದ + ಅವಲಂಬನ = ನಿಮ್ಮ ಪಾದಗಳನ್ನು ಆಶ್ರಯಿಸಿ; ಸೇವೆ = ಸೇವೆ ಮಾಡುವ ಅವಕಾಶ; ದೊರಕಿತು = ದೊರಕಿದುದು; ಧನ್ಯರು + ಆವು + ಎಂದ = ಧನ್ಯರು ನಾವು ಎಂದ.

ಎಂದೂ ದುಷ್ಕೃತ್ಯಗಳನ್ನು ಮಾಡದ, ಅದಕ್ಕನುವು ಮಾಡಿಕೊಡದ ತಾವು ದೇವರ ಸಮಾನರು, ಪರಮಪವಿತ್ರ ಹೃದಯವುಳ್ಳವರು. ದೇವಲೋಕ, ಮನುಷ್ಯ ಲೋಕ, ಪಾತಾಳಲೋಕಗಳೆಂಬ ಮೂರು ಲೋಕಗಳಲ್ಲಿ ಬಹು ಸಂಭಾವಿತರೆಂದೂ ಚಿಂತನಪರರೆಂದೂ ಗೌರವವನ್ನು ಪಡೆದವರು. ಸದಾ ಕೊಟ್ಟ ಮಾತಿನಂತೆ ನಡೆಯುವ ಸತ್ಯವಂತರು. ಪರಿಶುದ್ಧವಾದ ಮನಸ್ಸುಳ್ಳವರು, ನಿಮ್ಮ ಸಿದ್ಧಿ ಸಾಮರ್ಥ್ಯಗಳನ್ನು ಅಳೆಯುವುದು ನಮ್ಮಂತಹವನಿಂದ ಸಾಧ್ಯವೇ? ಅದು ನಮ್ಮ ಸಾಮರ್ಥ್ಯಕ್ಕೆ ಮೀರಿದ ಸಂಗತಿ. ನಿಮ್ಮ ಪಾದಗಳನ್ನಾಶ್ರಯಿಸಿ ಸೇವೆ ಮಾಡುವ ಅವಕಾಶ ದೊರಕಿರುವುದರಿಂದ ನಾವು ಧನ್ಯರಾಗಿದ್ದೇವೆ ಎಂಬುದಾಗಿ ಧರ್ಮ ರಾಯನು ಆ ಮುನಿಸಂಕುಲವನ್ನು ಉದ್ದೇಶಿಸಿ ವಿನಯಪೂರ್ವಕವಾಗಿ ಹೇಳಿದನು.

13. ಧರಣಿಪತಿ ಸುಕ್ಷೇಮವೇ ನಿಜ
ತರುಣಿ ನಿನ್ನನುಜಾತತನಯರು

ವರಸಚಿವ ಸಾಮಂತ ಧೌಮ್ಯಮುನೀಂದ್ರ ಮಂತ್ರಿಗಳು
ಪರಿಣತರೆ ಪೇಳೆನಲು ನಿಮ್ಮಯ
ಪರಮ ಕರುಣಾಮೃತವೆ ನಮ್ಮನು
ಹೊರೆಯುತಿರೆ ಸುಕ್ಷೇಮ ಬೇರಿಲ್ಲೆಂದನಾ ನೃಪತಿ

ಧರಣಿಪತಿ = ಈ ಭೂಮಂಡಲವನ್ನು ಆಳುವ ಮಹಾರಾಜನೇ; ಸುಕ್ಷೇಮವೇ = ಕ್ಷೇಮವಾಗಿರುವಿಯೇನು; ನಿಜತರುಣಿ = ನಿನ್ನ ಪತ್ನಿ; ನಿನ್ನ + ಅನುಜಾತ + ತನಯರು = ನಿನ್ನ ಒಡಹುಟ್ಟಿದ ತಮ್ಮಂದಿರು, ಮಕ್ಕಳು, ಅವರ ಮಕ್ಕಳು (ಅನುಜಾತರು, ತನಯರು, ಅನುಜಾತ ತನಯರು ಎಂದು ಎರಡು ಬಗೆಯಲ್ಲಿಯೂ ಲಕ್ಷಿಸಬೇಕು) ವರಸಚಿವ = ನಿನ್ನ ಶ್ರೇಷ್ಠ ಮಂತ್ರಿವರ್ಯರು; ಸಾಮಂತರು = ನಿನ್ನ ಪ್ರಭುತ್ವದಲ್ಲಿರುವ ಇತರ ರಾಜರು; ಧೌಮ್ಯಮುನೀಂದ್ರ = ನಿನ್ನ ರಕ್ಷಣಾ ವಲಯದಲ್ಲಿರುವ ಧೌಮ್ಯ ಮುನಿಶ್ರೇಷ್ಠರು; ಮಂತ್ರಿಗಳು = ಸಚಿವರು; ಪರಿಣಿತರೆ = ಕ್ಷೇಮ, ಸಂತೋಷಗಳಿಂದ ಇದ್ದಾರೆಯೇ?; ಪೇಳೆನಲು = ಹೇಳು ಎನ್ನಲು; ನಿಮ್ಮಯ = ನಿಮ್ಮ; ಪರಮ = ಮಹಾ; ಕರುಣ + ಅಮೃತವೆ = ಅಮೃತಸಮಾನ ದಯಾಪರತೆಯೇ; ನಮ್ಮನು = ನಮ್ಮನ್ನು; ಹೊರೆಯುತ್ತಿದೆ= ರಕ್ಷಿಸುತ್ತಿದೆ; ಸುಕ್ಷೇಮ ಬೇರಿಲ್ಲ = ಇದಕ್ಕಿಂತ ಪುಣ್ಯ ಬೇರೆ ಇಲ್ಲ; ಎಂದನಾ ನೃಪತಿ = ಎಂದು ದೊರೆಯಾದ ಧರ್ಮರಾಯನು ಹೇಳಿದನು.

ಧರ್ಮಜನ ಉಪಚಾರಾದಿಗಳ ನಂತರ ಔಪಚಾರಿಕ ಸಂಪ್ರದಾಯಗಳಿಗನುಗುಣವಾಗಿ ರೋಮಶ ಮುನಿಯು ದೊರೆಯ ಕ್ಷೇಮಾದಿಗಳನ್ನು ಕುರಿತು ವಿಚಾರಿಸಿಕೊಳ್ಳುತ್ತಿದ್ದಾನೆ. "ರಾಜನೇ ಕ್ಷೇಮವಾಗಿದ್ದೀಯೇನು? ನಿನ್ನ ಪತ್ನಿಯು ಕ್ಷೇಮವೇ? ನಿನ್ನ ತಮ್ಮಂದಿರು, ನಿನ್ನ ಮಕ್ಕಳು, ಅವರ ಮಕ್ಕಳು, ಮಂತ್ರಿ ಶ್ರೇಷ್ಠರು, ಸಾಮಂತರಾಜರು, ಧೌಮ್ಯ ಮುನಿ ಶ್ರೇಷ್ಠರು ಎಲ್ಲರೂ ಕ್ಷೇಮ ಸಂತೋಷಾದಿಗಳಿಂದ ತೃಪ್ತರಾಗಿರುವರೇ?" ಎಂದು ಕೇಳಲು, ಧರ್ಮರಾಜನು "ತಮ್ಮ ದಯೆ, ಕರುಣೆಗಳೇ ಅಮೃತ ಸಮಾನವಾಗಿ ನಮ್ಮೆಲ್ಲರನ್ನು ರಕ್ಷಿಸುತ್ತಿದೆ. ಇದಕ್ಕಿಂತ ಪುಣ್ಯ ಬೇರೇನು ಇರಲು ಸಾಧ್ಯ" ಎಂದು ವಿನಯವನ್ನು ಮೆರೆಯುತ್ತ ಹೇಳಿದನು.

ಪ್ರಜೆಗಳ ಹಿತರಕ್ಷಣೆ ರಾಜನ ಕರ್ತವ್ಯ ಮಾತ್ರವಲ್ಲ, ಮುನಿವೃಂದದ ಧರ್ಮವೂ ಹೌದು ಎಂಬ ಗೌರವಯುತ ಭಾವನೆ ಆ ಕಾಲದ ಸಾಮಾಜಿಕ ರಚನೆಯಲ್ಲೇ ಇತ್ತು ಎಂಬುದನ್ನು ಈ ಪದ್ಯ ಗಮನಕ್ಕೆ ತರುತ್ತಿದೆ.

14. ಧಾರಿಣಿಯ ನೆರೆ ಸೋತು ಅನುಜರು
ವಾರಿಜಾನನೆ ಸಹಿತ ಬಂದೀ
ಘೋರಕಾನನದೊಳಗೆ ಗಿರಿಗಹ್ವರದ ಮಧ್ಯದಲಿ
ಸೇರಿ ಹೃತಸುಖರಾಗಿ ಬಳಲಿದ
ರಾರು ಧರೆಯೊಳಗೆನ್ನವೊಲು ಭವ
ದೂರ ಮುನಿಕುಲತಿಲಕ ಹೇಳೆಂದರಸ ಬಿಸುಸುಯ್ದ

ಧಾರಿಣಿಯ = ಭೂಮಿಯನ್ನು; ನೆರೆ ಸೋತು = ಸಂಪೂರ್ಣವಾಗಿ ಜೂಜಿನಲ್ಲಿ ಪಣವಾಗಿಟ್ಟು ಸೋತು; ಅನುಜರು = ತಮ್ಮಂದಿರು; ವಾರಿ + ಜ + ಆನನೆ = ನೀರಿನಲ್ಲಿ ಹುಟ್ಟಿದ ಕಮಲದಂತೆ, ಮುಖವುಳ್ಳ ಸತಿ; ಸಹಿತ = ಜೊತೆಗೆ ಬಂದು; ಈ ಘೋರ ಕಾನನದೊಳಗೆ = ಈ ಭಯಂಕರ ಅರಣ್ಯದಲ್ಲಿ; ಗಿರಿ = ಬೆಟ್ಟ; ಗಹ್ವರ = ಗುಹೆ; ಮಧ್ಯದಲ್ಲಿ = ನಡುವಿನಲ್ಲಿ; ಸೇರಿ = ಸೇರಿಕೊಂಡು; ಹೃತಸುಖರಾಗಿ = ಸುಖ ಸಂತೋಷಗಳನ್ನು ಕಳೆದುಕೊಂಡವರಾಗಿ; ಬಳಲಿದರಾರು = ಯಾರು ಕಷ್ಟಗೊಂಡವರು ತೊಳಲಿದವರು; ಧರೆಯೊಳಗೆ + ಎನ್ನವೊಲು = ಈ ಭೂಮಿಯಲ್ಲಿ ನನ್ನಂತೆ; ಭವದೂರ = ಸಂಸಾರಾದಿ ಬಂಧನಗಳನ್ನು ದೂರವಿರಿಸಿರುವ; ಮುನಿಕುಲತಿಲಕ = ಮುನಿಕುಲಕ್ಕೆ ಅಲಂಕಾರಪ್ರಾಯನಾಗಿರುವ ಋಷಿವರ್ಯನೇ; = ಹೇಳು + ಎಂದು = ಹೇಳೆಂದು; ಅರಸ = ಅರಸ ಧರ್ಮರಾಯನು; ಬಿಸುಸುಯ್ದು = ಬಿಸಿಯುಸಿರು ಹೊರಹಾಕಿದನು.

ಜೂಜಿನಲ್ಲಿ ರಾಜ್ಯಕೋಶಗಳನ್ನೆಲ್ಲ ಪಣವಿಟ್ಟು ಸೋತು, ಕೊಟ್ಟ ಮಾತಿಗೆ ಕಟ್ಟುಬಿದ್ದು ತಮ್ಮಂದಿರನ್ನೂ ಪತ್ನಿಯನ್ನೂ ಒಡಗೊಂಡು ಈ ಗಿರಿಗುಹೆಗಳಿಂದ ಕೂಡಿದ ಭಯಂಕರವಾದ ಕಾಡಿನಲ್ಲಿ ಅಲೆಯುತ್ತ, ಬದುಕಿನ ಎಲ್ಲ ಸುಖ ಸಂತೋಷಗಳನ್ನು ಕಳೆದುಕೊಂಡು ನನ್ನಂತೆ ಬಳಲಿದವರು ಈ ಲೋಕದಲ್ಲಿ ಇದ್ದಾರೆಯೇ ಮುನಿವರ್ಯ? ಇದ್ದ ಸಂಸಾರ ಸುಖ ಬಂಧನಗಳನ್ನೆಲ್ಲ ದೂರವಿಟ್ಟ

ನಿನಗೆ ತಿಳಿಯದೇ ಹೇಳು ಎಂದು ನಿಟ್ಟುಸಿರು ಬಿಡುತ್ತ ಧರ್ಮರಾಯನು ರೋಮಶ ಮುನಿಗಳಲ್ಲಿ ತನ್ನ ಪರಿಸ್ಥಿತಿಯನ್ನು ಕುರಿತು ಹೇಳಿಕೊಂಡನು.

ಹಿಂದಿನ ಪದ್ಯದಲ್ಲಿ (ಪದ್ಯ-13) "ನಿಮ್ಮ ಅಮೃತಸಮಾನ ದಯೆ ಕರುಣೆಗಳು ನಮ್ಮನ್ನೆಲ್ಲ ರಕ್ಷಿಸುತ್ತಿದೆ. ಇದಕ್ಕಿಂತ ಇನ್ನಾವ ಪುಣ್ಯಬೇಕು" ಎಂದ ಧರ್ಮರಾಯ ಇಲ್ಲಿ "ನನ್ನಂತೆ ಬಳಲಿದವರು ಇನ್ನಾರಿದ್ದಾರೆ ಈ ಧರೆಯಲ್ಲಿ" ಎಂದು ಅಳಲು ತೋಡಿಕೊಳ್ಳುತ್ತಿರುವುದು ವಿರೋಧಾಭಾಸವಾದಂತೆ ಕಂಡರೂ, ಕಥಾತಂತ್ರದ ದೃಷ್ಟಿಯಿಂದ ಆ ಮಿತಿ ಗೌಣವೆನಿಸುತ್ತದೆ.

15. ಎಲೆ ಮಹೀಪತಿ ನೀನಿನಿತು ಉ
ಮ್ಮಳಿಸಲೇಕರಸುಗಳು ಪೂರ್ವದ
ನಳ ಹರಿಶ್ಚಂದ್ರಾದಿ ರಾಘವನೃಪರು ಹಳುವದಲಿ
ಲಲನೆಯರ ತಾವಗಲಿ ಕಷ್ಟವ
ಬಳಸಿದರು ಅವರಂತೆ ನಿನಗುಪ
ಟಳಗಳುಂಟೇ ಬರಿದೆ ಮನನೋಯದಿರು ನೀನೆಂದ

ಎಲೈ = ಎಲೆ; ಮಹೀಪತಿ = ಭೂಮಿಯನ್ನು ಪಾಲಿಸುವವನೇ; ನೀನು + ಇನಿತು = ನೀನು ಇಷ್ಟು; ಉಮ್ಮಳಿಸಲೇಕೆ + ಅರಸುಗಳು = ಕಳವಳಿಸುತ್ತಿರುವುದೇಕೆ ಅರಸರು; ಪೂರ್ವದ = ಹಿಂದಿನ; ನಳ ಹರಿಶ್ಚಂದ್ರಾದಿ = ನಳ ಹರಿಶ್ಚಂದ್ರ ಮೊದಲಾದವರನ್ನೊಳಗೊಂಡು; ರಾಘವ = ರಘುವಂಶದ ರಾಮ; ನೃಪರು = ರಾಜರು; ಹಳುವದಲಿ = ಕಾಡಿನಲ್ಲಿ; ಲಲನೆಯರ = ಹೆಂಡತಿಯರನ್ನು; ತಾವು + ಅಗಲಿ = ಪರಸ್ಪರ ದೂರವಾಗಿ; ಕಷ್ಟ ಬಳಸಿದರು = ಕಷ್ಟಪಟ್ಟರು; ಅವರಂತೆ = ಅವರ ಹಾಗೆ; ನಿನಗೆ + ಉಪಟಳ + ಉಂಟೆ? – ನಿನಗೆ ಏನಾದರೂ ಕಷ್ಟವಿದೆಯೇ; ಬರಿದೆ = ಸುಮ್ಮನೆ; ಮನ ನೋಯದಿರು = ಮನಸ್ಸನ್ನು ನೋಯಿಸಿಕೊಳ್ಳಬೇಡ; ನೀನು + ಎಂದ = ನೀನು ಎಂದನು.

ಧರ್ಮರಾಯನ ನಿಟ್ಟುಸಿರ ಮಾತಿಗೆ ಪ್ರತಿಯಾಗಿ ರೋಮಶ ಮುನಿಯು ಅವನನ್ನು ಸಮಾಧಾನಿಸುತ್ತಿದ್ದಾನೆ. ರಾಜನೇ, ಹಿಂದೆ ರಾಜಾಧಿರಾಜರಾದ ನಳಚಕ್ರವರ್ತಿಯೂ ಹರಿಶ್ಚಂದ್ರ ಮಹಾರಾಜನೂ ರಘುವಂಶೋತ್ತಮನಾದ

ರಾಮನೂ ಕಾಡಿನಲ್ಲಿ ತಮ್ಮ ಅರಸಿಯರನ್ನು ಕಳೆದುಕೊಂಡು ಕಷ್ಟಗಳಿಗೀಡಾಗಿದ್ದಾರೆ. ಅವರಂತೆ ನಿನಗೇನೂ ಕಷ್ಟವಿಲ್ಲ, ಏಕೆ ವೃಥಾ ಮನಸ್ಸನ್ನು ಕಳವಳಿಸಿ ನೋಯಿಸಿ ಕೊಳ್ಳುತ್ತಿದ್ದೀಯೆ ಎಂದನು.

ಎಲೈ, ಎಲವೋ ಮೊದಲಾದ ಸಂಬೋಧನಾ ಪದಗಳು ಏಕವಚನ ವಾದರೂ ಇಲ್ಲಿ ಗೌರವಸೂಚಕಗಳಾಗಿಯೇ ವರ್ತಿಸುತ್ತವೆ.

ನಳ, ಹರಿಶ್ಚಂದ್ರ, ರಾಮ ಮುಂತಾದವರ ಕಷ್ಟಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿರುವ ಔಚಿತ್ಯವೇನೆಂದರೆ, ಒಂದು 'ಮತ್ತೊಬ್ಬರ ಕಷ್ಟ ಅರಿತು ತಮ್ಮ ಕಷ್ಟ ಮರೆಯಬೇಕು' ಎಂಬ ಜನಪದ ಚಿಂತನೆ. ಎರಡನೆಯದು ನಳನ ಕಥಾ ಪ್ರಕಾರಕ್ಕೆ ಇದು ಮುನ್ನುಡಿ. ಪೂರ್ವಕಾಲದಲ್ಲಿ ಜನಪದರಲ್ಲಿ ರೂಢಿಯಲ್ಲಿದ್ದ ಒಂದು ಕಥಾತಂತ್ರವನ್ನಿಲ್ಲಿ ಕವಿ ಬಳಸಿಕೊಳ್ಳುತ್ತಿದ್ದಾನೆ.

16. ಪರಮಋಷಿಗಳ ನೆರವಿಯೇ ಸಭೆ
ಹರಿಯ ಕಾರುಣ್ಯಾಂಬುಧಿಯೆ ಸಿರಿ
ನರವೃಕೋದರ ಮಾದ್ರಿತನಯರು ನಿನಗೆ ಬಾಹುಬಲ
ತರುಣಿಯೇ ಭೋಗೈಕಸಂಪ
ತ್ತುರುತರದ ವನರಾಜ್ಯ ನಿನಗಿಂ
ತಿರಲು ಸರಿಯಾರರಸ ಚಿಂತಿಸಲೇಕೆ ನೀನೆಂದ

ಪರಮ ಋಷಿಗಳ = ಶ್ರೇಷ್ಠಾತಿಶ್ರೇಷ್ಠ ಋಷಿಗಳ; ನೆರವಿಯೇ = ಸಮೂಹವೇ; ಸಭೆ = ಸಭೆ; ಹರಿಯ = ಕೃಷ್ಣನ; ಕಾರುಣ್ಯ + ಅಂಬುಧಿಯೆ = ಕರುಣೆಯೆಂಬ ಕಡಲೇ; ಸಿರಿ = ಸಂಪತ್ತು; ನರ = ಅರ್ಜುನ; ವೃಕ + ಉದರ = ತೋಳದಂತೆ ಹೊಟ್ಟೆ ಉಳ್ಳವನು ಭೀಮ; ಮಾದ್ರಿ ತನಯರು = ಮಾದ್ರಿಯ ಮಕ್ಕಳಾದ ನಕುಲ, ಸಹದೇವರೇ; ನಿನಗೆ ಬಾಹುಬಲ = ನಿನ್ನ ತೋಳ್ಬಲವಾಗಿದ್ದಾರೆ; ತರುಣಿಯೇ = ಯೌವ್ವನವತಿಯಾದ ಪತ್ನಿಯೇ; ಭೋಗ + ಏಕ ಸಂಪತ್ತು = ನಿನಗೆ ಎಲ್ಲ ರೀತಿಯ ಸುಖ ಸಂಪತ್ತು; ಉರುತರದ = ಉತ್ತಮೋತ್ತಮವಾದ; ವನರಾಜ್ಯ = ಅರಣ್ಯವೇ ರಾಜ್ಯ; ನಿನಗೆ + ಇಂತಿರಲು = ನಿನಗೆ ಇಂತಹ ಸೌಕರ್ಯಗಳಿರಲು; ಸರಿ + ಯಾರು + ಅರಸ; ನಿನಗೆ ಸರಿಸಮಾನರು

ಯಾರಿದ್ದಾರೆ ಅರಸನೇ; ಚಿಂತಿಸಲೇಕೆ = ಏಕೆ ಚಿಂತಿಸುತ್ತೀಯೆ; ನೀನೆಂದ = ನೀನು ಎಂದ.

ತನ್ನ ಮಾತುಗಳನ್ನು ಮುಂದುವರಿಸುತ್ತಾ ರೋಮಶ ಮುನಿಯು ಮತ್ತೆ ಹೀಗೆಂದನು– ಅರಸನೇ, ನೀನೇಕೆ ಇಷ್ಟು ಚಿಂತಿಸುತ್ತಿದ್ದೀಯೆ? ಇದು ಕಾಡಾದರೇನಂತೆ, ಪರಮಶ್ರೇಷ್ಠರಾದ ಋಷಿಮುನಿಗಳ ಸಮೂಹವೇ ಇಲ್ಲಿ ನಿನಗೆ ರಾಜಸಭೆಯಾಗಿದೆ. ಹರಿಯ ಕರುಣಾಸಮುದ್ರವೇ ನಿನ್ನ ಸಿರಿಸಂಪತ್ತಾಗಿದೆ. ಅರ್ಜುನ, ಭೀಮ ಮತ್ತು ಮಾದ್ರಿಯ ಮಕ್ಕಳಾದ ನಕುಲ ಸಹದೇವರೆಲ್ಲರೂ ಮಹಾವೀರರು. ಇಂಥವರು ನಿನ್ನ ತೋಳ್ಬಲವೇ ಆಗಿದ್ದಾರೆ. ಜೊತೆಗೆ ಎಲ್ಲ ಸುಖ ಸಂಪತ್ತುಗಳ ಏಕೈಕ ಆಗರದಂತಿರುವ ಪತ್ನಿ ನಿನ್ನೊಡನೆಯೇ ಇದ್ದಾಳೆ. ಅರಣ್ಯವೇ ನಿನ್ನ ರಾಜ್ಯವಲ್ಲವೇ? ಹೀಗಿರುವಾಗ ನಿನ್ನ ಸರಿಸಮಾನ ಸುಖಿಗಳು ಯಾರಿದ್ದಾರೆ? ಎಂದು ಮುನಿಯು ಧರ್ಮರಾಯನನ್ನು ಸಮಾಧಾನಿಸಿದ.

'ವೃಕೋದರ'ನೆಂಬುದು ಭೀಮನ ಅನ್ವರ್ಥನಾಮ. ತೋಳನಂತೆ ಹಸಿವುಳ್ಳವನೆಂದೂ, ತೋಳನಂತೆ ತೆಳ್ಳನೆಯ ಉದರದ, ತೆಳು ಶರೀರಿಯಾದ ಸುಂದರನೆಂದೂ ಅರ್ಥ. ಭೀಮನ ಹೊಟ್ಟೆಯಲ್ಲಿ 'ವೃಕ' ನೆಂಬ ಅಗ್ನಿ ವಿಶೇಷವಿತ್ತು ಎಂದು ಮಹಾಭಾರತದ ಆದಿಪರ್ವ ಹೇಳುತ್ತದೆ. ಅಗ್ನಿಯಂತೆ ಎಷ್ಟು ತಿಂದರೂ ಇಂಗದ ಹಸಿವು ಭೀಮನಿಗೆ, ಅವನೇ ಅಗ್ನಿಯ ಅಂಶವುಳ್ಳವನು ಎಂದೂ ಹೇಳಲಾಗಿದೆ. (ಪುರಾಣನಾಮ ಚೂಡಾಮಣಿ)

ಒಬ್ಬ ಸಮರ್ಥ ರಾಜನಾದವನು ಕ್ಷಾತ್ರತೇಜಸ್ಸು ಮತ್ತು ರಾಜಧರ್ಮಗಳನ್ನು ಯಾವುದೇ ಸಂದರ್ಭಗಳಲ್ಲೂ ಮರೆಯಬಾರದು. ಮತ್ತು ಎಲ್ಲಿದ್ದರಲ್ಲಿ ರಾಜತ್ವ ಸಿದ್ಧಿವಲಯವನ್ನು ಸೃಷ್ಟಿಸಿಕೊಳ್ಳಬೇಕು ಎಂಬ ಕರ್ತವ್ಯಪ್ರಜ್ಞೆಯನ್ನು ರೋಮಶ ಮಹಾ ಮುನಿಯು ಧರ್ಮರಾಯನಲ್ಲಿ ತುಂಬುತ್ತಿದ್ದಾನೆ.

17. ಆದಡೆಲೆ ಮುನಿನಾಥ ನಳನೃಪ
ಮೇದಿನಿಯನುಳಿದವನಿಯಲಿ ತ
ಳೋದರಿಯನೆಂತಗಲಿದನು ತಾನಾರ ದೆಸೆಯಿಂದ
ಸಾಧಿಸಿದನವನಿಯನು ಧರೆಯೆಂ

ತಾದುದಾ ನಳನೃಪಗೆ ನೀವಿದ
ನಾದರಿಸಿ ಪೇಳೆನಲು ನಗುತಿಂತೆಂದನಾ ಮುನಿಪ

ಆದಡೆ + ಎಲೆ = ಆದರೆ ಎಲೈ; ಮುನಿನಾಥ = ಮುನಿಶ್ರೇಷ್ಠನೇ; ನಳನೃಪ = ನಳಮಹಾರಾಜನು; ಮೇದಿನಿಯನ್ + ಉಳಿದು + ಅವನಿಯಲಿ = ರಾಜ್ಯವನ್ನು ಬಿಟ್ಟು, ಈ ಭೂವಲಯದಲ್ಲಿ; ತಳೋದರಿಯನ್ + ಈ ನಡುಸಣ್ಣದ ಸುಂದರಿಯನ್ನು; ಎಂತು + ಅಗಲಿದನ್ = ಹೇಗೆ ತೊರೆದನು?; ತಾನು + ಯಾರ; ದೆಸೆಯಿಂದ = ಅವನು ಯಾರ ಸಹಾಯದಿಂದ; ಸಾಧಿಸಿದನ್ + ಅವನಿಯನು = ಪಡೆದುಕೊಂಡನು ಆ ರಾಜ್ಯವನ್ನು; ಎಂತು + ಆದುದು = ಮತ್ತೆ ಹೇಗೆ ದೊರಕಿತು; ಆ ನಳನೃಪ = ಆ ನಳಮಹಾರಾಜನಿಗೆ; ನೀವು + ಇದನು + ಆದರಿಸಿ = ನೀವು ಇದನ್ನು ಕೃಪೆಮಾಡಿ ಪ್ರೀತಿಯಿಂದ; ಪೇಳ್ + ಎನಲು = ಹೇಳಿ ಎನ್ನಲು; ನಗುತ + ಇಂತು + ಎಂದನ್ = ನಗುತ ಹೀಗೆ ಹೇಳಿದನು ಆ; ಮುನಿಪ = ಮುನಿಗಳಿಗೆ ಅಗ್ರಗಣ್ಯನಾದ ರೋಮಶ ಮಹಾಮುನಿ.

ಎಲೈ ಮುನಿಶ್ರೇಷ್ಠನೇ ಆ ನಳಮಹಾರಾಜನ ಕುರಿತು ಪ್ರಸ್ತಾಪಿಸಿದಿರಿ, ಅವನು ತನ್ನ ರಾಜ್ಯವನ್ನು ಕಳೆದುಕೊಂಡು, ಪತ್ನಿಯನ್ನೂ ಅಗಲಿದ್ದು ಏಕೆ? ಹೇಗೆ? ಯಾರಿಂದ ಅವನಿಗೆ ಈ ದುಃಸ್ಥಿತಿಯುಂಟಾಯಿತು? ಯಾರ ದೆಸೆಯಿಂದ ಮರಳಿ ತನ್ನ ರಾಜ್ಯವನ್ನು ಪಡೆದುಕೊಂಡ? ಅವನು ಅದನ್ನು ಮತ್ತೆ ಹೇಗೆ ರಕ್ಷಿಸಿದ? ಕೃಪೆಮಾಡಿ ತಾವು ಅದನ್ನು ಕುರಿತು ಹೇಳಬೇಕು ಎಂದು ಧರ್ಮರಾಯನು ವಿನಂತಿಸಲು ನಗುತ್ತ ಆ ಕುರಿತು ರೋಮಶನು ಹೇಳಲಾರಂಭಿಸಿದನು.

ಕೇಳುವುದು ಮತ್ತು ಹೇಳುವುದು – ಈ ರೀತಿಯ ಆಪ್ತ ಸಂವಾದಕ್ಕೆ ಭಾರತೀಯ ನೆಲ ಬಹಳ ಪ್ರಾಚೀನ ಕಾಲದಿಂದಲೂ ಆದ್ಯತೆ ನೀಡಿದೆ. ವಾಕ್ಪರಂಪರೆ ಬಹಳ ಕಾಲ ಈ ನೆಲದಲ್ಲಿ ಅವಿಚ್ಛಿನ್ನ ಪರಂಪರೆಯಾಗಿ ಹರಿದು ಬಂದದ್ದನ್ನು ಈ ಮೇಲಿನ ಪದ್ಯಗಳ ಸಂವಾದ ಸ್ವರೂಪ ಎತ್ತಿ ತೋರಿಸುತ್ತದೆ. ಕಥಾ ಪರಂಪರೆ ಮನೆಮನೆಗಳಲ್ಲಿ ಜನಪದ ಚಿಂತನೆಗಳನ್ನು ಜೀವಂತವಾಗಿಟ್ಟ ಕ್ರಮಕ್ಕೂ ಇದು ನಿದರ್ಶನವಾಗಿದೆ.

'ನೀವಿದನಾದರಿಸಿ ಪೇಳ್' ಎಂಬಲ್ಲಿ 'ನೀನಿದನಾದರಿಸಿ ಪೇಳ್' ಎಂದಾಗಬೇಕು. 'ನೀವು'– 'ಹೇಳು' ಎಂಬ ಬಹುವಚನ + ಏಕವಚನ ಪ್ರಯೋಗ ಸಾಧ್ಯವಿಲ್ಲ.

18. ಭೂತಳೇಂದ್ರರೊಳಧಿಕಬಲ ವಿ
ಖ್ಯಾತನಹ ನಳಚಕ್ರವರ್ತಿಯು
ಭೂತಳವ ಪಾಲಿಸಿದನಾತನ ವಿಮಲಚರಿತೆಯನು
ಸೂತಮುನಿ ಹೇಳಿದನು ಮೌನಿ
ವ್ರಾತದಲಿಯಾಗಸ್ತ್ಯಮುನಿ ಸಂ
ಪ್ರೀತಿಯಿಂದರುಹಿದನು ರಘುನಂದನನೊಳೀ ಕಥೆಯ

ಭೂತಳ + ಇಂದ್ರರೊಳ್ + ಅಧಿಕಬಲ = ಈ ಭೂಮಂಡಲದ ರಾಜಾಧಿರಾಜರುಗಳಲ್ಲೇ ಅತ್ಯಂತ ಪರಾಕ್ರಮಶಾಲಿ ಎಂದು; ವಿಖ್ಯಾತನ್ + ಅಹ = ವಿಖ್ಯಾತನಾದ; ನಳಚಕ್ರವರ್ತಿಯು = ನಳಚಕ್ರವರ್ತಿಯು; ಭೂತಳವ = ಭೂಮಂಡಲವನ್ನು; ಪಾಲಿಸಿದನ್ + ಆತನ = ರಕ್ಷಿಸಿ ಆಳಿದನು, ಅವನ; ವಿಮಲ = ಕಳಂಕವಿಲ್ಲದ; ಚರಿತೆಯನು = ಜೀವನದ ಕತೆಯನ್ನು; ಸೂತಮುನಿ ಹೇಳಿದನು = ಸೂತಮುನಿಯು ಹೇಳಿದನು; ಮೌನಿ + ವ್ರಾತದಲಿ + ಆ + ಅಗಸ್ತ್ಯಮುನಿ = ಮುನಿಸಮೂಹದಲ್ಲಿ ಆ ಅಗಸ್ತ್ಯ ಮುನಿಯು; ಸಂಪ್ರೀತಿಯಿಂದ + ಅರುಹಿದನು = ಅತ್ಯಂತ ಶ್ರದ್ಧೆಯಿಂದ ಹೇಳಿದನು; ರಘುನಂದನನೊಳ್ = ರಘುವಂಶದ ಕುಡಿಯಾದ ರಾಮನಿಗೆ; ಈ ಕಥೆಯ = ಈ ಕಥೆಯನ್ನು.

ನಳಚಕ್ರವರ್ತಿಯು ಈ ಭೂಮಂಡಲದ ರಾಜಾಧಿರಾಜರಲ್ಲೇ ಅಸೀಮ ಪರಾಕ್ರಮಶಾಲಿ ಎಂದು ಖ್ಯಾತನಾಮನಾಗಿದ್ದನು ಎನ್ನುತ್ತಾ ನಳಚರಿತ್ರೆಯು ಅದಾಗಲೇ ಜನಮಾನಸದಲ್ಲಿ ದಾಖಲಾಗಿದ್ದ ರೀತಿಯನ್ನು ರೋಮಶ ಮುನಿಯು ಧರ್ಮರಾಯನಿಗೆ ಪರಿಚಯಿಸುತ್ತಿದ್ದಾನೆ. ಈ ಹಿಂದೆಯೇ ಶುದ್ಧವಾದ, ಕಳಂಕವಿಲ್ಲದ ಇವನ ಕಥೆಯನ್ನು ಋಷಿ ಸಮೂಹದ ಎದುರು, ಸೂತಮುನಿಯು ಹೇಳಿದ್ದನು. ಆದನ್ನೇ ಅಗಸ್ತ್ಯಮುನಿಯು ರಘವಂಶದ ಕುಡಿಯಾದ ರಾಮನಿಗೆ ಹೇಳಿದನು.

ಒಬ್ಬರ ಬಾಯಿಂದ ಮತ್ತೊಬ್ಬರಿಗೆ ತಲುಪಿಸುವ ವಾಙ್ಮೂಲದ ತಂತ್ರ ಭಾರತೀಯ ನೆಲದ ಕಥಾವೈಶಿಷ್ಟ್ಯ. ಇವು ಬಿಡುವಿನ ಸಮಯವನ್ನು ಜನಪದರು, ಕಲಿತವರು, ರಾಜಾಧಿರಾಜರು, ಯಥೋಚಿತವಾಗಿ ಕಾಲ ಕಳೆಯುವುದಕ್ಕಷ್ಟೇ ಕಥನ ಗೊಂಡವಲ್ಲ. ಆದರೆ ಆ ಮೂಲಕ ಸಾಮಾಜಿಕ ಎಚ್ಚರ, ನೈತಿಕ ಪ್ರಜ್ಞೆಗಳನ್ನು ಮೈಗೂಡಿಸಲು ಅನುವಾಗುತ್ತಿದ್ದುವು. ಧಾರ್ಮಿಕ ಹಾಗೂ ತಾತ್ತ್ವಿಕ ಸಂವಾದಗಳನ್ನು ಹುಟ್ಟುಹಾಕಿ ಜ್ಞಾನವಾಹಕಗಳಾಗಿರುತ್ತಿದ್ದುವು. ಕೇಳ್ಮೆಗೂ ಗ್ರಹಿಕೆಗೂ ಜನಪದ ಕಥಾಪರಿಕ್ರಮವು ಒದಗಿಸಿದ ಪ್ರಾಮುಖ್ಯತೆಯನ್ನಿದು ದಾಖಲಿಸುತ್ತದೆ.

19. ವಸುಧೆಪತಿ ಕೇಳೀ ಚರಿತ್ರೆಯ
ನಿಷಧವಂತೆಂಬಾ ಮಹಾಪುರ
ವೆಸೆದುದಗಣಿತ ಗೋಪುರದ ಪ್ರಾಕಾರಶಿಖರದಲಿ
ಮಿಸುನಿ ರತ್ನಪ್ರಭೆಗಳಲಿ ರಂ
ಜಿಸುವ ದೇವಾಲಯಗಳಿರ್ದುದು
ವಸುಧೆಗಚ್ಚರಿಯೆನಿಸಿತಾ ಪುರವರಸ ಕೇಳೆಂದ

ವಸುಧೆಪತಿ = ಭೂಪತಿಯಾದ ರಾಜನೇ; ಕೇಳು + ಈ + ಚರಿತ್ರೆಯ = ನಡೆದದ್ದೇನು ಎಂಬುದರ ಕುರಿತು ನೀನು ಕೇಳು; ನಿಷಧವೆಂತೆಂಬಾ = ನಿಷಧ + ಎಂತೆಂಬ + ಆ ನಿಷಧ ಎಂದು ಹೆಸರಾದ; ಮಹಾಪುರವು + ಎಸೆದುದು + ಅಗಣಿತ –ಮಹಾನಗರವು ಶೋಭಿಸುತ್ತಿತ್ತು ಅಸಂಖ್ಯಾತ; ಗೋಪುರ = ದೇವಸ್ಥಾನದ ಮೇಲಿನ ಗುಮ್ಮಟ; ಪ್ರಾಕಾರ ಶಿಖರಗಳಿಂದ = ಕೋಟೆಯ ಆವಾರ ಮತ್ತು ಅದರ ಮೇಲಿನ ಗುಮ್ಮಟಗಳಿಂದ; ಮಿಸುನಿ = ಚಿನ್ನ; ರತ್ನಪ್ರಭೆಗಳಲ್ಲಿ = ರತ್ನಗಳ ಮಣಿಕಾಂತಿಗಳಿಂದ; ರಂಜಿಸುವ = ಮನಸ್ಸನ್ನು ಮುದಗೊಳಿಸುವ; ದೇವಾಲಯಗಳು + ಇರ್ದುವು = ದೇವಾಲಯಗಳು ಇದ್ದುವು; ವಸುಧೆಗೆ + ಅಚ್ಚರಿಯೆನಿಪ + ಆ = ಭೂಮಂಡಲದಲ್ಲಿಯೇ ಇದು ಆಶ್ಚರ್ಯಕರವಾದುದು ಎಂಬಂತಿರುವ; ಆ ಪುರವು + ಅರಸ = ಆ ಪಟ್ಟಣವು ಅರಸನೇ; ಕೇಳೆಂದ.

ವಸುಧಾಧಿಪತಿಯಾದ ಧರ್ಮರಾಯನೇ ಕೇಳು, ನಿಷಧ ಎಂಬುದೊಂದು ಮಹಾನಗರ. ಅದು ಅಸಂಖ್ಯಾತವಾದ ಗೋಪುರ ಪ್ರಾಕಾರಗಳಿಂದ ಶೋಭಾಯ

ಮಾನವಾಗಿತ್ತು. ಅಲ್ಲಿ ಚಿನ್ನ ಮತ್ತು ರತ್ನಪ್ರಭೆಗಳಿಂದ ರಚಿಸಲ್ಪಟ್ಟ ದೇವಾಲಯಗಳಿದ್ದುವು. ಇಡೀ ಭೂಮಂಡಲದಲ್ಲಿಯೇ ಅತಿ ಆಶ್ಚರ್ಯಕರವಾದುದು ಎಂಬಂತಿದ್ದ ತನ್ನ ಅಗಾಧ ಸೌಂದರ್ಯದಿಂದ ನಗರವು ಅಚ್ಚರಿಯ ತಾಣವೆನಿಸಿತ್ತು.

ಕನಕದಾಸರು ಪುರವರ್ಣನೆಯಲ್ಲಿ ಅತ್ಯಾಸಕ್ತರೆಂಬುದನ್ನು ಅವರ ಕಾವ್ಯಗಳು ನಿದರ್ಶಿಸಿವೆ. 'ಮೋಹನತರಂಗಿಣಿ' ಯಲ್ಲಿ ದ್ವಾರಕಾಪುರ ವರ್ಣನೆಯೂ ಹೀಗೇ ಗೋಪುರ, ಪ್ರಾಕಾರ, ದ್ವಾರ ವರ್ಣನೆಗಳಿಂದ ಆರಂಭವಾಗುತ್ತದೆ. ವಿಜಯನಗರದ ಕಾಲದಲ್ಲಿ ಪ್ರಸ್ತುತರಿದ್ದ ಕನಕದಾಸರಿಗೆ ರಾಜವೈಭವಗಳ ಪ್ರತ್ಯಕ್ಷಾನುಭವವಿದ್ದುದರ ಕುರಿತು ಈ ಸಂದರ್ಭಗಳು ನಿದರ್ಶಿಸುತ್ತವೆ.

20. ಮುರಿಮುರಿದ ಕೊತ್ತಳದ ಸಾಲಿನ
ಪರುಠವದ ಹುಲಿಮುಖದ ಬಾಗಿಲ
ಮಿರುಪ ಮಣಿವಜ್ರದ ಕವಾಟದ ಗಂಧವಟ್ಟಿಗೆಯ
ಉರುತರದ ವೇದಿಕೆಯ ಹೇಮದ
ಮೆರೆವ ಸೋಪಾನಗಳ ನೆಲೆಯು
ಪ್ಪರಿಗೆಗಳ ಮೇಲೆಸೆವ ಕಲಶದ ಕಾಂತಿ ರಂಜಿಸಿತು

ಮುರಿಮುರಿದ = ತಿರುವುಗಳನ್ನೊಳಗೊಂಡ; ಕೊತ್ತಲದ = ಸಾಲಾದ ಕೋಟೆಯ ಬುರುಜುಗಳೂ; ಪರುಠವದ = ವಿಶಾಲವಾದ; ಹುಲಿಮುಖದ ಬಾಗಿಲ = ಹುಲಿಮುಖವನ್ನು ಹೊಂದಿದ ಅಥವಾ ಕೆತ್ತಿದ ಬಾಗಿಲ; ಮಿರುಪ = ಹೊಳೆಯುವ; ಮಣಿವಜ್ರದ = ವಜ್ರದ ಮಣಿಗಳಿಂದ ಕೂಡಿದ; ಕವಾಟದ = ಬಾಗಿಲ; ಗಂಧವಟ್ಟಿಗೆಯ = ಗಂಧದ ಅಡ್ಡಪಟ್ಟಿಗಳನ್ನು ಹೊಂದಿದ; ಉರುತರದ = ಬಹಳ ಬೃಹತ್ತಾದ; ವೇದಿಕೆಯ = ಸಭಾಸ್ಥಾನದ ಎತ್ತರದ ಜಗುಲಿಯ; ಹೇಮದ = ಚಿನ್ನದ; ಮೆರೆವ ಸೋಪಾನಗಳ = ಹೊಳಪಿನಿಂದ ಶೋಭಾಯಮಾನವಾದ ಮೆಟ್ಟಿಲುಗಳ; ನೆಲೆಯುಪ್ಪರಿಗೆಗಳ = ಮೇಲುಪ್ಪರಿಗೆಗಳ; ಮೇಲೆ + ಎಸೆವ = ಮೇಲೆ ಬೆಳಗುವ; ಕಲಶದ ಕಾಂತಿ = ದೇವಾಲಯದ ಮೇಲಿನ ಗೋಪುರದ ಸೌಂದರ್ಯಗಳು; ರಂಜಿಸಿತು = ಮನಸ್ಸನ್ನು ಮುದಗೊಳಿಸುವಂತಿದ್ದುವು.

ತಿರುವು ತಿರುವುಗಳಿಂದ ಕೂಡಿದ ಕೋಟೆಯ ಬುರುಜಿನ ಸಾಲು ಗಳಿಂದಲೂ, ಹುಲಿಮುಖದ ವಿಶಾಲವಾದ ಬಾಗಿಲೂ, ಮಿರುಗುವ ವಜ್ರಖಚಿತ ಮಣಿಗಳಿಂದ ಕೂಡಿದ ಗಂಧಪಟ್ಟಿಕೆಯ ಬಾಗಿಲು, ಕದಗಳಿಂದಲೂ, ಬೃಹತ್ತಾದ ಸಭಾಸ್ಥಾನದ ಎತ್ತರದ ವೇದಿಕೆಯಿಂದಲೂ ಮೇಲುಪ್ಪರಿಗೆಗಳ ಮೇಲೆ ಕಾಂತಿಯುತವಾಗಿ ಬೆಳಗುವ ಗೋಪುರಗಳ ಕಳಸದ ಸೊಬಗಿನಿಂದಲೂ ನಿಷಧಪುರವು ಚಿತ್ತಾಪಹಾರಿಯಾಗಿತ್ತು.

ನಿಷಧಪುರದ ಕೋಟೆ ಕೊತ್ತಳಗಳ, ದೇವಾಲಯಗಳ ಸುಮನೋಹರ ದೃಶ್ಯವನ್ನು ಇಲ್ಲಿ ರೋಮಶಮುನಿ ವರ್ಣಿಸುತ್ತಿದ್ದಾನೆ. ‘ಮೋಹನ ತರಂಗಿಣಿ’ಯಲ್ಲೂ ಕನಕದಾಸರು ‘ಹುಲಿಮುಖದ್ವಾರ’ವನ್ನು ತಂದಿದ್ದಾರೆ. ರಾಜಾಡಂಬರದ ನಡುನಡುವೆ ಇಂತಹ ಜನಪದೀಯ ಚಿತ್ರಗಳನ್ನು ತಂದು ಅಪ್ತವಾಗಿಸುವ ಪ್ರಯತ್ನ ಕನಕದಾಸರ ಕಾವ್ಯಗಳಲ್ಲಿ ಹೇರಳವಾಗಿ ಕಂಡು ಬರುತ್ತದೆ.

21. ಮುಗಿಲ ತುಡುಕುವ ತೆನೆಗಳಾಳ್ವೇ
ರಿಗಳು ಪಾತಾಳಗಳ ಖಾತಗ
ಳಗಳು ಬಳಸಿದ ಕೋಟೆ ಸುತ್ತಾವರಿಸಿದುನ್ನತದ
ಗಗನವೀದಿಯ ತಾರಕೆಯವೊಲ್
ಸೊಗಸುತೋರುವ ಕನ್ನಡಿಯ ಸಾ
ಲುಗಳ ರತ್ನಪ್ರಭೆಗಳಲಿ ರಂಜಿಸಿದುದಾ ನಗರ

ಮುಗಿಲ ತುಡುಕುವ = ಆಕಾಶಕ್ಕೇ ಕೈಹಾಕುವಂತಿರುವ; ತೆನೆಗಳು = ಕೋಟೆಯ ಎತ್ತರದ ಶಿಖರಾಗ್ರಗಳು; ಆಳ್ವೇರಿಗಳು = ಕೋಟೆಯ ಸುತ್ತಲೂ ಇರುವ ಬೃಹತ್ತಾದ ಗೋಡೆಗಳು; ಪಾತಾಳಗಳ = ಅತ್ಯಂತ ಆಳವಾದ; ಖಾತಗಳ್ + ಅಗಳು = ದೊಡ್ಡ ಹೊಂಡಗಳು, ತಗ್ಗುಗಳು; ಬಳಸಿದ = ಸುತ್ತುವರೆದ; ಕೋಟೆ = ಪ್ರಾಕಾರ; ಸುತ್ತ + ಆವರಿಸಿದ + ಉನ್ನತದ = ಸುತ್ತ ಬಳಸಿ ಬಂದಿರುವ ಎತ್ತರದ; ಗಗನ ವೀದಿಯ = ಬಾನದಾರಿಯ; ತಾರಕೆಯವೊಲ್ = ನಕ್ಷತ್ರಗಳಂತೆ; ಸೊಗಸು ತೋರುವ = ಸುಂದರವಾಗಿ ಕಾಣುವ; ಕನ್ನಡಿಯ ಸಾಲುಗಳ = ಕನ್ನಡಿಯ

ಸಾಲುಗಳ; ರತ್ನಪ್ರಭೆಗಳಲಿ = ರತ್ನಮಣಿದೀಪಗಳ ಕಾಂತಿಗಳಿಂದ; ರಂಜಿಸಿದುದು + ಆ + ನಗರ = ಆ ನಗರವು ನಯನ ಮನೋಹರವಾಗಿತ್ತು.

ಮುಗಿಲಿಗೇ ಕೈ ಹಾಕುವಂತಿರುವ ಕೋಟೆಯ ಪ್ರಾಕಾರದ ಶಿಖರ ಗಳಿಂದಲೂ ಸುತ್ತಲೂ ಆಳವಾದ ಕಂದಕಗಳನ್ನು ಹೊಂದಿದ ಕೋಟೆಯ ಬೃಹತ್ತಾದ ಗೋಡೆಗಳಿಂದಲೂ, ಪಾತಾಳವನ್ನೇ ಕಾಣಿಸುವಂತಹ ದೊಡ್ಡ ದೊಡ್ಡ ಹೊಂಡ ಗಳಿಂದಲೂ, ಸುತ್ತಲೂ ಆವರಿಸಿಕೊಂಡಿರುವ ಬಾನದಾರಿಯ ತಾರೆಗಳಂತೆ ಮಿನುಗುತ್ತ ಸೊಗಸಾಗಿ ಕನ್ನಡಿ ಸಾಲುಗಳಂತಿದ್ದ ರತ್ನಮಣಿದೀಪ ಕಾಂತಿಗಳಿಂದ ಆ ನಗರವು ಸೊಗಸುತ್ತಿತ್ತು.

ಪ್ರಾಚೀನ ನಗರ ವಾಸ್ತುತಜ್ಞರು ಎಂತಹ ಸೌಂದರ್ಯ ಪ್ರಜ್ಞೆಯುಳ್ಳವ ರಾಗಿದ್ದರು ಎಂಬುದನ್ನಷ್ಟೇ ಅಲ್ಲದೆ, ರಾಜಾಡಳಿತವು ಸುಭದ್ರವಾಗಿರಬೇಕೆಂಬುದರ ಕಡೆಗೆ ಎಷ್ಟು ಗಂಭೀರವಾದ ಪ್ರಯತ್ನಗಳನ್ನು ಅವರ ನಗರಾಭಿವೃದ್ಧಿ ಚಿಂತನೆಗಳು ಹಮ್ಮಿಕೊಳ್ಳುತ್ತಿದ್ದುವು ಎಂಬುದಕ್ಕೆ ಈ ವೈಭವವು ನಿದರ್ಶನವಾಗಿದೆ.

22. ರವಿಶಶಿಯ ವೀದಿಗಳ ಹೇಮದ
ವಿವಿಧ ಮಣಿಭಿತ್ತಿಗಳ ಕಾಂತಿಯು
ದಿವವನಣೆದುದು ರತ್ನನಿಚಯದ ಭದ್ರಭವನಿಕೆಯ
ಯುವತಿಯರ ಸಂಗೀತ ವೀಣಾ
ರವದ ರಹಿಯಲಿ ಮನಕೆ ಸವಿದೋ
ರುವ ಮಹಾರಚನೆಯಲಿ ಮೆರೆದುದು ನಿಷಧವರನಗರ

ರವಿಶಶಿಯ = ಸೂರ್ಯ ಚಂದ್ರರ; ವೀದಿಗಳ = ಬೀದಿಗಳ; ಹೇಮದ = ಚಿನ್ನದ; ವಿವಿಧ ಮಣಿ ಭಿತ್ತಿಗಳ = ವಿಧವಿಧವಾದ ಮಣಿಮಯ ಅಲಂಕಾರಗಳಿಂದ ಕೂಡಿದ ಗೋಡೆಗಳ; ಕಾಂತಿಯು = ಪ್ರಭೆಯು; ದಿವವನ್ + ಅಣೆದುದು = ಸ್ವರ್ಗವನ್ನೂ ಮುಟ್ಟಿತು; ರತ್ನನಿಚಯದ = ರತ್ನರಾಶಿಯಿಂದ ಕೂಡಿದ; ಭದ್ರ = ಗಟ್ಟಿ ಮುಟ್ಟಾಗಿಯೂ ಮಂಗಳಕರವಾಗಿಯೂ ಇದ್ದ; ಭವನಿಕೆಯ = ಸಭಾಭವನಗಳಲ್ಲಿದ್ದ; ಯುವತಿಯರ = ತರುಣಿಯರ; ಸಂಗೀತ = ಸುಂದರವಾದ ಹಾಡುಗಾರಿಕೆಯೂ; ವೀಣಾರವದ = ವೀಣೆಯ ಮಂಜುಳ ನಾದದ; ರಹಿಯಲಿ =

ಸೊಗಸಿನಲಿ; ಮನಕೆ = ಮನಸ್ಸಿಗೆ; ಸವಿದೋರುವ = ಹಿತವನ್ನುಂಟುಮಾಡುವ; ಮಹಾರಚನೆಯಲಿ = ಬೃಹತ್ತಾಗಿ ವಿಶಾಲವಾಗಿ ರಚಿತವಾಗಿ; ಮೆರೆದುದು = ಶೋಭಿಸಿತು; ನಿಷಧವರನಗರ = ನಿಷಧವೆಂಬ ಶ್ರೇಷ್ಠವಾದ ನಗರ.

ಸೂರ್ಯಚಂದ್ರರು ಸಾಗುವ ಬೀದಿಗಳ ಇಕ್ಕೆಲಗಳಲ್ಲಿಯೂ ಇದ್ದ ಚಿನ್ನದ ವಿಧವಿಧವಾದ ಮಣಿಮಯ ಅಲಂಕಾರಗಳಿಂದ ರಚಿಸಿದ ಗೋಡೆಗಳ ಕಾಂತಿಯು, ಸ್ವರ್ಗವನ್ನೇ ಸ್ಪರ್ಶಿಸುತ್ತಿದ್ದುವು. ರತ್ನಗಳ ರಾಶಿಯಿಂದ ಕೂಡಿ ಗಟ್ಟಿ ಮುಟ್ಟಾಗಿಯೂ ಮಂಗಳಕರವಾಗಿಯೂ ಇದ್ದ ಭವ್ಯ ಸಭಾಂಗಣಗಳಲ್ಲಿ ತರುಣಿಯರ ಮನಮೋಹಕ ಸಂಗೀತದ ಮತ್ತು ವೀಣಾವಾದ್ಯಗಳ ಮಂಜುಳ ನಿನದದ ಸೊಗಸು ಮನಸ್ಸಿಗೆ ಹಿತಕರವಾದ ಅನುಭವವನ್ನುಂಟುಮಾಡುತ್ತಿತ್ತು. ಹೀಗೆ ಬೃಹತ್ತಾದ, ವಿಶಾಲವಾದ, ನಿಷಧನಗರವು ಶೋಭಿಸುತ್ತಿತ್ತು.

ಪದ್ಯಾರಂಭದಲ್ಲಿ ಬರುವ 'ರವಿ ಶಶಿಯ ವೀದಿಗಳ' ಎಂಬ ಪ್ರಯೋಗ ಗಮನಾರ್ಹವಾದುದು. ಸೂರ್ಯ ಚಂದ್ರರು ನಮ್ಮ ಜನಪದ ದಿನಚರಿಯ ಆಪ್ತರು. ಅವರಿಂದಲೇ ದಿನಮಾನಗಳ ಪ್ರಯಾಣಕ್ಕೊಂದು ಕಳೆ. ರಾಜಭೋಗದ ವೈಭವೋಪೇತ ಕೃತಕ ದೀಪಗಳಿಗಿಂತ ಕೋಟೆಯ ಭಿತ್ತಿಗಳಲ್ಲಿ ಪ್ರತಿಫಲಿಸುವ ಅವರ ಕಿರಣಗಳ ಕಾಂತಿ ಅನಂತಾನುಭೂತಿಯನ್ನುಂಟು ಮಾಡುವಂಥದ್ದು. ಮಾನವ ನಿರ್ಮಿತ ವೈಭವೋಪೇತ ದೃಶ್ಯಗಳಿಗಿಂತ ದೈವನಿರ್ಮಿತ ಬೆಡಗುಗಳ ಸಾದೃಶ್ಯ ವೈದೃಶ್ಯಗಳನ್ನು ಚಿತ್ರಿಸುವ ಆಶಯವಿದ್ದಂತೆ ತೋರುತ್ತದೆ.

23. ವಸುಧೆಯಮರರು ಕ್ಷತ್ರಿಯರು ರಂ
ಜಿಸುವ ವೈಶ್ಯ ಚತುರ್ಥರುನ್ನತ
ಕುಶಲವಿದ್ಯಾಧಿಕರು ಕವಿಗಳು ಮಲ್ಲಗಾಯಕರು
ಅಸಮರಥಿಕರು ಸಮರದಲಿ ಸಾ
ಹಸರು ಕರಿ ರಥ ತುರಗ ಪಾಯ್ದಳ
ವೆಸೆದುದಗಣಿತ ಚಾತುರಂಗದಿ ನಿಷಧವರನಗರ

ವಸುಧೆಯ + ಅಮರರು = ಭೂಲೋಕದ ಅಮರರೆನಿಸಿದ ಬ್ರಾಹ್ಮಣರು; ಕ್ಷತ್ರಿಯರು = ಕ್ಷಾತ್ರಗುಣದ ಯುದ್ಧದೀಕ್ಷೆಯನ್ನು ತೆಗೆದುಕೊಂಡವರು, ರಾಜರು;

ರಂಜಿಸುವ = ಶೋಭಿಸುವ; ವೈಶ್ಯ = ವಣಿಕರು; ಚತುರ್ಥರು = ಜಾತಿ ಶ್ರೇಣಿಯಲ್ಲಿ ನಾಲ್ಕನೆಯವರು, ಶೂದ್ರರು; ಉನ್ನತ = ಉನ್ನತ ಮಟ್ಟದ; ಕುಶಲ + ವಿದ್ಯಾ + ಅಧಿಕರು = ಕುಶಲ ವಿದ್ಯೆಗಳಿಂದ ಪ್ರಖ್ಯಾತರಾದವರು; ಕವಿಗಳು = ಕವಿತೆ ಮತ್ತು ಕಾವ್ಯ ರಚನಕಾರರು; ಮಲ್ಲಗಾಯಕರು = ಜಟ್ಟಿಗಳು ಮತ್ತು ಹಾಡುಗಾರರು; ಅಸಮ = ತಮಗೆ ಸರಿಸಮನಾರಿಲ್ಲದ; ರಥಿಕರು = ರಥದಲ್ಲಿ ಕುಳಿತು ಯುದ್ಧಮಾಡುವ ವೀರರು, ಸಾರಥಿಗಳು; ಸಮರದಲಿ = ಯುದ್ಧದಲ್ಲಿ; ಸಾಹಸರು = ವೀರರು; ಕರಿ = ಆನೆ; ರಥ = ಯುದ್ಧದಲ್ಲಿ ವೀರರು ಕುಳಿತು ಯುದ್ಧ ಮಾಡುವ ಬಂಡಿ; ತುರಗ = ಕುದುರೆ; ಪಾಯ್ + ದಳ = ಇತ್ತಿಂದತ್ತ ಹಾಯ್ದು ಯುದ್ಧ ಮಾಡುವ ಪಡೆ/ ಸೈನಿಕ ಪಡೆ, ಮುಂತಾದುವುಗಳಿಂದ ಕೂಡಿ; ಎಸೆದುದು = ಶೋಭಿಸಿತು; ಚಾತುರಂಗದಿ = ಚತುರಂಗದಳದಿಂದ; ಅಗಣಿತ = ಲೆಕ್ಕವಿಲ್ಲದಷ್ಟು; ನಿಷಧವರನಗರ = ನಿಷಧವೆಂಬ ಪ್ರಸಿದ್ಧ ನಗರ.

ಈ ಪದ್ಯದಲ್ಲಿ ಕವಿಯು ಪ್ರಸಿದ್ಧವಾದ ನಿಷಧನಗರದ ಜನ, ಅವರ ಸಾಮರ್ಥ್ಯ, ಅವರು ನಿರ್ವಹಿಸುತ್ತಿದ್ದ ಕರ್ತವ್ಯ ಮತ್ತು ಅವರ ಸಾಮಾಜಿಕ ಸ್ಥಾನಮಾನಗಳನ್ನು ಪರಿಚಯಿಸುತ್ತಿದ್ದಾನೆ. ನಿಷಧ ನಗರವು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ಆ ಕಾಲದ ಸಾಮಾಜಿಕ ಜಾತಿ ಶ್ರೇಣಿಯ ಸಮಸ್ತ ಜನರಿಂದಲೂ; ಕವಿಗಳು, ಜಟ್ಟಿಗಳು, ಗಾಯಕರು, ರಣವೀರರು, ಸಾರಥಿಗಳು ಮತ್ತು ಲೆಕ್ಕವಿಲ್ಲದಷ್ಟು ರಥ, ಆನೆ, ಕುದುರೆ ಮತ್ತು ಕಾಲಾಳುಗಳ ಬಲಗಳಿಂದಲೂ ಶೋಭಾಯಮಾನ ವಾಗಿತ್ತು.

ಬಹುತೇಕ ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಹೀಗೆ ಗಾಯಕರು, ವಣಿಕರು, ಜಟ್ಟಿಗಳು, ವೀರರು ಮುಂತಾದ ಸಾಮರ್ಥ್ಯವುಳ್ಳ ಜನರು ರಾಜರ ಆಸ್ಥಾನದಲ್ಲಿ, ಅವರ ನಾಡಿನಲ್ಲಿ ತುಂಬಿರುವಂತೆ ವರ್ಣಿಸಲಾಗುತ್ತದೆ. ಇದು ಒಂದು ರೀತಿ ರಾಜನ ಸಾಂಸ್ಕೃತಿಕ ಪ್ರತಿಷ್ಠೆಯ ದ್ಯೋತಕವಾಗಿದ್ದುದೂ ಹೌದು.

24. ಸಾಲ ಬಿಲ್ವ ಕಪಿತ್ಥ ಜಂಬು ತ
ಮಾಲ ದಾಡಿಮ ವಕುಳ ವಟ ಹಿಂ
ತಾಲ ಕ್ರಮುಕ ಕದಂಬ ಕುರವಕ ಕದಳಿ ಖರ್ಜೂರ

ತಾಲ ಚಂದನ ಪನಸ ವರತ
ಕ್ಕೋಲ ಕೇತಕಿ ಕುಟಜ ಸರಳದ
ಸಾಲತರುಗಳ ನಿಚಯದಿಂದುದ್ಯಾನ ರಂಜಿಸಿತು

ಸಾಲ = ಸಾಲವೃಕ್ಷ, ಸರ್ಜವೃಕ್ಷ; ಬಿಲ್ವ = ಬಿಲ್ವದ ಮರ; ಕಪಿತ್ಥ = ಬೇಲ ಅಥವಾ ಬೆಳುವಲದ ಮರ; ಜಂಬು = ಜಂಬುನೇರಿಳೆ; ತಮಾಲ = ಹೊಂಗೆ; ದಾಡಿಮ = ದಾಳಿಂಬೆ; ವಕುಳ = ಬಕುಳ ಪುಷ್ಪ, ನಾಗಕೇಸರ; ವಟವೃಕ್ಷ = ಆಲದಮರ; ಹಿಂತಾಲ = ತಾಳೆ ಹೂ ಅಥವಾ ಓಲೆಮರ; ಕ್ರಮುಕ = ಅಡಕೆ; ಕದಂಬ = ಈಚಲಮರ, ಕಡವಾಲಮರ; ಕುರವಕ = ಮದರಂಗಿ ಅಥವಾ ಕೆಂಪುಗೋರಂಟಿ; ಕದಳಿ = ಬಾಳೆ; ಖರ್ಜೂರ = ಖರ್ಜೂರ; ತಾಲ = ತಾಟಿ ಅಥವಾ ತಾಳೆಮರ; ಚಂದನ = ಗಂಧ; ಪನಸ = ಹಲಸು; ವರತಕ್ಕೋಲ = ಶ್ರೇಷ್ಠತಮ ಪರಿಮಳ ಬೀರುವ ಒಂದು ಮರ; ಕೇತಕಿ = ಕೇದಗೆ; ಕುಟಜ = ಕೊಡಸಿಗೆ ಹೂಮರ; ಹಾಗೂ ಸರಳದ = ಸಾಮಾನ್ಯವಾಗಿ ಕಾಣಸಿಗುವ ಇತರ; ಸಾಲತರುಗಳ = ಸಾಲ ವೃಕ್ಷಗಳ; ನಿಚಯದಿಂದ + ಉದ್ಯಾನ = ಸಮೂಹದಿಂದ ಆ ಉದ್ಯಾನವನವು; ರಂಜಿಸಿತು = ಮನೋಹರವಾಗಿತ್ತು.

ಆ ನಗರದಲ್ಲಿರುವ ಉದ್ಯಾನವನವಾದರೂ ಅತ್ಯಂತ ಶ್ರೀಮಂತವಾದ ಬಗೆ ಬಗೆಯ ಮರಗಳಿಂದ ತುಂಬಿತ್ತು. ಸಾಲವೃಕ್ಷಗಳು, ಬಿಲ್ವ, ಬೆಳುವಲ, ಜಂಬುನೇರಿಳೆ, ಹೊಂಗೆ, ದಾಳಿಂಬೆ, ರೆಂಜೆಹೂಮರ ಅಥವಾ ನಾಗಕೇಸರ ಮರ, ತಾಳೆ ಅಥವಾ ಓಲೆಮರ, ತಾಟಿಹಣ್ಣಿನ ಮರ, ಕೆಂಪುಗೋರಂಟಿ ಗಂಧ ಮತ್ತು ರಕ್ತ ಚಂದನ, ಹಲಸು ತಕ್ಕೋಲದಂತಹ ಸುಗಂಧ ವೃಕ್ಷಗಳು, ಕೇದಗೆ, ಕೊಡಸಿಗೆ, ಅಡಿಕೆ, ಈಚಲ, ಆಲ ಹಾಗೂ ಹಲವಾರು ಸಾಮಾನ್ಯವಾಗಿ ಕಾಣಸಿಗುವ ವೃಕ್ಷ ಸಮೂಹದಿಂದ ತುಂಬಿ ಸಂಪದ್ಭರಿತವಾಗಿ ಶೋಭಿಸಿತು.

ಕನ್ನಡ ನಾಡಿನ ಅಪಾರವಾದ ಮನಮೋಹಕ ವೃಕ್ಷಸಂಪತ್ತನ್ನು ಪಂಪನಿಂದಾದಿಯಾಗಿ ಬಹುತೇಕ ಎಲ್ಲ ಕವಿಗಳೂ ಹೆಮ್ಮೆಯಿಂದ ಹೀಗೆ ದಾಖಲಿಸಿರುವುದನ್ನು ನೋಡಬಹುದು.

ನಾಗಕೇಸರ = ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ನಿತ್ಯವೂ ಕಾಣಸಿಗುವ ರೆಂಜೆ ಹೂಮರ. ಇದನ್ನು ಬಯಲು ಸೀಮೆಯ ಕಡೆ 'ಪಗಡೆಕಾಯಿ ಮರ' ಎನ್ನುವುದಿದೆ.

25. ಭೂರಮಣ ಕೇಳಾ ಪುರಾಧಿಪ
ವೀರಸೇನನೃಪಾಲ ರಿಪುಸಂ
ಹಾರನಾತನ ತನಯ ನಳನೃಪನೆಂಬುದಭಿಧಾನ
ಭೂರಿವಿಕ್ರಮ ಪರಮಧರ್ಮವಿ
ಚಾರ ಶಶಿಕುಲಮೌಳಿ ಘನಗಂ
ಭೀರ ಪಾಲಿಸುತಿರ್ದ ಸಪ್ತದ್ವೀಪದವನಿಪರ

ಭೂರಮಣ ಕೇಳಾ = ಭೂಮಿಯನ್ನು ಪ್ರೀತಿಯಿಂದ ಪಾಲಿಸುವಂತಹ ಅರಸನೇ ಕೇಳು; ಆ ಪುರ + ಅಧಿಪ = ಆ ಪುರದ ಅಧಿಪತಿಯಾದ; ವೀರ ಸೇನಾ ನೃಪಾಲ = ವೀರಸೇನನೆಂಬ ಅರಸನು (ನೃ+ ಪಾಲ = ನರರನ್ನು ಪಾಲಿಸುವವನು); ರಿಪುಸಂಹಾರನ್ + ಆತನು ಶತ್ರುಗಳನ್ನು ಸಂಹರಿಸುವ ಪರಾಕ್ರಮಿ, ಅವನ; ತನಯ = ಮಗನೇ; ನಳನೃಪನೆಂಬುದು + ಅಭಿಧಾನ = ನಳನೃಪನೆಂದು ಹೆಸರಾದವನು; ಭೂರಿ = ಅತ್ಯಂತ; ವಿಕ್ರಮ = ಶೂರ; ಪರಮ ಧರ್ಮ ವಿಚಾರ = ಅತ್ಯಂತ ಶ್ರದ್ಧೆಯಿಂದ ಧರ್ಮಾದಿ ವಿಷಯಗಳನ್ನು ಕುರಿತು ತಿಳುವಳಿಕೆಯುಳ್ಳವನು; ಶಶಿಕುಲ = ಚಂದ್ರವಂಶಕ್ಕೆ; ಮೌಳಿ = ಕಿರೀಟ ಪ್ರಾಯನಾದವನು; ಘನಗಂಭೀರ = ಮಹಾ ಗಂಭೀರ ವ್ಯಕ್ತಿತ್ವವುಳ್ಳವನು; ಪಾಲಿಸುತಿರ್ದ = ತನ್ನ ಆಡಳಿತದಲ್ಲಿ; ಸಪ್ತದ್ವೀಪದ + ಅವನಿಪರ = ಸಪ್ತ ದ್ವೀಪಗಳನ್ನು ಆಳುತ್ತಿದ್ದ ರಾಜಾಧಿರಾಜರನ್ನು ಆಳುತ್ತಿದ್ದ.

ಭೂಪಾಲಕನಾದ ಧರ್ಮರಾಜನೇ ಕೇಳು, ನಿಷಧನಗರದ ಅರಸನೇ ವೀರಸೇನನೆಂಬುವನು. ಅವನ ಮಗನೇ ಶತ್ರುಸಂಹಾರ ವೀರ, ಮಹಾಪರಾಕ್ರಮಿ ಎಂದು ಪ್ರಖ್ಯಾತನಾದ ನಳಮಹಾರಾಜ. ಅತಿಗಂಭೀರನೂ, ಧರ್ಮ ವಿಚಾರನೂ ಆದ ಅವನೇ ಚಂದ್ರವಂಶಕ್ಕೆ ಕಿರೀಟ ಪ್ರಾಯನಾದವನು. ಸಪ್ತದ್ವೀಪಗಳನ್ನು ಆಳುತ್ತಿದ್ದ ಎಲ್ಲ ರಾಜರಿಗೆ ಅವನು ಅಧಿಪತಿಯಾಗಿದ್ದನು.

ಹಳಗನ್ನಡ ಪದರಚನೆ, ವಾಕ್ಯ ರಚನೆಗಳಿಗೂ, ಹೊಸಗನ್ನಡ ವಾಕ್ಯ ರಚನಾ ಕ್ರಮಕ್ಕೂ, ಪದಬಳಕೆಯ ಶೈಲಿಗೂ ಇರುವ ವ್ಯತ್ಯಾಸವನ್ನಿಲ್ಲಿ ಸ್ಪಷ್ಟವಾಗಿ ಗುರುತಿಸ

ಬಹುದು. ‘ಭೂರಮಣ ಕೇಳೌ’ ‘ಭೂರಮಣ ಕೇಳಾ’ ‘ಕೇಳು ಭೂರಮಣ’ ಇತ್ಯಾದಿ ಪ್ರಯೋಗಗಳ ನಾದಮಯತೆಗೂ, ಅರಸ ಕೇಳು, ರಮಣ ಕೇಳೆಂದ– ಮುಂತಾದ ಪ್ರಯೋಗಗಳಿಗೂ ಇರುವ ನಾದವ್ಯತ್ಯಾಸ ಗಮನಿಸ ಬಹುದಾಗಿದೆ. ಈ ಪದ್ಯಖಂಡ ಸಹಾ ಜೋರಾಗಿ ಓದಿದಾಗ ಹೊಮ್ಮಿಸುವ ರಕಾರ, ತಕಾರ ಮರುಬಳಕೆಗಳಿಂದ ಭಾಮಿನೀ ಷಟ್ಪದಿಯ ನಾದಮಯ ನಡೆಯತ್ತ ಗಮನ ಸೆಳೆಯುತ್ತವೆ.

26. ಶರಧಿ ಮೇರು ದಿಗಂತದವನೀ
ಶ್ವರರು ಕಪ್ಪವ ತೆರುವರಗಣಿತ
ಧುರವಿಜಯ ದೋರ್ಬಲರು ಮಣಿಮಯಮಕುಟವರ್ಧನರು
ಚರಣಕಾನತರಾಗಿ ನಳಭೂ
ವರನ ಭಜಿಸುತಲಿರ್ದರಮರೇ
ಶ್ವರನ ಸಭೆಯಂದದಲಿ ಮೆರೆದುದು ನೃಪತಿಯಾಸ್ಥಾನ

ಶರಧಿ = ಸಮುದ್ರ; ಮೇರು = ಕುಲಪರ್ವತಗಳಲ್ಲಿ ಒಂದೆನಿಸಿದ ಮೇರು; ದಿಕ್ + ಅಂತದ + ಅವನಿ + ಈಶ್ವರರು = ದಿಕ್ಕುಗಳನ್ನೇ ತಮ್ಮ ಸಾಮ್ರಾಜ್ಯದ ಮೇರೆಯನ್ನಾಗಿಸಿಕೊಂಡಿರುವ ದೊರೆಗಳು ಭೂಮಂಡಲಾಧಿಪತಿಗಳು; ಕಪ್ಪವ = ಚಕ್ರವರ್ತಿಗೆ ಸಾಮಂತರು ಕೊಡುವ ತೆರಿಗೆಯನ್ನು; ತರುವರ್ + ಅಗಣಿತ = ಲೆಕ್ಕವಿಲ್ಲದಷ್ಟು ಕೊಡುತ್ತಾರೆ; ಧುರ = ಯುದ್ಧಗಳನ್ನು; ವಿಜಯ = ಗೆದ್ದ; ದೋರ್+ ಬಲರ್ = ಭುಜಬಲಾಧಿಕ್ಯರು; ಮಣಿಮಯ = ರತ್ನಖಚಿತವಾದ; ಮಕುಟ = ಕಿರೀಟವನ್ನು; ವರ್ಧನರು = ಹೊಂದಿದ ಕೀರ್ತಿವಂತರು; ಚರಣಕೆ + ಆನತರಾಗಿ = ಚರಣಗಳಿಗೆ ನಮಿಸಿದವರಾಗಿ; ನಳ ಭೂವರನ = ನಳ ಚಕ್ರವರ್ತಿಯನ್ನು; ಭಜಿಸುತಲ್ + ಇರ್ದರ್ = ಹೊಗಳುತ್ತಿದ್ದರು; ಅಮರರು + ಈಶ್ವರನ ದೇವತೆಗಳ ದೊರೆಯಾದ ಇಂದ್ರನ; ಸಭೆಯ + ಅಂದದಲಿ = ಸಭೆಯ ರೀತಿಯಲ್ಲಿ; ಮೆರೆದುದು = ಶೋಭಿಸಿತು; ನೃ+ ಪತಿ + ಆಸ್ಥಾನ = ಭೂಮಿಗೊಡೆಯನಾದ ನಳನ ಸಭೆ.

ನಳಮಹಾರಾಜನ ಪರಾಕ್ರಮವನ್ನು ಕವಿ ಇಲ್ಲಿ ಅತಿಶಯವಾಗಿ ವರ್ಣಿಸುತ್ತಿದ್ದಾನೆ. ಭೂಮಿಯನ್ನು ಸುತ್ತುವರಿದ ಸಮುದ್ರ ಪರ್ಯಂತ ಹಾಗೂ ದಿಕ್ಕುಗಳನ್ನು ಸ್ಪರ್ಶಿಸುವ ಮೇರು ಪರ್ವತದೆತ್ತರಕ್ಕೂ ವ್ಯಾಪಿಸಿದ ಯಶಸ್ಸನ್ನು ಪಡೆದ ಭೂಮಂಡಲಾಧಿಪತಿಗಳು ನಳ ಮಹಾರಾಜನಿಗೆ ಸಾಮಂತರಾಗಿದ್ದು ಅವನಿಗೆ ನಮಸ್ಕರಿಸಿ ಲೆಕ್ಕವಿಲ್ಲದಷ್ಟು ಕಪ್ಪವನ್ನು ತೆರುತ್ತಿದ್ದರು. ಯುದ್ಧಗಳನ್ನು ಜಯಿಸಿದ ಭುಜಬಲಾಧಿಕ್ಯರು, ಮಣಿಮಯ ಕಿರೀಟ ವರ್ಧನರು ಅವನ ಚರಣಗಳಿಗೆ ತಮ್ಮ ಕಿರೀಟವನ್ನು ತಗ್ಗಿಸಿ ಸ್ತುತಿಸುತ್ತಿದ್ದರು. ನಳನ ಆಸ್ಥಾನ ಹೀಗೆ ಅಮರಾಧಿಪತಿಯಾದ ಇಂದ್ರನ ಸಭೆಗಿಂತ ವೈಭವೋಪೇತವಾಗಿ ಮೆರೆಯುತ್ತಿತ್ತು.

ರಾಜ-ರಾಣಿಯರ ಕಥೆಗಳಲ್ಲಿ ಅವರ ಶೌರ್ಯ, ಧೈರ್ಯ, ಸೌಂದರ್ಯ ಗಳನ್ನು ಅತಿಯಾಗಿ ವರ್ಣಿಸುವುದು ಸಾಮಾನ್ಯ. ಕಥೆಗೆ ರೋಚಕ ಅಂಶಗಳನ್ನು ಊಡಿಸುವ ಈ ಅತಿಶಯೋಕ್ತಿಯು ನೀರಸವಾಗಿಬಿಡಬಹುದಾದ ಕಥಾ ವಿವರಗಳಿಗೆ ಧ್ವನಿಪೂರ್ಣತೆಯನ್ನು ತುಂಬಬಲ್ಲ ಅಲಂಕಾರವಾಗಿರುತ್ತದೆ.

27. ಭೂಮಿಪತಿ ಕೇಳಿತ್ತಲುತ್ತರ
ಭೂಮಿಯಲಿ ಪಜ್ಜಳಿಸುತಿಹ ಸು
ತ್ರಾಮಪುರದಂತೆಸೆದುದಲ್ಲಿ ವಿದರ್ಭನಗರವದು
ರಾಮಣೀಯಕರಚನೆಯಲಿ ನವ
ಹೇಮಖಚಿತ ಸುರತ್ನ ಸೌಧ
ಸ್ತೋಮಗಳ ಸಾಲಿನಲಿ ರಂಜಿಸುತಿರ್ದುದಾ ನಗರ

ಭೂಮಿಪತಿ = ಭೂಮಂಡಲಕ್ಕೆ ಒಡೆಯನೇ; ಕೇಳ್ + ಇತ್ತಲ್ + ಉತ್ತರ + ಭೂಮಿಯಲಿ = ಅಲಿಸು; ಈ ಕಡೆ ಉತ್ತರ ದಿಕ್ಕಿನಲ್ಲಿರುವ ಭೂಭಾಗದಲ್ಲಿ; ಪಜ್ಜಳಿಸುತಿಹ = ಪ್ರಜ್ವಲಿಸುತ್ತಿರುವ; ಸುತ್ರಾಮ ಪುರದಂತೆ + ಎಸೆದುದು + ಅಲ್ಲಿ = ಇಂದ್ರನ ನಗರವಾದ ಅಮರಾವತಿಯಂತೆ ಶೋಭಿಸಿತು ಅಲ್ಲಿ; ವಿದರ್ಭನಗರವು ಅದು = ವಿದರ್ಭ ನಗರವಿತ್ತು. ಅದು; ರಾಮಣೀಯಕ = ರಮಣೀಯವಾದ ರಚನೆಯಲ್ಲಿ; ನವಹೇಮಖಚಿತ = ಹೊಸತಾಗಿ ಮಿರುಗುವ ಚಿನ್ನದಿಂದ ಕೂಡಿದ;

ಸುರತ್ನಸೌಧಸ್ತೋಮಗಳ = ರತ್ನ ಮಣಿಮಯ ಭವನಗಳ ಸಾಲಿನಿಂದ; ರಂಜಿಸು ತಿರ್ದುದಾ = ರಂಜಿಸುತ್ತಿತ್ತು; ಆ ನಗರ = ಆ ವಿದರ್ಭನಗರ.

ಭೂಮಂಡಲಾಧಿಪತಿಯಾದ ಅರಸನೇ ಕೇಳು, ಇತ್ತ ಉತ್ತರ ದಿಕ್ಕಿನಲ್ಲಿ ಇಂದ್ರನ ಅಮರಾವತಿಯಂತೆ ಶೋಭಿಸುತ್ತಿದ್ದ ವಿದರ್ಭನಗರವಿತ್ತು. ರಮಣೀಯ ವಾದ ಆಲಂಕಾರಿಕ ಕ್ರಮದಲ್ಲಿ ಕಟ್ಟಿದ ರಚನೆಯಿಂದಲೂ, ರತ್ನಖಚಿತವಾದ ಹೇಮಮಯ ಮಹಾಭವನಗಳ ಸಾಲಿನಿಂದಲೂ ಅದು ಶೋಭಿಸುತ್ತಿತ್ತು.

ಇಲ್ಲಿ 'ಉತ್ತರಭೂಮಿ' ಎಂಬುದನ್ನು 'ಉತ್ತರ ಭಾಗದ ಭೂಮಿ' ಎಂಬು ದಕ್ಕೆ ಬದಲಾಗಿ 'ಉತ್ತರದಿಕ್ಕು' ಎಂದು ಅರ್ಥೈಸಬೇಕು. ಇಲ್ಲಿ 'ಭೂಮಿಯು' ದಿಕ್ಕನ್ನು ಸೂಚಿಸುತ್ತದೆ.

28. ಅಲ್ಲಿಗಧಿಪತಿ ಭೀಮನೃಪ ಗುಣ
ದಲ್ಲಿ ನಯದಲಿ ವೀರ್ಯವಿತರಣ
ದಲ್ಲಿ ಚಾತುರ್ಯದಲಿ ಸೌಭಾಗ್ಯದಲಿ ಧೈರ್ಯದಲಿ
ಬಲ್ಲಿದನು ತಾನಾಗಿ ನಿಜಸುತ
ರಿಲ್ಲವೆಂದುಮ್ಮಳಿಸುತಿರೆ ಮನ
ದಲ್ಲಿಗಾಕ್ಷಣ ಬಂದನಾ ದಮನಾಖ್ಯಮುನಿವರನು

ಅಲ್ಲಿಗೆ + ಅಧಿಪತಿ = ಆ ವಿದರ್ಭ ನಗರಕ್ಕೆ ರಾಜನಾದವನು; ಭೀಮನೃಪ = ಭೀಮನೆಂಬುವನು; ಗುಣದಲ್ಲಿ = ಸ್ವಭಾವದಲ್ಲಿ; ನಯದಲ್ಲಿ = ನಡವಳಿಕೆಯಲ್ಲಿಯ ವಿನಯ, ಸೌಜನ್ಯಗಳಲ್ಲಿ; ವೀರ್ಯ ವಿತರಣದಲ್ಲಿ = ಶೌರ್ಯ ಪ್ರದರ್ಶನದಲ್ಲಿ; ಸೌಭಾಗ್ಯದಲಿ = ಸಂಪತ್ತಿನಲ್ಲಿ; ಧೈರ್ಯದಲಿ = ಎದೆಗಾರಿಕೆಯಲ್ಲಿ; ಬಲ್ಲಿದನು ತಾನಾಗಿ = ತಾನು ಚತುರನಾಗಿದ್ದನು; ನಿಜಸುತರಿಲ್ಲವೆಂದು + ಉಮ್ಮಳಿಸುತ್ತೆ = ತನಗೆ ಸಂತಾನವಿಲ್ಲವೆಂದು ದುಃಖದಲ್ಲಿರುವಾಗ; ಮನದಲ್ಲಿ = ಮನಸ್ಸಿನೊಳ ಗೊಳಗೇ; ಅಲ್ಲಿಗಾಕ್ಷಣ = ಅಲ್ಲಿಗೆ ಅಂತಹ ಸಮಯದಲ್ಲಿ; ಬಂದನಾ ದಮನಾಖ್ಯ = ಬಂದನು ದಮನಾಖ್ಯನೆಂಬ; ಮುನಿವರನು = ಮುನಿಶ್ರೇಷ್ಠನು.

ಭೀಮನೃಪನೆಂಬುವನು ಆ ವಿದರ್ಭ ನಗರದ ಅಧಿಪತಿಯಾಗಿದ್ದನು. ಅವನ ಗುಣ, ವಿನಯ, ಶೌರ್ಯ, ಸೌಭಾಗ್ಯ, ಧೈರ್ಯಾದಿಗಳಲ್ಲಿ ಅತ್ಯಂತ

ಉತ್ತಮನೆನಿಸಿದ್ದನು. ತನಗೆ ಸಂತಾನವಿಲ್ಲವೆಂಬ ದುಃಖದಲ್ಲಿರುವಾಗ್ಗೆ, ಅವನಲ್ಲಿಗೆ ದಮನಾಖ್ಯನೆಂಬ ಮುನಿಶ್ರೇಷ್ಠನು ಆಗಮಿಸಿದನು.

29. ಬಂದ ಮುನಿಗವನಿಪತಿ ವಂದಿಸಿ
ನಿಂದು ಕರಗಳ ಮುಗಿದು ವಿನಯದೊ
ಳೆಂದ ಸುತಸಂತಾನವಿಲ್ಲದ ಸಿರಿಯದೇಕೆಂದು
ನೊಂದು ನುಡಿಯಲು ಸುತರ ಪಡೆಯದ
ತಂದೆಗಿದು ಸಂತಾಪವಲ್ಲವೆ
ಎಂದು ಮುನಿ ಕರುಣದಲಿ ಸಂತೈಸಿದನು ಜನಪತಿಯ

ಬಂದ = ತನ್ನಲ್ಲಿಗೆ ಆಗಮಿಸಿದ; ಮುನಿಗೆ + ಅವನಿಪತಿ, ಮುನಿಗೆ ಭೂ ಮಂಡಲಾಧಿಪತಿಯಾದ ರಾಜನು; ವಂದಿಸಿ = ನಮಸ್ಕರಿಸಿ; ನಿಂದು = ಎದ್ದು ಬಂದು ಆಹ್ವಾನಿಸಿ; ಕರಗಳ ಮುಗಿದು = ಕೈ ಮುಗಿದು; ವಿನಯದೊಳ್ + ಎಂದ = ವಿನಯಪೂರ್ವಕವಾಗಿ ಹೇಳಿದನು; ಸುತಸಂತಾನವಿಲ್ಲದ = ಗಂಡು ಮಕ್ಕಳಿಲ್ಲದ; ಸಿರಿಯದೇಕೆಂದು = ಸಿರಿ + ಐಶ್ವರ್ಯ ಭೋಗಗಳು ಏನಿದ್ದು ಪ್ರಯೋಜನ ಎಂದು; ನೊಂದು ನುಡಿಯಲು = ದುಃಖದಿಂದ ಹೇಳಿಕೊಳ್ಳಲು; ಸುತರ ಪಡೆಯದ = ಗಂಡು ಮಕ್ಕಳಿಲ್ಲದ; ತಂದೆಗಿದು = ತಂದೆಗೆ ಇದು; ಸಂತಾಪವಲ್ಲವೆ = ಬೇಸರದ ಸಂಗತಿಯಲ್ಲವೆ; ಎಂದು = ಎಂಬುದಾಗಿ; ಮುನಿ = ಆ ಮುನಿಯು; ಕರುಣದಲಿ = ಮರುಕ ತುಂಬಿದ ಧ್ವನಿಯಲ್ಲಿ; ಸಂತೈಸಿದನು = ಸಮಾಧಾನಿಸಿದನು; ಜನಪತಿಯ = ಜನಾಧಿಪತಿಯಾದ ರಾಜನನ್ನು.

ತನ್ನ ಆಸ್ಥಾನಕ್ಕೆ ಬಂದ ಮುನಿಯನ್ನು ಆ ವಿದರ್ಭ ನಗರಾಧಿಪತಿಯಾದ ರಾಜನು ಎದ್ದು ಬಂದು ಕಾಲಿಗೆ ನಮಸ್ಕರಿಸುತ್ತ ಕೈಮುಗಿದು ಸ್ವಾಗತಿಸಿ ತನಗೆ ಮಕ್ಕಳಿಲ್ಲದ ಕುರಿತು ಇರುವ ದುಃಖವನ್ನು ಹೇಳಿಕೊಳ್ಳುತ್ತ, ಮಕ್ಕಳಿಲ್ಲದ ಮೇಲೆ ಯಾವ ಸಿರಿಸಂಪತ್ತಿನಿಂದ ಏನು ಪ್ರಯೋಜನ ಎಂದು ಸಂತಾಪಿಸಿದನು. ಅದಕ್ಕೆ ಸಮ್ಮತಿಸುತ್ತ ಆ ಮುನಿ ಕರುಣೆ ತುಂಬಿದ ಮಾತುಗಳಿಂದ ಆ ಜನಾಧಿಪತಿಯನ್ನು ಸಂತೈಸಿದನು.

'ಸುತಸಂತಾನವಿಲ್ಲದ' 'ಸುತರ ಪಡೆಯದ' – ಎಂಬ ಪ್ರಯೋಗಗಳನ್ನು ಈ ಸಂದರ್ಭದಲ್ಲಿ 'ಮಕ್ಕಳಿಲ್ಲದ' ಎಂದಷ್ಟೇ ಗ್ರಹಿಸಬೇಕು. 'ಅಪುತ್ರಸ್ಯ ಗತಿರ್ನಾಸ್ತಿ' ಎಂಬಂತೆ ಎಂದರೆ, 'ಗಂಡುಮಕ್ಕಳಿಲ್ಲದವರಿಗೆ ಪರಲೋಕ ಪ್ರಾಪ್ತಿಯಿಲ್ಲ' ಎಂಬ ಪ್ರಾಚೀನ ಸಮಾಜದ ನಂಬಿಕೆಗಿಂತ ಭಿನ್ನವಾಗಿ ಕನಕರು ಚಿಂತಿಸಿದ್ದಾರೆ.

30. ಯೋಗದೃಷ್ಟಿಯೊಳರಿದು ಮುನಿವರ
ನಾಗ ನೃಪನೊಡನೆಂದ ಪುತ್ರನ
ಯಾಗವನು ಮಾಡರಸ ತಪ್ಪದು ಪುತ್ರಲಾಭವೆನೆ
ಆ ಗರುವ ಮುನಿಮಂತ್ರದಿಂದ ಸ
ರಾಗದಲಿ ಶುಭದಿನ ಸುಲಗ್ನದಿ
ಯಾಗವನು ಪೂರೈಸಿದನು ಸುರನರರು ತಣಿವಂತೆ

ಯೋಗದೃಷ್ಟಿಯೊಳ್ + ಅರಿದು = ಯೋಗದೃಷ್ಟಿಯಿಂದ ರಾಜನ ಬದುಕಿನ ಭವಿಷ್ಯದ ಫಲಾಫಲಗಳನ್ನರಿತು; ಮುನಿವರನು + ಆಗ = ಆ ಮುನಿ ಶ್ರೇಷ್ಠನು; ನೃಪನೊಡನೆ + ಎಂದ = ನೃಪನೊಂದಿಗೆ ಹೀಗೆ ಹೇಳುತ್ತಾನೆ; ಪುತ್ರನ ಯಾಗವನು + ಮಾಡು + ಅರಸ = ಪುತ್ರಪ್ರಾಪ್ತಿಯಾಗುವಂತಹ ಯಜ್ಞವನ್ನು ಮಾಡು ಅರಸನೇ; ತಪ್ಪದು ಪುತ್ರ ಲಾಭ + ಎನೆ = ಪುತ್ರಪ್ರಾಪ್ತಿಯಾಗುತ್ತದೆ ಇದರಲ್ಲಿ ಸುಳ್ಳಿಲ್ಲ ಎಂದು ಹೇಳಲು; ಆ ಗರುವ ಮುನಿ ಮಂತ್ರದಿಂದ = ಆ ಧೀರನಾದ ರಾಜನು ಮುನಿಮಂತ್ರಕ್ಕೆ ಅನುಗುಣವಾಗಿ; ಸ + ರಾಗದಲಿ = ಅತ್ಯಂತ ಶ್ರದ್ಧೆಯಿಂದ ನಿಷ್ಠಾಪೂರ್ವಕವಾಗಿ; ಶುಭದಿನ = ಒಂದು ಒಳ್ಳೆಯ ದಿನ; ಸುಲಗ್ನದಿ = ಶುಭ ಮುಹೂರ್ತಗಳಿಗನುಗುಣವಾಗಿ; ಯಾಗವನು = ಯಜ್ಞವನ್ನು; ಪೂರೈಸಿದನು = ನೆರವೇರಿಸಿದನು; ಸುರನರರು = ದೇವಾಧಿದೇವತೆಗಳೂ; ಮಾನವ ಸಮಸ್ತರೂ; ತಣಿವಂತೆ = ಮನಸ್ಸಂತೋಷದಿಂದ ತೃಪ್ತರಾಗುವಂತೆ.

ರಾಜನ ಭವಿಷ್ಯದ ಫಲಾಫಲಗಳನ್ನು ತನ್ನ ಯೋಗದೃಷ್ಟಿಯಿಂದ ಅರಿತುಕೊಂಡ ದಮನಾಖ್ಯಮುನಿಯು, ಪುತ್ರಸಂತಾನ ಪ್ರಾಪ್ತಿಯಾಗುವಂತಹ ಯಜ್ಞವನ್ನು ಮಾಡಬೇಕೆಂದೂ ಅದರಿಂದ ಅವನ ಅಪೇಕ್ಷೆ ಕೈಗೂಡುವುದೆಂದೂ ಅರಸನಿಗೆ ಸೂಚಿಸುತ್ತಾನೆ. ಅದರಂತೆ ಅರಸನಾದ ಭೀಮನು ಅತ್ಯಂತ ನಿಷ್ಠೆಯಿಂದ

ಶುಭದಿನ ಶುಭಮುಹೂರ್ತಗಳಿಗನುಗುಣವಾಗಿ ದೇವಮಾನವರೆಲ್ಲ ತೃಪ್ತರಾಗುವಂತೆ ಯಶಸ್ವಿಯಾಗಿ ಯಜ್ಞವನ್ನು ನೆರವೇರಿಸಿದನು.

ಇಲ್ಲಿ ಪ್ರಯೋಗಗೊಂಡಿರುವ 'ಆ ಗರುವ' ಪದವನ್ನು ಅತ್ಯಂತ ಚಾತುರ್ಯಪೂರ್ಣವಾಗಿ ಬಳಸಲಾಗಿದೆ. ಅದು ಒಂದೇ ವೇಳೆ ಅರಸನಿಗೂ, ಮುನಿಗೂ ಅನ್ವಯವಾಗುವಂತಿದೆ. 'ಆ ಗರುವ ಮುನಿ ಮಂತ್ರದಿಂದ' ಎಂದು ಅನ್ವಯಿಸಿದಲ್ಲಿ 'ಆ ಶ್ರೇಷ್ಠನಾದ ಮುನಿಯು ಮೌಲ್ಯವತ್ತಾದ ಮಂತ್ರದಿಂದ' ಎಂಬ ಅರ್ಥ ಹೊಮ್ಮುತ್ತದೆ. ಅಥವಾ 'ಆ ಗರುವ' ಎಂಬುದನ್ನು ಅರಸನಿಗೆ ಅನ್ವಯಿಸಿದರೆ 'ಆ ಬಲಶಾಲಿಯಾದ, ಸಮರ್ಥನಾದ, ಶೂರನಾದ ರಾಜನು' ಎಂಬರ್ಥ ಹೊಮ್ಮುತ್ತದೆ.

ಎರಡನೆಯದಾಗಿ, ಇಲ್ಲಿ ಪ್ರಯೋಗಗೊಂಡಿರುವ 'ಪುತ್ರಲಾಭ' 'ಪುತ್ರಯಾಗ' ಎಂಬ ಪದಗುಚ್ಛಗಳನ್ನು ಪುಲ್ಲಿಂಗ ರೂಪವಾಗಿ ಗ್ರಹಿಸದೆ, 'ಮಕ್ಕಳ ಲಾಭ, ಮಕ್ಕಳಿಗಾಗಿ ಯಾಗ' ಎಂದೇ ಅರ್ಥೈಸಬೇಕು. ದಿವ್ಯದೃಷ್ಟಿಯಿರುವ ಮುನಿಗೆ ರಾಜನ ಫಲಾಫಲಗಳು ತಿಳಿದಿರುವುದೇ ಆಗಿರುವುದರಿಂದ ಪುತ್ರಲಾಭವು ದಮಯಂತಿಯಾಗಿ ಸ್ತ್ರೀಲಿಂಗ ರೂಪದಲ್ಲೇ ಇರುತ್ತದೆಯೆಂಬುದನ್ನು ಗ್ರಹಿಸಿದೆ. ಹಾಗಾಗಿ ಸಂದರ್ಭಕ್ಕೆ ತಕ್ಕಂತೆ ಕಾವ್ಯಗಳಲ್ಲಿ ಪದಗಳ ಅರ್ಥಗ್ರಹಿಕೆ ಭಿನ್ನವಾಗುತ್ತದೆ.

31. ಅರಸ ಕೇಳಾ ಯಾಗಸಮನಂ
ತರದೊಳಾ ಮುನಿಮುಖ್ಯರನು ಸ
ತ್ಕರಿಸಿ ಕಳುಹಿದನವರವರನುಚಿತೋಪಚಾರದಲಿ
ತರುಣಿಗಾದುದು ಗರ್ಭ ಮಂಗಳ
ಕರ ಸುಲಗ್ನ ಸುತಾರೆಯಲಿ ನೃಪ
ನರಸಿ ಪಡೆದಳು ತನುಜೆಯನು ಲೋಕೈಕಸುಂದರಿಯ

ಅರಸ + ಕೇಳ್ + ಆ = ಅರಸನೇ ಕೇಳು; ಆ ಯಾಗ ಸಮನಂತರದೊಳಾ = ಆ ಯಾಗಗಳು ನೆರವೇರಿದ ನಂತರದಲ್ಲಿ; ಆ ಮುನಿಮುಖ್ಯರನು = ಆ ಮುನಿಗಳ ಸಮೂಹದಲ್ಲಿ ಶ್ರೇಷ್ಠನಾದಂತಹ ದಮನಾಖ್ಯರನ್ನು; ಸತ್ಕರಿಸಿ = ಗೌರವಪೂರ್ವಕವಾಗಿ ಉಪಚರಿಸಿ; ಕಳುಹಿದನ್ + ಅವರವರನು + ಉಚಿತ +

ಉಪಚಾರದಲಿ = ಅವರೊಬ್ಬೊಬ್ಬರನ್ನೂ ಅವರವರ ಯೋಗ್ಯತೆಗೆ ತಕ್ಕಂತೆ ಗೌರವಿಸಿ ಕಳುಹಿಕೊಟ್ಟನು; ತರುಣಿಗಾದುದು = ಆ ಭೀಮನೃಪನ ಹೆಂಡತಿಗೆ ಆಯಿತು; ಗರ್ಭ = ಸಂತಾನಪ್ರಾಪ್ತಿ; ಮಂಗಳಕರ = ಶುಭಪ್ರದವಾದ; ಸುಲಗ್ನ = ಒಳ್ಳೆಯ ಮುಹೂರ್ತದಲ್ಲಿ; ಸುತಾರೆಯಲಿ = ಒಳ್ಳೆಯ ನಕ್ಷತ್ರದಲ್ಲಿ; ನೃಪನರಸಿ = ಭೀಮ ನೃಪನ ಮಹಾರಾಣಿ; ತನುಜೆಯನು = ಮಗಳನ್ನು; ಲೋಕ + ಏಕ + ಸುಂದರಿಯ = ಈ ಲೋಕದಲ್ಲಿ ಅವಳಂತಹ ಸುಂದರಿ ಮತ್ತೆ ಯಾರೂ ಇಲ್ಲ ಎಂಬಂತಹ.

ಅರಸನೇ ಕೇಳು, ಆ ಯಜ್ಞವು ನೆರವೇರಿದ ಬಳಿಕ ಭೀಮನೃಪನು ಆ ಮುನಿಮುಖ್ಯರನ್ನು ಅವರವರಿಗೆ ತಕ್ಕ ಯೋಗ್ಯತಾನುಸಾರವಾಗಿ ಉಚಿತ ಉಪಚಾರಗಳಿಂದ ಸತ್ಕರಿಸಿ ಬೀಳ್ಕೊಟ್ಟನು. ತದನಂತರ ಅವನರಸಿಯು ಗರ್ಭ ಧರಿಸಿದಳು. ಮುಂದೆ ಒಂದು ಮಂಗಳಕರವಾದ ದಿನದಲ್ಲಿ, ಶುಭಲಗ್ನದಲ್ಲಿ ಶುಭನಕ್ಷತ್ರದಲ್ಲಿ ಒಬ್ಬ ಲೋಕೈಕ ಸುಂದರಿಯಾದ ಮಗಳನ್ನು ಪಡೆದಳು.

32. ಅಮರದುಂದುಭಿ ಮೊಳಗಲಿಳೆ ಸಂ
ಭ್ರಮಿಸೆ ಪುರಜನ ನಲಿಯೆ ನೃಪನಾ
ಸಮಯದಲಿ ದಮನಾಖ್ಯಮುನಿಗಭಿನಮಿಸಿ ನಿಜಸುತೆಗೆ
ವಿಮಲನಾಮವ ಪಾಲಿಸೆನಲಾ
ಕಮಲಮುಖಿ ದಮಯಂತಿಯೆಂದು
ತ್ತಮದ ಪೆಸರೆಂದರುಹಿ ಮುನಿ ಹೊರವಂಟನಾಶ್ರಮಕೆ

ಅಮರ ದುಂದುಭಿ = ದೇವವಾದ್ಯಗಳು; ಮೊಳಗಲು + ಇಳೆ = ಆರ್ಭಟಿಸಲು ಭೂಮಿಯು; ಸಂಭ್ರಮಿಸೆ = ಹರ್ಷಗೊಂಡು ಸಂಭ್ರಮಿಸಲು; ಪುರಜನ = ಆ ಪಟ್ಟಣದ ಪ್ರಜೆಗಳು; ನಲಿಯೆ = ಸಂತೋಷದಿಂದ ನಲಿದಾಡಲು; ನೃಪನ್ + ಆ + ಸಮಯದಲ್ಲಿ = ಮಹಾರಾಜನು ಆ ಸಮಯದಲ್ಲಿ; ದಮನಾಖ್ಯ ಮುನಿಗೆ + ಅಭಿನಮಿಸಿ = ದಮನಾಖ್ಯ ಮುನಿಗಳನ್ನು ಗೌರವಪೂರ್ವಕವಾಗಿ ವಂದಿಸಿ; ನಿಜಸುತೆಗೆ = ತನ್ನ ಮಗಳಿಗೆ; ವಿಮಲನಾಮವ = ಒಂದು ಶುಭಕರವಾದ ಹೆಸರನ್ನು; ಪಾಲಿಸಿ + ಯೆನಲು = ಕರುಣಿಸಿರಿ ಎಂದು ಕೇಳಲು; ಕಮಲಮುಖಿ =

ಕಮಲದಂತೆ ಸುಂದರವದನ ಉಳ್ಳವಳಾದುದರಿಂದ; ದಮಯಂತಿಯೆಂದು = ದಮಯಂತಿ ಎಂದು; ಉತ್ತಮದ = ಶ್ರೇಷ್ಠವಾದ; ಹೆಸರೆಂದು + ಅರುಹಿ = ಹೆಸರನ್ನು ಹೇಳಿ; ಮುನಿಪ = ಆ ಮುನಿಯು ಹೊರವಂಟನ್ = ಹೊರಟನು; ಆಶ್ರಮಕೆ = ತನ್ನ ಆಶ್ರಮಕ್ಕೆ.

ದೇವವಾದ್ಯಗಳು ಮೊಳಗುತ್ತಿರಲು, ಭೂಮಂಡಲವೇ ಸಂಭ್ರಮಿಸುತ್ತಿರಲು ಪುರಜನರು ಸಂತೋಷ ಸಂಭ್ರಮಗಳಿಂದ ನಲಿಯುತ್ತಿರಲು, ಆ ಭೀಮನೃಪನು ಅತ್ಯಂತ ಸಂತೋಷಾದರಗಳಿಂದ ದಮನಾಖ್ಯ ಮುನಿಗೆ ವಂದಿಸಿ, ತನ್ನ ಮಗಳಿಗೆ ಶುಭಕರವಾದೊಂದು ಹೆಸರನ್ನು ಸೂಚಿಸಬೇಕೆಂದು ಕೇಳಿಕೊಂಡ ಪ್ರಯುಕ್ತ ಆ ಮುನಿಯು ಕಮಲದ ಹೂವಿನಂತೆ ಸುಂದರಳಾಗಿರುವುದರಿಂದ ಅವಳಿಗೆ 'ದಮಯಂತಿ' ಎಂದು ನಾಮಕರಣ ಮಾಡಿ ತನ್ನಾಶ್ರಮಕ್ಕೆ ಹೊರಟನು.

ರಾಜಾಧಿರಾಜರು ಪುತ್ರ ಸಂತಾನವನ್ನೇ ಬಯಸುವುದು, ಪುತ್ರಸಂತಾನ ವನ್ನು ಸಂಭ್ರಮೋತ್ಸವವಾಗಿ ಕೊಂಡಾಡುವುದು ಕಥೆಗಳಲ್ಲಿ, ಕಾವ್ಯಕಥನಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಚಿತ್ರವಾಗಿರುತ್ತದೆ. ಅದಕ್ಕೆ ತದ್ವಿರುದ್ಧವಾಗಿ ಭೀಮನೃಪನು 'ಹೆಣ್ಣುಮಗು'ವಾಯಿತೆಂದು ಎಲ್ಲೂ ಕೊರಗದಿರುವುದು, ರಾಜ್ಯದ ಜನರೂ ಹಾಗೆಯೇ ಭಾವಿಸಿ ಸಂಭ್ರಮಿಸುವುದು ವಿಶೇಷವಾಗಿದೆ. ಲಿಂಗಭೇದವಿಲ್ಲದೆ ಸರ್ವಸಮಾನವಾಗಿ ಜೀವವನ್ನಷ್ಟೇ ಗುಣಗ್ರಾಹಿಯಾಗಿ ಕಂಡಿರುವ ಕನಕದಾಸರ ಉದಾರ ಮನೋಭಾವ ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

33. ನಿರಿಗುರುಳ ಪವಳಾಧರದ ಉರು
ತರದ ತೋಳ್ಗಳ ಕಂಬುಕಂಠದ
ತರಳನಯನದ ಸಂಪಗೆಯ ನಾಸಿಕದ ಪೆರೆನೊಸಲ
ಹರಿಯ ಮಧ್ಯದ ಹಂಸಗಮನದ
ಗುರುಕುಚದ ಕರಪಲ್ಲವದ ಸರ
ಸಿರುಹಮುಖಿ ನಲಿದಾಡುತಿದ್ದಳು ರಾಜಭವನದಲಿ

ನಿರಿ + ಕುರುಳ = ನಿರಿಗೆ ನಿರಿಗೆಯಾಗಿ, ಗುಂಗುರು ಗುಂಗುರಾಗಿ ಇರುವ ಸಹಜ ಕೇಶರಾಶಿಯ; ಪವಳ + ಅಧರದ = ಹವಳದಂತೆ ಕೆಂಪಾದ ತುಟಿಯ;

ಉರುತರದ ತೋಳ್ಗಳ = ಅಂದವಾದ ತೋಳುಗಳ; ಕಂಬುಕಂಠದ = ಶಂಖದಂತೆ ನೀಳವಾದ ಸುಂದರವಾದ ಕೊರಳಿನ; ತರಳ ನಯನದ = ಎಳೆಯದಾದ ಮನೋಹರ ಕಣ್ಣುಗಳ; ಸಂಪಗೆಯ ನಾಸಿಕದ=ಸಂಪಗೆ ಎಸಳಿನಂತೆ ತೆಳ್ಳಗಿನ ಸುಂದರಾಕಾರವಾದ ಮೂಗಿನ; ಪೆರೆನೊಸಲ=ಚಂದ್ರನಂತೆ ಶೋಭಾಯ ಮಾನವಾಗಿರುವ ಹಣೆಯ; ಹರಿಯ ಮಧ್ಯದ = ಸಿಂಹದ ನಡುವಿನಂತೆ ಕೃಶವಾದ ಸುಂದರ ಸೊಂಟದ; ಹಂಸಗಮನದ = ಹಂಸದಂತೆ ಮೆದುವಾದ, ಬಳುಕುವ ನಡೆಯ; ಗುರುಕುಚದ = ಉನ್ನತವಾದ ವಕ್ಷಸ್ಥಳವುಳ್ಳ; ಕರಪಲ್ಲವದ = ಚಿಗುರಿನಂತೆ ಎಳೆಯ ನಸುಗೆಂಪಾದ ಬಳ್ಳಿಯಂತಿರುವ ಕೈಗಳ; ಸರಸಿರುಹ ಮುಖಿ = ಕಮಲಮುಖಿಯು; ನಲಿದಾಡುತ್ತಿದ್ದಳು = ಸಂತೋಷದಿಂದಿದ್ದಳು; ರಾಜಭವನದಲಿ = ಅರಮನೆಯಲ್ಲಿ.

ಈ ಪದ್ಯದಲ್ಲಿ ರಾಜಕುವರಿಯಾದ ದಮಯಂತಿಯ ಯೌವನಭರಿತವಾದ ಅನುಪಮ ಸೌಂದರ್ಯದ ವರ್ಣನೆ ಇದೆ. ನಿರಿಗೆ ನಿರಿಗೆಯಾದ ಸುರುಳಿಗೂದಲಿನ ಸುಂದರಿ ದಮಯಂತಿಯ ಹವಳದಂತೆ ಕೆಂಪಾದ ತುಟಿಯೂ, ಸುಂದರವಾದ ತೋಳ್ಗಳೂ, ಶಂಖದಂತೆ ನೀಳವಾದ ಕೊರಳೂ, ಇನ್ನೂ ಎಳೆತನ ಮಾಸದ ಮನೋಹರವಾದ ನಯನಗಳೂ, ಸಂಪಗೆ ಎಸಳಿನಂತೆ ತೆಳುವಾಗಿಯೂ ಸುಂದರಾಕಾರವಾಗಿಯೂ ಇದ್ದ ಮೂಗೂ, ಚಂದ್ರನಂತೆ ಪ್ರಭಾಯುಕ್ತವಾದ ಕಣ್ಸೆಳೆಯುವ ಹಣೆಯೂ, ಸಿಂಹದಂತೆ ತೆಳುವಾದ ನಡುವೂ, ಹಂಸದಂತೆ ಮೆಲ್ಲಗಿನ ಬಳಕುವ ನಡೆಯೂ, ಎತ್ತರವಾದ ಸ್ತನಗಳೂ, ಚಿಗುರಿನಂತೆ ನಸುಗೆಂಪಾದ ಬಳ್ಳಿಯಂತಹ ಕೈಗಳೂ, ಕಮಲದಂತಹ ಮುಖವೂ ಅವಳ ಅನುಪಮ ಲಾವಣ್ಯ ವನ್ನು ಸೂಚಿಸುತ್ತಿದ್ದುವು.

ಸಾಮಾನ್ಯವಾಗಿ ಕಾವ್ಯ ನಾಯಿಕೆಯರನ್ನು ವರ್ಣಿಸುವ ಎಲ್ಲ ಕವಿಗಳಂ ತೆಯೇ ಕನಕದಾಸರೂ ಸಾಂಪ್ರದಾಯಿಕ ಶೈಲಿಯಲ್ಲಿ, ಆದರೆ ಮಿತವಾಗಿ ವರ್ಣಿಸಿ ದ್ದಾರೆ. 'ತರಳ ನಯನದ' 'ನಲಿದಾಡುತ್ತಿದ್ದಳು' ಇತ್ಯಾದಿ ಪ್ರಯೋಗಗಳು ಅವಳು ನವತರುಣಿ ಎಂಬುದನ್ನೂ ಇನ್ನೂ ಮುಗ್ಧತೆಯ ಆವರಣದಿಂದ ಹೊರಬಂದಿರದ ವಯೋಮಾನದವಳೆಂಬುದನ್ನೂ ಸೂಚಿಸುತ್ತದೆ.

34. ಗುಣದೊಳಗೆ ಶೀಲದಲಿ ಮಾತಿನ
ಭಣಿತಿಯಲಿ ಗಾಂಭೀರ್ಯದಲಿ ವಿತ
ರಣದಲನುಪಮವಿದ್ಯೆಯಲಿ ಗುರು ದೈವಭಕ್ತಿಯಲಿ
ಪ್ರಣಿತಿಸಲು ಶರ್ವಾಣಿ ರತಿಯರಿ
ಗೆಣೆಯೆನಿಪ ಸುಂದರಿಗೆ ಮಿಕ್ಕಿನ
ಬಣಗು ಸತಿಯರು ಸರಿಯೆ ಲೋಕದೊಳೆಂದನಾ ಮುನಿಪ

ಗುಣದೊಳಗೆ = ಸ್ವಭಾವದಲ್ಲಾಗಲೀ ನಡೆವಳಿಕೆಗಳಲ್ಲಾಗಲೀ; ಶೀಲದಲಿ = ಶೀಲದಲ್ಲಾಗಲೀ; ಮಾತಿನ ಭಣಿತಿಯಲಿ = ಮಾತನಾಡುವ ರೀತಿ ನೀತಿ ವರ್ತನೆಗಳಲ್ಲಾಗಲೀ; ಗಾಂಭೀರ್ಯದಲಿ = ಚಂಚಲಪ್ರವೃತ್ತಿ ಇಲ್ಲದ ಗುಣದಲ್ಲಾ ಗಲೀ; ವಿತರಣದಲಿ = ಕೊಡುಗೈಯಿಂದ ದಾನ ಮಾಡುವ ವಿಷಯದಲ್ಲಾಗಲಿ; ಅನುಪಮ ವಿದ್ಯೆಯಲಿ = ಯಾರಿಗೂ ಹೋಲಿಸಲಾಗದ ವಿದ್ಯೆಯಲ್ಲಾಗಲೀ; ಗುರುದೈವ ಭಕ್ತಿಯಲಿ = ಹಿರಿಯರಲ್ಲಿ, ದೈವಭಕ್ತಿಯಲ್ಲಿ; ಪ್ರಣಿತಿಸಲು = ಹೋಲಿಸಲು; ಶರ್ವಾಣಿ ರತಿಯರಿಗೆಣೆಯೆನಿಪ = ತ್ರಿಲೋಕ ಸುಂದರಿಯಾದ ಪಾರ್ವತಿಗೂ ರತಿಗೂ ಸರಿಸಮಾನಳಂತಿರುವ; ಸುಂದರಿಗೆ = ಸೌಂದರ್ಯವತಿಯಾದ ಆ ದಮಯಂತಿಗೆ; ಮಿಕ್ಕಿನ = ಉಳಿದ; ಬಣಗು = ಅತಿಸಾಮಾನ್ಯ; ಸತಿಯರು = ಸ್ತ್ರೀಯರು; ಸರಿಯೆ = ಸರಿಸಮಾನರೆ, ಲೋಕದೊಳು + ಎಂದನ್ + ಆ = ಈ ಲೋಕದಲ್ಲಿ ಎಂದನು; ಆ ಮುನಿಪ = ಆ ಮುನಿಯು.

ದಮಯಂತಿಯ ಸೌಂದರ್ಯ ವರ್ಣನೆಯ ಅನಂತರ ಅವಳ ಅಪರೂಪದ ಆಕರ್ಷಕ ವ್ಯಕ್ತಿತ್ವವನ್ನು ಕುರಿತು ರೋಮಶ ಮಹಾಮುನಿಯು ಪರಿಚಯಿಸುತ್ತಿದ್ದಾನೆ. ದಮಯಂತಿಯು ರೂಪದಲ್ಲಿ ಅದ್ವಿತೀಯಳಾದ ತ್ರಿಲೋಕ ಸುಂದರಿ ಪಾರ್ವತಿಗೆ, ಆಕರ್ಷಣೆಯಲ್ಲಿ ರತಿಗೆ ಸಮಾನಳು. ಗುಣದಲ್ಲಾಗಲಿ, ನಡವಳಿಕೆಯಲ್ಲಾಗಲೀ, ವರ್ತಿಸುವ ರೀತಿ ನೀತಿಗಳಲ್ಲಾಗಲೀ ಬಹಳ ಗಂಭೀರ ಸ್ವಭಾವದವಳು. ಗುರು ಹಿರಿಯರಲ್ಲಿ ವಿನೀತ ಸ್ವಭಾವಳೂ ದೈವಭಕ್ತಳೂ ಕೊಡುಗೈ ದಾನಿಯೂ ವಿದ್ಯೆಯಲ್ಲಿ ಅನುಪಮಳೂ ಆದ ಅವಳಿಗೆ ಈ ಲೋಕದಲ್ಲಿ ಸರಿಸಮಾನರು ಯಾರಿದ್ದಾರೆ ಎಂದು ರೋಮಶ ಮಹಾಮುನಿಯು ಪ್ರಶಂಸಿಸಿದನು.

35. ಕೇಳು ಪಾಂಡವತನಯ ಭೀಮನೃ
ಪಾಲನೋಲಗದಲ್ಲಿ ಧರಣೀ
ಪಾಲಕರ ಚರಿತಪ್ರಸಂಗದೊಳಿರಲು ನಳನೃಪನ
ಶೀಲವನು ಸೌಂದರ್ಯವಿಭವ ವಿ
ಶಾಲಮತಿ ಲಾವಣ್ಯರೂಪು ಗು
ಣಾಳಿಗಳ ವಿಸ್ತರಿಸಿ ಕೊಂಡಾಡಿದರು ಕವಿಜನರು

ಕೇಳು ಪಾಂಡವ ತನಯ = ಪಾಂಡವ ಪುತ್ರನಾದ ಧರ್ಮರಾಯನೇ ಕೇಳು; ಭೀಮನೃಪಾಲನ + ಓಲಗದಲ್ಲಿ = ಭೀಮ ನೃಪಾಲನ ರಾಜಸಭೆಯಲ್ಲಿ; ಧರಣೀಪಾಲಕರ = ಭೂಮಂಡಲವನಾಳುವ ವಿವಿಧ ರಾಜರುಗಳು; ಚರಿತ ಪ್ರಸಂಗದೊಳಿರಲು = ರಾಜ್ಯದ ಆಗುಹೋಗು ಮುಂತಾದ ರಾಜಕೀಯ ವಿಷಯದಲ್ಲಿ ತೊಡಗಿರುವಾಗ; ನಳನೃಪನ = ನಳಮಹಾರಾಜನ; ಸೌಂದರ್ಯ = ಚೆಲುವು; ವಿಭವ = ರಾಜವೈಭವ; ವಿಶಾಲಮತಿ = ಅವನ ಔದಾರ್ಯ ಬುದ್ಧಿ; ಲಾವಣ್ಯರೂಪು = ಅತಿಶಯವಾದ ರೂಪ ಸೌಂದರ್ಯಗಳು; ಗುಣ + ಆಳಿಗಳ = ಅನೇಕ ಉತ್ತಮ ಗುಣಗಳನ್ನು ಕುರಿತು; ವಿಸ್ತರಿಸಿ = ವಿಶೇಷವಾಗಿ ವಿಸ್ತಾರಗೊಳಿಸಿ; ಕೊಂಡಾಡಿದರು = ಮೆಚ್ಚಿ ಹೊಗಳಿದರು; ಕವಿಜನರು = ಕವಿಗಳು ಪಂಡಿತರು ಮುಂತಾದವರು.

ಪಾಂಡವ ಪುತ್ರನಾದ ಧರ್ಮರಾಯನೇ ಕೇಳು ಒಮ್ಮೆ ಭೀಮನೃಪನು ತನ್ನ ಸಾಮಂತ ರಾಜರು ಮತ್ತಿತರ ರಾಜ ಸಮೂಹ ಪರಿವಾರಗಳೊಂದಿಗೆ ಉಪಸ್ಥಿತನಿರುವಾಗ ಸಭೆಯಲ್ಲಿ ರಾಜ್ಯಗಳ ಆಗುಹೋಗುಗಳ ಕುರಿತು ಚರ್ಚೆಯಲ್ಲಿರುವ ಸಂದರ್ಭದಲ್ಲಿ ಸಾಂದರ್ಭಿಕವಾಗಿ ಕವಿಜನರು ನಳಮಹಾರಾಜನ ಕುರಿತು ಅತಿಶಯವಾಗಿ ಹೊಗಳಿದರು. ಅವನ ರೂಪು, ಉದಾರ ಬುದ್ಧಿ, ಅವನ ರಾಜವೈಭವ, ಅಪರೂಪವೆಂಬಂತಹ ಲಾವಣ್ಯ, ವಿಶೇಷ ಗುಣಗಳು ಎಲ್ಲವನ್ನೂ ಕುರಿತು ತಮ್ಮ ಮೆಚ್ಚುಗೆಯನ್ನು ವಿಸ್ತಾರವಾಗಿ ವ್ಯಕ್ತಪಡಿಸುತ್ತಿದ್ದರು.

36. ವನಜಮುಖಿಯಾ ವಾರ್ತೆಯೆಲ್ಲವ
ಮನವೊಲಿದು ಕೇಳಿದಳು ಹಿಗ್ಗುತ

ನೆನೆದುದಂತಃಕರಣ ಹೆಚ್ಚಿದ ಚಿತ್ತವೃತ್ತಿಯಲಿ
ನೆನೆದು ಬರೆದಳು ನಳನ ರೂಪವ
ನನುನಯದಿ ಚಿತ್ರದಲಿ ಮಿಗೆ ಸಂ
ಜನಿಸಿತವನಲಿ ಮೋಹವೆಲೆ ಧರಣೀಶ ಕೇಳೆಂದ

ವನಜಮುಖಿ = ತಾವರೆಯಂತಹ ಸುಂದರವದನಳಾದ ದಮಯಂತಿಯು; ಆ ವಾರ್ತೆಯೆಲ್ಲವ = ನಳಮಹಾರಾಜನ ಕುರಿತ ವರ್ಣನೆಗಳೆಲ್ಲವನ್ನೂ; ಕೇಳಿದಳು ಹಿಗ್ಗುತ = ಪರಮಹರ್ಷಿತಳಾಗಿ ಕೇಳಿಸಿಕೊಂಡಳು; ನೆನೆದುದು + ಅಂತಃಕರಣ = ಅವಳ ಒಳ ಮನಸ್ಸಿನಲ್ಲಿ ಅವನದೇ ನೆನಪು, ರೂಪು ಅಚ್ಚೊತ್ತಿ ಕಾಡಿತು; ಹೆಚ್ಚಿದ ಚಿತ್ತವೃತ್ತಿಯಲಿ = ತೀವ್ರವಾಗಿ ಮನಸ್ಸನ್ನು ಸೆಳೆಯತೊಡಗಿದುದರಿಂದ; ನೆನೆದು ಬರೆದಳು + ನಳನ ರೂಪವನ್ = ಮತ್ತೆ ಮತ್ತೆ ಅವನ ಕುರಿತು ಕೇಳಿದ್ದನ್ನೇ ಕಲ್ಪಿಸಿಕೊಂಡು ಅವನನ್ನು ಮನಸ್ಸಿನಲ್ಲೇ ಚಿತ್ರಿಸಿಕೊಂಡಳು; ಅನುನಯದಿ ಚಿತ್ತದಲಿ = ಮನಸ್ಸನ್ನು ಅವನಿಗೆ ಒಲವಿನಿಂದ ಸಮರ್ಪಿಸಿ; ಮಿಗೆ ಸಂಜನಿಸಿತವನಲಿ ಮೋಹವು = ಅವನ ಮೇಲೆ ಮಿಗಿಲಾದ ಮೋಹವುಂಟಾಯಿತು; ಎಲೆ ಧರಣೀಶ ಕೇಳೆಂದ = ಎಲೆ ಧರಣಿಗೊಡೆಯನೇ ಕೇಳು ಎಂದ.

ಅರಳಿದ ತಾವರೆಯಂತಹ ಸುಂದರ ವದನಳಾದ ದಮಯಂತಿಯು ತನ್ನ ತಂದೆಯ ಆಸ್ಥಾನದಲ್ಲಿ ಕವಿಜನರು ನಳನ ಕುರಿತು ಆಡಿದ ಪ್ರಶಂಸಾತ್ಮಕ ವರ್ಣನೆಗಳಿಂದ ಪ್ರಭಾವಿತರಾಗಿ ಅವನ ಕುರಿತು ಹರ್ಷಚಿತ್ತದಿಂದ ಯೋಚಿಸಲಾರಂಭಿಸಿದಳು. ಮತ್ತೆ ಮತ್ತೆ ಮನಸ್ಸು ಅವನ ಕುರಿತು ಮೆಲುಕಾಡಿಸತೊಡಗಿತು. ತದನಂತರ ಅವಳನ್ನು ಕಾಡತೊಡಗಿತು. ಅವನ ರೂಪವನ್ನು ಮನಸ್ಸು ಆಳವಾಗಿ ಬರೆದುಕೊಂಡಿತು. ಬಳಿಕ ತೀವ್ರವಾಗಿ ಅವನ ಮೇಲೆ ಮೋಹವುಂಟಾಗಿ ಕೊನೆಗೆ ಸಂಪೂರ್ಣವಾಗಿ ಅವನಿಗೇ ಮಾರುಹೋಯಿತು.

ಕೇಳುವಾಸೆ ಕಲ್ಪಿಸಿಕೊಳ್ಳುವಾಸೆಯಾಗಿ, ಬಳಿಕ ಅದು ಮನಸ್ಸಿನಲ್ಲಿ ಕುಳಿತು, ನಿಧಾನವಾಗಿ ಮೆಲುಕಾಡಿಸುವಂತೆ ಮಾಡಿ, ಭದ್ರವಾಗಿ ನೆಲೆಯೂರಿ, ತರುವಾಯ ಮನಸ್ಸನ್ನು ಕಾಡಲಾರಂಭಿಸಿತು. ಕೊನೆಗೆ ಮೋಹದಿಂದ ಅದಕ್ಕೇ ಮಾರು

ಹೋಯಿತು. ಹೀಗೆ ಪ್ರೀತಿಯ ವರ್ತನೆಯನ್ನು ಕನಕದಾಸರು ಅತ್ಯಂತ ಸಂಯಮದಿಂದ ಕ್ರಮಕ್ರಮದ ಪಯಣದ ಪ್ರಣಯ ಚಿತ್ರವನ್ನಾಗಿ ಕಡೆದಿದ್ದಾರೆ.

37. ಆಗ ಮದನನು ತನ್ನ ಬಲವನು
ಬೇಗದಲಿ ಜೋಡಿಸಲು ಖೋಯೆಂ
ದಾಗಲರಸಂಚೆಗಳು ಅಳಿವಿಂಡುಗಳು ನಲಿದಾಡೆ
ಕೋಗಿಲೆಗಳಾರ್ಭಟಿಸೆ ಗಿಳಿಗಳು
ಕೂಗೆ ನವಿಲುಗಳಾಡೆ ಮನ್ಮಥ
ನಾಗ ಪೂಗಣೆಗಳನು ಸಂಧಿಸಿಯೆಚ್ಚನಂಗನೆಯ

ಆಗ ಮದನನು = ಆಗ ಮನ್ಮಥನು; ತನ್ನ ಬಲವನು = ತಾನು ಆಕ್ರಮಿಸಲು ಬೇಕಾದ ಬಲಗಳನ್ನು; ಬೇಗದಲಿ ಜೋಡಿಸಲು = ತಡಮಾಡದೆ ಒಟ್ಟುಗೂಡಿಸಿದನು; ಖೋ + ಎಂದು + ಆಗಲ್ + ಅರಸು + ಅಂಚೆಗಳು = ಖೋ = ಎಂಬ ಉತ್ಸಾಹದಿಂದ ಉದ್ಘೋಷಿಸುವ ಧ್ವನಿಯಲ್ಲಿ ರಾಜಹಂಸಗಳು; ಅಳಿವಿಂಡುಗಳು = ದುಂಬಿಯ ಹಿಂಡು; ನಲಿದಾಡೆ = ಸಂಭ್ರಮದಿಂದ ನಲಿದಾಡಲು; ಕೋಗಿಲೆಗಳು + ಆರ್ಭಟಿಸೆ = ಕೋಗಿಲೆಗಳ ಇಂಪಾದ ಕುಹೂ ಧ್ವನಿಯೂ ಅಧಿಕಾಧಿಕವಾಗಲು; ಗಿಳಿಗಳು ಕೂಗೆ = ಗಿಳಿಗಳು ಪರಸ್ಪರರನ್ನು ಕೂಗಿ ಕರೆಯಲು; ನವಿಲುಗಳಾಡೆ = ನವಿಲುಗಳು ಸಂತೋಷದಿಂದ ನಾಟ್ಯವಾಡಲು; ಮನ್ಮಥನು + ಆಗ = ಆಗ ಮನ್ಮಥನು; ಪೂಗಣೆಗಳನ್ನು = ಹೂವಿನ ಬಾಣಗಳನ್ನು; ಸಂಧಿಸಿ + ಎಚ್ಚನ್ + ಅಂಗನೆಯ = ಅಂಗನೆಗೆ ತಾಗುವಂತೆ ಪ್ರಯೋಗಿಸಿದನು.

ಮನ್ಮಥನು ಅತ್ಯಂತ ಮನೋಜ್ಞವಾಗಿ ದಮಯಂತಿಯ ವಯಸ್ಸಿಗೆ ಸಹಜವಾಗಿ ಪುಟಿದೇಳುವ ಪ್ರಕೃತಿ ಸಹಜವಾದ ಆಸೆಗಳಿಗೆ ಒಳಗಾಗಿಸುವ ವಾತಾವರಣವನ್ನು ನೆಲೆಗೊಳಿಸುತ್ತಿದ್ದಾನೆ. ದಮಯಂತಿಗೆ ನಳನಲ್ಲಿ ಮೋಹಾಂಕುರವಾಗುತ್ತಿದ್ದಂತೆಯೇ ಮನ್ಮಥನು ಅತಿ ಲಗುಬಗೆಯಿಂದ ತನ್ನ ಬಾಣಗಳನ್ನು ಪ್ರಯೋಗಿಸಲು ಸಿದ್ಧನಾದನು. ಕೋಗಿಲೆಗಳ ಸಂಭ್ರಮದ 'ಕುಹೂ' ನಾದ ಆರ್ಭಟದ ಹಂತ ತಲುಪುವಷ್ಟು ಹೆಚ್ಚಾಗಲು, ಗಿಳಿಗಳು ಸಂಭ್ರಮದಿಂದ ಪರಸ್ಪರರನ್ನು ಕೂಗಿ ಕರೆಯುತ್ತಿರಲು, ನವಿಲುಗಳು ಸಂತೋಷದಿಂದ ನಾಟ್ಯ

ವಾಡಲು, ಅತ್ಯಂತ ಮನೋಹರವಾದ ವಾತಾವರಣವನ್ನು ಸೃಷ್ಟಿಸಿ ದಮ ಯಂತಿಯ ಮೇಲೆ ಮೋಹದ ಬಾಣಗಳನ್ನು ಪ್ರಯೋಗಿಸಿದನು.

"ಝೋ ಎಂದಾಗಲರಸಂಚೆಗಳು" ಎಂಬ ಪ್ರಯೋಗವು ಇಡೀ ಪ್ರಕೃತಿಯು ಉಚ್ಚಸ್ವರದಲ್ಲಿ ಕೂಗಿ ಸಂಭ್ರಮಿಸಿದ ಅನುಭವವನ್ನುಂಟುಮಾಡುತ್ತದೆ. ಅತ್ಯಂತ ಸಂಭ್ರಮದ ಆರ್ಭಟವೂ ಸಹ ಸುಕೋಮಲವಾದ ಮನಸ್ಸಿನ ಸ್ಥಿತಿಯನ್ನು ಪ್ರತಿಬಿಂಬಿಸುತ್ತಿರುವುದು ಕವಿಕಲ್ಪನೆಯ ಸೊಗಸಿಗೆ ನಿದರ್ಶನದಂತಿದೆ.

38. ಉಣ್ಣಳನ್ನವ ಕಾಮಗತ್ತಲೆ
ಕಣ್ಣಿನಲಿ ಪೆರ್ಚಿದುದು ಸತಿಯರ
ಮನ್ನಣೆಗೆ ಮೈಗೊಡಳು ಬಲುಬೇಸರದಿ ಬಳಲುವಳು
ಬಣ್ಣಿಸಿಯೆ ಮಾತಾಡಲೊಲ್ಲಳು
ಬಣ್ಣಗುಂದಿದ ದೇಹದೊಳಗೆಳ
ವೆಣ್ಣುಗಳ ಸೌಖ್ಯವನು ತೊರೆದಳು ಮದನನೆಸುಗೆಯಲಿ

ಉಣ್ಣಳ್ + ಅನ್ನವ = ಆಹಾರವುಣ್ಣುವುದು ಅವಳಿಂದಾಗಲಿಲ್ಲ; ಕಾಮ ಗತ್ತಲೆ = ಆಸೆಯೆಂಬುದು ಬೇರೇನನ್ನೂ ಕಾಣದಂತೆ ಕುರುಡಾಗಿಸಿತು; ಕಣ್ಣಿನಲಿ ಪೆರ್ಚಿದುದು = ಕಣ್ಣಿನಲ್ಲಿ ಆಸೆಯೇ ತುಂಬಿತು; ಸತಿಯರ = ಅರಮನೆಯ ಸ್ತ್ರೀಯರ; ಮನ್ನಣೆಗೆ = ಪ್ರೀತಿ ಗೌರವ ಆದರಗಳಿಗೆ; ಮೈಗೊಡಳು = ಸ್ಪಂದಿಸದಾದಳು; ಬಲು ಬೇಸರದಿ ಬಳಲುವಳು = ಅಪಾರವಾದ ಬೇಸರದಿಂದ ಆಯಾಸಗೊಳ್ಳುತ್ತಿದ್ದಳು; ಬಣ್ಣಿಸಿಯೆ ಮಾತಾಡಲೊಲ್ಲಳು = ಯಾವುದೇ ವಿಷಯವನ್ನು ವಿವರವಾಗಿ ಮಾತಾಡಲು ಇಷ್ಟವಿಲ್ಲದೆ ಮಿತಭಾಷಿಯಾದಳು; ಬಣ್ಣಗುಂದಿದ = ಕಳೆಗುಂದಿದ; ದೇಹ ದೊಳಗೆ + ಎಳ + ಪೆಣ್ಣುಗಳ = ದೇಹವುಳ್ಳವಳಾಗಿ ಎಳೆಯ ಹೆಣ್ಣು ಮಕ್ಕಳಿಗೆ ಉಚಿತವಾದ; ಸೌಖ್ಯವನು = ಸಂತೋಷಾನಂದಗಳನ್ನು; ತೊರೆದಳು = ಬಿಟ್ಟು ಬಿಟ್ಟಳು; ಮದನನ + ಎಸುಗೆಯಲಿ = ಮನ್ಮಥನ ಬಾಣ ಪ್ರಯೋಗ ಪರಿಣಾಮದಿಂದ.

ಮನ್ಮಥನ ಬಾಣ ಪ್ರಯೋಗದ ಪರಿಣಾಮವಾಗಿ, ದಮಯಂತಿಯು ಇನ್ನೂ ನಳನನ್ನು ಎದುರೆದುರು ಕಂಡಿಲ್ಲದಿದ್ದರೂ, ಅವನ ಶೌರ್ಯ, ಪರಾಕ್ರಮ

ಮತ್ತು ಚೆಲುವಿಕೆಯ ಕುರಿತ ವರ್ಣನೆಗಳನ್ನು ಕೇಳಿದ ಮಾತ್ರಕ್ಕೇ ಮೋಹ ಪರವಶಳಾದಳು. ಕಾಮಬಾಧೆಯಿಂದ ಈಗ ಆಕೆಗೆ ಆಹಾರವು ರುಚಿಸಲಿಲ್ಲ. ಆಸೆ ಯೆಂಬುದು ಬೇರೇನನ್ನೂ ಕಾಣಿಸದಷ್ಟು ಮೋಹವನ್ನುಂಟುಮಾಡಿತು. ಕಣ್ತುಂಬ 'ಅವನನ್ನು' ಕಾಣುವಾಸೆಯೊಂದೇ ತುಂಬಿಕೊಂಡಿತು. ಅರಮನೆಯ ಸ್ತ್ರೀ ಸಂಕುಲದ ಯಾವ ರೀತಿಯ ಪ್ರೀತ್ಯಾದರಗಳಿಗೂ ಸ್ಪಂದಿಸುವ ಸ್ಥಿತಿಯಲ್ಲಿ ಅವಳಿ ರಲಿಲ್ಲ. ಅತಿಯಾದ ಬೇಸರದಿಂದ ಮೈಮನಸ್ಸುಗಳು ಉತ್ಸಾಹವನ್ನು ಕಳೆದು ಕೊಂಡವು. ಯಾರೊಂದಿಗೂ ಬೆರೆಯದೆ ಮಿತಭಾಷಿಯಾದಳು. ನವತಾರುಣ್ಯದ ಹೆಣ್ಣು ಮಕ್ಕಳಿಗೆ ಸಹಜವಾಗಿ ಉಕ್ಕುವ ಸಂತೋಷ, ಸಂಭ್ರಮಗಳಿಂದ ದೂರವಾದಳು.

ಇಲ್ಲಿ ಕವಿಯು ಬಳಸಿರುವ 'ಕಾಮಗತ್ತಲೆ', 'ಬಣ್ಣಗುಂದಿದ ದೇಹ' ಮುಂತಾದ ಪ್ರಯೋಗಗಳ ನಾವೀನ್ಯವು ಪರಿಣಾಮಕಾರಿಯಾಗಿದೆ.

39. ಕೆಳದಿಯರು ಕಂಡಂತರಂಗದಿ
ಬಲಿದ ವಿರಹದ ರಾಜವದನೆಯ
ಹೊಳಲೊಳುದ್ಯಾನವನ ಸುರುಚಿರ ಪುಷ್ಪತರುಗಳಲಿ
ಎಳದಳಿರ ನೆಳಲಿನಲಿ ಪರಿಮಳ
ದಲರ ಪನ್ನೀರಿನಲಿ ತಳುವದೆ
ನಲವು ಹಿಂಗಿದ ಸತಿಯನುಪಚರಿಸಿದರು ಬನದೊಳಗೆ

ಕೆಳದಿಯರು = ಗೆಳತಿಯರು; ಕಂಡು + ಅಂತರಂಗದಿ = ಅವಳ ಅಂತರಂಗದಲ್ಲಿಯ ಒಳತೋಟಿಯನ್ನು ಕಂಡು; ಬಲಿದ ವಿರಹದ = ಹೆಚ್ಚಾದ ವಿರಹದ; ರಾಜವದನೆಯ = ರಾಜ ತೇಜಸ್ಸಿನ ಅವಳನ್ನು; ಹೊಳಲೊಳು + ಉದ್ಯಾನವನ = ಪಟ್ಟಣದ ಉದ್ಯಾನವನದ; ಸುರುಚಿರ = ಮನೋಹರವಾದ; ಪುಷ್ಪತರುಗಳಲಿ = ಹೂಬಿಟ್ಟ ವೃಕ್ಷಗಳಿರುವಲ್ಲಿ; ಎಳದಳಿರ = ಎಳೆ ಚಿಗುರುಗಳಿರುವ; ನೆಳಲಿನಲಿ = ನೆರಳಿನ ತಂಪಿನಲ್ಲಿ; ಪರಿಮಳದಲರ = ಸುಗಂಧಿತ ಪುಷ್ಪಗಳ; ಪನ್ನೀರಿನಲಿ = ಪನ್ನೀರನ್ನು ಸಿಂಪಡಿಸುತ್ತ; ತಳುವದೆ =

ತಡಮಾಡದೆ; ನಲಿವು ಹಿಂಗಿದ = ಸಂತೋಷವೆಲ್ಲ ಇಂಗಿಹೋದಂತಿದ್ದ; ಸತಿಯನ್ನು + ಉಪಚರಿಸಿದರು = ದಮಯಂತಿಯನ್ನು ಸಂತೈಸುವ ಉಪಚಾರಗಳನ್ನು ಮಾಡಿದರು.

ದಮಯಂತಿಯು ಕಾಮನ ಪೀಡನೆಗೆ ಒಳಗಾಗಿದ್ದನ್ನೂ ಅವಳಂತರಂಗವು ಮೋಹದ ಬಲೆಗೆ ಸಿಕ್ಕಿ ನಲುಗಿರುವುದನ್ನೂ ಕಂಡ ಆಕೆಯ ಸಖಿಯರು ಮತ್ತು ಅಂತಃಪುರದ ಇತರ ಸ್ತ್ರೀಯರು ಅವಳಲ್ಲಿ ಹೆಚ್ಚಾದ ವಿರಹದ ತಾಪವನ್ನು ತಣಿಸಲು ಆಕೆಯನ್ನು ಅರಮನೆಯ ಉದ್ಯಾನವನಕ್ಕೆ ಕರೆದೊಯ್ದು ಮರದ ಚಿಗುರಿನ ತಂಪಾದ ನೆರಳಿನಲ್ಲಿರಿಸಿ, ಪುಷ್ಪಗಳ ಸುಗಂಧಭರಿತ ಪನ್ನೀರನ್ನು ಸಿಂಪಡಿಸಿ ಆಕೆಯ ದೇಹವನ್ನು ತಂಪಾಗಿಸುವ ಕಾರ್ಯದಲ್ಲಿ ತಡಮಾಡದೆ ತೊಡಗಿದರು.

40. ಕೆಲರು ಹದನೇನೆಂದು ಬಗೆದರು
ಕೆಲರು ಪನ್ನೀರುಗಳ ತಳಿದರು
ಕೆಲರು ಕಪ್ಪುರಗಂಧವನು ಲೇಪಿಸಿದರಂಗದಲಿ
ಕೆಲರು ಬೀಸಿದರಾಲವಟ್ಟದಿ
ಕೆಲರು ಹೂವನು ಹಾಸಿದರು ಕೋ
ಮಲೆಗೆ ನಾನಾವಿಧದ ಉಪಚಾರಂಗಳನು ರಚಿಸಿ

ಕೆಲರು = ಕೆಲವರು; ಹದನು + ಏನೆಂದು = ಏಕೆ ಈ ರೀತಿ ಇದ್ದಾಳೆ ಎಂದು; ಬಗೆದರು = ಯೋಚಿಸಿದರು; ಕೆಲರು = ಕೆಲವರು; ಪನ್ನೀರುಗಳ = ಪುಷ್ಪ ಸುಗಂಧಿತ ತಣ್ಣನೆಯ ನೀರನ್ನು; ತಳಿದರು = ಸಿಂಪಡಿಸಿದರು; ಕೆಲರು = ಕೆಲವರು; ಕಪ್ಪುರಗಂಧವನು + ಲೇಪಿಸಿದರು + ಅಂಗದಲಿ = ಅವಳ ಅಂಗಾಂಗಗಳಿಗೆ ಕರ್ಪೂರ, ಗಂಧ ಮುಂತಾದುವನ್ನು ಲೇಪನ ಮಾಡಿದರು; ಕೆಲರು + ಬೀಸಿದರು + ಆಲವಟ್ಟದಿ = ಕೆಲವರು ಅಂಗಾಂಗಗಳು ತಂಪಾಗಲೆಂದು ಬೀಸಣಿಗೆಯಿಂದ ಬೀಸಿದರು; ಕೆಲರು = ಕೆಲವರು; ಹೂವನು ಹಾಸಿದರು = ಅವಳನ್ನು ತಂಪಾಗಿಸಲು ಹೂಹಾಸಿ ಮಲಗಿಸಿದರು; ಕೋಮಲೆಗೆ = ಕೋಮಲ ಶರೀರಿಯಾದ ಅವಳಿಗೆ; ನಾನಾವಿಧದ = ಅನೇಕ ರೀತಿಯ; ಉಪಚಾರಗಳನು = ಉಪಚಾರಗಳನ್ನು; ರಚಿಸಿ = ಯೋಚಿಸಿ ಮಾಡಿದರು.

ಕೆಲವರಿಗೆ ದಮಯಂತಿ ಏಕೆ ಹೀಗಾಗಿದ್ದಾಳೆಂಬುದೇ ತಿಳಿಯಲಿಲ್ಲ. ಆದರೆ ತಾಪದಿಂದ ಮೈ ತಂಪಾಗಲೆಂದು ಒಬ್ಬೊಬ್ಬರು ಒಂದೊಂದು ರೀತಿ ತಮಗೆ ತಿಳಿದ ಪ್ರಕಾರದಲ್ಲಿ ಅವಳನ್ನು ಉಪಚರಿಸಲಾರಂಭಿಸಿದರು. ಕೆಲವರು ಸುಗಂಧಿತ ಪುಷ್ಪಗಳ ಪನ್ನೀರು ತಳಿದರು, ಕೆಲವರು ಹೂಹಾಸಿಗೆಯಲ್ಲಿ ಮಲಗಿಸಿದರು, ಕೆಲವರು ಬೀಸಣಿಗೆಯಿಂದ ಗಾಳಿ ಬೀಸಿದರೆ ಕೆಲವರು ಗಂಧ ಕರ್ಪೂರಗಳನ್ನು ತೇದು ಅವಳ ಅಂಗಾಂಗಗಳಿಗೆ ಲೇಪಿಸಿದರು. ಹೀಗೆ ನಾನಾ ಬಗೆಯಲ್ಲಿ ಅರಮನೆಯ ಹೆಣ್ಣು ಮಕ್ಕಳು ಅವಳಿಗೆ ಹಿತವಾಗುವಂತೆ ಶೈತ್ಯೋಪಚಾರಗಳನ್ನು ಮಾಡಿದರು.

ಬಹಳ ಹಿಂದಿನಿಂದಲೂ ತಾರುಣ್ಯವು ಕಾಲಿಟ್ಟ ಬೇರೆ ಬೇರೆ ಕಾಲಘಟ್ಟಗಳಲ್ಲಿ ಭಾರತೀಯ ಸ್ತ್ರೀ ಸಮಾಜವು ಹೆಣ್ಣು ಮಕ್ಕಳನ್ನು ಸೂಕ್ಷ್ಮವಾಗಿ ಗಮನಿಸುತ್ತ, ಮನೆಮದ್ದುಗಳನ್ನು, ಉಪಚಾರದ ವಿವಿಧ ಬಗೆಗಳನ್ನು ಆಲೋಚಿಸಿ, ತಿಳಿದವರೊಡನೆ ಸಂವಾದಿಸಿ ಕಂಡುಕೊಳ್ಳುತ್ತ, ಪ್ರಯೋಗಿಸುತ್ತ ಬಂದಿದೆ ಎಂಬುದನ್ನು ಅನೇಕ ಪ್ರಾಚೀನ ಕಾವ್ಯಗಳು ದಾಖಲಿಸುತ್ತವೆ. ಈ ಪದ್ಯ ಖಂಡದಲ್ಲಿರುವುದು ಕೇವಲ ವರ್ಣನೆಗಾಗಿ ಬಂದಿದ್ದಲ್ಲ, ಆರೋಗ್ಯದ ಕುರಿತು ಪ್ರಾಯೋಗಿಕವಾಗಿ ಸಮಾಜದ ಒಂದು ವರ್ಗ ಎಷ್ಟು ಚಿಂತನಶೀಲವಾಗಿತ್ತು ಎಂಬುದನ್ನು ಸೆರೆಹಿಡಿದಿದೆ.

41. ಈ ಪರಿಯೊಳಾ ಕಾಮಿನಿಗೆ ಶೈ
ತ್ಯೋಪಚಾರವ ಮಾಡಿದರು ಪರಿ
ತಾಪ ವೆಗ್ಗಳಿಸಿದುದು ಇದಕಿನ್ನೇನು ಹದನೆನುತ
ಚಾಪಳೆಯರಾಲೋಚಿಸುತ ಕಡು
ಪಾಪಿಯಂಗಜನೆಂದು ಬಯ್ಯುತ
ತೋಪಿನೆಡೆಗಿರದೈದಿ ತಂದರು ಸತಿಯ ಸಂತೈಸಿ

ಈ ಪರಿಯೊಳು + ಆ + ಕಾಮಿನಿಗೆ = ಈ ರೀತಿಯಲ್ಲಿ ಆ ಕಾಮಜ್ವರ ಪೀಡಿತಳಾದ ಯುವತಿಗೆ; ಶೈತ್ಯ + ಉಪಚಾರವ ಮಾಡಿದರು = ದೇಹವನ್ನು ತಂಪು ಗೊಳಿಸಲು ಬೇಕಾದ ಉಪಚಾರಗಳನ್ನು ಮಾಡಿದರು; ಪರಿತಾಪ = ಅತಿಯಾದ ವಿರಹದಿಂದಾದ ತಾಪವು; ವೆಗ್ಗಳಿಸಿದುದು = ಅತಿಯಾಯಿತು; ಇದಕೆ + ಇನ್ನೇನು

ಹದನು + ಎನುತ = ಇದಕ್ಕೆ ಇನ್ನೇನು ಕ್ರಮ ಕೈಗೊಳ್ಳುವುದು ಎನ್ನುತ್ತ; ಚಾಪಳೆಯರು + ಆಲೋಚಿಸುತ = ಆ ಹೆಂಗಳೆಯರು ಆಲೋಚಿಸುತ್ತ; ಕಡುಪಾಪಿ ಯಂಗಜನೆಂದು = ದೇಹವನ್ನು ಪೀಡಿಸುವ ಕಾಮನು ಮಹಾಪಾಪಿ ಎಂದು; ಬಯ್ಯುತ = ಬಯ್ಯುತ್ತ; ತೋಪಿನೆಡೆಗೆ + ಇರದೆ + ಐದಿ + ತಂದರು = ಸುಮ್ಮನೆ ತಡ ಮಾಡದೆ; ಮರಗಳು ಒತ್ತಾಗಿರುವಲ್ಲಿಗೆ ಅವಳನ್ನು ಕರೆತಂದರು; ಸತಿಯ ಸಂತೈಸಿ = ಆ ಹೆಣ್ಣು ಮಗಳನ್ನು ಸಮಾಧಾನಿಸುತ್ತ.

ಕಾಮಜ್ವರದಿಂದ ಪೀಡಿತಳಾಗಿದ್ದ ಯೌವನಭರಿತ ಚೆಲುವೆ ದಮಯಂತಿ ಯನ್ನು ಅರಮನೆಯ ಸಖೀಜನರು ಶೈತ್ಯೋಪಚಾರಗಳಿಂದ ಸೇವೆ ಮಾಡಿದರು. ಇದರಿಂದ ಮೈಯತಾಪವು ಕಡಿಮೆಯಾಗುವುದರ ಬದಲು ಅತಿಯಾದುದನ್ನು ಕಂಡು ಹೌಹಾರಿ ಇನ್ನಾವ ಕ್ರಮದಲ್ಲಿ ಉಪಚರಿಸಿದರೆ ಒಳಿತು ಎಂತು ತಮ್ಮ ತಮ್ಮಲ್ಲೇ ವಿಚಾರಿಸಿಕೊಳ್ಳುತ್ತ ದೇಹವನ್ನು ಈ ರೀತಿ ಪೀಡಿಸುವ ಕಾಮನನ್ನು ಮಹಾಪಾಪಿ ಎಂದು ಶಪಿಸುತ್ತ ಅವಳನ್ನು ಇನ್ನೂ ಒತ್ತಾಗಿ ಬೆಳೆದು ತಂಪಾಗಿದ್ದ ತೋಪಿನತ್ತ ಕರೆದೊಯ್ದರು.

42. ಬಕುಳ ಪಾದರಿ ನಿಂಬ ವಟ ಕೇ
ತಕಿ ಸರಳ ಪಾಟಳಿ ಕುಟಜ ಚಂ
ಪಕ ರಸಾಲ ಕಪಿತ್ಥ ದಾಡಿಮ ಕ್ರಮುಕತರುಗಳಲಿ
ಶುಕ ನವಿಲು ಜಿಲಿಬಿಲಿಗ ಗೀಜುಗ
ಬಕ ಹಸುಬ ಗೊರವಂಕ ಟಿಟ್ಟಿಭ
ಪಿಕ ಚಕೋರಕ ಮಿಂಚುಲಿಗ ಹಕ್ಕಿಗಳು ರಂಜಿಸಿತು

ಬಕುಲ = ನಾಗಕೇಸರ; ಪಾದರಿ = ಪಾದರಿ ಹೂ; ನಿಂಬ = ನಿಂಬೆ; ವಟ = ಆಲ; ಕೇತಕಿ = ಕೇದಗೆ; ಸರಳ = ದೇವದಾರು; ಪಾಟಳಿ = ಪಾದರಿ; ಕುಟಜ = ಕೊಡಸಿಗೆ; ಚಂಪಕ = ಸಂಪಿಗೆ; ರಸಾಲ = ಮಾವು; ಕಪಿತ್ಥ = ಬೇಲ; ದಾಡಿಮ = ದಾಳಿಂಬೆ; ಕ್ರಮುಖ = ಅಡಕೆ ಇತ್ಯಾದಿ; ತರುಗಳಲಿ = ಮರಗಳಿಂದ ಕೂಡಿದ ಆ ಉದ್ಯಾನವನದಲ್ಲಿ; ಶುಕ = ಗಿಳಿ; ನವಿಲು = ನವಿಲು; ಜಿಲಿಬಿಲಿಗ = ಜಿಲಿಬಿಲಿಗ; ಗೀಜಗ = ಗೀಜಗನ ಹಕ್ಕಿ ಅಥವಾ ತಾಳೆಗುಬ್ಬಿ; ಬಕ = ಕೊಕ್ಕರೆ; ಹಸುಬ =

ಹಸಿರು ಪಾರಿವಾಳ; ಗೊರವಂಕ = ಮೈನಾ; ಟಿಟ್ಟಿಭ = ಲಾವುಗೆ; ಪಿಕ= ಕೋಗಿಲೆ; ಚಕೋರಕ = ಚಕೋರ; ಮೀಂಬುಲಿಗ = ಮಿಂಚುಳ್ಳಿ ಹಕ್ಕಿಗಳು; ರಂಜಿಸಿತು = ಮೈಮನಸ್ಸುಗಳನ್ನು ಸೆಳೆದುವು.

ಅವರು ದಮಯಂತಿಯನ್ನು ಕರೆತಂದ ಉದ್ಯಾನವನದಲ್ಲಿ ಅತಿ ಮನೋಹರವಾಗಿ ನಾನಾ ರೀತಿಯ ಔಷಧೀಯವಾದ ಹಾಗೂ ಸುಗಂಧಿತವಾದ ಗಾಳಿಯಿಂದ ಮನಸ್ಸನ್ನು ಮುದಗೊಳಿಸುವ ವೃಕ್ಷಗಳಿದ್ದುವು. ಅವುಗಳಲ್ಲಿ ನಾಗಕೇಸರ, ಪಾದರಿ ಹೂ, ನಿಂಬೆ, ಆಲ, ಕೇದಗೆ, ದೇವದಾರು, ಪಾಟಲಿ, ಕೊಡಸಿಗೆ, ಸಂಪಿಗೆ, ಮಾವು, ಬೇಲ, ದಾಳಿಂಬೆ, ಅಡಿಕೆ, ಮುಂತಾದ ಫಲಪುಷ್ಪಗಳಿಂದ ತುಂಬಿದ ಮಹಾವೃಕ್ಷಗಳಿದ್ದುವು. ಜೊತೆಗೆ ಗಿಳಿ, ನವಿಲು, ಜಿಲಿಬಿಲಿಗ, ಗೀಜಗ, ಕೊಕ್ಕರೆ, ಹಸಿರುಪಾರಿವಾಳ, ಮೈನಾ, ಲಾವುಗೆ, ಕೋಗಿಲೆ, ಚಕೋರ, ಮಿಂಚುಳ್ಳಿ, ಮುಂತಾದ ಪಕ್ಷಿಗಳ ಕಲರವದೊಂದಿಗೆ ಆ ಉದ್ಯಾನವನವು ಮನೋರಂಜಕವಾಗಿತ್ತು.

43. ಬಿಗಿದ ರತ್ನದ ಸಾಲ ಸೋಪಾ
ನಗಳ ಕೆಂದಾವರೆಯ ಮೊಗ್ಗೆಯ
ಮುಗುಳ ತುಂಬಿಯ ಹಂಸಗಳ ಬಕಚಕ್ರವಾಕಗಳ
ಸೊಗಸುದೋರುವ ಸರಸಿಯಲಿ ವರ
ಸುಗುಣೆಯರು ದಮಯಂತಿಯೊಳು ಮನ
ಸೊಗಸಿನಿಂದಾಡಿದರು ಜಲಕೇಳಿಯ ವಿದಗ್ಧೆಯರು

ಬಿಗಿದ ರತ್ನದ ಸಾಲ = ರತ್ನಗಳನ್ನು ಹುದುಗಿಸಿದ ಸಾಲಿನ; ಸೋಪಾನಗಳ = ಮೆಟ್ಟಿಲುಗಳಿದ್ದ; ಕೆಂದಾವರೆ ಮೊಗ್ಗೆಯ = ಕೆಂದಾವರೆ ಹೂವಿನ ಮೊಗ್ಗುಗಳಿಗೆ; ಮುಗುಳ ತುಂಬಿಯ = ತುಂಬಿಕೊಂಡಿದ್ದ ದುಂಬಿಗಳ; ಹಂಸಗಳ = ಹಂಸಗಳ; ಬಕಚಕ್ರವಾಕಗಳ = ಬಕಪಕ್ಷಿ ಚಕ್ರವಾಕಗಳ; ಸೊಗಸುದೋರುವ = ಸುಂದರವಾದ; ಸರಸಿಯಲಿ = ಸರೋವರದಲ್ಲಿ; ವರ ಸುಗುಣೆಯರು = ಆ ಅರಮನೆಯ ಹಿರಿಯ ಅನುಭವಿ ಮಹಿಳೆಯರು; ದಮಯಂತಿಯೊಳು = ದಮಯಂತಿಯೊಂದಿಗೆ; ಮನ ಸೊಗಸಿನಿಂದಾಡಿದರು = ಮನಸ್ಸಂತೋಷ

ಗೊಳ್ಳುವವರೆಗೂ ಆಡಿದರು; ಜಲಕೇಳಿಯ = ಜಲಕೇಳಿಯನ್ನು; ವಿದಗ್ಧೆಯರು = ಕಾಮನಿಂದ ಮನಸ್ಸು ಬೆಂದುಹೋದ ಸ್ತ್ರೀಯರು.

ಆ ಉದ್ಯಾನವನದಲ್ಲಿದ್ದ ಸರೋವರದಲ್ಲಿ ರತ್ನಗಳನ್ನು ಹುದುಗಿಸಿ ರಚಿಸಿದ ಮೆಟ್ಟಿಲುಗಳಿದ್ದುವು. ಕೆಂದಾವರೆಯ ಮೊಗ್ಗುಗಳು ಅರಳುತ್ತಿರುವಾಗ ಮುತ್ತಿಕೊಂಡಿದ್ದ ದುಂಬಿಗಳ ಹಿಂಡು, ಹಂಸ, ಬಕ, ಚಕ್ರವಾಕ ಇತ್ಯಾದಿಗಳು ಸರೋವರದ ಸೊಗಸನ್ನು ಅಧಿಕಗೊಳಿಸಿದ್ದುವು. ಅಂತಹ ಸುಂದರ ಸರೋವರದಲ್ಲಿ ದಮಯಂತಿ ಯೊಂದಿಗೆ ತಮ್ಮ ಕಾಮಪೀಡಿತ ಮನಸ್ಸನ್ನೂ ತಣಿಸಲು ಅರಮನೆಯ ಉತ್ತಮ ಸ್ತ್ರೀಕುಲವೇ ಜೊತೆಯಾಗಿ ಜಲಕೇಳಿಯಾಡಿದರು.

44. ಬಂದು ಸತಿಯರು ಕೊಳನ ತೀರದಿ
ನಿಂದು ವಸ್ತ್ರಾಭರಣಭೂಷಣ
ದಿಂದ ಶಶಿಕಾಂತೋಪಲದಿ ಕುಳ್ಳಿರಿಸಿ ಶಶಿಮುಖಿಯ
ಅಂದು ವಿರಹವ್ಯಥೆಯ ನಾನಾ
ಚಂದದಲಿ ಶೈತ್ಯೋಪಚಾರಗ
ಳಿಂದ ಸಂತೈಸಿದರು ವರಪುರದರಸನಾಜ್ಞೆಯಲಿ

ಬಂದು ಸತಿಯರು = ಅವಳೊಂದಿಗೆ ಬಂದಿದ್ದ ಸ್ತ್ರೀಯರು; ಕೊಳನ ತೀರದಿ ನಿಂದು = ಆ ಸರೋವರದ ದಂಡೆಯಲ್ಲಿ ನಿಂತು; ವಸ್ತ್ರಾಭರಣ ಭೂಷಣ ದಿಂದ = ವಸ್ತ್ರ, ಆಭರಣ, ಇತ್ಯಾದಿ ಉಡುಗೆ ತೊಡುಗೆಗಳಿಂದ; ಶಶಿಕಾಂತೋಪ ಲದಿ = ಚಂದ್ರಕಾಂತ ಶಿಲೆಯ ಆಸನದಲ್ಲಿ; ಕುಳ್ಳಿರಿಸಿ ಶಶಿಮುಖಿಯ = ಚಂದ್ರನಂತೆ ಬೆಳಗುವ ಕಾಂತಿಯ ದಮಯಂತಿಯನ್ನು ಕುಳ್ಳಿರಿಸಿ; ಅಂದು ವಿರಹವ್ಯಥೆಯ = ಆ ಸಮಯದಲ್ಲಿ ವಿರಹವ್ಯಥೆಯನ್ನು; ನಾನಾ ಚಂದದಲಿ = ನಾನಾ ರೀತಿಯಲ್ಲಿ; ಶೈತ್ಯೋಪಚಾರಗಳಿಂದ ಸಂತೈಸಿದರು = ತಂಪುಗೊಳಿಸುವ ಉಪಚಾರಗಳಿಂದ ಸಂತೈಸಿದರು; ವರಪುರದರಸನಾಜ್ಞೆಯಲಿ = ಆ ವರಪುರದ ಅರಸನ ಇಚ್ಛೆಯನು ಸಾರವಾಗಿ.

ಅರಮನೆಯಿಂದ ಅವಳೊಂದಿಗೆ ಬಂದಿದ್ದ ಸ್ತ್ರೀಯರು, ದಮಯಂತಿಯ ವಿರಹ ವ್ಯಥೆಯನ್ನು ತಂಪುಗೊಳಿಸುವ ನಾನಾ ರೀತಿಯ ಉಪಚಾರಗಳನ್ನು ಆ

ವರಪುರದ ಅರಸನ ಇಚ್ಛಾನುಸಾರ ಮಾಡಿದರು. ಜಲಕೇಳಿಯ ನಂತರ ಅವಳನ್ನು ಆ ಸರೋವರದ ತೀರದಲ್ಲಿದ್ದ ಚಂದ್ರಕಾಂತ ಶಿಲೆಯ ತಂಪಾದ ಆಸನದಲ್ಲಿ ಕುಳ್ಳಿರಿಸಿ, ಉಚಿತವಾದ ವಸ್ತ್ರಾಭರಣಗಳಿಂದ ಅವಳನ್ನು ಸಿಂಗರಿಸಿ, ಅವಳ ವಿರಹ ವ್ಯಥೆಯನ್ನು ಸಂತವಿಸಲು ಪ್ರಯತ್ನಿಸಿದರು.

ಅನೇಕ ವೇಳೆ ಭಾರತೀಯ ಸ್ತ್ರೀ ಸಮಾಜವು ಮನೆಮದ್ದುಗಳನ್ನು ತಮ್ಮ ಅನುಭವ, ಪರಿಣತಿಗಳಿಂದಲೇ ಆಯಾ ತುರ್ತು ಪರಿಸ್ಥಿತಿಗಳಿಗೆ ತಕ್ಕಂತೆ ಪ್ರಯೋಗಿಸುತ್ತಿದ್ದುದರ ಕುರಿತಂತೆ ಪ್ರಾಚೀನ ಕಾವ್ಯಗಳಲ್ಲಿ ಹೇರಳವಾದ ಉದಾಹರಣೆಗಳಿವೆ. ಕನ್ನಡದ ಸ್ತ್ರೀ ಸಮಾಜವು ಕುರಿತೋದದೆಯೂ ವೈದ್ಯಕೀಯ ತುರ್ತು ಸೇವೆಗಳನ್ನು ಸ್ವಭಾವ ಸಹಜವಾಗಿಯೇ ವಿನಿಮಯ ಮಾಡಿಕೊಂಡು ಪ್ರಯೋಗಶೀಲರಾಗುತ್ತಿದ್ದುದು ಅತಿಶಯೋಕ್ತಿಯೇನಲ್ಲ.

ಎರಡನೆಯ ಸಂಧಿ

ಹಲವು ನಯನೀತಿಯಲಿ ಹಂಸೆಯ
ಕಳುಹಲಂದಿನ ರಾಯಭಾರದಿ
ನಳನೃಪಗೆ ಸತಿಯಾದಳಾ ದಮಯಂತಿ ಮನವೊಲಿದು

ಹಲವು = ಅನೇಕ, ನಯನೀತಿಯಲಿ = ನ್ಯಾಯಬದ್ಧವಾದ ತಿಳುವಳಿಕೆಯ ರೀತಿಯಲ್ಲಿ; ಹಂಸೆಯ = ಹಂಸವನ್ನು; ಕಳುಹಲು = ಕಳುಹಿಕೊಡಲು; ಅಂದಿನ ರಾಯಭಾರದಿ = ಅಂದು ಹಂಸೆಯ ಮಧ್ಯಸ್ಥಿಕೆಯಲ್ಲಿ; ನಳನೃಪಗೆ = ನಳಮಹಾ ರಾಜನಿಗೆ, ಸತಿಯಾದಳಾ = ಸತಿಯಾದಳು + ಆ = ಆ ದಮಯಂತಿಯು ಪತ್ನಿಯಾದಳು, ಮನವೊಲಿದು = ಮನಸಾರೆ ಪ್ರೀತಿಸಿ. ಒಲಿದು.

ಅನೇಕ ರೀತಿಯಲ್ಲಿ ತನ್ನ ಪ್ರೀತಿಯ ವಿಷಯವನ್ನು ಹಂಸೆಗೆ ಅರ್ಥಮಾಡಿಸಿ ಹಂಸೆಯನ್ನು ನಳನು ಸಂದೇಶವಾಹಕವನ್ನಾಗಿ ದಮಯಂತಿಯಲ್ಲಿಗೆ ಕಳುಹಿಕೊಡಲು ಅದರ ಫಲವಾಗಿ ದಮಯಂತಿಯು ತಾನು ಮನಸಾರೆ ಪ್ರೀತಿಸಿದ ನಳನನ್ನು ಮದುವೆಯಾದಳು.

ಪ್ರಾಚೀನ ಕಾವ್ಯಗಳಲ್ಲಿ ಕವಿಗಳು ಸಾಮಾನ್ಯವಾಗಿ ಪ್ರತಿಯೊಂದು ಸಂಧಿ, ಅಥವಾ ಅಧ್ಯಾಯಗಳ ಆರಂಭದಲ್ಲಿ ಆ ಇಡೀ ಅಧ್ಯಾಯದ ಸಾರವನ್ನು ಪದ್ಯ ಖಂಡದ ಮೊದಲು ಮೂರು ಸಾಲುಗಳಲ್ಲಿ ವಿವರಿಸುವುದು ವಾಡಿಕೆ. ಮೇಲಿನ ಪದ್ಯವು ಈ ಸಂಧಿಯ ವಸ್ತುವನ್ನು ಪ್ರಕಟಿಸುತ್ತದೆ. ರಾಜ ರಾಣಿಯರ ಕಥೆಗಳಲ್ಲಿ ಅವರ ಪ್ರೇಮ ಪ್ರಕರಣಗಳಲ್ಲಿ ಸಹಾಯಕರಾಗಿ ಬರುವ ಸಖಿ-ಸಖರ ಪಾತ್ರವನ್ನು ಇಲ್ಲಿ ರಾಜಹಂಸವು ನಿರ್ವಹಿಸುತ್ತಿರುವುದು ವಿಶೇಷ.

1. ಕೇಳು ಕುಂತೀತನಯ ಭೀಮನೃ
ಪಾಲತನುಜೆಗೆ ವಿರಹ ಬಲಿದು ವಿ
ಶಾಲವಾಗಿರಲಿತ್ತ ಕೇಳೈ ನಿಷಧನಗರಿಯನು
ಪಾಲಿಸುವ ನಳಚಕ್ರವರ್ತಿಯು
ಮೇಲೆನಿಪ ಸಭೆಯಲ್ಲಿ ರತ್ನದ
ಸಾಲುಹೊಳಹಿನ ಸಿಂಹಪೀಠದೊಳೆಸೆದು ಕುಳ್ಳಿರ್ದ

ಕೇಳು = ಆಲಿಸು; ಕುಂತೀತನಯ = ಧರ್ಮರಾಯನೇ; ಭೀಮನೃಪಾಲ ತನುಜೆಗೆ = ಭೀಮನೃಪಾಲನ ಮಗಳಿಗೆ; ವಿರಹ = ಪ್ರಿಯಕರನ ಅಗಲಿಕೆ; ಬಲಿದು = ಹೆಚ್ಚಾಗಿ; ವಿಶಾಲವಾಗಿರಲು + ಇತ್ತ = ಮತ್ತೂ ಹೆಚ್ಚಾಗಿ ಆವರಿಸಲು; ಇತ್ತ = ಈ ಕಡೆ; ಕೇಳೈ = ಓ ಕೇಳು; ನಿಷಧನಗರಿಯನು = ನಿಷಧನಗರವನ್ನು; ಪಾಲಿಸುವ = ಆಳುವ; ನಳಚಕ್ರವರ್ತಿಯು = ನಳ ಮಹಾರಾಜನು; ಮೇಲೆನಿಪ = ಉನ್ನತೋನ್ನತ ವೆನಿಸುವಂತಹ; ಸಭೆಯಲ್ಲಿ = ತನ್ನ ಆಸ್ಥಾನದಲ್ಲಿ; ರತ್ನದ = ವಜ್ರ ಮಾಣಿಕ್ಯಗಳೇ ಮೊದಲಾದ ಹರಳುಗಳನ್ನು ಹುದುಗಿಸಿರುವ; ಸಾಲು ಹೊಳಪಿನ = ಸಾಲುಗಳಿಂದ ಹೊಳೆಯುವ; ಸಿಂಹಪೀಠದೊಳು + ಎಸೆದು = ಸಿಂಹಾಸನದಲ್ಲಿ ಶೋಭಾಯ ಮಾನವಾಗಿ; ಕುಳ್ಳಿರ್ದ = ಕುಳಿತಿದ್ದನು.

ಧರ್ಮರಾಯನೇ ಕೇಳು, ಒಂದೆಡೆ, ನಳಚಕ್ರವರ್ತಿಯಲ್ಲಿ ತಾನು ಹೊಂದಿದ ಪ್ರೀತಿಯಿಂದ ಅವನನ್ನು ಅಗಲಲಾರದ ವಿರಹತಾಪದಿಂದ ದಮಯಂತಿಯು ಪರಿತಪಿಸುತ್ತಿರಲು, ಇತ್ತ ನಿಷಧನಗರದ ನಳ ಮಹಾಸಾಮ್ರಾಟನು ಪಂಡಿತೋ ತ್ತಮರೂ, ನಗರ ಪ್ರಮುಖರೂ, ಸಾಮಂತ ರಾಜಾಧಿರಾಜರೂ ಉಪಸ್ಥಿತರಿದ್ದ ಉನ್ನತೋನ್ನತವಾದ ಓಲಗದಲ್ಲಿ ಹೊಳೆಯುವ ರತ್ನಮಣಿಖಚಿತ ಸಿಂಹಾಸನದಲ್ಲಿ ಶೋಭಾಯಮಾನವಾಗಿ ಕುಳಿತು ಚರ್ಚಿಸುತ್ತಿದ್ದನು.

ರಾಜಮನೆತನದ ಹೆಣ್ಣು ಮಕ್ಕಳಾದರೂ ರಾಜಾಡಳಿತಗಳ ವಿಷಯಗಳಿಗಿಂತ ಸ್ತ್ರೀಯರ ಮೊದಲ ಆದ್ಯತೆ ತಮ್ಮ ಬದುಕಿನತ್ತ, ರಾಜನ ಪ್ರಥಮ ಆದ್ಯತೆ ಆಡಳಿತದತ್ತ ಎಂಬುದನ್ನು ಇಲ್ಲಿ ಕಾಣಬಹುದಾಗಿದೆ. ಇದು ಈ

ಕಾವ್ಯದುದ್ದಕ್ಕೂ ಎರಡೂ ಪಾತ್ರಗಳಲ್ಲಿ ಎದ್ದು ಕಾಣುವ ಗುಣಗಳಾಗಿ ವರ್ತಿಸುವುದನ್ನು ಗಮನಿಸಬಹುದಾಗಿದೆ.

2. ಗೌಳ ವಂಗ ಕಳಿಂಗ ಕುಂತಳ
ಚೋಳ ಬರ್ಬರ ಸಿಂಧು ಕೇರಳ
ಲಾಳ ಮಗಧ ವರಾಳ ಸೌರಾಷ್ಟ್ರಾದಿ ಭೂಮಿಪರ
ಬಾಳೆಯರ ಮಂತ್ರಿಗಳ ವೀರಭ
ಟಾಳಿ ನಟ ಗಾಯಕರ ಕವಿಗಳ
ಜಾಲ ಸಂದೋಹದಲಿ ಮೆರೆದುದು ನೃಪತಿಯಾಸ್ಥಾನ

ಈ ಪದ್ಯದ ಪೂರ್ವಾರ್ಧದಲ್ಲಿ ಕವಿ ವಿವಿಧ ರಾಜಮನೆತನಗಳನ್ನು ಪಟ್ಟಿ ಮಾಡಿದ್ದಾನೆ. ಇಡೀ ಪದ್ಯವು ರಾಜನ ರಾಜ್ಯ ನಿರ್ವಹಣಾ ವ್ಯವಸ್ಥೆಯ ಒಂದು ನೋಟವನ್ನು ನೀಡುತ್ತದೆ. ಗೌಳ, ವಂಗ, ಕಳಿಂಗ, ಕುಂತಳ, ಚೋಳ, ಬರ್ಬರ, ಸಿಂಧು, ಕೇರಳ, ಲಾಳ, ಮಗಧ, ವರಾಳ, = ಸೌರಾಷ್ಟ್ರ + ಆದಿ = ಸೌರಾಷ್ಟ್ರವೇ ಮೊದಲಾದ; ಭೂಮಿ + ಪ + ರ = ಭೂಮಿಯನ್ನು ಪಾಲಿಸುವ = ರಾಜಾಧಿ ರಾಜರ; ಬಾಳೆಯರ = ಸ್ತ್ರೀಯರ; ಮಂತ್ರಿಗಳ = ಸಚಿವರುಗಳ; ವೀರ + ಭಟ + ಆಳಿ = ವೀರಾಧಿವೀರರ ಸಮೂಹದ; ನಟ = ನಟರು; ಗಾಯಕ = ಹಾಡುಗಾರರು; ಕವಿಗಳ = ಕವಿಗಳು; ಜಾಲ ಸಂದೋಹದಲಿ = ಗುಂಪುಗಳೆಲ್ಲದರ ಸಮೂಹದಲ್ಲಿ; ಮೆರೆದುದು = ಶೋಭಾಯಮಾನವಾಗಿತ್ತು; ನೃ + ಪತಿಯ + ಆಸ್ಥಾನ = ಪ್ರಜೆಗಳ ಒಡೆಯನಾದ ನಳಮಹಾರಾಜನ ಆಸ್ಥಾನ.

ನಳಮಹಾರಾಜನು ಓಲಗಗೊಟ್ಟಿರುವ ದೃಶ್ಯವನ್ನು ಈ ಪದ್ಯ ವಿವರಿಸುತ್ತದೆ. ಅವನ ಆಸ್ಥಾನದಲ್ಲಿ ಹಲವಾರು ಪ್ರತಿಷ್ಠಿತ ರಾಜಮನೆತನಗಳಾದ ಗೌಳ, ವಂಗ, ಕಳಿಂಗ, ಕುಂತಳ, ಚೋಳ, ಬರ್ಬರ, ಸಿಂಧು, ಕೇರಳ, ಲಾಳ, ಮಗದ, ವರಾಳ, ಸೌರಾಷ್ಟ್ರ ಮುಂತಾದ ರಾಜಾಧಿರಾಜರು, ವೀರ ಸೈನಿಕರು, ವಿವಿಧ ವರ್ಗದ ಮಹಿಳಾ ಸಮೂಹಗಳು ತುಂಬಿ ಸಭೆಯು ಶೋಭಾಯಮಾನವಾಗಿತ್ತು.

ಸಾಮಾನ್ಯವಾಗಿ ಪ್ರಾಚೀನ ಕನ್ನಡ ಕಾವ್ಯಗಳು ರಾಜನ ಆಸ್ಥಾನವನ್ನು ಹೀಗೆ ವಿವಿಧ ವರ್ಗದ ಜನಸಮೂಹದಿಂದ ಕೂಡಿರುವಂತೆ ವರ್ಣಿಸುವುದು ವಾಡಿಕೆ.

ನಟರು, ಗಾಯಕರು, ಕವಿಗಳು, ಸಾಮಾನ್ಯ ಜನರು ಮಹಿಳೆಯರೂ ಸೇರಿದಂತೆ ಆಸ್ಥಾನವು ತುಂಬಿರುವುದು ರಾಜನ ಆಳ್ವಿಕೆಯಲ್ಲಿಯ ಸಾಂಸ್ಕೃತಿಕ ಹಿರಿಮೆಯನ್ನು ಸಾರುವ ಪ್ರತಿಷ್ಠಿತ ಸಂಗತಿಯೆಂಬಂತೆ ಕವಿಗಳು ನಿರ್ವಹಿಸುವುದು ಕಂಡುಬರುತ್ತದೆ.

3. ಆ ಸಮಯದಲಿ ಬಂದನಲ್ಲಿಗೆ
ದೇಶಯಾತ್ರಿಕ ಭೂಸುರನೊಳವ
ನೀಶ ಕೇಳಿದನಿಳೆಯೊಳೇನುಂಟತಿ ವಿಚಿತ್ರವೆನೆ
ಭೂಸುರೋತ್ತಮನೆಂದನೆಲೆ ಧರ
ಣೀಶ ಕೇಳು ವಿದರ್ಭನಗರದೊ
ಳೇಸು ಪುಣ್ಯೋದಯದಿ ಪಡೆದನೊ ಭೀಮನೃಪ ಸುತೆಯ

ಆ ಸಮಯದಲ್ಲಿ = ರಾಜನು ಓಲಗಗೊಟ್ಟಿರುವಂತಹ ಸಂದರ್ಭದಲ್ಲಿ; ಬಂದನಲ್ಲಿಗೆ = ಅಲ್ಲಿಗೆ ಬಂದನು; ದೇಶಯಾತ್ರಿಕ = ದೇಶಸಂಚಾರ ಮಾಡುವವನಾದ; ಭೂಸುರನೊಳ್ + ಅವನಿ + ಈಶ = ಭೂಮಿಯಲ್ಲಿ ದೇವಸಮಾನನೆಂದೆನಿಸುವ ಬ್ರಾಹ್ಮಣನಲ್ಲಿ, ದೊರೆಯಾದ ನಳನು; ಕೇಳಿದನು + ಇಳೆಯೊಳಗೆ + ಏನುಂಟು + ಅತಿ + ವಿಚಿತ್ರವು + ಎನೆ + ಇಂದಿನ ಈ ಸುತ್ತಿನ ಭೂಮಂಡಲದಲ್ಲಿ ಅತ್ಯಂತ ವಿಶೇಷವಾದದ್ದೇನಾದರೂ ಇದೆಯೇ ಎಂದು ಕೇಳಿದನು; ಭೂಸುರ + ಉತ್ತಮನ್ + ಎಂದನ್ + ಎಲೆ = ಬ್ರಾಹ್ಮಣನು ಹೇಳಿದನು ಎಲೈ ; ಧರಣಿ + ಈಶ = ಭೂಪತಿಯೇ; ಕೇಳು = ಆಲಿಸು; ವಿದರ್ಭನಗರದೊಳು + ಏಸು = ವಿದರ್ಭನಗರದಲ್ಲಿ ಎಷ್ಟು; ಪುಣ್ಯ + ಉದಯದಿ = ಪುಣ್ಯದಿಂದ; ಪಡೆದನೋ = ಹೊಂದಿದನೋ; ಭೀಮನೃಪ = ಭೀಮಮಹಾರಾಜನು; ಸುತೆಯ = ತನ್ನ ಮಗಳನ್ನು.

ಹೀಗೆ ರಾಜನು ಒಡ್ಡೋಲಗದಲ್ಲಿ ಚರ್ಚೆಯಲ್ಲಿದ್ದ ಸಂದರ್ಭದಲ್ಲಿ ಅಲ್ಲಿಗೆ ಬಂದಿದ್ದ ಯಾತ್ರಾರ್ಥಿ ಬ್ರಾಹ್ಮಣನೊಬ್ಬನನ್ನು ನಳಮಹಾರಾಜನು ಪ್ರಾಸಂಗಿಕವಾಗಿ 'ಈ ಭೂಮಂಡಲದಲ್ಲಿ ವಿಶೇಷವೇನಾದರೂ ಕಂಡಿರೇನು' ಎಂದು ಕೇಳಲು ಆ ಬ್ರಾಹ್ಮಣೋತ್ತಮನು 'ಧರಣೀಶನೇ ಕೇಳು, ವಿದರ್ಭನಗರದ ದೊರೆ ಭೀಮನೃಪಾಲ

ನಿಗೆ ಒಬ್ಬ ಮಗಳಿದ್ದಾಳೆ. ಅಂಥಹ ಮಗಳನ್ನು ಪಡೆಯಲು ಅವನು ಅದೆಷ್ಟು ಪುಣ್ಯ ಮಾಡಿದ್ದನೋ!' ಎಂದನು.

4. ಅವಳ ರೂಪಗುಣಾತಿಶಯಗಳ
ನೆವಗೆ ಬಣ್ಣಿಸಲಳವೆ ಕೇಳಾ
ಯುವತಿ ಲೋಕದ ಸತಿಯ ಬಗೆಯಂತಲ್ಲ ಭಾವಿಸಲು
ಪ್ರವಿಮಲಾಕಾರದಲಿ ಮೃದುತರ
ಸವಿನುಡಿಯ ಸಂಭಾಷಣೆಗಳಲಿ
ಭುವನದೊಳು ನಾಕಾಣೆ ದಮಯಂತಿಗೆ ಸಮಾನರನು

ಅವಳ = ಭೀಮನೃಪಾಲನ ಮಗಳ; ರೂಪ = ಚೆಲುವು; ಗುಣ + ಅತಿಶಯಗಳನ್ + ಎವಗೆ = ವಿಶಿಷ್ಟವೆನಿಸುವಂತಹ ಸ್ವಭಾವ, ನಡವಳಿಕೆ ಮುಂತಾದುವುಗಳನ್ನು ನಮಗೆ; ಬಣ್ಣಿಸಲ್ + ಅಳವೆ = ಬಣ್ಣಿಸಲು ಸಾಧ್ಯವೇ?; ಕೇಳ್+ಆ + ಯುವತಿ; ಕೇಳು ಆ ತರುಣಿಯು; ಲೋಕದ = ಜನಸಾಮಾನ್ಯರ; ಸತಿಯ=ಸ್ತ್ರೀಯರ; ಬಗೆಯಂತಲ್ಲ = ರೀತಿಯಲ್ಲ; ಭಾವಿಸಲು = ತಿಳಿದುಕೊಳ್ಳಲು; ಪ್ರ= ಶ್ರೇಷ್ಠವಾದ, ವಿಮಲ + ಆಕಾರದಲಿ = ಕಳಂಕವಿಲ್ಲದ ಆಕಾರದಲ್ಲಿ; ಮೃದುತರ = ಮೆಲ್ಲನೆಯ, ನಮ್ರವಾದ; ಸವಿ ನುಡಿಯ = ಮೃದುವಾದ ಮಾತುಗಳ; ಸಂಭಾಷಣೆಗಳಲಿ = ಇತರರೊಂದಿಗೆ ಮಾತನಾಡುವ ರೀತಿಗಳಲ್ಲಿ; ಭುವನದೊಳು = ಈ ಭೂಮಿಯಲ್ಲಿ; ನಾಕಾಣೆ = ನಾನು ಕಂಡಿಲ್ಲ; ದಮಯಂತಿಗೆ = ಭೀಮನೃಪ ಕುಮಾರಿಯಾದ ದಮಯಂತಿಗೆ; ಸಮಾನರನು = ಸರಿಸಾಟಿ ಯಾಗಿರುವಂಥವರನ್ನು.

ಭೀಮ ನೃಪಾಲನ ಮಗಳಾದ ದಮಯಂತಿಯ ರೂಪ ಗುಣಾತಿಶಯ ಗಳನ್ನು ಇಲ್ಲಿ ಕವಿ ಬ್ರಾಹ್ಮಣನ ಮುಖಾಂತರ ವರ್ಣಿಸುತ್ತಿದ್ದಾನೆ. ನಳ ಚಕ್ರವರ್ತಿಯು ಓಲಗದಲ್ಲಿ ಅರಮನೆಯ ಪರಿವಾರದವರು, ವಿದ್ವಾಂಸರು, ಹಾಗೂ ಸಾಮಾಜಿಕ ರೊಂದಿಗೆ ಚರ್ಚೆಯಲ್ಲಿ ತೊಡಗಿದ್ದ ಸಂದರ್ಭದಲ್ಲಿ, ಪ್ರಾಸಂಗಿಕವಾಗಿ ಅಲ್ಲಿ ನೆರೆದಿದ್ದವರಲ್ಲೊಬ್ಬನಾದ ಯಾತ್ರಾರ್ಥಿ ಬ್ರಾಹ್ಮಣನೋತ್ತಮನನ್ನು ಉದ್ದೇಶಿಸಿ, ಈ ನನ್ನ ದೇಶದೊಳಗೆ 'ಈ ಭೂಮಂಡಲದೊಳಗೆ ವಿಶೇಷವಾದದ್ದೇನಾದರೂ

ಕಂಡಿರೇನು?' ಎಂದು ಪ್ರಶ್ನಿಸಿದಾಗ ಅವನು ವಿದರ್ಭನಗರದ ರಾಜನಾದ ಭೀಮನೃಪಾಲನ ಮಗಳನ್ನು ಕುರಿತು ಹೇಳುತ್ತಾನೆ. ಅಂತಹ ಮಧುರ ನುಡಿಗಳ, ನಯ ವಿನಯದ ನಡವಳಿಕೆಗಳ, ಕುಂದಿಲ್ಲದ ದೇಹ ಸೌಂದರ್ಯದ ವಿಶೇಷತೆಯು ಬೇರೆ ಸಾಮಾನ್ಯ ಸ್ತ್ರೀಯರಂತಲ್ಲ. ಅವಳಿಗೆ ಸಮಾನರನ್ನು ಈ ಭೂಮಿಯಲ್ಲಿ ಎಲ್ಲೂ ನಾನು ಕಂಡಿಲ್ಲ ಅದನ್ನು ವರ್ಣಿಸಲು ನನ್ನಂಥವನಿಗೆ ಸಾಧ್ಯವಿಲ್ಲ ಎಂದು ಹೇಳಿದನು.

5. ಮುರಹರನ ನಿಜಸೊಸೆಯ ರೂಪಂ
ತಿರಲಿ ಚಂದ್ರನ ಮಗಳ ಚೆಲುವಂ
ತಿರಲಿ ಮೈನಾಕನ ಸಹೋದರಿಯಂದವಂತಿರಲಿ
ಶರಧಿತನುಜೆಯ ಸೌಂದರಿಯವನು
ಮರಸಿತೆಂಬುದು ಲೋಕದೊಳಗಾ
ಸರಸಿಜಾಕ್ಷಿಯ ಬಗೆಗೆ ಸರಿಯಿಲ್ಲರಸ ಕೇಳೆಂದ

ಮುರಹರನ = ಮುರನೆಂಬ ರಾಕ್ಷಸನನ್ನು ಕೊಂದವನಾದ ಶ್ರೀಕೃಷ್ಣನ; ನಿಜಸೊಸೆಯ = ಮಗನಾದ ಮನ್ಮಥನನ್ನು ವರಿಸಿದ ರತಿಯ; ರೂಪಂತಿರಲಿ = ರೂಪು ಹಾಗಿರಲಿ; ಚಂದ್ರನ ಮಗಳ = ಚಂದ್ರನ ಮಗಳಾದ ಭದ್ರಳ; ಚೆಲುವಂತಿರಲಿ = ಸೌಂದರ್ಯವು ಹಾಗಿರಲಿ; ಮೈನಾಕನ = ಹಿಮವಂತ ಮತ್ತು ಮೇನಾದೇವಿಯರ ಮಗನ; ಸಹ + ಉದರಿಯ + ಅಂದವು + ಅಂತಿರಲಿ = ಒಡಹುಟ್ಟಿದವಳಾದ ಪಾರ್ವತಿಯ ಅಂದವು ಹಾಗಿರಲಿ; ಶರಧಿ = ಸಮುದ್ರನ; ತನುಜೆಯ = ಮಗಳಾದ ಲಕ್ಷ್ಮಿಯ; ಸೌಂದರ್ಯವನು = ರೂಪವನ್ನು; ಮರೆಸಿತೆಂಬುದು = ಮರೆಮಾಡಿತು ಎಂಬುದು; ಲೋಕದೊಳಗೆ + ಆ = ಈ ಲೋಕದಲ್ಲಿ; ಸರಸಿ + ಜ + ಅಕ್ಷಿ = ಸರೋವರದಲ್ಲಿ ಹುಟ್ಟಿದ ಕಮಲದಂತೆ ಕಣ್ಣುಳ್ಳವಳ; ಬಗೆಗೆ = ಕುರಿತು; ಇಲ್ಲರಸ = ಸರಿಗಟ್ಟುವವರು ಯಾರೂ ಇಲ್ಲ ಅರಸನೇ; ಕೇಳೆಂದ = ಕೇಳು ಎಂದ.

ದಮಯಂತಿಯ ಸೌಂದರ್ಯವು ಮುರಹರನೆಂಬ ರಾಕ್ಷಸನನ್ನು ಕೊಂದ ಶ್ರೀಕೃಷ್ಣನ ಮಗನಾದ ಮನ್ಮಥನ ಪತ್ನಿ ರತಿಯ ರೂಪವನ್ನು, ಚೆಲುವಿಗೆ ಹೆಸರಾದ

ಚಂದ್ರನ ಮಗಳಾದ ಭದ್ರೆಯ ರೂಪವನ್ನು, ಹಿಮವಂತ–ಮೇನಾದೇವಿಯರ ಮಗನಾದ ಮೈನಾಕನ ಸಹೋದರಿ ಪಾರ್ವತಿಯ ರೂಪವನ್ನು, ಸಮುದ್ರದಲ್ಲಿ ಹುಟ್ಟಿದ ಲಕ್ಷ್ಮಿಯ ರೂಪವನ್ನು ಮೀರಿಸುವಂತೆ ಅತಿಶಯವಾಗಿತ್ತು. ಈ ಲೋಕದಲ್ಲಿ, ಸರೋವರದಲ್ಲಿ ಹುಟ್ಟಿದ ಕಮಲದಂತೆ ಕಣ್ಣುಳ್ಳವಳಾದ ಆ ದಮಯಂತಿಯ ರೂಪಕ್ಕೆ ಸರಿಸಮನಾದವರು ಯಾರೂ ಇಲ್ಲ ಅರಸನೇ ಕೇಳು ಎಂದು ಬ್ರಾಹ್ಮಣನು ಮತ್ತೂ ವಿಶೇಷವಾಗಿ ದಮಯಂತಿಯ ಕುರಿತು ವರ್ಣಿಸಿದನು.

ಈ ಪದ್ಯದಲ್ಲಿ ಮಾನವ ಸ್ತ್ರೀಯಾದ ದಮಯಂತಿಯ ರೂಪ ಲಾವಣ್ಯಗಳ ಅತಿಶಯತೆಯನ್ನು, ಸೌಂದರ್ಯಕ್ಕೆ ನಿದರ್ಶನಗಳಾಗಿರುವ ಇತರ ಪೌರಾಣಿಕ ಸ್ತ್ರೀಯರ ದೈವಿಕ ಸೌಂದರ್ಯಕ್ಕಿಂತ ಮಿಗಿಲಾಗಿ ಎತ್ತಿ ಹಿಡಿಯುವ ಪ್ರಯತ್ನವಿದೆ.

6. ಮಿಸುನಿಯೋಲೆಯ ಢಾಳ ಕದಪಿನೊ
ಳೆಸೆಯೆ ಮೇಲುದು ಜಾರೆ ಕುಚಭರ
ಕುಸಿಯೆ ನಡುವಲ್ಲಾಡೆ ಮಸಗಿದ ಮಂದಹಾಸದಲಿ
ಎಸೆವ ಸೋರ್ಮುಡಿ ಭಾರದಲಿ ಬಾ
ಗಿಸಿದ ಕೊರಳಿನ ಕೈಯ ವೀಣೆಯ
ಬಿಸರುಹಾಕ್ಷಿಯ ಸೊಬಗ ಬಣ್ಣಿಸಲರಿಯೆ ನಾನೆಂದ

ಮಿಸುನಿಯ + ಓಲೆಯ = ಕಿವಿಯ ಚಿನ್ನಾಭರಣದ; ಢಾಳ = ಕಾಂತಿಯು; ಕದಪಿನೊಳು + ಎಸೆಯೆ = ಕೆನ್ನೆಯಲ್ಲಿ ಪ್ರತಿಫಲಿಸಿ, ಶೋಭಿಸುತ್ತಿರಲು; ಮೇಲುದು = ಎದೆಯ ಮೇಲೆ ಹೊದ್ದ ಸೆರಗು; ಜಾರೆ = ಕೆಳಗೆ ಸರಿಯಲು; ಕುಚಭಾರ = ತುಂಬಿದ ಸ್ತನಗಳು ಭಾರದಿಂದ; ಕುಸಿಯೆ = ಕೆಳಗೆ ಜರಿಯಲು; ನಡುವಲ್ಲಾಡೆ = ತೆಳುವಾದ ಸೊಂಟವು ಅಲುಗಾಡಲು; ಮಸಗಿದ = ಅರಳಿದ; ಮಂದಹಾಸದಲಿ = ಮೆದುನಗೆಯಲ್ಲಿ; ಎಸೆವ = ಶೋಭಿಸುವ; ಸೋರು + ಮುಡಿ = ಬಿಚ್ಚಿ ಹರಡಿಕೊಂಡ ಕೂದಲ; ಭಾರದಲಿ = ಭಾರದಿಂದ; ಬಾಗಿಸಿದ = ಕೆಳಗೆ ತಗ್ಗಿದ; ಕೊರಳಿನ = ಕತ್ತಿನ; ಕೈಯ = ಕೈಯ್ಯಲ್ಲಿರುವ; ವೀಣೆಯ = ವೀಣಾ ವಾದ್ಯದ; ಬಿಸರುಹಾಕ್ಷಿಯ = ಬಿಸರುಹ + ಅಕ್ಷಿಯ = ನೀರಿನಲ್ಲಿ ಹುಟ್ಟಿರುವ

ತಾವರೆಯಂತಹ ಕಣ್ಣುಳ್ಳವಳ; ಸೊಬಗ = ಚೆಲುವಿಕೆಯನ್ನು; ಬಣ್ಣಿಸಲು + ಅರಿಯೆ = ವರ್ಣಿಸಲು ತಿಳಿಯೆನು; ನಾನು + ಎಂದ = ನಾನೆಂದ.

ಭೀಮನೃಪಾಲನ ಮಗಳಾದ ದಮಯಂತಿಯ ಚೆಲುವಿಕೆಯನ್ನು ಕುರಿತು ಬ್ರಾಹ್ಮಣನು ಮತ್ತೆ ಮತ್ತೆ ವಿಶೇಷವಾಗಿ ಮೆಚ್ಚುಗೆಯ ಮಾತುಗಳನ್ನಾಡುತ್ತಿದ್ದಾನೆ. "ಅವಳ ಕಿವಿಯ ಆಭರಣದ ಕಾಂತಿಯು ಅವಳ ಕೆನ್ನೆಯ ಮೇಲೆ ಮನೋಹರವಾಗಿ ಪ್ರತಿಫಲಿಸುತ್ತಿತ್ತು. ಜಾರಿದ ಮೇಲುದವೂ, ಸ್ತನಭಾರವೂ, ಅದರಿಂದ ಕುಸಿದು ಬಳುಕುವ ಬಡನಡುವೂ, ಬಿಚ್ಚಿ ಹರಡಿದ ಕೇಶರಾಶಿಯೂ, ಮುಖದಲ್ಲಿ ಅರಳಿದ ಮೆಲುನಗೆಯೂ, ಕತ್ತನ್ನು ಬಾಗಿಸಿ ವೀಣೆಯನ್ನು ಹಿಡಿದ ಸೊಬಗೂ ಅವಳ ಚೆಲುವಿಕೆಯನ್ನು ಬೇರೆ ಬೇರೆ ಕೋನಗಳಿಂದ ಹೆಚ್ಚಿಸುತ್ತಿದ್ದವು. ಅದನ್ನು ವರ್ಣಿಸಲು ನನ್ನಿಂದ ಸಾಧ್ಯವೇ" ಎಂದು ಬ್ರಾಹ್ಮಣನು ದಮಯಂತಿಯ ಚೆಲುವಿನ ವಿಶೇಷತೆಯನ್ನು ಸಭೆಯಲ್ಲಿ ತೆರೆದಿಟ್ಟನು.

ಪ್ರಾಚೀನ ಕಾವ್ಯಗಳಲ್ಲಿ ಸ್ತ್ರೀಯ ದೇಹ ಸೌಂದರ್ಯವನ್ನು ಪಠ್ಯವಸ್ತುವಿನ ಪೂರಕಾಂಶವಾಗಿ ವರ್ಣಿಸುವುದು ವಾಡಿಕೆ. ಆದರೆ, ಅದರ ಉದ್ದೇಶ ಅಷ್ಟೇ ಆಗಿರುತ್ತಿರಲಿಲ್ಲ. ಪ್ರಾಚೀನ ಭಾರತ ಸಮಾಜವು ಸ್ತ್ರೀಯ ಭೌತಿಕ ಆರೋಗ್ಯ ಮತ್ತು ಸೌಂದರ್ಯ ನಿರ್ವಹಣೆಯ ಬಗ್ಗೆ ಎಷ್ಟು ಮುತುವರ್ಜಿಯಿಂದ ಗಮನಿಸುತ್ತಿತ್ತು ಎಂಬುದನ್ನು, ದೇಹ ಸೌಷ್ಟವವನ್ನು ಕಾಪಾಡಿಕೊಳ್ಳುವುದೂ ಜೀವನದ ಶಿಸ್ತಿನ ಒಂದು ಭಾಗವಾಗಿ ಪರಿಗಣಿಸಿತ್ತು ಎಂಬುದನ್ನು ಈ ವರ್ಣನೆಗಳು ಎತ್ತಿ ತೋರಿಸುತ್ತವೆ.

7. ಹೇಳುತಿರೆ ನುಡಿನುಡಿಗೆ ಮೆಚ್ಚುತ
ಕೇಳಿ ತಲೆದೂಗಿದನು ನೈಷಧ
ನಾಲಿಗಳಿಗೆ ಸರೋಜಮುಖಿ ಗೋಚರಿಸಿದಂತಾಗೆ
ಬಾಲಿಕೆಯ ಮೋಹಿಸಿದ ಪುಷ್ಪಶ
ರಾಳಿಯಲಿ ಮನನೊಂದು ಶಿವ ಶಿವ
ಲೋಲಲೋಚನೆಯೆಂತು ತನಗಹಳೆನುತ ಚಿಂತಿಸಿದ

ಹೇಳುತಿರೆ = ಹೇಳುತ್ತಿರಲು; ನುಡಿನುಡಿಗೆ = ಪ್ರತಿ ಮಾತು ಮಾತಿಗೂ; ಮೆಚ್ಚುತ = ಹೌದೆಂದು ಒಪ್ಪುತ್ತ; ಕೇಳಿ = ವರ್ಣನೆಗಳನ್ನು ಆಲಿಸಿ; ತಲೆದೂಗಿದನು

= ಸಮ್ಮತಿಸೂಚಕವಾಗಿ ತಲೆ ಆಡಿಸಿದನು; ನೈಷಧನ + ಆಲಿಗಳಿಗೆ = ನಿಷಧ ರಾಜನಾದ ನಳಚಕ್ರವರ್ತಿಯ ಕಣ್ಣುಗಳಿಗೆ; ಸರೋಜಮುಖಿ = ಸರಸ್ಸಿನಲ್ಲಿ ಹುಟ್ಟಿದ ತಾವರೆಯಂಥ ಚೆಲುವೆಯ; ಗೋಚರಿಸಿದಂತೆ + ಆಗೆ = ಕಣ್ಣಿಗೆ ನಿಚ್ಚಳವಾಗಿ ಕಾಣಿಸಿದಂತಾಗಲು; ಬಾಲಿಕೆಯ = ಕೋಮಲ ವಯಸ್ಸಿನ ದಮಯಂತಿಯನ್ನು; ಮೋಹಿಸಿದ = ಆಸೆಪಟ್ಟನು; ಪುಷ್ಪಶರ + ಆಳಿಯಲಿ = ಮನ್ಮಥನ ಪುಷ್ಪಬಾಣಗಳ ಸಮೂಹದಿಂದ; ಮನನೊಂದು = ತಪ್ತನಾಗಿ; ಶಿವಶಿವ = ಶಿವಶಿವಾ ಎಂದು ಉದ್ಗರಿಸಿ; ಲೋಲ + ಲೋಚನೆ + ಎಂತು = ಚಂಚಲವಾಗಿ ಚಲಿಸುವ ಕಣ್ಣುಗಳುಳ್ಳ ಚೆಲುವೆಯು ಹೇಗೆ; ತನಗೆ + ಅಹಳು + ಎನುತ = ತನಗೆ ದೊರಕುತ್ತಾಳೆ ಎಂದು; ಚಿಂತಿಸಿದ = ಯೋಚನಾಪರನಾದನು.

ಹೀಗೆ ಬ್ರಾಹ್ಮಣನು ದಮಯಂತಿಯ ರೂಪ ಲಾವಣ್ಯ ವೈಶಿಷ್ಟ್ಯಗಳನ್ನು ವರ್ಣಿಸುತ್ತಿರಲು, ಅದನ್ನು ಆಲಿಸುತ್ತ, ಪ್ರತಿಮಾತಿಗೂ ಹೌದು ಹೌದೆಂದು ಸಮ್ಮತಿಸಿ ತಲೆದೂಗುತ್ತ ಇದ್ದ ನಿಷಧರಾಜನ ಕಣ್ಣಾಲಿಗಳಲ್ಲಿ ಕಮಲಮುಖಿಯಾದ ದಮಯಂತಿಯ ರೂಪವು ನಿಚ್ಚಳವಾಗಿ ತುಂಬಿಕೊಂಡಿತು. ಕೋಮಲೆ ದಮಯಂತಿಯನ್ನು ಮನಸ್ಸಿನಲ್ಲೇ ಮೋಹಿಸಿ ಅವಳನ್ನು ಹೊಂದಲು ಆಸೆಪಟ್ಟನು. ಶಿವಶಿವಾ! ಎಂದು ಉದ್ಗರಿಸುತ್ತ, ಮನ್ಮಥನ ಪುಷ್ಪಬಾಣದಿಂದ ತಪ್ತನಾಗಿ, ಇಂತಹ ಲೋಲಲೋಚನೆಯು ತನಗೆ ಹೇಗೆ ದೊರಕುತ್ತಾಳೆ ಎಂಬುದರ ಕುರಿತು ಚಿಂತಿಸಲಾರಂಭಿಸಿದನು.

8. ವನಿತೆ ಗುಣಗಳೊಳೊಂದನೊಂದನು
ಮನದೊಳಗೆ ಸವಿಮಾಡಿ ತರುಣಿಯ
ನೆನೆದು ಹೊಂಪುಳಿವೋಗಿ ವಿರಹದಿ ಮದನಗೀಡಾಗಿ
ಘನವಿರಹದಲಿ ಕಾಯಕುಂದಿದ
ಜನಪ ನಳನಿರೆ ಬೇಂಟೆಕಾರರ
ಜನನಿವಹದಿಂ ಬಂದರಾ ಸಮಯದಲಿ ವನಚರರು

ವನಿತೆ = ದಮಯಂತಿಯ; ಗುಣಗಳೊಳ್ + ಒಂದೊಂದನು = ಗುಣ ಗಳಲ್ಲಿ ಒಂದೊಂದನ್ನು; ಮನದೊಳಗೆ = ಮನಸ್ಸಿನಲ್ಲಿ; ಸವಿಮಾಡಿ = ತನಗೆ

ಇಷ್ಟವಾಗುವಂತೆ; ತರುಣಿಯ = ಹರೆಯದ ಆ ಹೆಣ್ಣಿನ ಸೌಂದರ್ಯವನ್ನು; ನೆನೆದು = ಮೆಲುಕು ಹಾಕಿ; ಹೊಂಪುಳಿವೋಗಿ = ರೋಮಾಂಚಿತನಾಗಿ; ವಿರಹದಿ = ಅಗಲಿಕೆಯಿಂದ; ಮದನಗೆ + ಈಡಾಗಿ = ಮನ್ಮಥನ ಮೋಹಪಾಶಕ್ಕೆ ಒಳಗಾಗಿ; ಘನ = ವಿಪರೀತವಾಗಿ; ವಿರಹದಲಿ = ಅಗಲಿಕೆಯ ನೋವಿನಲ್ಲಿ; ಕಾಯ = ಶರೀರ; ಕುಂದಿದ = ಕ್ಷೀಣಿಸಿದ; ಜನಪ = ಜನಾಧಿಪತಿಯಾದ ನಳನಿರೆ = ನಳಮಹಾರಾಜನಿರಲು; ಬೇಂಟೆಕಾರರ ಬೇಟೆಯಾಡುವ ಶಬರರ; ಜನನಿವಹದಿಂ = ಜನರು ಗುಂಪಿನೊಂದಿಗೆ; ಬಂದರು + ಆ ಸಮಯದಲಿ = ಬಂದರು ಆ ವೇಳೆ ಯಲ್ಲಿ; ವನಚರರು = ವನದಲ್ಲಿ ವಾಸಮಾಡುವಂತಹ ಜನರು.

ದಮಯಂತಿಯ ರೂಪು ಲಾವಣ್ಯಗಳ, ಗುಣ ಸ್ವಭಾವಗಳ ವರ್ಣನೆ ಯನ್ನು ಬ್ರಾಹ್ಮಣೋತ್ತಮನ ಬಾಯಿಯಿಂದ ಕೇಳಿದ ನಂತರ ನಳಮಹಾರಾಜನಿಗೆ ಅದೇ ಮನಸ್ಸಿನಲ್ಲಿ ಅಚ್ಚೊತ್ತಿದಂತಾಗಿ, ಅವಳ ಒಂದೊಂದೇ ಗುಣಗಳನ್ನು ಕುರಿತು ಮನಸ್ಸಿನೊಳಗೇ ಮೆಲುಕು ಹಾಕಲಾರಂಭಿಸಿದನು, ತತ್ ಪ್ರಯುಕ್ತ ರೋಮಾಂಚಿತನಾದನು. ಮದನ ತಾಪ ಬಾಧಿಸಲಾರಂಭಿಸಿ, ದಮಯಂತಿಯನ್ನು ಅಗಲಲಾರದಂತಹ ವಿರಹತಾಪಕ್ಕೆ ಒಳಗಾದನು. ಕ್ರಮೇಣ ಅದೇ ತಾಪದಲ್ಲಿ ಶರೀರವು ಕ್ಷೀಣಿಸಿತು. ಹೀಗಿರುವಾಗ ಕಾಡಿನಲ್ಲಿ ವಾಸಮಾಡುವ ಬೇಟೆಗಾರರು ಅವನನ್ನು ಕಾಣಲು ತಂಡ ತಂಡವಾಗಿ ಬಂದರು.

ಕಾವ್ಯಗಳು ಗಂಡು ಹೆಣ್ಣಿನ ನಡುವಿನ ತೀವ್ರಾಕರ್ಷಣೆಯನ್ನು ಕಾಮಜ್ವರ ವೆಂದು ಗುರುತಿಸುವುದುಂಟು. ಜ್ವರವು ಹೇಗೆ ದೇಹದ ತಾಪವನ್ನು ಅತ್ಯುಗ್ರವಾಗಿಸುವ ಮೂಲಕ ಆರೋಗ್ಯಕ್ಕೆ ಕಂಟಕವಾಗಬಲ್ಲುದೋ ಹಾಗೆಯೇ ತೀವ್ರವಾದ ಕಾಮವೂ ಸಹ. ಪರಸ್ಪರ ಸೌಂದರ್ಯ ವರ್ಣನೆಯನ್ನು ಕೇಳಿದ ಮಾತ್ರದಿಂದಲೇ ತೀವ್ರ ಕಾಮತಾಪಕ್ಕೆ ಒಳಗಾಗುವ ಕಾವ್ಯನಾಯಕ ನಾಯಿಕೆಯರನ್ನು ಚಿತ್ರಿಸುವ ಮೂಲಕ ಕಥೆಯ ಕುರಿತಂತೆ ವಾಚಕರಲ್ಲಿ ಆಸಕ್ತಿ ಮೂಡಿಸುವುದೂ ಒಂದು ಕಥಾತಂತ್ರ.

9. ಬಂದು ಫಲವಸ್ತುಗಳ ಕಾಣಿಕೆ
ಯಿಂದ ಕೈಮುಗಿದರಸ ಮೃಗಘನ

ವಿಂದು ಬೇಂಟೆಗೆ ಗಮಿಸಬೇಕೆನೆ ನೃಪತಿ ನಸುನಗುತ
ಇಂದು ವಿರಹವ ಕಳೆವಡಿದು ಲೇ
ಸೆಂದು ಶಬರರ ಕಳುಹಿಯೋಲಗ
ದಿಂದಲರಮನೆಗೆಯ್ದಲಸ್ತಾಂಬುಧಿಯೊಳಿನನಿಳಿದ

ಬಂದು = ಬೇಡರು ಬಂದು; ಫಲವಸ್ತುಗಳ = ಹಣ್ಣು ಮತ್ತು ಕಾಡಿನಲ್ಲಿ ದೊರೆಯುವ ಇತರ ಅರಣ್ಯೋತ್ಪನ್ನ ವಸ್ತುಗಳ; ಕಾಣಿಕೆಯಿಂದ = ಹಿರಿಯರನ್ನು ಕಾಣುವಾಗ ಭಕ್ತಿಗೌರವಗಳಿಂದ ಒಯ್ಯುವ ಉಡುಗೊರೆಗಳಿಂದ; ಕೈ ಮುಗಿದು + ಅರಸ = ಕೈಯನ್ನು ಮುಗಿದು ಅರಸನೇ; ಮೃಗಘನವು + ಇಂದು = ಇಂದು ಪ್ರಾಣಿಗಳ ಉಪಟಳವು ಹೆಚ್ಚಾಗಿವೆ; ಬೇಂಟೆಗೆ = ಬೇಟೆಗೆ; ಗಮಿಸಬೇಕು + ಎನೆ = ಹೊರಡಬೇಕು ಎಂದು ಹೇಳಲು; ನೃಪತಿ = ರಾಜನು; ನಸುನಗುತ = ಸಂತೋಷದ ನಗೆ ನಗುತ್ತ; ಇಂದು = ಈ ದಿನ; ವಿರಹವ = ಪ್ರೀತಿಯ ಅಗಲಿಕೆಯ ನೋವನ್ನು; ಕಳೆವಡಿದು = ಕಳೆದುಕೊಳ್ಳಲು; ಲೇಸೆಂದು = ಸರಿಯೆಂದು; ಶಬರರ = ಬೇಟೆಗಾರರನ್ನು; ಕಳುಹಿ + ಓಲಗದಿಂದಲಿ + ಅರಮನೆಗೆ + ಎಯ್ದಲು + ಅಸ್ತ + ಅಂಬುಧಿಯೊಳು + ಇನನು + ಇಳಿದ = ಕಳುಹಿಸಿ, ರಾಜ ಸಭೆಯಿಂದ ಅರಮನೆಗೆ ತೆರಳಲು, ಅಸ್ತಾಂಬುಧಿಯಲ್ಲಿ, ಅಂದರೆ ಪಶ್ಚಿಮ ದಿಕ್ಕಿನ ಸಮುದ್ರದಲ್ಲಿ ಸೂರ್ಯನು ಮುಳುಗಿದನು.

ಬೇಡರು ಮಹಾರಾಜನನ್ನು ಭೇಟಿಮಾಡಲು, ಮುಂಗಾಣಿಕೆಯಾಗಿ ಅರಣ್ಯ ದಲ್ಲಿ ತಮಗೆ ದೊರಕುವ ಹಣ್ಣು ಹಂಪಲುಗಳನ್ನು, ಇತರ ಅರಣ್ಯೋತ್ಪನ್ನ ವಸ್ತು ಗಳನ್ನು ತಂದು ರಾಜನಿಗೆ ಒಪ್ಪಿಸಿ, ಗೌರವಾದರಗಳಿಂದ ಕೈಮುಗಿದು, ಅರಸನೇ ಇಂದು ಅರಣ್ಯದಲ್ಲಿ ಪ್ರಾಣಿಗಳ ದೊಡ್ಡ ಬೇಟೆಯಿರುವುದರಿಂದ ತಾವು ದಯಮಾಡಿಸಬೇಕು ಎಂದು ವಿನಂತಿಸಿದ ಪ್ರಯುಕ್ತ ಅದಕ್ಕೆ ಸಮ್ಮತಿಸಿದನು. ತನ್ನ ವಿರಹ ವೇದನೆಯ ತಾಪವನ್ನು ಕೆಲಮಟ್ಟಿಗೆ ಈ ಸಂದರ್ಭವು ತಣಿಸಬಹುದೆಂಬ ದೂರಾಲೋಚನೆಯೂ ಇದ್ದುದರಿಂದ ಹಸನ್ಮುಖನಾಗಿ ಅವರನ್ನು ಬೀಳ್ಕೊಟ್ಟು ತಾನು ಅರಮನೆಗೆ ಹಿಂದಿರುಗಿದನು. ಅದೇ ಸಮಯಕ್ಕೆ ಸೂರ್ಯನೂ ಪಶ್ಚಿಮ ದಿಕ್ಕಿನಲ್ಲಿ ಮುಳುಗಿದನು.

ಸೂರ್ಯನು ಪಶ್ಚಿಮ ದಿಕ್ಕಿನ ಸಮುದ್ರದಲ್ಲಿ ಸಂಜೆ ಮುಳುಗಿ ಮರು ಬೆಳಗು ಪೂರ್ವದಲ್ಲಿ ಏಳುತ್ತಾನೆಂಬುದು ಪ್ರಾಚೀನ ಕಾಲದ ನಂಬಿಕೆ. ಅದನ್ನೇ ಕವಿ 'ಅಸ್ತಾಂಬುಧಿ', ಅಂದರೆ 'ಸೂರ್ಯನು ಅಸ್ತಮಿಸುವ ಸಮುದ್ರ' ಎಂಬ ರೂಪಕ ದಲ್ಲಿರಿಸಿದ್ದಾನೆ. ಇಂತಹ ಕಲ್ಪನೆಗಳು ವೈಜ್ಞಾನಿಕವಾಗಿ ಪೊಳ್ಳಾದರೂ ಕಾವ್ಯ ಸೌಂದ ರ್ಯಕ್ಕೆ ಪುಷ್ಟಿಕೊಡುವ ಕಾರಣ, 'ಕವಿಸಮಯ' ಗಳಾಗಿ ಸ್ವೀಕಾರಾರ್ಹವಾಗುತ್ತವೆ.

10. ನಳಿನಸಖನುದಯದಲಿ ನಳನೃಪ
ತಿಲಕ ಕರೆಸಿದ ಸಕಳದಳವನು
ಹೊಳೆವ ಖಡ್ಗಕಠಾರಿ ಮೊದಲಾದಖಿಳ ಕೈದುಗಳ
ಬಲುಭಟರು ಬೇಂಟೆಯಲಿ ನಾನಾ
ಬಲೆಗಳಂಟಿನ ಕೋಲು ಕಣ್ಣಿಯ
ಚಲಯುತರು ಸಂದಣಿಸಿ ಮೆರೆದುದು ಪುರದ ಬಾಹೆಯಲಿ

ನಳಿನಸಖನ + ಉದಯದಲಿ = ಕೆಂದಾವರೆಯ ಮಿತ್ರನಾದ ಸೂರ್ಯನು ಹುಟ್ಟಿದುದರಿಂದ; ನಳನೃಪತಿಲಕ = ರಾಜರುಗಳಲ್ಲಿ ಶ್ರೇಷ್ಠನಾದ, ನಳನು; ಕರೆಸಿದ = ಕರೆಕಳುಹಿದನು; ಸಕಳದಳವನು = ತನ್ನಲ್ಲಿದ್ದ ವಿವಿಧ ರೀತಿಯ ಸೈನಿಕ ಪಡೆಯನ್ನು; ಹೊಳೆವ = ಮಿರುಗುವ; ಖಡ್ಗಕಠಾರಿ = ಕತ್ತಿ, ಭರ್ಜಿ; ಮೊದಲಾದ + ಅಖಿಳ = ಮೊದಲಾದ ಸಮಸ್ತ; ಕೈದುಗಳ = ಆಯುಧಗಳ; ಬಲುಭಟರು = ಶೂರರಾದ ಕೆಚ್ಚೆದೆಯ ವೀರರು; ಬೇಂಟೆಯಲಿ = ಬೇಟೆಯಾಡುವುದರಲ್ಲಿ; ನಾನಾ = ವಿಧವಿಧವಾದ; ಬಲೆಗಳಂಟಿನ ಕೋಲು = ಬಲೆಗಳು, ಅಂಟಿನಿಂದ ಸಣ್ಣ ಪ್ರಾಣಿಗಳನ್ನು ಬೇಟೆಯಾಡಲು ಬಳಸುವ ಮೇಣದ ಬಡಿಗೆ; ಕಣ್ಣಿಯ = ಹಗ್ಗದ; ಚಲಯುತರು = ಹಟದಿಂದ ಸಾಧಿಸುವಂಥವರು; ಸಂದಣಿಸಿ = ಎಲ್ಲರೂ ಗುಂಪಾಗಿ ಸೇರಿ; ಮೆರೆದುದು = ಶೋಭಿಸಿತು; ಪುರದ = ಪಟ್ಟಣದ; ಬಾಹೆಯಲಿ = ಹೊರಗಡೆಯಲ್ಲಿ.

ಸೂರ್ಯೋದಯವಾಗುತ್ತಿದ್ದಂತೆ ಸರೋವರದಲ್ಲಿದ್ದ ಕೆಂದಾವರೆಗಳು ಅರಳಿದುವು. ರಾಜಾಧಿರಾಜನಾದ ನಳಚಕ್ರವರ್ತಿಯು ವೀರರೂ ಬೇಟೆಯಲ್ಲಿ ನುರಿತ ವರೂ ಆದ ತನ್ನ ಪಡೆಗಳಿಗೆ ಕರೆಕಳುಹಿಸಿದನು. ಅವರು ತಮ್ಮಲ್ಲಿದ್ದ ಖಡ್ಗ, ಭರ್ಜಿ

ಮುಂತಾದ ಆಯುಧಗಳನ್ನು, ಬೇಟೆಗೆ ಬೇಕಾದ ನಾನಾ ರೀತಿಯ ಬಲೆಗಳನ್ನೂ ಸಣ್ಣ ಸಣ್ಣ ಬೇಟೆಗಳಿಗೆ ಬಳಸುವ ಅಂಟಿನ ಕೋಲು, ಬಡಿಗೆ, ಹಗ್ಗ, ದಾರ ಮುಂತಾದುವನ್ನು ತಂದರು. ಹಿಡಿದ ಕೆಲಸವನ್ನು ಛಲದಿಂದ ಸಾಧಿಸುವ ಇಂತಹ ವೀರಾತಿಶೂರರೆಲ್ಲ ನಿಷಧನಗರದ ಹೊರವಲಯದಲ್ಲಿ ಗುಂಪು ಗುಂಪಾಗಿ ನೆರೆದಿದ್ದ ದೃಶ್ಯವು ಅತಿ ಶೋಭಾಯಮಾನವಾಗಿತ್ತು.

11. ಅರಸ ಕೇಳ್ ಶಶಿಕುಲಶಿರೋಮಣಿ
ಧರಿಸಿದನು ನವರತುನಮಯದಾ
ಭರಣಗಳ ದಿವ್ಯಾಂಬರಾದಿ ಸುಗಂಧಲೇಪದಲಿ
ತರಿಸಿಯೇರಿದ ವಾಯುವೇಗದ
ತುರಗವನು ಸಂದಣಿಸಿ ಮೋಹರ
ತೆರಳಿತಗಣಿತ ವಾದ್ಯದಲಿ ನೆಲ ಬಿರಿಯಲೈತಂದ

ಅರಸ ಕೇಳ್ = ದೊರೆಯೇ ಆಲಿಸು; ಶಶಿಕುಲಶಿರೋಮಣಿ = ಚಂದ್ರ ವಂಶದ ತಲೆಯಾಭರಣದಂತಿರುವ ವೀರನಾದ ನಳಮಹಾರಾಜನು; ಧರಿಸಿದನು = ತೊಟ್ಟನು; ನವರತುನಮಯದ + ಆಭರಣಗಳ = ಹವಳ, ಮರಕತ(ಪಚ್ಚೆ) ಮಾಣಿಕ್ಯ(ಕೆಂಪು), ಗೋಮೇಧಕ, ಪುಷ್ಯರಾಗ, ವಜ್ರ, ವೈಡೂರ್ಯ, ನೀಲ ಮೊದಲಾದವುಗಳಿಂದ ಕೂಡಿದ ಆಭರಣಗಳನ್ನು; ದಿವ್ಯ + ಅಂಬರ + ಆದಿ = ಮನೋಹರವಾದ, ಶ್ರೇಷ್ಠಮಟ್ಟದ ಉಡುಗೆಗಳನ್ನು; ಸುಗಂಧ= ಸುವಾಸನಾಭರಿತ ವಾದವುಗಳನ್ನು; ಲೇಪದಲಿ = ಪೂಸಿಕೊಂಡವನಾಗಿ; ತರಿಸಿ + ಏರಿದ = ಅಪ್ಪಣೆ ಮಾಡಿ ತರಿಸಿಕೊಂಡು ಹತ್ತಿದನು; ವಾಯುವೇಗದ = ಗಾಳಿಯಂತೆ ತ್ವರಿತವಾಗಿ ಓಡುವ; ತುರುಗವನು = ಕುದುರೆಯನ್ನು; ಸಂದಣಿಸಿ = ಗುಂಪುಗೂಡಿ; ಮೋಹರ = ಸೈನ್ಯವು; ತೆರಳಿತು + ಅಗಣಿತ = ಹೋಯಿತು, ಲೆಕ್ಕವಿಲ್ಲದಷ್ಟು; ವಾದ್ಯದಲಿ = ವಾದ್ಯಗಳ ಸಹಿತ; ನೆಲ = ಭೂಮಿ; ಬಿರಿಯಲೈತಂದ = ಸೀಳಿಹೋಗುವಂತೆ ರಭಸದಿಂದ ಬಂದನು.

ಅರಸನೇ ಕೇಳು, ಚಂದ್ರವಂಶದ ತಿಲಕದಂತೆ ಭೂಷಣಪ್ರಾಯನಾದ ವೀರ ನಳಮಹಾರಾಜನು ನವರತ್ನಖಚಿತವಾದ ದಿವ್ಯಾಭರಣಗಳನ್ನು ತೊಟ್ಟನು, ಮನೋ

ಹರವಾದ, ಶ್ರೇಷ್ಠಮಟ್ಟದ ವಸ್ತ್ರಾದಿಗಳನ್ನು ಧರಿಸಿದನು. ನಾನಾ ವಿಧವಾದ ಸುಗಂಧಗಳಿಂದ ಲೇಪಿತನಾದನು. ಬಳಿಕ ವಾಯುವೇಗದಲ್ಲಿ ಚಲಿಸುವ ಕುದುರೆ ಯನ್ನು ತರಿಸಿಕೊಂಡು ಹತ್ತಿ, ಬೇಡರ ಗುಂಪಿನೊಂದಿಗೆ, ಅನೇಕಾನೇಕ ವಾದ್ಯಗಳು ಭೂಮಿಯು ಬಿರಿಯುವಂತೆ ಬೊಬ್ಬಿರಿಯುತ್ತಿರಲು, ಬೇಟೆಗೆ ಹೊರಟನು.

ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಬೇಟೆಯಾಡುವ ವರ್ಣನೆಗಳನ್ನು ಅಷ್ಟಾದಶ ವರ್ಣನೆಗಳಲ್ಲಿ ಒಂದೆಂಬಂತೆ ಕಡ್ಡಾಯವಾಗಿ ತುರುಕಲಾಗುತ್ತದೆ ಎಂಬಂತೆ ನಿಸುವುದು, ಕಾವ್ಯಗಳನ್ನು ಕಥಾಪ್ರಧಾನವಾಗಿ ನೋಡಿದಾಗ ಮಾತ್ರ. ವಾಸ್ತವವಾಗಿ ಅದು ಒಬ್ಬ ಜವಾಬ್ದಾರಿಯುತನಾದ ಅರಸನ ಕರ್ತವ್ಯವೇ ಹೌದು. ಕಾಲಕಾಲಕ್ಕೆ ವೃದ್ಧಿಯಾಗಿ ಜನಜೀವನಕ್ಕೆ ಹೊರೆಯಾಗುವ ಮೃಗಸಂತತಿಯಿಂದ ನಾಡಿನ ಜನರನ್ನು ರಕ್ಷಿಸುವ ರಾಜನ ಕರ್ತವ್ಯ ಅದು. ಕಾಡಿನ ಹಿರಿಯ ಶಬರರು ರಾಜನನ್ನು ಬೇಟೆಗಾಗಿ ಆಹ್ವಾನಿಸಲು ಬರುವುದು ಮೃಗಯಾವಿನೋದಕ್ಕಷ್ಟೇ ಅಲ್ಲ. ರಾಜನ ಕರ್ತವ್ಯವನ್ನು ಸಕಾಲಕ್ಕೆ ನೆನಪಿಸುವುದಕ್ಕಾಗಿ ಸಹ. ಹಾಗೆಯೇ ಭೂಮಿಯು ಬಾಯ್ಬಿಡುವಂತೆ ಬೊಬ್ಬಿರಿಯುವ ವಾದ್ಯಗಳ ಅಬ್ಬರ, ರಾಜನ ಬರುವಿಕೆಯನ್ನು ಸಾರುವುದಕ್ಕಷ್ಟೇ ಅಲ್ಲ, ಅದು, ನಿದ್ರಿಸುತ್ತಿರುವ ಹಾಗೂ ಅಡಗಿರುವ ಪ್ರಾಣಿಗಳು ಹುಚ್ಚೆದ್ದು ಹೊರಬರುವಂತೆ ಮಾಡಲು ಬೇಕಾದ ಬೇಟೆಯ ತಂತ್ರವಾಗಿರುತ್ತದೆ.

12. ಏನ ಹೇಳುವೆನರಸ ಹೊಕ್ಕರು
ಕಾನನವ ಬಳಸಿದರು ಮೃಗತತಿ
ಯಾನಲಾಪುದೆ ತೆಗೆದು ಹಾಯ್ದುದು ಭಟರ ಘಲ್ಲಣೆಗೆ
ಆನೆಗಳ ಕೆಡಹಿದರು ಬಲಸಂ
ಧಾನದಲಿ ಹುಲಿ ಕರಡಿ ಮುಸು ಮೊಲ
ವಾನರಾದಿ ಸಮಸ್ತ ಮೃಗಗಳ ತರುಬಿ ಕೆಡಹಿದರು

ಏನ = ಏನೆಂದು; ಹೇಳುವೆನು + ಅರಸ = ವರ್ಣಿಸಲಿ ದೊರೆಯೇ; ಹೊಕ್ಕರು = ಒಳಪ್ರವೇಶಿಸಿದರು; ಕಾನನವ = ದಟ್ಟಡವಿಯನ್ನು; ಬಳಸಿದರು = ಸುತ್ತುವರಿದರು; ಮೃಗತತಿಯು + ಆನಲು + ಆಪುದೆ = ಮೃಗಸಂಕುಲಕ್ಕೆ ಅವರಂ ಥವರನ್ನು ಎದುರಿಸಲು ಸಾಧ್ಯವೇ?; ತೆಗೆದು = ಎಳೆದು, ಓಡಿಬಂದು; ಹಾಯ್ದುದು

= ಮೇಲೆರಗಿದುವು; ಭಟರ = ವೀರ ಶಬರರ; ಘಲ್ಲಣೆಗೆ = ಅಬ್ಬರಕ್ಕೆ; ಆನೆಗಳ = ಆನೆಗಳನ್ನು; ಕೆಡಹಿದರು = ಹೊಡೆದುರುಳಿಸಿದರು; ಬಲ ಸಂಧಾನದಲಿ = ಕಾರ್ಯವನ್ನು ಸಿದ್ಧಿಸಲು ಅವರವರೊಳಗೆ ಆಗಿದ್ದ ಒಪ್ಪಂದದ ಪ್ರಕಾರ; ಹುಲಿ, ಕರಡಿ, ಮುಸು(ಮುಸುವ ಎಂಬ ಕೋತಿ), ಮೊಲ, ವಾನರಾದಿ; ತರು ಸಮಸ್ತ ಮೃಗಗಳ = ಅಡ್ಡಗಟ್ಟಿ; ಕೆಡಹಿದರು = ಹೊಡೆದುರುಳಿಸಿದರು.

ಅರಸನೇ, ಬೇಟೆಯ ಸೊಗಸನ್ನು ಏನೆಂದು ವರ್ಣಿಸಲಿ?! ಬೇಡರು ಮತ್ತು ರಾಜನನ್ನು ಒಳಗೊಂಡಂತೆ ಎಲ್ಲರೂ ಆ ಕಾಡನ್ನು ಹೊಕ್ಕು ಮೃಗಸಂತತಿಯನ್ನು ಸುತ್ತುವರಿದರು. ಅವರನ್ನು ಎದುರಿಸಲು ಮೃಗಗಳಿಂದಾಗುತ್ತದೆಯೇ ! ಅವೂ ಓಡಿ, ಎಳೆದಾಡಿ, ಅವರ ಅಬ್ಬರಕ್ಕೆ ಪ್ರತಿಯಾಗಿ ಮೇಲೆರಗಿದುವು. ಅವರೆಲ್ಲರೂ ಬೇಟೆಯಲ್ಲಿ ಶೂರರು. ಆನೆಗಳನ್ನು ಹೊಡೆದುರುಳಿಸಿದರು. ತಮ್ಮ ತಮ್ಮೊಳಗೆ ಬೇಟೆಯ ಕಾರ್ಯ ವಿಧಾನ, ಮತ್ತಿತರ ವಿಷಯಗಳನ್ನು ಕುರಿತು ಒಪ್ಪಂದಗಳನ್ನು ಮಾಡಿಕೊಂಡರು. ನಂತರ ಹುಲಿ, ಕರಡಿ, ಕಾಡುಮುಸುವ, ಮೊಲ, ವಾನರ ಮುಂತಾದ ಸಮಸ್ತ ಮೃಗ ಸಂತತಿಯನ್ನು ಅಡ್ಡಗಟ್ಟಿ ಹೊಡೆದುರುಳಿಸಿದರು.

13. ಹತ್ತಿ ತದ್ಗಿರಿಶಿಖರವನು ಮರ
ಮೊತ್ತದಲಿ ಬಲೆಗಳನು ಹಾಯ್ಕಿದ
ರೊತ್ತಿ ಸೋಹಿದರೊಂದು ಘನತರ ಸಿಂಹವಬ್ಬರಿಸಿ
ಹೊತ್ತ ಕೋಪದಿ ಸೈನ್ಯವನು ಮುರಿ
ದೊತ್ತಿ ಬರುತಿರೆ ಕಂಡು ನೃಪ ಬೆಂ
ಬತ್ತಿ ಕಡಿದನು ಮೃಗಪತಿಯ ವನವೆಲ್ಲ ಬೆರಗಾಗೆ

ಹತ್ತಿ = ಏರಿ; ತತ್ + ಗಿರಿ + ಶಿಖರವನು = ಆ ಗಿರಿಯ ತುತ್ತತುದಿಯನ್ನು; ಮರ ಮೊತ್ತದಲಿ = ಒತ್ತಾಗಿ ಅಡರಿದಂತೆ ಬೆಳೆಸಿದ್ದ ಮರಗಳ ಸಮೂಹದಲ್ಲಿ; ಬಲೆಗಳನು = ಬಲೆಗಳನ್ನು; ಹಾಯ್ಕಿದರ್ + ಒತ್ತಿ = ಒತ್ತಾಗಿ ಹರಡಿ ಬೀಸಿದರು; ಸೋಹಿದರ್ = ಪ್ರಾಣಿಗಳನ್ನು ಬೇಟೆಗೆಂದು ಅಟ್ಟಾಡಿಸಿದರು; ಒಂದು ಘನತರ = ಒಂದು ಬಲಿಷ್ಠವಾದ, ದೊಡ್ಡ; ಸಿಂಹವು + ಅಬ್ಬರಿಸಿ = ಸಿಂಹವು

ಅಬ್ಬರದಿಂದ ಗರ್ಜಿಸಿ; ಹೊತ್ತ ಕೋಪದಿ = ಕೋಪದಿಂದ ಉರಿಯುತ್ತ; ಸೈನ್ಯವನು = ವೀರರ ಪಡೆಯನ್ನು; ಮುರಿದೊತ್ತಿ = ಮುಂದಕ್ಕೆ ತಳ್ಳಿಕೊಂಡು; ಬರುತಿರೆ = ಬರುತ್ತಿರಲು; ಕಂಡು = ನೋಡಿ; ನೃಪ = ದೊರೆಯು; ಬೆನ್ನನ್ನು + ಪತ್ತಿ = ಆ ಮೃಗದ ಹಿಂದೆಯೇ ಅಟ್ಟಿಸಿಕೊಂಡು ಹೋಗಿ; ಕಡಿದನು = ಕೊಂದು ಹಾಕಿದನು; ಮೃಗಪತಿಯ = ಮೃಗಗಳಿಗೆ ರಾಜನಾದ ಸಿಂಹವನ್ನು; ವನವೆಲ್ಲ = ಆ ಕಾಡಿಗೆ ಕಾಡೇ; ಬೆರಗಾಗೆ = ವಿಸ್ಮಯಗೊಳ್ಳುವಂತೆ.

ಬೇಟೆಗಾರರು ಪರ್ವತಗಳ ತುದಿಯನ್ನೇರಿ ಮರಗಳು ಒತ್ತೊತ್ತಾಗಿ ಬೆಳೆದಿದ್ದ ಕಡೆ ಬಲೆಗಳನ್ನು ಹರಡಿ ಬೀಸಿದರು. ಬೇಟೆಗೆಂದು ಪ್ರಾಣಿಗಳನ್ನು ಅಟ್ಟಾಡಿಸಿದರು. ಆಗ ಒಂದು ಬಲಿಷ್ಠವಾದ ದೊಡ್ಡ ಸಿಂಹವು ಅಬ್ಬರಿಸಿ, ಉಕ್ಕಿಬಂದ ಕೋಪದಿಂದ ಗರ್ಜಿಸುತ್ತಾ ಆ ವೀರರ ಸೈನ್ಯವನ್ನು ಮುಂದು ಮುಂದಕ್ಕೆ ತಳ್ಳಿದಂತೆ ಆಕ್ರಮಣಶೀಲವಾಗುತ್ತಿದ್ದುದನ್ನು ಕಂಡ ನಳಮಹಾರಾಜನು ಕಾಡೆಲ್ಲ ಬೆರಗಾಗುವಂತೆ ಶೌರ್ಯದಿಂದ ಅದನ್ನು ಹೊಡೆದು ಹಾಕಿದನು.

14. ನಿಲಿಸಿ ಬೇಂಟೆಯನಲ್ಲಿ ಬಳಲಿದ
ಬಲಸಮೇತದಿ ಬಂದು ತತ್ಪುರ
ವಳಯದುದ್ಯಾನವನು ಹೊಕ್ಕನು ಬಲಿದ ವಿರಹದಲಿ
ನಲವು ಹಿಂಗಿದ ಮನದ ದುಗುಡದೊ
ಳಿಳಿದು ತೊಳೆದನು ಜಾನುಜಂಘೆಯ
ಕೊಳದಿ ಪರಿಹೃತನಾಗಿ ಸಂಚರಿಸಿದನು ವನದೊಳಗೆ

ನಿಲಿಸಿ = ನಿಲ್ಲಿಸಿ; ಬೆಂಟೆಯನು + ಅಲ್ಲಿ = ಅಲ್ಲಿ ಬೇಟೆಯನ್ನು; ಬಳಲಿದ = ಆಯಾಸಗೊಂಡ; ಬಲಸಮೇತದಿ = ವೀರರ ಪಡೆಯ ಸಹಿತವಾಗಿ; ಬಂದು = ಬಂದು; ತತ್ಪುರ + ವಳಯದ + ಉದ್ಯಾನವನು = ಆ ನಗರದ ಎಲ್ಲೆಕಟ್ಟಿನೊಳಗಿದ್ದ ಉದ್ಯಾನವನವನ್ನು; ಹೊಕ್ಕನು = ಪ್ರವೇಶಿಸಿದನು; ಬಲಿದ = ಹೆಚ್ಚಾದ; ವಿರಹದಲಿ = ಪ್ರೀತಿಯ ಅಗಲಿಕೆಯ ನೋವಿನಿಂದ; ನಲವು = ಸಂತೋಷವು; ಹಿಂಗಿದ = ಬತ್ತಿಹೋದ; ಮನದ = ಮನಸ್ಸಿನ; ದುಗುಡದೊಳು + ಇಳಿದು = ಮನೋವ್ಯಥೆಯಲ್ಲಿ ಮುಳುಗಿದನು; ತೊಳೆದನು = ಶುಭ್ರಗೊಳಿಸಿಕೊಂಡನು;

ಜಾನುಜಂಘೆಯ = ಮೊಣಕಾಲು ಮತ್ತು ತೊಡೆಗಳನ್ನು; ಕೊಳದಿ = ಕೊಳದಲ್ಲಿ ಇಳಿದು; ಪರಿಹೃತನಾಗಿ = ಆಯಾಸದಿಂದ ಹೊರಬಂದವನಾಗಿ; ಸಂಚರಿಸಿದನು = ಅಡ್ಡಾಡಿದನು; ವನದೊಳಗೆ = ಕಾಡಿನಲ್ಲಿ.

ಬೇಟೆಯಾಡಿ ಆಯಾಸಗೊಂಡುದುದರಿಂದ, ಬೇಟೆಯಾಡುವುದನನ್ನು ಅಲ್ಲಿಗೇ ನಿಲ್ಲಿಸಿ, ತನ್ನ ವೀರರ ಪಡೆಯ ಸಮೇತವಾಗಿ ನಳನು ಆ ನಗರದೊಳಗಿದ್ದ ಉದ್ಯಾನವನವೊಂದನ್ನು ಪ್ರವೇಶಿಸಿ, ಕೊಳದಲ್ಲಿಳಿದು ಕಾಲು, ಕೆಳದೊಡೆ ಇತ್ಯಾದಿ ಗಳನ್ನು ತೊಳೆದುಕೊಂಡು ವಿರಹದಿಂದಲೂ, ಬೇಟೆಯಾಡಿದುದರಿಂದಲೂ ಉಂಟಾ ಗಿದ್ದ ಮನೋವ್ಯಥೆಯನ್ನೂ ದೇಹದ ಆಯಾಸವನ್ನೂ ಪರಿಹರಿಸಿಕೊಂಡು, ಆ ಕಾಡಿನಲ್ಲಿದ್ದ ಉದ್ಯಾನವನದಲ್ಲಿ ಸಂಚರಿಸಿದನು.

15. ಆ ಕೊಳದ ತೀರದಲಿ ತರುಗಳ
ನೇಕವದರೊಳಗೊಂದು ಠಾವಿನೊ
ಳೇಕವೃಕ್ಷದ ನೆಳಲಿನಲಿ ನವಕುಸುಮದಿಕ್ಕೆಯಲಿ
ಆ ಕಮಲಜನತುರಗ ನಿದ್ರಾ
ವ್ಯಾಕುಲದಿ ಮಲಗಿರಲು ಕಂಡ ಶು
ಭಾಕರೋನ್ನತ ಶುಭ್ರತೇಜದ ರಾಜಹಂಸವನು

ಆ ಕೊಳದ = ಆ ಉದ್ಯಾನವನದಲ್ಲಿದ್ದ ಕೊಳದ; ತೀರದಲಿ = ದಡ ದಲ್ಲಿ; ತರುಗಳು + ಅನೇಕವು + ಅದರೊಳಗೆ + ಒಂದು = ಮರಗಳು ಹಲವಾರು ಇದ್ದುವು, ಅವುಗಳಲ್ಲಿ ಒಂದು; ಠಾವಿನೊಳೇಕವೃಕ್ಷದ = ಸ್ಥಳದಲ್ಲಿ ಪ್ರತ್ಯೇಕವಾಗಿದ್ದ ಒಂದು ಮರದ; ನೆಳಲಿನಲಿ = ನೆಳಲಿನಲ್ಲಿ; ನವಕುಸುಮದಿಕ್ಕೆಯಲಿ = ಹೊಸತಾಗಿ ಅರಳಿದ್ದ ಹೂ ಹಾಸಿನಲ್ಲಿ; ಆ ಕಮಲಜನತುರಗ = ಕಮಲದಲ್ಲಿ ಜನಿಸಿದ ಬ್ರಹ್ಮನ ಸೃಷ್ಠಿಯಂತಿದ್ದ ಕುದುರೆಯು; ನಿದ್ರಾ ವ್ಯಾಕುಲದಿ = ನಿದ್ದೆಯಲ್ಲಿ ಮುಳುಗಿ; ಮಲಗಿರಲು = ಮಲಗಿರುವ ಸಂದರ್ಭದಲ್ಲಿ; ಕಂಡ = ಕಂಡನು; ಶುಭಾಕರ + ಉನ್ನತ = ಶುಭಲಕ್ಷಣಗಳಿಂದ ನಿರ್ಮಲವಾಗಿ ಶೋಭಿಸುತ್ತಿದ್ದ; ರಾಜಹಂಸವನು = ರಾಜಹಂಸವನ್ನು.

ಆ ಉದ್ಯಾನವನದಲ್ಲಿದ್ದ ಕೊಳದ ತೀರದಲ್ಲಿ ಮರಗಳನೇಕವು ದಟ್ಟವಾಗಿ ಬೆಳೆದಿದ್ದುವು. ಅವುಗಳಲ್ಲೊಂದು ಮರವು ಸ್ವಲ್ಪ ಪ್ರತ್ಯೇಕವಾಗಿದ್ದು ಅದರ ನೆಳಲಿನಲ್ಲಿ ಹೊಸತಾಗಿ ಅರಳಿ ಹಾಸಿದಂತೆ ಬಿದ್ದಿದ್ದ ಹೂಗಳಿದ್ದಲ್ಲಿ ಬ್ರಹ್ಮನ ಸೃಷ್ಟಿಯಂತಿದ್ದ ಸುಂದರವಾದ ಕುದುರೆಯು ನಿದ್ರಾವಶವಾಗಿ ಮಲಗಿತ್ತು. ಅಲ್ಲಿ ನಳನು ಒಂದು ಮಂಗಳಕರವಾದ, ಶುಭ್ರವಾದ, ಶ್ರೇಷ್ಠಜಾತಿಯ ರಾಜಹಂಸವೊಂದನ್ನು ಕಂಡನು.

16. ಅರುಣಮಯದಾನನದ ಪದಯುಗ
ಗರಿಗಳುನ್ನತಧವಳ ದೇಹದ
ಪರಮತೇಜದೊಳೆಸೆವ ಹಂಸೆಯ ಕಂಡು ಬೆರಗಾಗಿ
ಹರಹರಾ! ಇದರಾಯತವ ಮುರ
ಹರನು ತಾನೇ ಬಲ್ಲನೆನುತ
ಕ್ಕರದಿ ಮೆಲ್ಲನೆ ಕರವ ನೀಡುತ ಪಿಡಿದ ಹಂಸವನು

ಅರುಣಮಯದ + ಆನನದ = ಉದಯ ಸೂರ್ಯನಂತೆ ನಸುಗೆಂಪಾದ ಮುಖದ; ಪದಯುಗ = ಎರಡೂ ಪಾದಗಳ; ಗರಿಗಳ್ + ಉನ್ನತ + ಧವಳ = ಶುಭ್ರ ಬಿಳಿ ಬಣ್ಣದ ಗರಿಗಳ; ದೇಹದ = ಶರೀರದ; ಪರಮತೇಜದೊಳ್+ ಎಸೆವ = ಉತ್ಕೃಷ್ಟವಾದ ತೇಜಸ್ಸಿನಿಂದ ಶೋಭಾಯ ಮಾನವಾಗಿದ್ದ; ಹಂಸೆಯ = ರಾಜಹಂಸವನ್ನು; ಕಂಡು ಬೆರಗಾಗಿ = ನೋಡಿ ನಳರಾಜನು ಆಶ್ಚರ್ಯಗೊಂಡು; ಹರಹರಾ! = ಹರಹರಾ ಎಂದು ಉದ್ಗರಿಸುತ್ತ; ಇದರಾಯತವ = ಇದರ ದೇಹ ಸೌಂದರ್ಯದ ಗುಟ್ಟೇನು ಎಂಬುದನ್ನು; ಹರನು = ಶಿವನು; ತಾನೇ ಬಲ್ಲನೆನುತ = ತಿಳಿಯಲು ಶಿವನಿಗೆ ಮಾತ್ರ ಸಾಧ್ಯ ಎನ್ನುತ; ಅಕ್ಕರದಿ = ಪ್ರೀತಿಯಿಂದ; ಮೆಲ್ಲನೆ = ಮೃದುವಾಗಿ; ಕರವ ನೀಡುತ = ಕೈ ಚಾಚುತ್ತ; ಪಿಡಿದ = ಹಿಡಿದನು; ಹಂಸವನು = ಆ ರಾಜಹಂಸವನ್ನು.

ಆ ರಾಜಹಂಸದ ಮುಖವೂ ಪಾದಗಳೂ ಉದಯ ಸೂರ್ಯನಂತೆ ನಸುಗೆಂಪು ವರ್ಣದಿಂದ ಹೊಳೆಯುತ್ತಿದ್ದುವು. ಶುಭ್ರ ಧವಳವರ್ಣದ ಗರಿಗಳೂ, ದೇಹವೂ ಉತ್ಕೃಷ್ಠವಾದ ಅಪೂರ್ವ ತೇಜಸ್ಸಿನಿಂದ ಶೋಭಾಯಮಾನವಾಗಿದ್ದುವು. (ಮಹಾಭಾರತದಲ್ಲಿ ಇದು 'ಹಿರಣ್ಮಯ ಹಂಸ') ಅದರ ಅತಿಶಯ ಸೌಂದರ್ಯ

ವನ್ನೂ ಉನ್ನತೋನ್ನತವಾಗಿದ್ದ ದೇಹಾಕಾರವನ್ನೂ ಕಂಡ ನಳಮಹಾರಾಜನು ಇದರ ಇಂತಹ ರೂಪ ಆಕಾರಗಳ ಗುಟ್ಟೇನೆಂಬುದು ಆ ಪರಶಿವನಿಗೇ ಗೊತ್ತು. ಹರಹರಾ! ಎಂದು ಉದ್ಗರಿಸುತ್ತ ಪ್ರೀತಿಯಿಂದ ಆ ರಾಜಹಂಸವನ್ನು ಕೈನೀಡಿ ಮೃದುವಾಗಿ ಹಿಡಿದನು.

17. ಒದರಿ ಕುಣಿಯಲು ಹಸ್ತದೊಳಗದ
ಕದಲದಂತಿರೆ ಪಿಡಿಯಲರಸನ
ವದನಕಮಲವ ನೋಡಿ ಹೆದರಿತು ಬಹಳ ಭೀತಿಯಲಿ
ಹೃದಯ ಕರಗುವ ಮಾತನೆಂದುದು
ಮದಕರಿಗೆ ನೊರಜಂತರವೆ ಕೈ
ಸದರದವರನು ಕೊಲುವುದೇನರಿದೆಂದುದಾ ಪಕ್ಷಿ

ಒದರಿ ಕುಣಿಯಲು = ರಾಜನ ಹಿಡಿತದಿಂದ ಬಿಡಿಸಿಕೊಳ್ಳಲು ರಾಜ ಹಂಸವು ಒದರಾಡಿ ಕೊಸರಿಕೊಳ್ಳಲು ಪ್ರಯತ್ನಿಸಿದಾಗ; ಹಸ್ತದೊಳಗೆ + ಅದ = ಅದನ್ನು ತನ್ನ ಹಸ್ತದಲ್ಲಿ; ಕದಲದಂತಿರೆ = ಅಲುಗಾಡಲು ಆಗದಂತೆ; ಪಿಡಿಯಲು + ಅರಸನ = ಹಿಡಿಯಲು ಅರಸನ; ವದನ ಕಮಲವ = ಕಮಲದ ಹೂವಿನಂತಿರುವ ಮುಖವನ್ನು; ನೋಡಿ ಹೆದರಿತು = ನೋಡಿ ಅಂಜಿತು; ಬಹಳ = ಅತಿಯಾದ; ಭೀತಿಯಲಿ = ಭಯದಿಂದ; ಹೃದಯ ಕರಗುವ = ಮನಸ್ಸು ಮರುಗುವಂತಹ; ಮಾತನು + ಎಂದುದು = ಮಾತನ್ನು ಹೇಳಿತು; ಮದಕರಿಗೆ = ಮದ್ದಾನೆಗೆ, ನೊರಜು + ಅಂತರವೆ = ಸೊಳ್ಳೆಯು ಸಮವೆ?; ಕೈಸದರದವರನು = ಕೈಯಾಸರೆಯಾಗಿರುವಂಥವರನ್ನು; ಕೊಲುವುದು + ಏನು + ಅರಿದೆಂದುದು + ಆ = ಕೊಲ್ಲುವುದೇನು ಆಗದ ವಿಷಯವೇ ಎಂದು ಹೇಳಿತು ಆ; ಪಕ್ಷಿ = ರಾಜಹಂಸ.

ರಾಜಹಂಸವನ್ನು ನಳಮಹಾರಾಜನು ಹಿಡಿದುಕೊಂಡಾಗ ಅದು ಹೆದರಿ ಅವನ ಹಿಡಿತದಿಂದ ತಪ್ಪಿಸಿಕೊಳ್ಳಲು ಕೊಸರಾಡಿ ಹಾರಲು ಪ್ರಯತ್ನಿಸಿದಾಗ, ಅವನು ಅದನ್ನು ತನ್ನ ಕೈಯೊಳಗೆ ಅಲುಗಾಡದಂತೆ ಒತ್ತಿ ಹಿಡಿದನು. ಆಗ ಆ ರಾಜಹಂಸವು ಅವನ ಕಮಲದಂತಿರುವ ಮುಖವನ್ನು ನೋಡುತ್ತ ಹೆದರಿ ಬಹಳ ಭೀತಿಯಿಂದ ಮನಸ್ಸು ಕರಗುವಂತೆ, 'ಮದಕರಿಗೆ ನೊರಜಂತರವೆ?' 'ಕೈಸದರದವರನು

ಕೊಲುವು ದೇನರಿದೆ' ಎಂದು ಮಾತನಾಡಿತು. ಅಂದರೆ, ರಾಜನು ಬಲಿಷ್ಠನಾದುದರಿಂದಲೂ ತಾನು ಆಕಾರದಲ್ಲಿಯೂ, ಬಲದಲ್ಲಿಯೂ ಅವನಿಗಿಂತ ಅತ್ಯಂತ ದುರ್ಬಲವಾಗಿ ಇರುವುದರಿಂದಲೂ ಮದ್ದಾನೆಯ ಬಲದೆದುರು ಸೊಳ್ಳೆಯು ಸರಿಸಮವಾಗಬಲ್ಲುದೇ, ಎನ್ನುತ್ತಾ ಸೆರೆಯಾದಂಥವರನ್ನು ನಿನ್ನಂತಹ ಬಲಶಾಲಿಗೆ ಕೊಲ್ಲುವುದು ಅಸಾಧ್ಯವೇ? ಎಂದು ಅತ್ಯಂತ ಚಾತುರ್ಯಪೂರ್ಣವಾಗಿ ಮಾತನಾಡಿತು.

18. ಕರಿಗಳನು ಮುರಿದಿಡುವ ಸಿಂಹಕೆ
ನರಿಗಳಿದಿರೇ ತಾನು ನಿನಗಂ
ತರವೆ ಸಾಕಂತಿರಲಿ ಕಂಡವರೆಲ್ಲ ಕಡುನಗರೆ
ಅರಿಭಯಂಕರ ಶತ್ರುಗಳ ಸಂ
ಹರಿಸುವುದು ನೃಪನೀತಿ ನಿನಗಿದು
ತರವೆ ಬಿಡು ಪರಹಿಂಸೆ ದೋಷವಿದೆಂದುದಾ ಪಕ್ಷಿ

ಕರಿಗಳನು = ಆನೆಗಳನ್ನು; ಮುರಿದಿಡುವ = ಅನಾಯಾಸವಾಗಿ ಕೊಲ್ಲುವ; ಸಿಂಹಕೆ = ಸಿಂಹಕ್ಕೆ; ನರಿಗಳಿದಿರೇ = ನರಿಗಳು ಸಮನಾಗಬಲ್ಲವೇ?; ತಾನು = ನಾನು; ನಿನಗಂತರವೆ = ನಿನಗೆ ಸಮನೇ?; ಸಾಕು + ಅಂತಿರಲಿ = ಈ ಮಾತುಗಳು ಸಾಕು, ಅದಿರಲಿ; ಕಂಡವರೆಲ್ಲ = ನೋಡಿದವರೆಲ್ಲ; ಸಂಬಂಧವಿರದವರೂ ಸಹ; ಕಡುನಗರೆ = ಹಾಸ್ಯ ಮಾಡದಿರುವರೇ?; ಅರಿ ಭಯಂಕರ = ಶತ್ರುಗಳಿಗೆ ಭಯಂಕರನಾಗಿ, ಶತ್ರುಗಳ = ಎದುರಾಳಿಗಳನ್ನು; ಸಂಹರಿಸುವುದು = ಕೊಲ್ಲುವುದು; ನೃಪನೀತಿ = ರಾಜನೀತಿ; ನಿನಗಿದು = ನಿನಗೆ + ಇದು; ತರವೆ = ಉಚಿತವೆ, ಶೋಭಿಸುತ್ತದೆಯೇ; ಬಿಡು ಪರಹಿಂಸೆ = ಇತರರನ್ನು ಹಿಂಸಿಸುವುದನ್ನು ಬಿಡು; ದೋಷವಿದು + ಎಂದುದು + ಆ = ಇದು ತಪ್ಪು ಎಂದಿತು; ಆ ಪಕ್ಷಿ = ರಾಜಹಂಸ.

ಆನೆಯಂತಹ ಬೃಹದಾಕಾರದ ಮಹಾಶಕ್ತಿವಂತ ಪ್ರಾಣಿಯನ್ನೇ ಅನಾಯಾಸವಾಗಿ ಕೊಲ್ಲುವಂಥ ಬಲಶಾಲಿ ಸಿಂಹಕ್ಕೆ ನರಿಗಳು ಯಾವ ಲೆಕ್ಕ? ನಾನು ನಿನಗೆ ಸಮನಾಗಲು ಸಾಧ್ಯವೆ, ಎನ್ನನ್ನು ಕೊಲ್ಲುವುದು ನಿನಗೆ ಕೈಯಳತೆಯ ದೂರದ

ಸಮಾಚಾರವಷ್ಟೇ!. ಇರಲಿ, ಈ ಮಾತು ಸಾಕು, ಕಂಡವರೆಲ್ಲ ನೀನು ಮಾಡುತ್ತಿರುವ ಈ ಕಾರ್ಯವನ್ನು ಕಂಡು ಅಪಹಾಸ್ಯ ಮಾಡದಿರುವರೇನು? ಶತ್ರುಗಳು ಭಯಭೀತ ರಾಗುವಂತೆ, ಶೌರ್ಯದಿಂದ ಕೊಲ್ಲುವುದು ರಾಜನೀತಿ. ಹಾಗಿರುವಾಗ ನೀನು ನನ್ನನ್ನು ವಶದಲ್ಲಿಟ್ಟುಕೊಂಡಿರುವುದು ನಿನಗೇ ಶೋಭೆ ತರುವಂಥದಲ್ಲ. ಇತರರನ್ನು ಹಿಂಸಿ ಸುವ ಈ ಕಾರ್ಯವನ್ನು ಬಿಡು. ಸರಿಯಲ್ಲ ಇದು ದೋಷಪೂರಿತವಾದದ್ದು ಎಂದು ರಾಜಹಂಸವು ಮತ್ತೆ ನಳಮಹಾರಾಜನಿಗೆ ಉಪದೇಶಿಸಿತು.

ತಾನು ರಾಜನ ಕೈಸೆರೆಯಲ್ಲಿದ್ದಾಗಲೂ, ಭಯಭೀತಿಯಿಂದ ನಡುಗುತ್ತಿ ದ್ದರೂ ರಾಜಹಂಸವು ನೃಪನಳನಿಗೆ ರಾಜನೀತಿಯನ್ನೂ, ಮನುಷ್ಯ ಧರ್ಮವನ್ನೂ ಬೋಧಿಸುತ್ತಿರುವ ಶೈಲಿ ಅದರ ಧೀರೋದಾತ್ತ ಗುಣಕ್ಕೆ ನಿದರ್ಶನವಾಗಿದೆ. ಅದು ಸಾಮಾನ್ಯ ರಾಜಹಂಸವಲ್ಲ ಎಂಬುದನ್ನು ಕವಿ ಮನಗಾಣಿಸುತ್ತಿದ್ದಾನೆ.

19. ಬಡಬಗೌತಣವಿಕ್ಕುವಡೆಯೊ
ಕ್ಕುಡಿತೆ ಹಾಲೇ ಮಂಜು ಸುರಿಯ
ಲ್ಕೊಡನೆ ಕೆರೆ ತುಂಬುವುದೆ ನೃಪ ನೀನೆನ್ನ ಭುಂಜಿಸಲು
ಒಡಲಿಗಾಪ್ಯಾಯನವೆ ಕೇಳೆಲೆ
ಪೊಡವಿಪತಿ ಬಿಡು ನನ್ನ ಮನೆಯಲಿ
ಮಡದಿ ಸುತರುಮ್ಮಳವ ನೋಡೆಂದೊರಲಿತಾ ಪಕ್ಷಿ

ಬಡಬಗೆ + ಔತಣವ + ಇಕ್ಕುವಡೆ + ಒಕ್ಕುಡಿತೆ + ಹಾಲೇ = ಬಡವನಿಗೆ ಔತಣವನ್ನು ನೀಡುವಾಗ ಒಂದು ಬೊಗಸೆ ಹಾಲು ಸಾಕೆ?; ಮಂಜು = ಇಬ್ಬನಿ; ಸುರಿಯಲ್ಕೆ + ಒಡನೆ = ಸುರಿಯಲು, ಆ ಕ್ಷಣವೆ; ಕೆರೆ = ಕೊಳವು; ತುಂಬುವುದೆ = ತುಂಬಿಕೊಳ್ಳಲು ಸಾಧ್ಯವೇ?; ನೃಪ = ರಾಜನೇ; ನೀನು + ಎನ್ನ = ನೀನು ನನ್ನನ್ನು; ಭುಂಜಿಸಲು = ತಿನ್ನಲು; ಒಡಲಿಗೆ + ಆಪ್ಯಾಯನವೆ = ಮೈಗೆ ಹಿತವೆ, ತಂಪೇ?; ಕೇಳು + ಎಲೆ = ಎಲೈ ಕೇಳು; ಪೊಡವಿಪತಿ = ಭೂಮಿಯನ್ನಾಳುವ ದೊರೆಯೇ; ಬಿಡು = ನನ್ನನ್ನು ಬಿಡುಗಡೆಗೊಳಿಸು; ನನ್ನ ಮನೆಯಲಿ = ನನ್ನ ಮನೆಯಲ್ಲಿ; ಮಡದಿ = ಹೆಂಡತಿ; ಸುತರ + ಉಮ್ಮಳವ = ಮಕ್ಕಳ ಕಳವಳವನ್ನು; ನೋಡು +

ಎಂದು+ ಒರಲಿತು + ಆ ಪಕ್ಷಿ = ನೋಡು ಎಂದು ನೋವಿನಿಂದ ಕೂಗಿತು ಆ ರಾಜಹಂಸ.

ಬಡವನಿಗೆ ಔತಣವನ್ನು ನೀಡುವಾಗ ಯಥೇಚ್ಚವಾಗಿ ನೀಡಬೇಕೆ ಹೊರತು ಒಂದು ಬೊಗಸೆ ಹಾಲು ನೀಡಿದರೆ ತೃಪ್ತಿಯಾಗುವುದೇ? ಇಬ್ಬನಿ ಸುರಿದರಷ್ಟೇ ಕೆರೆ ತುಂಬುತ್ತದೆಯೇ? ದೊರೆಯೇ ನೀನು ನನ್ನನ್ನು ತಿಂದಷ್ಟಕ್ಕೆ ನಿನ್ನೊಡಲಿನ ಹಸಿವು ತಣಿದು ಹೋಗುತ್ತದೆಯೇ? ಇದು ನಿನ್ನ ಮೈಗೆ ಹಿತವೇ ಹೇಳು, ಎಲೈ ಭೂಪತಿಯೇ ನನ್ನನ್ನು ಬಿಟ್ಟುಬಿಡು. ನಾನಿಲ್ಲವಾದರೆ ನನ್ನ ಮಡದಿ ಮಕ್ಕಳು ಕಳವಳ ಪಡುತ್ತಾರೆ, ದುಃಖಿಸುತ್ತಾರೆ ಎಂದು ರಾಜನ ಹಿಡಿತದಿಂದಾದ ದೈಹಿಕವಾದ ನೋವಿನಿಂದ ಹಾಗೂ ಮನಸ್ಸಿಗಾದ ಕಳವಳದಿಂದ ಆ ರಾಜಹಂಸವು ಮಾತನಾಡಿತು.

20. ಮರನ ಹುತ್ತವನೇರಿದರ ಸಂ
ಗರದಿ ದೈನ್ಯಂಬಡುವರಾಯುಧ
ಮುರಿದ ಬರಿಗೈಯವರ ನೀರೊಳು ಹೊಕ್ಕು ನಿಂದವರ
ತರುಣಿಯರ ಮರೆಗೊಂಡವರ ನಿ
ಬ್ಬರದಿ ಮುರಿದೋಡುವರ ನಿದ್ರಾ
ಭರದೊಳಿರ್ದರ ಕೊಲುವುದುಚಿತವೆಯೆಂದುದಾ ಪಕ್ಷಿ

ಮರನ = ಮರವನ್ನು; ಹುತ್ತವನ್ + ಏರಿದರ = ಹುತ್ತವನ್ನು ಏರಿದ ವರನ್ನು; ಸಂಗರದಿ = ಯುದ್ಧದಲ್ಲಿ; ದೈನ್ಯಂ + ಪಡುವರ + ಆಯುಧ = ದೈನ್ಯ ತೋರಿದವರನ್ನು ಶಸ್ತ್ರಾಸ್ತ್ರಗಳು; ಮುರಿದ = ಮುರಿದುಹೋಗಿ; ಬರಿಗೈಯವರ = ಬರಿಗೈಯಲ್ಲಿ ನಿಂತವರನ್ನು; ತರುಣಿಯರ= ಎಳೆಪ್ರಾಯದ ಹೆಣ್ಣು ಮಕ್ಕಳನ್ನು; ಮರೆ ಗೊಂಡವರ = ಮರೆಯಲ್ಲಿರುವವರನ್ನು; ನಿಬ್ಬರದಿ = ರಭಸದಿಂದ; ಮುರಿ ದೋಡುವರ = ಬಿದ್ದೆದ್ದು ಓಡುವವರನ್ನು; ನಿದ್ರಾಭರದೊಳಿರ್ದರ = ಆಳವಾದ ನಿದ್ರೆಯಲ್ಲಿರುವವರನ್ನು; ಕೊಲುವುದು + ಉಚಿತವೆ + ಎಂದುದು + ಆ ಪಕ್ಷಿ = ಕೊಲ್ಲುವುದು ಸರಿಯೇ ಎಂದಿತು ಆ ರಾಜಹಂಸ.

ರಾಜಹಂಸವು ನಳನಿಗೆ ಮತ್ತೆ ಕ್ಷತ್ರಿಯೋಚಿತ ಧರ್ಮ ಏನೆಂಬುದನ್ನು ಉಪದೇಶಿಸುತ್ತಿದೆ. ಮರವನ್ನು, ಹುತ್ತವನ್ನು ಏರಿರುವವರನ್ನು, ಯುದ್ಧದಲ್ಲಿ ದೈನ್ಯ ತೋರಿದವರನ್ನು, ಶಸ್ತ್ರಾಸ್ತ್ರಗಳು ಮುರಿದುಹೋಗಿ ಬರಿಗೈಯಲ್ಲಿ ನಿಂತವರನ್ನು, ಎಳೆಪ್ರಾಯದ ಹೆಣ್ಣುಮಕ್ಕಳನ್ನು, ಮರೆಯಲ್ಲಿರುವವರನ್ನು, ರಭಸದಿಂದ ಬಿದ್ದೋಡುತ್ತಿರುವವರನ್ನು, ಗಾಢವಾಗಿ ನಿದ್ರಾವಶರಾಗಿರುವವರನ್ನು ಕೊಲ್ಲುವುದು ನ್ಯಾಯವೇ? ಎಂದು ಪ್ರಶ್ನಿಸಿತು.

21. ನುಡಿಗೆ ನಾಚಿದನರಸ ಹಂಸದ
ನಡವಳಿಗೆ ಮೆಚ್ಚಿದನು ನಿನ್ನನು
ಹಿಡಿದು ಕೊಲುವವನಲ್ಲ ನಿನ್ನಾಲಯಕೆ ಹೋಗೆಂದು
ಬಿಡಲು ರೆಕ್ಕೆಯ ಕೊಡಹಿ ಹಾರಿತು
ವೊಡನೆ ಮರಳಿತು ಧರೆಗೆ ರಾಯನ
ಕಡೆಗೆ ಮಂಡಿಸಿ ಕುಳಿತು ನುಡಿದುದು ನೃಪಗೆ ವಿನಯದಲಿ

ನುಡಿಗೆ = ರಾಜಹಂಸದ ಮಾತಿಗೆ; ನಾಚಿದನರಸ= ದೊರೆಯು ನಾಚಿದನು; ಹಂಸದ = ರಾಜಹಂಸದ; ನಡವಳಿಗೆ = ನಡತೆಗೆ; ಮೆಚ್ಚಿದನು = ಸಂತೋಷಪಟ್ಟನು; ನಿನ್ನನು= ನಿನ್ನನ್ನು; ಹಿಡಿದು = ಹಿಡಿದು; ಕೊಲ್ಲುವವನಲ್ಲ= ಕೊಲ್ಲುವ ಉದ್ದೇಶದವನು ನಾನಲ್ಲ; ನಿನ್ನ + ಆಲಯಕೆ = ನಿನ್ನ ಮನೆಗೆ; ಹೋಗು + ಎಂದು = ಹೋಗು ಎಂದು; ಬಿಡಲು = ಬಿಡುಗಡೆಗೊಳಿಸಲು; ರೆಕ್ಕೆಯ ಕೊಡಹಿ = ಮುದುರಿಕೊಂಡಿದ್ದ ರೆಕ್ಕೆಗಳನ್ನು ಕೊಡವಿಕೊಂಡು; ಹಾರಿತು = ಹಾರಿಹೋಯಿತು; ವೊಡನೆ = ತಕ್ಷಣವೇ, ಮತ್ತೆ; ಮರಳಿತು = ಹಿಂದಿರುಗಿ ಬಂತು; ಧರೆಗೆ = ಭೂಮಿಗೆ; ರಾಯನಕಡೆಗೆ = ರಾಜನತ್ತ; ಮಂಡಿಸಿ ಕುಳಿತು = ವಿಷಯ ಪ್ರಸ್ತಾಪಿಸುವಂತೆ ಕುಳಿತು; ನುಡಿದುದು = ಹೇಳಿತು; ನೃಪಗೆ = ನಳಮಹಾರಾಜನಿಗೆ; ವಿನಯದಲಿ = ವಿನಯಪೂರ್ವಕವಾಗಿ.

ರಾಜಹಂಸದ ನೀತಿ ಮಾತುಗಳನ್ನು ಕೇಳಿ ನಳಮಹಾರಾಜನಿಗೆ ನಾಚಿಕೆಯಾಯಿತು. ಅದರ ಮಾತುಕತೆ, ನಡವಳಿಕೆಗಳನ್ನು ಮೆಚ್ಚಿಕೊಳ್ಳುತ್ತ, 'ನಿನ್ನನ್ನು ಕೊಲ್ಲುವ ಉದ್ದೇಶದಿಂದ ಹಿಡಿಯಲಿಲ್ಲ. ನೀನು ನಿನ್ನ ಮನೆಗೆ ಹಿಂದಿರುಗು' ಎಂದು

ಅದನ್ನು ತನ್ನ ಹಿಡಿತದಿಂದ ಬಿಡುಗಡೆಗೊಳಿಸಿದನು. ರಾಜಹಂಸವು ಭಯದಿಂದ ಮುದುರಿಕೊಂಡಿದ್ದ ತನ್ನ ರೆಕ್ಕೆಗಳನ್ನು ಕೊಡಹಿಕೊಂಡು ಹಾರಿಹೋಯಿತು. ಆದರೆ ಮರುಕ್ಷಣವೇ ಹಿಂದಿರುಗಿ ಭೂಮಿಗಿಳಿದು ರಾಜನೆದುರು ಯಾವುದೋ ವಿಷಯ ಪ್ರಸ್ತಾಪಿಸುವಂತೆ ಕುಳಿತು ಸದ್ವಿನಯಪೂರ್ವಕವಾಗಿ ಹೇಳಲಾರಂಭಿಸಿತು.

ಈ ಸಂದರ್ಭದಲ್ಲಿ ಎರಡು ವಿಷಯಗಳನ್ನು ಮುಖ್ಯವಾಗಿ ಗಮನಿಸಬಹುದು. ಮೊದಲನೆಯದಾಗಿ, ರಾಜಹಂಸವು ನಳನೃಪನೊಂದಿಗೆ ಸಂಭಾಷಿಸುವ ಈ ಪ್ರಸಂಗವು 'ನಳಚರಿತ್ರೆ'ಗೆ ಮೂಲವೆನಿಸಿರುವ ಮಹಾಭಾರತದ 'ನಲೋಪಾಖ್ಯಾನ'ದಲ್ಲಿಲ್ಲ. ಕನಕದಾಸರು ಸಂಸ್ಕೃತದ ಕವಿ ಶ್ರೀಹರ್ಷನ 'ನೈಷಧೀಯಚರಿತಂ' ಕೃತಿಯಿಂದ ಪ್ರಭಾವಿತರಾಗಿ ಈ ಪ್ರಸಂಗವನ್ನು ನಿರೂಪಿಸಿದ್ದಾರೆಂದು ಈಗಾಗಲೇ ವಿದ್ವಾಂಸರು ಸಾಧಾರವಾಗಿ ವಿಮರ್ಶಿಸಿದ್ದಾರೆ. ಎರಡನೆಯದಾಗಿ, ಮೇಲೆ ಗಮನಿಸಿದ 19ನೇ ಪದ್ಯದಲ್ಲಿ ಹಂಸವು ಪ್ರಸ್ತಾಪಿಸುವ ಮಡದಿ, ಮಕ್ಕಳ ವಿಷಯವು ಶ್ರೀಹರ್ಷನ 'ನೈಷಧೀಯಚರಿತಂ' ಕೃತಿಯಲ್ಲಿ ನಾಲ್ಕು ಪದ್ಯಗಳಲ್ಲಿ ಭಾವೋತ್ಕಟತೆಯಿಂದ ಹರಿದಿದೆ. ಅಲ್ಲಿ ಅದು ರಾಜಹಂಸದ (ಸ್ವರ್ಣಹಂಸ) ಸ್ವಗತ ಪ್ರಲಾಪವಾಗಿ ನಿರೂಪಿತವಾಗಿದೆ. (ಕವಿ ಕನಕದಾಸರು- ಕಟ್ಟಿ ಶೇಷಾಚಾರ್ಯರು, 'ನಳಚರಿತ್ರೆ ನೈಷಧಚರಿತೆಗಳು' – ಪು. 95)

22. ಭೂರಮಣ ಕೇಳಸುವ ಕಾಯ್ದುಪ
ಕಾರಮಾಡಿದೆ ನೀನು ನಿನಗುಪ
ಕಾರಮಾಡುವೆನೆನಲದೇನೆಂದರಸ ಬೆಸಗೊಂಡ
ಸಾರಹೃದಯನೆ ಚಿತ್ತವಿಸು ವಿ
ಸ್ತಾರದಿಂದರುಹುವೆನು ಭುವನದೊ
ಳಾರಿಗುಂಟೀ ಪರಮಸುಕೃತಗಳೆಂದುದಾ ಪಕ್ಷಿ

ಭೂರಮಣ = ದೊರೆಯೇ; ಕೇಳ್ + ಅಸುವ = ಕೇಳು ಪ್ರಾಣವನ್ನು; ಕಾಯ್ದುಪಕಾರ ಮಾಡಿದೆ = ಉಳಿಸಿ ಉಪಕಾರ ಮಾಡಿದ್ದೀಯೆ; ನೀನು = ನೀನು; ನಿನಗೆ + ಉಪಕಾರ ಮಾಡುವೆನ್; ಎನಲ್ + ಅದು + ಏನೆಂದು + ಅರಸ = ನಿನಗೆ ಉಪಕಾರ ಮಾಡುತ್ತೇನೆ ಎಂದು ಹೇಳಲು, ಅದು ಏನು ಎಂದು ಅರಸನು;

ಬೆಸಗೊಂಡ = ಕೇಳಿದನು; ಸಾರಹೃದಯನೆ = ಶ್ರೇಷ್ಠವಾದ ಮನಸ್ಸುಳ್ಳವನೇ, ಹೃದಯವಂತನೇ; ಚಿತ್ತವಿಸು = ಲಕ್ಷ್ಯಗೊಟ್ಟು ಕೇಳು; ವಿಸ್ತಾರದಿಂದ + ಅರುಹುವೆನು = ವಿವರವಾಗಿ ಹೇಳುತ್ತೇನೆ; ಭುವನದೊಳಗೆ + ಆರಿಗುಂಟು + ಈ = ಜಗತ್ತಿನಲ್ಲಿ ಯಾರಿಗೆ ಉಂಟು ಈ ; ಪರಮಸುಕೃತಗಳೆಂದುದಾ ಪಕ್ಷಿ = ಈ ಬಗೆಯ ಮಹಾ ಪುಣ್ಯಗಳು ಎಂದುದು ಆ ಪಕ್ಷಿ.

ಭೂರಮಣನೇ ಕೇಳು, ನನ್ನ ಪ್ರಾಣವನ್ನು ಉಳಿಸಿ ಮಹದುಪಕಾರ ಮಾಡಿದ್ದೀಯೆ. ಪ್ರತಿಯಾಗಿ ನಾನೂ ನಿನಗೆ ಉಪಕಾರ ಮಾಡುತ್ತೇನೆ ಎಂದು ಆ ರಾಜಹಂಸವು ನುಡಿಯಲು, ರಾಜನು, 'ಅದೇನು' ಎಂದು ಕೇಳಿದನು. ಶ್ರೇಷ್ಠವಾದ ಮನಸ್ಸುಳ್ಳವನೇ, ಹೃದಯವಂತನೇ ಲಕ್ಷ್ಯಗೊಟ್ಟು ನಾನು ಹೇಳುವುದನ್ನು ಆಲಿಸುವಂಥವನಾಗು. ಈ ಜಗತ್ತಿನಲ್ಲಿ ಇಂತಹ ಪರಮ ಪುಣ್ಯವು ಯಾರಿಗೆ ಲಭಿಸಲು ಸಾಧ್ಯ ಎನ್ನುತ್ತ ಆ ರಾಜಹಂಸವು ಹೇಳಲಾರಂಭಿಸಿತು.

23. ಅರಸ ಕೇಳತಿದೂರದಲಿ ಸುರ
ಪುರವ ಪೋಲ್ವ ವಿದರ್ಭಪಟ್ಟಣ
ದರಸು ಭೀಮನೃಪಾಲನಾತನ ತನುಜೆ ದಮಯಂತಿ
ಪರಮ ಪುಣ್ಯಾಂಗನೆ ಮಹಾಸುಂ
ದರಿ ನಿಪುಣೆ ಗಜಗಮನೆ ನಯಗುಣ
ಭರಿತೆ ಸೊಬಗಿನ ಸೋನೆ ತಾನಿಹಳಲ್ಲಿ ವನಜಾಕ್ಷಿ

ಅರಸ = ದೊರೆಯೇ; ಕೇಳು + ಅತಿ ದೂರದಲಿ = ಕೇಳು, ಇಲ್ಲಿಂದ ಬಹಳ ದೂರದಲ್ಲಿ; ಸುರಪುರವ = ದೇವತೆಗಳು ವಾಸಿಸುವ ಸ್ವರ್ಗವನ್ನು ಹೋಲುವ; ವಿದರ್ಭ ಪಟ್ಟಣದ + ಅರಸು = ವಿದರ್ಭ ನಗರದ ರಾಜ; ಭೀಮನೃಪಾಲನ್ + ಆತನ = ಭೀಮನೆಂಬ ಅರಸನಿದ್ದಾನೆ, ಅವನ; ತನುಜೆ = ಮಗಳು; ದಮಯಂತಿ = ದಮಯಂತಿಯೆಂದು ಹೆಸರುಳ್ಳವಳು; ಪರಮ = ಶ್ರೇಷ್ಠವಾದ; ಪುಣ್ಯ + ಅಂಗನೆ = ಪುಣ್ಯವಂತ ಹೆಣ್ಣುಮಗಳು; ಮಹಾಸುಂದರಿ = ಅತ್ಯಂತ ಚೆಲುವೆ; ನಿಪುಣೆ = ಸಮರ್ಥಳು; ಗಜಗಮನೆ = ಆನೆಯಂತೆ ಗಂಭೀರವಾದ ನಡೆಯುಳ್ಳವಳು; ನಯಗುಣಭರಿತೆ = ಮೃದುವಾದ, ಸದ್ವಿನಯದಿಂದ

ಕೂಡಿದ ಗುಣವುಳ್ಳವಳು; ಸೊಬಗಿನ ಸೋನೆ = ಸೌಂದರ್ಯವೇ ಧಾರೆಯಾಗಿ ಇಳಿದಂತಿರುವಂಥವಳು; ತಾನ್ + ಇಹಳ್ + ಅಲ್ಲಿ = ಅಲ್ಲಿದ್ದಾಳೆ; ವನ +ಜ + ಅಕ್ಷಿ = ತಾವರೆಯಂತಿರುವ ಕಣ್ಣುಗಳುಳ್ಳವಳು.

ದೊರೆಯೇ ಕೇಳು, ಇಲ್ಲಿಂದ ಬಹಳ ದೂರದಲ್ಲಿ, ದೇವತೆಗಳು ವಾಸಮಾಡುವ ಸ್ವರ್ಗವನ್ನೇ ಹೋಲುವ ವಿದರ್ಭನಗರವಿದೆ. ಅದರ ಅರಸು ಭೀಮನೆಂಬುವನು. ಅವನ ಮಗಳು ದಮಯಂತಿ. ಬಹಳ ಪುಣ್ಯವಂತ ಹೆಣ್ಣು ಮಗಳು. ಅತಿ ಚೆಲುವೆ. ಎಲ್ಲ ವಿಷಯಗಳಲ್ಲೂ ನಿಪುಣೆಯೂ ಸಮರ್ಥಳೂ ಆದವಳು. ಆನೆಯಂತೆ ಘನಗಂಭೀರವಾದ ನಡೆಯುಳ್ಳವಳು, ಸದ್ವಿನಯಗಳಿಂದ ಮೃದುವಾದ ನುಡಿ ಮತ್ತು ಶ್ರೇಷ್ಠ ವ್ಯಕ್ತಿತ್ವಗಳಿಂದ ಕೂಡಿದ ಗುಣವುಳ್ಳವಳು, ಸೌಂದರ್ಯವೇ ಧಾರೆಯಾಗಿ ಇಳಿದಂತಿರುವವಳು, ತಾವರೆಯಂತಹ ಸುಂದರ, ನಸುಗೆಂಪು ವರ್ಣದ, ಸುಕೋಮಲವಾದ, ಅರಳಿದ ಕಣ್ಗಳ ಚೆಲುವೆ ಆ ನಗರದಲ್ಲಿದ್ದಾಳೆ.

24. ಪೊಗಳಲಳವೇ ಸತಿಯ ಚೆಲುವಿನ
ಬಗೆಯ ಭಾವಿಸಿ ನೋಡಲತಿ ಸೋ
ಜಿಗವು ನೆರೆ ದಮಯಂತಿ ಯೌವನರೂಪರೇಖೆಯಲಿ
ನಗೆಮೊಗದ ಪೊಂಬೊಗರ ಮಿಂಚಿನ
ಬೊಗಸೆಗಂಗಳ ಸೆಳೆನಡುವ ಸೆ
ಳ್ಳುಗುರ ಬೆಡಗಿನ ಕಾಂತೆ ರಂಜಿಸುತಿರ್ಪಳಾ ಪುರದಿ

ಪೊಗಳಲು + ಅಳವೇ = ಹೊಗಳಲು ಸಾಧ್ಯವೇ; ಸತಿಯ = ಆ ಹೆಣ್ಣು ಮಗಳ; ಚೆಲುವಿನ = ಸೌಂದರ್ಯದ; ಬಗೆಯ = ರೀತಿಯನ್ನು; ಭಾವಿಸಿ = ಯೋಚಿಸಿ; ನೋಡಲು + ಅತಿ = ನೋಡಲು ಬಹಳ; ಸೋಜಿಗವು = ಆಶ್ಚರ್ಯಕರವಾದ ಸಂಗತಿ; ನೆರೆ = ಬಹಳ; ದಮಯಂತಿ = ದಮಯಂತಿಯು; ಯೌವನ ರೂಪರೇಖೆಯಲಿ = ತಾರುಣ್ಯಭರಿತ ರೂಪ, ಆಕಾರಗಳಲ್ಲಿ; ನಗೆಮೊಗದ = ನಗೆಯಿಂದ ಅರಳಿದ ಮುಖದ; ಪೊನ್ + ಪೊಗರ = ಚಿನ್ನದಂತಹ ಕಾಂತಿಯ; ಮಿಂಚಿನ = ಮಿಂಚಿನಂತೆ ಸೊಗಸಾದ ಚಲನೆ ಮತ್ತು ಕಾಂತಿಯುಳ್ಳ;

ಬೊಗಸೆಗಂಗಳ = ಬೊಗಸೆಯಷ್ಟು ವಿಶಾಲವಾದ ಹಾಗೂ ಆಳವಾದ ಕಣ್ಣುಗಳ; ಸೆಳೆನಡುವ = ಆಕರ್ಷಕವಾದ ತೆಳ್ಳಗಿನ ಸೊಂಟದ; ಸೆಳ್ಳುಗುರ = ಕೋಮಲವಾದ ಉಗುರುಗಳುಳ್ಳ; ಬೆಡಗಿನ = ಅಪೂರ್ವಕಾಂತಿಯಿಂದ ಮಿಂಚುವ; ಕಾಂತೆ = ಮನಸೆಳೆಯುವ ಹೆಣ್ಣು; ರಂಜಿಸುತಿರ್ಪಳ್+ ಆ = ಮನಸ್ಸಂತೋಷ ಗೊಳಿಸು ವಂತಿದ್ದಾಳೆ ಆ; ಪುರದಿ = ಆ ಪಟ್ಟಣದಲ್ಲಿ.

ದಮಯಂತಿಯ ರೂಪು ಬೆಡಗು ಲಾವಣ್ಯಗಳನ್ನು ಹೊಗಳಲು ಪದಗಳು ಸಾಲವು. ಅವಳ ಚೆಲುವಿನ ರೀತಿ, ಶೈಲಿಗಳನ್ನು ನೋಡಿ ವರ್ಣಿಸಲು ಹೊರಟರೆ, ಅತ್ಯಾಶ್ಚರ್ಯಕರ ಸಂಗತಿಯೆನಿಸುತ್ತದೆ. ಆಕೆಯ ಯೌವನಭರಿತ ರೂಪ, ಆಕಾರ, ನಗೆಯರಳಿದ, ಚಿನ್ನದ ಕಾಂತಿಯಿಂದ ಹೊಳೆಯುವ ಮುಖ, ಮಿಂಚಿನಂತೆ ಚಂಚಲವಾಗಿ ಹಾಯುವ ಅತ್ಯಂತ ಪ್ರಭಾಯುಕ್ತ ಬೊಗಸೆಗಣ್ಣುಗಳು, ಆಕರ್ಷಕವಾಗಿ ಬಳುಕುವ ಬಡನಡು, ಕೋಮಲವಾದ ಆರೋಗ್ಯವಂತ ಉಗುರುಗಳು, ಹೀಗೆ ಅಪೂರ್ವ ಕಾಂತಿಯಿಂದ ಬೆಳಗುತ್ತ ಮನಸೆಳೆಯುವ ದಮಯಂತಿಯು ನೋಡುಗರ ಮನಸ್ಸಿನಲ್ಲಿ ಸಂತೋಷವುಕ್ಕಿಸುವಂತಿದ್ದಾಳೆ.

ಸಾಮಾನ್ಯವಾಗಿ ಕವಿಗಳು ಸ್ತ್ರೀಯ ಸೌಂದರ್ಯ ವರ್ಣನೆ ಮಾಡುವಾಗ ಮೂಗು, ಕಣ್ಣು, ಕದಪು, ತುಟಿ ಹಾಗೂ ಇತರ ಮೋಹಕ ಅಂಗಾಂಗ ವರ್ಣನೆಗೆ ಗಮನ ಹರಿಸುವುದು ಸಾಮಾನ್ಯ ಸಂಗತಿ. ಕನಕದಾಸರು ಇವುಗಳೊಂದಿಗೆ ದಮಯಂತಿಯ ಕೋಮಲವಾದ ಉಗುರುಗಳತ್ತ ಗಮನ ಸೆಳೆಯುತ್ತಾರೆ. ಉಗುರುಗಳು ಒಂದು ಆರೋಗ್ಯವಂತ ಹಾಗೂ ಸುಲಕ್ಷಣವಾದ ಶರೀರದ ಭಿತ್ತಿ ಫಲಕಗಳಂತೆ. ದೇಹದಲ್ಲಿ ಏನೇ ಅನಾರೋಗ್ಯದ ಸಂಗತಿಗಳಿದ್ದರೂ ಉಗುರುಗಳ ಆಕಾರ, ಮತ್ತು ವಿನ್ಯಾಸಗಳು ಅದನ್ನು ಮೇಲ್ನೋಟಕ್ಕೇ ಅನಾವರಣಗೊಳಿಸುತ್ತವೆ. ಈ ಹಿನ್ನೆಲೆಯಲ್ಲಿ ದಮಯಂತಿಯ ಉಗುರುಗಳ ವರ್ಣನೆಯ ಔಚಿತ್ಯವನ್ನು ಮನಗಾಣ ಬಹುದು. ಕವಿಯ ಸೂಕ್ಷ್ಮಾವಲೋಕನ ಚಕ್ಷುವಿಗೂ, ಆರೋಗ್ಯ ಚಿಂತನಾ ಶೈಲಿಗೂ ಈ ಅಂಶ ನಿದರ್ಶನ ಎನ್ನಬಹುದು.

25. ಕ್ಷಿತಿಯೊಳಿಹ ಸತಿಯರಲಿಯಮರಾ
ವತಿಯೊಳಿಹ ಪೆಣ್ಗಳಲಿ ಮೇಣಾ
ವಿತಳದಲ್ಲಿಹ ನಾರಿಯರಲ್ಲೀಕ್ಷಿಸಿದಡಾ ಸತಿಗೆ

ಪ್ರತಿಯ ಕಾಣೆನು ರೂಪಿನಲಿ ನೀ
ನತಿ ಚೆಲುವ ನಿನಗವಳು ಪಾಸಟಿ
ಸತಿಗೆ ನೀನೇ ರಮಣನಲ್ಲದೆ ಕಾಣೆನಿತರರನು

ಕ್ಷಿತಿಯೊಳಿಹ = ಭೂಮಿಯಲ್ಲಿರುವ; ಸತಿಯರಲಿ + ಅಮರಾವತಿಯೊಳ್ + ಇಹ = ಸ್ತ್ರೀಯರಲ್ಲಿ ಅಮರಾವತಿಯಲ್ಲಿರುವ; ಪೆಣ್ಗಳಲಿ = ಹೆಣ್ಣುಗಳಲ್ಲಿ; ಮೇಣ್ + ಆ + ವಿತಳದಲ್ಲಿಹ = ಮತ್ತು ಸಪ್ತ ಅಧೋಲೋಕಗಳಲ್ಲಿ ಒಂದಾದ ವಿತಳದಲ್ಲಿರುವ; ನಾರಿಯರಲ್ಲಿ + ಈಕ್ಷಿಸಿದಡೆ + ಆ = ಹೆಂಗಸರಲ್ಲಿ ಹೋಲಿಸಿ ನೋಡಿದರೆ; ಆ ಸತಿಗೆ = ಆ ಹೆಣ್ಣು ಮಗಳಿಗೆ; ಪ್ರತಿಯ = ಸರಿಸಾಟಿ ಯಾದವರನ್ನು; ಕಾಣೆನು = ನಾನು ಕಂಡಿಲ್ಲ; ರೂಪಿನಲ್ಲಿ = ರೂಪದಲ್ಲಿ; ನೀನು + ಅತಿ + ಚೆಲುವ = ನೀನು ಮಹಾ ರೂಪವಂತ; ನಿನಗೆ + ಅವಳು = ನಿನಗೆ ಅವಳು; ಪಾಸಟಿ = ಸರಿಸಾಟಿ; ಸತಿಗೆ = ಆ ಹೆಣ್ಣು ಮಗಳಿಗೆ; ನೀನೇ = ನೀನೇ; ರಮಣನಲ್ಲದೆ = ಪ್ರೀತಿಯ ಪತಿಯಲ್ಲದೆ; ಕಾಣೆನು + ಇತರರನು = ಬೇರೆಯವರನ್ನು ನಾ ಕಾಣೆ.

ಈ ಭೂಲೋಕದಲ್ಲಿರುವ ಹೆಣ್ಣು ಮಕ್ಕಳಲ್ಲಾಗಲೀ, ಇಂದ್ರನ ಅಮರಾವತಿ ಯಲ್ಲಾಗಲೀ, ಅಥವಾ ಸಪ್ತ ಅಧೋಲೋಕಗಳಲ್ಲೊಂದಾದ ವಿತಳದಲ್ಲಾಗಲೀ, ಇರುವ ಸ್ತ್ರೀಯರಿಗೆ ಹೋಲಿಸಿ ನೋಡುವುದಾದರೆ, ದಮಯಂತಿಯ ರೂಪು, ಯೌವನ, ಗುಣಾತಿಶಯಗಳಿಗೆ ಸರಿಸಾಟಿಯಾಗಿರುವವರನ್ನು ಕಾಣಲು ಸಾಧ್ಯವಿಲ್ಲ. ನೀನೋ ರೂಪಿನಲ್ಲಿ ಅತಿ ಚೆಲುವ. ಹಾಗಾಗಿ ದಮಯಂತಿಯೇ ನಿನಗೆ ಸರಿಸಾಟಿಯಾದವಳು. ಬೇರೆ ಯಾರೂ ಅವಳಿಗೆ ತಕ್ಕವರಾಗಲಾರರು. ನೀನೇ ಅವಳಿಗೆ ಪ್ರಿಯಪತಿಯಾಗಲು ತಕ್ಕವನು.

26. ಆವಳು ನಿನಗೊಲಿವಂತೆ ಮಾಡುವೆ
ಶಿವನ ಕೃಪೆ ನಿನಗುಂಟು ನಮ್ಮಲಿ
ಸವಡಿನುಡಿಯಿಲ್ಲರಸ ನಂಬುವುದೆನ್ನ ನೀನೆನಲು
ಅವನಿಪತಿ ನಸುನಗುತ ಹಂಸೆಯ
ಸವಿನುಡಿಗೆ ಮನಸೋತು ವಿರಹದ

ತವಕದಲಿ ಹೇವರಿಸಿ ನುಡಿದನು ನೃಪತಿ ಖಗಪತಿಗೆ

ಅವಳು ನಿನಗೆ + ಒಲಿಯುವಂತೆ + ಮಾಡುವೆ = ಅವಳು ನಿನ್ನನ್ನು ಇಷ್ಟಪಟ್ಟು ನಿನ್ನತ್ತ ಒಲಿಯುವಂತೆ ಮಾಡುತ್ತೇನೆ; ಶಿವನ = ಪರಶಿವನ; ಕೃಪೆ = ಅನುಗ್ರಹ; ನಿನಗೆ + ಉಂಟು = ನಿನಗಿದೆ; ನಮ್ಮಲಿ = ನನ್ನಲ್ಲಿ; ಸವಡಿ + ನುಡಿ + ಯಿಲ್ಲ + ಅರಸ = ಇಬ್ಬಗೆಯ ನೀತಿ ಇಲ್ಲ ದೊರೆಯೇ; ನಂಬುವುದು + ಎನ್ನ = ನನ್ನನ್ನು ನಂಬಬಹುದು; ನೀನು + ಎನಲು = ನೀನು ಎಂದು ನುಡಿಯಲು; ಅವನಿಪತಿ = ನಳ ಮಹಾರಾಜನು; ನಸುನಗುತ = ಮುಗುಳ್ನಗು; ಹಂಸೆಯ = ರಾಜಹಂಸದ; ಸವಿನುಡಿಗೆ = ಇನಿದಾದ ಮಾತುಗಳಿಗೆ; ಮನಸೋತು = ಮಾರುಹೋಗಿ; ವಿರಹದ = ಅಗಲಿಕೆಯ; ತವಕದಲಿ = ಅಪೇಕ್ಷೆಯಿಂದ; ಹೇವರಿಸಿ = ನಾಚಿ ಬೇಸರಗೊಂಡು; ನುಡಿದನು = ಹೇಳಿದನು; ನೃಪತಿ = ಭೂಪತಿ; ಖಗಪತಿಗೆ = ಪಕ್ಷಿರಾಜನಿಗೆ.

ದಮಯಂತಿಯು ನಿನ್ನನ್ನು ಇಷ್ಟಪಟ್ಟು ನಿನ್ನತ್ತ ಒಲಿಯುವಂತೆ ಮಾಡುತ್ತೇನೆ. ನಿನಗೆ ಆ ಪರಶಿವನ ಅನುಗ್ರಹವಿದೆ. ನಾನು ಇಬ್ಬಗೆಯ ನೀತಿಯ ಮಾತುಗಳನ್ನು ಆಡುವವನಲ್ಲ. ನೀನು ನನ್ನ ಮಾತುಗಳನ್ನು ನಂಬಬಹುದು ಎಂದು ಆ ರಾಜಹಂಸವು ನಳಮಹಾರಾಜನಿಗೆ ಹೇಳಲು, ಅವನು ಆ ಪಕ್ಷಿಯ ಸವಿಮಾತುಗಳಿಗೆ ಮನಸೋತು ತನ್ನ ವಿರಹಾವಸ್ಥೆಯನ್ನು ಕುರಿತು ನಾಚಿದವನಾದರೂ ಹಿಗ್ಗುತ್ತ ಆ ಪಕ್ಷಿರಾಜನನ್ನು ಕುರಿತು ಹೀಗೆಂದನು.

27. ಮನಸಿಜನ ಶರಹತಿಗೆ ನೊಂದೆನು
ತನುವ ಸೈರಿಸಲಾರೆನೆನಗಾ
ವನಿತೆಯನು ಸೇರಿಸುತ ಸಲಹೆನ್ನಸುವ ಕರುಣದಲಿ
ಎನಗೆ ನೀನೇ ಪರಮಬಾಂಧವ
ಮನಕೆ ಹರುಷವ ಮಾಡು ನೀನೀ
ಬನಕೆ ಬಹ ಪರಿಯಂತ ತಾನಿಲ್ಲಿಹೆನು ಹೋಗೆಂದ

ಮನಸಿಜನ = ಮನಸ್ಸಿನಲ್ಲಿ ಹುಟ್ಟುವಂಥವನ, ಮನ್ಮಥನ; ಶರಹತಿಗೆ = ಬಾಣಗಳ ಹೊಡೆತಕ್ಕೆ; ನೊಂದೆನು = ನೊಂದು ಹೋಗಿದ್ದೇನೆ; ತನುವ =

ದೇಹದಲ್ಲುಂಟಾಗುವ ವೇದನೆಯನ್ನು; ಸೈರಿಸಲಾರೆನ್ + ಎನಗೆ + ಆ = ತಡೆದುಕೊಳ್ಳಲಾರೆ, ನನಗೆ ಆ; ವನಿತೆಯನ್ನು = ಹೆಣ್ಣು ಮಗಳನ್ನು; ಸೇರಿಸುತ = ಒಂದಾಗಿಸುತ; ಸಲಹು + ಎನ್ನ + ಅಸುವ = ನನ್ನ ಪ್ರಾಣವನ್ನು ಕಾಪಾಡು; ಕರುಣದಲಿ = ದಯೆಯಿಂದ; ಎನಗೆ ನೀನೇ = ನನಗೆ ನೀನೇ; ಪರಮಬಾಂಧವ = ಎಲ್ಲಕ್ಕಿಂತಲೂ ಶ್ರೇಷ್ಠವಾದ ಬಂಧು; ಮನಕೆ = ಮನಸ್ಸಿಗೆ; ಹರುಷವ = ಸಂತೋಷವನ್ನು; ಮಾಡು = ಉಂಟುಮಾಡು; ನೀನು + ಈ = ನೀನು ಈ; ಬನಕ್ಕೆ = ವನಕ್ಕೆ; ಬಹ = ಬರುವ; ಪರಿಯಂತ = ವರೆಗೂ; ತಾನು + ಇಲ್ಲಿ + ಇಹೆನು = ನಾನಿಲ್ಲೇ ಇರುತ್ತೇನೆ; ಹೋಗೆಂದ = ಹೋಗು ಎಂದನು.

ಮನಸ್ಸಿನಲ್ಲಿ ಹುಟ್ಟುವ ವಾಂಛೆಗಳ ರೂಪವಾದ ಮನ್ಮಥನು ಹೂಡುವ ಆಕರ್ಷಣೆಗಳೆಂಬ ಬಾಣಗಳಿಗೆ ಸಿಕ್ಕು ನೊಂದು ಹೋಗಿದ್ದೇನೆ. ಈ ದೈಹಿಕವಾದ ವೇದನೆಯನ್ನು ಸೈರಿಸಲಾರದವನಾಗಿದ್ದೇನೆ. ಆ ವನಿತೆಯನ್ನು ನನ್ನೊಂದಿಗೆ ಸೇರುವಂತೆ ಉಪಕರಿಸಿ ದಯಮಾಡಿ ನನ್ನನ್ನು ಪ್ರಾಣಾಪಾಯದಿಂದ ಕಾಪಾಡು. ನನಗೆ ನೀನೇ ಎಲ್ಲಕ್ಕಿಂತಲೂ ಶ್ರೇಷ್ಠನಾದ ಬಂಧುವಾಗಿದ್ದೀಯೆ. ನನ್ನ ಮನಸ್ಸು ಸಂತೋಷಗೊಳ್ಳುವಂತೆ ಮಾಡು. ನೀನು ಹೋಗಿ ಈ ವನಕ್ಕೆ ಮರಳಿ ಬರುವವರೆಗೆ ನಾನು ಇಲ್ಲಿಯೇ ಇರುತ್ತೇನೆ. ಹೋಗು ಎಂದು ರಾಜಹಂಸದೊಂದಿಗೆ ನಳಮಹಾರಾಜನು ತನ್ನ ಮನಸ್ಥಿತಿಯನ್ನು ತೋಡಿಕೊಂಡನು.

28. ಕೇಳು ಧರ್ಮಜ ನಳನೃಪಾಲನ
ಬೀಳುಕೊಂಡು ಸರಾಗದಿಂದ ವ
ನಾಲಯವ ಹೊರವಂಟು ತೆರಳಿತು ವಾಯುವೇಗದಲಿ
ಆ ಲತಾಂಗಿಯ ಪತಿಯ ಕೀರ್ತಿ ವಿ
ಶಾಲವಾದಂದದಲಿ ರಾಜಮ
ರಾಳ ಗಗನಕೆ ಹಾಯ್ದು ಕಂಡಿಳಿತಂದುದಾ ಪುರಕೆ

ಕೇಳು ಧರ್ಮಜ = ಧರ್ಮರಾಯನೇ ಕೇಳು; ನಳನೃಪಾಲನ = ನಳಮಹಾರಾಜನ; ಬೀಳುಕೊಂಡು = ಅಪ್ಪಣೆ ಪಡೆದು ಹೊರಟು; ಸರಾಗದಿಂದ = ಪ್ರೀತಿಯಿಂದ; ವನಾಲಯವ = ಆ ವನ ಪ್ರದೇಶದಿಂದ; ಹೊರವಂಟು =

ಹೊರಹೊರಟು; ತೆರಳಿತು = ಹೋಯಿತು; ವಾಯುವೇಗದಲಿ = ಗಾಳಿಯಂತೆ ಅತ್ಯಂತ ವೇಗವಾಗಿ; ಆ ಲತಾಂಗಿಯ = ಲತೆಯಂತೆ ಅಂಗವಿನ್ಯಾಸವುಳ್ಳ; ಪತಿಯ = ಗಂಡನ; ಕೀರ್ತಿ = ಖ್ಯಾತಿಯೂ ಘನತೆಯೂ; ವಿಶಾಲವಾದ + ಅಂದದಲಿ = ವಿಸ್ತಾರವಾಗಿ ಪಸರಿಸಿದ ರೀತಿಯಲ್ಲಿ; ರಾಜಮರಾಳ = ರಾಜಹಂಸವು; ಗಗನಕ್ಕೆ = ಆಕಾಶಕ್ಕೆ; ಹಾಯ್ದು = ಹಾರಿ; ಕಂಡು + ಇಳಿತಂದುದು + ಆ ಪುರಕೆ = ನೋಡಿ ಇಳಿಯಿತು ಆ ವಿದರ್ಭನಗರದಲ್ಲಿ.

ಕೇಳು ಧರ್ಮರಾಯನೇ, ಆ ರಾಜಹಂಸವು, ನಳ ಮಹಾರಾಜನ ಅನುಮತಿ ಪಡೆದು ಆ ವನಪ್ರದೇಶದಿಂದ ಹೊರಹೊರಟು ವಾಯುವೇಗದಿಂದ ಹಾರಿಹೋಯಿತು. ನಳ ಮಹಾರಾಜನ ಕೆಲಸವನ್ನು ಮಾಡಿಕೊಡಲು ಮನಸ್ಸಂತೋಷದಿಂದ, ಪ್ರೀತಿಯಿಂದ ಹಾರಿಹೋಗಿ, ಆ ಲತಾಂಗಿಯ ಗಂಡನ ಕೀರ್ತಿಯನ್ನು ಘನತೆಯನ್ನು ವಿಸ್ತರಿಸಿ ಹೇಳುವಂತೆ ವಿಶಾಲವಾದ ಗಗನದಲ್ಲಿ ಹಾರುತ್ತಾ ವಿದರ್ಭ ನಗರವನ್ನು ಕಂಡು ಇಳಿಯಿತು.

29. ಕನಕಮಣಿ ನಿರ್ಮಿತದ ಸೌಧದಿ
ಜನನಿಕರ ಸಂದೋಹದಲಿಯುಪ
ವನದ ವೀದಿಗಳೆಸೆದು ಮೆರೆವ ವಿದರ್ಭ ಪಟ್ಟಣಕೆ
ಮನವೊಲಿದು ನಿಜಬಳಗ ಸಹಿತಂ
ಗನೆಯರೋಲಗದಲ್ಲಿ ಮದನನ
ಮೊನೆಯಲಗಿನಲಿ ಬಳಲ್ವ ಸತಿಯನು ಕಂಡುದಾ ಹಂಸೆ

ಕನಕಮಣಿ = ಚಿನ್ನದ ಮಣಿಗಳಿಂದ; ನಿರ್ಮಿತದ = ನಿರ್ಮಿಸಲಾದ; ಸೌಧದಿ = ಉನ್ನತೋನ್ನತ ಸೌಧಗಳಿಂದಲೂ; ಜನನಿಕರ ಸಂದೋಹದಲಿ + ಉಪವನದ = ಜನಸಮೂಹದಿಂದ ಕೂಡಿದ ಉಪವನಗಳಿದ್ದ; ವೀದಿಗಳ್ + ಎಸೆದು = ಬೀದಿಗಳು ಶೋಭಾಯಮಾನವಾಗಿ; ಮೆರೆವ = ಎದ್ದು ಕಾಣುವಂತೆ ಪ್ರಕಾಶಿಸುತ್ತಿದ್ದ; ವಿದರ್ಭ ಪಟ್ಟಣಕೆ = ವಿದರ್ಭ ನಗರಕ್ಕೆ ಬಂದಿಳಿಯಿತು; ಮನವೊಲಿದು = ಹೃತ್ಪೂರ್ವಕವಾಗಿ; ನಿಜಬಳಗ = ತನ್ನ ಬಂಧುಗಳ; ಸಹಿತ + ಅಂಗನೆಯರ + ಓಲಗದಲ್ಲಿ = ಸಮೇತ, ಹೆಂಗಳೆಯರ ಸಮೂಹದಲ್ಲಿ; ಮದನನ

= ಮನ್ಮಥನ; ಮೊನೆಯಲಗಿನಲಿ = ಬಾಣಗಳ ಚೂಪಾದ ತುದಿಗಳ ಘಾತದಿಂದ; ಬಳಲ್ವ = ಬಳಲುತ್ತಿದ್ದ; ಸತಿಯನು = ದಮಯಂತಿಯನ್ನು; ಕಂಡುದಾ ಹಂಸೆ = ಆ ರಾಜಹಂಸವು ನೋಡಿತು.

ಚಿನ್ನದ ಮಣಿಗಳಿಂದ ಶೋಭಾಯಮಾನವಾಗಿ ನಿರ್ಮಿಸಲಾಗಿದ್ದ ಸೌಧಗಳಿಂದಲೂ, ಜನ ಸಮೂಹಗಳಿಂದಲೂ, ಊರನಡುವಿನ ಉದ್ಯಾನವನಗಳಿಂದಲೂ ಎದ್ದು ಕಾಣುವಂತೆ ಪ್ರಕಾಶಿಸುತ್ತಿದ್ದ ಬೀದಿಗಳಿಂದಲೂ ಕೂಡಿದ ವಿದರ್ಭ ನಗರಕ್ಕೆ ಅತ್ಯಂತ ಸಂತೋಷದಿಂದ ರಾಜಹಂಸವು ಬಂದಿಳಿಯಿತು. ಅಲ್ಲಿ ತನ್ನ ಬಂಧುಬಳಗಗಳೂ ಹೆಂಗಳೆಯರೂ ನೆರೆದಿದ್ದ ಸಮೂಹದಲ್ಲಿ ಮನ್ಮಥನ ಹರಿತವಾದ ಸುಮಬಾಣಗಳ ಘಾತಕ್ಕೆ ಸಿಲುಕಿ ಬಳಲಿದ್ದ ದಮಯಂತಿಯನ್ನು ನೋಡಿತು.

30. ನೀಲಮಣಿಭಿತ್ತಿಗಳ ವಜ್ರದ
ಸಾಲುಗಂಬದ ಪಚ್ಚೆ ಹಲಗೆಯ
ಮೇಲೆ ಮುತ್ತಿನ ಲೋವೆ ಹವಳದಿ ಕಡೆದ ಬೋದಿಗೆಯ
ಸಾಲ ಮಣಿಮಂಟಪದಿ ಮಂಚದ
ಮೇಲೆ ಮಂಡಿಸಿ ನಳನ ಚಿಂತೆಯ
ತಾಳಿದಂಗನೆ ಸತಿಯರೊಡನಿರೆ ಕಂಡುದಾ ಹಂಸೆ

ನೀಲಮಣಿ ಭಿತ್ತಿಗಳ = ಅನರ್ಘ್ಯವಾದ ನೀಲಮಣಿಗಳನ್ನು ಹುದುಗಿಸಿ ನಿರ್ಮಿಸಿದ ಗೋಡೆಗಳನ್ನೂ; ವಜ್ರದ = ವಜ್ರ ಖಚಿತವಾದ; ಸಾಲುಗಂಬದ = ಸಾಲುಗಂಬಗಳನ್ನೂ; ಪಚ್ಚೆ ಹಲಗೆಯ = ಪಚ್ಚೆಯ ಹಲಗೆಗಳಿಂದ; ಮೇಲೆ = ಮೇಲೆ ಕಟ್ಟಿದ; ಮುತ್ತಿನಲೋವೆ = ಮುತ್ತಿನಲಿ ನಿರ್ಮಿಸಿದ ಮಂಟಪದ ಇಳಿಮಾಡಿನಿಂದಲೂ; ಹವಳದಿ ಕಡೆದ ಬೋದಿಗೆಯ = ಹವಳದಿಂದ ಕೆತ್ತಿದ ಕಂಬದ ಮೇಲ್ಕಟ್ಟುಗಳ; ಸಾಲ = ಸಾಲುಗಳನ್ನುಳ್ಳ; ಮಣಿ ಮಂಟಪದಿ = ಮಣಿರತ್ನಖಚಿತ ಮಂಟಪದಲ್ಲಿದ್ದ; ಮಂಚದ ಮೇಲೆ = ಪಲ್ಲಂಗದ ಮೇಲೆ; ಮಂಡಿಸಿ = ಕುಳಿತು; ನಳನ ಚಿಂತೆಯ = ನಳನ ಅಗಲಿಕೆಯ ಕುರಿತ ಚಿಂತೆಯಲ್ಲಿ; ತಾಳಿದಂಗನೆ = ಮುಳುಗಿದ್ದ ದಮಯಂತಿಯು; ಸತಿಯರ + ಒಡನಿರೆ =

ಹೆಂಗಳೆಯರ ಜೊತೆ ಇದ್ದುದನ್ನು; ಕಂಡುದು + ಆ ಹಂಸೆ = ಆ ರಾಜಹಂಸವು ನೋಡಿತು.

ರಾಜಭವನದಲ್ಲಿ ವೈಭವೋಪೇತವಾಗಿ ಮಣಿಮಯ ಮಂಟಪದ ಮಂಚದಲ್ಲಿದ್ದ ದಮಯಂತಿಯನ್ನು ರಾಜಹಂಸವು ಕಂಡುದನ್ನು ಈ ಪದ್ಯಖಂಡ ವರ್ಣಿಸುತ್ತದೆ. ಅನರ್ಘ್ಯವಾದ ನೀಲಮಣಿಗಳನ್ನು ಹುದುಗಿಸಿ ನಿರ್ಮಿಸಿದ ಗೋಡೆಗಳನ್ನು ವಜ್ರಖಚಿತವಾದ ಕಂಬಸಾಲುಗಳನ್ನು ಹವಳಗಳನ್ನು ಕಡೆದು ಮಾಡಿದ ಕಂಬದ ಮೇಲ್ಕಟ್ಟು ಸಾಲುಗಳನ್ನು ಹೊಂದಿದ್ದ ಅಪೂರ್ವ ಮಣಿಖಚಿತ ಮಂಟಪದಲ್ಲಿರಿಸಿದ ಪಲ್ಲಂಗದ ಮೇಲೆ ನಳನ ಅಗಲಿಕೆಯಿಂದ ಚಿಂತಾಕ್ರಾಂತಳಾಗಿ, ಸುತ್ತ ನೆರೆದಿದ್ದ ಹೆಂಗಳೆಯರ ಪರಿವಾರದ ಸಮೇತ ಕುಳಿತಿದ್ದ ದಮಯಂತಿಯನ್ನು ಆ ರಾಜಹಂಸವು ನೋಡಿತು.

31. ಪೆರೆನೊಸಲ ಕತ್ತುರಿಯ ತಿಲಕದ
ಕೊರಳ ಮುತ್ತಿನ ಹಾರ ರತ್ನದ
ಬೆರಳ ಮುದ್ರಿಕೆಗಳ ಸುವರ್ಣದ ಕರದ ಕಂಕಣದ
ಪರಿಪರಿಯ ನಿರಿಯುಡಿಗೆಗಳ ನೂ
ಪುರದ ತೊಡರಿನ ದೇಸಿ ಮಿಗೆ ಬಳ
ಸಿರಲು ತರುಣಿಯರಂದು ಸತಿಯನು ಕಂಡುದಾ ಹಂಸ

ಪೆರೆನೊಸಲ = ಚಂದ್ರನಂತಿದ್ದ ಹಣೆಯ; ಕತ್ತುರಿಯ ತಿಲಕದ = ಕಸ್ತೂರಿ ತಿಲಕವಿಟ್ಟಿದ್ದ; ಕೊರಳ = ಕತ್ತಿನಲ್ಲಿ; ಮುತ್ತಿನ ಹಾರದ = ಮುತ್ತಿನ ಹಾರವನ್ನು ಧರಿಸಿದ್ದ; ರತ್ನದ = ರತ್ನಖಚಿತವಾದ; ಬೆರಳ ಮುದ್ರಿಕೆಗಳ = ಮುದ್ರೆ ಯುಂಗುರಗಳನ್ನು ತೊಟ್ಟಿದ್ದ; ಸುವರ್ಣದ = ಚಿನ್ನದ; ಕರದ ಕಂಕಣದ = ಕೈಬಳೆಗಳನ್ನು ತೊಟ್ಟಿದ್ದ; ಪರಿಪರಿಯ = ವಿಧವಿಧವಾದ; ನಿರಿಯುಡಿಗೆಗಳ = ನಿರಿಗೆಗಳನ್ನುಳ್ಳ ಉಡುಗೆಯನ್ನುಟ್ಟಿದ್ದ; ನೂಪುರದ = ಮಣಿಖಚಿತ ಕಾಲ್ಗೆಜ್ಜೆಯನ್ನು ತೊಟ್ಟ; ತೊಡರಿನ ದೇಸಿ ಮಿಗೆ = ಎಲ್ಲವೂ ಸೇರಿದ ಬೆಡಗು ವಿಶೇಷವಾಗಿ ಮನಸೆಳೆಯುತ್ತಿರಲು; ಬಳಸಿರಲು = ಸುತ್ತುವರಿದಿರಲು; ತರುಣಿಯರಂದು = ನವ

ಯೌವನಭರಿತ ಸ್ತ್ರೀಯರು ಅಂದು; ಸತಿಯನು = ದಮಯಂತಿಯನ್ನು; ಕಂಡುದಾ ಹಂಸೆ = ಆ ಹಂಸವು ನೋಡಿತು.

ದಮಯಂತಿಯು ಚಂದ್ರನಂತೆ ಪ್ರಕಾಶಮಾನವಾದ ಕಾಂತಿಯುಕ್ತ ಹಣೆಯು ಳ್ಳವಳಾಗಿದ್ದಳು. ಕಸ್ತೂರಿ ತಿಲಕವನ್ನಿಟ್ಟುಕೊಂಡಿದ್ದಳು. ಮುತ್ತಿನ ಹಾರವನ್ನು ಕೊರಳಲ್ಲಿ ಧರಿಸಿದ್ದಳು. ಬೆರಳುಗಳಿಗೆ ರತ್ನಖಚಿತವಾದ ಮುದ್ರೆಯುಂಗುರಗಳನ್ನು ಧರಿಸಿದ್ದಳು. ಕೈಗೆ ಚಿನ್ನದ ಬಳೆಗಳನ್ನು ತೊಟ್ಟಿದ್ದಳು. ವಿಧವಿಧವಾದ ನೆರಿಗೆಗಳನ್ನುಳ್ಳ ಉಡುಗೆ ಯನ್ನುಟ್ಟಿದ್ದಳು. ಮಣಿಖಚಿತ ಕಾಲ್ಗೆಜ್ಜೆಯನ್ನು ತೊಟ್ಟಿದ್ದಳು. ಹೀಗೆ ಹಲವಾರು ರೀತಿಯ ಉಡುಗೆ ತೊಡುಗೆಗಳ ಬೆಡಗಿನಿಂದ ಕೂಡಿದ್ದ ಚೆಲುವೆ ದಮಯಂತಿಯನ್ನು ನವಯೌವನಭರಿತ ಹೆಣ್ಣು ಮಕ್ಕಳು ಸುತ್ತುವರಿದಿದ್ದ ದೃಶ್ಯವನ್ನು ಆ ರಾಜಹಂಸವು ನೋಡಿತು.

32. ತಳಿತ ಮೇಘದಿ ಹೊಳೆವ ಮಿಂಚಿನ
ಬಳಗವೆನೆ ಹಂಸಗಳು ನಭದಿಂ
ದಿಳೆಗಿಳಿದು ಸತಿಯರ ಸಭಾಮಂಡಲದಿ ಕುಳ್ಳಿರಲು
ನಳಿನಲೋಚನೆ ಕಂಡು ಪಕ್ಷಿಯ
ಲಲನೆಯರ ಮೊಗ ನೋಡಿ ಹಂಸದ
ಚೆಲುವ ಬಣ್ಣಿಸಿ ಹಿಡಿಯಬೇಕೆಂದೆನುತ ಗಮನಿಸಿದಳು

ತಳಿತ = ಚಿಗುರಿನ ಶಾಖೆಗಳಂತೆ ಹರಡಿಕೊಂಡ; ಮೇಘದಿ = ಮೋಡಗಳಲ್ಲಿ; ಹೊಳೆವ = ಥಳಥಳಿಸುವ; ಮಿಂಚಿನ ಬಳಗವೆನೆ = ಮಿಂಚಿನ ಗೊಂಚಲಿನಂತೆ; ಹಂಸಗಳು = ಹಂಸಗಳು; ನಭದಿಂದ + ಇಳೆಗೆ + ಇಳಿದು = ಆಕಾಶದಿಂದ ಭೂಮಿಗೆ ಇಳಿದು; ಸತಿಯರ = ಸ್ತ್ರೀ ಸಂಕುಲದ; ಸಭಾಮಂಡಲದಿ = ಸಭಾ ಸಮೂಹದಲ್ಲಿ; ಕುಳ್ಳಿರಲು = ಬಂದು ಕುಳಿತುಕೊಳ್ಳಲು; ನಳಿನಲೋಚನೆ = ತಾವರೆಯಂತೆ ಅರಳಿದ ಕಣ್ಣುಗಳುಳ್ಳವಳಾದ ದಮಯಂತಿಯು; ಕಂಡು = ನೋಡಿ; ಪಕ್ಷಿಯ = ರಾಜಹಂಸವನ್ನು; ಲಲನೆಯರ = ಆ ತರಣಿಯರ; ಮೊಗನೋಡಿ = ಮುಖವನ್ನು ನೋಡಿ; ಹಂಸದ ಚಲುವ = ರಾಜಹಂಸದ ಸೌಂದರ್ಯವನ್ನು

ಬಣ್ಣಿಸಿ = ವರ್ಣಿಸಿ; ಹಿಡಿಯಬೇಕು + ಎಂದು + ಎನುತ + ಅದನ್ನು ಹಿಡಿಯಬೇಕು ಎಂದು ಹೇಳುತ್ತ; ಗಮನಿಸಿದಳು = ಅದನ್ನನುಸರಿಸಿದಳು.

ಚಿಗುರಿನಂತೆ ಹರಡಿಕೊಂಡ ಎಳೆಮೊಳಕೆಯಂತಹ ಮೋಡಗಳ ಹಿಂಡಿನಲ್ಲಿ ಥಳಥಳಿಸುವ ಮಿಂಚಿನ ಗೊಂಚಲುಗಳಂತಿದ್ದ ಹಂಸಗಳು ಆಕಾಶದಿಂದ ಭೂಮಿಗಿಳಿದು ಹೆಂಗಳೆಯರು ಸೇರಿದ್ದ ಗುಂಪಿನ ಮಧ್ಯೆ ಬಂದು ಕುಳಿತುಕೊಂಡವು. ಅವುಗಳ ಮಧ್ಯೆ ಸುಂದರವಾಗಿದ್ದ ರಾಜಹಂಸವನ್ನು ಕಮಲಗಳಂತೆ ಚೆಲುವಾದ ಕಣ್ಣುಗಳುಳ್ಳ ದಮಯಂತಿಯು ನೋಡಿ ಅದರ ಚೆಲುವನ್ನು ಆಸ್ವಾದಿಸಿ ಬಣ್ಣಿಸುತ್ತಾ ಅದನ್ನು ಹಿಡಿಯಬೇಕು ಎನ್ನುತ್ತ ಅದರ ಬೆನ್ನಟ್ಟಿ ಹೋದಳು.

33. ಮೆಲ್ಲಮೆಲ್ಲನೆ ಅಡಿಯಿಡುತ ಕರ
ಪಲ್ಲವವ ಚಾಚಿದಳು ನೂಪುರ
ಘಲ್ಲುಘಲಿರೆನೆ ಅತ್ತಲಿತ್ತಲು ಸಾರುತಾ ಹಂಸೆ
ನಿಲ್ಲದಂಗೈಸುತ್ತ ಬರಲ
ಲ್ಲಲ್ಲಿ ಎಡರಿತು ಕುಸುಮಮಯ ನವ
ಮಲ್ಲಿಗೆಯ ಬನದಲ್ಲಿ ಹೊಕ್ಕುದು ಹೊದರ ಹೊಸಮೆಳೆಯ

ಮೆಲ್ಲಮೆಲ್ಲನೆ = ಮೃದುವಾಗಿ ಸ್ವಲ್ಪ ಸ್ವಲ್ಪವೇ; ಅಡಿಯಿಡುತ = ಹೆಜ್ಜೆ ಹಾಕುತ್ತ; ಕರಪಲ್ಲವವ = ಚಿಗುರಿನಂತಿದ್ದ ತನ್ನ ಕೈಯ್ಯನ್ನು; ಚಾಚಿದಳು = ನೀಡಿದಳು; ನೂಪುರ = ಕಾಲಿನಲ್ಲಿದ್ದ ಕಿರುಗೆಜ್ಜೆಯು; ಘಲ್ಲುಘಲಿರ್ + ಎನೆ = ಘಲ್ಲು ಘಲಿರ್ ಎಂದು ಶಬ್ದಿಸಲು; ಅತ್ತಲ್ + ಇತ್ತಲು = ಆಚೀಚೆ; ಸಾರುತ + ಆ + ಹಂಸೆ = ಸರಿಯುತ್ತ; ಹಾರುತ್ತ ಆ ಹಂಸವು; ನಿಲ್ಲದೆ + ಅಂಗೈಸುತ್ತ = ಎಲ್ಲಿಯೂ ನಿಂತುಕೊಳ್ಳದೆ ಆಸೆ ಹುಟ್ಟಿಸುತ್ತಾ; ಬರಲು + ಅಲ್ಲಿ + ಅಲ್ಲಿ = ಅಲ್ಲಲ್ಲಿ ನಿಲ್ಲದೆ ಮುಂದುವರಿಯುತ್ತಾ; ಎಡರಿತು = ಸಿಕ್ಕಿದಂತೆ ವಂಚಿಸುತ್ತಾ; ಕುಸುಮಮಯ = ಹೂಗಳಿಂದ ತುಂಬಿದ್ದ; ನವಮಲ್ಲಿಗೆಯ = ಆಗಷ್ಟೇ ಅರಳಿದ್ದ ಮಲ್ಲಿಗೆ ಹೂಗಳಿದ್ದ; ಬನದಲ್ಲಿ = ವನದಲ್ಲಿ; ಹೊಕ್ಕುದು = ನುಸುಳಿತು; ಹೊದರ ಹೊಸ ಮೆಳೆಯ = ಹೊಸದಾಗಿ ಚಿಗುರಿದ್ದ ಪೊದರಿನೊಳಗೆ.

ದಮಯಂತಿಯು ಆ ಚೆಲುವಿನ ರಾಜಹಂಸಕ್ಕೆ ಮಾರುಹೋಗಿ, ಮೆಲ್ಲಮೆಲ್ಲನೆ ಅಡಿಯಿಡುತ್ತ ಅದರ ಹಿಂದೆಯೇ ಸಾಗಿ ಅದನ್ನು ಹಿಡಿಯಲೆಂದು ತನ್ನ ಹೊಸ ಚಿಗುರಿನಂತಿದ್ದ ಕೈಗಳನ್ನು ಚಾಚಿದಳು. ಅವಳು ಅಡಿಯಿಡುತ್ತಿದ್ದಂತೆ ಅವಳ ಕಾಲಿನ ಕಿರುಗೆಜ್ಜೆಯು ಘಲಿರ್ ಘಲಿರೆಂದು ಶಬ್ದ ಮಾಡುತ್ತಿರಲು, ಆ ರಾಜಹಂಸವು ಆಚೀಚೆ ಸರಿಯುತ್ತ ಒಂದೆಡೆ ನಿಲ್ಲದೆ ಮುಂದುವರಿಯುತ್ತ, ಸಿಕ್ಕಿದಂತೆ ಆಸೆ ಹುಟ್ಟಿಸುತ್ತಾ, ಮುಂದೆ ಮುಂದೆ ಸಾಗಿ ಅಲ್ಲೊಂದೆಡೆ ಇದ್ದ ಆಗಷ್ಟೇ ಅರಳಿದ್ದ ಮಲ್ಲಿಗೆ ಹೂಗಳ ಪೊದರಿನೊಳಗೆ ನುಸುಳಿಕೊಂಡಿತು.

34. ಕೆಳದಿಯರ ಕೆಲಕೊತ್ತಿ ತಾನೇ
ಮೆಳೆಯ ಹೊಕ್ಕಳು ಬಾಗೆ ಸೆಳೆನಡು
ಬಳುಕೆ ಕುಚಭಾರದಲಿ ಮೇಲುದು ಜಾರೆ ಮುಡಿ ಚದರೆ
ಜಲಜಮುಖಿ ಬೆಮರಿಡಲು ಕೊರಳಿನ
ಲಲಿತದೇಕಾವಳಿಗಳಲ್ಲಾ
ಡಲು ಸೆರಗನಳವಡಿಸಿ ನಿಂದಳು ಬಳಲಿ ಬಿಸುಸುಯ್ದು

ಕೆಳದಿಯರ = ಗೆಳತಿಯರನ್ನು; ಕೆಲಕೆ + ಒತ್ತಿ = ಪಕ್ಕಕ್ಕೆ ಸರಿಸಿ; ತಾನೇ ಮೆಳೆಯ = ತಾನೇ ಆ ಪೊದರಿನೊಳಗೆ; ಹೊಕ್ಕಳು = ನುಗ್ಗಿದಳು; ಬಾಗೆ ಸೆಳೆನಡು = ಅವಳ ಬಡನಡುವು ಒನಪಿನಿಂದ ಬಾಗಿ; ಬಳುಕೆ = ಬಳುಕಲು; ಕುಚಭಾರದಲಿ = ಸ್ತನಗಳ ಭಾರದಿಂದ; ಮೇಲುದು ಜಾರೆ = ಮೇಲು ವಸ್ತ್ರವು ಸರಿದು ಬೀಳಲು; ಮುಡಿ = ತಲೆಗೂದಲು; ಚದರೆ = ಅಸ್ತವ್ಯಸ್ತವಾಗಿ ಕೆದರಲು; ಜಲಜಮುಖಿ = ತಾವರೆಯಂತೆ ಸುಂದರವಾದ ಮುಖವುಳ್ಳ ದಮಂಯತಿಯು; ಬೆಮರಿಡಲು = ಬೆವೆತುಹೋಗಲು; ಕೊರಳಿನ = ಕಂಠದಲ್ಲಿದ್ದ; ಲಲಿತದ + ಏಕಾವಳಿಗಳು + ಅಲ್ಲಾಡಲು = ಮನೋಹರವಾದ ಏಕಾವಳಿ ಸರಗಳು ತೂಗಾಡಲು; ಸೆರಗನಳವಡಿಸಿ = ಸೆರಗನ್ನು ದೃಢವಾಗಿ ಕಟ್ಟಿಕೊಂಡು; ನಿಂದಳು ಬಳಲಿ = ಆಯಾಸದಿಂದ ನಿಂತುಕೊಂಡಳು; ಬಿಸುಸುಯ್ದು = ಬಿಸಿಯುಸಿರನ್ನು ಹೊರಚೆಲ್ಲಿ.

ಗೆಳತಿಯರನ್ನು ಪಕ್ಕಕ್ಕೆ ಸರಿಸಿ ದಮಯಂತಿಯು ಆ ರಾಜಹಂಸವನ್ನು ಹಿಡಿಯಲು ತಾನೇ ಆ ಪೊದರಿನೊಳಗೆ ನುಗ್ಗಿದಳು. ತೆಳ್ಳಗಿದ್ದ ಅವಳ ಸೊಂಟವು

ಒನಪಿನಿಂದ ಬಳುಕಿ ಬಾಗಿತು. ಯೌವನಭರದಿಂದ ತುಂಬಿದ್ದ ಸ್ತನಗಳ ಭಾರದಿಂದ, ಧರಿಸಿದ್ದ ಮೇಲು ವಸ್ತ್ರವು ಜಾರಿತು. ತಲೆಗೂದಲು ಚೆದುರಿ ಕೆದರಿಹೋಯಿತು. ತಾವರೆಯಂತೆ ಸುಂದರವಾದ ನಸುಕೆಂಪಾದ ಮುಖವು ಬೆವರಿತು. ಕೋಮಲವಾದ ಕೊರಳಿನಲ್ಲಿ ಧರಿಸಿದ್ದ ಏಕಾವಳಿ ಸರವು ತೂಗಾಡಿತು. ಅನಂತರ ಅವಳು ಸೆರಗನ್ನು ದೃಢವಾಗಿ ಕಟ್ಟಿಕೊಂಡು ಎದ್ದು ನಿಂತಳು. ಬಳಲಿದ್ದುದರಿಂದ ಆಯಾಸದ ಬಿಸಿ ಯುಸಿರು ಚೆಲ್ಲಿದಳು.

35. ಎಲೆ ಸರೋರುಹಗಂಧಿ ನೀನೆನ
ಗೊಲಿದು ಮನದಲಿ ಹಿಡಿವೆನೆಂಬೀ
ಛಲವಿದೇತಕೆ ಮಾಣು ನಾವಂಬರದ ಪಕ್ಷಿಗಳು
ನಿಲುಕುವವರಾವಲ್ಲ ಬರಿದೇ
ಬಳಲದಿರು ತಾ ಬಂದ ಪರಿಯನು
ತಿಳುಹುವೆನು ನಿನಗೆಲ್ಲವನು ಕೇಳೆಂದುದಾ ಪಕ್ಷಿ

ಎಲೆ ಸರೋರುಹಗಂಧಿ = ಎಲೈ ಸರೋವರದಲ್ಲಿ ಹುಟ್ಟಿದ ತಾವರೆಯ ಸುಗಂಧವುಳ್ಳವಳೇ; ನೀನು + ಎನಗೆ + ಒಲಿದು = ನೀನು ನನ್ನನ್ನು ಇಷ್ಟಪಟ್ಟು; ಮನದಲಿ = ಮನಸ್ಸಿನಲ್ಲಿ; ಹಿಡಿವೆನ್ + ಎಂಬ + ಈ = ಹಿಡಿಯುತ್ತೇನೆ ಎಂಬ ಈ; ಛಲವು + ಇದು + ಏತಕೆ = ಈ ಹಠ ಏತಕ್ಕೆ; ಮಾಣು = ಅದನ್ನು ಬಿಡು; ನಾವು + ಅಂಬರದ = ನಾವು ಆಕಾಶದಲ್ಲಿ ಹಾರುವ; ಪಕ್ಷಿಗಳು = ಹಕ್ಕಿಗಳು; ನಿಲುಕುವವರು + ಆವು + ಅಲ್ಲ = ನಾವು ಕೈಗೆ ಎಟಕುವಂಥಹವರಲ್ಲ; ಬರಿದೇ = ವ್ಯರ್ಥವಾಗಿ; ಬಳಲದಿರು = ಆಯಾಸಗೊಳ್ಳದಿರು; ತಾ = ತಾನು; ಬಂದ ಪರಿಯನು = ಬಂದುದಕ್ಕೆ ಕಾರಣವನ್ನು; ತಿಳುಹುವೆನು = ತಿಳಿಸುತ್ತೇನೆ; ನಿನಗೆ + ಎಲ್ಲವನು = ನಿನಗೆಲ್ಲವನ್ನೂ; ಕೇಳ್ + ಎಂದುದು + ಆ + ಪಕ್ಷಿ = ಕೇಳು ಎಂದು ಆ ರಾಜ ಹಂಸವು ಹೇಳಿತು.

ದಮಯಂತಿಯು ತನ್ನನ್ನು ಹಿಡಿಯಲು ಪಟ್ಟ ಪಾಡನ್ನು ನೋಡಿ ಆ ರಾಜಹಂಸವು ಅವಳಿಗೆ ಹೇಳಿತು. "ಎಲೈ ಕಮಲಪುಷ್ಪದಂತೆ ಸುಗಂಧಿತಳಾದವಳೇ, ನೀನು ನನ್ನನ್ನು ಇಷ್ಟಪಟ್ಟು ಆಸೆಯಿಂದ ಹಿಡಿಯುತ್ತೇನೆಂಬ ಹಠದಿಂದ ಇದ್ದೀಯೆ,

ಅದು ಸಾಧ್ಯವಿಲ್ಲ, ನಿನ್ನ ಪ್ರಯತ್ನವನ್ನು ಬಿಡು. ನಾವು ಆಕಾಶದಲ್ಲಿ ಹಾರಾಡುವ ಹಕ್ಕಿಗಳು, ನಿಮ್ಮಗಳ ಕೈಗೆ ಸಿಗುವಂಥವರಲ್ಲ. ಆದರೆ ನಾನು ಬಂದ ಕಾರಣ ವೇನೆಂಬುದನ್ನು ನಿನಗೆ ಸಂಪೂರ್ಣವಾಗಿ ತಿಳಿಸುತ್ತೇನೆ ಕೇಳು" ಎಂದಿತು.

36. ನಳಿನಮುಖಿ ನಳಚಕ್ರವರ್ತಿಯ
ಬಳಿಯ ವಾಹನವಾಗಿ ತಾನಿಹೆ
ನೊಲಿದು ಸಲಹುವನೆನ್ನ ಪರಮಪ್ರೀತಿವಚನದಲಿ
ಇಳೆಗೆ ನಳಕೂಬರ ಜಯಂತರ
ಚೆಲುವ ಮದನನ ರೂಪರೇಖೆಯ
ಹಳಿವುದಾ ನಳನೃಪನ ನಿಜಸೌಂದರ್ಯದಾಟೋಪ

ನಳಿನಮುಖಿ = ಸುಂದರಿಯೇ; ನಳಚಕ್ರವರ್ತಿಯ = ನಳಚಕ್ರವರ್ತಿಯ; ಬಳಿಯ = ಕಡೆಯ; ವಾಹನವಾಗಿ = ಓಲೆಕಾರನಾಗಿ; ತಾನಿಹೆನ್ + ಒಲಿದು + ಸಲಹುವನ್ + ಎನ್ನ = ನಾನು ಬಂದಿದ್ದೇನೆ. ಅವನು ಕಾಪಾಡುತ್ತಾನೆ, ರಕ್ಷಿಸುತ್ತಾನೆ, ಎನ್ನ = ನನ್ನನ್ನು; ಪರಮ ಪ್ರೀತಿವಚನದಲಿ = ಅತ್ಯಂತ ಪ್ರೀತಿ ಪುರಸ್ಸರವಾದ ಮಾತುಗಳಿಂದ; ಇಳೆಗೆ = ಭೂಮಂಡಲದಲ್ಲಿ; ನಳಕೂಬರ = ಕುಬೇರನ ಮಗನಾದ ನಳಕೂಬರ; ಜಯಂತರ = ಇಂದ್ರನ ಮಗ ಜಯಂತ ಮೊದಲಾದವರ; ಮತ್ತು ಚೆಲುವ ಮದನನ = ರೂಪಕ್ಕೆ ಹೆಸರಾದ ಚೆಲುವ ಮನ್ಮಥನ; ರೂಪರೇಖೆಯ = ಆಕಾರ, ಸೌಂದರ್ಯಗಳನ್ನು; ಹಳಿವುದು = ಹೀಯಾಳಿಸುತ್ತದೆ; ನಳನೃಪನ = ನಳಮಹಾರಾಜನ; ನಿಜ + ಸೌಂದರ್ಯದ + ಆಟೋಪ = ಸಹಜ ಸೌಂದರ್ಯದ ಅತಿಶಯತೆ.

ಕಮಲಮುಖಿಯೇ ನಾನು ನಳಚಕ್ರವರ್ತಿಯ ಕಡೆಯ ಓಲೆಕಾರನಾಗಿ ಬಂದಿದ್ದೇನೆ. ಅವನು ನನ್ನನ್ನು ಪ್ರೀತಿಯಿಂದ ಕಾಪಾಡಿ, ರಕ್ಷಿಸುತ್ತಾನೆ, ನನ್ನನ್ನು ಅಪಾರವಾದ ಪ್ರೀತಿಪೂರ್ವಕ ಮಾತುಗಳಿಂದ ಸಲಹುತ್ತಾನೆ. ಭೂಮಿಯಲ್ಲಿ ನಳಕೂಬರ, ಜಯಂತ, ಮನ್ಮಥ ಮೊದಲಾದ ಸೌಂದರ್ಯಕ್ಕೆ ಹೆಸರಾದವರನ್ನು ಮೀರಿಸುವ ಸೌಂದರ್ಯ ಇವನದು ಎಂಬ ಹೆಗ್ಗಳಿಕೆ ಇದೆ ನಳಮಹಾರಾಜನಿಗೆ ಎಂದಿತು ಪಕ್ಷಿ.

ಈ ಸಂದರ್ಭದಲ್ಲಿ ತನ್ನ ಬೇಡಿಕೆಗೆ ಸ್ಪಂದಿಸಿ ತನ್ನ ಪ್ರಾಣವನ್ನು ಕಾಪಾಡಿ, ಪ್ರೀತಿದೋರಿದವನ ಕುರಿತ ಮೆಚ್ಚುಗೆಯನ್ನೂ, ಹೆಮ್ಮೆಯನ್ನೂ, ಕೃತಜ್ಞತಾಪೂರ್ವಕ ಸುಸಂಸ್ಕೃತ ಮನೋಭಾವವನ್ನೂ ರಾಜಹಂಸವು ತನ್ನ ಸಹಜಸ್ವಭಾವದಂತೆ ತೋರಿರುವುದನ್ನು ಕಾಣಬಹುದು.

37. ನಿನ್ನ ರೂಪಿಗೆ ಸಲುವುದೌ ನಳ
ನುನ್ನತದ ಸೌಂದರ್ಯ ಜಗದೊಳ
ಗಿನ್ನು ನಾ ಸರಿಗಾಣೆ ನಿಮಗೀರ್ವರಿಗೆ ಸಮನಹುದು
ಎನ್ನಲಾ ನುಡಿಗೇಳಿ ಹಂಸೆಗೆ
ತನ್ನ ಶಿರವನು ಬಾಗಿ ಗುಣಸಂ
ಪನ್ನೆ ನುಡಿದಳು ನಾಚಿ ನಸುನಗೆಯಿಂದ ವಿನಯದಲಿ

ನಿನ್ನ ರೂಪಿಗೆ = ನಿನ್ನ ಚೆಲುವಿಗೆ; ಸಲುವುದೌ = ಸರಿಹೊಂದುತ್ತದೆ; ನಳನುನ್ನತದ = ನಳನ ಅತ್ಯುನ್ನತವಾದ; ಸೌಂದರ್ಯ = ಚೆಲುವು; ಜಗದೊಳಗಿನ್ನು ನಾ = ಈ ಜಗತ್ತಿನಲ್ಲಿ ಇದಕ್ಕಿಂತ ನಾನು; ಸರಿ + ಕಾಣೆ = ಸರಿಸಾಟಿಯಾಗಿರು ವವರನ್ನು ಕಂಡಿಲ್ಲ; ನಿಮಗೆ + ಈರ್ವರಿಗೆ = ನಿಮಗಿಬ್ಬರಿಗೆ; ಸಮನಹುದು = ಸಮಸಮವಾಗಿ ಒಪ್ಪುತ್ತದೆ; ಎನ್ನಲು + ಆ ನುಡಿ + ಕೇಳಿ = ಎನ್ನಲು ಆ ನುಡಿಯನ್ನು ಕೇಳಿ; ಹಂಸೆಗೆ = ಹಂಸಪಕ್ಷಿಗೆ; ತನ್ನ ಶಿರವನು = ತನ್ನ ತಲೆಯನ್ನು; ಬಾಗಿ = ತಗ್ಗಿಸಿ; ಗುಣಸಂಪನ್ನೆ = ಗುಣಸೌಜನ್ಯಗಳುಳ್ಳವಳಾದ ದಮಯಂತಿಯು; ನುಡಿದಳು = ಹೇಳಿದಳು; ನಾಚಿ = ಲಜ್ಜೆಯಿಂದ; ನಸುನಗೆಯಿಂದ = ಸಂತೋಷದ ಮೆಲುನಗೆಯಿಂದ; ವಿನಯದಲಿ = ವಿನಯಪೂರ್ವಕವಾಗಿ.

ನಿನ್ನ ರೂಪಕ್ಕೆ ನಳನ ಅತ್ಯುನ್ನತವಾದ ಸೌಂದರ್ಯವು ಸರಿಸಮನಾಗಿ ಹೊಂದುತ್ತದೆ. ಜಗತ್ತಿನಲ್ಲಿ ಇದಕ್ಕಿಂತ ಸರಿಸಾಟಿಯಾಗಿ ಹೊಂದುವಂಥವರನ್ನು ನಾನು ಕಂಡಿಲ್ಲ. ನಿಮ್ಮಿಬ್ಬರಿಗೂ ಹೊಂದಿಕೆಯಾಗುತ್ತದೆ ಎಂದು ನುಡಿದ ರಾಜಹಂಸದ ಸವಿಮಾತಿಗೆ ದಮಯಂತಿಯು ತನ್ನ ತಲೆಬಾಗಿ ವಂದಿಸಿದಳು. ಸದ್ಗುಣ ಸಂಪನ್ನಳಾದ ಅವಳು ಲಜ್ಜೆಯಿಂದಲೂ, ಮನಸ್ಸಿಗಾದ ಸಂತೋಷದಿಂದಲೂ ನಗೆಯರಳಿಸುತ್ತ, ವಿನಯಪೂರ್ವಕವಾಗಿ ಹೇಳಲಾರಂಭಿ ಸಿದಳು.

38. ಪರಮಗುಣನಿಧಿ ಪಕ್ಷಿ ಕೇಳ್ ಬಾ
ಹಿರನು ಪಾತಕಿ ಮದನನೆಲೆ ನಿ
ಷ್ಠುರದೊಳೆಸೆಯಲು ಪುಷ್ಪಬಾಣದಿ ನೊಂದುದೆನ್ನೊಡಲು
ಕರುಣರಸಧಾರೆಯಲಿ ತಾಪವ
ಪರಿಹರಿಸಬೇಕೆಂದು ನೀನಾ
ಧರಣಿಪತಿ ನಳನೃಪಗೆ ಬಿನ್ನೈಸೆಂದಳಿಂದುಮುಖಿ

ಪರಮಗುಣನಿಧಿ ಪಕ್ಷಿ = ಉನ್ನತ ಗುಣಗಳಿಗಾಶ್ರಯವಾದ ಪಕ್ಷಿಯೇ; ಕೇಳ್ = ಕೇಳು; ಬಾಹಿರನು = ಬಹಿಷ್ಕಾರಕ್ಕೆ ತಕ್ಕವನು; ಪಾತಕಿ = ಪಾಪಿಷ್ಠನು; ಮದನನು + ಎಲೆ = ಎಲೈ, ಆ ಮನ್ಮಥನು; ನಿಷ್ಠುರದೊಳ್ + ಎಸೆಯಲು = ಕನಿಕರವಿಲ್ಲದೆ ಬಾಣಪ್ರಯೋಗ ಮಾಡಲು; ಪುಷ್ಪಬಾಣದಿ = ಪುಷ್ಪಬಾಣಗಳಿಂದ; ನೊಂದುದು + ಎನ್ನ + ಒಡಲು = ನನ್ನ ಶರೀರವು ಘಾಸಿಗೊಂಡಿದೆ; ಕರುಣರಸ ಧಾರೆಯಲಿ = ಕರುಣರಸವನ್ನು ನಿರಂತರವಾಗಿ ಹರಿಸಿ; ನೀನು + ಆ = ನೀನೇ ಆ; ಧರಣಿಪತಿ = ಭೂಪಾಲನಾದ; ನಳನೃಪಗೆ = ನಳಮಹಾರಾಜನಿಗೆ; ಬಿನ್ನೈಸು + ಎಂದಳು + ಇಂದುಮುಖಿ = ನನ್ನ ಪರವಾಗಿ ವಿನಂತಿಸಬೇಕು ಎಂದು ಚಂದ್ರನಂತೆ ಸುಂದರವಾದ ಕಾಂತಿಯುತ ಮುಖವುಳ್ಳ ದಮಯಂತಿಯು ಹೇಳಿದಳು.

ಉನ್ನತ ಗುಣಗಳಿಗೆ ಆಶ್ರಯನಾದ ಪಕ್ಷಿಯೇ ಕೇಳು, ಆ ಪಾತಕಿ ಮನ್ಮಥನು ಬಹಿಷ್ಕಾರಕ್ಕೆ ಅರ್ಹನಾಗಿದ್ದಾನೆ. ಸ್ವಲ್ಪವೂ ಕನಿಕರವೇ ತೋರದೆ ನನ್ನ ಮೇಲೆ ಪುಷ್ಪಗಳ ಬಾಣ ಪ್ರಯೋಗವನ್ನು ಮಾಡಿದ್ದಾನೆ. ನನ್ನ ಒಡಲು ಇದರಿಂದ ಅಪಾರವಾಗಿ ಘಾಸಿಗೊಂಡಿದೆ. ನೀನು ಕರುಣರಸವನ್ನು ಹರಿಸೆಂದು ಧರಣಿಪತಿ ಯಾದ ನಳಭೂಪಾಲನಲ್ಲಿಗೆ ಹೋಗಿ ನನ್ನ ಪರವಾಗಿ ವಿನಂತಿಸು ಎಂದಳು ಚಂದ್ರವದನೆ ದಮಯಂತಿ.

39. ಪರರ ದುಃಖವ ಪರಿಹರಿಸಿ ಮಿಗೆ
ಪರರಿಗುಪಕಾರಾರ್ಥವೆಸಗಲು
ಪರಮಪುಣ್ಯವಿದೆಂದು ಪೇಳ್ವರು ಪಿರಿಯರಾದವರು
ಪರಮಬಾಂಧವ ನೀನೆನಗೆ ಸ

ತ್ಕರಿಸು ವಿರಹದಿ ನೊಂದವಳ ಕರ
ಕರೆಗೆ ಗುರಿ ಮಾಡದಿರು ಸಲಹೆಂದಳು ಸರೋಜಮುಖಿ

ಪರರ = ಇತರರ; ದುಃಖವ = ನೋವನ್ನು; ಪರಿಹರಿಸಿ = ಇಲ್ಲದಂತಾಗಿಸಿ; ಮಿಗೆ = ಮಿಗಿಲಾದ; ಪರರಿಗೆ + ಉಪಕಾರಾರ್ಥವ + ಎಸಗಲು = ಇತರರಿಗೆ ಉಪಕಾರವಾಗಲಿ ಎಂದು ಪ್ರಯತ್ನಿಸುವುದು; ಪರಮಪುಣ್ಯವಿದೆಂದು = ಅತ್ಯಂತ ಪುಣ್ಯಕರವಾದದ್ದು ಎಂಬುದಾಗಿ; ಪೇಳ್ವರು = ಹೇಳುತ್ತಾರೆ; ಪಿರಿಯರ್ + ಆದವರು = ಹಿರಿಯರಾದವರು; ಪರಮ ಬಾಂಧವ = ಎಲ್ಲರಿಗಿಂತ ಮಿಗಿಲಾದ ಬಂಧುವೇ; ನೀನು + ಎನಗೆ = ನೀನು ನನಗೆ; ಸತ್ಕರಿಸು = ಉಪಚರಿಸು; ವಿರಹದಿ = ಅಗಲಿಕೆಯಿಂದ; ನೊಂದವಳ = ದುಃಖಿತಳಾದವಳ; ಕರಕರೆಗೆ = ತೊಂದರೆಗೆ; ಗುರಿ ಮಾಡದಿರು = ಗುರಿಯಾಗಿಸದಿರು; ಸಲಹು + ಎಂದಳು = ಕಾಪಾಡು ಎಂದಳು; ಸರೋಜಮುಖಿ = ದಮಯಂತಿ.

ಇತರರಿಗೆ ಉಂಟಾಗಿರುವ ನೋವನ್ನು ಹೋಗಲಾಡಿಸಿ, ಉಪಕಾರವನ್ನು ಮಾಡಲು ಪ್ರಯತ್ನಿಸುವುದು ಎಲ್ಲಕ್ಕಿಂತ ಮಿಗಿಲಾಗಿ ಪುಣ್ಯಕರವಾದದ್ದು ಎಂಬುದಾಗಿ ಹಿರಿಯರಾದವರು ಹೇಳುತ್ತಾರೆ. ಅತ್ಯಾಪ್ತನಾದ ಉತ್ತಮ ಬಂಧುವೇ ನೀನು ನನ್ನನ್ನು ದುಃಖದಿಂದ ಪಾರುಮಾಡು. ಈಗಾಗಲೇ ವಿರಹದಿಂದ ದುಃಖಿತಳಾಗಿರುವವಳನ್ನು ತೊಂದರೆಗೆ ಗುರಿಮಾಡದೆ ಉಪಚರಿಸಿ ಸಲಹು ಎಂದು ಹಂಸರಾಜನಲ್ಲಿ ದಮಯಂತಿಯು ವಿನಂತಿಸಿದಳು.

40. ಬಲಿದ ವಿರಹಾಗ್ನಿಯಲಿ ನೊಂದೆನು
ಬಳಲಿದೆನು ತನು ಬಾಡಿ ತಾಪದಿ
ನಲವು ಹಿಂಗಿತು ಬವಣೆ ಹೆಚ್ಚಿತು ತ್ರಾಣವೆಳದಾಯ್ತು
ಹಲವು ಮಾತೇನಿನ್ನು ನಳನೃಪ
ತಿಲಕನೆನ್ನಯ ಪತಿಯಲಾ ಭೂ
ತಳದ ಪುರುಷರು ಪಿತನ ಸಮ ಕೇಳೆಂದಳಿಂದುಮುಖಿ

ಬಲಿದ = ಹೆಚ್ಚಾದ; ವಿರಹಾಗ್ನಿಯಲಿ = ಅಗಲಿಕೆಯಿಂದಾದ ತಾಪದಲ್ಲಿ; ಬೆಂದು ನೊಂದೆನು = ಬೆಂದು ನೊಂದಿದ್ದೇನೆ; ತನು ಬಾಡಿ = ದೇಹವು

ಬಾಡಿಹೋಗಿ; ತಾಪದಿ = ಬೆಂಕಿಯಂತೆ ಸುಡುವ ಚಿಂತೆಯಿಂದ; ನಲವು ಹಿಂಗಿತು = ಸಂತೋಷವೆಲ್ಲ ಇಂಗಿಹೋಗಿದೆ; ಬವಣೆ = ತೊಂದರೆ; ಹೆಚ್ಚಿತು = ಅಧಿಕವಾಗಿದೆ; ತ್ರಾಣವು + ಎಳದಾಯಿತು = ಶಕ್ತಿಯು ನಶಿಸಿದೆ; ಹಲವು = ಹೆಚ್ಚು; ಮಾತು + ಏಕೆ + ಇನ್ನು = ಮಾತುಗಳು ಇನ್ನೇಕೆ ವ್ಯರ್ಥವಾಗಿ?; ನಳನೃಪತಿಲಕನು + ಎನ್ನಯ = ನಳಮಹಾರಾಜೋತ್ತಮನೇ ನನ್ನ; ಪತಿಯಲಾ = ಪತಿಯು; ಎಲ್ಲೈ ಭೂತಳದ = ಎಲ್ಲೈ ಭೂಮಂಡಲದ; ಪುರುಷರು = ಇತರ ಪುರುಷರು; ಪಿತನ + ಸಮ = ನನಗೆ ತಂದೆಯ ಸಮಾನರು; ಕೇಳು + ಎಂದಳು + ಇಂದುಮುಖಿ = ಕೇಳು ಎಂದಳು ದಮಯಂತಿ.

ಹಂಸರಾಜನೊಂದಿಗಿನ ತನ್ನ ಮಾತುಗಳನ್ನು ಮತ್ತೆ ಮುಂದುವರಿಸುತ್ತಾ, ಪ್ರಿಯನ ಅಗಲಿಕೆಯಿಂದಾದ ತಾಪದ ಅಗ್ನಿಯಲ್ಲಿ ಬೆಂದು ಹೋಗಿದ್ದೇನೆ, ದೇಹವು ಬಾಡಿ ಹೋಗಿದೆ. ವಿರಹದ ನೋವಿನಿಂದ ಬದುಕಿನ ಸಂತೋಷವೆಲ್ಲ ಇಂಗಿ ಹೋಗಿದೆ. ತೊಂದರೆ ಅಧಿಕವಾಗಿ, ಮೈಯ್ಯಲ್ಲಿದ್ದ ಶಕ್ತಿಯೆಲ್ಲ ಕುಂದಿಹೋಗಿದೆ. ಇನ್ನೇಕೆ ವ್ಯರ್ಥವಾಗಿ ಮಾತನಾಡಲಿ? ನಳಮಹಾರಾಜನೊಬ್ಬನೇ ನನ್ನ ಪತಿ. ಈ ಲೋಕದ ಇತರ ಪುರುಷರೆಲ್ಲ ನನಗೆ ತಂದೆಯ ಸಮಾನರು ಎಂದಳು ದಮಯಂತಿ.

41. ಅರಸ ಕೇಳಾ ಹಂಸ ತರುಣಿಯ
ಕರುಣದಳತೆಯ ಕಂಡು ತಾ ಬಂ
ದಿರುವ ಕಾರ್ಯದ ಹದನು ಲೇಸಾಯ್ತೆಂದು ಮನದೊಳಗೆ
ಹರುಷ ಮಿಗೆ ಕೊಂಡಾಡಿ ಸತಿಯನು
ಕರೆದು ನುಡಿದುದು ನಿನಗೆ ನಳಭೂ
ವರನ ಪತಿಯನು ಮಾಳ್ಪೆನಂಜದಿರೆಂದುದಾ ಹಂಸೆ

ಅರಸ ಕೇಳಾ ಹಂಸ = ಅರಸನಾದ ಧರ್ಮರಾಯನೇ ಕೇಳು; ಆ ಹಂಸ = ಆ ಹಂಸವು; ತರುಣಿಯ = ನವಯೌವನದ ಆ ಹೆಣ್ಣಿನ; ಕರುಣದಳತೆಯ = ಹೃದಯದಲ್ಲಿ ಉಕ್ಕಿದ ಪ್ರೀತಿಯ ಪ್ರಮಾಣವನ್ನು; ಕಂಡು = ಗಮನಿಸಿ; ತಾ ಬಂದಿರುವ = ತಾನು ಅಲ್ಲಿಗೆ ಬಂದ; ಕಾರ್ಯದ = ಕೆಲಸದ; ಹದನು = ಕ್ರಮವು;

ಲೇಸಾಯಿತು + ಎಂದು = ಸರಿಯಾಗಿಯೇ ಸಿದ್ಧಿಸಿತು ಎಂದು; ಮನದೊಳಗೆ = ಮನಸ್ಸಿನಲ್ಲಿ; ಹರುಷಮಿಗೆ = ಸಂತಸವು ಉಕ್ಕಿ ಹರಿಯಲು; ಕೊಂಡಾಡಿ = ಅವಳ ಗುಣಕಥನ ಮಾಡಿ; ಸತಿಯನು ಕರೆದು = ಆ ಹೆಣ್ಣು ಮಗಳನ್ನು ಕರೆದು; ನಿನಗೆ ನಳಭೂವರನ = ನಿನಗೆ ಶ್ರೇಷ್ಠನಾದ ಆ ನಳಚಕ್ರವರ್ತಿಯನ್ನು; ಪತಿಯನು = ಪತಿಯನ್ನಾಗಿ; ಮಾಡುವೆನು + ಅಂಜದಿರು + ಎಂದುದು + ಆ + ಹಂಸೆ = ಮಾಡುತ್ತೇನೆ, ಭಯಪಡಬೇಡ ಎಂದು ಹೇಳಿತು.

ಧರ್ಮರಾಯನೇ ಕೇಳು, ಆ ರಾಜಹಂಸವು ನವಯೌವನಭರಿತಳಾದ ದಂಯಂತಿಯ ಹೃದಯದಲ್ಲಿ ನಳನೃಪನ ಕುರಿತು ಉಕ್ಕಿದ ಪ್ರೀತಿಯ ಪ್ರಮಾಣವನ್ನು ಗಮನಿಸಿ, ತಾನು ಬಂದು ಕೈಗೊಂಡ ಕೆಲಸದ ಕ್ರಮವು ಸರಿಯಾಗಿಯೇ ಸಿದ್ಧಿಸಿದೆ ಎಂದು ಮನಸ್ಸಿನಲ್ಲಿಯೇ ಹರ್ಷಗೊಂಡಿತು. ಅಂತೆಯೇ ದಮಯಂತಿಯ ಗುಣಗಳನ್ನು ಎತ್ತಿ ಹೇಳುತ್ತಾ, ಅವಳನ್ನು ಕರೆದು, ನಿನಗೆ ನಳಮಹಾರಾಜನನ್ನೇ ಪತಿಯನ್ನಾಗಿ ಮಾಡುತ್ತೇನೆ ಅಂಜದಿರು ಭಯಪಡಬೇಡ ಎಂದು ಅಭಯ ವಚನವನ್ನಿತ್ತಿತು.

42. ಅಂತರಂಗದ ಬುದ್ಧಿಯನು ದಮ
ಯಂತಿಗೆಲ್ಲವನರುಹಿ ತರುಣಿಯ
ಸಂತವಿಟ್ಟಲ್ಲಿಂದ ಕಳುಹಿಸಿಕೊಂಡು ಬೇಗದಲಿ
ಮುಂತಳರ್ದು ಮಿಗೆ ತನ್ನ ಬಾಂಧವ
ಸಂತತಿಯನೊಡಗೊಂಡು ನಿಷಧನ
ಚಿಂತೆಯನು ಪರಿಹರಿಸಬೇಕೆಂದ್ಯೆದಿತಾ ಹಂಸೆ

ಅಂತರಂಗದ = ತನ್ನ ಮನಸ್ಸಿನೊಳಗೆ ಅನಿಸಿದ್ದೆಲ್ಲವನ್ನೂ, ಹಾಗೂ ತಾನು ಅರ್ಥಮಾಡಿಕೊಂಡಿದ್ದೆಲ್ಲವನ್ನೂ, ದಮಯಂತಿಗೆ + ಎಲ್ಲವನು + ಅರುಹಿ = ದಮ ಯಂತಿಗೆ ಎಲ್ಲವನ್ನು ಹೇಳಿ; ತರುಣಿಯ = ಆ ಹೆಣ್ಣುಮಗಳನ್ನು; ಸಂತವಿಟ್ಟು + ಅಲ್ಲಿಂದ = ಸಮಾಧಾನಿಸಿ, ಅಲ್ಲಿಂದ; ಕಳುಹಿಕೊಂಡು = ಅಪ್ಪಣೆ ಪಡೆದು ಹೊರಟು; ಬೇಗದಲಿ = ವೇಗವಾಗಿ; ಮುಂತಳರ್ದು = ಮುಂದಕ್ಕೆ ಹೊರಟು; ಮಿಗೆ = ಸಂತೋಷದಿಂದ; ತನ್ನ + ಬಾಂಧವ ಸಂತತಿಯನು + ಒಡಗೊಂಡು =

ತನ್ನೊಂದಿಗೆ ಬಂದಿದ್ದ ತನ್ನ ಸಂತತಿಯ ಬಂಧುಗಳೆಲ್ಲರನ್ನು ಜೊತೆಗೆ ಕರೆದುಕೊಂಡು; ನಿಷಧನ = ನಿಷಧರಾಜನ; ಚಿಂತೆಯನು = ಮನಸ್ಸಿನಲ್ಲಿದ್ದ ದುಃಖ ತಲ್ಲಣಗಳನ್ನು; ಪರಿಹರಿಸಬೇಕು + ಎಂದು + ಐದಿತು + ಆ ಹಂಸೆ = ಇಲ್ಲ ವಾಗಿಸಬೇಕು ಎಂದು ನಿಷಧನಗರದತ್ತ ಹೊರಟಿತು ಆ ಹಂಸೆ.

ತನ್ನ ಮನಸ್ಸಿನೊಳಗೆ ತಾನೇನೇನು ಅಂದುಕೊಂಡಿತ್ತೋ ಮತ್ತು ತನ್ನ ಬುದ್ಧಿಗೆ ಏನೇನೆಲ್ಲ ತೋಚಿತ್ತೋ ಇಂಥಹ ವಿಷಯಗಳನ್ನೆಲ್ಲ ವಿವರವಾಗಿ ದಮಯಂತಿಗೆ ಹೇಳಿದ ನಂತರ, ಅವಳಿಗೆ ಅದರಿಂದ ಸಂತೋಷವಾದದ್ದು ಕಂಡು, ಹಂಸವು ಅವಳ ಅಪ್ಪಣೆ ಪಡೆದು ಅಲ್ಲಿಂದ ನಿಷಧನಗರದತ್ತ ವೇಗವಾಗಿ ಹೊರಟಿತು. ಇನ್ನು ನಿಷಧರಾಜನ ಮನಸ್ಸಿನೊಳಗೆ ಕಾಡುತ್ತಿರುವ ಚಿಂತೆಯನ್ನು ಅವನ ಮನಸ್ಸಿನ ತಲ್ಲಣಗಳನ್ನು ನಿವಾರಿಸಬೇಕು ಎಂದುಕೊಳ್ಳುತ್ತಾ ಅತ್ತ ಹಾರಿತು.

43. ಆಗ ನಳಭೂವರನ ದಕ್ಷಿಣ
ಭಾಗ ಭುಜನಯನಂಗಳದುರಿದು
ವಾಗ ಕೇಳಿದನಿದರ ಫಲವೇನೆಂದು ಭೂಸುರರ
ಭೋಗಸುಖದರ್ಶನದ ಫಲವಿಂ
ದೀಗಲಹುದೆನಲಾ ಸಮಯದಿ ಸ
ರಾಗದಲಿ ನಡೆತಂದುದಾ ನೃಪನೆಡೆಗೆ ಕಲಹಂಸೆ

ಆಗ = ಆ ಸಮಯದಲ್ಲಿ; ನಳಭೂವರನ = ನಳಮಹಾರಾಜನ; ದಕ್ಷಿಣ ಭಾಗ = ಎಡಭಾಗದ; ಭುಜ + ನಯನಂಗಳು + ಅದುರಿದುವು + ಆಗ = ಭುಜವೂ, ಕಣ್ಣೂ ಅದುರಿದುವು, ಆಗ; ಕೇಳಿದನು + ಇದರ ವಿಚಾರಿಸಿದನು ಇದರ; ಫಲವೇನೆಂದು = ಅರ್ಥವೇನು, ಇದೇನನ್ನು ಸೂಚಿಸುತ್ತಿದೆ ಎಂದು; ಭೂಸುರರ = ಬ್ರಾಹ್ಮಣರನ್ನು; ಭೋಗಸುಖ ದರ್ಶನದ = ಸ್ತ್ರೀಪುರುಷ ಸಂಯೋಗವನ್ನು ಕಾಣುವ; ಫಲವು + ಇಂದು + ಈಗಲು + ಅಹುದೆನಲು = ಫಲವು ಇಂದು, ಈಗಲೇ ಆಗಲಿದೆ ಎಂದು ಅವರು ಹೇಳಲು; ಆ ಸಮಯದಿ = ಅದೇ ಸಮಯದಲ್ಲಿ; ಸರಾಗದಲಿ = ಪ್ರೀತಿಯಿಂದ; ನಡೆತಂದುದು + ಆ = ನಡೆದುಬಂತು; ನೃಪನೆಡೆಗೆ = ಆ ದೊರೆಯತ್ತ; ಕಲಹಂಸೆ = ರಾಜಹಂಸವು.

ಹಾಗೆ ನಿಷಧನಗರದತ್ತ ರಾಜಹಂಸವು ಪ್ರಯಾಣ ಬೆಳೆಸಿದ ಅದೇ ಸಮಯ ಇತ್ತ ನಿಷಧ ನಗರದ ಅಧಿಪತಿಯಾದ ನಳಮಹಾರಾಜನ ಎಡಭುಜವೂ, ಎಡಕಣ್ಣೂ ಅದುರಿದುವು. ಅವನು ಬ್ರಾಹ್ಮಣರನ್ನು ಕರೆಸಿ ಅದರ ಅರ್ಥವೇನೆಂದು ಕೇಳಿದಾಗ ಇಂದೇ, ಈ ಕ್ಷಣದಲ್ಲೇ ನಿನಗೆ ಸ್ತ್ರೀ ಪುರುಷ ಸಂಯೋಗವನ್ನು ಕಾಣುವ ಫಲವು ಸಿದ್ಧಿಸಲಿದೆ ಎಂದು ಅವರು ಹೇಳಿ ಮುಗಿಸುವಷ್ಟರಲ್ಲಿ ಮನಸ್ಸಿನೊಳಗೆ ಉಂಟಾದ ಸಂತೋಷವನ್ನು ಹೊತ್ತು ಅಲ್ಲಿದ್ದ ನಳನೆಡೆಗೆ ಕಳಹಂಸವು ನಡೆದು ಬಂತು.

44. ಬಂದ ಹಂಸೆಯ ಕಂಡು ಮುಖಕಳೆ
ಯಿಂದಲರಿದನು ನೃಪತಿ ಮನದಲಿ
ಯಿಂದುಮುಖಿ ತನಗೊಲಿದ ಹದನಹುದೆಂದು ಹರುಷದಲಿ
ಮಂದಗಮನೆಯ ಕಂಡಿರೇ ಏ
ನೆಂದು ನುಡಿದಳು ಸತಿಯ ಬಗೆಯೇ
ನೆಂದು ಕೇಳಲು ನೃಪಗೆ ಬಳಿಕಿಂತೆಂದುದಾ ಪಕ್ಷಿ

ಬಂದ = ಆಗಮಿಸಿದ; ಹಂಸೆಯ ಕಂಡು = ರಾಜಹಂಸವನ್ನು ನೋಡಿ; ಮುಖ ಕಳೆಯಿಂದಲಿ + ಅರಿದನು; ಮುಖಚಹರೆಯಿಂದಲೇ ಅರಿತನು; ನೃಪತಿ = ದೊರೆಯು; ಮನದಲಿಯಿಂದುಮುಖಿ = ಮನಸ್ಸಿನಲ್ಲಿಯೇ ಆ ಚಂದ್ರಮುಖಿಯು; ತನಗೆ + ಒಲಿದ = ತನ್ನ ಪ್ರೀತಿಗೆ ಸಮ್ಮತಿಸಿದ; ಹದನಹುದೆಂದು = ರೀತಿಯೇ ಇದು ಎಂದು; ಹರುಷದಲಿ = ಸಂತೋಷದಿಂದ; ಮಂದಗಮನೆಯ ಕಂಡಿರೇ = ಮೃದುವಾದ ನಡೆಯುಳ್ಳ ಆ ಸುಂದರಿಯನ್ನು ಕಂಡಿರೇನು?; ಏನೆಂದು ನುಡಿದಳು = ಏನೆಂದು ಹೇಳಿದಳು; ಸತಿಯ = ಆ ಹೆಣ್ಣುಮಗಳ; ಬಗೆ + ಏನೆಂದು = ಮನಸ್ಸು ಹೇಗೆ ಎಂದು; ಕೇಳಲು = ನೃಪನು ಕೇಳಲು; ನೃಪಗೆ = ರಾಜನಿಗೆ; ಬಳಿಕ + ಇಂತು + ಎಂದುದು + ಆ + ಪಕ್ಷಿ = ಬಳಿಕ ಹೀಗೆ ಹೇಳಿತು ಆ ಪಕ್ಷಿ.

ತಾನು ರಾಯಭಾರಿಯಾಗಿ ಕಳುಹಿಸಿದ ರಾಜಹಂಸವು ಮರಳಿ ಬಂದುದನ್ನು ನಳನೃಪನು ನೋಡಿ, ಅದರ ಮುಖದಲ್ಲಿ ಉಕ್ಕುತ್ತಿದ್ದ ಸಂತೋಷದ ಚಹರೆಗಳನ್ನು ಗಮನಿಸಿಯೇ ತಾನು ಪ್ರೀತಿಸಿದ ಚಂದ್ರಮುಖಿಯು ತನಗೆ

ಒಲಿದಿದ್ದಾಳೆ ಎಂಬುದನ್ನು ಗ್ರಹಿಸಿದನು. ಆದರೂ ಕಾತುರವನ್ನು ಅಡಗಿಸಿ ಕೊಳ್ಳಲಾಗದೆ ಮಂದಗಮನೆಯನ್ನು ಕಂಡಿರೇ? ಏನೆಂದಳು? ಅವಳ ಮನಸ್ಸಿ ನಲ್ಲೇನಿದೆ ? ಎಂದನು. ಪಕ್ಷಿಯು ಅದಕ್ಕುತ್ತ ರವಾಗಿ ಹೇಳತೊಡಗಿತು.

45. ಮಾನವಾಧಿಪ ಕೇಳು ಮನದನು
ಮಾನವನು ಬಿಡು ಗುಡಿಯ ಕಟ್ಟಿಸು
ನೀನೆಳಸಿದಿಷ್ಟಾರ್ಥಫಲ ಸಿದ್ಧಿಸಿದುದಿನ್ನೇನು?
ಮಾನನಿಧಿ ನೀ ಮುನ್ನ ಮಾಡಿದ
ನೂನ ಸುಕೃತದ ಫಲವೊ ನಿನ್ನನೆ
ಧ್ಯಾನಿಸುವಳನವರತ ಮನ ಬೇರಿಲ್ಲವಾ ಸತಿಗೆ

ಮಾನವ + ಅಧಿಪ + ಕೇಳು = ಜನಾಧಿಪತಿಯೇ ಕೇಳು; ಮನದ + ಅನುಮಾನವನು = ಮನಸ್ಸಿನಲ್ಲಿರುವ ಸಂದೇಹವನ್ನು; ಬಿಡು = ಬಿಡು; ಗುಡಿಯ ಕಟ್ಟಿಸು = ಗುಡಿಯನ್ನು ಕಟ್ಟಿಸು; ನೀನು + ಎಳಸಿದ + ಇಷ್ಟಾರ್ಥಫಲ = ನೀನು ಬೇಕೆಂದು ಇಷ್ಟಪಟ್ಟಿರುವುದರ ಫಲವು; ಸಿದ್ಧಿಸಿದುದು + ಇನ್ನೇನು? = ಕೈಗೂಡಿಯಾಗಿದೆ, ಮತ್ತೇನು ಬೇಕು?; ಮಾನನಿಧಿ = ಗೌರವಾನ್ವಿತನೇ, ನೀ ಮುನ್ನ ಮಾಡಿದ + ಅನೂನ = ನೀನು ಈ ಹಿಂದೆ ಮಾಡಿದ್ದ, ಯಾವ ಕೊರತೆಯೂ ಇಲ್ಲದ; ಸುಕೃತದ = ಪುಣ್ಯದ, ಫಲವೋ = ಪ್ರತಿಫಲವೋ, ಪರಿಣಾಮವೋ; ನಿನ್ನನೆ = ನಿನ್ನನ್ನೇ; ಧ್ಯಾನಿಸುವಳ್ + ಅನವರತ = ಧ್ಯಾನಿಸುತ್ತಿರುತ್ತಾಳೆ ಸದಾ; ಮನ = ಮನಸ್ಸು; ಬೇರಿಲ್ಲವು + ಆ = ಬೇರೆಡೆ ಹೋಗದಾಗಿದೆ; ಆ ಸತಿಗೆ = ಆ ಹೆಣ್ಣು ಮಗಳಿಗೆ.

ಜನಾಧಿಪತಿಯೇ ರಾಜನೇ ಕೇಳು, ಮನಸ್ಸಿನೊಳಗಿರುವ ಚಿಂತೆ ಅನುಮಾನಗಳನ್ನು ಬಿಡು ನಿನ್ನ ಇಷ್ಟಾರ್ಥವು ಈಡೇರಿದೆ. ಗುಡಿಯನ್ನು ಕಟ್ಟಿಸಿ ದೇವರಿಗೆ ಧನ್ಯವಾದಗಳನ್ನು ತಿಳಿಸು. ನೀನೇನಾಗಬೇಕೆಂದು ಬಯಸಿದ್ದೆಯೋ ಆ ಇಷ್ಟಾರ್ಥವು ಕೈಗೂಡಿದೆ. ಮತ್ತೇನು ಬೇಕು ನಿನಗೆ? ಎಲೈ ಗೌರವಾನ್ವಿತ ದೊರೆಯೇ, ಈ ಮುನ್ನ ನೀನು ಮಾಡಿದ ಯಾವ ಕೊರತೆಯೂ ಇಲ್ಲದ ಪುಣ್ಯಕಾರ್ಯಗಳ ಪ್ರತಿಫಲವೋ ಎಂಬಂತೆ, ಆ ಹೆಣ್ಣು ಮಗಳು ಸದಾ ನಿನ್ನನ್ನೇ ಧ್ಯಾನಿಸುತ್ತಿದ್ದಾಳೆ.

ಅವಳ ಮನಸ್ಸು ಬೇರೆನನ್ನೂ ಬಯಸದಾಗಿದೆ. ಎಂದು ರಾಜಹಂಸವು ನಳನೃಪನಿಗೆ ಸಂತೋಷಕರವಾದ ಸುದ್ದಿಯನ್ನು ಹೇಳಿತು.

46. ಆ ತಳೋದರಿ ನಿನ್ನ ಮೇಲಣ
ಪ್ರೀತಿಯಿಂದೊಲಿದಂತರಂಗದಿ
ಕಾತರಿಸುತಿಹಳಂಗಜನ ಉಪಟಳದಿ ಕಡುನೊಂದು
ಧಾತುಗುಂದಿಹಳಾ ತರುಣಿ ಮನ
ಸೋತು ಹಂಬಲಿಸುವಳು ನಳನೃಪ
ನಾತನೇ ಪತಿಯೆಂದು ನಂಬಿಹೆನೆಂದಳಿಂದುಮುಖಿ

ಆ ತೆಳ್ಳಗಿನ + ಉದರಿ = ತೆಳ್ಳಗಿನ ನಡುವಿರುವ ಸುಂದರಿ; ನಿನ್ನ ಮೇಲಣ = ನಿನ್ನ ಮೇಲಿಟ್ಟಿರುವ; ಪ್ರೀತಿಯಿಂದ + ಒಲಿದು + ಅಂತರಂಗದಿ = ಪ್ರೀತಿಯಿಂದ ನಿನ್ನತ್ತ ಒಲಿದ ಮನಸ್ಸುಳ್ಳವಳಾಗಿ; ಕಾತರಿಸುತಿಹಳ್ + ಅಂಗಜನ = ಕಾತರಿಸುತ್ತಿದ್ದಾಳೆ, ಮನ್ಮಥನ; ಉಪಟಳದಿ = ಕಾಟದಿಂದ; ಕಡುನೊಂದು = ಬಹಳವಾಗಿ ನೊಂದು; ಧಾತು + ಕುಂದಿಹಳ್ + ಆ = ಶಕ್ತಿ ಗುಂದಿದ್ದಾಳೆ (ರೂಪ, ರಸ, ಗಂಧಾದಿ ವಿಷಯಗಳಲ್ಲಿ); ತರುಣಿ = ನವಯೌವನಭರಿತೆ; ಮನಸೋತು = ಮನಸ್ಸನ್ನು ನಿನಗೆ ಸೋತು; ಹಂಬಲಿಸುವಳು = ಆಶಿಸುತ್ತಿದ್ದಾಳೆ; ನಳನೃಪನ್ + ಆತನೇ = ನೃಪನಳನೇ; ಪತಿಯೆಂದು = ತನ್ನ ಗಂಡನೆಂದು; ನಂಬಿಹೆನೆಂದ ಳಿಂದುಮುಖಿ = ನಂಬಿಹೆನು + ಎಂದಳು + ಇಂದುಮುಖಿ = ನಂಬಿದ್ದೇನೆ ಎಂದಳು ಚಂದ್ರಸೊಬಗಿನ ಸುಂದರಿ.

ಬಡನಡುವಿನ ಸುಂದರಿ ದಮಯಂತಿಯು ನಿನ್ನ ಮೇಲೆ ಪ್ರೀತಿ ಇಟ್ಟಿದ್ದಾಳೆ. ಅಂತರಂಗದಲ್ಲಿ ನಿನ್ನನ್ನೇ ಧ್ಯಾನಿಸುತ್ತ ಅವಳ ಮನಸ್ಸು ಸದಾ ನಿನ್ನತ್ತಲೇ ಒಲಿದಿರುವುದರಿಂದ ಈಗ ನಿನ್ನನ್ನು ಸೇರಲು ಕಾತರಿಸುತ್ತಿದ್ದಾಳೆ. ಮನ್ಮಥನ ಕಾಟದಿಂದ ಬಹಳವಾಗಿ ನೊಂದು ಬಳಲಿದ್ದಾಳೆ. ರೂಪ, ರಸ, ಗಂಧಾದಿ ವಿಷಯಗಳಲ್ಲಿ ಈಗ ಅನಾಸಕ್ತಿ ಮೂಡಿ ಶಕ್ತಿ ಹೀನಳಾಗಿದ್ದಾಳೆ. 'ನಳನೃಪನೇ ಈ

ಭೂಮಂಡಲದಲ್ಲಿ ನನ್ನ ಪತಿ ಎಂದು ನಂಬಿದ್ದೇನೆ' ಎಂಬುದಾಗಿ ನನ್ನೊಂದಿಗೆ ಹೇಳಿದಳು ಎಂದು ಹೇಳಿತು ರಾಜಹಂಸ.

47. ಎಲೆ ನೃಪತಿ ದಮಯಂತಿಯನು ನಿನ
ಗೊಲಿಸಿ ಬಂದೆನು ಭಾಷೆ ಸಂದುದು
ಲಲನೆಯನು ನೀ ಮದುವೆಯಾಗಿಂದೆನ್ನ ಕಳುಹೆನಲು
ಬಳಲಿದಿರಿ ನಮಗೋಸುಗವೆ ಬಲು
ಹಳುವದಲಿ ತೊಳಲಿದಿರಿ ಕಷ್ಟವ
ಬಳಸಿದಿರಿ ಸಾಕಿನ್ನು ಗಮನಿಸಿಯೆಂದು ಬೀಳ್ಕೊಟ್ಟ

ಎಲೆ ನೃಪತಿ = ಎಲೈ ರಾಜನೇ; ದಮಯಂತಿಯನು = ದಮಯಂತಿಯನ್ನು; ನಿನಗೆ + ಒಲಿಸಿ ಬಂದೆನು = ನಿನ್ನನ್ನು ಪ್ರೀತಿಸುವಂತೆ ಕಾರ್ಯ ಸಾಧಿಸಿ ಬಂದಿದ್ದೇನೆ; ಭಾಷೆ ಸಂದುದು = ತಾನು ನಿನಗಿತ್ತ ಪ್ರಮಾಣವನ್ನು ನೆರವೇರಿಸಿದ್ದೇನೆ; ಲಲನೆಯನು = ದಮಯಂತಿಯನ್ನು; ನೀನು ಮದುವೆಯಾಗು + ಇಂದು + ಎನ್ನ = ನೀನು ಮದುವೆಯಾಗು ಇಂದು ನನ್ನನ್ನು; ಕಳುಹು = ಕಳುಹಿಸಿಕೊಡು; ಎನಲು = ಎಂದು ಹೇಳಲು; ಬಳಲಿದಿರಿ = ಆಯಾಸಪಟ್ಟಿರಿ; ನಮಗೋಸುಗವೆ = ನಮಗೋಸ್ಕರವಾಗಿ; ಬಲು = ದೊಡ್ಡದಾದ; ಹಳುವದಲಿ = ಪೊದರಿನಲ್ಲಿ; ತೊಳಲಿದಿರಿ = ಕಷ್ಟಪಟ್ಟಿರಿ; ಕಷ್ಟವ = ಅಪಾಯವನ್ನು; ಬಳಸಿದಿರಿ = ದಾಟಿದಿರಿ; ಸಾಕಿನ್ನು = ಇನ್ನು ಸಾಕು; ಗಮನಿಸಿಯೆಂದು = ಹೊರಡುವಂಥವರಾಗಿ ಎಂದು; ಬೀಳ್ಕೊಟ್ಟನು = ಹೋಗಲು ಅಪ್ಪಣೆಯಿತ್ತನು.

"ಎಲೈ ರಾಜನೇ, ನಿನಗೆ ಈ ಮೊದಲೇ ಭಾಷೆಯಿತ್ತಂತೆ ದಮಯಂತಿಯನ್ನು ನಿನಗೆ ಒಲಿಸುವಂತಹ ಕಾರ್ಯವನ್ನು, ಸಾಧಿಸಿ ಬಂದಿದ್ದೇನೆ. ನಾನಿತ್ತ ಭಾಷೆಯು ಇಲ್ಲಿಗೆ ನೆರವೇರಿತು, ನೀನು ಅವಳನ್ನು ಮದುವೆಯಾಗು. ಈಗ ನನ್ನನ್ನು ಬಿಡುಗಡೆಗೊಳಿಸು" ಎಂದು ರಾಜಹಂಸವು ಕೇಳಲು, ನಳಮಹಾರಾಜನ ಮನಸ್ಸು ತುಂಬಿಬಂದು "ನನಗಾಗಿ ಆಯಾಸಪಟ್ಟಿರಿ, ಅಷ್ಟು ದೊಡ್ಡದಾದ ಪೊದರಿನಲ್ಲಿ ಹೊಕ್ಕು ಕಷ್ಟಪಟ್ಟಿರಿ, ಆ ಅಪಾಯವನ್ನು ಸಮರ್ಥವಾಗಿ ಎದುರಿಸಿದಿರಿ. ಇನ್ನು ಸಾಕು, ಹೊರಡಿ" ಎಂದು ಆ ರಾಜಹಂಸವನ್ನು ಬೀಳ್ಕೊಟ್ಟನು.

48. ಕೇಳು ಪಾಂಡವತನಯ ರಾಜಮ
ರಾಳ ತೆರಳಿದುದತ್ತ ನಳಭೂ
ಪಾಲನಿತ್ತಲು ಬಂದು ಹೊಕ್ಕನು ತನ್ನ ನಗರಿಯನು
ಆಳುಮಂದಿಯ ಕಳುಹಿ ಮನದಿ ವಿ
ಶಾಲವಿರಹದ ತಾಪದಲಿ ಮಿಗೆ
ಕೇಳಮೇಳ ವಿನೋದವಿಭವವನುಳಿದನಾ ನೃಪತಿ

ಕೇಳು ಪಾಂಡವತನಯ = ಪಾಂಡು ಸುತನಾದ ಧರ್ಮರಾಯನೇ ಕೇಳು; ರಾಜಮರಾಳ = ರಾಜಹಂಸವು; ತೆರಳಿದುದತ್ತ = ಅತ್ತ ಹೊರಟು ಹೋಯಿತು; ನಳಭೂಪಾಲನಿತ್ತಲು = ಈ ಕಡೆ ನಳಮಹಾರಾಜನು; ಬಂದು ಹೊಕ್ಕನು = ಬಂದು ಸೇರಿದನು; ತನ್ನ ನಗರಿಯನು = ತನ್ನ ನಗರವನ್ನು; ಆಳುಮಂದಿಯ = ಸೇವಕಜನರನ್ನು; ಕಳುಹಿ = ಕಳುಹಿ; ಮನದಿ = ಮನಸ್ಸಿನಲ್ಲಿ; ವಿಶಾಲವಿರಹದ = ಅತಿಯಾಗಿ ಬೇರೂರಿದ ವಿರಹದ; ತಾಪದಲಿ = ಬೇಗುದಿಯಲ್ಲಿ; ಮಿಗೆ ಕೇಳ ಮೇಳ = ವೈಭವಯುತವಾದ ನೃತ್ಯ ಸಂಗೀತಾದಿ; ವಿನೋದ + ವಿಭವವನು + ಉಳಿದನು + ಆ = ಸಂತೋಷ ಮುಂತಾದುವೆಲ್ಲವನ್ನು ತ್ಯಜಿಸಿದನು; ಆ ನೃಪತಿ = ನಳ ಮಹಾರಾಜನು.

ಪಾಂಡವಸುತನಾದ ಧರ್ಮರಾಯನೇ ಕೇಳು, ಅತ್ತ, ತಾನು ಬೀಳ್ಕೊಟ್ಟ ರಾಜಹಂಸವು ತೆರಳುತ್ತಲೇ ಇತ್ತ ನಳಮಹಾರಾಜನು ತನ್ನೊಂದಿಗೆ ಬಂದಿದ್ದ ಎಲ್ಲ ಸೇವಕ ಪರಿವಾರವನ್ನು ಕಳುಹಿ ತನ್ನ ನಗರವನ್ನು ಸೇರಿದನು. ಕಾಡಿನಲ್ಲಿ ಕೆಲಕಾಲ ಮರೆಯಾದಂತಿದ್ದ ವಿರಹತಾಪವು ಈಗ ಬೃಹದ್ರೂಪವಾಗಿ ದೇಹ ಮನಸ್ಸುಗಳಲ್ಲಿ ಹರಡಿಕೊಳ್ಳಲು, ಅರಮನೆಯ ಎಲ್ಲ ನೃತ್ಯ, ಸಂಗೀತಾದಿ ವೈಭವಯುತವಾದ ಸಂತೋಷ ಸಂಭ್ರಮಗಳನ್ನು ತ್ಯಜಿಸಿದನು.

49. ಅತ್ತಲಾ ದಮಯಂತಿ ನಳನೊಳು
ಚಿತ್ತವಿಟ್ಟಳು ನೃಪಗೆ ವಿರಹವು
ಹೊತ್ತಿತಾಕೆಯ ಮೇಲೆಯಿರ್ವರಿಗಾಯ್ತು ಸಂತಾಪ
ಚಿತ್ತಜನು ಪಾತಕನು ವಿರಹವ

ಹೊತ್ತಿಸಿದನಿಬ್ಬರಿಗೆ ಮದನನ
ಹೆತ್ತವನು ವರಪುರದ ಚೆನ್ನಿಗರಾಯ ಕರುಣಿಸಿದ

ಅತ್ತಲಾ ದಮಯಂತಿ = ಆ ಕಡೆ ದಮಯಂತಿಯು; ನಳನೊಳು = ನಳಮಹಾರಾಜನಲ್ಲಿ; ಚಿತ್ತವಿಟ್ಟಳು = ಮನಸ್ಸು ನೆಟ್ಟಳು; ನೃಪಗೆ = ರಾಜನಿಗೆ; ವಿರಹವು = ವಿಯೋಗವು; ಹೊತ್ತಿತಾಕೆಯ ಮೇಲೆ = ಅವಳನ್ನು ಕುರಿತ ವಿರಹವು ಬೆಂಕಿಯಂತೆ ಆವರಿಸಿತು; ಇರ್ವರಿಗಾಯ್ತು = ಇಬ್ಬರಿಗೂ ಹೀಗೆ ಉಂಟಾಯಿತು; ಸಂತಾಪ = ನೋವು; ಚಿತ್ತಜನು = ಮನಸ್ಸಿನಲ್ಲಿ ಹುಟ್ಟುವ ಮನ್ಮಥನು; ಪಾತಕನು = ಪಾಪಿಯು; ವಿರಹವ = ಅಗಲಿಕೆಯ ತಾಪವು; ಹೊತ್ತಿಸಿದನು + ಇಬ್ಬರಿಗೆ = ಇಬ್ಬರನು ಆವರಿಸುವಂತೆ ಮಾಡಿದನು; ಮದನನ = ಮನ್ಮಥನ; ಹೆತ್ತವನು = ತಂದೆಯಾದ; ವರಪುರದ = ವರಪುರದ; ಚೆನ್ನಿಗರಾಯ = ಚೆನ್ನಿಗರಾಯನು; ಕರುಣಿಸಿದ = ದಯತೋರಿದನು.

ಅತ್ತ ದಮಯಂತಿಯು ನಳಮಹಾರಾಜನಲ್ಲಿಯೇ ಮನಸ್ಸು ನೆಟ್ಟವಳಾದ ಕಾರಣ ಅವಳ ಮೈಯ್ಯನ್ನು ಹಾಗೆಯೇ ರಾಜನನ್ನೂ ವಿರಹದ ತಾಪವು ಬೆಂಕಿಯಂತೆ ಆವರಿಸಿಕೊಂಡಿತು. ಹೀಗೆ ಇಬ್ಬರಿಗೂ ಅಗಲಿಕೆಯ ನೋವು ಅದರಿಂದಾದ ದುಃಖ ಬಳಲಿಕೆಗಳು ಉಂಟಾದುವು; ಮನಸ್ಸಿನಲ್ಲಿಯೇ ಉದ್ಭವಿಸುವ ಮನ್ಮಥನು ಪ್ರೇಮಿಗಳ ದೃಷ್ಟಿಯಲ್ಲಿ ಪಾಪಿ. ಏಕೆಂದರೆ ಇಬ್ಬರ ಮನಸ್ಸಿನಲ್ಲಿಯೂ ವಿರಹದ ತಾಪವನ್ನು ಹೊತ್ತಿಸಿದನು. ವರಪುರದ ಚೆನ್ನಿಗರಾಯನೂ, ಮನ್ಮಥನ ತಂದೆಯಾದ ಶ್ರೀಹರಿಯು ಅವರಿಗೆ ದಯೆಯನ್ನು ಕರುಣಿಸಿದನು.

ಈ ಅಧ್ಯಾಯದಲ್ಲಿ ಬರುವ 16 ನೇ ಪದ್ಯದಿಂದ 47 ನೇ ಪದ್ಯದವರೆಗೆ ಒಟ್ಟು 31 ಪದ್ಯಗಳಲ್ಲಿ ಬರುವ ಹಂಸೆಯು, ಯಾವ ಕಾಲಕ್ಕೂ ಕನ್ನಡ ಸಂಸ್ಕೃತಿಯ ಒಂದು ಅಚ್ಚಳಿಯದ ಕುರುಹಾಗಿ ಜನಮಾನಸದಲ್ಲಿ ಉಳಿದುಹೋಗಿದೆ. ಸಾಮಾನ್ಯವಾಗಿ ಕಾವ್ಯಗಳಲ್ಲಿ ಪ್ರೇಮಿಗಳಿಬ್ಬರ ನಡುವೆ ವಾಹಕವಾಗಿ ನಿಲ್ಲುವ ಸಖ, ಸಖಿ, ವಿದೂಷಕ ಸ್ಥಾನವನ್ನು ಪಕ್ಷಿಯೊಂದು ನಿರ್ವಹಿಸುವ ಕಲ್ಪನೆ ಶ್ರೀಹರ್ಷನ 'ನೈಷಧೀಯ ಚರಿತಂ' ಕೃತಿಯಲ್ಲಿ ಹೊರಬಂದಾಗ ಅದೊಂದು ಹೊಸರೀತಿಯ ಪ್ರಯೋಗವಾಗಿ ಜನಮೆಚ್ಚುಗೆ ಪಡೆಯಿತು. 'ಹಂಸವು' ಪಾರಮಾರ್ಥಿಕಾರ್ಥದಲ್ಲಿ

ಆತ್ಮದ ಸಂಕೇತವೂ ಆಗಿರುವುದರಿಂದ ಈ ದೌತ್ಯಕ್ಕೆ ಮತ್ತೊಂದು ಆಯಾಮವೂ ಇರುವುದೆಂಬುದಾಗಿ ಸಂಸ್ಕೃತ ವಿಮರ್ಶಕರನೇಕರು ತಲೆದೂಗಿದರು. ಕನ್ನಡ ನೆಲಕ್ಕೆ ಸಂಬಂಧಿಸಿದಂತೆ, ಹಂಸನ ತದ್ಭವ ರೂಪವು 'ಅಂಚೆ' ಎಂಬುದಾದ್ದರಿಂದ 'ಓಲೆ' ಅಥವಾ ದೌತ್ಯದ ಎಲ್ಲ ಆಧುನಿಕ ರೂಪಗಳೂ ಇಂದಿಗೂ 'ಅಂಚೆ' ಎಂದು ಜನಜನಿತವಾಗಿದೆ.

ಮೂರನೆಯ ಸಂಧಿ

ರಾಜಿಸುವ ವರಭೀಮಪುರದಲಿ
ರಾಜ ನಳನೃಪ ಮದುವೆಯಾಗಿ ಸ
ರಾಜತೇಜದಿ ಬಂದು ಹೊಕ್ಕನು ಪುರವ ಸತಿಸಹಿತ

ರಾಜಿಸುವ = ಶೋಭಾಯಮಾನವಾಗಿರುವ; ವರ = ಶ್ರೇಷ್ಠವಾದ; ಭೀಮಪುರದಲಿ = ಭೀಮರಾಜನ ನಗರದಲ್ಲಿ; ರಾಜ = ಅರಸನಾದ; ನಳನೃಪ = ನಳಮಹಾರಾಜನು; ಮದುವೆಯಾಗಿ = ವಿವಾಹವಾಗಿ; ಸ + ರಾಜತೇಜದಿ = ಚಂದ್ರನಂತೆ ಕಾಂತಿಯುಕ್ತನಾಗಿ; ಬಂದು ಹೊಕ್ಕನು = ಬಂದು ಪ್ರವೇಶಿಸಿದನು; ಪುರವ = ಪಟ್ಟಣವನ್ನು; ಸತಿಸಹಿತ = ಮಡದಿಯೊಂದಿಗೆ.

ನಿಷಧನಗರದ ರಾಜನಾದ ನಳನು ಭೀಮರಾಜನ ವಿದರ್ಭನಗರದಲ್ಲಿ ಭೀಮನಮಗಳಾದ ದಮಯಂತಿಯನ್ನು ವಿವಾಹವಾಗಿ ಚಂದ್ರನಂತೆ ತೇಜೋಮಯ ನಾಗಿ ತನ್ನ ಪುರವನ್ನು ಪತ್ನಿಸಮೇತ ಪ್ರವೇಶಿಸಿದನು.

1. ಕೇಳು ಧರ್ಮಜ ನಳನ ರೂಪನು
ಕೇಳಲೀ ಹದನಾಯ್ತು ಸತಿಗೆ ನೃ
ಪಾಲನಂಗವು ಗೋಚರಿಸಲೆಂತಹುದೊ ವಿರಹಾಗ್ನಿ
ನಾಲಗೆಗೆ ದ್ರವವಿಲ್ಲ ಮಂಚದ
ಮೇಲೆ ಮಲಗಳು ಬಲಿದವಸ್ಥೆಯ
ಹೇಳಲಿನ್ನೇನರಸ ದಮಯಂತಿಯ ಮನೋವ್ಯಥೆಯ

ಕೇಳು = ಆಲಿಸು; ಧರ್ಮ + ಜ = ಯಮಧರ್ಮನ ಮಗನಾದ ಧರ್ಮರಾಯನೇ; ನಳನ ರೂಪನು = ನಳನ ಸೌಂದರ್ಯವನ್ನು; ಕೇಳಲ್ + ಈ

= ಕೇಳಲು ಈ; ಸತಿಗೆ = ದಮಯಂತಿಗೆ; ಹದನು + ಆಯ್ತು = ಬೇರೆಯದೇ ಒಂದು ಸ್ಥಿತಿಯುಂಟಾಯಿತು; ನೃಪಾಲನ + ಅಂಗವು = ರಾಜನ ಅಂಗಾಂಗ ಸೌಂದರ್ಯವು; ಗೋಚರಿಸಲು + ಎಂತು + ಅಹುದೊ = ನೋಡಿದಾಗ ಏನಾಗುವುದೋ; ವಿರಹ + ಅಗ್ನಿ = ಅಗಲಿಕೆಯ ತಾಪವು; ನಾಲಗೆಗೆ = ನಾಲಗೆಗೆ; ದ್ರವವಿಲ್ಲ = ತೇವಾಂಶವಿಲ್ಲದೆ ಒಣಗಿತು; ಮಂಚದ ಮೇಲೆ = ಪಲ್ಲಂಗದ ಮೇಲೆ; ಮಲಗಳು = ಮಲಗುವುದನ್ನು ಬಿಟ್ಟಳು; ಬಲಿದ + ಅವಸ್ಥೆಯ = ಹೆಚ್ಚಾದ ತೊಂದರೆಯ; ಹೇಳಲು + ಇನ್ನೇನು + ಅರಸ = ಹೇಳುವುದಕ್ಕೆ ಇನ್ನೇನಿದೆ ದೊರೆಯೇ; ದಮಯಂತಿಯ = ದಮಯಂತಿಯ; ಮನೋವ್ಯಥೆಯ = ಮನಸ್ಸಿನ ನೋವನ್ನು.

ಧರ್ಮರಾಯನನ್ನು ಸಂಬೋಧಿಸಿ ರೋಮಶ ಮುನಿಯು ಹೇಳುವುದನ್ನು ಮುಂದುವರಿಸುತ್ತಿದ್ದಾನೆ, ಕೇಳು ಧರ್ಮಜನೇ, ನಳನ ಸೌಂದರ್ಯ ವರ್ಣನೆಯನ್ನು ಕೇಳಿದ ಮಾತ್ರಕ್ಕೆ ದಮಯಂತಿಯು ಅಪಾರವಾದ ವಿರಹದಿಂದ ತಪ್ತಳಾದಳೆಂದರೆ, ಇನ್ನು ಅವನ ಸೌಂದರ್ಯವನ್ನು ಸಾಕ್ಷಾತ್ತಾಗಿ ಕಂಡಳೆಂದರೆ ಅದೆಂತಾಗುವುದೋ! ವಿರಹವು ಹೆಚ್ಚಾದುದರಿಂದ, ದೇಹವು ಬೇಗುದಿಗೊಂಡು ನಾಲಗೆಯ ತೇವಾಂಶ ಒಣಗಿತು. ಮಂಚದ ಮೇಲೆ ಮಲಗುವುದೂ ಸಾಧ್ಯ ವಿಲ್ಲದಂತಾಗಿ, ದೈಹಿಕ ವಾಗಿಯೂ, ಮಾನಸಿಕವಾಗಿಯೂ, ವಿಲಾಸ ಸ್ವಭಾವ ಗಳನ್ನು ತ್ಯಜಿಸಿದವಳಾ ಗಿದ್ದಾಳೆ. ಅವಳ ಮನೋವ್ಯಥೆಯ ಅವಸ್ಥೆಯ ಕುರಿತು ಇನ್ನೂ ಹೇಳುವುದಕ್ಕೇನಿದೆ ಎಂದನು.

2. ಲಲನೆ ನಿದ್ರಾಂಗನೆಯನುಳಿದಳು
ಹೊಲಬುದಪ್ಪಿದ ಮನದಿ ಸತಿಯರು
ಸುಳಿಯೆ ನಳನೃಪ ಬಂದನಿದೆಯೆಂದೆನುತ ಕಳವಳಿಸಿ
ನಿಲುಕಿ ನೋಡುವಳೊಮ್ಮೆ ಕಾಣದೆ
ಹಲುಬುವಳು ಮತ್ತೊಮ್ಮೆ ಕಂಡದ
ಕೆಳದಿಯರು ತಮ್ಮೊಳಗೆ ತಾವಾಲೋಚಿಸಿದರಲ್ಲಿ

ಲಲನೆ = ಆ ಹೆಣ್ಣು ಮಗಳು; ನಿದ್ರ + ಅಂಗನೆಯನು + ಉಳಿದಳು = ನಿದ್ರೆಯೆಂಬ ಹೆಣ್ಣನ್ನು ಅಗಲಿದಳು; ಹೊಲಬು ದಪ್ಪಿದ = ಕ್ರಮಬದ್ಧವಾಗಿಲ್ಲದ, ಅಸ್ತವ್ಯಸ್ತ; ಮನದಿ = ಮನಸ್ಸಿನಿಂದ; ಸತಿಯರು = ಹೆಣ್ಣು ಮಕ್ಕಳು, ಸಖಿಯರು; ಸುಳಿಯೆ = ಅಡ್ಡಾಡಿದರೆ; ನಳನೃಪ = ನಳಮಹಾರಾಜ; ಬಂದನ್ + ಇದೆ + ಎಂದು + ಎನುತ = ಬಂದನು ಇದೋ ಎನ್ನುತ್ತ; ಕಳವಳಿಸಿ = ಚಿಂತಿಸಿ; ನಿಲುಕಿ = ಎಟುಕಿಸಿಕೊಂಡು; ನೋಡುವಳು + ಒಮ್ಮೆ = ಒಂದು ಸಲ ನೋಡುವಳು; ಕಾಣದೆ = ಕಣ್ಣಿಗೆ ಕಾಣದಿರಲು; ಹಲುಬುವಳು = ಒಂದೇ ಸಮನೆ ಕೊರಗುವಳು; ಮತ್ತೆ + ಒಮ್ಮೆ = ಪುನಃ ಒಂದು ಬಾರಿ, ಕಂಡು + ಅದ = ಅದನ್ನು ಕಂಡ; ಕೆಳದಿಯರು = ಗೆಳತಿಯರು; ತಮ್ಮ + ಒಳಗೆ = ತಮ್ಮ ತಮ್ಮಲ್ಲಿ; ತಾವು + ಆಲೋಚಿಸಿದರು + ಅಲ್ಲಿ = ಅಲ್ಲಲ್ಲಿಯೇ ತಾವುಗಳು ಪರಸ್ಪರ ಯೋಚಿಸಹತ್ತಿದರು.

ದಮಯಂತಿಯು ವಿರಹತಾಪ ತೀವ್ರತೆಯಿಂದ ನಿದ್ದೆ ಮಾಡದಾದಳು. ಅವಳ ದೈನಂದಿನ ಕಾರ್ಯ ಕಲಾಪಗಳು ಕ್ರಮ ತಪ್ಪಿದುವು. ಯಾರಾದರೂ ಸಖಿಯರು, ಅಂತಃಪುರದ ಸ್ತ್ರೀಯರು ಅತ್ತಿತ್ತ ಅಡ್ಡಾಡಿದರೂ ನಳಮಹಾರಾಜನೇ ಬಂದನೇನೋ ಎಂದು ಚಿಂತಿಸಿ, ಆಚೀಚೆ ನಿಲುಕಿಸಿಕೊಂಡು ನೋಡುವಷ್ಟು ಭ್ರಮಾಧೀನಳಾದಳು. ಅವನನ್ನು ಕಾಣದ ಅವಳ ಮನಸ್ಸು ನಿರಂತರವಾಗಿ ಕೊರಗ ಲಾರಂಭಿಸಿದುದನ್ನು ಕಂಡ ಅವಳ ಗೆಳತಿಯರು ತಮ್ಮ ತಮ್ಮೊಳಗೆ ಅವಳ ಸ್ಥಿತಿಗತಿಗಳನ್ನು ಕುರಿತು ಸಮಾಲೋಚಿಸಿಕೊಂಡರು.

3. ವಿರಹ ಬಲಿದುದು ಸತಿಗೆ ನಾವಿದ
ನರಸಗರುಹುವೆವೆಂದು ಕೆಳದಿಯ
ರಿರದೆ ಬಂದರು ಭೀಮನೃಪಗಿಂತೆಂದರೀ ಹದನ
ವರಕವಿಗಳಂದಿನಲಿ ಧರಣೀ
ಶ್ವರನ ಕೈವಾರಿಸಲು ಕೇಳಿದು
ತರುಣಿ ವಿರಹಕೆ ತನುವ ತೆತ್ತಿಹಳೆಂದರಬಲೆಯರು

ವಿರಹ = ಅಗಲಿಕೆಯ ನೋವು; ಬಲಿದುದು = ಹೆಚ್ಚಾಯಿತು; ಸತಿಗೆ = ದಮಯಂತಿಗೆ; ನಾವು + ಇದನು + ಅರಸಗೆ + ಅರುಹುವೆವು + ಎಂದು =

ನಾವು ಇದನ್ನು ಅರಸನಿಗೆ ತಿಳಿಸುತ್ತೇವೆ ಎಂದು; ಕೆಳದಿಯರು + ಇರದೆ = ಸಖಿಯರು ಯೋಚಿಸಿ ತಳುವದೆ; ಬಂದರು = ಬಂದರು; ಭೀಮನೃಪಗೆ + ಇಂತು + ಎಂದರು + ಈ = ಭೀಮ ಮಹಾರಾಜನಿಗೆ ಹೀಗೆ ಹೇಳಿದರು; ಹದನ = ಈ ಸ್ಥಿತಿಯನ್ನು; ವರಕವಿಗಳು + ಅಂದಿನಲಿ = ಅಂದಿನ ಸಭೆಯಲ್ಲಿ ಕವಿಶ್ರೇಷ್ಠರು; ಧರಣಿ + ಈಶ್ವರನ = ಧರಣಿಗೆ ಒಡೆಯನಾದ ನಳಮಹಾರಾಜನನ್ನು; ಕೈವಾರಿಸಲು = ಗುಣಗಾನ ಮಾಡಲು; ಕೇಳಿದು = ಅದನ್ನು ಕೇಳಿ; ತರುಣಿ = ನಮ್ಮ ಎಳೆಪ್ರಾಯದ ದಮಯಂತಿಯು; ವಿರಹಕೆ = ವಿಯೋಗಕ್ಕೆ; ತನುವ = ದೇಹವನ್ನು; ತೆತ್ತಿಹಳು + ಎಂದರು + ಅಬಲೆಯರು = ಕೊಟ್ಟಿದ್ದಾಳೆ ಎಂದರು ಅರಮನೆಯ ಪರಿವಾರದ ಸಖೀಜನರು.

ದಮಯಂತಿಯು ವಿರಹತಾಪದಿಂದ ಅತೀವವಾಗಿ ಬಳಲಿದಳು. ಅಗಲಿಕೆಯ ನೋವು ತೀವ್ರವಾಗಿ ನಿದ್ದೆ ಮಾಡದಾದಳು. ಅತ್ತಿತ್ತ ಅಡ್ಡಾಡುತ್ತಿದ್ದ ಸಖಿಯರು ಇದನ್ನು ಗಮನಿಸಿ ಚಿಂತಿತರಾಗಿ, ಅರಸನಾದ ಭೀಮನಿಗೆ ವಿಷಯವನ್ನು ತಿಳಿಸಬೇಕೆಂದು ನಿಶ್ಚಯಿಸಿ, ರಾಜನಿಗೆ ಅಬಲೆಯಾದ ದಮಯಂತಿಯ ಅವಸ್ಥೆಯನ್ನು ಹೇಳಿದರು. "ಅಂದು ಆಸ್ಥಾನದಲ್ಲಿ ಅರಸರು ಓಲಗಂಗೊಟ್ಟಾಗ ಅಲ್ಲಿ ಉಪಸ್ಥಿತರಿದ್ದ ಕವಿವರ್ಯರು ನಿಷಧರಾಜನಾದ ನಳನ ಕುರಿತಂತೆ ಗುಣಗಾನ ಮಾಡಿದುದನ್ನು ಕೇಳಿದ ದಮಯಂತಿಯು ವಿರಹತಾಪಕ್ಕೊಳಗಾಗಿದ್ದಾಳೆ" ಎಂದು ವಿಷಯವನ್ನು ವಿವರಿಸಿದರು.

ದೈಹಿಕವಾಗಿ ದುರ್ಬಲರಾದ ಕಾರಣ ಹೆಂಗಸರನ್ನು ಅಬಲಾ ಎಂದು ಕರೆಯುವುದು ವಾಡಿಕೆಯ ಮಾತು. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ, ಸಂಸ್ಕೃತ ಮೂಲವಾದ ಈ ಸಂಬೋಧನೆ ಸ್ತ್ರೀಯರನ್ನು ಕುರಿತು ಅತ್ಯಂತ ಸಾಮಾನ್ಯವೆಂಬಂತೆ ಬಳಕೆಯಾಗಿರುವುದನ್ನು ಗಮನಿಸಬಹುದು.

4. ಕೇಳಿದನು ನಸುನಗುತ ಭೀಮನೃ
ಪಾಲ ತನ್ನಾತ್ಮಜೆಯ ಯೌವನ
ದೇಳಿಗೆಯನಾಲಿಸುತ ವರನಾರೆಂದು ಚಿಂತೆಯಲಿ
ಓಲಗಕೆ ನಡೆತಂದು ಬರೆಸಿದ

ನೋಲೆಗಳ ಕಳುಹಿಸಿದನು ಧರಣೀ
ಪಾಲಕರ ಬರಹೇಳೆನುತ ಹೊಯಿಸಿದನು ಡಂಗುರವ

ಕೇಳಿದನು = ಆಲಿಸಿದನು; ನಸುನಗುತ = ಸಂತೋಷದ ಮೆಲುನಗೆ ಬೀರಿ; ಭೀಮನೃಪಾಲ = ಭೀಮ ಮಹಾರಾಜನು; ತನ್ನ + ಆತ್ಮ + ಜೆಯ = ತನ್ನ ಮಗಳ; ಯೌವನದ + ಏಳಿಗೆಯನು + ಆಲಿಸುತ = ಯೌವನವು ಅಭಿವೃದ್ಧಿಗೊಂಡ ರೀತಿಯನ್ನು ಕೇಳುತ್ತ; ವರನು + ಆರೆಂದು = ಶ್ರೇಷ್ಠನಾಗಿರುವಂತಹ ಗಂಡು ಯಾರೆಂದು; ಚಿಂತೆಯಲಿ = ಯೋಚನೆಯಲ್ಲಿ; ಓಲಗಕೆ = ಆಸ್ಥಾನಕ್ಕೆ; ನಡೆತಂದು = ಬಂದು; ಬರೆಸಿದನೋಲೆಗಳ = ಓಲೆಗಳನ್ನು ಬರೆಸಿದನು. ಕಳುಹಿದನು ಧರಣೀ ಪಾಲಕರ = ರಾಜರುಗಳನ್ನು; ಬರಹೇಳೆನುತ = ಬರುವಂತೆ ಹೇಳಿ ಎನ್ನುತ್ತ; ಹೊಯಿಸಿದನು = ಸಾರಿಸಿದನು ಪ್ರಕಟಿಸಿದನು; ಡಂಗುರವ = ವಾದ್ಯವನ್ನು ಹೊಯ್ಸಿ.

ಅಂತಃಪುರದ ಗೆಳತಿಯರು ದಮಯಂತಿಯ ವಿರಹತಾಪದ ತೀವ್ರತೆ ಯನ್ನು ಕಂಡು ಚಿಂತಿತರಾಗಿ ಭೀಮನೃಪಾಲನಿಗೆ ಸುದ್ದಿ ಮುಟ್ಟಿಸಲು, ಅದನ್ನು ಕೇಳಿದ ಭೀಮನಿಗೆ ಮಗಳ ಯೌವನಾಧಿಕ್ಯದ ಸುದ್ಧಿ ಸಂತಸವನ್ನುಂಟು ಮಾಡಿದರೂ ಜೊತೆಗೆ ಅವಳಿಗೆ ತಕ್ಕ ವರನೆಲ್ಲಿದ್ದಾನೋ ಎಂಬ ಚಿಂತೆಯೂ ಮೂಡಿ, ಆಸ್ಥಾನಕ್ಕೆ ಬಂದು ಎಲ್ಲ ರಾಜಾಧಿರಾಜರಿಗೂ ಬರುವಂತೆ ಕರೆಯೋಲೆ ಬರೆಯಿಸಿದ್ದಲ್ಲದೆ ಆ ಕುರಿತ ಸುದ್ದಿಯನ್ನು ಎಲ್ಲೆಡೆಗೆ ಪ್ರಚಾರ ಮಾಡಲು ವಾದ್ಯವನ್ನು ಹೊಯಿಸಿ ಪ್ರಕಟಿಸಿದನು.

5. ಹರಿದರರಸಾಳುಗಳು ದಿಕ್ಕುಗ
ಳರಸುಗಳ ನಗರವನು ಇತ್ತಲು
ಪುರವ ಶೃಂಗರಿಸಿದರು ಭೀಮನೃಪಾಲನಾಜ್ಞೆಯಲಿ
ತರಿಸಿದರು ಭಂಡಾರದಲಿ ನವ
ಭರಿತವಾದ ಸುವಸ್ತುಗಳ ವಿ
ಸ್ತರಿಸಿ ಕಟ್ಟಿದರಗಲದಲಿ ವೈವಾಹಮಂಟಪವ

ಹರಿದರು + ಅರಸರ + ಆಳುಗಳು = ಅವಸರದಿಂದ ತೆರಳಿದರು ರಾಜ ದೂತರು; ದಿಕ್ಕುಗಳ + ಅರಸುಗಳ = ಅಷ್ಟದಿಕ್ಕುಗಳಲ್ಲೂ ಆಳುತ್ತಿದ್ದ ರಾಜರ; ನಗರವನು = ಪಟ್ಟಣಗಳಿಗೆ; ಇತ್ತಲು = ಈ ಕಡೆ; ಪುರವ = ಭೀಮನೃಪನ ನಗರವನ್ನು; ಶೃಂಗರಿಸಿದರು = ಅಲಂಕರಿಸಿದರು; ಭೀಮ + ನೃ + ಪಾಲನ + ಆಜ್ಞೆಯಲಿ = ಭೀಮನೃಪನ ಆಜ್ಞಾನುಸಾರವಾಗಿ; ತರಿಸಿದರು = ಬರಮಾಡಿ ಕೊಂಡರು; ಭಂಡಾರದಲಿ = ಅರಮನೆಯ ಕೋಶದಿಂದ ನವಭರಿತವಾದ = ಹೊಸ ಹೊಸತಾದ; ಸುವಸ್ತುಗಳ = ಶ್ರೇಷ್ಠವಾದ, ಸುವಾಸನಾಭರಿತವಾದ ವಸ್ತು ವಿಷಯ ಗಳನ್ನು; ವಿಸ್ತರಿಸಿ = ವಿಸ್ತಾರವಾಗಿರುವಂತೆ; ಕಟ್ಟಿದರು + ಅಗಲದಲಿ = ಅಗಲದಲಿ ವೈಭವೋಪೇತವಾಗಿ ದೊಡ್ಡದಾಗಿ ಕಟ್ಟಿದರು; ವೈವಾಹಮಂಟಪವ = ವಿವಾಹ ಮಂಟಪವನ್ನು.

ಅರಸನ ಆಜ್ಞಾನುಸಾರ ರಾಜದೂತರು ದೇಶದ ಅಷ್ಟದಿಕ್ಕುಗಳಿಗೂ ವೇಗ ವಾಗಿ ಹೋಗಿ ಅಲ್ಲಲ್ಲಿಯ ರಾಜಾಧಿರಾಜರುಗಳಿಗೆ ಸುದ್ದಿ ಮುಟ್ಟಿಸಿದರು. ಇತ್ತ ವಿದರ್ಭ ನಗರದಲ್ಲಿ ರಾಜರ ಮನೋಭಿಲಾಷೆಗೆ ತಕ್ಕಂತೆ, ರಾಜ್ಯಕೋಶದಿಂದ ಹೊಸ ಹೊಸತಾದ, ಒಳ್ಳೊಳ್ಳೆಯ ಮತ್ತು ಸುಗಂಧಿತ ವಸ್ತುಗಳೆಲ್ಲವನ್ನೂ ತಂದು ವಿವಾಹ ಮಂಟಪವನ್ನು ವಿಶಾಲವಾಗಿ ವೈಭವೋಪೇತವಾಗಿ ಕಟ್ಟಿದರು.

6. ಹೊಳೆವ ದಂತದ ಕಂಬಗಳ ಪು
ತ್ತಳಿಯ ಸಾಲಿನ ಮೇಲುಕಟ್ಟಿನ
ತಳಿರ ತೋರಣದೋರಣದ ಲೋವೆಗಳ ಅರಳೆಲೆಯ
ಬಿಳಿಯ ಮುತ್ತಿನ ಸರದ ಪವಳದ
ಬಿಳಿಯ ಚೌರಿಯ ಮೇಲುಗಟ್ಟಿನ
ಹೊಳಹು ಮಿಗೆ ರಚಿಸಿದರು ಸತಿಯ ವಿವಾಹಮಂಟಪವ

ಹೊಳೆವ = ಮಿರುಗುವ; ದಂತದ = ಆನೆಯ ದಂತದಿಂದ ಮಾಡಿದ; ಕಂಬಗಳ = ಕಂಬಗಳ; ಪುತ್ತಳಿಯ ಸಾಲಿನ = ಗೊಂಬೆಗಳ ಸಾಲಿನ; ಮೇಲುಕಟ್ಟಿನ = ಚಪ್ಪರದ ಮೇಲ್ಭಾಗದ ವಸ್ತ್ರದ; ತಳಿರ = ಚಿಗುರಿನ; ತೋರಣದ + ಓರಣದ + ಅಚ್ಚುಕಟ್ಟಾದ ತೋರಣ ಸಾಲಿನ; ಲೋವೆಗಳ = ಮಾಳಿಗೆಯ ಕೆಳ ಮಗ್ಗುಲಿನ;

ಅರಳೆಲೆಯ = ಅರಳಿ + ಎಲೆಯ = ಅರಳಿಯ ಮರದೆಲೆಯ; ಬಿಳಿಯ ಮುತ್ತಿನ ಸರದ = ಬೆಳ್ಳಂಬಿಳುಪಿನ ಮುತ್ತಿನಿಂದ ಕೋದ ಮಾಲೆಯ; ಪವಳದ = ಹವಳದ; ಬಿಳಿಯ ಚೌರಿಯ = ಶುಭ್ರ ಬಿಳುಪಿನ ಚಮರೀಮೃಗದ ಕುಚ್ಚಿನ; ಮೇಲುಗಟ್ಟಿನ = ಚಪ್ಪರದ; ಹೊಳಹು = ಹೊಳಪು; ಮಿಗೆ = ಶೋಭಾಯಮಾನವಾಗಿರುವಂತೆ; ರಚಿಸಿದರು = ನಿರ್ಮಿಸಿದರು; ಸತಿಯ = ಹೆಣ್ಣಿನ; ವಿವಾಹ ಮಂಟಪವ = ಮದುವೆಯ ಮಂಟಪವನ್ನು.

ದಮಯಂತಿಯ ವಿವಾಹಕ್ಕಾಗಿ ಮಂಟಪವನ್ನು ರಚಿಸಿದ ವೈಭವೋಪೇತ ದೃಶ್ಯವನ್ನಿಲ್ಲಿ ಕವಿ ವರ್ಣಿಸುತ್ತಿದ್ದಾನೆ. ವಿವಾಹ ಮಂಟಪದಲ್ಲಿ ಮಿರುಗುವ ಆನೆಯ ದಂತಗಳಿಂದ ಮಾಡಿದ ಕಂಬಗಳನ್ನು ನಿರ್ಮಿಸಲಾಗಿತ್ತು. ಚಪ್ಪರದ ಮೇಲ್ಭಾಗದ ವಸ್ತ್ರಕ್ಕೆ ಹೊಸ ಚಿಗುರಿನ ತೋರಣದೊಂದಿಗೆ ಸುಂದರವಾದ ಗೊಂಬೆಗಳ ಸಾಲನ್ನು ರಚಿಸಲಾಗಿತ್ತು. ಚಪ್ಪರದಲ್ಲಿ ಕಟ್ಟಿದ್ದ ಅಚ್ಚುಕಟ್ಟಾದ ತೋರಣ ಸಾಲೂ, ಮಾಳಿಗೆಯ ಕೆಳಮಗ್ಗುಲಿನಲ್ಲಿದ್ದ ಅರಳಿ ಮರದ ಎಲೆಯೊಂದಿಗೆ ಕಟ್ಟಿದ್ದ ಕಣ್ಸೆಳೆಯುವ ಶುಭ್ರವಾದ ಮುತ್ತಿನ ಸಾಲೂ ಹವಳದ ಸಾಲೂ ಚಮರೀಮೃಗದ ಕುಚ್ಚೂ ಶೋಭಾಯಮಾನ ವಾಗಿ ಕಾಣುತ್ತಿತ್ತು.

7. ಓರಣದ ಬೀದಿಗಳ ಸಾದಿನ
ಸಾರಣೆಯ ಕತ್ತುರಿಯ ಮಿಗೆ ಪ
ನ್ನೀರ ಚಳೆಯದ ಪರಿಮಳದ ಕುಂಕುಮದ ಕಾರಣೆಯ
ತೋರಣದ ತಳಿಗೆಗಳ ಘನಸಿಂ
ಗಾರವೆಸೆಯುವ ಕೇರಿಕೇರಿಯ
ವಾರನಾರಿಯರಿಂದ ಸಂದಣಿಸಿತು ವಿದರ್ಭಪುರ

ಓರಣದ = ಸಾಲು ಸಾಲಾದ; ಬೀದಿಗಳ ಬೀದಿಗಳಿಂದಲೂ; ಸಾದಿನ = ಪರಿಮಳಭರಿತವಾದ; ಕತ್ತುರಿಯ ಸಾರಣೆಯ = ಕಸ್ತೂರಿಯ ಲೇಪನದಿಂದಲೂ; ಮಿಗೆ = ಶೋಭಾಕರವಾದ; ಪನ್ನೀರ = ಪರಿಮಳಭರಿತವಾದ ನೀರಿನ; ಚಳೆಯದ = ಸಿಂಪಡಿಸುವಿಕೆಯಿಂದಲೂ; ಪರಿಮಳದ = ಸುಗಂಧ ಸೂಸುವ; ಕುಂಕುಮದ ಕಾರಣೆಯ = ಕುಂಕುಮ ವರ್ಣದ ಹುಡಿಯಿಂದ ಗೋಡೆಯ ಕೆಳಭಾಗದಲ್ಲಿ ನೆಲಕ್ಕೆ

ತಾಗುವ ಅಂಚಿಗೆ ಹೊಯ್ದ ಸುಂದರವಾದ ವರ್ಣಪಟ್ಟಿಕೆಗಳಿಂದಲೂ; ತೋರಣದ = ಉತ್ಸವಕ್ಕಾಗಿ ಕಟ್ಟಿದ ಹೂ ಮತ್ತು ಚಿಗುರೆಲೆಗಳ ಮಾಲೆಗಳಿಂದಲೂ; ತಳಿಗೆಗಳ = ಹರಿವಾಣಗಳನ್ನು ಹಿಡಿದ; ಘನಸಿಂಗಾರವೆಸೆಯುವ=ವಿಶೇಷವಾದ ಶೃಂಗಾರ ಮಯವಾಗಿ ಶೋಭಿಸುವ; ವಾರನಾರಿಯರಿಂದ = ಮೇಳದ ಸ್ತ್ರೀಯರಿಂದ; ಸಂದಣಿಸಿತು = ತುಂಬಿಹೋಯಿತು; ವಿದರ್ಭಪುರ.

ದಮಯಂತಿಯ ಮದುವೆಯ ಸಂಭ್ರಮದಲ್ಲಿ ಇಡೀ ವಿದರ್ಭನಗರವೇ ಸಿಂಗಾರಗೊಂಡುದನ್ನು ಈ ಪದ್ಯ ವಿವರಿಸುತ್ತದೆ. ಸಾಲುಸಾಲಾಗಿದ್ದ ಬೀದಿಗಳನ್ನೆಲ್ಲ ತಳಿರುತೋರಣಗಳಿಂದಲೂ ಪರಿಮಳಭರಿತವಾದ ಪನ್ನೀರಿನ ಸಿಂಪಡಿಸುವಿಕೆ ಯಿಂದಲೂ ಕಸ್ತೂರಿಯ ಲೇಪನದಿಂದಲೂ ಸುಗಂಧಿತ ಕುಂಕುಮ ಕೇಸರಿಯಿಂದ ನಗರದ ಎಲ್ಲ ಗೋಡೆಗಳಂಚನ್ನು ಅಲಂಕರಿಸುವುದರಿಂದಲೂ ನವೀಕರಿಸಲಾಯಿತು. ಫಲಪುಷ್ಪಾದಿಗಳನ್ನೂ, ಸುಗಂಧದ್ರವ್ಯಗಳನ್ನೂ ಹಿಡಿದು ಹೊರಟ ವಾರನಾರಿಯರ ಮೇಳವೂ ಈ ಸೊಗಸನ್ನು ದುಪ್ಪಟ್ಟುಗೊಳಿಸಿತು. ಇಡೀ ವಿದರ್ಭನಗರವೇ ಹೀಗೆ ಸಂಭ್ರಮ ಸೌರಭಗಳಲ್ಲಿ ತುಂಬಿಹೋಯಿತು.

ಹಿಂದೆಲ್ಲ, ವಿಶೇಷವಾಗಿ ಅರಮನೆ ಗುರುಮನೆಗಳ ಉತ್ಸವಾದಿಗಳಲ್ಲಿಯೂ, ಮದುವೆ, ದೇವರ ನಿತ್ಯಕಲ್ಯಾಣೋತ್ಸವಗಳಲ್ಲಿಯೂ ಪಚ್ಚೆ ತೋರಣಗಳಿಂದ ಊರನ್ನು ಅಲಂಕರಿಸುವಷ್ಟೇ ಸಾಮಾನ್ಯ ಸಂಗತಿಯೆಂಬಂತೆ ವಾರನಾರಿಯರು (ವೇಶ್ಯೆಯರು) ಕುಂಕುಮ ಕಸ್ತೂರಿಯಾದಿ ಸುಗಂಧಿತ ಮಂಗಳ ದ್ರವ್ಯಗಳ ಹರಿವಾಣಗಳಲ್ಲಿ ಹಿಡಿದು ಉತ್ಸವದ ಮುಂಭಾಗದಲ್ಲಿ ಪ್ರಧಾನವಾಗಿ ಪಾಲ್ಗೊಳ್ಳುವುದು ವಾಡಿಕೆಯಾಗಿತ್ತು. ವಾರನಾರಿಯರು ಸಮಾಜ ಕಂಟಕರೆಂಬ ಹಣೆಪಟ್ಟಿಯಲ್ಲಿರಲಿಲ್ಲ ಎಂಬುದನ್ನು ಗಮನಿಸಬಹುದು.

8. ಮಾಳವಾಂಧ್ರ ಕಳಿಂಗ ಕೋಸಲ
ಚೋಳ ಮತ್ಸ್ಯ ವರಾಳ ಕೊಂಕಣ
ಗೌಳ ಕುಂತಳ ಮಗಧ ಬರ್ಬರ ಪಾಂಡ್ಯ ಕರ್ಣಾಟ
ಲಾಳ ವಂಗ ಸುರಾಷ್ಟ್ರ ಕುರು ನೇ

ಪಾಳ ಘೂರ್ಜರ ಸಿಂಧು ಮರು ಪಾಂ
ಚಾಳ ಮೊದಲಾದಖಿಳ ಧರಣೀಪಾಲರೈದಿದರು

ಮಾಳವಾಂಧ್ರ = ಮಾಳವ, ಆಂಧ್ರ, ಕಳಿಂಗ, ಕೋಸಲ, ಚೋಳ, ಮತ್ಸ್ಯ, ವರಾಳ, ಕೊಂಕಣ, ಗೌಳ, ಕುಂತಳ, ಮಗಧ, ಬರ್ಬರ, ಪಾಂಡ್ಯ, ಕರ್ಣಾಟ, ಲಾಳ, ವಂಗ, ಸೌರಾಷ್ಟ್ರ, ಕುರು, ನೇಪಾಳ, ಘೂರ್ಜರ, ಸಿಂಧು, ಮರು, ಪಾಂಚಾಳ, ಮೊದಲಾದಖಿಳ = ಮೊದಲಾದ + ಅಖಿಳ = ಮೊದಲಾದ ಸಮಸ್ತ; ಧರಣೀಪಾಲರು + ಐದಿದರು = ರಾಜಾಧಿರಾಜರು ಆಗಮಿಸಿದರು.

ಮೇಲೆ ಹೇಳಿರುವ ಕೆಲವು ವಿವಿಧ ಪ್ರದೇಶಗಳನ್ನು ಛಪ್ಪನ್ನೈವತ್ತಾರು ಪ್ರಾಂತ್ಯಗಳೆಂದು (56) ಪ್ರಾಚೀನ ಪ್ರಸಿದ್ಧ ಪ್ರದೇಶಗಳಾಗಿ ಗುರುತಿಸಲಾಗುತ್ತಿತ್ತು. ವಿದರ್ಭರಾಜನು ಕಳುಹಿದ ಆಮಂತ್ರಣದ ಮೇರೆಗೆ ಈ ಎಲ್ಲ ದೇಶಗಳ ರಾಜಾಧಿರಾಜರು ಆಗಮಿಸಿದರು. ಈ ರೀತಿಯ ಪಟ್ಟಿಯನ್ನು ರಾಮಧಾನ್ಯ ಚರಿತೆಯಲ್ಲಿಯೂ ಕಾಣಬಹುದು.

9. ಧರಣಿವಲಯ ದಿಗಂತದವನೀ
ಶ್ವರರು ಭೂಸುರ ಸಿದ್ಧ ವಿದ್ಯಾ
ಧರರು ಸುಜನರು ಮಲ್ಲ ಸಚಿವರು ಮಕುಟವರ್ಧನರು
ಪರಮಋಷಿಗಳು ಪಂಡಿತರು ಕವಿ
ವರರು ನಟ ಗಾಯಕರು ವಿದ್ಯಾ
ಧರರು ದೈವಜ್ಞರುಗಳಗಣಿತರಾಗಿ ನೆರೆದುದು ರಾಯ ಕೇಳೆಂದ

ಧರಣೀವಲಯ = ಭೂಮಂಡಲದ ಸುತ್ತಣ ಸಮಸ್ತ ಭಾಗಗಳ; ದಿಕ್ಕು + ಅಂತದ + ಅವನಿ + ಈಶ್ವರರು = ದಿಗ್ವಲಯದ ತುತ್ತ ತುದಿಯವರೆಗೂ ಇರುವ ಭೂಮಂಡಲಾಧೀಶ್ವರರು; ಭೂಸುರ = ಭೂಮಂಡಲದ ದೇವತೆಗಳೆನಿಸಿದ ಬ್ರಾಹ್ಮಣರು; ಸಿದ್ಧ = ಯೋಗಿಜನರು; ವಿದ್ಯಾಧರರು = ದೇವತೆಗಳ ಒಂದುವರ್ಗ; ಸುಜನರು = ಸಜ್ಜನರು; ಮಲ್ಲ = ಜಟ್ಟಿಗಳು, ಶೂರರು; ಸಚಿವರು = ಮಂತ್ರಿಗಳು; ಮಕುಟವರ್ಧನರು = ಕಿರೀಟಧಾರಿಗಳಾದ ರಾಜರು; ಪರಮ ಋಷಿಗಳು = ಋಷಿಶ್ರೇಷ್ಠರು; ಪಂಡಿತರು = ಜ್ಞಾನಿಗಳು; ಕವಿವರರು = ಕವಿಶ್ರೇಷ್ಠರು; ನಟ =

ನಟರು; ಗಾಯಕರು = ಹಾಡುಗಾರರು; ವಿದ್ಯಾಧರರು = ವಿದ್ಯಾವಂತರು; ದೈವಜ್ಞರುಗಳು + ಅಗಣಿತರಾಗಿ = ಜ್ಯೋತಿಷಿಗಳು ಎಲ್ಲರೂ ಅಸಂಖ್ಯಾತರಾಗಿ ನೆರೆದುದು = ಸೇರಿದರು; ರಾಯ ಕೇಳೆಂದ = ಧರ್ಮರಾಯನೇ ಕೇಳು ಎಂದನು.

ವಿದರ್ಭ ರಾಜನ ಆಹ್ವಾನದ ಮೇರೆಗೆ, ದಿಗಂತದವರೆಗೂ ವ್ಯಾಪಿಸಿದ್ದ ಭೂಮಂಡಲ ಸಮಸ್ತ ರಾಜಾಧಿರಾಜರೂ ಪಂಡಿತೋತ್ತಮರೂ ಋಷಿ ಮುನಿ ಶ್ರೇಷ್ಠರೂ ಕವಿವರ್ಯರೂ ಮಲ್ಲರೂ ಸಚಿವರೂ ಗಾಯಕರೂ ಜ್ಯೋತಿಷಿಗಳೂ ವಿದ್ಯಾಧರರೂ ಸಿದ್ಧರೂ ಬ್ರಾಹ್ಮಣರೂ ಸಜ್ಜನರೂ ಅಸಂಖ್ಯಾತರಾಗಿ ಬಂದು ಸೇರಿದರು.

10. ಆ ಸಮಯದಲಿ ನಾರದನು ಹರಿ
ವಾಸುದೇವಾಯೆಂಬ ವೀಣೆಯ
ಭಾಸುರದ ಕರಗಳಲಿ ನುಡಿಸುತ ಮುನಿಗಳೊಗ್ಗಿನಲಿ
ವಾಸವನ ಸಭೆಗೈತರಲು ಸಂ
ತೋಷದಿಂದಿದಿರೆದ್ದು ಘನಸಿಂ
ಹಾಸನದಿ ಕುಳ್ಳಿರಿಸಿ ಕೈಮುಗಿದೆಂದನಮರೇಂದ್ರ

ಆ ಸಮಯದಲಿ = ಆ ವೇಳೆಗೆ; ನಾರದನು = ದೇವಮುನಿಯಾದ ನಾರದನು; ಹರಿ ವಾಸುದೇವಾಯೆಂಬ = ಹರಿಯೇ ವಾಸುದೇವನೇ ಎನ್ನುತ್ತ; ವೀಣೆಯ = ವೀಣಾವಾದ್ಯವನ್ನು; ಬಾಸುರದ = ಸುಂದರವಾದ; ಕರಗಳಲಿ = ಕೈಗಳಿಂದ; ನುಡಿಸುತ = ನುಡಿಸುತ್ತ; ಮುನಿಗಳ + ಒಗ್ಗಿನಲಿ = ಮುನಿಗಳ ಸಮೂಹದೊಂದಿಗೆ; ವಾಸವನ = ಇಂದ್ರನ; ಸಭೆಗೆ + ಐತರಲು = ಸಭೆಗೆ ಆಗಮಿಸಲು; ಸಂತೋಷದಿಂದ + ಇದಿರು + ಎದ್ದು = ಸಂತೋಷದಿಂದ ಗೌರವಾದರ ಪೂರ್ವಕವಾಗಿ ಆಹ್ವಾನಿಸಿ ಎದುರುಗೊಂಡು; ಘನ ಸಿಂಹಾಸನದಿ ಕುಳ್ಳಿರಿಸಿ = ಉತ್ತಮವಾದ ಸಿಂಹಾಸನದಲ್ಲಿ ಕುಳ್ಳಿರಿಸಿ; ಕೈಮುಗಿದು + ಎಂದನು + ಅಮರೇಂದ್ರ = ದೇವಲೋಕದ ಶ್ರೇಷ್ಠನೇ ಎಂದು ದೇವೇಂದ್ರನು ಕೈಮುಗಿದು ವಿನಂತಿಸಿದನು.

ಅದೇ ವೇಳೆಗೆ ದೇವಮುನಿಯಾದ ನಾರದನು ತನ್ನ ಕೈಗಳಲ್ಲಿ ವೀಣಾವಾದ್ಯವನ್ನು ಹಿಡಿದು ಸುಂದರವಾಗಿ ನುಡಿಸುತ್ತಾ, 'ಹರಿ ವಾಸುದೇವಾ' ಎಂದು ಹಾಡುತ್ತ ಮುನಿಗಳ ಸಮೂಹದೊಂದಿಗೆ ಇಂದ್ರನ ಸಭೆಗೆ ಆಗಮಿಸಿದನು. ಬಹಳ ಆದರದಿಂದ ಇಂದ್ರನು ಎದ್ದು ಬಂದು ನಮಸ್ಕರಿಸಿ ಎದುರುಗೊಂಡು ಗೌರವಪೂರ್ವಕವಾಗಿ ನಾರದನನ್ನೂ ಮುನಿಸಂದೋಹವನ್ನೂ ಉಚಿತೋಚಿತ ಆಸನಗಳಲ್ಲಿ ಕುಳ್ಳಿರಿಸಿ, ಇಂದ್ರನನ್ನು ಕುರಿತು 'ದೇವಲೋಕದ ಶ್ರೇಷ್ಠನೇ' ಎಂದು ಬಂದ ಕಾರಣವೇನು ಎಂಬುದನ್ನು ಸೂಚ್ಯವಾಗಿ ಕೇಳಿದನು.

ಭಾರತೀಯ ನೆಲವು ಅತಿಥಿಗಳನ್ನು ದೇವರೆಂದು ತಿಳಿ ಎಂದು ಬೋಧಿಸಿವೆ. ಅತಿಥಿಗಳನ್ನು ಬರಮಾಡಿಕೊಳ್ಳುವ ರೀತಿಯಲ್ಲಿಯೇ ಆತಿಥೇಯನ ಸಂಸ್ಕಾರವನ್ನು ಅರಿಯಬಹುದು ಎಂಬುದನ್ನು ನಿತ್ಯ ಜೀವನ ವಿಧಿಗಳಲ್ಲಿ ರೂಢಿಸಿರುವುದು ಈ ನೆಲದ ಶ್ರೇಷ್ಠತೆ ಎನ್ನಬಹುದು.

11. ಎತ್ತಣಿಂದೈತಂದಿರುರ್ವಿಯೊ
ಳುತ್ತಮರು ಧರಣೀಶರಲಿ ನೆರೆ
ಸತ್ಯಧರ್ಮ ಸುಶೀಲರಾರುಂಟಲ್ಲಿ ಗುಣವೇನು
ಚಿತ್ತವಿಸಿ ಮುನಿನಾಥಯೆನಗದ
ಬಿತ್ತರಿಸಿ ಪೇಳೆನಲು ಸುರಮುನಿ
ಚಿತ್ತದಲಿ ನಸುನಗುತ ನುಡಿದನು ಪಾಕಶಾಸನಗೆ

ಎತ್ತಣಿಂದ + ಐತಂದಿರಿ + ಉರ್ವಿಯೊಳು + ಉತ್ತಮರು = ಎಲ್ಲಿಂದ ಆಗಮಿಸಿದಿರಿ? ಭೂಮಂಡಲದಲ್ಲಿ ಉತ್ತಮರಾದ; ಧರಣಿ + ಈಶರಲಿ = ಭೂಪಾಲಕರಲ್ಲಿ; ನೆರೆ = ತುಂಬಿದ; ಪೂರ್ಣತ್ವ ಹೊಂದಿರುವ; ಸತ್ಯಧರ್ಮ = ಸತ್ಯವನ್ನೇ ಸ್ವಭಾವವುಳ್ಳವರೂ; ಸುಶೀಲರು = ಒಳ್ಳೆಯ ಜೀವನ ಸಂಸ್ಕಾರವುಳ್ಳವರೂ; ಗುಣವೇನು = ಸದ್ಗುಣ, ಚಾರಿತ್ರ್ಯಗಳು ಎಂತಹವು?; ಯಾರುಂಟು = ಅಂತಹವರು ಯಾರಿದ್ದಾರೆ?; ಚಿತ್ತವಿಸಿ = ಆಲೋಚಿಸಿ ಹೇಳಿ; ಮುನಿನಾಥ + ಎನಗೆ + ಅದ = ಅದನ್ನು ಕುರಿತು ನನಗೆ; ಬಿತ್ತರಿಸಿ = ವಿವರವಾಗಿ; ಪೇಳೆನಲು + ಪೇಳು + ಎನಲು = ಹೇಳಿ ಎಂದು ಕೇಳಲು; ಸುರಮುನಿ = ದೇವರ್ಷಿಯಾದ ನಾರದನು; ಚಿತ್ತದಲಿ

= ಮನಸ್ಸಿನಲ್ಲೇ; ನಸುನಗುತ = ಮೆಲುನಗೆ ನಗುತ್ತ; ನುಡಿದನು = ಹೇಳಿದನು; ಪಾಕಶಾಸನಗೆ = ಇಂದ್ರನಿಗೆ. ('ಪಾಕ'ನೆಂಬ ದೈತ್ಯನನ್ನು ಶಾಸಿಸಿದವನು)

ನಾರದನೊಂದಿಗೆ ಕುಶಲ ವಿಚಾರಿಸುವ ಸಲುವಾಗಿ ಇಂದ್ರನು, ಮುನಿಶ್ರೇಷ್ಠರೇ ತಾವು ಎಲ್ಲಿಂದ ಆಗಮಿಸಿದಿರೋ? ಭೂಲೋಕದಲ್ಲಿರುವ ಶ್ರೇಷ್ಠ ರೆನಿಸಿದ ರಾಜರಲ್ಲಿ ಸತ್ಯಶೀಲರೂ, ಧರ್ಮಪರರೂ, ಸದ್ಗುಣಿಗಳೂ, ಗೌರವಾನ್ವಿತರೂ ಆದಂಥವರು ಯಾರಿದ್ದಾರೆ? ತಾವು ಪರಾಮರ್ಶಿಸಿ ಅವರ ಗುಣಗಳನ್ನು ನನಗೆ ವಿವರಿಸಿ ಹೇಳುವಂಥವರಾಗಿ ಎನ್ನಲು ದೇವರ್ಷಿ ನಾರದನು ಮನಸ್ಸಿನೊಳಗೇ, ಮುಂದೆ ಆಗಲಿರುವುದನ್ನು ಅರಿತಿರುವನಂತೆ ನಸುನಗುತ್ತ ಹೇಳಲನುವಾದನು.

12. ಅಮರಪತಿ ಕೇಳವನಿಯಲಿ ಭೂ
ರಮಣರುಂಟು ಅನೇಕವವರೊಳು
ನಿಮಗೆ ಪೇಳ್ವೆ ವಿದರ್ಭಪುರಪತಿ ಭೀಮನೃಪತನುಜೆ
ಕಮಲಮುಖಿ ದಮಯಂತಿಗೆವ್ವನ
ಸಮತಳಿಸೆ ಚಿತ್ತದಿ ಸ್ವಯಂವರ
ಕಮಿತಬಲ ನೃಪರೈದಿ ಬರುತಿರೆ ಧರಣಿಯಗಲದಲಿ

ಅಮರಪತಿ = ದೇವಸಂಕುಲದ ದೊರೆಯೇ; ಕೇಳು + ಅವನಿಯಲಿ = ಕೇಳುವಂಥವನಾಗು, ಭೂಮಿಯಲ್ಲಿ; ಭೂರಮಣರು + ಉಂಟು, ಭೂಮಿಯನ್ನು ಪಾಲಿಸುವವರು; ಅನೇಕವು + ಅವರೊಳು = ಅನೇಕರಿದ್ದಾರೆ, ಅವರಲ್ಲಿ; ನಿಮಗೆ ಪೇಳ್ವೆ = ನಿಮಗೆ ಹೇಳುತ್ತೇನೆ; ವಿದರ್ಭಪುರಪತಿ = ವಿದರ್ಭಪುರದ ಅರಸ; ಭೀಮನೃಪ ತನುಜೆ = ಭೀಮನೆಂಬ ಅರಸನ ಮಗಳು; ಕಮಲಮುಖಿ = ಕಮಲದಂತೆ ಸುಂದರವಾದ ಬಣ್ಣ, ರೂಪಗಳುಳ್ಳವಳು; ದಮಯಂತಿಗೆ + ಯೌವನ = ದಮಯಂತಿಗೆ ತಾರುಣ್ಯವು; ಸಮತಳಿಸೆ = ಒದಗಿಬರಲು; ಚಿತ್ತದಿ = ಮನಸ್ಸಿನಲ್ಲಿ; ಸ್ವಯಂವರಕೆ + ಅಮಿತಬಲ = ಸ್ವಯಂವರಕ್ಕೆ ಮಹಾಬಲ ಶಾಲಿಗಳಾದ; ನೃಪರು + ಐದಿ = ರಾಜಾಧಿರಾಜರು ಆಗಮಿಸಿ; ಬರುತಿರೆ = ಬರುತ್ತಿರಲು; ಧರಣಿಯಗಲದಲಿ = ವಿಸ್ತಾರವಾದ ಭೂಮಿಯು ತುಂಬಿಹೋಗು ವಂತೆ.

ದೇವೇಂದ್ರನನ್ನು ಉದ್ದೇಶಿಸಿ ನಾರದನು ಹೇಳುತ್ತಿರುವ ಮಾತು–"ದೇವರ ದೊರೆಯಾದ ಇಂದ್ರನೇ, ಕೇಳು ಭೂಮಿಯನ್ನು ಪಾಲಿಸುವ ಅರಸರೋ ಅನೇಕರಿದ್ದಾರೆ. ಅವರಲ್ಲಿ ವಿದರ್ಭಪುರದ ದೊರೆಯಾದ ಭೀಮನ ಕುರಿತು ನಿನಗೆ ಹೇಳುತ್ತಿದ್ದೇನೆ. ಅವನಿಗೆ ಕಮಲದಂತೆ ಸುಂದರ ರೂಪ ವರ್ಣಾದಿಗಳಿಂದ ಶೋಭಿಸುವ ಮುಖ ಸೌಂದರ್ಯವುಳ್ಳ ದಮಯಂತಿಯೆಂಬ ಮಗಳಿದ್ದಾಳೆ. ಅವಳು ಯೌವನಕ್ಕೆ ಕಾಲಿಟ್ಟುದರಿಂದ ಭೀಮನು ಮನಸ್ಸಿನಲ್ಲೇ ನಿಶ್ಚಯಿಸಿಕೊಂಡು, ಈ ಭೂಮಂಡಲದಲ್ಲಿರುವ ಅಸೀಮ ಬಲಶಾಲಿಗಳಾದ ರಾಜಾಧಿರಾಜರನ್ನೆಲ್ಲ ಸ್ವಯಂವರಕ್ಕಾಗಿ ಆಹ್ವಾನಿಸಲು, ಭೂಮಂಡಲ ವಿಸ್ತಾರವೂ ತುಂಬಿಹೋಗುವಂತೆ ನೃಪ ಸಮೂಹವು ಆಗಮಿಸಿದೆ" ಎಂದನು.

ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಕಮಲಮುಖಿ, ಕಮಲನೇತ್ರೆ, ಕಮಲಕರ, ಕಮಲಚರಣ ಅಥವಾ ಪದ್ಮಚರಣ ಎಂಬ ಅನ್ವರ್ಥ ನಾಮಗಳು ಹೇರಳವಾಗಿ ಬಳಕೆಯಾಗುತ್ತವೆ. ಕಮಲಮುಖಿ ಎನ್ನುವಾಗ ಕಮಲದ ಹಲವು ವರ್ಣಗಳು ಮೇಳೈಸಿದ ಒಂದು ಸಂಯೋಜಿತ ವರ್ಣದ ಕಲ್ಪನೆ ಇರುತ್ತದೆ. ಕಮಲನೇತ್ರದಲ್ಲಿ ಕಮಲದಳದ ಸುಕುಮಾರ ತೆಳು ಕೆಂಬಣ್ಣವೂ, ಆಕಾರವೂ ಕಲ್ಪಿತವಾಗಿರುತ್ತದೆ, ಕಮಲಕರ, ಕಮಲಚರಣಗಳಲ್ಲಿ ನಾಳಸಹಿತ ಪುಷ್ಪದಳಗಳ ಕಲ್ಪನೆ ಇರುತ್ತದೆ. ಅತ್ಯಂತ ಧ್ವನಿಪೂರ್ಣ ಹಾಗೂ ತಾಜಾತನವಿರುವ ಸುಂದರ ಉಪಮೆ ಇದು.

13. ಅಲ್ಲಿ ನೆರೆದ ಸಮಸ್ತ ಧರಣೀ
ವಲ್ಲಭರನೇನೆಂಬೆ ಪಟ್ಟಣ
ವೆಲ್ಲ ನೆರೆದುದು ದೇಶದೇಶಾಂತರದ ಯಾಚಕರು
ನಿಲ್ಲದೈತರುತಿರೆ ವಿವಾಹವ
ನಲ್ಲಿ ನೋಡುವೆವೆನುತ ಮುನಿ ಕರ
ಪಲ್ಲವದ ವೀಣೆಯಲಿ ಹಂಸವನೇರಿ ಹೊರವಂಟು

ಅಲ್ಲಿ ನೆರೆದ = ವಿದರ್ಭ ನಗರದಲ್ಲಿ ಸೇರಿದ್ದ; ಸಮಸ್ತ = ಎಲ್ಲ; ಧರಣೀ ವಲ್ಲಭರನು + ಏನು + ಎಂಬೆ = ಭೂಮಂಡಲಾಧಿಪರನ್ನು ಕುರಿತು ಏನೆಂದು ವರ್ಣಿಸಲಿ; ಪಟ್ಟಣವೆಲ್ಲ = ಇಡೀ ವಿದರ್ಭನಗರವೇ; ನೆರೆದುದು = ತುಂಬಿ

ಹೋಯಿತು; ದೇಶ + ದೇಶ + ಅಂತರದ = ದೂರದೂರದ ಹಲವು ದೇಶಗಳ; ಯಾಚಕರು = ಕನ್ಯಾರ್ಥಿಗಳು; ನಿಲ್ಲದೆ + ಐತರುತ + ಇರೆ = ಎಡೆಬಿಡದೆ ಆಗಮಿಸುತ್ತಿರಲು; ವಿವಾಹವನು + ಅಲ್ಲಿ = ಅಲ್ಲಿಯ ವಿವಾಹವನ್ನು; ನೋಡುವೆವು + ಎನುತ = ನಾವೆಲ್ಲರೂ ನೋಡುತ್ತೇವೆ ಉತ್ಸುಕರಾಗಿ ಎನ್ನುತ್ತ; ಮುನಿ = ನಾರದ ಮುನಿಯು; ಕರಪಲ್ಲವದ = ಚಿಗುರಿನಂತೆ ಸುಂದರವಾಗಿದ್ದ; ಕೈಯ್ಯಲ್ಲಿ ವೀಣೆಯಲಿ = ವೀಣೆಯನ್ನು ಹಿಡಿದು; ಹಂಸವನು + ಏರಿ = ತನ್ನ ವಾಹನವಾದ ಹಂಸವನ್ನೇರಿ; ಹೊರವಂಟು = ಹೊರಟನು.

ಆ ವಿದರ್ಭ ನಗರದಲ್ಲಿ ಸೇರಿದ್ದ ಭೂಮಂಡಲಾಧಿಪರನ್ನು ಏನೆಂದು ವರ್ಣಿಸಲಿ. ಅವರಿಂದ ಇಡೀ ಪಟ್ಟಣವೇ ತುಂಬಿಹೋಯಿತು, ದೇಶದೇಶಾಂತರ ಗಳಿಂದ ಸ್ವಯಂವರಕ್ಕೆ ಬಂದಿದ್ದ ಕನ್ಯಾರ್ಥಿಗಳು ಎಡೆಬಿಡದೆ ಬಂದು ಸಂದಣಿ ಸುತ್ತಿರಲು, ಆ ವಿವಾಹ ಮಹೋತ್ಸವವನ್ನು ನೋಡಲುತ್ಸುಕರಾಗಿ ನಾವೆಲ್ಲರೂ ಹೊರಟಿದ್ದೇವೆ ಎಂದು ಹೇಳುತ್ತ ನಾರದ ಮುನಿಯು ತನ್ನ ಚಿಗುರಿನಂತೆ ಚೆಲುವಾಗಿದ್ದ ಕೈಗಳಲ್ಲಿ ವೀಣೆಯನ್ನು ಹಿಡಿದು, ಹಂಸ ವಾಹನವನ್ನೇರಿ ಹೊರಟನು.

14. ಅರಸ ಕೇಳಮರೇಂದ್ರನಾ ಮುನಿ
ವರನ ವಚನವ ಕೇಳಿ ಹೆಚ್ಚಿದ
ವಿರಹದಲಿ ಕರೆಸಿದನು ಸತಿಯರಿಗೆಂದನೀ ಹದನ
ಪರಮಸತಿ ದಮಯಂತಿಯಳನುಪ
ಚರಿಯದಲಿ ಯೆನಗೊಲಿಯೆ ಮಾಡೆಂ
ದುರುತರದ ವಸ್ತುಗಳನಿತ್ತಬಲೆಯರ ಬೀಳ್ಕೊಟ್ಟ

ಅರಸ = ದೊರೆಯೇ; ಕೇಳು + ಅಮರ + ಇಂದ್ರನು + ಆ = ಆಲಿಸು, ಅಮರರ ದೊರೆಯಾದ ಇಂದ್ರನು; ಮುನಿವರನ = ಆ ಮುನಿಶ್ರೇಷ್ಠನ; ವಚನವ ಕೇಳಿ = ಮಾತನ್ನು ಕೇಳಿ; ಹೆಚ್ಚಿದ = ಅಧಿಕವಾದ; ವಿರಹದಲಿ = ಕಾಮಬಾಧೆ ಯಿಂದ; ಕರೆಸಿದನು = ಬರಮಾಡಿಕೊಂಡನು; ಸತಿಯರಿಗೆಂದನೀ = ದೇವ ಲೋಕದ ಸ್ತ್ರೀಯರಿಗೆ ಹೇಳಿದನು; ಈ ಹದನ = ಈ ರೀತಿಯಲ್ಲಿ; ಪರಮಸತಿ = ಪರಮ ಶ್ರೇಷ್ಠಳಾದ; ದಮಯಂತಿಯಳು + ಅನುಪ + ಚರಿಯದಲಿ =

ದಮಯಂತಿಯು ಅನುಪಮವಾದ ಚರಿತ್ರಳು; ಎನಗೆ + ಒಲಿಯೆ = ನನಗೆ ಒಲಿಯುವಂತೆ; ಮಾಡಿ + ಎಂದು + ಉರುತರದ = ಮಾಡಿ ಎಂದು ಉತ್ತಮೋತ್ತಮವಾದ; ವಸ್ತುಗಳನು + ಇತ್ತು + ಅಬಲೆಯರ = ವಸ್ತುಗಳನ್ನು ಉಡುಗೊರೆಯಾಗಿ ನೀಡಿ ಆ ಸ್ತ್ರೀಯರನ್ನು; ಬೀಳ್ಕೊಟ್ಟ = ಕಳುಹಿಕೊಟ್ಟನು.

ದೇವೇಂದ್ರನು ನಾರದ ಮುನಿಯಿಂದ ದಮಯಂತಿಯ ರೂಪ, ಲಾವಣ್ಯ ಗುಣ ಸ್ವಭಾವಗಳನ್ನು ಕೇಳಿ ಅವಳನ್ನು ಹೊಂದಬೇಕೆಂಬ ಆಸೆಯಿಂದ ವಿರಹ ಪೀಡಿತನಾದನು. ದಮಯಂತಿಯು ಅನುಪಮವಾದ ಉತ್ತಮ ಚರಿತಳು. ಅವಳು ನನಗೊಲಿಯುವಂತೆ ಮಾಡಿ ಎಂದು ಅಮರ ಸ್ತ್ರೀಯರನ್ನು ಕರೆಸಿ ಉತ್ತಮೋತ್ತಮ ವಸ್ತುಗಳನ್ನು ಉಡುಗೊರೆಯನ್ನಾಗಿ ನೀಡಿ ಕಳುಹಿಕೊಟ್ಟನು.

15. ತರಿಸಿಯೇರಿದ ದಿವ್ಯರಥವನು
ಕರೆಸಿದನು ಯಮ ವರುಣ ವಾಯ
ವ್ಯರು ಸಹಿತ ಹೊರವಂಟನಮರಾವತಿಯನಮರೇಂದ್ರ
ಧರೆಗಿಳಿದು ಬರೆ ಮುಂದೆ ಮಾರ್ಗದಿ
ಸ್ಮರನ ರೂಪಿನ ನೈಷಧನ ಕಂ
ಡರು ಮನೋರಾಗದಲಿ ಕಾಣಿಸಿಕೊಂಡರುಚಿತದಲಿ

ತರಿಸಿ + ಏರಿದ = ತರಿಸಿಕೊಂಡು ಏರಿದನು; ದಿವ್ಯರಥವನು = ಶ್ರೇಷ್ಠತಮವಾದ ರಥವನ್ನು; ಕರೆಸಿದನು = ಕರೆಕಳುಹಿದನು, ಯಮ, ವರುಣ, ವಾಯವ್ಯರು ಸಹಿತ = ತನ್ನೊಂದಿಗೆ ದಿಕ್ಪತಿಗಳಾದ ಯಮ, ವರುಣ, ವಾಯು ಮೊದಲಾದವರನ್ನು ಕರೆದುಕೊಂಡು; ಹೊರವಂಟನು + ಅಮರಾವತಿಯನು + ಅಮರ + ಇಂದ್ರ = ಅಮರಾವತಿಯಿಂದ ಇಂದ್ರನು ಹೊರಹೊರಟನು. ಧರೆಗೆ + ಇಳಿದು = ಭೂಮಿಗೆ ಇಳಿದು; ಬರೆ = ಬರುತ್ತಿರಲು; ಮುಂದೆ ಮಾರ್ಗದಿ = ಮುಂದೆ ಮಾರ್ಗ ಮಧ್ಯದಲ್ಲಿ; ಸ್ಮರನ ರೂಪಿನ = ಮನ್ಮಥನಂತೆ ಚೆಲುವನಾದ; ನೈಷಧನ = ನಿಷಧ ನಗರದ ರಾಜನಾದ ನಳನನ್ನು; ಕಂಡರು = ನೋಡಿದರು; ಮನೋರಾಗದಲಿ = ಹೃತ್ಪೂರ್ವಕವಾದ ಪ್ರೀತಿಯಿಂದ; ಕಾಣಿಸಿಕೊಂಡರು + ಉಚಿತದಲಿ = ತಮತಮಗೆ ತಕ್ಕಂತಹ ರೂಪಿನಲ್ಲಿ ಕಾಣಿಸಿಕೊಂಡರು.

ಅನಂತರ ಇಂದ್ರನು ಶ್ರೇಷ್ಠತಮವಾದ ದಿವ್ಯರಥವನ್ನು ಏರಿಕೊಂಡು, ದಿಕ್ಪಾಲಕರಾದ ಯಮ, ವರುಣ, ವಾಯು ಮೊದಲಾದವರನ್ನು ಜೊತೆಗೆ ಕರೆದುಕೊಂಡು ಅಮರಾವತಿಯಿಂದ ಹೊರಟನು. ಅಲ್ಲಿಂದ ಧರೆಗಿಳಿಯುತ್ತಿದ್ದಂತೆಯೇ ಮಾರ್ಗಮಧ್ಯದಲ್ಲಿ ನಿಷಧರಾಜನಾದ ನಳಚಕ್ರವರ್ತಿ ಯನ್ನು ನೋಡಿ, ತಮ್ಮ ತಮ್ಮ ಪದವಿ ಪಟ್ಟಗಳಿಗನುಗುಣವಾದ ರೂಪಿನಲ್ಲಿ ಪ್ರೀತಿಯಿಂದ ನಳನಿಗೆ ಕಾಣಿಸಿಕೊಂಡರು.

16. ನಳಿನಮಿತ್ರನ ತೇಜದವೊಲಿಳೆ
ಗಿಳಿವ ಮಹಿಮರ ಕಂಡು ರಥದಿಂ
ದಿಳೆಗಿಳಿದು ಭಕ್ತಿಯಲಿ ನಳ ಕೈ ಮುಗಿದು ನಿಂದಿರಲು
ತಳಿತ ಹರುಷಾನಂದದಲಿ ಬರ
ಸೆಳೆದು ಬಿಗಿಯಪ್ಪಿದರು ರಾಯನ
ಚೆಲುವನೀಕ್ಷಿಸಿ ನಲಿದು ಕೊಂಡಾಡಿದರು ಮನವೊಲಿದು

ನಳಿನ ಮಿತ್ರನ = ತಾವರೆಯ ಮಿತ್ರನಾದ ಸೂರ್ಯನ; ತೇಜದ + ವೊಲು + ಇಳೆಗೆ+ಇಳಿವ = ಪ್ರಕಾಶದಂತೆ ತೇಜೋಮಯವಾಗಿ ಭೂಮಿಗಿಳಿಯುತ್ತಿದ್ದ; ಮಹಿಮರ ಕಂಡು = ಮಹಿಮಾನ್ವಿತರಾದ ಅವರನ್ನು ನೋಡಿ; ರಥದಿಂದ + ಇಳೆಗೆ +ಇಳಿದು = ರಥದಿಂದ ಕೆಳಗಿಳಿದು; ಭಕ್ತಿಯಲಿ = ಗೌರವ ಪೂರ್ವಕವಾಗಿ; ನಳ = ನಳನು; ಕೈಮುಗಿದು = ನಮಸ್ಕಾರ ಪೂರ್ವಕವಾಗಿ; ನಿಂದಿರಲು = ನಿಂತಿರಲು; ತಳಿತ=ಹುಟ್ಟಿದ; ಹರುಷ + ಆನಂದದಲಿ, ಸಂತೋಷ ಆನಂದಗಳಿಂದ, ಬರಸೆಳೆದು=ವೇಗವಾಗಿ ತನ್ನೆಡೆಗೆ ಎಳೆದುಕೊಂಡು; ಬಿಗಿ + ಅಪ್ಪಿದರು = ಬಲವಾಗಿ ಅಪ್ಪಿಕೊಂಡರು; ರಾಯನ = ದೊರೆಯ; ಚೆಲುವನ್ನು + ಈಕ್ಷಿಸಿ = ಸುಂದರ ರೂಪವನ್ನು ಗಮನಿಸಿ ನೋಡಿ; ನಲಿದು = ಆನಂದದಿಂದ; ಕೊಂಡಾಡಿದರು = ಹೊಗಳಿದರು; ಮನವೊಲಿದು = ಮನಃಪೂರ್ವಕವಾಗಿ.

ಸೂರ್ಯನ ಪ್ರಕಾಶದಂತೆ ತೇಜೋಮಯವಾದ ದಿಕ್ಪತಿಗಳೊಂದಿಗೆ ದೇವೇಂದ್ರನು ಭೂಮಂಡಲದಲ್ಲಿ ಇಳಿದುದನ್ನು ನೋಡಿದ ನಳನು ಗೌರವಾದರ

ಗಳಿಂದ ಕೈ ಜೋಡಿಸಿ ನಮಸ್ಕರಿಸಲು ಅವರೆಲ್ಲರೂ ಉಕ್ಕಿ ಬಂದ ಸಂತೋಷದಿಂದ ಅವನನ್ನು ಬರಸೆಳೆದು ಅಪ್ಪಿಕೊಂಡು ಅವನ ಸೌಂದರ್ಯವನ್ನು ಈಕ್ಷಿಸಿ ಮನಸಾರೆ ಕೊಂಡಾಡಿದರು.

17. ಕುಶಲವೇ ನಳನೃಪತಿ ಬಾರೈ
ಶಶಿಕುಲೋದ್ಭವ ನಿನ್ನ ಪಿತನೀ
ವಸುಧೆಗಧಿಪತಿ ವೀರಸೇನನು ಪರಮಸಖನೆಮಗೆ
ಒಸೆದು ಬೇಡುವ ಕಾರ್ಯವಿದು ಭರ
ವಸದಿ ಬಂದೆವು ನಮಗೆ ಫಲ ಸಿ
ದ್ಧಿಸಿತು ಉಪಕಾರಾರ್ಥ ನಿನ್ನಿಂದಾಗಬೇಕೆಂದ

ಕುಶಲವೇ = ಕ್ಷೇಮವೇ; ನಳನೃಪತಿ = ನಳಮಹಾರಾಜನೇ; ಬಾರೈ = ಬಾ; ಶಶಿಕುಲ + ಉದ್ಭವ = ಚಂದ್ರವಂಶದ ಕುಡಿಯೇ; ನಿನ್ನ + ಪಿತನು + ಈ = ನಿನ್ನ ತಂದೆಯು; ವಸುಧೆಗೆ + ಅಧಿಪತಿ = ಈ ಭೂಮಿಗೆ ಒಡೆಯನು; ವೀರಸೇನನು ಪರಮ ಸಖನು + ಎಮಗೆ = ವೀರಸೇನನು ನಮಗೆ ಅತ್ಯಾಪ್ತ ಸ್ನೇಹಿತನು; ಒಸೆದು = ಪ್ರೀತಿಯಿಂದ; ಬೇಡುವ = ಯಾಚಿಸುವ; ಕಾರ್ಯವು + ಇದು = ಕೆಲಸ ಇದು; ಭರವಸದಿ = ನಂಬಿಕೆಯಿಟ್ಟು; ಬಂದೆವು = ಬಂದಿದ್ದೇವೆ; ನಮಗೆ ಫಲ ಸಿದ್ಧಿಸಿತು = ನನ್ನ ಇಷ್ಟಾರ್ಥವು ನೆರವೇರಿತು; ಉಪಕಾರ + ಅರ್ಥ = ಉಪಕಾರದ ಉದ್ದೇಶವು; ನಿನ್ನಿಂದ + ಆಗಬೇಕು + ಎಂದ = ನಿನ್ನಿಂದ ನೆರವೇರಬೇಕು ಎಂದರು.

“ನಳಚಕ್ರವರ್ತಿಯೇ ಸೌಖ್ಯವೇ? ಇತ್ತ ಬಾ. ಚಂದ್ರವಂಶದ ದೊರೆಯೇ, ಭೂಮಂಡಲಾಧಿಪತಿಯೇ, ನಿನ್ನ ತಂದೆಯಾದ ವೀರಸೇನ ಮಹಾರಾಜನು ನಮ್ಮ ಪರಮಾಪ್ತ ಸ್ನೇಹಿತ. ಹಾಗಾಗಿ ನಾವು ನಿನ್ನಲ್ಲಿ ಪ್ರೀತಿಯಿಂದಲೂ, ನೀನು ನಮ್ಮ ಬೇಡಿಕೆಯನ್ನು ಈಡೇರಿಸುವೆ ಎಂಬ ನಂಬಿಕೆಯಿಂದಲೂ ಬಂದಿದ್ದೇವೆ. ನಿನ್ನಿಂದ ನಮಗೆ ಒಂದು ಉಪಕಾರವಾಗಬೇಕಿದೆ. ಅದನ್ನು ನೆರವೇರಿಸಿಕೊಡಬೇಕು. ನೀನೇ ನಮ್ಮೆದುರು ಬಂದದ್ದು ನಮಗೆ ನಾವು ಆಶಿಸಿದ ಫಲ ಸಿದ್ಧಿಸಿದಂತಾಯಿತು” ಎಂದರು.

18. ಕರಿಗಮನ ಚಿತ್ತವಿಸು ನಾವೇ
ನರರು ನಿಮಗಂತರವೆ ಸಾಕಂ

ತಿರಲಿ ನಿಮ್ಮ ಪದಾಬ್ಜದರುಶನವಾದುದಿಂದಿನಲಿ
ಹರುಷ ಮಿಗೆ ನಮಗೇನು ಬುದ್ಧಿಯ
ಕರುಣಿಸುವಿರದ ಮಾಳ್ಪೆನೆನೆ ಶಚಿ
ಯರಸನಾ ನುಡಿಗೇಳಿ ನಗುತಿಂತೆಂದನಾ ನೃಪಗೆ

ಕರಿಗಮನ = ಐರಾವತದ ಮೇಲೆ ಕುಳಿತು ಸಂಚರಿಸುವ ದೇವೇಂದ್ರನೇ; ಚಿತ್ತವಿಸು = ಕೇಳುವಂಥವನಾಗು; ನಾವೇ ನರರು = ನಾವು ಮನುಷ್ಯ ಮಾತ್ರದವರು; ನಿಮಗೆ + ಅಂತರವೆ = ನಿಮಗೆ ಸಮಾನರೇ?; ಸಾಕು + ಅಂತಿರಲಿ = ಸಾಕು ಆ ಮಾತು ಹಾಗಿರಲಿ; ನಿಮ್ಮ = ನಿಮ್ಮ; ಪದ + ಅಬ್ಜ + ದರುಶನವು + ಆದುದು + ಇಂದಿನಲಿ = ಇಂದು ನಿಮ್ಮ ಪಾದಾರವಿಂದದ ದರ್ಶನವು ಆಯಿತು; ಹರುಷ ಮಿಗೆ ನಮಗೇನು = ನಮಗೇನು ಸಂತೋಷವಂತೂ ಆಯಿತು; ಬುದ್ಧಿಯ = ತಿಳುವಳಿಕೆಯನ್ನು; ಕರುಣಿಸುವಿರಿ + ಅದ = ನೀಂ ಏನನ್ನು ಆದೇಶಿಸುತ್ತೀರೋ ಹೇಳಿ ಅದನ್ನು; ಮಾಳ್ಪವೆನೆ = ಮಾಡುತ್ತೇವೆನ್ನಲು; ಶಚಿ + ಅರಸನ್ = ಶಚಿದೇವಿಯ ಪತಿಯಾದ ದೇವೇಂದ್ರನು ಆ; ನುಡಿಗೇಳಿ = ಆ ನುಡಿಯನ್ನು ಕೇಳಿ; ನಗುತ + ಇಂತೆಂದನ್ + ಆ ನಗುತ್ತ ಹೀಗೆ ಹೇಳಿದನು; ಆ ನೃಪಗೆ = ಆ ನಳಮಹಾರಾಜನಿಗೆ.

ನಳನು ದೇವೇಂದ್ರನಿಗೆ, ದೇವೇಂದ್ರನೇ, ಐರಾವತದ ಮೇಲೆ ಕುಳಿತು ಸಂಚರಿಸುವವನು ನೀನು, ನಾನೋ ಸಾಮಾನ್ಯ ಮನುಷ್ಯನು, ನಿನಗೆ ಸಮಾನನೇನು, ದಯಮಾಡಿ ಹೇಳುವಂಥವನಾಗು. ನಿಮ್ಮ ಪಾದಾರವಿಂದಗಳ ದರ್ಶನವಾದು ದರಿಂದ ನನಗೂ ಆನಂದವಾಗಿದೆ. ನಾನೇನು ಮಾಡಬೇಕೆಂಬುದನ್ನು ಕೃಪೆಮಾಡಿ ತಿಳಿಸು. ಸಂತೋಷದಿಂದ ಮಾಡುತ್ತೇನೆ ಎನ್ನಲು, ಶಚೀಪತಿಯಾದ ದೇವೇಂದ್ರನು ನಳನ ಮಾತಿಗೆ ನಸುನಗುತ್ತ ಹೀಗೆ ಹೇಳಿದನು.

19. ಭೂತಳದೊಳಿಹ ಸತಿಯರಲಿ ರೂ
ಪಾತಿಶಯೆ ದಮಯಂತಿಯೆನಲಾ
ಮಾತಿನಲಿ ಮನವೊಲಿದುದೆನಗವಳಲ್ಲಿ ನೀಪೋಗಿ
ಆ ತಳೋದರಿಗುಚಿತವಚನ

ಪ್ರೀತಿಪೂರ್ವಕದಿಂದ ಸತಿಯಳ
ನೀ ತಿಳುಹಿಯನುಕೂಲೆಯನು ಮಾಡೆಂದನಮರೇಂದ್ರ

ಭೂ+ತಳದೊಳ್+ಇಹ= ಭೂಮಂಡಲದಲ್ಲಿರುವಂತಹ; ಸತಿಯರಲಿ= ಹೆಣ್ಣುಗಳಲ್ಲಿ; ರೂಪ + ಅತಿಶಯೆ = ಅತಿಶಯವಾದ ರೂಪವುಳ್ಳವಳು; ದಮಯಂತಿ + ಎನಲ್ + ಆ + ಮಾತಿನಲಿ = ದಮಯಂತಿ ಎಂಬ ಮಾತನ್ನು ಕೇಳಿ; ಮನವೊಲಿದುದು + ಎನಗೆ + ಅವಳಲ್ಲಿ = ನನ್ನ ಮನಸ್ಸು ಅವಳಿಗೆ ಮಾರುಹೋಯಿತು; ನೀ + ಪೋಗಿ = ನೀನು ಹೋಗಿ; ಆ + ತೆಳು + ಉದರಿಗೆ + ಉಚಿತ ವಚನ = ಆ ಬಡ ನಡುವಿನ ಸುಂದರಿಗೆ, ಸೂಕ್ತವಾದ ಮಾತುಗಳನ್ನು; ಪ್ರೀತಿಪೂರ್ವಕದಿಂದ = ಮನವೊಲಿಸುವಂತೆ; ಸತಿಯಳನೀ = ಆ ಹೆಣ್ಣು ಮಗಳನ್ನು ನೀನು; ನನ್ನ ಕುರಿತು ಹೇಳಿ ನನಗೆ ಅವಳು ಅನುಕೂಲಳಾಗಿ ಒಲಿಯುವಂತೆ; ಮಾಡು+ಎಂದನು + ಅಮರೇಂದ್ರ = ಮಾಡು ಎಂದು ಅಮರೇಂದ್ರನು ಕೇಳಿ ಕೊಂಡನು.

"ಭೂಮಂಡಲದಲ್ಲಿರುವಂತಹ ಹೆಣ್ಣುಗಳಲ್ಲೆಲ್ಲಾ ದಮಯಂತಿಯೇ ಅತಿಶಯವಾದ ರೂಪವುಳ್ಳವಳು ಎಂಬ ಮಾತನ್ನು ಕೇಳಿ ನನಗೆ ಅವಳಲ್ಲಿ ಮೋಹವುಂಟಾಗಿದೆ. ನೀನು ಹೋಗಿ ಆ ಬಡನಡುವಿನ ಸುಂದರಿಗೆ ನನ್ನ ಕುರಿತು ಆಸೆ ಹುಟ್ಟುವಂತೆ ಅನುನಯಿಸುವ ಮಾತುಗಳನ್ನಾಡಿ ಅವಳು ನನ್ನ ಆಸೆ ಗನುಗುಣವಾಗಿ ಒಲಿಯುವಂತೆ ಸಹಾಯ ಮಾಡು" ಎಂದು ದೇವೇಂದ್ರನು ಕೇಳಿಕೊಂಡನು.

20. ಈತ ಪಿತೃಪತಿಯಮರಪತಿ ತಾ
ನೀತ ವರುಣನು ವಾಯುವೀತನು
ಮಾತ ಮನ್ನಿಸು ಮಾಡು ನಮಗುಪಕಾರವನು ನೀನು
ಈ ತತುಕ್ಷಣದೃಶ್ಯವರವನು
ಪ್ರೀತಿಯಿಂದೊಲಿದಿತ್ತೆವಿಂದಿನೊ
ಳಾ ತಳೋದರಿಯೊಲಿವ ಹದನನು ಮಾಡು ಹೋಗೆಂದ

ಈತ = ಇವನು; ಪಿತೃಪತಿ + ಅಮರಪತಿ = ಇವನು ಯಮಧರ್ಮ, ದೇವರುಗಳ ಅರಸ; ತಾನು + ಈತ = ನಾನು ಇವನು; ವರುಣನು = ವರುಣನು; ವಾಯುವು + ಈತನು = ಈತನು ವಾಯುವು; ಮಾತ ಮನ್ನಿಸು = ನನ್ನ ಬೇಡಿಕೆಯನ್ನು ನಡೆಸಿಕೊಡು; ನಮಗೆ + ಉಪಕಾರವನು + ಮಾಡು = ನಮಗೆ ಸಹಾಯ ಮಾಡು; ನೀನು = ನೀನು; ಈ ತತುಕ್ಷಣದ + ಅದೃಶ್ಯವರವನು = ಈ ಕ್ಷಣದಿಂದಲೇ ಅದೃಶ್ಯನಾಗುವ ವರವನ್ನು; ಪ್ರೀತಿಯಿಂದ + ಒಲಿದು + ಇತ್ತೆವು + ಇಂದಿನೊಳ್ + ಆ = ಪ್ರೀತಿಯಿಂದ ನಿನ್ನ ಕಾರ್ಯಸಾಧನೆಗಾಗಿ ಕೊಟ್ಟಿದ್ದೇವೆ. ಇಂದಿನಿಂದಲೇ; ತಳೋದರಿಯು + ಒಲಿವ = ಆ ತೆಳುನಡುವಿನ ಸುಂದರಿಯು ಒಲಿಯುವ; ಹದನನು = ರೀತಿಯನ್ನು; ಮಾಡು ಹೋಗೆಂದ = ಮಾಡಲು ಕಾರ್ಯೋನ್ಮುಖನಾಗು ಹೋಗು ಎಂದನು.

ದೇವೇಂದ್ರನು ತನ್ನನ್ನೂ ಒಳಗೊಂಡಂತೆ ಇತರ ಮೂರು ದಿಕ್ಪತಿಗಳನ್ನು ನಳನಿಗೆ ಪರಿಚಯಿಸುತ್ತಿದ್ದಾನೆ. ನೋಡು, ಇವನು ದಕ್ಷಿಣ ದಿಕ್ಪತಿ ಯಮಧರ್ಮ, ನಾನು ಅಮರಗಣದ ಅರಸ ದೇವೇಂದ್ರ, ಇವನು ವಾಯು, ನಾವು ವಿನಂತಿಸಿದ ಮಾತನ್ನು ಗೌರವಿಸಿ ನಡೆಸಿಕೊಡು. ನಿನ್ನ ಕಾರ್ಯಸಿದ್ಧಿಗೆಂದು ಈ ಕ್ಷಣವೇ ನಿನಗೆ ಅದೃಶ್ಯವಾಗುವ ವರವನ್ನು ಪ್ರೀತಿಯಿಂದ ಕರುಣಿಸಿದ್ದೇವೆ. ಈಗಿಂದೀಗಲೇ ಆ ತೆಳುನಡುವಿನ ಸುಂದರಿಯನ್ನು ನನಗಾಗಿ ಒಲಿಸುವ ಕ್ರಮವನ್ನು ಕೈಗೊಳ್ಳು ಹೋಗು ಎಂದನು.

21. ಕೇಳಿದಾ ಮಾತಿನಲಿ ಚಿಂತೆಯ
ತಾಳಿದನು ಚಿತ್ತದಲಿ ನಳನೃಪ
ಲೋಲಲೋಚನೆ ತನ್ನನೇ ಪತಿಯೆಂದು ಭಜಿಸಿಹಳು
ಆ ಲತಾಂಗಿಯ ಮೇಲೆ ಪರಮವಿ
ಶಾಲಮನವಿಹುದಿನ್ನು ಶಿವಶಿವ
ಬಾಲಕಿಯ ಬೆಸಗೊಳಲು ನಾಲಗೆಯೆಂತು ತನಗೆಂದ

ಕೇಳಿದ + ಆ + ಮಾತಿನಲಿ = ದೇವೇಂದ್ರನಿಂದ ಕೇಳಿದ ಆ ಮಾತಿನಿಂದ; ಚಿಂತೆಯ ತಾಳಿದನು = ಬಹಳ ಚಿಂತೆಗೊಳಗಾದನು; ಚಿತ್ತದಲಿ =

ಮನಸ್ಸಿನಲ್ಲಿ; ನಳನೃಪ = ನಳಮಹಾರಾಜನು; ಲೋಲಲೋಚನೆ = ಚಂಚಲವಾದ ಕಣ್ಣುಳ್ಳ ದಮಯಂತಿಯು; ತನ್ನನ್ನು = ನನ್ನನ್ನೇ; ಪತಿಯೆಂದು = ತನ್ನ ಗಂಡನೆಂದು; ಭಜಿಸಿಹಳು = ಸದಾ ಧ್ಯಾನಿಸಿದ್ದಾಳೆ; ಆ ಲತಾಂಗಿಯ = ಆ ಲತೆಯಂತಹ ಅಂಗ ಸೌಂದರ್ಯವುಳ್ಳವಳ; ಮೇಲೆ = ಬಗ್ಗೆ; ಪರಮ ವಿಶಾಲಮನವಿಹುದಿನ್ನು = ಅತಿಯಾದ ಪ್ರೀತಿ ತನಗಿನ್ನೂ ಇದೆ; ಶಿವಶಿವ = ದೇವದೇವಾ; ಬಾಲಕಿಯ = ಆ ಹೆಣ್ಣು ಮಗಳನ್ನು; ಬೆಸಗೊಳಲು = ಕೇಳಲು (ದೇವೇಂದ್ರನಿಗಾಗಿ); ನಾಲಗೆಯಂತು = ಹೇಗೆ ಮಾತು ಬರಲು ಸಾಧ್ಯ?; ತನಗೆಂದ = ತನಗೆ ಎಂದು ನಳನು ಚಿಂತೆಗೊಳಗಾದನು.

ದೇವೇಂದ್ರನ ಮಾತುಗಳನ್ನು ಕೇಳಿ ನಳನು ಅತೀವವಾದ ಚಿಂತೆಗೊಳಗಾದನು. ಚಂಚಲನೇತ್ರೆಯಾದ ಸುಂದರಿ ದಮಯಂತಿಯು ತನ್ನನ್ನೇ ಪತಿಯೆಂದು ನಂಬಿ, ಸದಾ ತನ್ನನ್ನೇ ಭಜಿಸುತ್ತಿರುವಂಥವಳು. ಲತೆಯಂತೆ ಲಾವಣ್ಯಮಯಿಯಾದ ಅವಳ ಮೇಲೆ ತಾನೂ ಅಪಾರವಾದ ಪ್ರೀತಿಯನ್ನು ಹೊಂದಿದವನಾಗಿದ್ದು ಈಗ ಶಿವಶಿವಾ! ಅವಳನ್ನು ದೇವೇಂದ್ರನಿಗೆ ಒಲಿಯಲು ಅನುನಯಿಸುವಂತೆ ಹೇಳಲು ನಾಲಗೆಯೇಳುವುದೇನು ಎಂದು ಯೋಚಿಸಿದನು.

22. ಎಂದು ಮನದಲಿ ಮರುಗಿ ವಿನಯದೊ
ಳೆಂದನೆಲೆಯಮರೇಂದ್ರ ನಿಮಗಾ
ಮಂದಗಮನೆಯನೊಳಗುಮಾಡೆಂದೆನಗೆ ಪೇಳ್ವಿರಲ
ಹಿಂದುಗಳೆದರೆ ಮನಕೆ ಖತಿ ನಿಮ
ಗಿಂದು ಬಾರದೆ ಬಿಡದು ಲೋಕದಿ
ಯಿಂದುಮುಖಿಯರ ಗುಣವ ತಿಳಿಯಲಸಾಧ್ಯ ಕೇಳೆಂದ

ಎಂದು = ಹೀಗೆಂದು; ಮನದಲಿ ಮರುಗಿ = ಮನಸ್ಸಿನೊಳಗೇ ಚಿಂತಿತನಾಗಿ; ವಿನಯದೊಳು + ಎಂದನು + ಎಲೆ + ಅಮರೇಂದ್ರ = ಹೊರಗೆ ತೋರ್ಪಡಿಸಿಕೊಳ್ಳದೆ ವಿನಯದಿಂದ ಹೇಳಲನುವಾದನು. ಎಲೆ ದೇವೇಂದ್ರನೇ; ನಿಮಗೆ + ಆ = ನಿಮಗೆ ಆ; ಮಂದಗಮನೆಯನು ಒಳಗುಮಾಡು + ಎಂದು + ಎನಗೆ = ಮಂದಗಮನೆಯು ಒಲಿಯುವಂತೆ ಮಾಡು ಎಂದು ನನಗೆ; ಪೇಳ್ವಿರಲ =

ಹೇಳುತ್ತಿದ್ದೀರಲ್ಲ; ಹಿಂದುಗಳೆದರೆ = ನಾನು ಹಿಂದೆಗೆದರೆ; ಮನಕೆ ಖತಿ = ಮನಸ್ಸಿನಲ್ಲಿ ಕೋಪ; ನಿಮಗಿಂದು ಬಾರದೆ ಇರದು = ಇಂದು ನಿಮಗೆ ಬಾರದಿರುವುದಿಲ್ಲ; ಈ ಪ್ರಪಂಚದಲ್ಲಿ ಸುಂದರ ಸ್ತ್ರೀಯರ ಗುಣವ = ಚೆಲುವೆಯರಾದ ಸ್ತ್ರೀಯರ ಮನಸ್ಸನ್ನು, ಸ್ವಭಾವವನ್ನು; ತಿಳಿಯಲಸಾಧ್ಯ = ತಿಳಿಯುವುದು ಸುಲಭವಲ್ಲ; ಕೇಳೆಂದ = ಕೇಳು ಎಂದನು.

ದೇವೇಂದ್ರನ ಮಾತನ್ನು ಕೇಳಿದ ನಳನೃಪನು ಚಿಂತಿತನಾಗಿ ಮನದೊಳಗೇ ಮರುಗುತ್ತಿದ್ದರೂ ಅದನ್ನು ಪ್ರಕಟವಾಗಿ ತೋರಿಸಿಕೊಳ್ಳದೆ ವಿನಯದಿಂದ ದೇವೇಂದ್ರನೇ ಮಂದಗಮನೆಯನ್ನು ನಿಮಗೆ ಒಲಿಯುವಂತೆ ಮಾಡು ಎಂದು ನನಗೆ ಹೇಳುತ್ತಿದ್ದೀರಲ್ಲ, ಇದಕ್ಕೆ ನಾನು ಹಿಂದೇಟು ಹಾಕಿದರೆ ನಿಮಗೆ ಸಿಟ್ಟು ಬರದಿರದು. ಈ ಪ್ರಪಂಚದಲ್ಲಿ ಚಂದ್ರನಂತೆ ಶೋಭಾಕರವಾದ ಸುಂದರ ಸ್ತ್ರೀಯರ ಸ್ವಭಾವವನ್ನು ತಿಳಿಯುವುದು ಸುಲಭವಲ್ಲ ಎಂದನು.

ದಮಯಂತಿಯ ಮನಸ್ಸು ಈಗಾಗಲೇ ನಳನಿಗೆ ತಿಳಿದಿರುವುದರಿಂದ, ಸ್ತ್ರೀಯರ ಸ್ವಭಾವ, ಮನಸ್ಸುಗಳು ಹೀಗೇ ಇರುತ್ತದೆಂದು ಹೇಳಲಾಗುವುದಿಲ್ಲ ಎಂಬ ನಳನ ಮಾತು ದಮಯಂತಿಯ ಮನಸ್ಸು ಈಗಾಗಲೇ ತನಗೇ ಒಲಿದಿರುವುದಲ್ಲವೇ ಎಂಬ ಧ್ವನ್ಯರ್ಥವನ್ನು ಹೊರಹಾಕುತ್ತಿರುವಂತಿದೆ. ಹಾಗೆಯೇ ಈ ಅನಿಸಿಕೆಗೆ ಇಂಬು ಕೊಡುವಂತೆ ಪದ್ಯಾರ್ಧದ ಕೊನೆಯಲ್ಲಿರುವ 'ಎನಗೆ ಪೇಳ್ವಿರಲ' ಎಂಬಲ್ಲಿ ಇರುವ ಒತ್ತನ್ನೂ ಗಮನಿಸಬೇಕಾಗಿದೆ.

23. ಆ ಯುವತಿಯರು ಕಾರ್ಯಗಳ ನೆರೆ
ಬೀಯ ಮಾಳ್ಪರು ಕುಟಿಲವಿದ್ಯದಿ
ಮಾಯೆಗಳ ಹಣ್ಣುವರು ನಿತ್ಯದಿ ಹುಸಿಯನಾಡುವರು
ಕಾಯವಳಿದರು ಅಂತರಂಗಜ
ಬಾಯಬಿಡರನ್ಯಾಯಮಾಡುವ
ರಾಯತಾಕ್ಷಿಯರಂಗವಿದು ಸುರರಾಜ ಕೇಳೆಂದ

ಆ ಯುವತಿಯರು = ಸಾಮಾನ್ಯವಾಗಿ ಯುವ ವಯೋಮಾನದ ಸ್ತ್ರೀಯರು; ಕಾರ್ಯಗಳ = ಯಾವುದೇ ಕೆಲಸಗಳನ್ನು; ನೆರೆ = ಸಂಪೂರ್ಣವಾಗಿ;

ಬೀಯಮಾಳ್ಪರು = ನಿಷ್ಪ್ರಯೋಜಕವಾಗುವಂತೆ ಮಾಡಿಬಿಡಬಲ್ಲರು; ಕುಟಿಲ ವಿದ್ಯದಿ = ಕುತಂತ್ರದಿಂದ; ಮಾಯೆಗಳ = ಭ್ರಮೆಗಳನ್ನು; ಹಣ್ಣುವರು = ಹುಟ್ಟುಹಾಕುವರು; ನಿತ್ಯದಿ = ಸದಾಸರ್ವದಾ ವ್ಯವಹಾರಗಳಲ್ಲಿ; ಹುಸಿಯನಾಡುವರು = ಸುಳ್ಳು ಹೇಳುತ್ತಾರೆ; ಕಾಯವಳಿದರು = ದೇಹವೇ ನಾಶವಾಗಿ ಹೋದರೂ; ಅಂತರಂಗದ = ಮನಸ್ಸಿನಲ್ಲಿ ಹುಟ್ಟಿದುದನ್ನು; ಬಾಯಿಬಿಡರು + ಅನ್ಯಾಯ ಮಾಡುವರು + ಆಯತಾಕ್ಷಿಯರ + ಅಂಗವಿದು = ಬಾಯಿಬಿಟ್ಟು ಪ್ರಕಟವಾಗಿ ಹೇಳುವುದಿಲ್ಲ, ಅನ್ಯಾಯ ಮಾಡುತ್ತಾರೆ, ಸುಂದರ ಕಣ್ಣುಳ್ಳ ಸ್ತ್ರೀಯರ ರೀತಿ ನೀತಿ ಇದು; ಸುರರಾಜ ಕೇಳೆಂದ = ದೇವೇಂದ್ರನೇ ಕೇಳು ಎಂದನು.

"ದೇವೇಂದ್ರನೇ ಕೇಳು ಸಾಮಾನ್ಯವಾಗಿ ಯುವತಿಯರು ಯಾವುದೇ ಕೆಲಸ ಕಾರ್ಯಗಳನ್ನು ಸಂಪೂರ್ಣವಾಗಿ ನಿಷ್ಪ್ರಯೋಜಕವಾಗುವಂತೆ ಮಾಡಿಬಿಡಬಲ್ಲರು, ಕುತಂತ್ರದಿಂದ ಭ್ರಮೆಗಳನ್ನು ಹುಟ್ಟು ಹಾಕಬಲ್ಲರು, ವ್ಯವಹಾರಗಳಲ್ಲಿ ಸದಾ ಸುಳ್ಳಾಡುವರು. ದೇಹವೇ ನಾಶವಾಗಿ ಹೋದರೂ ಸರಿಯೇ, ಮನಸ್ಸಿನೊಳಗಿರುವ ಅನಿಸಿಕೆಗಳನ್ನು ಪ್ರಕಟವಾಗಿ ಹೇಳರು, ಅನ್ಯಾಯವನ್ನೇ ಮಾಡುವಂಥವರು, ಸುಂದರ ಸ್ತ್ರೀಯರಿಗೆ ಇವೇ ಸ್ವಭಾವ ಜನ್ಯ ಗುಣಗಳಾಗಿರುತ್ತವೆ" ಎಂದನು.

ಕವಿ ಕನಕದಾಸರು ಈಗಾಗಲೇ ವರ್ಣಿಸಿದಂತೆ ನಳನೇನೂ ಸಾಮಾನ್ಯನಲ್ಲ. ಶೂರ, ಪರಾಕ್ರಮಿ, ಮತ್ತು ಸಾಮ್ರಾಟ ಆದರೆ ನರಮನುಷ್ಯ. ಹಾಗಾಗಿ ದೇವ ಸಂಕುಲವನ್ನು ಎದುರು ಹಾಕಿಕೊಳ್ಳಲಾಗದ ಅಸಹಾಯಕತೆ ಮತ್ತು ಧರ್ಮಸಂಕಟ ಅವನದು. ವಾಸ್ತವವಾಗಿ, ಈ ಸಂದರ್ಭದ ಮುಖೇನ ಕನಕದಾಸರು, ನಮ್ಮ ಸಮಾಜದಲ್ಲಿರುವ ವರ್ಗ ಸಂಘರ್ಷದತ್ತಲೇ ಬೊಟ್ಟು ಮಾಡುತ್ತಿರುವಂತಿದೆ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಸ್ತ್ರೀಸಂಕುಲದ ಕುರಿತು ಅನಾದಿ ಕಾಲದಿಂದಲೂ ಅವ್ಯಾಹತವಾಗಿ ಹರಿದು ಬಂದಿರುವ ಸಂಕುಚಿತಮನದ ಪೂರ್ವಾಗ್ರಹ ಪೀಡಿತ ಪುರುಷ ಮನೋಭಾವವನ್ನಿಲ್ಲಿ ನಳನ ಮುಖೇನ ಕನಕದಾಸರು ಮನಮುಟ್ಟುವಂತೆ ಸೆರೆಹಿಡಿದಿದ್ದಾರೆ.

24. ಕಪಟವನು ಬಿಡರಾತ್ಮಬುದ್ಧಿಯೊ
ಳುಪಮೆಗಾಣದೆ ನುಡಿದು ಹೊಳೆವರು
ಚಪಲಚಿತ್ತದಿ ಮನವ ವಂಚಿಸಿ ಮಾತನಾಡುವರು
ಗುಪಿತವಳವಡದಾಪ್ತರೊಡವೆಯ
ನಪಹರಿಸಿ ಸಾಹಸವ ಮೆರೆವರು
ನಿಪುಣೆಯರಿಗಿದು ಸಹಜಗುಣವಮರೇಂದ್ರ ಕೇಳೆಂದ

ಕಪಟವನು = ಮೋಸ, ವಂಚನೆಗಳನ್ನು; ಬಿಡರು + ಆತ್ಮ ಬುದ್ಧಿಯೊಳು + ಉಪಮೆ + ಕಾಣದೆ = ಅಂತಸ್ಥವಾಗಿಸಿಕೊಂಡಿರುತ್ತಾರೆ. ಅವುಗಳನ್ನು ಬಿಡಲಾರರು, ಅವರ ಮಾತಿಗೆ ಮತ್ತೆ ಯಾವುದು ಸರಿಸಾಟಿ ಇಲ್ಲ ಎಂಬಂತೆ; ನುಡಿದು = ಮಾತನಾಡಿ; ಹೊಳೆವರು = ಪ್ರಕಾಶಿಸುತ್ತಾರೆ; ಚಪಲಚಿತ್ತದಿ = ಚಂಚಲ ಸ್ವಭಾವದಿಂದ; ಮನವ = ಮನಸ್ಸನ್ನು; ವಂಚಿಸಿ = ಹೊರತೋರದಂತೆ ನಾಟಕವಾಡಿ ಮೋಸದಿಂದ; ಮಾತನಾಡುವರು = ಬೇರೆ ರೀತಿಯೇ ಮಾತನಾಡುತ್ತಾರೆ; ಗುಪಿತವು + ಅಳವಡದೆ + ಆಪ್ತರ + ಒಡವೆಯ + ಅಪಹರಿಸಿ = ರಹಸ್ಯವು ಹೊರಬೀಳದಂತೆ; ಆಪ್ತರ ವಸ್ತುಗಳನ್ನಪಹರಿಸಿ ಅತ್ಯಂತ ಸಾಹಸವ ಮೆರೆವರು = ಶೌರ್ಯವೆಂಬಂತೆ ಮೆರೆಯುವಂಥವರು; ನಿಪುಣೆಯರಿಗೆ + ಇದು = ಚತುರರಾದಂತಹ ಸ್ತ್ರೀಯರಿಗೆ ಇದು; ಸಹಜಗುಣವು + ಅಮರೇಂದ್ರ = ಸ್ವಭಾವ ಸಿದ್ಧವಾಗಿ ಬಂದಂತಹ ಗುಣ ದೇವೇಂದ್ರನೇ ಎಂದನು.

ಅಮರೇಂದ್ರನೇ ಕೇಳು ‘‘ಸ್ತ್ರೀಯರು ಸ್ವಭಾವ ಸಹಜವಾಗಿಯೇ ಚೆದುರೆಯರು. ಮೋಸವಂಚನೆಗಳನ್ನು ಬಿಡುವುದಿಲ್ಲ. ಅದು ಅವರಿಗೆ ಅಂತಸ್ಥ ಗುಣವಾಗಿರುತ್ತದೆ. ಅವರ ಮಾತಿಗೆ ಮತ್ತೊಂದು ಸರಿಸಾಟಿಯಾಗುವಂಥದೇ ಇಲ್ಲವೆಂಬಂತೆ ಹೊರ ನೋಟಕ್ಕೆ ಕಾಣುತ್ತಾರೆ. ಮಹಾ ಚಂಚಲ ಸ್ವಭಾವದವರಾದ ಅವರು ಮನಸ್ಸಿನೊಳಗೇನಿದೆಯೆಂಬುದನ್ನು ಮುಚ್ಚಿಟ್ಟುಕೊಂಡು ಪ್ರಕಟವಾಗಿ ಬೇರೆಯೇ ರೀತಿಯಲ್ಲಿ ಮಾತನಾಡುತ್ತಾರೆ. ಚಂಚಲ ಸ್ವಭಾವದವರೂ, ತನ್ನ ಕೈಚಳಕವು ರಹಸ್ಯವಾಗಿರುವಂತಿಟ್ಟುಕೊಂಡು ಅತ್ಯಾಪ್ತರ ಒಡವೆಗಳನ್ನೂ ಅಪಹರಿಸುತ್ತ ಸಾಹಸ ವನ್ನು ಮೆರೆಯುತ್ತಾರೆ. ಚದುರೆಯರಾದಂತ ಸ್ತ್ರೀಯರಿಗೆ ಇದು ಸ್ವಭಾವಜನ್ಯ ಗುಣ ದೇವೇಂದ್ರನೇ ಎಂದನು.

25. ಸಾವಿಗೆಣಿಸರು ಮನದಿ ಸತ್ಯವ
ಭಾವಿಸರು ಹುಸಿಯೊಲುಮೆದೋರುವ
ರಾವಪರಿಯಲಿ ಹೃದಯಗೊಡದನೃತಗಳನಾಡುವರು
ವಾವೆವರ್ತನವಿಲ್ಲ ಸತ್ಯಕೆ
ಪಾವಕನ ಮುಟ್ಟುವರು ಸತಿಯರ
ನಾವ ಪರಿಯಲಿ ನಂಬಬಹುದೈಯೆನುತ ಹೊರವಂಟ

ಸಾವಿಗೆಣಿಸರು = ಸಾಯುವುದಕ್ಕೂ ಹಿಂದೆಗೆಯುವಂಥವರಲ್ಲ; ಮನದಿ = ಮನಸ್ಸಿನಲ್ಲಿ ಸಹಾ; ಸತ್ಯವ ಭಾವಿಸರು = ಸತ್ಯದ ಕುರಿತು ಚಿಂತಿಸುವಂಥವರಲ್ಲ; ಹುಸಿ + ಒಲಮೆ + ತೋರುವರು + ಆವ + ಪರಿಯಲಿ = ಯಾವುದೇ ರೀತಿಯಲ್ಲಿ ಸುಳ್ಳು ಸುಳ್ಳೇ ಪ್ರೀತಿಯ ನಾಟಕವಾಡುವಂಥವರು; ಹೃದಯಗೊಡದೆ + ಅನೃತಗಳನಾಡುವರು = ಮನಸ್ಸನ್ನು ತೆರೆದು ತೋರದಂತೆ ಸುಳ್ಳುಗಳನ್ನೇ ಹೇಳು ವಂಥವರು; ವಾವೆವರ್ತನವಿಲ್ಲ = ಒಳ್ಳೆಯ ಸಂಬಂಧಗಳು, ವರ್ತನೆಗಳಿಲ್ಲದವರು; ಸತ್ಯಕೆ = ಸತ್ಯವೆಂದು ನಂಬಿಸಲು; ಪಾವಕನ = ಬೆಂಕಿಯನ್ನೂ; ಮುಟ್ಟುವರು = ಮುಟ್ಟುತ್ತಾರೆ; ಸತಿಯರನು + ಆವ ಪರಿಯಲಿ = ಹೆಂಗಸರನ್ನು ಯಾವ ರೀತಿಯಲ್ಲಿ; ನಂಬಬಹುದೈಯೆನುತ = ನಂಬಬಹುದೋ ಎನ್ನುತ್ತ; ಹೊರವಂಟ = ಹೊರಹೊರಟನು.

ಸ್ತ್ರೀಯರು ಸಾಯುವುದಕ್ಕೂ ಹಿಂದೆಗೆಯುವಂಥವರಲ್ಲ, ಮನಸ್ಸಿನಲ್ಲಿ ಸಹಾ ಸತ್ಯದ ಕುರಿತು ಚಿಂತಿಸುವಂಥವರಲ್ಲ, ಯಾವ ರೀತಿಯಲ್ಲಿ ಬೇಕಾದರೂ ಸುಳ್ಳು ಪ್ರೀತಿಯ ನಾಟಕವಾಡುವರು, ಮನಸ್ಸಿನೊಳಗನ್ನು ತೆರೆದು ತೋರದಂತೆ ಸುಳ್ಳನ್ನೇ ಹೇಳುವರು, ಒಳ್ಳೆಯ ಸಂಬಂಧ, ನಡೆ ನುಡಿ, ವರ್ತನೆಗಳಿಲ್ಲದವರು, ಸತ್ಯವೆಂದು ಪ್ರಮಾಣೀಕರಿಸಲು ಬೆಂಕಿಯನ್ನು ಮುಟ್ಟುವರು, ಸ್ತ್ರೀಯರನ್ನು ಯಾವ ರೀತಿ ನಂಬಬಹುದೋ? ಎನ್ನುತ್ತಾ ನಳನು ಹೊರಗೆ ಹೊರಟು ಹೋದನು.

ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣನ್ನು ಕುರಿತಂತೆ ಪ್ರಾಚೀನ ಕಾಲ ದಿಂದಲೂ ಸಾಗಿಬಂದಿರುವ ಇಂತಹ ಪೂರ್ವಾಗ್ರಹಪೀಡಿತ ನಂಬಿಕೆಗಳನ್ನು ಮತ ಮಾನ್ಯಗಳ ಆವರಣದಲ್ಲಿದ್ದೂ ಕನಕದಾಸರಂಥ ಚಿಂತನಶೀಲ ಕವಿ ಎತ್ತಿ ತೋರಿಸುತ್ತಿರುವುದು ಗಮನಾರ್ಹ ಸಂಗತಿ. ಈ ವಿವರಗಳು ನಳಮಹಾರಾಜನ

ಪಾತ್ರವನ್ನೇ ದುರ್ಬಲಗೊಳಿಸಿವೆ. ಇವು ಆ ಸಂದರ್ಭದ ಅನಿವಾರ್ಯ ವಿವರಗಳೂ ಆಗಿರುತ್ತಿರಲಿಲ್ಲ.

26. ನಲವು ಹಿಂಗಿದ ಮನದಿ ನೃಪ ಮಾ
ರ್ಬಲವನಲ್ಲಿಯೆ ನಿಲಿಸಿ ಬರುತಿರೆ
ತಳಿತ ರತ್ನಪ್ರಭೆಯ ಸಾಲಿನ ಸೌಧಪಂಕ್ತಿಗಳ
ಹೊಳೆವ ಕಲಶದ ಗೋಪುರದ ಕೊ
ತ್ತಳದ ಸಾಲಿನ ಕೋಂಟೆಯನು ಕಂ
ಡಲಘುಭುಜಬಲನೃಪತಿ ಹೊಕ್ಕ ವಿದರ್ಭಪಟ್ಟಣವ

ನಲವು = ಸಂತೋಷವು; ಹಿಂಗಿದ ಮನದಿ = ಬತ್ತಿಹೋದಂತಹ ಮನಸ್ಸಿನಿಂದ; ನೃಪ = ನಳಮಹಾರಾಜನು; ಮಾರು + ಬಲವನು + ಅಲ್ಲಿಯೆ + ನಿಲ್ಲಿಸಿ = ಶತ್ರು ಸೈನ್ಯವನ್ನು ಅಲ್ಲಿಯೇ ನಿಲ್ಲಿಸಿ; ಬರುತಿರೆ = ಬರುತ್ತಿರಲು; ತಳಿತ + ಹೊರಹೊಮ್ಮುತ್ತಿದ್ದ; ರತ್ನಪ್ರಭೆಯ + ರತ್ನಗಳ ಕಾಂತಿಯ; ಸಾಲಿನ ಸೌಧ ಪಂಕ್ತಿಗಳ + ಸಾಲುಸಾಲಾಗಿದ್ದ ಮಹಡಿ ಮನೆಗಳ; ಹೊಳೆವ ಕಳಶದ = ಥಳಥಳಿಸುವ ಕಳಶಗಳಿರುವ; ಗೋಪುರದ = ಗೋಪುರಗಳ; ಕೊತ್ತಳದ = ಕೋಟೆಯ ಮೇಲ್ಭಾಗದ ಬುರುಜನ್ನೂ; ಕೋಂಟೆಯನು = ಕೋಟೆಯನ್ನೂ; ಕಂಡಲಘು ಭುಜಬಲನೃಪತಿ = ನೋಡುತ್ತ ಭುಜಬಲ ಪರಾಕ್ರಮಿಯಾದ ನಳನೃಪನು; ಹೊಕ್ಕ ವಿದರ್ಭ ಪಟ್ಟಣವ = ವಿದರ್ಭ ನಗರವನ್ನು ಪ್ರವೇಶಿಸಿದನು.

ದೇವೇಂದ್ರನೊಂದಿಗಿನ ಸಂವಾದವು ನಳನೃಪನನ್ನು ಬಹುವಾಗಿ ಬಾಧಿಸಿತು. ಮನಸ್ಸಿನಲ್ಲಿದ್ದ ಉತ್ಸಾಹವೆಲ್ಲ ಬತ್ತಿ ಹೋದಂತಾಗಿ, ಸೈನ್ಯವನ್ನು ಅಲ್ಲಿಯೇ ನಿಲ್ಲಿಸಿ, ವಿದರ್ಭನಗರದತ್ತ ಹೊರಟನು. ರತ್ನಕಾಂತಿಯಿಂದ ಥಳಥಳಿಸುವ ಗೋಪುರಗಳನ್ನೂ, ಸಾಲುಸಾಲಾಗಿ ಪಂಕ್ತಿಗೊಂಡಿದ್ದ ಮಹಾಸೌಧಗಳನ್ನೂ, ಕೋಟೆಯ ಮೇಲ್ಭಾಗದ ಬುರುಜು, ಥಳಥಳಿಸುವ ಕಳಶಗಳನ್ನೂ ಕೋಟೆಯನ್ನೂ ನೋಡುತ್ತ ಪುರಪ್ರವೇಶ ಮಾಡಿದನು.

27. ಅರಮನೆಯ ಬಾಗಿಲಿಗೆ ಬರಲಿ
ತ್ತೆರದ ವೇದಿಕೆಗಳಲಿ ಪಟುಭಟ
ರುರುತರದ ಕೈದುಗಳ ಕಾಹಿನ ದಾರವಟ್ಟದಲಿ
ಇರಲು ಕಂಡಾ ತರುಣಿಯರು ಸಂ
ಚರಿಸುತಿಹ ಸಡಗರವ ನಳಭೂ
ವರನದೃಶ್ಯದ ರೂಪಿನಲಿಯೊಳಹೊಕ್ಕನರಮನೆಯ

ಅರಮನೆಯ = ವಿದರ್ಭರಾಜನ ಅರಮನೆಯ; ಬಾಗಿಲಿಗೆ = ಮಹಾದ್ವಾರಕ್ಕೆ; ಬರಲು + ಇತ್ತೆರದ = ಬರಲು, ಎರಡೂ ಬದಿಗಳಲ್ಲಿದ್ದ ಎತ್ತರವಾದ; ವೇದಿಕೆಗಳಲಿ = ಜಗುಲಿಗಳಲ್ಲಿದ್ದ; ಪಟುಭಟರು + ಉರುತರದ = ಶೂರರಾದ ಕಾವಲು ಸೈನಿಕರು ಶ್ರೇಷ್ಠವಾದ; ಕೈದುಗಳ = ಆಯುಧಗಳ; ಕಾಹಿನ = ಕಾವಲಿನ; ದಾರವಟ್ಟದಲಿ + ಇರಲು = ಹೆಬ್ಬಾಗಿಲ ಅಗಸೆಯಲ್ಲಿರಲು; ಕಂಡು + ಆ = ನೋಡಿ; ತರುಣಿಯರು = ಆ ಯುವತಿಯರು; ಸಂಚರಿಸುತಿಹ = ಓಡಾಡುತ್ತಿದ್ದ; ಸಡಗರವ = ಸೊಗಸು ಸಂಭ್ರಮವನ್ನು; ನಳಭೂವರನು + ಅದೃಶ್ಯದ = ನಳ ಭೂಪತಿಯು ಅದೃಶ್ಯವಾದ ರೂಪಿನಲಿ; ಒಳಹೊಕ್ಕನು + ಅರಮನೆಯ = ಅರಮನೆಯ ಒಳ ಪ್ರವೇಶಿಸಿದನು.

ನಳಭೂಪನು ವಿದರ್ಭ ನಗರದ ಅರಮನೆಯ ಪ್ರವೇಶ ದ್ವಾರದತ್ತ ಬರಲು, ಅಲ್ಲಿ ಮಹಾದ್ವಾರದ ಎರಡೂ ಬದಿಗಳಲ್ಲಿದ್ದ ಎತ್ತರದ ವೇದಿಕೆಗಳಲ್ಲಿ ಕೈಯ್ಯಲ್ಲಿ ಉತ್ತಮೋತ್ತಮವಾದ ಆಯುಧಗಳನ್ನು ಹಿಡಿದು ನಿಂತಿದ್ದ ಶೂರ ಕಾವಲು ಸೈನಿಕರನ್ನೂ, ಹೆಬ್ಬಾಗಿಲಿನೊಳಗಿನ ಆವರಣಗಳಲ್ಲಿದ್ದ ತರುಣಿಯರ ಸಂಭ್ರಮ ಸೊಗಸುಗಾರಿಕೆಗಳನ್ನೂ ಕಂಡು ತನಗೆ ದೇವೇಂದ್ರಾದ್ಯರಿಂದ ದತ್ತವಾಗಿದ್ದ ಅದೃಶ್ಯ ರೂಪಿನಲ್ಲಿ ಅರಮನೆಯ ಒಳಗೆ ಪ್ರವೇಶಿಸಿದನು.

28. ಆಗಲಾ ದಮಯಂತಿ ಚಿತ್ರದ
ಬಾಗಿಲುಪ್ಪರಿಗೆಯಲಿ ರತ್ನದ
ತೂಗುಮಂಚದ ಹಾಸಿನಲಿ ಕುಳ್ಳಿರಲು ಕೆಳದಿಯರು
ಆ ಗರುವೆಯೋಲಗದೊಳಿರುತಿರೆ

ಪೂಗಣೆಯನೆಸುಗೆಯಲಿ ನಳಚರಿ
ತಾಗಮದ ಕಥನಗಳ ತಾನಾಲಿಸುತ ಚಿತ್ತದಲಿ

ಆಗಲ್ + ಆ ದಮಯಂತಿ = ಆಗ ಆ ಸಂದರ್ಭದಲ್ಲಿ ದಮಯಂತಿಯು; ಚಿತ್ರದ = ಚಿತ್ರವತ್ತಾಗಿದ್ದ ಕುಸುರಿಗೆಲಸದ; ಬಾಗಿಲುಪ್ಪರಿಗೆಯಲಿ = ಬಾಗಿಲುಗಳಿದ್ದ ಮೇಲ್ಮಾಡದಲ್ಲಿ; ರತ್ನದ = ವಜ್ರ ಮಾಣಿಕ್ಯದ ಅಮೂಲ್ಯ ಹರಳುಗಳ; ತೂಗು ಮಂಚದ = ತೂಗುಯ್ಯಾಲೆಯ; ಹಾಸಿನಲಿ = ಮೆತ್ತೆಯಲ್ಲಿ; ಕುಳ್ಳಿರಲು = ಕುಳಿತಿರಲು; ಕೆಳದಿಯರು = ಗೆಳತಿಯರು; ಆ + ಗರುವೆಯ + ಓಲಗದೊಳು + ಇರುತಿರೆ = ಆ ಗಂಭೀರ ಯುವತಿಯ ಸಮೂಹದಲ್ಲಿ ಇರುತ್ತಿರಲು; ಪೂಗಣೆಯನ + ಎಸುಗೆಯಲಿ = ಬಾಣಗಳ ಒಡೆಯನಾದ ಮನ್ಮಥನ ಬಾಣಗಳೆಸೆತದಲಿ ಸಿಲುಕಿದ್ದ; ನಳಚರಿತ್ರೆಯ + ಆಗಮನದ = ನಳನ ಕುರಿತಾಗಿ ಪ್ರಚಲಿತವಾಗಿ ಬರುತ್ತಲೇ ಇದ್ದ; ಕಥನಗಳ = ಕಥೆಗಳನ್ನು; ತಾನ್ + ಆಲಿಸುತ = ತಾನು ಕೇಳುತ್ತ; ಚಿತ್ತದಲಿ = ಮನಸ್ಸಿನಲ್ಲೂ ಅದನ್ನೇ ಪುನರಾಲಿಸಿಕೊಳ್ಳುತ್ತಿದ್ದಳು.

ಆ ಸಂದರ್ಭದಲ್ಲಿ ದಮಯಂತಿಯು ಚಿತ್ರವತ್ತಾಗಿದ್ದ ಕುಸುರಿಗೆಲಸದ ಬಾಗಿಲುಗಳುಳ್ಳ ಅರಮನೆಯ ಮೇಲ್ಮಾಡದಲ್ಲಿ ವಜ್ರ, ಮುತ್ತು, ಮಾಣಿಕ್ಯಾದಿ ಅಮೂಲ್ಯ ಹರಳುಗಳಿದ್ದ ತೂಗುಮಂಚದ ಮೇಲೆ ಹಾಸಿದ್ದ ಮೆತ್ತೆಯಲ್ಲಿ ಮಹಾ ಗಂಭೀರೆಯಾದ ಅವಳ ಸಖಿಯರೂ ಅವಳೊಂದಿಗಿರಲು, ಮನ್ಮಥನ ಹೂಬಾಣಗಳ ಪ್ರಹಾರಕ್ಕೀಡಾಗಿ, ನಳನ ಕುರಿತಾದ ಕಥಾನಕಗಳನ್ನು ಕಿವಿಯಾರೆ ಕೇಳಿಸಿಕೊಳ್ಳುತ್ತ, ಮನಸಾರೆ ಪುನರಾ ಲಿಸಿಕೊಳ್ಳುತ್ತ ಇದ್ದಳು.

29. ಬಂದರಲ್ಲಿಗೆ ಸುರಪ ಕಳುಹಿದ
ಮಂದಗಮನೆಯರಖಿಳವಸ್ತುವ
ತಂದು ಕಾಣಿಕೆಗೊಟ್ಟು ಕೈ ಮುಗಿದೆರಗಿ ನಿಂದಿರಲು
ಬಂದ ಸತಿಯರ ನೋಡಿ ನೀವೆ
ಲ್ಲಿಂದ ಬಂದಿರಿ ನಿಮ್ಮ ಹದನೇ
ನೆಂದು ಬೆಸಗೊಳೆ ವಿನಯದಿಂದರುಹಿದರು ಮಾನಿನಿಗೆ

ಬಂದರು + ಅಲ್ಲಿಗೆ = ಅಲ್ಲಿಗೆ ಆಗಮಿಸಿದರು; ಸುರಪ = ಸುರಪತಿಯಾದ ದೇವೇಂದ್ರನು; ಕಳುಹಿದ = ಕಳುಹಿದ್ದ; ಮಂದಗಮನೆಯರು + ಅಖಿಳ + ವಸ್ತುವ ತಂದು = ಗಂಭೀರ ನಡೆಯ ಚೆಲುವೆಯರು ಆ ಸಂದರ್ಭಕ್ಕೆ ಉಚಿತವಾದ ಸಮಸ್ತ ವಸ್ತು ಪರಿಕರಗಳನ್ನು ತಂದು; ಕಾಣಿಕೆಗೊಟ್ಟು = ಕಾಣಿಕೆಯನ್ನು ನೀಡಿ; ಕೈ ಮುಗಿದು ನಿಂದಿರಲು = ಗೌರವದಿಂದ ವಂದಿಸಿ ನಿಂತಿರಲು; ಬಂದ = ಆಗಮಿಸಿದ; ಸತಿಯರ = ಆ ಹೆಣ್ಣು ಮಕ್ಕಳನ್ನು; ನೋಡಿ = ಕಂಡು; ಬಂದಿರಿ + ನೀವು + ಎಲ್ಲಿಂದ = ನೀವು ಎಲ್ಲಿಂದ ಬಂದಿರುವವರು; ನಿಮ್ಮ ಹದವೇನೆಂದು = ನಿಮ್ಮ ಆಗಮನದ ಉದ್ದೇಶವೇನು? ಎಂದು; ಬೆಸಗೊಳೆ = ಪ್ರಶ್ನಿಸಲು; ವಿನಯದಿಂದ + ಅರುಹಿದರು = ವಿನಯಪೂರ್ವಕವಾಗಿ ವಿಷಯವನ್ನು ಹೇಳಿದರು; ಮಾನಿನಿಗೆ = ಗಂಭೀರೆ ದಮಯಂತಿಗೆ.

ಆ ವೇಳೆಗೆ ದೇವೇಂದ್ರನು ಕಳುಹಿಕೊಟ್ಟಿದ್ದ ಉಡುಗೊರೆಗಳನ್ನು ಇನ್ನಿತರ ವಸ್ತು ಪರಿಕರ ಸಮಸ್ತವನ್ನು ತೆಗೆದುಕೊಂಡು ಬಂದಿದ್ದ ಮಂದಗಮನೆಯರಾದ ಚೆಲುವ ಸ್ತ್ರೀ ಸಮೂಹವು ಅವನ್ನೆಲ್ಲ ದಮಯಂತಿಯ ಎದುರು ತಂದು ಗೌರವ ಪೂರ್ವಕವಾಗಿ ನೀಡಿ ವಂದಿಸಿ ನಿಲ್ಲಲು, ಅವಳು ಅವರೆಲ್ಲರನ್ನುದ್ದೇಶಿಸಿ, ನೀವೆಲ್ಲರೂ ಯಾರು? ಎಲ್ಲಿಂದ, ಏತಕ್ಕಾಗಿ ಇಲ್ಲಿ ಬಂದಿರುವಿರಿ? ಎಂದು ಪ್ರಶ್ನಿಸಲು, ಅವರು ಉತ್ತರಿಸಲನುವಾದರು.

30. ತಾಯೆ ಕೇಳಮರೇಂದ್ರ ನಿಮ್ಮ ನಿ
ಜಾಯತದ ಚೆಲುವಿಕೆಯ ಕೇಳಿದು
ಕಾಯಜನ ಶರಹತಿಗೆ ನೊಂದುರೆ ಕಳುಹಿದನು ನಮಗೆ
ಆಯತದ ಭೂಷಣವ ತೊಡು ಸುರ
ರಾಯನಿಗೆ ಸತಿಯಾಗು ಮರ್ತ್ಯದ
ರಾಯರಸ್ಥಿರರವರ ನೆಚ್ಚದಿರೆಂದರಾ ಸತಿಗೆ

ತಾಯೆ = ಅಮ್ಮಾ; ಕೇಳು + ಅಮರೇಂದ್ರ = ಆಲಿಸುವಂಥವಳಾಗು, ದೇವತೆಗಳ ಅರಸನಾದ ಇಂದ್ರನು; ನಿಮ್ಮ + ನಿಜ + ಆಯತದ = ನಿಮ್ಮ ಅಳಿಯದ ಚೆಲುವಿಕೆಯ ಕುರಿತು; ಕೇಳಿದು = ಕೇಳಿ ತಿಳಿದು; ಕಾಯಜ =

ಮನ್ಮಥನ; ಶರಹತಿಗೆ = ಬಾಣಾಘಾತಕ್ಕೆ; ನೊಂದು + ಉರೆ = ಬಹಳವಾಗಿ ತುತ್ತಾಗಿ; ಕಳುಹಿದನು ನಮಗೆ = ನಮ್ಮನ್ನು ಕಳುಹಿದ್ದಾನೆ; ಆಯತದ = ಸೌಂದರ್ಯಾಧಿಕ್ಯದ; ಭೂಷಣವ = ಈ ಉಡುಗೆ ತೊಡುಗೆಗಳನ್ನು; ತೊಡು = ಧರಿಸು; ಸುರರಾಯನಿಗೆ= ದೇವೇಂದ್ರನಿಗೆ; ಸತಿಯಾಗು = ಮಡದಿಯಾಗು; ಮರ್ತ್ಯದ = ಈ ಭೂಲೋಕದ; ರಾಯರು + ಅಸ್ಥಿರರು + ಅವರ = ರಾಜರುಗಳು ಅಮರರಲ್ಲ ಅವರನ್ನು; ನೆಚ್ಚದಿರ್ + ಎಂದರು + ಆ + ಸತಿಗೆ = ಅವರನ್ನು ನಂಬದಿರು ಎಂದರು ಆ ದಮಯಂತಿಗೆ.

ತಾಯೆ, ಕೇಳುವಂಥವಳಾಗು ದೇವತೆಗಳ ಅರಸನಾದ ಇಂದ್ರನು ನಿಮ್ಮ ಅನುಪಮವಾದ ಅಳಿಯದ ಸೌಂದರ್ಯವನ್ನು ಕಂಡು ಕೇಳಿ, ಮನ್ಮಥನ ಬಾಣಾಹತಿಗೆ ಈಡಾಗಿದ್ದಾನೆ. ನಿಮಗಾಗಿ ಅವನು ಕಳುಹಿಕೊಟ್ಟಿರುವ ಈ ಉಡುಗೆ ತೊಡುಗೆಗಳನ್ನು ಧರಿಸು, ಅವನಿಗೆ ಮಡದಿಯಾಗು, ಈ ಭೂಲೋಕದ ರಾಜರುಗಳನ್ನು ನಂಬಬೇಡ, ಅವರು ಎಂದಿದ್ದರೂ ನಾಶವಾಗುವಂಥವರೇ, ಅಮರರಲ್ಲ ಎಂದರು.

31. ಪದವಿ ಯಾವುದು ಲೋಕದಲಿ ಸುರ
ಪದವಿಯಲ್ಲದೆ ಬೇರೆ ಮಿಕ್ಕಿನ
ಪದವಿಯುಂಟೇ ತಾಯೆ ಭಾವಿಸಿ ನೋಡು ಚಿತ್ತದಲಿ
ಸದರವೇ ನರಜನ್ಮದವರಿಗೆ
ಯೊದಗಲರಿಯದು ಪುಣ್ಯ ನಿನಗಿದು
ಸುದತಿ ಕರುಣಿಸು ಮಾತನೆಂದರು ನಗುತ ರಂಭೆಯರು

ಪದವಿ = ಉತ್ತಮವಾದ ಸ್ಥಿತಿಗತಿಗಳು; ಯಾವುದು ಲೋಕದಲಿ = ಈ ಭೂಮಂಡಲದಲ್ಲಿ ಯಾವುವು?; ಸುರ ಪದವಿಯಲ್ಲದೆ = ದೇವಪದವಿಯಲ್ಲದೆ; ಮಿಕ್ಕಿನ = ಬೇರೆ; ಪದವಿಯುಂಟೇ ತಾಯೆ = ಉತ್ತಮವಾದ ಪದವಿ ಇದೆಯೇ, ತಾಯೆ; ಭಾವಿಸಿನೋಡು = ಯೋಚನೆ ಮಾಡಿನೋಡು; ಚಿತ್ತದಲಿ = ಮನಸ್ಸಿನಲ್ಲಿ; ಸದರವೇ = ಸುಲಭವೇ; ನರಜನ್ಮದವರಿಗೆ + ಒದಗಲು + ಅರಿಯದು = ಮನುಷ್ಯಮಾತ್ರರಿಗೆ ಒದಗಿ ಬರುವಂಥದಲ್ಲ; ಪುಣ್ಯ ನಿನಗಿದು = ಇದು ನಿನಗೆ

ಒದಗಿ ಬಂದಿರುವ ಪುಣ್ಯ; ಸುದತಿ = ಸುಂದರ ದಂತಪಂಕ್ತಿಯುಳ್ಳವಳೇ, ಸುಂದರಿಯೇ; ಕರುಣಿಸು ಮಾತನೆಂದರು = ಮದುವೆಯಾಗುವುದಾಗಿ ಮಾತುಕೊಡು ಎಂದರು; ನಗುತ ರಂಬೆಯರು = ಸಂತೋಷದ ನಗೆನಗುತ ದೇವಲೋಕದ ಸುಂದರಿಯರು.

ದೇವ ಪದವಿಯೊಂದೇ ಶ್ರೇಷ್ಠವಾದುದಲ್ಲದೆ ಬೇರೆ ಪದವಿಯೆಂಬುದೊಂದಿದೆಯೇ ತಾಯಿ? ಈ ಭೂಮಂಡಲದ ಯಾವುದೇ ಸ್ಥಿತಿಯೂ ಶ್ರೇಷ್ಠತಮವಾದುದಲ್ಲ. ನೀನೇ ಮನಸ್ಸಿನಲ್ಲೊಮ್ಮೆ ಚಿಂತಿಸಿ ನೋಡು. ನಿನ್ನ ಪುಣ್ಯ ನಿನಗೆ ಒದಗಿ ಬಂದಿರುವ ಈ ಭಾಗ್ಯ ಸಾಮಾನ್ಯ ಮನುಷ್ಯರಿಗೆ ದೊರಕುವಂಥದಲ್ಲ. ಸುಂದರಿಯೇ ಮದುವೆಯಾಗುವುದಾಗಿ ದೇವೇಂದ್ರನಿಗೆ ಮಾತುಕೊಡು ಎಂದು ದೇವೇಂದ್ರನು ಕಳುಹಿಸಿದ್ದ ಸುರಸುಂದರಿಯರು ದಮಯಂತಿಗೆ ತಿಳಿ ಹೇಳಿದರು.

32. ಅಲರ ಪರಿಮಳದೆಡೆಗೆ ತುಂಬಿಗ
ಳೊಲಿದು ಪೋಪಂದದಲಿ ಲೋಕದೊ
ಳಲರು ವಿಕಸಿತವಾಗಿ ಹೋಹುದೆ ತುಂಬಿಯಿದ್ದೆಡೆಗೆ
ಸಲೆ ತವಕದಿಂದಮರಪತಿಯೆಡೆ
ಗೊಲಿದು ನೀ ಪೋಪಂತೆ ಸುರಪತಿ
ನಲವಿನಿಂದಲಿ ನಿನ್ನ ಬಳಿಗೈದುವನು ಪುಣ್ಯವಲಾ

ಅಲರ = ಹೂಗಳ; ಪರಿಮಳದೆಡೆಗೆ = ಸುಗಂಧಕ್ಕೆ; ತುಂಬಿಗಳೊಲಿದು = ಆಸೆಯಿಂದ ದುಂಬಿಗಳು; ಪೋಪ + ಅಂದದಲಿ = ಹೋಗುವ ರೀತಿಯಲ್ಲಿ; ಲೋಕದೊಳು + ಅಲರು = ಈ ಲೋಕದಲ್ಲಿ ಹೂವು; ವಿಕಸಿತವಾಗಿ = ಅರಳಿ; ಹೋಹುದೆ = ಹೋಗುವುದುಂಟೇ; ತುಂಬಿಯಿದ್ದೆಡೆಗೆ = ದುಂಬಿ ಇರುವಲ್ಲಿಗೆ; ಸಲೆ = ಅತಿಶಯವಾಗಿ; ತವಕದಿಂದ ಅಮರಪತಿ + ಎಡೆಗೆ + ಒಲಿದು = ಪ್ರೀತಿಯಾತುರದಿಂದ ದೇವೇಂದ್ರನಲ್ಲಿಗೆ ಒಲಿದು; ನೀ ಪೋಪಂತೆ = ನೀನು ಹೋಗುವಂತಾಗಲು; ಸುರಪತಿ = ದೇವರುಗಳರಸನಾದ ದೇವೇಂದ್ರನು; ನಲವಿನಿಂದಲಿ = ಸಂತೋಷದಿಂದ; ನಿನ್ನ ಬಳಿಗೆ + ಐದುವನು = ನಿನ್ನ ಬಳಿಗೆ ಬರುವನು; ಪುಣ್ಯವಲಾ = ಇದು ನಿನ್ನ ಪುಣ್ಯವಲ್ಲವೇ?

“ಹೂಗಳ ಪರಿಮಳಕ್ಕೆ ಆಕರ್ಷಕವಾಗಿ ದುಂಬಿಗಳು ಆಸೆಯಿಂದ ಹೂಗಳ ಹತ್ತಿರ ಹೋಗುವ ರೀತಿಯಲ್ಲಿ, ಲೋಕದಲ್ಲಿ ಹೂಗಳೇ ವಿಕಸಿತವಾಗಿ ದುಂಬಿಗಳಿದ್ದೆಡೆ ಹೋಗುವುದುಂಟೇ? ಹಾಗಾಗಿ, ನೀನು ಸುರಪತಿಯನ್ನು ಸೇರುವಂತಾಗಲು, ಅವನೇ ಸಂತೋಷದಿಂದ ನಿನ್ನ ಬಳಿಗೆ ಬರುತ್ತಾನೆ. ಇದು ನಿನ್ನ ಪುಣ್ಯವಲ್ಲವೆ?” ಎಂದರು.

33. ಎನಲು ಕೇಳಿದಳಾ ನುಡಿಯ ಸುರ
ವನಿತೆಗೆಂದಳು ಚಿತ್ತವೆನಗೊ
ಬ್ಬನಲಿ ಸಿಲುಕಿತು ಮರಳಿಪಡೆ ಕಮಲಾಕ್ಷಗಳವಲ್ಲ
ಅನಿಮಿಷಾಧಿಪ ತನಗೆ ದೇವಾಂ
ಗನೆಯರಿರುತಿರೆ ಮನಜಸತಿ ಪಾ
ವನವೆ ಬರಿದೆ ದುರಾಸೆ ತನಗೇಕೆಂದಳಿಂದುಮುಖಿ

ಎನಲು = ದೇವಕನ್ನಿಕೆಯರು ಹಾಗೆ ಹೇಳಲು; ಕೇಳಿದಳು + ಆ ನುಡಿಯ = ಅವರ ಮಾತುಗಳನ್ನು ಕೇಳಿಕೊಂಡಳು; ಸುರವನಿತೆಗೆ + ಎಂದಳು = ಸುರವನಿತೆಯರನ್ನು ಕುರಿತು ಹೇಳಿದಳು; ಚಿತ್ತವು + ಎನಗೆ + ಒಬ್ಬನಲಿ = ನನ್ನ ಮನಸ್ಸು ಒಬ್ಬನಲ್ಲಿ; ಸಿಲುಕಿತು = ನಾಟಿದೆ; ಮರಳಿಪಡೆ = ಅದನ್ನು ಹಿಂದೆಗೆದುಕೊಳ್ಳಲು; ಕಮಲಾಕ್ಷನಿಗೆ + ಅಳವಲ್ಲ = (ಕಮಲಗಳಂತೆ ಕಣ್ಣುಗಳುಳ್ಳ) ಆ ವಿಷ್ಣುವಿಗೂ ಸಾಧ್ಯವಿಲ್ಲ; ಅನಿಮಿಷ + ಅಧಿಪ = (ಕಣ್ಣು ರೆಪ್ಪೆಗಳನ್ನು ಹೊಯ್ಯದ) ದೇವರುಗಳಿಗೆ ಅಧಿಪತಿಯಾದ ದೇವೇಂದ್ರನಿಗೆ; ತನಗೆ = ಅವನಿಗೆ; ದೇವ + ಅಂಗನೆಯರು + ಇರುತಿರೆ = ದೇವಕನ್ನಿಕೆಯರೇ ಇರುವಾಗ; ಮನುಜಸತಿ = ಮಾನವ ಸ್ತ್ರೀ; ಪಾವನವೆ = ಶ್ರೇಷ್ಠಳಾಗುವಳೇ?; ಬರಿದೆ = ಸುಮ್ಮನೆ; ದುರಾಸೆ = ದುಷ್ಟವಾದ ಆಸೆಗಳು; ತನಗೆ + ಏಕೆ + ಎಂದಳು + ಇಂದುಮುಖಿ = ಕಾಂತಿಯುತವಾದ, ಸುಂದರಾನನೆಯಾದ ದಮಯಂತಿಯು, ಅವನಿಗೇಕೆ ಇಂತಹ ಸಣ್ಣತನದಾಸೆ ಎಂದಳು.

ದೇವಕನ್ನಿಕೆಯರು ದೇವೇಂದ್ರನನ್ನು, ಸುರಲೋಕವನ್ನು ಅತ್ಯುತ್ಕೃಷ್ಟ ವೆಂಬಂತೆ, ಕೊಂಡಾಡಲು ಅದನ್ನು ತಾಳ್ಮೆಯಿಂದ ಕೇಳಿಕೊಂಡ, ಚಂದ್ರನಂತೆ ಕಾಂತಿಯುತವಾದ ಮುಖವುಳ್ಳ ಸುಂದರಿ ದಮಯಂತಿಯು ತನ್ನ ಮನಸ್ಸು

ಬೇರೊಬ್ಬರಲ್ಲಿ ನಾಟಿರುವ ವಿಷಯವನ್ನು ಹೇಳಿದ್ದಲ್ಲದೆ, ಅದನ್ನು ಬದಲಿಸಲು ಆ ಮಹಾವಿಷ್ಣುವಿನಿಂದಲೂ ಸಾಧ್ಯವಿಲ್ಲ ಎಂದಳು. ಸುರಲೋಕದ ಅಧಿಪತಿಯಾದ ದೇವೇಂದ್ರನಿಗೆ ಈಗಾಗಲೇ ದೇವಾಂಗನೆಯರೇ ಇರುವಾಗ ಮಾನವಸ್ತ್ರೀಯಾದ ನಾನು ಶ್ರೇಷ್ಠಳಾಗಲು ಸಾಧ್ಯವೇ? ಅವನಿಗೇಕೆ ಈ ಅಲ್ಪ ಆಸೆಗಳು ಎಂದು ದಿಟ್ಟವಾಗಿ ನುಡಿದಳು.

34. ಮರಳಿದರು ಸುರಸತಿಯರಿತ್ತಲು
ಬರುತೆ ನಳನೃಪತಿಲಕ ತಾ ಮನ
ಹರುಷದಲಿ ನಿಜರೂಪ ತಾಳ್ದನು ರಾಜತೇಜದಲಿ
ಅರಸನಿರೆ ದಮಯಂತಿ ಕಂಡ
ಚ್ಚರಿಯ ಮದನನೊ ನಳನೊ ನಳಕೂ
ಬರನೊ ಜಯಂತನೊ ಎನೆ ವಿಸ್ಮಯಗೊಂಡಳಾ ತರುಣಿ

ಮರಳಿದರು = ಹಿಂದಿರುಗಿದರು; ಸುರಸತಿಯರು + ಇತ್ತಲು = ದೇವಕನ್ನಿಕೆಯರು ಇತ್ತ; ಬರುತೆ = ಬರುತ್ತಿದ್ದಂತೆ; ನಳನೃಪತಿಲಕ = ನೃಪಕುಲ ಶ್ರೇಷ್ಠನಾದ ನಳನು; ತಾ = ತಾನು; ಮನ ಹರುಷದಲಿ = ಮನಸ್ಸಂತೋಷದಿಂದ; ನಿಜರೂಪ ತಾಳ್ದನು = ತನ್ನ ಸಹಜ ರೂಪಕ್ಕೆ ಮರಳಿದನು. ರಾಜತೇಜದಲಿ = ರಾಜ ತೇಜಸ್ಸಿನಿಂದ, ಕಾಂತಿಯುತವಾಗಿ; ಅರಸನಿಗೆ = ಅವನು ಹೀಗಿರುತಿರಲು; ದಮಯಂತಿ = ದಮಯಂತಿಯು; ಕಂಡು + ಅಚ್ಚರಿಯ = ಅವನನ್ನು ನೋಡಿ ಆಶ್ಚರ್ಯದಿಂದ; ಮದನನು = ಮನ್ಮಥನೋ; ನಳನೋ = ನಳಚಕ್ರವರ್ತಿಯೋ; ನಳಕೂಬರನೋ = ಕುಬೇರನ ಅತಿ ಸುಂದರ ಮಗನಾದ ವಿಲಾಸ ಪ್ರಿಯ ನಳಕೂಬರನೋ; ಜಯಂತನೋ = ಇಂದ್ರನ ಮಗ ಜಯಂತನೋ; ಎನೆ = ಎಂದು; ವಿಸ್ಮಯಗೊಂಡಳಾ ತರುಣಿ = ಆಶ್ಚರ್ಯಚಕಿತಳಾದಳು.

ತಾವು ಬಂದ ದೌತ್ಯಕಾರಣವು ಸಫಲವಾಗಲಿಲ್ಲ ಎಂಬುದನ್ನರಿತ ದೇವಕನ್ನಿಕೆಯರು ದಮಯಂತಿ ಇದ್ದೆಡೆಯಿಂದ ಮರಳಿದರು. ಆಗ ನೃಪಕುಲ ಶ್ರೇಷ್ಠನಾದ ನಳನು ಅದನ್ನು ಕಂಡು ಹರುಷಗೊಂಡು ತನ್ನ ನಿಜರೂಪಕ್ಕೆ ಮರಳಿದನು. ಆಗ ದಮಯಂತಿಯು ಅತ್ಯಾಶ್ಚರ್ಯಗೊಂಡಳು. ನಳನ ರೂಪ ಯೌವನಗಳು ಅವಳಲ್ಲಿ ಬೆರಗು ಹುಟ್ಟಿಸಿ ಇವನಾರು? ಮನ್ಮಥನೋ, ಕುಬೇರನ

ಸುಂದರ ವಿಲಾಸ ಪ್ರಿಯ ಮಗನಾದ ನಳಕೂಬರನೇ ಬಂದನೋ ಇಲ್ಲವೇ ಇಂದ್ರನ ಮಗನಾದ ರೂಪ ಸುಂದರ ಜಯಂತನೇ ಬಂದಿರುವನೋ ಎಂದು ವಿಸ್ಮಯ ಗೊಂಡಳು.

35. ಎಂದು ಪರಿತೋಷದಲಿ ನಾರೀ
ವೃಂದಸಹಿತಿದಿರೆದ್ದು ವಿನಯದಿ
ನಿಂದು ಕರಗಳ ಮುಗಿದು ಸಿಂಹಾಸನದಿ ಕುಳ್ಳಿರಿಸಿ
ತಂದು ಮುಕ್ತಾಫಲಗಳನು ಮುದ
ದಿಂದ ಕಾಣಿಕೆಯಿತ್ತು ಸತಿಯರ
ಸಂದಣಿಯ ಕೆಲಕೊತ್ತಿ ನುಡಿದಳು ಮಧುರವಚನದಲಿ

ಎಂದು = ಹೀಗೆ ಯೋಚಿಸಿದ ದಮಯಂತಿಯು; ಪರಿತೋಷದಲಿ = ಅತಿ ಸಂತೋಷದಿಂದ ಹಿಗ್ಗುತ್ತ; ನಾರೀ ವೃಂದ ಸಹಿತ + ಇದಿರು + ಎದ್ದು = ತನ್ನೊಂದಿಗಿದ್ದ ಸಮಸ್ತ ಸಖೀ ಪರಿಜನ ಸಹಿತವಾಗಿ ಅವನನ್ನು ಎದುರುಗೊಂಡು ಬಂದು; ವಿನಯದಿ ನಿಂದು = ವಿನಯಪೂರ್ವಕವಾಗಿ ನಿಂತು; ಕರಗಳ ಮುಗಿದು = ಕೈಗಳನ್ನು ಮುಗಿದು; ಸಿಂಹಾಸನದಿ = ಸಿಂಹಾಸನದಲ್ಲಿ; ಕುಳ್ಳಿರಿಸಿ = ಕುಳಿತುಕೊಳ್ಳಿರಿಸಿ; ತಂದು = ತಂದು; ಮುಕ್ತಾಫಲಗಳನು= ಅತ್ಯುತ್ತಮವಾದ ಮುತ್ತುಗಳನ್ನು; ಮುದದಿಂದ = ಸಂತೋಷದಿಂದ; ಕಾಣಿಕೆಯಿತ್ತು = ಉಪಾಯನಾದಿಗಳನ್ನು ನೀಡಿ; ಸತಿಯರ = ಸ್ತ್ರೀಯರ; ಸಂದಣಿಯ = ಗುಂಪನ್ನು; ಕೆಲಕೊತ್ತಿ = ಬದಿಗೆ ಕಳುಹಿ; ನುಡಿದಳು = ಹೇಳಿದಳು; ಮಧುರ ವಚನದಲಿ = ಮರ್ಯಾದಾ ಪೂರ್ವಕ ಪ್ರಿಯವಾದ ನುಡಿಗಳಿಂದ.

ದಮಯಂತಿಯು ನಳಚಕ್ರವರ್ತಿಯನ್ನು ಕಂಡು ಅತಿ ಸಂತೋಷಗೊಂಡು ಹಿಗ್ಗಿ ತನ್ನೊಂದಿಗಿದ್ದ ಸಖೀಜನ, ಪರಿಜನರಾದಿ ನಾರೀವೃಂದ ಸಹಿತವಾಗಿ ಅವನನ್ನು ಗೌರವಪೂರ್ವಕವಾಗಿ ಎದುರುಗೊಂಡು, ವಿನಯಪೂರ್ವಕವಾಗಿ ಕೈಗಳನ್ನು ಮುಗಿದು ಕರೆತಂದು ಸಿಂಹಾಸನದಲ್ಲಿ ಕುಳ್ಳಿರಿಸಿ, ಅತ್ಯುತ್ತಮವಾದ, ಹೊಸ ಮುತ್ತು ಗಳನ್ನು ಉಪಾಯನವಾಗಿ ನೀಡಿ, ಹೆಂಗಳೆಯರ ಸಮೂಹವನ್ನು ಬದಿಗೆ ಕಳುಹಿ, ಮರ್ಯಾದಾಪೂರ್ವಕ ಪ್ರಿಯ ನುಡಿಗಳಿಂದ ಆದರಿಸಿದಳು.

36. ಆರು ನೀವೆಲ್ಲಿಂದ ಬಂದಿರಿ
ಕಾರಣವಿದೇನೆಮ್ಮ ರಾಜ
ದ್ವಾರದಲಿ ನೀವ್ ಹೊಕ್ಕ ಹದನೇನಿಲ್ಲಿ ಗಂಡುನೊಣ
ಸೇರಲಮ್ಮದು ನೀವಘಾಡದ
ವೀರರತಿಸೌಂದರ್ಯರೆನೆ ನಳ
ಭೂರಮಣ ನಸುನಗುತ ನುಡಿದನು ಸತಿಗೆ ವಿನಯದಲಿ

ಆರು = ಯಾರು, ನೀವು + ಎಲ್ಲಿಂದ + ಬಂದಿರುವಿರಿ? = ನೀವು ಎಲ್ಲಿಂದ ಬಂದಿರುವಿರಿ?; ಕಾರಣ + ಇದು + ಏನು + ಎಮ್ಮ = ನೀವು ಬಂದ ಉದ್ದೇಶವೇನು?; ಎಮ್ಮ ರಾಜದ್ವಾರದಲ್ಲಿ ನೀವ್ = ನಮ್ಮ ರಾಜದ್ವಾರದಲ್ಲಿ ನೀವು; ಹೊಕ್ಕ = ಪ್ರವೇಶಿಸಿದ; ಹದನು + ಏನು + ಇಲ್ಲಿ = ರೀತಿ ಯಾವುದು? ಇಲ್ಲಿ; ಗಂಡುನೊಣ = ಯಾವ ಪುರುಷ ಕೀಟವೂ ಸಹ; ಸೇರಲು + ಅಮ್ಮದು = ಪ್ರವೇಶಿಸುವುದು ಸಾಧ್ಯವಿಲ್ಲ; ನೀವು + ಅಘಾಡದ = ನೀವು ಅತ್ಯಧಿಕವಾದ ಮಹಾ; ವೀರರು + ಅತಿ + ಸೌಂದರ್ಯರು + ಎನೆ = ಶೂರರು; ಅತಿಶಯ ಸೌಂದರ್ಯವುಳ್ಳವರು ಎನ್ನಲು; ನಳ ಭೂರಮಣ = ನಳ ಭೂಪಾಲನು; ನಸುನಗುತ = ಮೆಲು ನಗೆನಗುತ; ನುಡಿದನು = ಹೇಳಿದನು; ಸತಿಗೆ = ದಮಯಂತಿಗೆ; ವಿನಯದಲಿ = ವಿನಯದಿಂದ.

ದಮಯಂತಿಯು ನಳನ ಪೂರ್ವಾಪರಗಳನ್ನು ವಿಚಾರಿಸುತ್ತಿದ್ದಾಳೆ. ನೀವು ಯಾರು? ಎಲ್ಲಿಂದ ಬಂದಿರಿ? ಯಾವ ಕಾರಣವಾಗಿ ಇಲ್ಲಿಗೆ ಬಂದಿದ್ದೀರಿ? ನಮ್ಮ ಅರಮನೆಯ ರಾಜದ್ವಾರದಲ್ಲಿ ಒಂದು ಗಂಡು ಕೀಟಕ್ಕೂ ವಿಚಾರಣೆಯಿಲ್ಲದೆ ಒಳ ನುಸುಳಲು ಅನುಮತಿ ಇಲ್ಲದಿರುವಾಗ ನೀವು ಹೇಗೆ ಬಂದಿರಿ? ನೀವು ಅತಿಶಯ ಚೆಲುವೂ ಶೌರ್ಯವೂ ಇರುವಂಥವರು. ನಿಮ್ಮ ಬರವಿನ ಕಾರಣವೇನು? ಎಂದು ಕುತೂಹಲಿತಳಾಗಿ ಕೇಳಲು ನಳನು ನಸುನಗುತ ಹೇಳಲನುವಾದನು.

37. ತರುಣಿ ಕೇಳಮರೇಂದ್ರನಟ್ಟಿದ
ಚರನು ತಾ ಮಿಗೆ ನಿನ್ನ ರೂಪನು
ಸುರಮುನಿಪನರುಹಿದರೆ ಕೇಳಿದನಿಂದ್ರ ವಿರಹದಲಿ

ಕರಗಿ ಮದನನ ಶರಹತಿಗೆ ಮನ
ಮರುಗಿ ಬಂದಿಹನಿಲ್ಲಿಗಾತಂ
ಗರಸಿಯಾಗೆನೆ ಕೇಳಿ ಮುಖದಿರುಹಿದಳು ದಮಯಂತಿ

ತರುಣಿ = ಯುವತಿಯೇ; ಕೇಳು + ಅಮರೇಂದ್ರನು + ಅಟ್ಟಿದ = ಕೇಳು; ದೇವೇಂದ್ರನು ದೌತ್ಯಕ್ಕಾಗಿ ಕಳುಹಿಸಿರುವ; ಚರನು = ದೂತನು; ತಾ = ತಾನು; ಮಿಗೆ = ಅತಿಶಯವಾದ; ನಿನ್ನ ರೂಪನು = ನಿನ್ನ ಚೆಲುವನ್ನು; ಸುರಮುನಿಪನು + ಅರುಹಿದರೆ = ದೇವರ್ಷಿ ನಾರದನು ಹೇಳಿದುದನ್ನು; ಕೇಳಿದ + ಇಂದ್ರನು = ಇಂದ್ರನು ಇದನ್ನು ಕೇಳಿ; ವಿರಹದಲಿ = ಕಾಮವಾಂಛೆಯಿಂದ ಪೀಡಿತನಾಗಿ; ಕರಗಿ = ಬಡವಾಗಿ; ಬಂದಿಹನು + ಇಲ್ಲಿಗೆ + ಆತಂಗೆ + ಅರಸಿಯಾಗು + ಎನೆ = ಇಲ್ಲಿಗೆ ಬಂದಿದ್ದಾನೆ; ನೀನು ಅವನ ರಾಣಿಯಾಗು ಎನ್ನಲು; ಕೇಳಿ = ಅದನ್ನು ಆಲಿಸಿ; ಮುಖ + ತಿರುಹಿದಳು = ಮುಖವನ್ನು ಅತ್ತ ತಿರುಗಿಸಿಕೊಂಡಳು, ದಮಯಂತಿ.

ನಳಮಹಾರಾಜನು ಒಳಗೊಳಗೇ ದಮಯಂತಿಯ ಕುರಿತಾಗಿ ಒಲವುಳ್ಳವನಾಗಿದ್ದರೂ ಇಂದ್ರನಿಂದ ದೂತನಾಗಿ ತಾನು ಕಳುಹಿಸಲ್ಪಟ್ಟಿರುವುದನ್ನು ಪ್ರಕಟವಾಗಿ ಹೇಳುತ್ತಿದ್ದಾನೆ. ಸುರಮುನಿಯಾದ ನಾರದನು ನಿನ್ನ ಅತಿಶಯವಾದ ರೂಪ ಲಾವಣ್ಯಗಳನ್ನು ವರ್ಣಿಸುವುದನ್ನು ಕೇಳಿ ದೇವೇಂದ್ರನು ನಿನ್ನನ್ನು ಹೊಂದಬೇಕೆಂದು ತುಯ್ತದಿಂದ ಕಾಮಬಾಣ ಪೀಡಿತನಾಗಿ ಬಡವಾಗಿ ಮರುಗುತ್ತಿದ್ದಾನೆ. ಅವನನ್ನು ನೀನು ವರಿಸು ಎಂದು ನಳನು ಹೇಳಲು ದಮ ಯಂತಿಯು, ಅದನ್ನು ಕೇಳಲಿಚ್ಛಿಸದವಳಂತೆ ಅತ್ತ ಮುಖದಿರುವಿದಳು.

38. ಬಲ್ಲವರು ನೀವಧಿಕರೆಮ್ಮೊಳು
ಸಲ್ಲದೀ ನುಡಿಯೇತಕಿದು ಶಚಿ
ವಲ್ಲಭನ ಮಾತೇನು ಸಾಕಂತಿರಲಿಯೆನಗಿನ್ನು
ವಲ್ಲಭನು ನಳನೃಪತಿಯಲ್ಲದೆ
ನಲ್ಲರುಂಟೇ ಜಗದಿ ನೀವ್ ಸುರ
ರಲ್ಲ ನಿಮ್ಮಭಿಧಾನವೇನೆಂದಳು ಸರೋಜಮುಖಿ

ಬಲ್ಲವರು = ಎಲ್ಲವನ್ನು ತಿಳಿದಿರುವಂಥವರು; ನೀವು + ಅಧಿಕರು + ಎಮ್ಮೊಳು = ನೀವು ಶ್ರೇಷ್ಠರು; ನಮ್ಮೊಂದಿಗೆ + ಸಲ್ಲದು + ಈ = ಸರಿಯಲ್ಲ; ನುಡಿ + ಏತಕೆ + ಇದು = ಈ ಮಾತು ಏತಕ್ಕೆ? ಇದು; ಶಚಿವಲ್ಲಭನ = ಶಚಿದೇವಿಯ ಪತಿಯಾದ ಇಂದ್ರನ, ಮಾತೇನು = ಸಂದೇಶವೇನು; ಸಾಕು + ಅಂತಿರಲಿ + ಎನಗೆ + ಇನ್ನು; ಆ ಮಾತು ಇನ್ನು ಸಾಕು. ಇರಲಿ, ನನಗೆ ಇನ್ನು; ನಳನೃಪತಿಯಲ್ಲದೆ = ನಳಮಹಾರಾಜನಲ್ಲದೆ; ನಲ್ಲರುಂಟೇ = ಪ್ರಿಯರು ಬೇರಾರಿದ್ದಾರೇನು; ಜಗದಿ = ಜಗತ್ತಿನಲ್ಲಿ; ನೀವ್ = ನೀವು; ಸುರರಲ್ಲ = ದೇವಲೋಕದವರಲ್ಲ; ನಿಮ್ಮ + ಅಭಿದಾನವು + ಏನೆಂದಳು = ನಿಮ್ಮ ಹೆಸರೇನು ಎಂದಳು ಸರೋಜಮುಖಿ.

ನೀವು ಎಲ್ಲವನ್ನು ತಿಳಿದಿರುವಂಥವರು, ಶ್ರೇಷ್ಠರು. ಇಂತಹ ಮಾತುಗಳೇತಕ್ಕೆ ಇಂದ್ರನನ್ನು ಕುರಿತು ನಮ್ಮೊಂದಿಗೆ ಮಾತನಾಡುವುದು ಸರಿಬರುವುದಿಲ್ಲ. ಶಚೀಪತಿ ಯಾದ ಇಂದ್ರನ ಸಂದೇಶವೇನು ಇದು? ಇರಲಿ, ಈ ಮಾತು ಸಾಕು. ನನಗೆ ಇನ್ನು ನಳಮಹಾರಾಜನಲ್ಲದೆ ಈ ಜಗತ್ತಿನಲ್ಲಿ ಬೇರೆ ಯಾರೂ ಪ್ರಿಯರಲ್ಲ. ನೀವು ದೇವಲೋಕದವರಂತೆ ಕಾಣುತ್ತಿಲ್ಲ. ನೀವು ಯಾರು? ನಿಮ್ಮ ಹೆಸರೇನು ಎಂದಳು ದಮಯಂತಿ.

39. ದೂತರಲಿ ಕುಲಗೋತ್ರಗಳ ನೀ
ನೇತಕರಸುವೆ ತರುಣಿಯಿಂದ್ರನು
ಖ್ಯಾತಪುರುಷನು ಬಯಸುವುದು ಕೃತಪುಣ್ಯ ನಿನಗಿನ್ನು
ಭೂತಳದ ನರರಧಿಕರೇ ಸಂ
ಪ್ರೀತಿಯೇಕವರಲ್ಲಿ ಬಿಡು ಪುರು
ಹೂತನನು ಕೈವಿಡಿದು ನೀ ಸುಖಿಯಾಗು ನಡೆಯೆಂದ

ದೂತರಲಿ = ದೌತ್ಯಕ್ಕಾಗಿ ಬಂದವರಲ್ಲಿ; ಕುಲಗೋತ್ರಗಳ = ಯಾರು, ಎಲ್ಲಿಂದ ಇತ್ಯಾದಿ ವಿವರಗಳನ್ನು; ನೀನು + ಏತಕೆ + ಅರಸುವೆ = ನೀನೇಕೆ ಕಂಡು ಹಿಡಿಯಲು ಪ್ರಯತ್ನಿಸುವೆ; ತರುಣಿ + ಇಂದ್ರನು = ಯುವತಿಯೇ, ದೇವೇಂದ್ರನು; ಖ್ಯಾತ ಪುರುಷನು = ಪ್ರಸಿದ್ಧನಾದ ವೀರನು; ಬಯಸುವುದು = ನಿನ್ನನ್ನು ಇಷ್ಟಪಟ್ಟಿರುವುದು; ಕೃತ ಪುಣ್ಯ = ನೀನು ಮಾಡಿರುವ ಪುಣ್ಯದ ಫಲ; ನಿನಗೆ +

ಇನ್ನು = ಇನ್ನು ನಿನಗೆ; ಭೂತಳದ = ಈ ಭೂಮಂಡಲದ; ನರರಧಿಕರೇ = ಮಾನವ ಮಾತ್ರರು ಹೆಚ್ಚೇನು; ಸಂಪ್ರೀತಿಯೇಕೆ + ಅವರಲ್ಲಿ = ಅವರಲ್ಲೇಕೆ ಅಷ್ಟೊಂದು ಪ್ರೀತಿ; ಬಿಡು = ಆ ಆಸೆಯನ್ನು ಬಿಡು; ಪುರುಹೂತನನು = ದೇವೇಂದ್ರನನ್ನು; ಕೈವಿಡಿದು = ಕೈಹಿಡಿದು; ನೀ ಸುಖಿಯಾಗು = ನೀನು ಸುಖಿಯಾಗಿರು; ನಡೆಯೆಂದ = ಹೋಗಿ ಸಿದ್ಧಳಾಗು ಎಂದನು.

ರಾಯಭಾರಿಯಾಗಿ ಬಂದಿರುವವರ ಹೆಸರು, ಕುಲ, ಗೋತ್ರಗಳನ್ನು ತಿಳಿದುಕೊಳ್ಳುವ ಅವಶ್ಯಕತೆ ಏನಿದೆ? ತರಣಿಯೇ, ದೇವೇಂದ್ರನು ಖ್ಯಾತ ಪುರುಷನು, ಅನೇಕರಿಂದ ಹೊಗಳಿಕೆಗೆ ಒಳಗಾಗಿರುವಂಥವನು ಪುರುಹೂತನಂಥವನು ನಿನ್ನನ್ನು ಬಯಸುತ್ತಿರುವುದು ನಿನ್ನ ಪೂರ್ವಜನ್ಮಕೃತ ಫಲವೆಂದು ತಿಳಿ. ಅದು ಬಿಟ್ಟು ಭೂಲೋಕದ ಸಾಮಾನ್ಯ ಮನುಷ್ಯರು ನಿನಗೆ ಅಧಿಕವೆಂದು ತೋರಿದರೆ ಸರಿಯೆ? ಅವರಲ್ಲೇಕೆ ನಿನಗೆ ಅಷ್ಟು ಪ್ರೀತಿ. ಆ ಆಸೆಯನ್ನು ಬಿಟ್ಟು ದೇವೇಂದ್ರನ ಕೈಹಿಡಿದು ಸುಖವಾಗಿರು ಹೋಗು ಎಂದನು.

40. ಇಳೆಯ ಮರ್ತ್ಯರು ನಾಕನಿಳಯರಿ
ಗಳವೆಯಂತವರೆಲ್ಲ ನುಡಿಯಲು
ಕುಲಗಿರಿಗೆ ನೊರಜಂತರವೇ ನೀ ನೋಡು ಚಿತ್ತದಲಿ
ನಳನೃಪನ ಬಯಸುವಡೆ ನಿನಗವ
ನೊಲಿವನೇ ಧಾತ್ರೀಶರೊಳಗ
ಗ್ಗಳನೆ ಸಾಕೆಂದೆನಲು ಕನಲಿದು ನುಡಿದಳಾ ತರುಣಿ

ಇಳೆಯ = ಭೂಮಿಯ; ಮರ್ತ್ಯರು = ಜನನ ಮರಣಾದಿಗಳಲ್ಲಿ ತೊಳಲುವವರು; ನಾಕ ನಿಳಯರಿಗೆ + ಅಳವೆಯೆ + ಅಂತವರೆಲ್ಲ = ಸ್ವರ್ಗವೇ ಮನೆಯಾಗಿರುವಂಥ ಸುರರಿಗೆ ಸಮಾನರೇ, ಅಂತವರೆಲ್ಲ; ನುಡಿಯಲು = ಹೇಳುವುದಾದರೆ; ಕುಲಗಿರಿಗೆ ನೊರಜಂತರವೆ = ಅಚಲವಾದ ಮಹಾ ಕುಲ ಪರ್ವತಕ್ಕೆ ಗಾಳಿಯಲ್ಲಿ ತೂರಿಹೋಗುವಂತಹ ಕ್ಷುಲ್ಲಕ ಕೀಟ ಸಮಾನವಾಗಲು ಸಾಧ್ಯವೇ?; ನೀ ನೋಡು ಚಿತ್ತದಲಿ = ಮನಸ್ಸಿನಲ್ಲಿ ನೀನೇ ಆಲೋಚಿಸಿ ನೋಡು; ನಳನೃಪನ = ನಳ ಮಹಾರಾಜನ; ಬಯಸುವಡೆ = ಬಯಸುವುದಾದರೆ; ನಿನಗೆ +

ಅವನು + ಒಲಿವನೇ = ನಿನಗೆ ಅವನು ಒಲಿಯುತ್ತಾನೆಯೇ?; ಧಾತ್ರೀಶರೊಳಗೆ + ಅಗ್ಗಳನೆ = ಭೂಪಾಲಕರಲ್ಲಿ ಅವನು ಶ್ರೇಷ್ಠನೇ; ಸಾಕು + ಎಂದು + ಎನಲು = ಸಾಕುಮಾಡು ಎನ್ನಲು; ಕನಲಿದು = ಕೋಪದಿಂದ ಕೆರಳಿ; ನುಡಿದಳಾ = ನುಡಿದಳು; ಆ ತರುಣಿ = ದಮಯಂತಿ.

ಭೂಮಿಯಲ್ಲಿ ಜನನ ಮರಣಾದಿಯಲ್ಲಿ ತೊಳಲುವ ಸಾಮಾನ್ಯ ಮನುಷ್ಯರು, ಸ್ವರ್ಗದಲ್ಲಿ ಅಮರರಾಗಿ ಬದುಕುತ್ತಿರುವಂಥವರಿಗೆ ಸಮವೇ? 'ಕುಲ ಗಿರಿಗೆ ನೊರಜಂತರವೆ' ಎಂಬ ನಾಣ್ಣುಡಿಯಂತೆ ಶ್ರೇಷ್ಠವಾದ ಮಹಾ ಕುಲಪರ್ವತಕ್ಕೆ ಹಾರಾಡುತ್ತ ಗಾಳಿಯಲ್ಲಿ ತೂರಿಹೋಗುವ ಕ್ಷುಲ್ಲಕ ಕೀಟ ಸಮಾನವಾಗುವುದೇ? ನೀನೇ ಯೋಚಿಸಿನೋಡು, ನಳ ಮಹಾರಾಜನಾದರೂ ನಿನಗೊಲಿಯುತ್ತಾನೆಯೇ? ಹೋಗಲಿ, ಭೂಮಂಡಲಾಧೀಶರಲ್ಲೆಲ್ಲ ಅವನೇ ಶ್ರೇಷ್ಠನೇ? ಇಲ್ಲಿಗೆ ಸಾಕು ಮಾಡು ಎಂದು ಹೇಳಲು ದಮಯಂತಿಯು ಆ ಮಾತುಗಳನ್ನು ಕೇಳಿ ಸೈರಿಸಲಾಗದೆ ಸಿಟ್ಟಿನಿಂದ ಕೆರಳಿ ಅವನಿಗೆ ಮಾರುತ್ತರಿಸಿದಳು.

41. ಮಾನವಾಧೀಶ್ವರರೊಳಗೆ ಸನು
ಮಾನವುಳ್ಳವ ಸತ್ಯಸಂಧ ನಿ
ಧಾನಿ ಹಿಮಕರವಂಶಪಾವನ ಸಾರ್ವಭೌಮನೆಲೆ
ಆ ನರೇಂದ್ರಗೆ ಸರಿಯೆ ಮನುಮುನಿ
ದಾನವಾಮರರಿನ್ನು ನಿಮಗೀ
ಹೀನವೃತ್ತಿಯ ಮಾತದೇಕೆಂದಳು ಸರೋಜಮುಖಿ

ಮಾನವ + ಅಧೀಶ್ವರರ + ಒಳಗೆ = ಮಾನವ ಕುಲದ ಶ್ರೇಷ್ಠ ರಾಜಾಧಿರಾಜರಲ್ಲೆಲ್ಲ; ಸನ್ಮಾನವುಳ್ಳವ = ಬಹಳ ಗೌರವಯುತವಾಗಿ ಸನ್ಮಾನಿತನಾಗಿರುವವನು; ಸತ್ಯಸಂಧನು = ಸತ್ಯವಾದಿಯಾದವನು; ನಿಧಾನಿ = ಸಂಪದ್ಭರಿತನಾದವನು; ಹಿಮಕರವಂಶ ಪಾವನ = ಹಿಮಕರನೆನಿಸಿದ ಚಂದ್ರವಂಶವನ್ನು ಶ್ರೇಷ್ಠತೆಗೊಯ್ದವನು; ಸಾರ್ವಭೌಮನಲೆ = ಸಾಮ್ರಾಟನಲ್ಲವೆ; ಆ ನರೇಂದ್ರಗೆ = ಅಂತಹ ಭೂಶ್ರೇಷ್ಠದೊರೆಗೆ; ಸರಿಯೆ = ಸರಿಸಾಟಿಯೇ; ಮನು ಮುನಿದಾನವ + ಅಮರರಿನ್ನು = ಮನುಗಳು; ಮುನಿಗಳು, ದಾನವರು, ಅಮರರು; ನಿಮಗೆ + ಈ = ನಿಮಗೆ ಈ;

ಹೀನವೃತ್ತಿಯ = ಕೆಳದರ್ಜೆಯ; ಮಾತು + ಅದೇಕೆ + ಎಂದಳು = ಮಾತಿನ ಅವಶ್ಯಕತೆ ಏಕೆ ಬೇಕಿತ್ತು ಎಂದಳು; ಸರೋಜಮುಖಿ = ದಮಯಂತಿ.

ಮಾನವ ಕುಲದ ಶ್ರೇಷ್ಠತಮ ರಾಜಾಧಿರಾಜರಲ್ಲೆಲ್ಲ ಬಹಳ ಗೌರವಯುತ ನಾದವನೂ ಸನ್ಮಾನಿತನೂ ಸತ್ಯಸಂಧನೂ ಕುಬೇರನಂತೆ ಸಂಪದ್ಭರಿತನಾದವನೂ ಚಂದ್ರವಂಶದ ಹಿರಿಮೆಗೆ ಕಾರಣೀಭೂತನೂ ಚಕ್ರವರ್ತಿ ಸಾರ್ವಭೌಮನೂ ಆದಂತಹ ಈ ನಳಮಹಾರಾಜನಿಗೆ ದೇವ ದಾನವ ಮನು ಮುನಿಗಳು ಸರಿಸಮಾನರಾಗುವರೇನು? ನಿನಗೇಕೆ ಅವನನ್ನು ಕುರಿತು ಹೀಗಳೆಯುವ ಹೀನಬುದ್ಧಿ? ಎಂದಳು.

42. ನಿಷಧಪತಿಯೇ ಪತಿಯೆನುತ ಭಾ
ವಿಸಿದೆನಾತನ ಕರುಣವೆನ್ನಲಿ
ಪಸರಿಸಿದಡದು ಲೇಸು ಲೇಸಲ್ಲದೊಡೆ ನಳನೃಪಗೆ
ಅಸುವ ತೆರುವೆನು ಎನಗೆ ಫಲ ಸಿ
ದ್ಧಿಸಲಿದೇ ಸಂಕಲ್ಪವೆಂದಾ
ಶಶಿವದನೆ ಕಂಬನಿಯ ಮಿಡಿದಳು ನಖದ ಕೊನೆಯಲ್ಲಿ

ನಿಷಧಪತಿಯೇ = ನಿಷಧ ನಗರದ ಅರಸನೇ; ಪತಿಯೆನುತ = ನನಗೆ ಪತಿ ಎಂದು; ಭಾವಿಸಿದೆನು + ಆತನ + ನಾನು = ನಾನು ನಿಶ್ಚಯಿಸಿದ್ದೇನೆ. ಆತನ; ಕರುಣವೆನ್ನಲಿ = ಕೃಪೆಯು ನನ್ನ ಮೇಲೆ; ಪಸರಿಸಿದಡೆ + ಅದು = ಹಾಯ್ದರೆ ಅದು; ಲೇಸು = ಒಳ್ಳೆಯದು; ಲೇಸಲ್ಲದೊಡೆ = ಅದು ಹಾಗಾಗದಿದ್ದಲ್ಲಿ; ನಳನೃಪಗೆ = ನಳಮಹಾರಾಜನಿಗಾಗಿಯೇ; ಅಸುವ = ಪ್ರಾಣವನ್ನು; ತೆರುವೆನು = ನೀಗುತ್ತೇನೆ; ಎನಗೆ = ನನಗೆ; ಫಲ ಸಿದ್ಧಿಸಲು = ನನ್ನ ಮನೋಭೀಷ್ಟವು ಫಲಪ್ರದವಾಗಲು; ಇದೇ ಸಂಕಲ್ಪವೆಂದಾ = ಇದೇ ನಿರ್ಧಾರ ಎಂದು; ಆ ಶಶಿವದನೆ = ಸುಂದರಿ ದಮಯಂತಿಯು; ಕಣ್ + ಪನಿಯ = ಕಣ್ಣೀರನ್ನು; ಮಿಡಿದಳು = ತೊಡೆದುಕೊಂಡಳು; ನಖದ = ಉಗುರಿನ; ಕೊನೆಯಲ್ಲಿ = ತುದಿಯಿಂದ.

ಆ ಸಮಯಕ್ಕಾಗಲೇ ದೇವೇಂದ್ರನ ಬೇಡಿಕೆಯಂತಿರುವ ಪ್ರೇಮ ನಿವೇದನೆಯೂ, ನಳನ ದೌತ್ಯವೂ ದಮಯಂತಿಯನ್ನು ಸಾಕಷ್ಟು ವಿಹ್ವಲ ಳನ್ನಾಗಿಸಿತ್ತು, ಸಿಟ್ಟಿನಿಂದ ಕಿಡಿಕಿಡಿಯಾಗಿದ್ದರೂ ನಿಧಾನವಾಗಿ ನಳನೊಂದಿಗೆ ತನ್ನ ಮನದಳಲನ್ನು ತೋಡಿಕೊಂಡಳು. ನಿಷಧರಾಜ್ಯದ ಅರಸನಾದ ನಳನೃಪನೇ ನನಗೆ ಪತಿಯಾಗುವನು ಎಂದೇ ನಾನು ನಿಶ್ಚಯಿಸಿದ್ದೇನೆ. ಅವನು ಕರುಣೆಯಿಂದ ನನ್ನ ಮನಃಸಂಕಲ್ಪವನ್ನು ಮನ್ನಿಸಿದರೆ ಒಳ್ಳೆಯದು. ಇಲ್ಲವಾದರೆ ಅವನಿಗಾಗಿ ನಾನು ನನ್ನ ಪ್ರಾಣವನ್ನೇ ತೊರೆಯುತ್ತೇನೆ ಎನ್ನುತ್ತಾ ದುಃಖದಿಂದ ಉಕ್ಕಿ ಬಂದ ಕಂಬನಿಯನ್ನು ಉಗುರ ಮೊನೆಯಿಂದ ತೊಡೆದುಕೊಂಡಳು.

43. ಕರಗಿತಂತಃಕರಣ ನೃಪತಿಗೆ
ಸರಸಿಜಾಕ್ಷಿಯ ದೃಢವ ಕಂಡನು
ಕರುಣಲತೆ ಕುಡಿದೋರಿತಾಕ್ಷಣ ನುಡಿದನಾ ಸತಿಗೆ
ಸರಸಿಜಾನನೆ ಕೇಳು ತಾನೇ
ಧರಣಿಪತಿ ನಳನೆನಲು ಲಜ್ಜಿಸಿ
ಶಿರವ ನಸು ಬಾಗಿದಳು ಮತ್ತಿಂತೆಂದಳಾ ನೃಪಗೆ

ಕರಗಿತಂತಃಕರಣ = ಮನಸ್ಸು ದ್ರವಿಸಿತು; ನೃಪತಿಗೆ = ನಳನೃಪನಿಗೆ; ಸರಸಿಜಾಕ್ಷಿಯ = ಕಮಲದ ಕಣ್ಣವಳ; ದೃಢವ ಕಂಡನು = ದೃಢ ನಿಶ್ಚಯವನ್ನು ಅರ್ಥ ಮಾಡಿಕೊಂಡನು; ಕರುಣಲತೆ = ಕರುಣೆಯ ಬಳ್ಳಿ; ಕುಡಿ + ತೋರಿತು + ಆ ಕ್ಷಣ = ಚಿಗುರೊಡೆಯಿತು. ಆ ಕ್ಷಣವೇ; ನುಡಿದನು + ಆ ಸತಿಗೆ = ಅವಳಿಗೆ ಹೇಳಿದನು; ಸರಸಿಜಾನನೇ = ಕಮಲದಂತೆ ಮುಖವುಳ್ಳವಳೇ; ಕೇಳು = ಆಲಿಸು; ತಾನೇ = ನಾನೇ; ಧರಣಿಪತಿ = ನಿಷಧ ಭೂಮಿಯ ಒಡೆಯ; ನಳನು + ಎನಲು = ನಳಮಹಾರಾಜನು ಎಂದು ಹೇಳಲು; ಲಜ್ಜಿಸಿ = ನಾಚಿ; ಶಿರವ = ತಲೆಯನ್ನು; ನಸು ಬಾಗಿದಳು = ತುಸುವೇ ತಗ್ಗಿಸಿ ಕೊಂಡಳು; ಮತ್ತೆ + ಇಂತು + ಎಂದಳು + ಆ = ಮಾತು ಮುಂದುವರೆಸುತ್ತಾ ಹೇಳಿದಳು; ಆ ನೃಪಗೆ ನಳಮಹಾರಾಜನಿಗೆ.

ದಮಯಂತಿಯ ಮನದಳಲನ್ನು, ನಳಮಹಾರಾಜನ ಕುರಿತು ಅವಳು ತಾಳಿದ್ದ ದೃಢ ನಿಶ್ಚಯವನ್ನು ನಳನೊಂದಿಗೆ ಪ್ರಕಟವಾಗಿ ಹೇಳಿಕೊಂಡು ಕಣ್ಣೀರು ಮಿಡಿದುದನ್ನು ಕಂಡ ನಳನ ಹೃದಯ ದ್ರವಿಸಿಹೋಯಿತು. ಕರುಣೆ ಉಕ್ಕಿ ಬಂತು.

ಆ ಕ್ಷಣವೇ ಅವಳಿಗೆ ತಾನೇ ನಿಷಧನಗರದ ಮಹಾರಾಜ ನಳನೆಂಬುದನ್ನು ಹೇಳಿಕೊಳ್ಳಲು, ಕಮಲದಂತೆ ಸುಂದರವದನೆಯಾದ ದಮಯಂತಿಯು ನಸುನಾಚಿ ತುಸುವೇ ತಲೆಬಾಗಿದರೂ, ಮತ್ತೆ ಹೇಳಲನುವಾದಳು.

44. ನಾಕನಿಳಯರು ಕುಟಿಲವಿದ್ಯರ
ನೇಕಮಾಯಾವಿದರು ಧರೆಯೊಳು
ಪ್ರಾಕೃತರು ನಾವ್ ನಿಮ್ಮ ನಂಬುವ ಪರಿಯದೆಂತೆನಗೆ
ಸಾಕು ಮನ ನಂಬುವರೆ ಹೃದಯದ
ಜೋಕೆಯಲಿ ಕುರುಹೆನಗೆ ತೋರೆನ
ಲಾ ಕಮಲಲೋಚನೆಗೆ ನುಡಿದನು ನೃಪ ನಿದರ್ಶನವ

ನಾಕ ನಿಳಯರು = ಸ್ವರ್ಗದಲ್ಲಿ ವಾಸಿಸುವ ದೇವತೆಗಳು; ಕುಟಿಲ ವಿದ್ಯರು + ಅನೇಕ ಮಾಯಾವಿದರು = ವಂಚಕರು ಮತ್ತು ಅನೇಕ ಮಾಯೆಗಳನ್ನು ತಿಳಿದವರು; ಧರೆಯೊಳು = ಭೂಲೋಕದಲ್ಲಿರುವ; ಪ್ರಾಕೃತರು ನಾವ್ = ಅಸಂಸ್ಕೃತರು, ಪಾಮರರು ನಾವು; ನಿಮ್ಮ ನಂಬುವ = ನಿಮ್ಮನ್ನು ನಂಬುವ; ಪರಿ + ಅದೆಂತು + ಎನಗೆ = ರೀತಿ ಯಾವುದು ನನಗೆ; ಸಾಕು ಮನ ನಂಬುವರೆ = ಅದಿರಲಿ, ನನ್ನ ಮನಸ್ಸು ನಂಬುವಂತಹ; ಹೃದಯದ = ಮನಸ್ಸಿನ; ಜೋಕೆಯಲಿ = ಪ್ರಮಾಣವಿಟ್ಟುಕೊಂಡು; ಕುರುಹೆನಗೆ = ಸಾಕ್ಷಿಯನ್ನು ನನಗೆ; ತೋರು + ಎನಲು + = ತೋರಿಸಿ ಎಂದು ಹೇಳಲು, ನೃಪನು = ನಳನು; ಕಮಲ ಲೋಚನೆಗೆ = ಸುಂದರಿಯಾದ ದಮಯಂತಿಗೆ; ನುಡಿದನು = ಹೇಳಿದನು; ನಿದರ್ಶನವ = ಪ್ರಮಾಣೀಕರಿಸುವ ಸಾಕ್ಷ್ಯವನ್ನು.

ಸ್ವರ್ಗದಲ್ಲಿ ವಾಸಿಸುವ ದೇವತೆಗಳು ವಂಚಕರು, ಮಾಯಾ ವಿದ್ಯೆಗಳನ್ನು ತಿಳಿದವರು. ಭೂಲೋಕದಲ್ಲಿರುವ ನಾವಾದರೋ ಅಸಂಸ್ಕೃತರು, ಪಾಮರರು. ಹಾಗಾಗಿ ನಿಮ್ಮನ್ನು ಯಾವ ರೀತಿ ನಂಬುವುದೆಂದು ನನಗೆ ತಿಳಿಯದಾಗಿದೆ. ನಮ್ಮ ಮನಸ್ಸಿಗೆ ನಂಬಿಕೆ ಬರುವಂತಹ ಯಾವುದಾದರೂ ಸಾಕ್ಷ್ಯವನ್ನು, ಕುರುಹನ್ನು ತೋರಿಸಿ ಎಂದು ದಮಯಂತಿಯು ಕೇಳಲು ತಾನು ನಳಮಹಾರಾಜನೆಂದು ಪ್ರಮಾಣೀಕರಿಸುವ ಸ್ವಾಕ್ಷ್ಯವನ್ನು ನಳನು ನುಡಿದನು.

45. ವನಜಮುಖಿ ನಿನ್ನಂತರಂಗದ
ಮನವ ಕಾಣುವ ಬಗೆಯೊಳಾನಿಂ
ದಿನಲಿಯನಿಮಿಷನೆಂದು ಪೇಳಿದೆಯಿದರ ತಪ್ಪೇನು
ಮನದ ಸಂಶಯವೇನು ಹಂಸೆಯ
ನಿನಗೆ ಕಳುಹಿದೆ ರಾಯಭಾರದಿ
ವನಿತೆ ನೀನಿದ ತಿಳಿದು ನಂಬುವುದೆನ್ನ ನೀನೆಂದ

ವನಜಮುಖಿ = ತಾವರೆಯಂತಹ ಮುಖ ಸೌಂದರ್ಯವುಳ್ಳವಳೇ; ನಿನ್ನಂತರಂಗದ = ನಿನ್ನ ಹೃದಯದ ಸ್ಪಂದನವನ್ನು; ಮನವ ಕಾಣುವ = ಮನಸ್ಸಿನ ಲಹರಿ ಎಂಥದೆಂಬುದನ್ನು ತಿಳಿಯುವ; ಬಗೆಯೊಳ್ + ಆನ್ + ಇಂದಿನಲಿ + ಅನಿಮಿಷನೆಂದು = ರೀತಿಗಾಗಿ ನಾನು ಇಂದು ಅನಿಮಿಷನೆಂದು; ಪೇಳಿದೆ + ಇದರ = ಹೇಳಿದೆನು ಇದರಲ್ಲಿ; ತಪ್ಪೇನು = ತಪ್ಪೇನಿದೆ; ಮನದ = ಮನಸ್ಸಿನಲ್ಲಿ; ಸಂಶಯವೇನು = ಏಕೆ ಅನುಮಾನ; ಹಂಸೆಯ = ಹಂಸೆಯನ್ನು; ನಿನಗೆ ಕಳುಹಿದೆ = ನಿನ್ನಲ್ಲಿ ಕಳುಹಿದ್ದೆ; ರಾಯಭಾರದಿ = ರಾಯಭಾರಕ್ಕಾಗಿ; ವನಿತೆ = ಹೆಣ್ಣೇ; ನೀನಿದ ತಿಳಿದು = ನೀನು ಇದನ್ನು ಚಿಂತಿಸಿ, ಅರ್ಥಮಾಡಿಕೊಂಡು; ನಂಬುವುದೆನ್ನ = ನನ್ನನ್ನು ನಂಬು; ನೀನೆಂದ = ನೀನು ಎಂದ.

ತಾವರೆಯಂತಹ ಸುಂದರ ವದನೆಯೇ, ನನ್ನ ಕುರಿತು ನಿನ್ನ ಹೃದಯ ಸ್ಪಂದನವು ಹೇಗಿರುವುದೆಂದು ಅರಿಯುವುದಕ್ಕಾಗಿ ನನ್ನನ್ನು ನಾನು ಅನಿಮಿಷನೆಂದು ಪರಿಚಯಿಸಿಕೊಂಡಿದ್ದೆ. ಇದರಲ್ಲಿ ತಪ್ಪೇನು? ಮನಸ್ಸಿನಲ್ಲಿ ಅನುಮಾನಿಸುವುದೇತಕ್ಕೆ? ರಾಯಭಾರಿಯಾಗಿ ನನ್ನ ಪ್ರೇಮ ಸಂದೇಶವನ್ನು ಹಂಸೆಯು ನಿರ್ವಹಿಸಿರುವುದನ್ನು ನೆನೆದು ಅರ್ಥಮಾಡಿಕೊಂಡು, ನನ್ನನ್ನು ನಂಬು ಎಂದು ನಳನು ದಮಯಂತಿಗೆ ತನ್ನ ನಿಜಸ್ವರೂಪದ ಸಾಕ್ಷ್ಯವನ್ನು ಪ್ರಮಾಣೀಕರಿಸಿದನು.

46. ನಳನೆನಲು ತನು ಪುಳಕಜಲದಲಿ
ಮುಳುಗಿ ಹೊಂಪುಳಿಯೋಗಿ ತನ್ನಯ
ಕೆಳದಿಯರ ಮರೆಗೊಂಡು ಹರುಷದ ಹೃದಯಭೀತಿಯಲಿ
ತೊಲಗಿದಳು ನೃಪನಿತ್ತ ಪುರವನು

ಕಳೆದು ಬಂದನು ಮನದ ವಿರಹದಿ
ಬಳಲುತಿಹ ದೇವೇಂದ್ರನಿದ್ದೆಡೆಗಾಗಿ ವಹಿಲದಲಿ

ನಳನೆನಲು = ನಳನು ಈ ರೀತಿ ಹೇಳಲು; ತನು = ದೇಹವು; ಪುಳಕಜಲದಲಿ = ರೋಮಾಂಚನದಲಿ; ಹೊಂಪುಳಿ + ಯೋಗಿ = ಹಿಗ್ಗಿಹೋಯಿತು; ತನ್ನಯ = ತನ್ನ; ಕೆಳದಿಯರ = ಗೆಳತಿಯರ; ಮರೆಗೊಂಡು = ಹಿಂದೆ ಮರೆಯಾಗಿ; ಹರುಷದ = ಸಂತೋಷದ; ಹೃದಯ ಭೀತಿಯಲಿ = ಹಾಗೂ ಭೀತ ಹೃದಯದೊಂದಿಗೆ; ತೊಲಗಿದಳು = ಅಲ್ಲಿಂದ ಹೊರಟು ಹೋದಳು; ನೃಪನಿತ್ತ = ಇತ್ತ ನಳನೃಪನು; ಪುರವನು = ವಿದರ್ಭಪುರವನ್ನು; ಕಳೆದು ಬಂದನು = ಬಿಟ್ಟು ಹೊರಬಂದನು; ಮನದ ವಿರಹದಿ = ಮನಸ್ಸಿನಲ್ಲಿ ಕಾಡುತ್ತಿದ್ದ ವಿರಹದಿಂದ; ಬಳಲುತಿಹ = ತೊಳಲಾಡುತ್ತಿದ್ದ; ದೇವೇಂದ್ರನು + ಇದ್ದ + ಎಡೆಗಾಗಿ = ದೇವೇಂದ್ರನು ಇದ್ದ ಸ್ಥಳದತ್ತ; ವಹಿಲದಲಿ = ಆತುರಾತುರವಾಗಿ.

ನಳನ ಮಾತಿನ ಸ್ಪಷ್ಟೀಕರಣದಿಂದ ದಮಯಂತಿಯ ದೇಹವು ರೋಮಾಂಚನಗೊಂಡು ಹೃದಯವು ಸಂತೋಷದಿಂದ ಹಿಗ್ಗಿಹೋಯಿತು. ಅತೀವ ಸಂತೋಷದಿಂದಲೂ, ಭೀತ ಹೃದಯದಿಂದಲೂ ಗೆಳತಿಯರ ಹಿಂದೆ ಮರೆಯಾಗಿ ಮೆಲ್ಲನೆ ಹೊರಟುಹೋದಳು. ಇತ್ತ, ನಳನು ವಿದರ್ಭಪುರದಿಂದ ಹೊರಹೊರಟು, ವಿರಹದಿಂದ ಬಳಲಿ ನವೆಯುತ್ತಿದ್ದ ದೇವೇಂದ್ರನಿರುವತ್ತ ಬೇಗಬೇಗನೆ ಆತುರದಿಂದ ಬಂದನು.

47. ಬಂದು ಭಯಭೀತಿಯಲಿ ನಳನೃಪ
ನಿಂದ್ರ ಮಾರುತ ಯಮ ವರುಣರಿಗೆ
ವಂದಿಸುತ ದಮಯಂತಿ ಪೇಳಿದ ಮಾತ ವಿವರಿಸಲು
ಒಂದು ನಿನ್ನಲಿ ಕುಟಿಲವಿಲ್ಲರ
ವಿಂದವದನೆಯರಿಂದ ಕೇಳಿದೆ
ವೆಂದು ಸಂತೈಸಿದರು ಭಯಗೊಂಡಿಹ ನೃಪಾಲಕನ

ಬಂದು ಭಯಭೀತಿಯಲಿ = ಭಯಭೀತಿಯಿಂದ ದೇವೇಂದ್ರನಿದ್ದಲ್ಲಿಗೆ ಬಂದು; ನಳನೃಪನಿಂದ್ರ = ನಳನೃಪನು + ಇಂದ್ರ = ನಳಮಹಾರಾಜನು

ದೇವೇಂದ್ರ; ಮಾರುತ = ವಾಯು; ಯಮ = ಯಮಧರ್ಮ ಮತ್ತು ವರುಣರಿಗೆ; ವಂದಿಸುತ = ನಮಸ್ಕರಿಸುತ್ತ; ದಮಯಂತಿ = ದಮಯಂತಿಯು; ಪೇಳಿದ = ಹೇಳಿದ; ಮಾತ = ಮಾತನ್ನು; ವಿವರಿಸಲು = ವಿವರಿಸಿ ಹೇಳಲು; ಒಂದು ನಿನ್ನಲಿ = ನಿನ್ನ ಕಡೆಯಿಂದ ಏನೂ; ಕುಟಿಲವಿಲ್ಲ + ಅರವಿಂದ ವದನೆಯರಿಂದ = ಕಪಟವಿಲ್ಲ, ದೇವವನಿತೆಯರಿಂದ; ಕೇಳಿದೆವು + ಎಂದು; ಎಲ್ಲವನ್ನೂ ಕೇಳಿ ತಿಳಿದುಕೊಂಡೆವು ಎಂದು; ಸಂತೈಸಿದರು = ಸಮಾಧಾನಿಸಿದರು; ಭಯಗೊಂಡಿಹ = ದೌತ್ಯವು ಸಫಲವಾಗದಿದ್ದುದರಿಂದ ಭಯಗೊಂಡಿದ್ದ; ನೃಪಾಲಕನ = ನಳಭೂಪಾಲನನ್ನು.

ದಮಯಂತಿಯಲ್ಲಿ ತನ್ನ ಹೃದಯಸ್ಪಂದನೆಯನ್ನು ಸ್ಪಷ್ಟಪಡಿಸಿ ಅವಳನ್ನೂ ಹರ್ಷದಲ್ಲಿ ಮೀಯಿಸಿದ್ದ ನಳನು ತಾನೂ ಉಲ್ಲಸಿತನಾಗಿದ್ದರೂ ದೇವೇಂದ್ರನ ಭಿನ್ನಹವನ್ನು ನೆರವೇರಿಸಲಾಗದುದರಿಂದ ಭೀತನಾಗಿ, ಇಂದ್ರ, ಮರುತ, ಯಮ, ವರುಣರಿಗೆ ನಮಸ್ಕರಿಸಿ, ದಮಯಂತಿಯ ನಿರ್ಧಾರವನ್ನು ವಿವರಿಸಿದನು. ಅದಕ್ಕೆ ಮೊದಲೇ ಆ ವಿಷಯವನ್ನು ದೇವವನಿತೆಯರಿಂದ ತಾವು ತಿಳಿದದ್ದಾಗಿಯೂ, ನಳನು ಭೀತನಾಗುವ ಆವಶ್ಯಕತೆ ಇಲ್ಲವೆಂದೂ ಅವರೇ ಅವನನ್ನು ಸಮಾಧಾನ ಹೇಳಿದರು.

48. ನಳಿನಮುಖಿಯರ ಕಪಟಚಿತ್ತವ
ತಿಳಿಯಲಾರಿಗೆ ಸಾಧ್ಯ ಕೇಳೈ
ನಳನೃಪತಿ ನಮಗಾಗಿ ಬಳಲಿದೆಯೆನುತಲುಪಚರಿಸಿ
ಒಲಿದು ಭೂಷಣವಿತ್ತು ಕಳುಹಿದ
ರಿಳೆಯ ವಲ್ಲಭನಲ್ಲಿ ತಾವ್ ತ
ಮ್ಮೊಳಗೆಯಾಲೋಚಿಸಿದರಾಯಿಂದ್ರ ಯಮ ಮಾರುತರು

ನಳಿನಮುಖಿಯರ = ಕಮಲದಂತೆ ಮನೋಹರವಾದ ಮುಖವುಳ್ಳ ಸುಂದರ ಸ್ತ್ರೀಯರ; ಕಪಟ ಚಿತ್ತವ = ಹೊರಗೇ ಬೇರೆ ರೀತಿಯಲ್ಲಿ ಕಾಣಿಸಿಕೊಳ್ಳುವಂತಹ ಕಪಟ ಮನಸ್ಸನ್ನು; ತಿಳಿಯಲು + ಆರಿಗೆ = ಅರ್ಥಮಾಡಿಕೊಳ್ಳಲು ಯಾರಿಗೆ; ಸಾಧ್ಯ ಕೇಳೈ = ಸಾಧ್ಯ? ಎಲೈ ಕೇಳು; ನಳನೃಪತಿ

= ನಳಮಹಾರಾಜನೇ; ನಮಗಾಗಿ = ನಮ್ಮ ಮನೋಭಿಲಾಷೆಗಾಗಿ; ಬಳಲಿದೆ + ಎನುತಲು + ಉಪಚರಿಸಿ = ಆಯಾಸಗೊಂಡೆ ಎಂದು ಉಪಚರಿಸಿ; ಒಲಿದು = ಪ್ರೀತಿಯಿಂದ; ಭೂಷಣವನಿತ್ತು = ಉತ್ತಮ ವಸ್ತ್ರಾಭರಣಗಳನ್ನು ನೀಡಿ; ಕಳುಹಿದರು + ಇಳೆಯ = ಕಳುಹಿದರು ಭೂಮಂಡಲದ; ವಲ್ಲಭನ + ಅಲ್ಲಿ = ದೊರೆಯನ್ನು, ಅಲ್ಲಿ; ತಾವ್ = ತಾವು; ತಮ್ಮೊಳಗೆ + ಆಲೋಚಿಸಿದರು + ಆ + ಇಂದ್ರ + ಯಮ + ಮಾರುತರು = ಆ ಇಂದ್ರ ಯಮ ಮಾರುತರು ತಮ್ಮ ತಮ್ಮೊಳಗೆ ಆಲೋಚಿಸಿದರು.

ಇಂದ್ರ ವರುಣ ಮಾರುತರೆಲ್ಲರೂ ನಳನು ತಮಗಾಗಿ ಬಳಲಿದುದನ್ನು ಕುರಿತು ಹೇಳಿ ಅವನನ್ನು ಸಂತೈಸಿ, ಸ್ತ್ರೀಯರೇ ಹೀಗೆ, ಎಂದಿಗೂ ಮನಸ್ಸಿನ ಒಳಗನ್ನು ತೆರೆದು ತೋರದ ಕಪಟಿಗಳು, ಚಿಂತಿಸುವ ಅಗತ್ಯವಿಲ್ಲ ಎಂದು ಸಮಾಧಾನಿಸಿ, ಪ್ರೀತಿಯಿಂದ ಉತ್ತಮ ವಸ್ತ್ರ ಒಡವೆಗಳನಿತ್ತು ಕಳುಹಿಸಿ, ಮುಂದೇನು ಎಂದು ತಮ್ಮ ತಮ್ಮೊಳಗೇ ಸಮಾಲೋಚಿಸಿಕೊಂಡರು.

49. ಲಲನೆಯೊಲಿವುದಕಿನ್ನು ಹದನಿದು
ಹಲವು ಮಾತೇನೆಂದು ನಾಲ್ವರು
ನಳನ ರೂಪನು ತಾಳ್ದರಿತ್ತಲು ಧರಣಿವಲ್ಲಭರು
ನಲಿದು ಬರುತಿರೆ ಸ್ವರ್ಗ ಮರ್ತ್ಯಾ
ವಳಿಯ ಸುಜನರು ಸಿದ್ಧ ಕಿನ್ನರ
ರೊಲಿದು ಗುಹ್ಯಕ ಗರುಡ ಗಂಧರ್ವಾದಿ ಸುರರಲ್ಲಿ

ಲಲನೆ + ಒಲಿವುದಕೆ + ಇನ್ನು = ದಮಯಂತಿಯು ಒಲಿಯುವುದಕ್ಕೆ ಇನ್ನು; ಹದನು + ಇದು = ಇದೇ ಸರಿಯಾದ ಕ್ರಮ; ಹಲವು = ಬೇರೆ ಇನ್ನಿತರ; ಮಾತು + ಏನೆಂದು = ಮಾತುಗಳನ್ನಾಡಿ ಪ್ರಯೋಜನವೇನೆಂದು; ನಾಲ್ವರು = ನಾಲ್ಕು ಜನರು; ನಳನ ರೂಪನು = ನಳನಂತೆಯೇ ರೂಪವನ್ನು; ತಾಳ್ದರು + ಇತ್ತಲು = ತಾಳಿದರು ಇತ್ತ; ಧರಣಿವಲ್ಲಭರು = ರಾಜಾಧಿರಾಜರು; ನಲಿದು ಬರುತಿರೆ = ಸಂತೋಷದಿಂದ ಬರುತ್ತಿರಲು; ಸ್ವರ್ಗ = ಸ್ವರ್ಗದಿಂದಲೂ; ಮರ್ತ್ಯಾವಳಿಯ = ಭೂಲೋಕದ ವಿವಿಧ ಪ್ರದೇಶಗಳಿಂದಲೂ; ಸುಜನರು =

ಸಜ್ಜನರು, ಸಿದ್ಧ ಕಿನ್ನರರು = ಸಿದ್ಧರು, ಕಿನ್ನರರು; ಒಲಿದು = ಪ್ರೀತಿಯಿಂದ; ಗುಹ್ಯಕ = ಕುಬೇರ; ಗರುಡ = ಗರುತ್ಮಂತನು; ಗಂಧರ್ವಾದಿ = ಗಂಧರ್ವವೇ ಮೊದಲಾದ; ಸುರರು + ಅಲ್ಲಿ ನೆರೆಯಿತು = ದೇವಗಣದವರು ಅಲ್ಲಿ ಬರುತ್ತಿರಲು,

ನಳಮಹಾರಾಜನ ದೌತ್ಯವು ನಿಷ್ಫಲವಾಗಲು, ನಿರಾಳರಾಗದ ಇಂದ್ರ, ವರುಣ, ಯಮ, ಮಾರುತರು ಎಲ್ಲರೂ ನಳನ ರೂಪನ್ನೇ ಧರಿಸಿ ಹೋಗುವು ದೆಂದು ನಿಶ್ಚಯಿಸಿಕೊಂಡು ಅಂತೆಯೇ ಹೋದರು. ಇತ್ತ ವಿದರ್ಭನಗರಕ್ಕೆ ಭೂಲೋಕದ ಎಲ್ಲ ಪ್ರದೇಶಗಳ ರಾಜಾಧಿರಾಜರು, ಸಜ್ಜನರು, ಸಿದ್ಧರು, ಕಿನ್ನರರು, ಕುಬೇರ, ಗರುಡ ಗಂಧರ್ವರಾದಿ ಸಕಲ ಸುರಗಣವೂ ಬಂದು ನೆರೆದರು.

50. ನೆರೆದುದಗಣಿತದರಸುಗಳು ಕರಿ
ತುರಗ ರಥ ಪಾಯ್ದಳದ ಸಂದಣಿ
ಮೆರೆವ ಶಂಖ ಮೃದಂಗ ತಂಟಬ ಭೇರಿ ನಿಸ್ಸಾಳ
ಉರುಬಿತಲ್ಲಿ ವಿದರ್ಭಪುರಪತಿ
ಧರಿಸಲಾಪನೆ ಹರಮಹಾದೇ
ವರಸ ಬಣ್ಣಿಸಲರಿಯೆ ನೆರೆದ ಮಹಾಮಹೀಸುರರ

ನೆರೆದುದು + ಅಗಣಿತದ + ಅರಸುಗಳು – ಅಸಂಖ್ಯಾತವಾಗಿ ರಾಜಾಧಿ ರಾಜರು ನೆರೆದರು; ಕರಿ = ಆನೆ; ತುರಗ = ಕುದುರೆ; ರಥ = ರಥಗಳು (ತೇರು); ಪಾಯ್ದಳ = ಕಾಲಾಳುಗಳ; ಸಂದಣಿ = ಸಮೂಹ; ಮೆರೆವ = ವೈಭವದಿಂದ ತೋರುವ; ಶಂಖ = ಶಂಖ; ಮೃದಂಗ = ಮೃದಂಗ; ತಂಬಟ = ತಮಟೆ; ಭೇರಿ = ದೊಡ್ಡನಗಾರಿ; ನಿಸ್ಸಾಳ = ಡೋಲು; ಉರುಬಿತಲ್ಲಿ = ಬೊಬ್ಬಿರಿಯಿತು ಅಲ್ಲಿ; ವಿದರ್ಭಪುರಪತಿ = ವಿದರ್ಭಪುರಾಧೀಶನು; ಧರಿಸಲು + ಆಪನೆ = ಎಲ್ಲವನ್ನು ನಿರ್ವಹಿಸಲು ಸಾಧ್ಯವೇ; ಹರಮಹಾದೇವರಸ = ಹರ ಮಹಾದೇವ, ಧರ್ಮರಾಯನೇ; ಬಣ್ಣಿಸಲರಿಯೆ = ವರ್ಣಿಸಲು ಸಾಧ್ಯವಿಲ್ಲ; ನೆರೆದ = ಸಂದಣಿಸಿದ; ಮಹಾಮಹೀಸುರರ = ಮಹಾ ಭೂಮಂಡಲಾಧಿಪರನ್ನು.

ವಿದರ್ಭ ನಗರದಲ್ಲಿ ಮಹಾರಾಜಾಧಿರಾಜರ ಸಮೂಹವೇ ನೆರೆಯಿತು. ರಥ, ಅಶ್ವದಳ, ಆನೆಗಳು, ರಥಗಳು, ಕಾಲಾಳುಗಳ ಸಮೂಹದೊಂದಿಗೆ, ಶಂಖ,

ಮೃದಂಗ, ತಮ್ಮಟೆ, ಭೇರಿ, ಡೋಲು, ಮುಂತಾದ ವಾದ್ಯಗಳು ಬೊಬ್ಬಿರಿಯುತ್ತ ವಿಜೃಂಭಣೆಯಿಂದ ಹೊರಟು ವಿದರ್ಭನಗರದ ವೈಭವೋಪೇತ ಉತ್ಸವಕ್ಕೆ ಮೆರಗುಗೂಡಿಸಿದುವು. ಹರಮಹಾದೇವ! ಧರ್ಮರಾಯನೇ ಕೇಳು, ವಿದರ್ಭಪುರದ ರಾಜಾಧಿಪನಿಂದ ಎಲ್ಲವನ್ನೂ ನಿರ್ವಹಿಸಲು ಸಾಧ್ಯವಾದೀತೇ ಎಂಬಷ್ಟು ಅಗಾಧ ವಾಗಿ, ವರ್ಣಿಸಲಸಾಧ್ಯವೆಂಬಂತೆ ಮಹಾ ಭೂಮಂಡಲಾಧಿಪರ ಮಹಾಮೇಳವೇ ಅಲ್ಲಿ ನೆರೆದಿತ್ತು,

51. ಅವರವರ ಕರೆಕರೆದು ವಿನಯದೊ
ಳವರವರ ಮರಿಯಾದೆ ಮೇರೆಯೊ
ಳವರವರ ಸತ್ಕರಿಸಿ ಕುಳ್ಳಿರಿಸಿದನು ಭೀಮನೃಪ
ಅವರವರಿಗುಚಿತೋಪಚಾರದೊ
ಳವರವರ ಮನ್ನಿಸುತಲಿರ್ದನು
ಭುವನಪತಿಗಳನೇಕರನು ಸಭೆಯೊಳಗೆ ಕೇಳೆಂದ

ಅವರವರ = ಒಬ್ಬೊಬ್ಬರನ್ನು ಗುರುತಿಸಿ; ಕರೆಕರೆದು = ಮರ್ಯಾದೆ ಯಿಂದ ಬರಮಾಡಿಕೊಂಡು; ವಿನಯದೊಳ್ = ಗೌರವಪೂರ್ವಕವಾಗಿ; ಅವರವರ = ಒಬ್ಬೊಬ್ಬರನ್ನು; ಮರಿಯಾದೆ ಮೇರೆಯೊಳ್ = ಅಂತಸ್ತು ಪದವಿಗಳ ಯೋಗ್ಯತೆ ಗಳಿಗನುಸಾರವಾಗಿ; ಅವರವರ ಸತ್ಕರಿಸಿ = ಒಬ್ಬೊಬ್ಬರನ್ನು ಆದರಿಸಿ; ಕುಳ್ಳಿರಿಸಿದನು = ಸ್ಥಾನಸ್ಥಗೊಳಿಸಿದನು; ಭೀಮನೃಪ = ಭೀಮಮಹಾರಾಜನು; ಅವರವರಿಗೆ + ಉಚಿತ + ಉಪಚಾರದೊಳು + ಅವರವರ = ಅವರವರಿಗೆ ತಕ್ಕಂತೆ ಸಲ್ಲುವ ಉಪಚಾರಾದಿಗಳನ್ನು ಅವರವರಿಗೆ ಮಾಡಿ; ಅವರವರ ಮನ್ನಿಸುತಲಿರ್ದನು = ಪ್ರತಿಯೊಬ್ಬರಿಗೂ ಮನ್ನಣೆಯನ್ನು ನೀಡಿ ಗೌರವಿಸುತ್ತಿದ್ದನು; ಭುವನಪತಿಗಳು + ಅನೇಕರನು = ಅನೇಕಾನೇಕ ರಾಜಾಧಿರಾಜರ ಸಮೂಹವನ್ನು; ಸಭೆಯೊಳಗೆ ಕೇಳೆಂದ = ಆ ಉತ್ಸವದಲ್ಲಿ ನೆರೆದಿದ್ದ ಸಭೆಯಲ್ಲಿ, ಕೇಳು ಅರಸನೇ ಎಂದನು.

ಅರಸನೇ ಕೇಳು, ರಾಜಾಧಿರಾಜನಾದ ವಿದರ್ಭಪುರದರಸನು ತನ್ನ ಆಹ್ವಾನದ ಮೇರೆಗೆ ಬಂದು ನೆರೆದಿದ್ದ ಅಸಂಖ್ಯಾತ ಭೂಮಂಡಲಾಧಿಪರನ್ನು, ಅವರವರ ಸ್ಥಾನಮಾನ, ಪದವಿ, ಪಟ್ಟ, ಘನತೆ ಗೌರವಾದಿಗಳನುಸಾರವಾಗಿ

ಒಬ್ಬೊಬ್ಬರನ್ನೂ ಗುರುತಿಸಿ ಉಪಚರಿಸಿ ಕರೆತಂದು ಅವರವರ ಯೋಗ್ಯತಾನು ಸಾರವಾದ ಆಸನಗಳಲ್ಲಿ ಕುಳ್ಳಿರಿಸಿ ಆದರಿಸಿದನು.

'ಅವರವರ' ಎಂಬುದನ್ನು ಪುನರಾವರ್ತಿಸುವಲ್ಲಿ ಏಳುವ ನಾದಸುಭಗತೆ ಯನ್ನು ಗಮನಿಸಬಹುದು. ಹಾಗೆಯೇ ಪ್ರತಿಯೊಬ್ಬರನ್ನು ಪ್ರತ್ಯೇಕವಾಗಿ ಗುರುತಿಸುವ ಮೂಲಕ ಒಬ್ಬ ಅರಸನು ತೋರ್ಪಡಿಸುವ ಸಭ್ಯತೆ, ಸುಸಂಸ್ಕಾರ ಹಾಗೂ ಉನ್ನತ ವ್ಯಕ್ತಿತ್ವವನ್ನು ಕಾಪಾಡಿಕೊಳ್ಳುವ ಹವಣಿಕೆಗಳತ್ತ ಕವಿ ಗಮನ ಸೆಳೆಯುತ್ತಿದ್ದಾನೆ.

52. ಒಂದು ಕಡೆಯಲಿ ತಾಳ ಮದ್ದಳೆ
ಯೊಂದು ಕಡೆಯಲಿ ಸರಸನೃತ್ಯಗ
ಳೊಂದು ಕಡೆಯಲಿ ಸಾರತರ ಸಂಗೀತ ಸಾಹಿತ್ಯ
ಒಂದು ಕಡೆಯಲಿ ಗದ್ಯಪದ್ಯಗ
ಳೊಂದು ಕಡೆಯಲಿ ತರ್ಕಶಾಸ್ತ್ರಗ
ಳೊಂದು ಕಡೆಯಲಿ ಹಾಸ್ಯದಿಂದಿರುತಿರ್ದುದಾಸ್ಥಾನ

ಒಂದು ಕಡೆಯಲಿ = ಒಂದು ಬದಿಯಲ್ಲಿ; ತಾಳಮದ್ದಳೆ = ತಾಳಮದ್ದಲೆ ನಡೆಯುತ್ತಿತ್ತು; ಒಂದು ಕಡೆಯಲಿ = ಮತ್ತೊಂದು ಕಡೆಯಲ್ಲಿ; ಸರಸನೃತ್ಯಗ ಳೊಂದು = ರಸಮಯವಾದ ನೃತ್ಯಗಳು, ಒಂದು ಕಡೆಯಲ್ಲಿ; ಸಾರತರ = ಅರ್ಥಪೂರ್ಣ ವಾದ; ಸಂಗೀತ ಸಾಹಿತ್ಯ = ಸಂಗೀತ ಸಾಹಿತ್ಯಗಳು; ಒಂದು ಕಡೆ ಗದ್ಯಪದ್ಯಗಳು = ಮತ್ತೊಂದೆಡೆ ಗದ್ಯ ಪದ್ಯಗಳ ಮಂಡನೆ; ಮತ್ತೊಂದು ಕಡೆಯಲ್ಲಿ + ತರ್ಕಶಾಸ್ತ್ರಗಳು = ಮತ್ತೊಂದು ಕಡೆಯಲ್ಲಿ ತರ್ಕ, ಚರ್ಚೆ, ವಾದಗಳು; ಮತ್ತೊಂದೆಡೆ ಹಾಸ್ಯದಿಂದ + ಇರುತಿರ್ದುದು + ಆಸ್ಥಾನ = ವಿದರ್ಭ ರಾಜನ ಆಸ್ಥಾನದಲ್ಲಿ ಹಾಸ್ಯ ಗೋಷ್ಠಿಯೂ ನಡೆಯುತ್ತಿತ್ತು.

ವಿದರ್ಭ ರಾಜನ ಆಸ್ಥಾನವು ದಮಯಂತಿಯ ಸ್ವಯಂವರೋತ್ಸವದ ಸಂದರ್ಭದಲ್ಲಿ ನೃತ್ಯ, ಸಂಗೀತ ಸಾಹಿತ್ಯ, ಗದ್ಯ ಪದ್ಯ ಗೋಷ್ಠಿಗಳಿಂದ, ತರ್ಕ, ವಾದ, ಹಾಸ್ಯಗಳ ರಸಮಯವಾದ, ಅರ್ಥಪೂರ್ಣವಾದ, ಸಾರಮಯವಾದ ಗೋಷ್ಠಿ ಗಳಿಂದ ತುಂಬಿಹೋಗಿತ್ತು.

ಪ್ರಾಚೀನ ಕಾಲದ ರಾಜಾಸ್ಥಾನ ವೈಭವವು ಐಶ್ವರ್ಯ ಪ್ರದರ್ಶನಕ್ಕಷ್ಟೇ ಮೀಸಲಾಗಿರುತ್ತಿರಲಿಲ್ಲ. ವಿವಿಧ ಕಲೆಗಳ ಪ್ರದರ್ಶನ ವೇದಿಕೆಯೂ ಆಗಿರುತ್ತಿತ್ತು. ಮತ್ತು ಅವೆಲ್ಲವನ್ನೂ ಅರವತ್ತು ನಾಲ್ಕು ವಿದ್ಯೆಗಳೆಂದು ಗುರುತಿಸಿ ಪ್ರೋತ್ಸಾಹಿಸುತ್ತಾ ದೇಶೀಯ ಸಂಸ್ಕೃತಿಯನ್ನು ನೆಲೆಗೊಳಿಸುವಲ್ಲಿ ಪ್ರಧಾನ ಪಾತ್ರ ವಹಿಸುತ್ತಿತ್ತು. ಜನಸಾಮಾನ್ಯರನ್ನು ಆರ್ಥಿಕವಾಗಿ ಸಬಲರನ್ನಾಗಿಸುವ ನಿಷ್ಠೆಯೂ ಇದರ ಹಿನ್ನೆಲೆ ಯಲ್ಲಿರುತ್ತಿತ್ತು.

53. ಇತ್ತಲಾ ದಮಯಂತಿಗೆಣ್ಣೆಯ
ನೊತ್ತಿದರು ಶೋಭಾನಗಳ ಪಾ
ಡುತ್ತ ಗೆಲಿದರು ತಿಗುರ ಮಿಗೆ ವಿವಿಧೋಪಚಾರದಲಿ
ಉತ್ತಮಾಂಗನೆಗಳವಡಿಸೆ ನಲಿ
ಯುತ್ತ ಸತಿಯರು ಮಜ್ಜನದ ಮನೆ
ಗತ್ಯಧಿಕ ಹರುಷದಲಿ ದಮಯಂತಿಯನು ಕರೆದೊಯ್ದು

ಇತ್ತಲ್ + ಆ = ಇತ್ತಕಡೆ; ಆ ದಮಯಂತಿಗೆ + ಎಣ್ಣೆಯನು + ಒತ್ತಿದರು = ದಮಯಂತಿಗೆ ಎಣ್ಣೆಯನ್ನೊತ್ತಿದರು; ಶೋಭಾನಗಳ = ಶುಭಕರವಾದ ಆಶೀರ್ವಚನಗಳುಳ್ಳ ಹಾಡುಗಳನ್ನು; ಪಾಡುತ್ತ = ಹಾಡುತ್ತ; ಗೆಲಿದರು = ಆಹ್ಲಾದಕಾರಿಯಾಗಿ; ತಿಗುರಮಿಗೆ = ಆನಂದದಿಂದ ಲೇಪಿಸಿದರು; ವಿವಿಧ + ಉಪಚಾರದಲಿ = ಮದುಮಗಳಿಗೆ ಮಾಡುವಂತಹ ವಿಧವಿಧವಾದ ಉಪಚಾರ ಗಳನ್ನು ಮಾಡಿದರು; ನಲಿಯುತ್ತ = ಅತ್ಯಂತ ಸಂಭ್ರಮದಿಂದ; ಸತಿಯರು = ಸಖೀ ಸ್ತ್ರೀಯರು; ಮಜ್ಜನದ = ಸ್ನಾನದ; ಮನೆಗೆ + ಅತ್ಯಧಿಕ = ಮನೆಗೆ ಮೇರೆ ಮೀರಿದ; ಹರುಷದಲಿ = ಸಂತೋಷದಿಂದ; ದಮಯಂತಿಯನು = ಮದುಮಗಳಾದ ದಮಯಂತಿಯನ್ನು; ಕರೆದೊಯ್ದು = ಕರೆದುಕೊಂಡು ಹೋಗಿ.

ಇತ್ತ ಕಡೆ, ಅರಮನೆಯ ಸ್ತ್ರೀ ಸಮೂಹವು ದಮಯಂತಿಯನ್ನು ವಿವಾಹ ಪೂರ್ವ ಕಾರ್ಯಕಲಾಪಗಳಲ್ಲಿ ತೊಡಗಿಸಿತ್ತು. ಶುಭವನ್ನು ಕೋರುವ ಶೋಭಾನ ಗಳನ್ನು ಹಾಡುತ್ತ ದಮಯಂತಿಗೆ ಎಣ್ಣೆಯನ್ನು ಪೂಸಿದರು, ಮತ್ತಿತರ ಗಂಧ

ಸುಗಂಧಾದಿ ಲೇಪನಗಳಿಂದ ಉಪಚರಿಸಿದರು. ಅತ್ಯಂತ ಸಂಭ್ರಮ ಸಡಗರಗಳಿಂದ ಅವಳನ್ನು ಸ್ನಾನದ ಮನೆಗೆ ಕರೆದೊಯ್ದರು.

ಶೋಭಾನವೆಂದರೆ ಕಾಂತೀಯವಾದ, ಥಳಥಳಿಸುವ ಎಂಬೆಲ್ಲ ಅರ್ಥ ಗಳಿವೆ. ಇಂತಹ ಅರ್ಥಸಂಬಂಧವಾದ ವಸ್ತುಗಳುಳ್ಳ ರಚನೆಗಳನ್ನು ಹೆಂಗಸರು ಮದುವೆ ಮುಂತಾದ ಮಂಗಳಕಾರ್ಯಗಳಲ್ಲಿ ಹಾಡುವ ಸಂಪ್ರದಾಯ ಎಲ್ಲ ಜನಪದಗಳಲ್ಲೂ ಇದೆ. ಒಂದು ನಾಡಿನ ಸಾಂಸ್ಕೃತಿಕ ಚರಿತ್ರೆಯನ್ನು ಇವು ಅನಾವರಣಗೊಳಿಸುತ್ತವೆ.

54. ಬೆರೆಸಿದರು ಪನ್ನೀರ ಹೊಂಗೊ
ಪ್ಪರಿಗೆಯಲಿ ಮೊಗೆಮೊಗೆದು ನಾರಿಯ
ರೆರೆದರಂಗನೆಗಮಳ ಚಂದನಗಂಧಪರಿಮಳದಿ
ತರುಣಿಯರು ಲೇಪಿಸಿದರರಸಿಗೆ
ವರದುಕೂಲಾಭರಣಗಳ ಶೃಂ
ಗರಿಸಿದರು ದಮಯಂತಿಯೊಪ್ಪಿದಳಧಿಕತೇಜದಲಿ

ಬೆರೆಸಿದರು ಪನ್ನೀರ = ಪನ್ನೀರನ್ನು ಬೆರೆಸಿದರು; ಹೊನ್ನ + ಕೊಪ್ಪರಿಗೆಯಲಿ = ಚಿನ್ನದ ಕಡಾಯಿಯಲ್ಲಿ; ಮೊಗೆಮೊಗೆದು = ಮೊಗೆದು ಮೊಗೆದು ತೆಗೆದು ತುಂಬಿಸಿಕೊಂಡು; ನಾರಿಯರು + ಎರೆದರು + ಅಂಗನೆಗೆ + ಅಮಳ = ಸಖೀ ಸಮಸ್ತರು ಮದುಮಗಳಿಗೆ ಶುದ್ಧವಾದ ನೀರೆರೆದರು; ಚಂದನಗಂಧ ಪರಿಮಳದಿ = ಗಂಧ ಸುಗಂಧಭರಿತವಾಗಿ; ತರುಣಿಯರು = ಯುವತಿಯರು; ಲೇಪಿಸಿದರರಸಿಗೆ = ರಾಣಿಯ ಮೈಗೆಲ್ಲ ತೊಡೆದರು; ವರ + ದುಕೂಲ + ಆಭರಣಗಳ = ಶ್ರೇಷ್ಠತಮ ಪಚ್ಚೆ ಪೀತಾಂಬರವನ್ನುಡಿಸಿ ಆಭರಣಗಳನ್ನು ತೊಡಿಸಿ; ಶೃಂಗರಿಸಿದರು = ಅವಳ ಅಂದವನ್ನು ಮೆರಗುಗೊಳಿಸಿದರು; ದಮಯಂತಿಯು + ಒಪ್ಪಿದಳು + ಅಧಿಕತೇಜದಲಿ = ಮೊದಲೇ ಸುಂದರವಾಗಿದ್ದ ದಮಯಂತಿಯು ಈಗ ಅಧಿಕವಾದ ಕಾಂತಿಯಿಂದ ಮೆರೆದಳು.

ಮದುಮಗಳಿಗೆ ನೀರೆರೆಯುವ ಶಾಸ್ತ್ರದಲ್ಲಿ ಅರಮನೆಯ ಸ್ತ್ರೀಯರು ಸಡಗರದಿಂದ ತೊಡಗಿದರು. ಚಿನ್ನದ ಕಡಾಯಿಗಳಲ್ಲಿ ನೀರನ್ನು ತುಂಬಿಸಿ ಅದಕ್ಕೆ ಪನ್ನೀರನ್ನು ಬೆರೆಸಿ, ಮದುಮಗಳ ಮೈಗೆ ಗಂಧಸುಗಂಧಾದಿ ಪರಿಮಳಭರಿತ ಲೇಪನಗಳನ್ನು ಮಾಡಿ, ನೀರನ್ನು ತುಂಬಿತುಂಬಿ ಅವಳಿಗೆ ಎರೆದರು. ಮಿರುಗುವ ಉತ್ತಮವಾದ ಪಟ್ಟೆ ಪೀತಾಂಬರಗಳನ್ನುಡಿಸಿ, ಸುಂದರವಾದ ಆಭರಣಗಳನ್ನು ತೊಡಿಸಿದರು. ಸಹಜಸೌಂದರ್ಯದಿಂದಲೇ ಕಣ್ಸೆಳೆಯುವ ಚೆಲುವೆ ದಮ ಯಂತಿಯು ಈಗ ಈ ಎಲ್ಲ ವಿಶೇಷೋಪಚಾರಗಳಿಂದ ಮತ್ತಷ್ಟು ತೇಜೋಮಯ ವಾಗಿ ಮೆರೆದಳು.

55. ಮಡದಿಯರು ಬಳಸಿದರು ಸುತ್ತಲು
ಹಡಪ ಚಾಮರ ಗಿಂಡಿಯೂಳಿಗ
ದೊಡನಿರಲು ಬಂದಳು ಸಿತಾಬ್ಜಕೆ ಲಕ್ಷ್ಮಿಯಂದದಲಿ
ಎಡಬಲದೊಳಿಹ ಕಂಚುಕಿಗಳು
ಗ್ಗಡಿಸಿ ಪಾಯವಧಾರಿನಲಿ ಮುಂ
ಗುಡಿಯ ಸತಿಯರ ಗಡಣದಲಿ ನಡೆತಂದಳಿಂದುಮುಖಿ

ಮಡದಿಯರು = ಅರಮನೆಯ ಹಿರಿಯ ಸ್ತ್ರೀಯರು; ಬಳಸಿದರು ಸುತ್ತಲು = ಅವಳ ಸುತ್ತಲೂ ಮುತ್ತಿಕೊಂಡರು; ಹಡಪ = ತಾಂಬೂಲಾದಿ ಮಂಗಲ ಪರಿಕರಗಳ ಕೈಚೀಲವನ್ನೂ; ಚಾಮರ = ಮದುವೆಗಳಲ್ಲಿ ವಿಶೇಷ ಅಲಂಕಾರಗಳಿಂದ ಸೊಗಸುವ ಅಲಂಕೃತ ಬೀಸಣಿಗೆಗಳನ್ನೂ; ಗಿಂಡಿ + ಊಳಿಗದ + ಒಡನಿರಲು = ಮದುಮಕ್ಕಳಿಗೆ ಹಾಲು ಹುಯ್ಯುವ ಸಣ್ಣ ಚೆಂಬು, ಕಳಸ ಮೊದಲಾದುವುಗಳನ್ನು ಹಿಡಿದ ಮಹಿಳೆಯರು ಜೊತೆಗಿರಲು; ಬಂದಳಾ = ನಡೆದುಬಂದಳು ಆ; ಸಿತಾಬ್ಜಿಕೆ = ಬೆಳ್ದಾವರೆಯಲ್ಲಿರುವ; ಲಕ್ಷ್ಮಿಯಂದದಲಿ = ಮಹಾಲಕ್ಷ್ಮಿಯಂತೆ ಅನುಪಮ ಸೌಂದರ್ಯದಿಂದ ಹೊಳೆಯುತ್ತ ಎಡಬಲದೊಳು + ಇಹ = ಅವಳ ಎಡಬಲ ಭಾಗಗಳಲ್ಲಿದ್ದ; ಕಂಚುಕಿಗಳು = ರಾಣಿವಾಸದ ಪರಿಚಾರಿಕೆಯರು; ಉಗ್ಗಡಿಸಿ = ಜಯಕಾರ ಮಾಡುತ್ತ; ಪಾಯವಧಾರಿನಲ್ಲಿ = ಎಚ್ಚರಿಕೆ, ಜಾಗ್ರತೆ ಎಂದು ಗಮನ ಸೆಳೆಯುತ್ತಿರಲು; ಮುನ್ + ಕುಡಿಯ =

ಮುಂಭಾಗದಲ್ಲಿರುವ ಸತಿಯರ = ಸ್ತ್ರೀಯರ ಗಡಣದಲಿ = ಸಮೂಹದಲ್ಲಿ ನಡೆತಂದಳು + ಇಂದುಮುಖಿ = ದಮಯಂತಿಯು ನಡೆದು ಬಂದಳು.

ಅರಮನೆಯ ಹಿರಿಯ ಮುತ್ತೈದೆಯರು ಮದುಮಗಳಾದ ದಮಯಂತಿಯನ್ನು ಸುತ್ತುವರಿದರು. ತಾಂಬೂಲ, ಅರಿಶಿನ ಮೊದಲಾದ ಮಂಗಳಕರ ವಸ್ತುವಿಶೇಷಗಳನ್ನೊಳಗೊಂಡ, ಕೈಚೀಲಗಳನ್ನೂ, ಮದುವೆಗಳಲ್ಲಿ ವಿಶೇಷವಾಗಿ ಮದುಮಕ್ಕಳ ಕೈಯ್ಯಲ್ಲಿ ಇರಿಸುವ ಅಲಂಕೃತ ಬೀಸಣಿಗೆಗಳನ್ನು, ಮದುಮಕ್ಕಳಿಗೆ ಹಾಲು ಹುಯ್ಯುವ ಸಣ್ಣ ಗಿಂಡಿಯನ್ನು, ಕಳಶಗಳನ್ನೂ ಹಿಡಿದ ಸ್ತ್ರೀಯರು ಸಂಗಡವೇ ಬರಲು, ಬೆಳ್ದಾವರೆಯಲ್ಲಿರುವ ಲ್ಷಕ್ಮಿಯಂತೆ ಸಿರಿಸುಂದರಿಯಾಗಿ ಮದುಮಗಳಾದ ದಮಯಂತಿಯು ನಡೆದು ಬಂದಳು. ಜೊತೆಗೆ ಎಡಬಲಗಳಲ್ಲಿದ್ದ ಅರಮನೆಯ ರಾಣಿವಾಸದ ಪರಿಚಾರಿಕೆಯರೂ, ಅವಳ ಮುಂದಿದ್ದ ಹಿರಿಯ ಸ್ತ್ರೀ ಸಂಕುಲವೂ 'ಎಚ್ಚರಿಕೆ' 'ಜಾಗ್ರತೆ' ಎಂದು ಉಪಚರಿಸಿ ಎಚ್ಚರಿಸುತ್ತಿರಲು ದಮಯಂತಿಯು ಆ ಸಮೂಹದೊಂದಿಗೆ ನಡೆದು ಬಂದಳು.

ಇಂತಹ ಸಾಂಪ್ರದಾಯಿಕ ವಿವರಗಳು ವಿವಾಹಾದಿ ಸಂದರ್ಭಗಳಿಗೆ ಭಾರತೀಯ ಸಮಾಜವು ಒದಗಿಸಿಕೊಟ್ಟ ಮಹತ್ವವನ್ನು, ಸಾಮಾಜಿಕ ವಲಯದ ಸಾಕ್ಷಿಯಲ್ಲಿ ವಧೂವರರ ಸಂಬಂಧವನ್ನು ಪ್ರಕಟಿಸುತ್ತ, ವಿವಾಹಬಂಧನಕ್ಕಿದ್ದ ಜವಾಬ್ದಾರಿಯನ್ನೂ ಗಮನಕ್ಕೆ ತರುತ್ತವೆ.

56. ಕುಡಿತೆಗಂಗಳ ಸಿರಿಮುಡಿಯ ಬಡ
ನಡುವ ಸೆಳೆವತಿಬೆಡಗಿನಲಿ ಹೊಂ
ಗೊಂಡದ ಮೊಲೆ ವೈಯಾರದುಡುಗೆಯ ಸಿರಿಯ ಸಡಗರದ
ತೊಡರ ಝಣಝಣರವದ ಮೆಲ್ಲಡಿ
ಯಿಡುವ ಗಮನದ ಭರದಿ ಕಿರುಬೆಮ
ರಿಡುತ ಬಂದಳು ಸಖಿಯರೊಡನೆ ವಿವಾಹಮಂಟಪಕೆ

ಕುಡಿತೆಗಂಗಳ = ಬೊಗಸೆಗಂಗಳ; ಸಿರಿಮುಡಿಯ = ಸುಂದರ ಕೇಶ ರಾಶಿಯ; ಬಡನಡುವ = ತೆಳುವಾದ ಸೊಂಟದ; ಸೆಳೆವ + ಅತಿ + ಬೆಡಗಿನಲಿ = ಆಕರ್ಷಿಸುವ ಲಾವಣ್ಯದಿಂದ ಮನಸೂರೆಗೊಳ್ಳುವ; ಹೊಂಗೊಡದ = ಹೊನ್ನಿನ

ಕಳಶಗಳಂತಿರುವ; ಮೊಲೆ = ವಕ್ಷಸ್ಥಲದ; ವೈಯ್ಯಾರದುಡುಗೆಯ = ಒನಪು ವಿಲಾಸ ಗಳಿಂದ ಮಿರುಗುವ ವಸ್ತ್ರಾದಿಗಳ; ಸಿರಿಯ ಸಡಗರದ = ವೈಭವ ಬಿನ್ನಾಣಗಳಿಂದ ತುಂಬಿದ ಸಂಭ್ರಮದ; ತೊಡರ = ಆಭರಣಗಳ; ಝಣಝಣರವದ = ಮಧುರ ವಾಗಿ ಝಣತ್ಕರಿಸುವ ಮೆಲು ಶಬ್ದದ; ಮೆಲ್ಲಡಿಯಿಡುವ = ಮೃದುವಾದ ಹೆಜ್ಜೆ ಗಳಿಡುವ; ಗಮನದ ಭರದಿ = ನಡಿಗೆಯ ಶೈಲಿಯಿಂದ; ಕಿರಿಬೆಮರಿಡುತ = ಸಣ್ಣಗೆ ಬೆವರಿಡುತ್ತ; ಬಂದಳು = ಬಂದಳು; ಸಖಿಯರೊಡನೆ = ಆಪ್ತ ಸಖೀ ಪರಿವಾರ ದೊಂದಿಗೆ; ವಿವಾಹ ಮಂಟಪಕೆ = ಮದುವೆಯ ಮಂಟಪಕ್ಕೆ.

ಬೊಗಸೆಗಂಗಳ ಚೆಲುವೆಯಾದ ದಮಯಂತಿಯು ಸುಂದರವಾದ ಕೇಶ ವಿನ್ಯಾಸದಿಂದಲೂ; ಬಡನಡುವೂ, ಸುಂದರ ಹೊನ್ನಿನ ಕಳಶಗಳಂತಿರುವ ವಕ್ಷ ಸ್ಥಲವೂ ಮನಮೋಹಕವಾಗಿ ಹೊಸ ಲಾವಣ್ಯದಿಂದ ಮನಸೂರೆಗೊಳ್ಳುವಂತಿರಲು, ವೈಭವ, ಬಿನ್ನಾಣಗಳಿಂದ ತುಂಬಿದ ಸಂಭ್ರಮದ ಆಭರಣಗಳ ಹಿತಕರ ಝಣ ತ್ಕಾರದೊಂದಿಗೂ ತೊಟ್ಟ ಮಿರುಗುವ ಆಭರಣಗಳೊಂದಿಗೂ, ವೈಭವಯುತ ವಸ್ತ್ರಾದಿಗಳೊಂದಿಗೂ ಮೃದು ಮಧುರವಾದ, ಹಿತಕರ ನಡಿಗೆಗಳೊಂದಿಗೂ ಸಣ್ಣಗೆ ಬೆವರುತ್ತ, ಸಖೀಜನ ಮತ್ತು ಅರಮನೆಯ ಪರಿವಾರ ಜನರೊಂದಿಗೆ ನಿಧಾನವಾಗಿ ವಿವಾಹ ವೇದಿಕೆಗೆ ಬಂದಳು.

57. ಅವನಿಪತಿ ನಿಜಕುವರಿಗೆಂದನು
ವಿವಿಧರತುನದ ಮಕುಟವರ್ಧನ
ಭುವನಪತಿಗಳನೇಕವಿದೆಲಾ ಸಿಂಹಪೀಠದಲಿ
ಯುವತಿ ನೋಡಿತ್ತೆರದೊಳಿಹ ನೃಪ
ನಿವಹದಲಿ ನೀ ಹಾಯ್ಕು ಮನವಿ
ದ್ದವನ ಕೊರಳಿಗೆನುತ್ತ ಕೊಟ್ಟನು ಪುಷ್ಪಮಾಲಿಕೆಯ

ಅವನಿಪತಿ = ವಿದರ್ಭ ನಗರದ ಅಧಿಪತಿಯಾದ ಭೀಮನು; ನಿಜಕುವರಿ ಗೆಂದನು = ತನ್ನ ಮಗಳಿಗೆ ಹೇಳಿದನು; ವಿವಿಧರತುನದ = ಬಗೆಬಗೆಯ ರತ್ನಮಯವಾದ; ಮಕುಟವರ್ಧನ = ಕಿರೀಟದ ಯಶಸ್ಸುಳ್ಳ; ಭುವನಪತಿಗಳು +

ಅನೇಕವಿದೆಲಾ = ಭುವನಾಧೀಶರಾದ ರಾಜಾಧಿರಾಜರು ಅನೇಕರಿದ್ದಾರೆ; ಸಿಂಹಪೀಠದಲಿ = ಸಿಂಹಾಸನಗಳಲ್ಲಿ; ಯುವತಿ = ತರುಣಿಯೇ; ನೋಡು + ಇತ್ತೆರದೊಳ್ + ಇಹ ಗಮನಿಸು; ಈ ಎರಡೂ ಪಕ್ಕಗಳಲ್ಲಿರುವ; ನೃಪನಿಹವದಲಿ = ನೃಪಸಮೂಹದಲ್ಲಿ; ನೀ ಹಾಯ್ಕು = ನೀನು ಹಾಕು; ಮನವಿದ್ದವನ = ನಿನ್ನ ಮನಸ್ಸು ಮೆಚ್ಚಿದವನ; ಕೊರಳಿಗೆನುತ್ತ = ಕೊರಳಿಗೆ + ಎನ್ನುತ್ತ; ಕೊಟ್ಟನು ಪುಷ್ಪ ಮಾಲಿಕೆಯ = ಹೂಮಾಲೆಯನ್ನು ನೀಡಿದನು.

ಸ್ವಯಂವರ ಮಂಟಪದಲ್ಲಿ ಮಂಡಿಸಿರುವ ನಾನಾ ಭುವನಾಧಿಪತಿಯರತ್ತ ಮಗಳನ್ನು ಕರೆದೊಯ್ದು ಭೀಮನೃಪಾಲನು, ಸಭಾಗೃಹದ ಎರಡೂ ಪಕ್ಕಗಳಲ್ಲಿ ಸಿಂಹಾಸನಸ್ಥರಾಗಿದ್ದ ಅವರನ್ನು ತೋರಿಸುತ್ತ "ನೋಡು ವಿವಿಧ ರತ್ನಗಳ ಕಿರೀಟಗಳನ್ನು ಧರಿಸಿರುವ ಕೀರ್ತಿಶಾಲಿಗಳಾದ ರಾಜಾಧಿರಾಜರು ಇಲ್ಲಿದ್ದಾರೆ. ಅವರಲ್ಲಿ ನಿನ್ನ ಮನಸ್ಸು ಮೆಚ್ಚಿದವರಿಗೆ ಈ ಹೂಮಾಲೆಯನ್ನು ಹಾಕು" ಎಂದು ಪುಷ್ಪಮಾಲೆಯನ್ನು ಅವಳಿಗೆ ನೀಡಿದನು.

58. ಬಂದಳಾ ದಮಯಂತಿ ನೃಪಸಭೆ
ಗಂದು ಹೊಕ್ಕಳು ಕೆಳದಿಯರು ಮುದ
ದಿಂದ ತೋರಿದರಲ್ಲಿಯಿವರಿವರೆಂದು ವಿವರಿಸುತ
ಮುಂದೆ ಬರೆ ಕೈಕಂಬಿಯರು ಬಲು
ಸಂದಣಿಯ ಕೆಲಕೊತ್ತಿಸುತಲಿರ
ಲಿಂದುಮುಖಿ ನೋಡಿದಳು ಲಜ್ಜಾಭರದೊಳವನಿಪರ

ಬಂದಳಾ ದಮಯಂತಿ = ದಮಯಂತಿಯು ಬಂದಳು; ಆ ನೃಪಸಭೆಗಂದು = ಅಂದು ಆ ನೃಪಸಭೆಗೆ; ಹೊಕ್ಕಳು = ಪ್ರವೇಶಿಸಿದಳು; ಕೆಳದಿಯರು = ಗೆಳತಿಯರು; ಮುದದಿಂದ = ಸಂತೋಷದಿಂದ; ತೋರಿದರು + ಅಲ್ಲಿ + ಇವರು + ಇವರು + ಎಂದು = ಒಬ್ಬೊಬ್ಬರನ್ನು ತೋರಿಸಿ ಇವರಿವರು ಇಂತಿಥವರು, ಇಂತಿಂಥ ಪ್ರದೇಶದವರು ಎಂದು; ವಿವರಿಸುತ್ತ = ವಿವರಗಳನ್ನು ನೀಡುತ್ತಾ; ಮುಂದೆ ಬರೆ = ಮುಂದು ಮುಂದು ಸಾಗಲು; ಕೈಕಂಬಿಯರು = ಕೈಯ್ಯಲ್ಲಿ ಕಂಬಿಯ ಕೋಲನ್ನು ಹಿಡಿದ ಸಹಾಯಕರು; ಬಲುಸಂದಣಿಯ = ಅಲ್ಲಿ ನೆರೆದಿದ್ದ

ಜನಸಾಮಾನ್ಯರ ಸಮೂಹವನ್ನು; ಕೆಲಕೆ + ಒತ್ತಿಸುತಲಿರಲು + ಇಂದುಮುಖಿ = ಪಕ್ಕಕ್ಕೆ ಒತ್ತರಿಸುತ್ತಿರಲು, ಚಂದ್ರನಂತೆ ಶೋಭಾಯಮಾನವಾಗಿ ಮಿರುಗುತ್ತಿದ್ದ ದಮಯಂತಿಯು; ನೋಡಿದಳು = ಎಲ್ಲರತ್ತ ಕಣ್ಣು ಹರಿಸಿದಳು; ಲಜ್ಜಾಭರದೊಳ್ + ಅವನಿಪರ = ಲಜ್ಜಾನ್ವಿತಳಾಗಿ ರಾಜಾಧಿರಾಜರನ್ನು.

ಗೆಳತಿಯರೊಂದಿಗೆ ಆ ನೃಪಸಭೆಗೆ ಪ್ರವೇಶಿಸಿದ, ಚಂದ್ರಪ್ರಭೆಯಂತೆ ಚೆಲುವನ್ನು ಹೊಮ್ಮಿಸುತ್ತಿದ್ದ ಸೌಂದರ್ಯಾತಿಶಯದ ದಮಯಂತಿಯು, ಗೆಳತಿಯರು ರಾಜಾಧಿರಾಜರೊಬ್ಬೊಬ್ಬರನ್ನು ಕುಲಗೋತ್ರ ಪರಾಕ್ರಮ ಸಹಿತ ಪರಿಚಯಿಸುತ್ತ ಮುಂದುವರಿಯುತ್ತಿರಲು, ಈ ಸಂದರ್ಭವನ್ನು ಕುತೂಹಲದಿಂದ ನೋಡಲು ನೆರೆದಿದ್ದ ಜನ ಸಂದಣಿಯನ್ನು ಅರಮನೆಯ ಪರಿಚಾರಕರು ಪಕ್ಕಕ್ಕೆ ಸರಿಸುತ್ತಿರಲು, ಲಜ್ಜಾನ್ವಿತಳಾಗಿ ಎಲ್ಲರನ್ನೂ ಗಮನಿಸುತ್ತ ನಡೆದಳು.

59. ಮಾಳವಾಧಿಪನೀತ ಮಗಧನೃ
ಪಾಲನೀತನು ಮತ್ಸ್ಯ ಕುರು ನೇ
ಪಾಲನೀತನು ಕೋಸಲಾನ್ವಯನೀತ ಬರ್ಬರನು
ಚೋಳನೀತನು ಸಿಂಧುರಾಜನು
ನೀಲನೀತ ಕಳಿಂಗ ಕುಂತಳ
ಪಾಲಕನ ನೋಡಿತ್ತಲಮರೇಶ್ವರನವೋಲಗವ

ಮಾಳವಾಧಿಪನೀತ = ಇವನು ಮಾಳವ ರಾಜ್ಯಾಧಿಪತಿ; ಮಗದ ನೃಪಾಲನೀತನು = ಈತನು ಮಗಧ ರಾಜ್ಯದ ಅರಸ; ಮತ್ಸ್ಯ ಕುರು ನೇಪಾಲನೀತನು = ಈತನು ಮತ್ಸ್ಯರಾಜ, ಇವನು ಕುರುಕುಲಾಧೀಶ, ಇವನು ನೇಪಾಳದ ದೊರೆ; ಕೋಸಲಾನ್ವಯನೀತ = ಈತನು ಕೋಸಲದ ರಾಜ; ಈತ ಬರ್ಬರನು = ಇವನು ಬರ್ಬರದ ದೊರೆ; ಚೋಳನೀತನು = ಇವನು ಚೋಳದೇಶದರಸು; ಇವನು ಸಿಂಧುದೇಶದ ದೊರೆ, ಇವನು ನೀಲ, ಇವನು ಕಳಿಂಗದ ದೊರೆ ಈತ ಕುಂತಳ ಪಾಲಕ; ನೋಡು + ಇತ್ತಲು + ಅಮರ + ಈಶ್ವರನ + ಓಲಗವ = ಇತ್ತ ನೋಡು, ದೇವೇಂದ್ರನ ಆಸ್ಥಾನವೇ ಆಸೀನವಾಗಿದೆ ಎಂದು ಮುಂತಾಗಿ ದಮಯಂತಿಗೆ ರಾಜಾಧಿರಾಜರನ್ನು ಪರಿಚಯಿಸಿದರು.

ದಮಯಂತಿಯೊಂದಿಗೆ ಬಂದ ಸಖೀ ಪರಿವಾರವು ಅಲ್ಲಿ ನೆರೆದಿದ್ದ ಪ್ರಮುಖ ರಾಜಾಧಿರಾಜರನ್ನು ಅವಳಿಗೆ ಪರಿಚಯಿಸಿದರು. ನೋಡು, ಇವನು ಮಾಳವಾಧಿಪತಿ, ಈತನು ಮಗದ ರಾಜ್ಯದರಸ, ಈತ ಮತ್ಸ್ಯರಾಜ, ಇವನು ಕುರುಕುಲಾಧೀಶ, ಇವನು ನೇಪಾಳದ ದೊರೆ, ಈತ ಕೋಸಲ ದೇಶದರಸ, ಇವನು ಬರ್ಬರದ ದೊರೆ, ಇವನು ನೀಲ, ಈತ ಕಳಿಂಗದ ದೊರೆ, ಇವನು ಕುಂತಳಪಾಲಕ ಇತ್ತ ನೋಡು ದೇವೇಂದ್ರನ ಓಲಗವಿದೆ ಎಂದು ರಾಜಾಧಿರಾಜರ ಸಾಲಿನತ್ತ ಅವಳನ್ನು ಕರೆದೊಯ್ದು ಒಬ್ಬೊಬ್ಬರನ್ನೂ ಪರಿಚಯಿಸಿದರು.

60. ಎನ್ನನೊಲಿದಿಹಳೆಂದು ಕೆಲಬರು
ಸನ್ನೆ ಮಾಡಿದಳೆಂದು ಕೆಲಬರು
ಗನ್ನದಿಂದೀಕ್ಷಿಸುತಲಿದ್ದರು ಕೆಲವರು ಹುಬ್ಬಿನಲಿ
ಸನ್ನೆದೋರಿದಳೆಂದು ಕೆಲಬರು
ಬಿನ್ನಣದಿ ಮಿಗೆವೋರೆನೋಟದ
ಕಣ್ಣಿನಿಂದೀಕ್ಷಿಸಿದಳೆಂದಾಡಿದರು ಕೆಲಕೆಲರು

ಎನ್ನನು + ಒಲಿದಿಹಳು + ಎಂದು = ನನ್ನನ್ನು ಒಲಿದಿದ್ದಾಳೆ ಎಂದು; ಕೆಲಬರು = ಕೆಲವರು; ಸನ್ನೆ ಮಾಡಿದಳೆಂದು ಕೆಲಬರು = ಸಂಜ್ಞೆ ಮಾಡಿದಳೆಂದು ಕೆಲವರು; ಗನ್ನದಿಂದ + ಈಕ್ಷಿಸುತ್ತಲ್ + ಇದ್ದರು = ಕಳ್ಳತನದಿಂದ ಕೆಲವರು ಅವಳನ್ನು ನೋಡುತ್ತಿದ್ದರು; ಕೆಲವರು = ಕೆಲವರು; ಹುಬ್ಬಿನಲಿ = ಹುಬ್ಬಿನಿಂದ; ಸನ್ನೆ + ತೋರಿದಳು + ಎಂದು = ತಮಗೆ ಸಂಜ್ಞೆಮಾಡಿದಳೆಂದು; ಕೆಲಬರು = ಕೆಲವರು; ಬಿನ್ನಣದಿ = ಬೆಡಗು ಬಿಂಕಗಳಿಂದ; ಮಿಗೆ ವೋರೆ ನೋಟದ = ಅತಿಶಯವಾದ ಓರೆನೋಟ; ಕಣ್ಣಿನಿಂದ + ಈಕ್ಷಿಸಿದಳು + ಎಂದು + ಆಡಿದರು = ಕಣ್ಣಿನಿಂದ ದೃಷ್ಟಿಸಿ ನೋಡಿದಳು ಎಂದು ಮಾತನಾಡಿಕೊಂಡರು ಕೆಲಕೆಲರು = ಕೆಲವು ಕೆಲವರು.

ದಮಯಂತಿಯ ಸೌಂದರ್ಯದಿಂದ ಮತ್ತರಾಗಿದ್ದ ಕೆಲವು ರಾಜಾಧಿರಾಜರಿಗೆ ಅವಳು ತಮ್ಮನ್ನೇ ಒಲಿಯುತ್ತಾಳೆಂಬ ಭ್ರಮಾಧೀನ ಸ್ಥಿತಿ ಇದ್ದುದರಿಂದ, ಅವಳ ನೋಟ, ಹಾವಭಾವಗಳೆಲ್ಲವೂ ಒಬ್ಬ ಹೆಣ್ಣಿಗೆ ಸಹಜ

ವಾಗಿಯೇ ಇದ್ದಂತೆ ಇದ್ದರೂ ಅವೆಲ್ಲ ತಮತಮಗೆ ಅವಳು ಹಾಯಿಸಿದ ಸಂಜ್ಞೆಗಳಂತೆಯೇ ಕಂಡವು. ಕೆಲವರಿಗೆ ಅವಳು ತಮ್ಮನ್ನೇ ಒಲಿದಿದ್ದಾಳೆ ಅನಿಸಿದರೆ ಮತ್ತೆ ಕೆಲವರಿಗೆ ಅವಳು ಸಂಜ್ಞೆ ಮಾಡಿದಳೆಂದೇ ಅನಿಸಿತು. ಮತ್ತೆ ಕೆಲವರಿಗೆ ಹುಬ್ಬಿನಿಂದ ಸಂಜ್ಞೆ ಮಾಡಿದಂತೆ ಕಂಡಿತು. ಕೆಲವರು ಇವೆಲ್ಲವನ್ನೂ, ಅವಳನ್ನೂ ಒಳಗೊಂಡಂತೆ ಕಳ್ಳ ನೋಟದಿಂದ ಗಮನಿಸುತ್ತಿದ್ದರು. ಕೆಲವರು ಅವಳು ಅತಿಶಯವಾದ ಬೆಡಗು ಬಿನ್ನಾಣಗಳಿಂದ, ಅನುಪಮವಾದ ಓರೆನೋಟದಿಂದ ತಮ್ಮನ್ನು ನೋಡಿದಳು ಎಂದು ಮಾತನಾಡಿಕೊಂಡರು.

ಶೌರ್ಯ ಪರಾಕ್ರಮದಲ್ಲಿ ಗಣನೀಯರಾಗಿದ್ದರೂ ಹೆಣ್ಣನ್ನು ಪಡೆಯುವಲ್ಲಿಯ ಚಪಲಚಿತ್ತವು ಎಲ್ಲ ಗಾಂಭೀರ್ಯಗಳನ್ನೂ ಮೀರಿ ಹೆಡೆಯೆತ್ತುವ ರೀತಿಯತ್ತ ಕವಿ ಗಮನ ಸೆಳೆಯುತ್ತಿರುವಂತಿದೆ.

61. ಬಾಯ ಬಿಂಕದ ಸವಿನುಡಿಯನಾ
ರಾಯರಾಡಿದರಲ್ಲಿ ಕಮಲದ
ಳಾಯತಾಂಬಕಿ ನಳನ ರೂಪಿನ ನಾಲ್ವರಿರೆ ಕಂಡು
ಮಾಯವಿದು ತಾನರಿಯೆನಿವರ ನಿ
ಜಾಯತವನೆಂದೆನುತ ಮುರಿದಾ
ವಾಯುಗತಿಯಲಿ ಬಂದು ಹೊಕ್ಕಳು ತನ್ನ ಮಂದಿರವ

ಬಾಯ ಬಿಂಕದ = ಬಾಯಲ್ಲಿ ಜಂಬ ಕೊಚ್ಚಿಕೊಳ್ಳುತ್ತ; ಸವಿನುಡಿಯನಾ = ಸವಿಯಾದ ಮಾತುಗಳನ್ನು; ಆ ರಾಯರಾಡಿದರಲ್ಲಿ = ಆ ಅನೇಕ ರಾಜಾಧಿರಾಜರು ಆಡಿದರು; ಅಲ್ಲಿ = ಅಲ್ಲಿ; ಕಮಲದಳ + ಆಯತ + ಅಂಬಕಿ = ಕಮಲದಳದಂತೆ ನೀಳವಾದ ಸುಂದರ ಕಣ್ಣುಗಳುಳ್ಳ ದಮಯಂತಿಯು; ನಳನ ರೂಪಿನ = ನಳನಂತೆಯೇ ರೂಪವಿದ್ದ ; ನಾಲ್ವರು + ಇರೆ = ನಾಲ್ಕು ಜನರಿರುವುದನ್ನು; ಕಂಡು = ನೋಡಿ; ಮಾಯವಿದು = ಇದು ಕಪಟದ ಕೆಲಸ; ತಾನು = ನಾನು; ಅರಿಯೆನು + ಇವರ = ಅರಿಯದಾಗಿದ್ದೇನೆ ಇವರ; ನಿಜ + ಆಯತವನು + ಎಂದು + ಎನುತ ಇವರ ನಿಜವಾದ ಸ್ಥಾನಮಾನವೇನು ಎಂದು ಹೇಳಿ; ಮುರಿದು + ಆ =

ಹಿಂದಿರುಗಿ; ವಾಯುಗತಿಯಲಿ = ವಾಯುವೇಗದಿಂದ; ಬಂದು ಹೊಕ್ಕಳು = ಬಂದಳು; ತನ್ನ ಮಂದಿರವ = ತನ್ನ ಅಂತಃಪುರದೊಳಗೆ.

ಮೇಲ್ನೋಟಕ್ಕೆ ಸವಿ ಮಾತಿನಂತಿದ್ದರೂ ತಮ್ಮ ಕುರಿತು ಜಂಬದ ಮಾತುಗಳನ್ನಾಡಿಕೊಳ್ಳುತ್ತಿದ್ದ ಆ ರಾಜಾಧಿರಾಜ ಸಮೂಹದಲ್ಲಿ, ಕಮಲದಂತೆ ನೀಳ ವಾದ ಸುಂದರ ಕಣ್ಣುಗಳ ದಮಯಂತಿಯು ನಳನಂತೆಯೇ ಕಾಣುತ್ತಿದ್ದ ನಾಲ್ವರನ್ನು ಕಂಡಳು. ಕೂಡಲೇ ಇಲ್ಲಿ ತನಗೆ ತಿಳಿಯದ ಯಾವುದೋ ಮೋಸದಾಟ ನಡೆಯುತ್ತಿದೆ ಎಂಬುದನ್ನು ಗ್ರಹಿಸಿ, ಅಲ್ಲಿ ನಿಲ್ಲದೆ, ಸ್ವಯಂವರ ಸಭೆಯಿಂದ ಹೊರಬಂದು ತನ್ನ ಅಂತಃಪುರದೊಳಗೆ ಸೇರಿಕೊಂಡಳು.

62. ಕಂಡುಪೇಕ್ಷಿಸಿ ಬಂದಳಂಗನೆ
ಮಂಡಲಾಧಿಪರೆಲ್ಲರನು ಅದ
ಕಂಡು ಭೀಮನೃಪಾಲ ತನುಜೆಯ ಬಳಿಗೆ ನಡೆತಂದು
ಅಂಡಲೆದು ಬೆಸಗೊಂಡೊಡಂದಾ
ಖಂಡಲನ ಮಾಯೆಗಳ ವಿವರಿಸೆ
ಚಂಡಬುದ್ಧಿಯನುಳ್ಳ ನೃಪ ಚಿಂತಿಸಿದ ಭಾರತಿಯ

ಕಂಡು + ಉಪೇಕ್ಷಿಸಿ = ಎಲ್ಲರನ್ನೂ ತಿರಸ್ಕರಿಸಿ; ಬಂದಳು + ಅಂಗನೆ = ಈ ಹೆಣ್ಣು ಹಿಂದಿರುಗಿದಳು ಎಂಬುದನ್ನು; ಕಂಡು = ನೋಡಿ; ಮಂಡಲ + ಅಧಿಪರು + ಎಲ್ಲರನು = ವಿವಿಧ ಮಂಡಲಾಧೀಶರುಗಳೆಲ್ಲರನ್ನೂ; ಅದ ಕಂಡು = ಅದನ್ನು ನೋಡಿ; ಭೀಮನೃಪಾಲ = ಭೀಮ ನೃಪಾಲನು; ತನುಜೆಯ = ಮಗಳ; ಬಳಿಗೆ ಬಂದು = ಹತ್ತಿರ ಬಂದು; ಅಂಡಲೆದು = ಬಲವಂತದಿಂದ ಪೀಡಿಸಿ ಕಾಡಿಸಿ; ಬೆಸಗೊಂಡೊಡೆ + ಅಂದು + ಆ = ಕೇಳಲು ಆ ಹಿಂದೆ; ಆಖಂಡಲನ = ಇಂದ್ರನ; ಮಾಯೆಗಳ = ಮೋಸಗಳನ್ನು; ವಿವರಿಸಿ = ಸಾದ್ಯಂತವಾಗಿ ಹೇಳಲು; ಚಂಡಬುದ್ಧಿಯನುಳ್ಳ = ತೀಕ್ಷ್ಣಮತಿಯಾದ; ನೃಪ = ರಾಜನು; ಚಿಂತಿಸಿದ = ಧ್ಯಾನಿಸಿದನು; ಭಾರತಿಯ = ಸರಸ್ವತಿಯನ್ನು.

ಮಗಳು ಎಲ್ಲರನ್ನು ತಿರಸ್ಕರಿಸಿ ಸ್ವಯಂವರ ಸಭಾಮಂಟಪದಿಂದ ಹಿಂದಿರು ಗಿದುದನ್ನು ಕಂಡ ಭೀಮನೃಪನು ಮಗಳೇಕೆ ವಿವಿಧ ಮಂಡಲಾಧೀಶ ಶೂರರು

ಅಷ್ಟು ಜನರಿದ್ದರೂ ಯಾರನ್ನು ಒಲಿಯದೆ ಹಿಂದಿರುಗಿದಳು ಎಂಬುದನ್ನು ತಿಳಿಯಲಾಗದೆ, ಅವಳಿದ್ದಲ್ಲಿಗೆ ಬಂದು ವಿಚಾರವೇನೆಂದು ಕೇಳಿದನು. ಅವಳು ಕಾರಣಗಳನ್ನು ಸುಲಭವಾಗಿ ಹೇಳದಿದ್ದಾಗ, ಕಾಡಿಸಿ, ಬಲವಂತ ಪಡಿಸಿದಾಗ ದಮಯಂತಿಯು ಇಂದ್ರನ ಆವರೆಗಿನ ಎಲ್ಲ ಮೋಸದಾಟಗಳನ್ನು ಬಯಲು ಮಾಡಿದುದರಿಂದ ಚಿಂತಿತನಾದ ಭೀಮನು ಸರಸ್ವತಿಯನ್ನು ಧ್ಯಾನಿಸಿದನು.

63. ವಾಣಿ ನೀರಜಪಾಣಿ ಬ್ರಹ್ಮನ
ರಾಣಿ ಪನ್ನಗವೇಣಿ ಸುಕೃತ
ಶ್ರೇಣಿ ಸುರನಿಕುರುಂಬವಂದಿತೆ ಸತ್ಯಸಂಚಾರಿ
ವಾಣಿ ಸ್ತ್ರೀಕುಲರನ್ನೆ ವರಗೀ
ರ್ವಾಣಿ ರಕ್ಷಿಸು ರಕ್ಷಿಸೆಂದಾ
ಕ್ಷೋಣಿಪತಿ ಕೈ ಮುಗಿದು ಬೇಡಿದನಾ ಸರಸ್ವತಿಯ

ವಾಣಿ = ವಾಗ್ದೇವಿಯೇ; ನೀರ + ಜ + ಪಾಣಿ = ನೀರಿನಲ್ಲಿ ಹುಟ್ಟಿದ ಕಮಲವನ್ನು ಕೈಯ್ಯಲ್ಲಿ ಧರಿಸಿದವಳೇ; ಬ್ರಹ್ಮನ ರಾಣಿ = ಬ್ರಹ್ಮನ ಮಡದಿಯೇ; ಪನ್ನಗವೇಣಿ = ಹಾವಿನಂತಹ ಹೆರಳುಳ್ಳವಳೇ; ಸುಕೃತ ಶ್ರೇಣಿ = ಪುಣ್ಯ ಸ್ವರೂಪಳೇ; ಸುರನಿಕುರುಂಬವಂದಿತೆ = ದೇವತಾ ಸಮೂಹದಿಂದ ಪೂಜಿತಳಾದವಳೇ; ಸತ್ಯ ಸಂಚಾರಿ = ಸತ್ಯವಿರುವಲ್ಲಿ ಸಂಚರಿಸುವವಳೇ; ವಾಣಿ = ವಾಗ್ದೇವಿಯೇ; ಸ್ತ್ರೀಕುಲರನ್ನೇ = ಸ್ತ್ರೀಕುಲಕ್ಕೆ ಮಣಿರತ್ನದಂತೆ ಭೂಷಣಳಾದವಳೇ; ವರಗೀರ್ವಾಣಿ = ಶ್ರೇಷ್ಠತಮವಾದ ಭಾಷೆಗೆ ಒಡೆಯಳೇ; ರಕ್ಷಿಸು ರಕ್ಷಿಸೆಂದಾ = ರಕ್ಷಿಸು ಕಾಪಾಡು ಎಂದು ಆ; ಕ್ಷೋಣೀಪತಿ = ಭೀಮ ಭೂನಾಥನು; ಕೈ ಮುಗಿದು = ಕೈಗಳನ್ನು ಮುಗಿದು; ಬೇಡಿದನು ಆ = ಬೇಡಿಕೊಂಡನು; ಸರಸ್ವತಿಯ = ತಾಯಿ ಸರಸ್ವತಿ ಯನ್ನು.

ವಾಗ್ದೇವಿಯನ್ನು ಭೀಮನೃಪನು ನಡೆಯುತ್ತಿರುವುದೇನು ಎಂಬುದನ್ನು ಅರಿಯಲಾಗದೆ ಬುದ್ಧಿಕೊಟ್ಟು ಕೃಪೆಮಾಡು ಎಂದು ಧ್ಯಾನಿಸುತ್ತಿದ್ದಾನೆ. ವಾಗ್ದೇವಿಯೇ ಕಮಲಗಳನ್ನು ಹಸ್ತದಲ್ಲಿ ಧರಿಸಿದವಳೇ, ಬ್ರಹ್ಮನ ರಾಣಿಯೇ, ಹಾವಿನಂತಹ ಹೆರಳಿನ ಸುಂದರಿಯೇ, ಪುಣ್ಯಕ್ಕೆ ಮೆಟ್ಟಿಲಿನಂತಿರುವವಳೇ, ದೇವದೇವತೆಯರಿಂದ ಪೂಜಿತ

ಳಾದವಳೇ, ಸತ್ಯವಿರುವಲ್ಲಿ ಮಾತ್ರ ಸಂಚರಿಸುವವಳೇ, ಸ್ತ್ರೀಕುಲಕ್ಕೆ ರತ್ನಪ್ರಾಯ ಳಾಗಿರುವವಳೇ, ಮಣಿಭೂಷಣದಂತಿರುವವಳೇ, ಭಾಷಾ ಭಾರತಿಯೇ, ರಕ್ಷಿಸು ರಕ್ಷಿಸು ಎಂದು ಆ ಭೀಮ ಭೂನಾಥನು ಭಾರತಿಯನ್ನು, ಸಾಕ್ಷಾತ್ ಸರಸ್ವತಿ ಯನ್ನು ಬೇಡಿಕೊಂಡನು.

'ಣ' ಕಾರ ಪುನರಾವೃತ್ತಿಯಲ್ಲಿ ಏಳುವ ನಾದ ಮಾಧುರ್ಯವನ್ನಿಲ್ಲಿ ಗಮನಿಸಬಹುದು.

64. ನೆನೆಯಲಾಕ್ಷಣ ಬಂದಳಲ್ಲಿಗೆ
ವನಜನಾಭನ ಸೊಸೆ ಜಗತ್ಪಾ
ವನೆ ಸುರಾರ್ಚಿತೆ ದೇವಿ ಭಕ್ತಾಶ್ರಿತಜನಾಧಾರೆ
ಜನಪ ನೀನಿಂದಿನಲಿಯೆನ್ನನು
ನೆನೆದ ಹದನೇನೆನಲು ಪದಯುಗ
ವನಜಕಾನತನಾಗಿ ಬಿನ್ನೈಸಿದನು ಭಾರತಿಗೆ

ನೆನೆಯಲು + ಆ ಕ್ಷಣ = ನೆನೆದ ಆ ಕ್ಷಣವೇ; ಬಂದಳು + ಅಲ್ಲಿಗೆ = ಅಲ್ಲಿಗೆ ಬಂದಳು; ವನಜನಾಭನ ಸೊಸೆ = ಕಮಲದ ಹೂವನ್ನು ಹೊಕ್ಕುಳಲ್ಲಿ ಧರಿಸಿದ ವಿಷ್ಣುವಿನ ಸೊಸೆಯಾದ; ಜಗತ್ + ಪಾವನೆ = ಜಗತ್ತನ್ನು ಭಾಷೆಯೆಂಬ ಬೆಳಕಿನಿಂದ ಪಾವನಗೊಳಿಸುವಂತಹ; ಸುರಾರ್ಚಿತೆ = ಸುರಗಣದಿಂದ ಪೂಜಿತಳಾದ; ದೇವಿ = ತಾಯಿ; ಭಕ್ತ + ಆಶ್ರಿತ ಜನ + ಆಧಾರೆ = ಆಶ್ರಯ ಬೇಡಿ ಬಂದ ಭಕ್ತರಿಗೆ ಆಸರೆಯಾಗಿರುವಂತಹ ಸರಸ್ವತಿಯು; ಜನಪ = ಜನರನ್ನು ಪಾಲಿಸುವವನಾದ ದೊರೆಯೇ; ನೀನು + ಇಂದಿನಲಿ + ಎನ್ನನು = ನೀನು ಇಂದು ನನ್ನನ್ನು; ನೆನೆದ = ಧ್ಯಾನಿಸಿದ; ಹದನೇನೆನಲು = ಕಾರಣವೇನು ಎಂದು ಕೇಳಲು; ಪದಯುಗ = ಅವಳ ಎರಡೂ ಪಾದ; ವನಜಕೆ + ಆನತನಾಗಿ = ಕಮಲಗಳಿಗೆ ತಲೆ ಬಾಗಿಸಿದವನಾಗಿ; ಭಿನ್ನೈಸಿದನು = ವಿನಂತಿಸಿದನು; ಭಾರತಿಗೆ = ಸರಸ್ವತಿಗೆ.

ಭೀಮನೃಪನು ಸರಸ್ವತಿಯನ್ನು ಧ್ಯಾನಿಸುತ್ತಿರಲು ಆ ಕ್ಷಣವೇ ಅಲ್ಲಿ ಪ್ರತ್ಯಕ್ಷಳಾದ ವಿಷ್ಣುವಿನ ಹೊಕ್ಕಳ ಹೂವಿನಲ್ಲಿರುವ ಬ್ರಹ್ಮನ ಮಡದಿಯಾದವಳೂ, ವಿಷ್ಣುವಿನ ಸೊಸೆಯೂ ಆದ, ಜಗತ್ಪಾವನಳಾದ ಭಾಷಾ ಭಾರತಿ ಸರಸ್ವತಿಯು. ಭಕ್ತ

ಜನರನ್ನು ಸದಾ ತನ್ನ ಆಶ್ರಯದಿಂದ ಪಾವನಗೊಳಿಸುವವಳೂ, ಸುರಗಣದಿಂದ ಸದಾ ಪೂಜಿತಳೂ ಆದ ಸರಸ್ವತಿಯು, ದೊರೆಯೇ ನನ್ನನ್ನೇಕೆ ನೆನೆದೆ? ಎಂದು ಕೇಳಲು ಭೀಮನು ಅವಳ ಪಾದಕಮಲ ಯುಗಕ್ಕೆ ಭಕ್ತಿಯಿಂದ ತಲೆಬಾಗಿ ಹೀಗೆ ವಿನಂತಿಸಿದನು.

65. ನಿಗಮನುತೆ ಗೀರ್ವಾಣಿ ರಕ್ಷಿಸು
ಮುಗುದರನು ಕರುಣದಲಿ ನೋಡುತ
ಲಗಣಿತದಿ ಅರಸುಗಳು ನೆರೆದಿರೆ ತಿಳಿಯಲರಿದೆಮಗೆ
ಮಗಳ ಮನ ವಿಗಡಿಸಿತು ನಾಲ್ವರು
ಬೆಗಡುಗೊಳಿಸಿದರೆನಲು ಭಾರತಿ
ನಗುತ ನುಡಿದಳು ಕರೆದು ದಮಯಂತಿಯಳನುಪಚರಿಸಿ

ನಿಗಮನುತೆ = ವೇದಾದಿಗಳಲ್ಲಿ ಸ್ತುತಿಸಲ್ಪಟ್ಟವಳೇ, ಗೀರ್ವಾಣಿ = ಅಮರ ಭಾಷಾ ಭಾರತಿಯಾದ ಸರಸ್ವತಿಯೇ; ರಕ್ಷಿಸು = ಕಾಪಾಡು; ಮುಗುದರನು = ಮುಗ್ಧರಾದ ನಮ್ಮನ್ನು; ಕರುಣದಲಿ = ದಯೆಯಿಂದ; ನೋಡುತಲು = ನಿನ್ನ ಕೃಪಾದೃಷ್ಟಿಯಿಂದ ರಕ್ಷಿಸುತ್ತ; ಅಗಣಿತದಿ = ಅಸಂಖ್ಯಾತವಾಗಿ; ಅರಸುಗಳು = ಭೂಮಂಡಲಾಧೀಶರು; ನೆರೆದಿರೆ = ಬಂದು ಸೇರಿರಲು; ತಿಳಿಯಲರಿದೆಮಗೆ = ತಿಳಿಯಲು + ಅರಿದು + ಎಮಗೆ = ನಮಗೆ ಗುರುತಿಸಲು ಸಾಧ್ಯವಾಗುತ್ತಿಲ್ಲ; ಮಗಳ ಮನ = ಮಗಳ ಮನಸ್ಸು; ವಿಗಡಿಸಿತು = ಮನದಾಳದಿಂದ ವಿರೋಧಿಸುತ್ತಿದೆ; ನಾಲ್ವರು = ನಾಲ್ಕು ಜನ; ಬೆಗಡುಗೊಳಿಸಿದರ್ + ಎನಲು = ವಿಸ್ಮಯಾವಹವರಾಗಿ ಹೆದರಿಕೆ ಹುಟ್ಟಿಸಿದರು ಎನ್ನಲು; ಭಾರತಿ = ಸರಸ್ವತಿಯು; ನಗುತ ನುಡಿದಳು ಕರೆದು = ಮದುಮಗಳನ್ನು ಕರೆದು ನಗುತ್ತ ಹೇಳಿದಳು; ದಮಯಂತಿಯಳನುಪಚರಿಸಿ = ದಮಯಂತಿಯನ್ನು ಸಮಾಧಾನಪೂರ್ವಕವಾಗಿ ಉಪಚರಿಸಿ.

ಭೀಮನೃಪನು ಸರಸ್ವತಿಯನ್ನು ಮತ್ತೂ ವಿನೀತನಾಗಿ ಪ್ರಾರ್ಥಿಸಿದನು. ವೇದಗಳಲ್ಲಿ ಸ್ತುತಿಸಲ್ಪಟ್ಟ ಅಮರ ಭಾಷಾವಿದಳೇ ಗೀರ್ವಾಣಿಯೇ ಮುಗ್ಧರಾದ ನಮ್ಮನ್ನು ನಿನ್ನ ಕೃಪಾದೃಷ್ಟಿ ಹರಿಸಿ ಕಾಪಾಡು, ಹರಸು. ಅಸಂಖ್ಯಾತರಾಗಿ ಭೂಮಂಡ

ಲಾಧೀಶರು ನೆರೆದಿರುವ ಈ ಸಮಾರಂಭದಲ್ಲಿ ನಮಗೆ ಗುರುತು ಹಿಡಿಯಲಾಗದಂತೆ ನಾಲ್ವರು ವಿಸ್ಮಯಾವಹವಾಗಿ ಪ್ರಕಟವಾಗಿ ಭಯಗೊಳಿಸಿರುವುದರಿಂದ ಭೀತಳಾದ ಮದುಮಗಳು ಆ ಸಂದರ್ಭದಲ್ಲಿ ಪಾಲ್ಗೊಂಡು ಮುಂದುವರಿಯಲು ಖಡಾ ಖಂಡಿತ ವಾಗಿ ವಿರೋಧಿಸುತ್ತಿದ್ದಾಳೆ. ನಮಗೆ ರಕ್ಷಣೆ ನೀಡು ಎನ್ನಲು, ಸರಸ್ವತಿಯು ನಗುತ್ತ ದಮಯಂತಿಯನ್ನು ಕರೆದು ಸಮಾಧಾನಪೂರ್ವಕವಾಗಿ ಉಪಚರಿಸಿದಳು.

66. ದೇವಮಾಯವಿದೀಗ ಕೇಳೆಲೆ
ದೇವಿ ಇಂದ್ರನ ಭಜಿಸೆನಲು ಸಂ
ಭಾವನೀಯರ ಸಭೆಗೆ ಬಂದೆರಗಿದಳು ಭಕ್ತಿಯಲಿ
ದೇವಕುಲಸಂಭವರು ರಕ್ಷಿಸಿ
ನೀವು ಮಗಳೆಂದೆನ್ನ ಭಾವಿಸಿ
ಪಾವನರು ತರಳೆಯನು ಪತಿಕರಿಸೆಂದಳಿಂದುಮುಖಿ

ದೇವಮಾಯವಿದು + ಈಗ = ಈಗ ಆಗಿರುವಂಥದು ದೇವತೆಗಳ ಮಾಯೆ; ಕೇಳೆಲೆ ದೇವಿ = ಕೇಳು ಯುವರಾಣಿಯೇ; ಇಂದ್ರನ ಭಜಿಸು = ಇಂದ್ರನನ್ನೇ ಪ್ರಾರ್ಥಿಸು; ಎನಲು = ಎನ್ನಲು; ಸಂಭಾವನೀಯರ = ಗೌರವಾನ್ವಿತರ; ಸಭೆಗೆ = ಸಮೂಹಕ್ಕೆ; ಬಂದು + ಎರಗಿದಳು = ಬಂದು ನಮಸ್ಕರಿಸಿದಳು; ಭಕ್ತಿಯಲಿ = ಮರ್ಯಾದಾಪೂರ್ವಕವಾಗಿ; ದೇವಕುಲಸಂಭವರು = ದೇವ ಕುಲದಲ್ಲಿ ಹುಟ್ಟಿದವರು; ರಕ್ಷಿಸಿ ನೀವು = ನನ್ನನ್ನು ನೀವು ಕಾಪಾಡಿ; ಮಗಳು + ಎಂದು + ಎನ್ನ = ಮಗಳೆಂಬಂತೆ ನನ್ನನ್ನು; ಭಾವಿಸಿ = ಯೋಚಿಸಿ; ಪಾವನರು = ಪರಮಪವಿತ್ರರು; ತರಳೆಯನು = ಚಿಕ್ಕವಳಾದ ನನ್ನನ್ನು; ಪತಿಕರಿಸಿ + ಎಂದಳು + ಇಂದುಮುಖಿ = ದಯತೋರಿ ಎಂದಳು ದಮಯಂತಿ.

ದಮಯಂತಿಯ ಮನದ ಬೇಗುದಿಯನ್ನು ಕಳೆಯಲು ಸರಸ್ವತಿಯು ಸಮಾಧಾನದ ಮಾತುಗಳನ್ನಾಡಿದಳು. ದೇವಿಯೇ ಕೇಳು. ಇದು ದೇವತೆಗಳಿಂದಾದ ವಂಚನೆಯ ಆಟವಷ್ಟೇ. ನೀನು ಇಂದ್ರನನ್ನು ಪ್ರಾರ್ಥಿಸು ಎನ್ನಲು, ಗೌರವಾ ನ್ವಿತರೆಲ್ಲರೂ ನೆರೆದಿದ್ದ ಆ ಸಭೆಗೆ ಬಂದು, ಮರ್ಯಾದಾಪೂರ್ವಕವಾಗಿ ನಮಸ್ಕ ರಿಸಿದ ದಮಯಂತಿಯು, "ನೀವು ದೇವಕುಲದಲ್ಲಿ ಜನಿಸಿದವರಾಗಿ ಪೂಜ್ಯರು.

ಪರಮಪವಿತ್ರರಾದ ನೀವು ನನ್ನನ್ನು ನಿಮ್ಮ ಮಗಳು, ಚಿಕ್ಕವಳು ಎಂದು ಭಾವಿಸಿ ನನ್ನನ್ನು ರಕ್ಷಿಸಿ" ಎಂದು ಬೇಡಿಕೊಂಡಳು.

67. ಘಳಿಲನೇ ಪ್ರಚ್ಛನ್ನವೇಷವ
ಕಳೆದು ಯಮ ಪವಮಾನ ವರುಣರು
ಬಳಿಕ ಸುರಪತಿ ಮೆಚ್ಚಿ ದಮಯಂತಿಯನು ಕೊಂಡಾಡಿ
ನಳನೃಪನ ಕರೆಸಿದರು ಹೂವಿನ
ಮಳೆಯ ಕರೆದರು ದೇವದುಂದುಭಿ
ಮೊಳಗಲರಸನ ಕೊರಳಿಗಿಟ್ಟಳು ಪುಷ್ಪಮಾಲಿಕೆಯ

ಘಳಿಲನೇ = ತಕ್ಷಣವೇ; ಪ್ರಚ್ಛನ್ನ ವೇಷದ = ಗುಪ್ತವೇಷಧಾರಿಯಾದವರು ತಮ್ಮ ಮಾರುವೇಷವನ್ನು ಕಳೆದು ಬಿಟ್ಟು; ಯಮ ಪವಮಾನ ವರುಣರು = ಯಮ, ಮಾರುತ, ವರುಣರು; ಬಳಿಕ ಸುರಪತಿ = ಅನಂತರ ದೇವೇಂದ್ರರು; ಮೆಚ್ಚಿ = ದಮಯಂತಿಯ ನಡೆನುಡಿಗಳನ್ನು ಮೆಚ್ಚಿ; ಕೊಂಡಾಡಿ = ಅವಳ ಗುಣ ಸ್ವಭಾವ ಗಳನ್ನು ಹೊಗಳಿ; ನಳನೃಪನ ಕರೆಸಿದರು = ನಳ ಮಹಾರಾಜನನ್ನು ಬರಮಾಡಿ ಕೊಂಡರು; ಹೂವಿನ ಮಳೆಯ ಕರೆದರು = ಹೂಮಳೆಯನ್ನು ಸುರಿಸಿದರು. ದೇವ ದುಂದುಭಿ = ದೇವವಾದ್ಯಗಳು; ಮೊಳಗಲು + ಅರಸನ = ವೈಭವಪೂರ್ಣವಾಗಿ ಧ್ವನಿಮಾಡಲು, ಅರಸನಾದ ನಳನ, ಕೊರಳಿಗಿಟ್ಟಳು = ಕೊರಳಿಗೆ ದಮಯಂತಿಯು ಹಾಕಿದಳು; ಪುಷ್ಪಮಾಲಿಕೆಯ = ಹೂಮಾಲೆಯನ್ನು.

ದಮಯಂತಿಯು ಪ್ರಾರ್ಥಿಸಿದ ಆ ತಕ್ಷಣವೇ ಯಮ, ವರುಣ, ವಾಯು, ಇಂದ್ರಾದ್ಯರು ತಮ್ಮ ಗುಪ್ತವೇಷವನ್ನು ತೊರೆದು ನಿಜರೂಪದಲ್ಲಿ ಪ್ರತ್ಯಕ್ಷರಾದರು. ಅನಂತರ ದೇವೇಂದ್ರನು ದಮಯಂತಿಯ ನಡೆನುಡಿ ಗುಣಸ್ವಭಾವಗಳನ್ನು ಹೊಗಳಿದನು. ಬಳಿಕ ನಳನೃಪನನ್ನು ಪ್ರೀತಿಯಿಂದ ಕರೆಸಿದ ದೇವಚತುಷ್ಟಯರು ಅವನ ಮೇಲೆ ಹೂಮಳೆಗರೆದರು. ದೇವದುಂದುಭಿ ವಾದ್ಯಗಳು ಮೊಳಗಲು ದಮಯಂತಿಯು ನಳಮಹಾರಾಜನ ಕೊರಳಿಗೆ ಹೂಮಾಲೆಯನ್ನು ಹಾಕಿದಳು.

68. ಆ ಸಮಯದಲಿ ಭೀಮನೃಪ ಸಂ
ತೋಷದಲಿ ಕರೆಸಿದನು ಮುನಿಗಳ
ಸೇಸೆದಳಿದರು ಸತಿಪತಿಯರಿಗೆ ಹರಸಿ ಅಕ್ಷತೆಯ

ಭೂಸುರರ ಮತದಿಂದಲಾ ಧರ
ಣೀಶ ಧಾರೆಯನೆರೆದನಲ್ಲಿ ವಿ
ಲಾಸದಿಂ ಪಾಡಿದರು ಮುತ್ತೈದೆಯರು ಶೋಭನವ

ಆ ಸಮಯದಲಿ = ಆಗ; ಭೀಮನೃಪ = ಭೀಮ ಮಹಾರಾಜನು; ಸಂತೋಷದಲಿ = ಆನಂದದಿಂದ; ಕರೆಸಿದನು = ಬರಮಾಡಿದನು; ಮುನಿಗಳ = ಮುನಿಗಳನ್ನು; ಸೇಸೆದಳಿದರು = ಅಕ್ಷತೆಯನ್ನು ಆಶೀರ್ವಾದ ಪೂರ್ವಕ ತಲೆಯ ಮೇಲೆ ಪ್ರೋಕ್ಷಿಸಿದರು. ಸತಿಪತಿಯರಿಗೆ ಹರಸಿ = ನವ ವಧೂವರರಿಗೆ ಆಶೀರ್ವದಿಸಿ; ಅಕ್ಷತೆಯ = ಅಕ್ಷತೆಯನ್ನು; ಭೂಸುರರ = ಭೂಮಿಯ ದೇವತೆಗಳೆನಿಸಿದ ಬ್ರಾಹ್ಮಣರ; ಮತದಿಂದಲಿ = ಆದೇಶದಂತೆ; ಧರಣೀಶ = ಆ ಭೀಮನೃಪನು; ಧಾರೆಯೆರೆದನಲ್ಲಿ = ಧಾರೆಯೆರೆದನು, ಅಲ್ಲಿ; ವಿಲಾಸದಿಂ = ಸಂತೋಷ ಸಂಭ್ರಮಗಳಿಂದ; ಪಾಡಿದರು = ಹಾಡಿದರು; ಮುತ್ತೈದೆಯರು = ಸುಮಂಗಲೆಯರು ಶೋಭನವ = ಶುಭಾಶಂಸನಾಪೂರ್ವಕವಾದ ಹಾಡುಗಳನ್ನು.

ಅನಂತರ ಭೀಮನೃಪನು ಸಂತೋಷದಿಂದ ಮುನಿಗಳನ್ನು ಕರೆಸಲು ಅವರು ನಳದಮಯಂತಿಯರಿಗೆ ಆಶೀರ್ವಾದ ಪೂರ್ವಕ ಅಕ್ಷತೆಯನ್ನು ತಲೆಯ ಮೇಲೆ ಹಾಕಿದರು. ಬಳಿಕ ಬ್ರಾಹ್ಮಣರ ನಿರ್ದೇಶನದ ಪ್ರಕಾರ ಭೀಮನೃಪನು ಅಕ್ಷತೆಯ ಸಮೇತ ದಮಯಂತಿಯನ್ನು ಧಾರೆ ಎರೆದನು. ನೆರೆದಿದ್ದ ಸುಮಂಗಲಿಯರು ಸಂತೋಷ ಸಂಭ್ರಮಗಳಿಂದ ಶುಭಾಶಂಸನಾಪೂರ್ವಕವಾದ ಶೋಬಾನೆಗಳನ್ನು ಹಾಡಿದರು.

69. ಮಂಗಳಾರತಿಯೆತ್ತಿದರು ದೇ
ವಾಂಗನೆಯರವನಿಪಗೆ ಧರೆಯೊಳು
ತುಂಗವಿಕ್ರಮನಾಗೆನುತ ಹರಸಿದರು ಮುನಿವರರು
ಹಿಂಗದಮರೇಂದ್ರನು ಮನೋಹರ
ದಂಗವಸ್ತ್ರಾಭರಣವಿತ್ತು ಸು
ರಾಂಗನೆಯರೊಡಗೂಡಿ ಕಳುಹಿಸಿಕೊಂಡನುಚಿತದಲಿ

ಮಂಗಳಾರತಿಯೆತ್ತಿದರು = ಮಂಗಳಾರತಿಯನ್ನು ಬೆಳಗಿದರು; ದೇವಾಂಗ ನೆಯರು + ಅವನಿಪಗೆ = ದೇವತಾಸ್ತ್ರೀಯರು ಭೂಪತಿ ನಳನಿಗೆ; ಧರೆಯೊಳು = ಭೂಮಂಡಲದಲ್ಲಿ; ತುಂಗ ವಿಕ್ರಮನಾಗೆನುತ = 'ಉನ್ನತ ಮಟ್ಟದ ಮಹಾವೀರ ಬಲನಾಗು'ಎಂದು; ಹರಸಿದರು = ಆಶೀರ್ವದಿಸಿದರು; ಮುನಿವರರು = ಮುನಿ ಶ್ರೇಷ್ಠರು; ಹಿಂಗದೆ + ಅಮರೇಂದ್ರನು = ತಾನೇನೂ ಕಡಿಮೆಯಿಲ್ಲವೆಂಬಂತೆ ಇಂದ್ರನು; ಮನೋಹರದ = ಅತ್ಯಂತ ಆಕರ್ಷಕವಾದ; ಅಂಗ + ವಸ್ತ್ರ + ಆಭರಣವ + ಇತ್ತು = ಮೇಲೆ ಹೊದೆಯುವ ವೈಭವಯುತವಾದ ವಸ್ತ್ರಗಳನ್ನು, ಆಭರಣಗಳನ್ನು ನೀಡಿ; ಸುರ + ಅಂಗನೆಯರ + ಒಡಗೂಡಿ = ದೇವತಾಸ್ತ್ರೀಯರ ಸಮೂಹದೊಂದಿಗೆ; ಕಳುಹಿಸಿಕೊಂಡನಚಿತದಲಿ = ಸಂದರ್ಭೋಚಿತವಾದ ದಿವ್ಯ ಸತ್ಕಾರದೊಂದಿಗೆ ಬೀಳ್ಕೊಂಡನು.

ಬಳಿಕ ನಳನೃಪ ದಂಪತಿಗೆ ದೇವಾಂಗನೆಯರು ಮಂಗಳಾರತಿಯನ್ನು ಬೆಳಗಲು ಮುನಿಗಳು 'ಉತ್ತರೋತ್ತರವಾಗಿ, ಭೂಮಂಡಲದಲ್ಲಿ ಇನ್ನೂ ಎತ್ತೆತ್ತರ ಕ್ಕೇರುವ ಶೂರನಾಗು' ಎಂದು ಹರಸಿದರು. ಅನಂತರ ಆ ಎಲ್ಲ ವರ್ಣವೈಭವದಲ್ಲಿ ತನ್ನ ಸ್ಥಾನಮಾನಕ್ಕೆ ಕಡಿಮೆ ಇಲ್ಲದಂತೆ ದೇವೇಂದ್ರನು ದಿವ್ಯವಸ್ತ್ರಾಭರಣಗಳನ್ನು ನೀಡಿ, ದೇವತಾ ಸ್ತ್ರೀಸಮೂಹದೊಂದಿಗೆ ಉಚಿತ ದಿವ್ಯಸತ್ಕಾರಗಳನ್ನು ಸ್ವೀಕರಿಸಿ ಅಲ್ಲಿಂದ ಬೀಳ್ಕೊಂಡನು.

70. ಅರಸ ಕೇಳು ವಿವಾಹಸಮನಂ
ತರದೊಳೈದನೆಯ ದಿನದಲಿ ಕೊ
ಪ್ಪರಿಗೆಯಲಿ ತುಂಬಿದ್ದ ಪನ್ನೀರಿನಲಿ ಕುಂಕುಮವ
ಬೆರಸಿ ಹೊಯ್ದಾಡಿದರು ಉಭಯದ
ತರುಣಿಯರು ಓಕುಳಿಯ ಪರಿಮಳ
ಹೊರೆದುದವನೀತಳದ ಸುರನಿಕುರುಂಬ ನಲಿದಾಡೆ

ಅರಸ ಕೇಳು = ಅರಸನಾದ ಧರ್ಮರಾಯನೇ ಆಲಿಸು; ವಿವಾಹಸಮನಂತರದ + ಐದನೆಯ = ವಿವಾಹಾನಂತರದ ಐದನೆಯ; ದಿನದಲಿ = ದಿನದಲ್ಲಿ; ಕೊಪ್ಪರಿಗೆಯಲಿ ತುಂಬಿದ್ದ = ದೊಡ್ಡ ಹಂಡೆಗಳಲ್ಲಿ ತುಂಬಿಸಿದ್ದ;

ಪನ್ನೀರಿನಲಿ = ದಿವ್ಯ ಪರಿಮಳಯುಕ್ತ ನೀರಿನಲ್ಲಿ; ಕುಂಕುಮವ ಬೆರೆಸಿ = ಕೇಸರಿಯನ್ನು ಬೆರೆಸಿ; ಹೊಯ್ದಾಡಿದರು = ಪರಸ್ಪರ ಎರಚಾಡಿದರು; ಉಭಯದ = ಎರಡೂ ಕಡೆಯ; ತರುಣಿಯರು = ಹೆಣ್ಣು ಮಕ್ಕಳು; ಓಕುಳಿಯ = ಕೆಂಬಣ್ಣದ ಮಂಗಲ ಜಲವನ್ನು; ಪರಿಮಳ = ಸುಗಂಧವು; ಹೊರೆದುದು + ಅವನೀತಳವ = ಪಸರಿಸಿತು ಭೂಮಂಡಲವನ್ನು; ಸುರನಿಕುರುಂಬ = ದೇವತೆಗಳ ಸಮೂಹವು; ನಲಿದಾಡೆ = ಸಂಭ್ರಮದಿಂದ ನಲಿದಾಡಲು.

ಧರ್ಮರಾಯನೇ, ಮುಂದೇನಾಯಿತೆಂಬುದನ್ನು ಆಲಿಸುವಂಥವನಾಗು. ವಿವಾಹ ಮಹೋತ್ಸವವು ಸಂಪನ್ನವಾದ ಐದನೆಯ ದಿನಕ್ಕೆ ಓಕುಳಿಯಾಡುವ ಸಂಭ್ರಮದ ಮುಹೂರ್ತ. ಅಂದು ದೊಡ್ಡ ದೊಡ್ಡ ಕೊಪ್ಪರಿಗೆಗಳಲ್ಲಿ ತುಂಬಿಸಿದ್ದ ಸುವಾಸಿತ ಪನ್ನೀರಿಗೆ ಕೇಸರಗಳನ್ನು ಬೆರೆಸಿ, ಆ ದಿವ್ಯ ಪರಿಮಳಯುಕ್ತ ಕೆಂಬಣ್ಣದ ಮಂಗಲಕರ ನೀರನ್ನು ಪರಸ್ಪರರ ಮೇಲೆ ಹುಯ್ದು ತರುಣಿಯರು ಓಕುಳಿಯಾಡಿದರು. ಅದರ ಪರಿಮಳದಲ್ಲಿ ಸಂಭ್ರಮ ವೈಭವಗಳೂ ಭೂಮಂಡಲಾದ್ಯಂತ ಪಸರಿಸಲು, ದೇವತಾ ಸಮೂಹವು ಹರ್ಷದಿಂದ ಪಾಲ್ಗೊಂಡಿತು.

71. ಅರಸ ಕೇಳೈ ತನ್ನ ಬಾಂಧವ
ಧರಣಿಪರ ಮಂತ್ರಿಗಳ ಮುನಿಮು
ಖ್ಯರ ಸುಗಾಯಕ ಪಂಡಿತರ ಭೂಸುರರ ಯಾಚಕರ
ಹರುಷ ಮಿಗಲಾದರಿಸಿದನು ಕರಿ
ತುರಗ ವಸ್ತ್ರಾಭರಣದಿಂದುಪ
ಚರಿಸಿ ಭೀಮನೃಪಾಲನವರವರುಗಳ ಬೀಳ್ಕೊಟ್ಟ

ಅರಸ ಕೇಳೈ = ಎಲೈ ಅರಸನೇ ಆಲಿಸು; ತನ್ನ ಬಾಂಧವ = ತನ್ನ ಬಂಧು ಬಳಗದವರನ್ನು; ಧರಣಿಪರ = ರಾಜಾಧಿರಾಜರನ್ನು; ಮಂತ್ರಿಗಳ = ಸಚಿವರುಗಳನ್ನು; ಮುನಿಮುಖ್ಯರ = ಮುನಿ ಪ್ರಮುಖರನ್ನು; ಸುಗಾಯಕ ಪಂಡಿತರ = ಗಾಯಕ ಶ್ರೇಷ್ಠರನ್ನೂ ಪಂಡಿತರನ್ನೂ; ಭೂಸುರರ = ಬ್ರಾಹ್ಮಣರನ್ನು; ಯಾಚಕರ = ಯಾಚಿಸಿ ಬಂದವರೆಲ್ಲರನ್ನೂ; ಹರುಷ = ಸಂತೋಷ; ಮಿಗಲಾದರಿಸಿದನು = ತುಂಬಿ ಬರುವಂತೆ ಗೌರವದಿಂದ ಸನ್ಮಾನಿಸಿದನು; ಕರಿ ತುರಗ = ಆನೆ, ಕುದುರೆ;

ವಸ್ತ್ರ + ಆಭರಣದಿಂದ + ಉಪಚರಿಸಿ = ಉತ್ತಮ ವಸ್ತ್ರಾಭರಣಗಳನ್ನು ನೀಡಿ ಗೌರವಿಸಿ; ಭೀಮ ನೃಪಾಲನು + ಅವರವರ = ಭೀಮನೃಪಾಲನು ಅವರವರನ್ನು ಒಬ್ಬೊಬ್ಬರನ್ನು ಗಮನಿಸಿ; ಬೀಳ್ಕೊಟ್ಟ = ಕಳುಹಿಸಿಕೊಟ್ಟನು.

ಧರ್ಮರಾಯನೇ ಕೇಳು, ಭೀಮನೃಪಾಲನು ಬಂದವರೆಲ್ಲರನ್ನೂ ಅವರವರ ಪದವಿ ಪಟ್ಟಗಳಿಗೆ ತಕ್ಕಂತೆ ಗೌರವಿಸಿ ಕಳುಹಿಸುವುದರ ಮೂಲಕ ತನ್ನ ಗೌರವ, ಮರ್ಯಾದೆ, ಪದವಿ ಪಟ್ಟಗಳ ನೆಲೆಯೇನೆಂಬುದನ್ನು ಪ್ರದರ್ಶಿಸಿದನು. ಭೀಮ ನೃಪಾಲನು ತನ್ನ ಬಂಧು ಬಾಂಧವರನ್ನೂ ಸ್ವಯಂವರಕ್ಕೆ ಆಗಮಿಸಿದ್ದ ವಿವಿಧ ಭೂಮಂಡಲಾಧೀಶರನ್ನೂ, ಶ್ರೇಷ್ಠ ಗಾಯಕರನ್ನೂ ಪಂಡಿತರನ್ನೂ, ಬ್ರಾಹ್ಮಣರನ್ನೂ ಮತ್ತೇನೇನನ್ನು ಯಾಚಿಸಿ ಬಂದಿದ್ದರೋ ಅಂಥವರೆಲ್ಲರನ್ನೂ ಆನೆ, ಕುದುರೆ ಮುಂತಾದುವುಗಳನ್ನು ಉಡುಗೊರೆಯಾಗಿ ನೀಡಿ, ತೃಪ್ತರಾಗಿ ಆನಂದದಿಂದ ತೆರಳು ವಂತೆ ಗಮನಿಸಿ ಕಳುಹಿಸಿಕೊಟ್ಟನು.

72. ಅಳಿಯನನು ಮನ್ನಿಸುತ ಮಗಳಿಗೆ
ಹೊಳೆವ ಮಣಿಭೂಷಣದ ಪೆಟ್ಟಿಗೆ
ಗಳನು ಗಜ ರಥ ತುರಗ ಪದಾತಿಗಳ ಲಲನೆಯರ
ಬಳುವಳಿಯನಿತ್ತವನಿಪತಿ ನಿಜ
ಬಲಸಹಿತ ಮಾಡಿದನು ಪಯಣವ
ನುಲಿವ ಮಂಗಳಪಾಠಕರ ಸಂದಣಿಯ ರಭಸದಲಿ

ಅಳಿಯನನು = ಅಳಿಯನಾದ ನಳಮಹಾರಾಜನನ್ನು; ಮನ್ನಿಸುತ = ಗೌರವಿಸುತ್ತ; ಮಗಳಿಗೆ = ತನ್ನ ಮಗಳಾದ ದಮಯಂತಿಗೆ; ಹೊಳೆವ = ಥಳಥಳಿಸುವ; ಮಣಿಭೂಷಣದ = ರತ್ನಾಭರಣಗಳ; ಪೆಟ್ಟಿಗೆಗಳನು = ಪೆಟ್ಟಿಗೆಗಳನ್ನು; ಗಜರಥತುರಗ ಪದಾತಿಗಳ = ಆನೆ, ರಥ, ಕುದುರೆ, ಕಾಲಾಳುಗಳ ಸಹಿತ; ಲಲನೆಯರ = ಸ್ತ್ರೀ ಪರಿಜನ ಸಮೇತ; ಬಳುವಳಿಯನು + ಇತ್ತು + ಅವನಿಪತಿ = ಕಾಣಿಕೆಯನ್ನಾಗಿ ನೀಡಿ; ಭೀಮನೃಪಾಲನು = ಸತ್ಕರಿಸಿದನು; ಇತ್ತ + ಅವನಿಪತಿ = ಇತ್ತ ನಳಮಹಾರಾಜನು; ನಿಜಬಲಸಹಿತ = ತನ್ನ ಸೈನ್ಯದೊಂದಿಗೆ; ಮಾಡಿದನು ಪಯಣವನು = ಪ್ರಯಾಣ ಮಾಡಿದನು; ಉಲಿವ = ಘೋಷದ;

ಮಂಗಳ ಪಾಠಕರ = ಮಂಗಳಕರವಾದ ಆಶೀರ್ವಚನಗಳನ್ನು ಘೋಷಿಸುವ ವಂದಿ ಮಾಗಧ; ಸಂದಣಿಯ ರಭಸದಲಿ = ಸಮೂಹದೊಂದಿಗೆ.

ಅಳಿಯನಾದ ನಳಮಹಾರಾಜನನ್ನು ಉಚಿತ ಸತ್ಕಾರಗಳೊಂದಿಗೆ ಗೌರವಿಸುತ್ತ, ಭೀಮನೃಪನು ಮಗಳಿಗೆ ಹೊಳೆಹೊಳೆವ ದಿವ್ಯ ರತ್ನಾಭರಣಗಳನ್ನು ತುಂಬಿಸಿದ ಪೆಟ್ಟಿಗೆಗಳನ್ನು, ಚತುರಂಗ ಬಲಸಹಿತ ಸ್ತ್ರೀ ಪರಿಜನ ಸಮೂಹವನ್ನು ಬಳುವಳಿಯಾಗಿ ನೀಡಿದನು. ಅನಂತರ ನಳ ಮಹಾರಾಜನು ತನ್ನ ಸೈನ್ಯ, ಸತಿಸಮೇತ, ವಂದಿ ಮಾಗಧರು ಆಶೀರ್ವಚನ ಶುಭಾಶಂಸನೆಗಳನ್ನು ಘೋಷಿಸುತ್ತಿರಲು ಸಂಭ್ರಮದಿಂದ ಪ್ರಯಾಣ ಮಾಡಿದನು.

73. ವರಮುಹೂರ್ತದೊಳೇರಿದನು ಮಣಿ
ಕಿರಣದುನ್ನತರಥವ ನಳಭೂ
ವರನು ನಿಜಸತಿಸಹಿತ ಹೊಕ್ಕನು ನಿಷಧಪಟ್ಟಣವ
ಮೊರೆವ ಶಂಖ ಮೃದಂಗ ಭೇರಿಗ
ಳುರುಬಿ ಧಂಧಣಿರೆನಲು ಮಿಗೆ ಮೋ
ಹರಿಸಲಾ ನಿಸ್ಸಾಳತತಿ ಘನವಾದ್ಯ ಘೋಷಿಸಲು

ವರಮುಹೂರ್ತದೊಳೇರಿದನು = ಶುಭಲಗ್ನದಲ್ಲಿ ಹತ್ತಿದನು; ಮಣಿಕಿರಣದ + ಉನ್ನತರಥವ = ಮಣಿರತ್ನಗಳ ಕಾಂತಿಯಿಂದ ಹೊಳೆಯುತ್ತಿದ್ದ ಎತ್ತರವಾದ ರಥವನ್ನು; ನಳಭೂವರನು = ರಾಜಶ್ರೇಷ್ಠನಾದ ನಳಮಹಾರಾಜನು; ನಿಜಸತಿಸಹಿತ = ತನ್ನ ಪತ್ನಿಯೊಂದಿಗೆ; ಹೊಕ್ಕನು = ಪ್ರವೇಶಿಸಿದನು; ನಿಷಧಪಟ್ಟಣದ = ನಿಷಧನಗರವನ್ನು; ಮೊರೆವ = ಮೊಳಗುವ; ಶಂಖ, ಮೃದಂಗ; ಭೇರಿಗಳುರುಬಿ = ಶಂಖ ವಾದ್ಯಗಳು, ನಗಾರಿಗಳು, ಮೃದಂಗಗಳು, ರಭಸದಿಂದ; ಧಂಧಣಿರ್ + ಎನಲು = ಧಂಧಣಿರ್ ಎಂದು ಘೋಷ ಮಾಡಲು; ಮಿಗೆ = ಅತಿಶಯವಾಗಿ; ಮೋಹರಿಸಲಾ = ಗುಂಪು ಗುಂಪಾಗಿ; ನಿಸ್ಸಾಳತತಿ = ಡೋಲು ಮುಂತಾದ ಚರ್ಮ ವಾದ್ಯಗಳು; ಘನವಾದ್ಯ = ಶ್ರೇಷ್ಠತರವಾದ ವಾದ್ಯಗಳು; ಘೋಷಿಸಲು = ಉಚ್ಚಸ್ವರದಲ್ಲಿ ಆರ್ಭಟದಿಂದ ಶಬ್ದಿಸಲು.

ನಳ ಮಹಾರಾಜನು ರತ್ನಮಣಿಕಿರಣಗಳಿಂದ ಬೆಳಗುತ್ತಿದ್ದ ತನ್ನ ಎತ್ತರವಾದ ಶ್ರೇಷ್ಠತಮ ರಥವನ್ನು ಪತ್ನೀ ಸಮೇತ ಹತ್ತಿ, ನಿಷಧನಗರ ಪ್ರವೇಶ ಮಾಡಿದನು. ಮೊಳಗುವ ಶಂಖ, ನಗಾರಿ, ಮೃದಂಗವಾದ್ಯಗಳು, ಡೋಲುಗಳು ಮತ್ತಿತರ ಘನ ವಾದ್ಯಗಳು ಗುಂಪು ಗುಂಪಾಗಿ ಸೇರಿ ದಂಧಣಿರ್ ಎಂಬಂತೆ ಉಚ್ಚಮಟ್ಟದಲ್ಲಿ ಅತಿಶಯವಾಗಿ ಶಬ್ದಿಸುತ್ತಾ ರಾಜವೈಭವವನ್ನು ಸಾರಿದುವು.

74. ಬಂದು ಹೊಕ್ಕನು ಮಂದಿರವ ನೃಪ
ವೃಂದ ನಲಿಯಲು ಸಕಲಜನಸಹಿ
ತಂದು ಸಿಂಹಾಸನಕೆ ಬಂದನು ಸಚಿವರೊಗ್ಗಿನಲಿ
ಇಂದುಮುಖಿ ದಮಯಂತಿಯೊಡನಾ
ನಂದದಲಿ ಸಾಮ್ರಾಜ್ಯವಾಳಿದ
ನಂದು ವರಪುರದರಸ ಚೆನ್ನಿಗರಾಯ ಕರುಣದಲಿ

ಬಂದು ಹೊಕ್ಕನು = ಪ್ರವೇಶಿಸಿದನು; ಮಂದಿರವ = ತನ್ನ ಅರಮನೆಯನ್ನು; ನೃಪವೃಂದ = ರಾಜ ಮಹಾರಾಜರ ಸಮೂಹವು; ನಲಿಯಲು = ಆನಂದೋತ್ಸಾಹದಿಂದ ಕುಣಿದಾಡಲು; ಸಕಲಜನಸಹಿತ + ಅಂದು = ಎಲ್ಲ ರೀತಿಯ ಜನ ಸಮೂಹವನ್ನು ಒಡಗೊಂಡು; ಸಿಂಹಾಸನಕೆ ಬಂದನು = ಸಿಂಹಾಸನಾರೂಢನಾದನು; ಸಚಿವರೊಗ್ಗಿನಲಿ = ಸಚಿವ ಸಮೂಹದೊಂದಿಗೆ; ಇಂದುಮುಖಿ = ಚಂದ್ರ ಚೆಲುವೆ; ದಮಯಂತಿಯೊಡನಾನಂದದಲಿ = ದಮಯಂತಿ ಯೊಡನೆ ಆನಂದದಿಂದ; ಸಾಮ್ರಾಜ್ಯವಾಳಿದನಂದು = ತನ್ನ ನಿಷಧ ನಗರ ಸಾಮ್ರಾಜ್ಯವನ್ನು ಆಳಿದನು; ವರಪುರದರಸ = ಮಹಾಮಹಿಮಾನ್ವಿತನಾದ ವರ ಪುರದ; ಚೆನ್ನಿಗರಾಯ ಕರುಣದಲಿ = ಚೆನ್ನಿಗರಾಯನ ಆಶೀರ್ವಾದದಿಂದ.

ಚಂದ್ರನಂತೆ ಕಾಂತಿಯುತಳಾದ ಚೆಲುವೆ ದಮಯಂತಿಯೊಂದಿಗೆ ನಿಷಧಪುರದ ರಾಜ ನಳಮಹಾರಾಜನು ಪುರಪ್ರವೇಶ ಮಾಡಿದ ನಂತರ, ಸಕಲ ಜನಸಮೂಹದ, ಮಂತ್ರಿಜನರ, ರಾಜಮಹಾರಾಜರ ಸಮ್ಮುಖದಲ್ಲಿ ಸಿಂಹಾಸನಾರೂಢನಾದನು, ಅನಂತರ ಪ್ರೀತಿಯಿಂದ ವರಪುರದರಸನಾದ ಚೆನ್ನಿಗರಾಯನ ಆಶೀರ್ವಾದದಿಂದ ನಳನು ಬಹುಕಾಲ ಸಾಮ್ರಾಜ್ಯವನ್ನಾಳಿದನು.

ನಾಲ್ಕನೆಯ ಸಂಧಿ

ಮರುಗೆ ಪುರಜನ ಜೂಜಿನಲಿ ಪು
ಷ್ಕರಗೆ ರಾಜ್ಯವ ಸೋತು ನಳಭೂ
ವರನು ನಿಜಸತಿಸಹಿತ ಹೊರವಂಟನು ವನಾಂತರಕೆ

ಮರುಗೆ = ಸಂತಾಪಗೊಳ್ಳಲು; ಪುರಜನ = ಪಟ್ಟಣದ ಜನರೆಲ್ಲರು; ಜೂಜಿನಲಿ = ಪಣಕ್ಕೆ ಇಟ್ಟು ಆಡುವ ದ್ಯೂತದಾಟದಲ್ಲಿ; ಪುಷ್ಕರಗೆ = ತಮ್ಮನಾದ ಪುಷ್ಕರನಿಗೆ; ರಾಜ್ಯವ ಸೋತು = ಪಣಕ್ಕಿಟ್ಟಿದ್ದ ರಾಜ್ಯವನ್ನು ಸೋತು ಕಳೆದು ಕೊಂಡು; ನಳಭೂವರನು= ನಳಮಹಾರಾಜನು; ನಿಜಸತಿ ಸಹಿತ = ತನ್ನ ಪತ್ನೀ ಸಮೇತ; ಹೊರವಂಟನು = ಹೊರಹೊರಟನು; ವನಾಂತರಕೆ = ಕಾಡಿಗೆ.

ನಳಮಹಾರಾಜನು ಜೂಜಾಡಿ, ಸೋತು ಪಣಕ್ಕಿಟ್ಟಿದ್ದ ತನ್ನ ರಾಜ್ಯವನ್ನು ತಮ್ಮನಾದ ಪುಷ್ಕರನಿಗೆ ನೀಡಿ, ಪತ್ನೀಸಮೇತ ಕಾಡಿಗೆ ಹೊರಡಲು, ಪುರಜನರೆಲ್ಲ ಸಂತಾಪ, ವ್ಯಥೆ, ಮರುಕಗಳಿಂದ ನೊಂದರು.

1. ಕೇಳಿದ್ಯೆ ರಾಜೇಂದ್ರ ಧರ್ಮನೃ
ಪಾಲ ನೈಷಧನತುಳಸಂಪದ
ದೇಳಿಗೆಯನೇನೆಂಬೆ ಸಪ್ತದ್ವೀಪದವನಿಪರ
ಮೌಳಿಗಳು ನೃಪನಂಘ್ರಿಕಮಲವ
ನೋಲಗಿಸುತಿಹುದವನ ಕೀರ್ತಿ ಚ
ಡಾಳಿಸಿತು ತ್ರೈಜಗವನವನೀಪಾಲ ಕೇಳೆಂದ

ಕೇಳಿದ್ಯೆ = ಕೇಳಿದೆಯೇನು; ರಾಜೇಂದ್ರ = ರಾಜಶ್ರೇಷ್ಠ ಧರ್ಮರಾಯನೇ; ಧರ್ಮನೃಪಾಲ = ಧರ್ಮಪರ ರಾಜನಾದ; ನೈಷಧನ + ಅತುಳ ಸಂಪದದ + ಏಳಿಗೆಯನು + ಏನೆಂಬೆ = ನಿಷಧರಾಜನ ಅನುಪಮವಾದ ಸ್ಥಿರಸಂಪತ್ತನ್ನು ಏನೆಂದು ವರ್ಣಿಸಲಿ; ಸಪ್ತದ್ವೀಪದ + ಅವನಿಪರ = ಸಪ್ತದ್ವೀಪಗಳಲ್ಲಿಯೂ

ಇರುವ ಭೂಮಂಡಲಾಧೀಶ್ವರರ; ಮೌಳಿಗಳು = ಕಿರೀಟಗಳೂ; ನೃಪನ + ಅಂಘ್ರಿಕಮಲವನು + ಓಲಗಿಸುತಿಹುದು + ಅವನ = ನಳಮಹಾರಾಜನ ಪಾದಕಮಲಗಳಿಗೆ ತಲೆಬಾಗಿ ಗೌರವಿಸುತ್ತಿವೆ; ಕೀರ್ತಿ = ಖ್ಯಾತಿಯೂ, ಘನತೆಯೂ; ಚಡಾಳಿಸಿತು = ಹೆಚ್ಚಿಸಿತು; ತ್ರೈಜಗವನು + ಅವನೀಪಾಲ = ಮೂರೂ ಲೋಕಗಳನ್ನು ರಾಜಾಧಿರಾಜನೇ; ಕೇಳೆಂದ = ಆಲಿಸುವಂಥವನಾಗು ಎಂದನು.

ಧರ್ಮರಾಯನಿಗೆ ರೋಮಶ ಮುನಿಯು ನಳಚರ್ಕವರ್ತಿಯ ಖ್ಯಾತಿಯ ಕುರಿತಂತೆ ಅಸೀಮ ಅಭಿಮಾನದಿಂದ ಹೇಳುತ್ತಿದ್ದಾನೆ. "ರಾಜಶ್ರೇಷ್ಠನಾದ ಧರ್ಮ ರಾಯನೇ ನಳನೃಪನ ಕೀರ್ತಿಯನ್ನು ಕುರಿತು ಕೇಳಿರುವೆಯೇನು? ಆಲಿಸು ವಂಥವನಾಗು. ಆ ನಿಷಧಪುರದ ಅರಸನಾದ ನಳನ ಅನುಪಮ ಸಿರಿಸಂಪತ್ತನ್ನು ಏನೆಂದು ವರ್ಣಿಸಲಿ? ಸಪ್ತದ್ವೀಪಗಳಲ್ಲಿರುವ ಸಮಸ್ತ ಭೂಮಂಡಲಾಧೀಶ್ವರರ ಕಿರೀಟಗಳೂ ಅವನ ಪಾದಕಮಲಕ್ಕೆ ಬಾಗಿ ನಮಿಸುತ್ತವೆ. ಅವನ ಕೀರ್ತಿ ಈಗ ಮೂರು ಲೋಕಗಳಲ್ಲೂ ಅತಿಶಯವಾಗಿ ಹರಡಿದೆ" ಎಂದನು.

2. ಇಂತೆಸೆದ ಸಂಪತ್ತಿನಲಿ ಭೂ
ಕಾಂತ ನಳಚಕ್ರೇಶನಲಿ ದಮ
ಯಂತಿ ಪಡೆದಳು ಪುತ್ರಕನ ವರಪುತ್ರಿಯೊರ್ವಳನು
ಸಂತಸದೊಳಿರಲಾ ವಿದರ್ಭ ಪು
ರಾಂತರದಿ ನೆರೆದಖಿಳಜನ ಭೂ
ಕಾಂತರೊಡನೈತಂದು ಹೊಕ್ಕರು ತಮ್ಮ ನಗರಿಗಳ

ಇಂತೆಸೆದ = ಹೀಗೆ ಶೋಭಾಯಮಾನವಾಗಿರುವ; ಸಂಪತ್ತಿನಲಿ = ಸಕಲೈಶ್ವರ್ಯದಲ್ಲಿದ್ದ; ಭೂಕಾಂತ = ಭೂಮಿಗೆ ಪರಮಪ್ರಿಯನಾದ; ನಳಚಕ್ರೇಶನಲಿ = ನಳಚಕ್ರವರ್ತಿಯಲ್ಲಿ; ದಮಯಂತಿ ಪಡೆದಳು = ದಮಯಂತಿಯು ಪಡೆದಳು; ಪುತ್ರಕನ = ಮಗನನ್ನು; ವರಪುತ್ರಿಯೋರ್ವಳನು = ಒಬ್ಬ ಉತ್ತಮಳಾದ ಮಗಳನ್ನು; ಸಂತಸದೊಳ್ + ಇರಲ್ + ಆ = ಸುಖಸಂತೋಷಗಳಿಂದ ನೆಮ್ಮದಿಯಾಗಿರಲು; ಆ ವಿದರ್ಭಪುರ + ಅಂತರದಿ = ವಿದರ್ಭನಗರದಲ್ಲಿ; ನೆರೆದ + ಅಖಿಳ ಜನ = ಬಂದು ಸೇರಿದ್ದ ಜನ; ಭೂಕಾಂತರೊಡನೆ + ಐತಂದು =

ಭೂಮಂಡಲಾಧೀಶ್ವರರು ಹೊರಟು; ಹೊಕ್ಕರು = ಪ್ರವೇಶಿಸಿದರು; ತಮ್ಮ ನಗರಿಗಳ = ತಂತಮ್ಮ ಆಡಳಿತವಿದ್ದ ಪ್ರದೇಶಗಳನ್ನು.

ಹೀಗೆ ಶೋಭಾಯಮಾನವಾಗಿದ್ದ ಸಿರಿಸಂಪತ್ತಿನ ಒಡೆಯನಾದ ನಳಚಕ್ರ ವರ್ತಿಯಲ್ಲಿ ಕೆಲಕಾಲಾನಂತರ ದಮಯಂತಿಯು ಒಬ್ಬ ಪುತ್ರನನ್ನೂ, ಒಬ್ಬ ಉತ್ತಮ ಚರಿತಳಾದ ಮಗಳನ್ನೂ ಪಡೆದಳು. ತದನಂತರ ಮದುವೆಗೆಂದು ವಿದರ್ಭದಲ್ಲಿ ಬಂದು ನೆರೆದಿದ್ದ ಬಂಧು ಬಾಂಧವಾದಿ ಸಕಲ ಜನರೂ ಭೂಮಂಡಲಾಧೀಶ್ವರರೂ ತಂತಮ್ಮ ನಗರಗಳನ್ನು ಹೋಗಿ ಸೇರಿದರು.

3. ಸುರಪನಾಗ ವಿದರ್ಭಪುರವನು
ತೆರಳುತಮರಾವತಿಗೆ ದಿಕ್ಪಾ
ಲರು ಸಹಿತ ನಲವಿಂದೆ ದಮಯಂತಿಯ ಚರಿತ್ರೆಯನು
ಹರುಷಮಿಗೆ ಕೊಂಡಾಡುತೈತರು
ತಿರಲು ಮಾರ್ಗದಿ ಕಂಡರಾ ಕಲಿ
ಪುರುಷನನು ಕುಟಿಲಾತ್ಮಕನ ನಿಸ್ಸಾರಹೃದಯನನು

ಸುರಪನಾಗ = ಆಗ ಸುರಪತಿಯಾದ ದೇವೇಂದ್ರನು; ವಿದರ್ಭಪುರವನು = ವಿದರ್ಭನಗರವನ್ನು; ತೆರಳುತಮರಾವತಿಗೆ = ಬಿಟ್ಟು ಮರಳಿ ಅಮರಾವತಿಗೆ ಹೊರಟು; ದಿಕ್ಪಾಲರು ಸಹಿತ = ದಿಕ್ಪಾಲರೊಂದಿಗೆ; ನಲವಿಂದೆ = ಸಂತೋಷದಿಂದ; ದಮಯಂತಿಯ ಚರಿತ್ರೆಯನು = ದಮಯಂತಿಯ ನಡೆನುಡಿ; ಇನ್ನಿತರ ಗುಣಸ್ವಭಾವಗಳನ್ನು; ಹರುಷಮಿಗೆ = ತುಂಬು ಮನದಾಳದಿಂದ; ಕೊಂಡಾಡುತ + ಐತರುತ + ಇರಲು = ಹೊಗಳುತ್ತ ಬರುತ್ತಿರಲು; ಮಾರ್ಗದಿ = ದಾರಿಮಧ್ಯದಲ್ಲಿ; ಕಂಡರು + ಆ; ಕಲಿಪುರುಷನನು = ಕಲಿಪುರುಷನನ್ನು ಕಂಡರು; ಕುಟಿಲಾತ್ಮಕನ = ವಕ್ರಬುದ್ಧಿಯ, ಕೆಟ್ಟ ಮನಸ್ಸಿನ; ನಿಸ್ಸಾರ ಹೃದಯನನು = ಕೆಟ್ಟ ಮನಸ್ಸಿನವನನ್ನು.

ಆ ಸಮಯದಲ್ಲಿ ಸುರಪತಿಯಾದ ದೇವೇಂದ್ರನು ತನ್ನೊಂದಿಗೆ ದಿಕ್ಪಾಲಕರನ್ನು ಒಡಗೊಂಡು ವಿದರ್ಭಪುರದಿಂದ ತೆರಳುವಾಗ ದಮಯಂತಿಯ ನಡೆನುಡಿ, ಉತ್ತಮ ಸ್ವಭಾವಗಳನ್ನು ಕುರಿತ ವಿವರಗಳನ್ನು ಮನದಾಳದಿಂದ

ಕೊಂಡಾಡುತ್ತಿದ್ದನು. ಆಗ ಮಧ್ಯದಾರಿಯಲ್ಲಿ ಅವರೆಲ್ಲರೂ ವಕ್ರ ಬುದ್ಧಿಯ, ಕೆಟ್ಟ ಹೃದಯದ ಕಲಿಪುರುಷನನ್ನು ಕಂಡರು.

4. ಕುರುಳು ಜುಂಜುರು ತಲೆಯ ತಗ್ಗಿದ
ಕೊರಳ ಕೆಂಗರಿಗಣ್ಣ ಮೋರೆಯ
ಹರಕುಗಡ್ಡದ ಕೆಂಚುಮೀಸೆಯ ಮಲಿನವಸನದಲಿ
ನೆರೆದ ವೀರ ಕರಾಳಭಟರಿ
ತ್ತೆರದೊಳುಕ್ಕಿನ ತೇರಿನಲಿ ಕಲಿ
ಪುರುಷ ಕಾಣಿಸಿಕೊಂಡನಮರೇಶ್ವರನ ನಸುನಗುತ

ಕುರುಳು = ತಲೆಗೂದಲು; ಜುಂಜುರು ತಲೆಯ = ಗುಂಗುರು ಕೂದಲ ತಲೆಯ; ತಗ್ಗಿದ ಕೊರಳ = ಹುದುಗಿ ಹೋದಂತಿದ್ದ ಕೊರಳಿನ; ಕೆಂಪು + ಕರಿ + ಕಣ್ಣು = ಕೆಂಪಡರಿದ ಕಪ್ಪು ಕಣ್ಣುಗಳ; ಮೋರೆಯ = ಮುಖದಲ್ಲಿಯ; ಹರಳುಗಡ್ಡದ = ಅಸ್ತವ್ಯಸ್ತವಾಗಿ ಚದುರಿ ಹೋದಂತಿರುವ ಗಡ್ಡದ; ಕೆಂಚು ಮೀಸೆಯ = ಕೆಂಬಣ್ಣದ ಮೀಸೆಯ; ಮಲಿನವಸನದಲಿ = ಕೊಳಕಾದ ಬಟ್ಟೆಯಲ್ಲಿ; ನೆರೆದ = ಸುತ್ತುವರಿದಿರುವ; ವೀರ = ಶೂರರಾದ; ಕರಾಳಭಟರು + ಇತ್ತೆರದೊಳ್ + ಉಕ್ಕಿನ = ಕಪ್ಪಾಗಿ ಭಯಂಕರವಾಗಿರುವ ಬಂಟರನ್ನು ತನ್ನ ಎರಡೂ ಬದಿಗಳಲ್ಲಿ ನಿಲ್ಲಿಸಿಕೊಂಡು ಉಕ್ಕಿನ; ತೇರಿನಲಿ = ರಥದಲ್ಲಿ; ಕಲಿಪುರುಷ = ಕಲಿಪುರುಷನು; ಕಾಣಿಸಿಕೊಂಡನ್ + ಅಮರ + ಈಶ್ವರನ = ಎದುರಿಗೆ ಪ್ರತ್ಯಕ್ಷನಾದನು ದೇವರುಗಳ ಅರಸನಾದ ದೇವೇಂದ್ರನಿಗೆ; ನಸುನಗುತ = ನಗೆಮೊಗದವನಾಗಿ.

ಕಲಿಪುರುಷನ ಬಹಿರಂಗ ರೂಪವು ಅವನ ಕುಟಿಲ ಮನಸ್ಥಿತಿಗನು ಗುಣವಾಗಿಯೇ ಇದ್ದಿತೆಂಬುದನ್ನು ಈ ಪದ್ಯ ಸ್ಪಷ್ಟಪಡಿಸುತ್ತದೆ. ಕಲಿಯು ಗುಂಗುರು ಗೂದಲಿನ, ತೆಗ್ಗಿ ಹೋದಂತಿದ್ದ ಕೊರಳ, ಕೆಂಪಡರಿದ ಕರಿಗಣ್ಣ, ಮೋರೆಯಲ್ಲಿ ಅಸ್ತವ್ಯಸ್ತವಾಗಿ ಹರಕು ಕಳೆಯಂತೆ ಹರಡಿದ್ದ ಗಡ್ಡದ, ಕೆಂಚುಮೀಸೆಯ, ಕೊಳಕು ಹತ್ತಿದ ಉಡುಗೆಯ, ಹತ್ತಿದ ಉಕ್ಕಿನ ರಥದ, ಸುತ್ತುವರಿದ ವೀರರಾದ ಕೆಟ್ಟ ಕರಿಬಣ್ಣದ, ಕ್ರೂರರಾದ ಬಂಟರ ಸಮೇತನಾಗಿ ದೇವೇಂದ್ರನ ಎದುರಿಗೆ ನಸುನಗುತ್ತ ಪ್ರತ್ಯಕ್ಷನಾದನು.

5. ಆರು ನೀ ಜಂಭಾರಿಯೋ ಇವ
ರಾರು ಯಮ ವರುಣಾದ್ಯರೋ ಸಂ
ಚಾರವೆತ್ತಲು ನಿಮಗೆಯೆನಲಮರೇಂದ್ರ ನಸುನಗುತ
ತೋರಹತ್ತದೊಳೆಂದ ನಳನಿಗೆ
ನಾರೆ ದಮಯಂತಿಯನು ಮದುವೆಯ
ಧಾರೆಯೆರೆಯಿಸಿ ಬಂದೆವೆನೆ ಖತಿಗೊಂಡ ಕಲಿರಾಯ

ಆರು ನೀ = ನೀನು ಯಾರು?; ಜಂಭಾರಿಯೋ = ಜಂಭನೆಂಬ ಅಸುರನನ್ನು ವಧಿಸಿದವನೋ?; ಇವರಾರು = ಇವರೆಲ್ಲರೂ ಯಾರು? ಯಮ ವರುಣಾದ್ಯರೋ = ಯಮ, ವರುಣ ಮೊದಲಾದವರೋ?; ಸಂಚಾರವೆತ್ತಲು = ಹೊರಟಿದ್ದು ಎಲ್ಲಿಗೋ?; ನಿಮಗೆ + ಎನಲು + ಅಮರ + ಇಂದ್ರ = ನಿಮಗೆ ಎಂದು ಕೇಳಲು ದೇವೇಂದ್ರನಾದ ಇಂದ್ರನು; ನಸುನಗುತ = ಮೆಲುನಗೆ ನಗುತ್ತ; ತೋರ + ಹತ್ತದೊಳ್ + ಎಂದ = ಮಹಾಶೂರ ಭುಜಬಲನು ಹೇಳಿದನು; ನಳನಿಗೆ = ನಳನೃಪನಿಗೆ; ನಾರಿ ದಮಯಂತಿಯನು = ಸುಂದರಿಯಾದ ದಮಯಂತಿಯನ್ನು; ಮದುವೆಯ = ಲಗ್ನದ; ಧಾರೆಯೆರೆಯಿಸಿ = ಧಾರೆ ಎರೆಯಿಸಿ; ಬಂದೆವು + ಎನೆ = ಬಂದೆವೆಂದು ಹೇಳಲು; ಖತಿಗೊಂಡ = ಸಿಟ್ಟಾದನು; ಕಲಿರಾಯ = ಕಲಿರಾಯನು.

ಕಲಿಯು ದೇವೇಂದ್ರನನ್ನುದ್ದೇಶಿಸಿ, ನೀನು ಯಾರು? ಜಂಭನನ್ನು ವಧಿಸಿದ ದೇವೇಂದ್ರನೇ? ಮತ್ತು ನಿನ್ನೊಡನಿರುವ ಇವರೆಲ್ಲರೂ ಯಾರು? ಯಮ, ವರುಣಾದಿ ದಿಕ್ಪತಿಗಳೋ? ಇತ್ತ ಎಲ್ಲಿಗೆ ಹೊರಟಿರಿ? ಎಂದು ಪ್ರಶ್ನೆಗಳ ಮಳೆ ಸುರಿಸಲು, ದೇವೇಂದ್ರನು ತಾನು ಮಾಡಿದ ಸಾಹಸ ಕಾರ್ಯವನ್ನು ಮಹಾಭುಜಬಲ ಪರಾಕ್ರಮದಂತೆ ಶೌರ್ಯದಿಂದ ಕೊಚ್ಚಿಕೊಳ್ಳುತ್ತ, ‘ನಾವು ಸುಂದರಿ ದಮಯಂತಿ ಯನ್ನು ನಳಮಹಾರಾಜನಿಗೆ ಧಾರೆಯೆರೆಯಿಸಿ ಬಂದೆವು’ ಎಂದನು. ಅದನ್ನು ಕೇಳಿದವನೇ ಕಲಿಪುರುಷನು ಮಹಾ ಕೋಪಾವಿಷ್ಟನಾದನು.

6. ಅನಿಮಿಷರು ನೀವಧಿಕಬಲರಾ
ವನಿತೆಯನು ಕೈಕೊಳ್ಳಲಾರದೆ

ಜನಪ ನಳನೃಪಗಿತ್ತು ಬಂದಿರಿ ಹರಮಹಾದೇವ
ಎನಗೆ ನೇಮಿಸಿ ಕಳುಹಿ ನಿಮ್ಮಯ
ಮನದ ಬಯಕೆಯ ಸಲಿಸುವೆನು ಕೇ
ಳೆನಲು ಸುರಪತಿ ನಸುನಗುತ ಕಲಿಪುರುಷಗಿಂತೆಂದ

ಅನಿಮಿಷರು = ದೇವತೆಗಳು (ಎವೆ ಮಿಟುಕಿಸದವರು, ಬಿಡುಗಣ್ಣರು) ನೀವ್ + ಅಧಿಕಬಲರ್ + ಆ = ನೀವು ಮಹಾ ಶಕ್ತಿವಂತರು; ಆ ವನಿತೆಯನು = ಆ ಹೆಣ್ಣು ಮಗಳನ್ನು; ಕೈಕೊಳ್ಳಲಾಗದೆ = ವಶಪಡಿಸಿಕೊಳ್ಳಲು ಕೈಲಾಗದೆ; ಜನಪ = ಜನಾಧಿಪತಿಯಾದ; ನಳನಿಗಿತ್ತು = ನಳನಿಗೆ ಕೊಟ್ಟು; ಬಂದಿರಿ = ಬಂದಿರುವಿರಲ್ಲಾ; ಹರಮಹಾದೇವ = ಹರಮಹಾದೇವಾ! ಎನಗೆ ನೇಮಿಸಿ = ನನಗೆ ವಹಿಸಿ; ಕಳುಹಿ = ಕಳುಹಿಸಿಕೊಡಿ; ನಿಮ್ಮಯ ಮನದ ಬಯಕೆಯ = ನಿಮ್ಮ ಮನದಾಸೆಯನ್ನು; ಸಲಿಸುವೆನು = ಪೂರೈಸುವೆನು; ಕೇಳೆನಲು = ಕೇಳು ದೇವೇಂದ್ರನೇ ಎನ್ನಲು; ಸುರಪತಿ = ದೇವರಾಜನಾದ ಇಂದ್ರನು; ನಸುನಗುತ = ಮೆಲುನಗೆಯನ್ನು ಬೀರಿ; ಕಲಿಪುರುಷಗೆ + ಇಂತೆಂದ = ಕಲಿಪುರುಷನಿಗೆ ಹೀಗೆ ಹೇಳಿದನು.

ಸಿಟ್ಟಿನಿಂದ ಕಿಡಿಕಿಡಿಯಾದ ಕಲಿಪುರುಷನು, “ದಮಯಂತಿಯನ್ನು ಸ್ವೀಕರಿಸಲು ಅಸಮರ್ಥರಾದಿರಲ್ಲಾ, ದೇವತೆಗಳು ಮನುಷ್ಯರಿಗಿಂತ ಅಧಿಕಬಲರಲ್ಲವೇ? ನಳನಿಗೆ ದಮಯಂತಿಯನ್ನು ಧಾರೆಯೆರೆದು ಬಂದಿರುವಿರಲ್ಲಾ, ಹರ ಮಹಾದೇವಾ! ಈಗಲೂ ನನಗೆ ಅನುಮತಿ ನೀಡಿ. ನಿಮ್ಮ ಮನದಾಸೆಯೇ ನೆರವೇರುವಂತೆ ಮಾಡುವೆನು” ಎಂದು ದೇವೇಂದ್ರನಿಗೆ ಹೇಳಲು ದೇವೇಂದ್ರನು ಅವನನ್ನು ಕುರಿತು ಹೇಳಲನುವಾದನು.

7. ಲೇಸನಾಡಿದೆ ಕಲಿಪುರುಷ ನಿನ
ಗೀಸು ಪೌರುಷವುಂಟೆ? ನಮಗಿ
ನ್ನಾ ಸರೋರುಹಗಂಧಿಯಲಿ ಮನವಿಲ್ಲ ನಳನೃಪತಿ
ಆ ಸಮಸ್ತನೃಪಾಲರಲಿ ಸ
ದ್ಭೂಷಣನು ಶೌರ್ಯೋನ್ನತನು ಕಮ
ಲಾಸನನಿಗಳವಲ್ಲ ನಿನ್ನಲಿ ಹರಿವುದೇನೆಂದ

ಲೇಸನಾಡಿದೆ = ಬಹಳ ಒಳ್ಳೆಯ ಮಾತನ್ನಾಡಿದೆ; ಕಲಿಪುರುಷ = ಕಲಿ ಪುರುಷನೇ; ನಿನಗೆ + ಈಸು = ನಿನಗೆ ಇಷ್ಟು; ಪೌರುಷವುಂಟೆ? = ಸಾಮರ್ಥ್ಯ ವಿದೆಯೇನು?; ನಮಗೆ + ಇನ್ನು + ಆ = ಈಗ ನಮಗೆ ಆ; ಸರೋರುಹ ಗಂಧಿಯಲಿ = ಕಮಲದಂತೆ ಸುಗಂಧಿತಳಾದ ಸುಂದರಿಯಲ್ಲಿ; ಮನವಿಲ್ಲ = ಆಸೆ ಯಿಲ್ಲ; ನಳನೃಪತಿ = ನಳಭೂಪಾಲನು; ಆ ಸಮಸ್ತ ನೃಪಾಲರಲಿ = ಆ ಸಮಸ್ತ ಭೂಮಂಡಲಾಧೀಶರಲ್ಲಿ; ಸದ್ಭೂಷಣನು = ಅಲಂಕಾರಪ್ರಾಯನು; ಶೌರ್ಯೋನ್ನ ತನು– ಶ್ರೇಷ್ಠತಮನು ಮತ್ತು ಮಹಾಶೂರನು; ಕಮಲ + ಆಸನನಿಗೆ + ಅಳವಲ್ಲ; ಅವನಿಗೆ ಸರಿಸಾಟಿಯಾಗಲು ಕಮಲಾಸನನಾದ ಬ್ರಹ್ಮನಿಗೂ ಸಾಧ್ಯವಿಲ್ಲ; ನಿನ್ನಲಿ = ನಿನ್ನಿಂದ; ಹರಿವುದು + ಏನೆಂದ = ಇನ್ನು ಏನು ಮಾಡಲು ಸಾಧ್ಯ ? ಎಂದನು.

ದೇವೇಂದ್ರನಿಗೆ ದಮಯಂತಿಯು ನಳನ ಪತ್ನಿಯಾದ ಕುರಿತು ಮತ್ತು ಅವಳ ಗುಣ ಶೀಲಗಳ ಕುರಿತು ಗೌರವ ಬೆರೆತ ಅಭಿಮಾನವಿದೆ ಎಂಬುದನ್ನು ಈ ಪದ್ಯ ಹೊರಹಾಕುತ್ತದೆ. ಕಲಿಪುರುಷನ ಕೋಪದ ಮಾತಿಗೆ ಪ್ರತಿಯಾಗಿ ದೇವೇಂದ್ರನು “ಬಹಳ ಒಳ್ಳೆಯ ಮಾತನಾಡಿದೆ ಕಲಿಪುರುಷನೇ! ನಿನಗೆ ಅಷ್ಟೊಂದು ಪೌರುಷವಿದೆಯೇನು? ಅಲ್ಲಿ ಬಂದು ನೆರೆದಿದ್ದ ಸಮಸ್ತ ಭೂಮಂಡಲಾಧೀಶರಿಗೆ ನಳನೇ ಅಲಂಕಾರ ಪ್ರಾಯನಾಗಿದ್ದವನು. ಅವನೇ ಶೂರಶ್ರೇಷ್ಠನು. ಅವನನ್ನು ಗೆಲ್ಲಲು ಬ್ರಹ್ಮನಿಗೂ ಸಾಧ್ಯ ವಿಲ್ಲ. ಅಂತಹುದರಲ್ಲಿ ನಿನ್ನಿಂದ ಏನು ಮಾಡಲು ಸಾಧ್ಯ” ಎಂದನು.

8. ಎನಲು ಖತಿಗೊಂಡೆಂದ ಕೇಳೆಲೆ
ಯನಿಮಿಷಾಧಿಪಯೆನ್ನನರಿಯಾ
ದಿನಪನಿದಿರಲಿ ತಮದ ಹಾವಳಿಯೇ ಮಹಾದೇವ
ಎನಗೆ ಸರಿಯಾರಿನ್ನು ತಹೆನಾ
ವನಿತೆಯನು ಕುಹಕದಲಿ ನಳಭೂ
ಪನನು ಕೆಡಿಸಿಯೆ ಕಾನನಕೆ ಕಳುಹುವೆನು ನೋಡೆಂದ

ಎನಲು = ದೇವೇಂದ್ರನು ಹಾಗೆ ಹೇಳಲು; ಖತಿಗೊಂಡು + ಎಂದ = ಕಲಿಯು ಕೋಪದಿಂದ ಕನಲಿ ಹೇಳಿದನು; ಕೇಳೆಲೆ + ಅನಿಮಿಷ + ಅಧಿಪ +

ಎನ್ನನ್ + ಅರಿಯಾ = ಕೇಳು ಸುರಪತಿ ಇಂದ್ರನೇ, ನಿನಗೆ ನನ್ನ ಸಾಮರ್ಥ್ಯವು ತಿಳಿಯದೇನು; ಆ ದಿನಪನ + ಇದಿರಲಿ = ಆ ಸೂರ್ಯ ಪ್ರಭೆಯ ಮುಂದೆ; ತಮದ = ಕತ್ತಲೆಯ; ಹಾವಳಿಯೇ = ಉಪದ್ರವವೇ; ಮಹಾದೇವ = ಮಹಾದೇವಾ!; ಎನಗೆ = ನನಗೆ ಸರಿ = ಸಮಾನವಾಗಿರುವವರು; ಯಾರಿನ್ನು = ಇನ್ನೂ ಯಾರಿದ್ದಾರೆ; ತಹೆನ್ + ಆ = ತರುತ್ತೇನೆ; ಆ ವನಿತೆಯನು = ಆ ಹೆಣ್ಣನ್ನು; ಕುಹಕದಲಿ = ವಂಚನೆಯಿಂದ; ನಳಭೂಪನು = ನಳಮಹಾರಾಜನನ್ನು; ಕೆಡಿಸಿಯೆ = ಹಾಳುಗೆಡವಿ; ಕಾನನಕೆ = ಕಾಡಿಗೆ; ಕಳುಹುವೆನು = ಅಟ್ಟುತ್ತೇನೆ; ನೋಡೆಂದ = ನೋಡು ಎಂದ.

ದೇವೇಂದ್ರನ ಮಾತಿಗೆ ಕಲಿ ಕೋಪಾವೇಶದಿಂದ, "ಕೇಳು ಎಲೌ ಸುರ ಪತಿಯೇ ನಿನಗೆ ನನ್ನ ಸಾಮರ್ಥ್ಯದ ಅರಿವಿಲ್ಲವೇನು? ಸೂರ್ಯ ತೇಜದ ಮುಂದೆ ಕತ್ತಲೆಯ ಉಪದ್ರವವೇನು? ಮಹಾದೇವಾ! ನನಗೆ ಸರಿಸಮಾನರಾದವರು ಇನ್ನು ಯಾರಿದ್ದಾರೆ? ನೋಡು. ಆ ಹೆಣ್ಣನ್ನು ಮೋಸದಿಂದ ಹೊತ್ತು ತರುತ್ತೇನೆ. ಆ ನಳಮಹಾರಾಜನನ್ನು ಹಾಳುಗೆಡಿಸಿ ಕಾಡಿಗೆ ಅಟ್ಟುತ್ತೇನೆ" ಎಂದನು.

9. ಹರಿ ಹರ ಬ್ರಹ್ಮಾದಿ ದೇವರು
ನರರುರಗ ಸುರ ಯಕ್ಷ ಕಿನ್ನರ
ಗರುಡ ಗಂಧರ್ವಾದಿ ಸುಮನಸರೆಲ್ಲರನು ಬಿಡದೆ
ಹುರುಳಗೆಡಿಸುವೆ ಸಾಕು ನಳಭೂ
ವರನ ಮಾತೇನಿನ್ನು ಲೋಕಾಂ
ತರದೊಳೆದುರಿಲ್ಲೆನಗೆ ನೀವಂತರಿಯಿರೇ ಎಂದ

ಹರಿಹರ ಬ್ರಹ್ಮಾದಿ ದೇವರು = ತ್ರಿಮೂರ್ತಿಗಳಾದ ವಿಷ್ಣು, ಪರಶಿವ, ಬ್ರಹ್ಮ ಮೊದಲಾದ ದೇವರುಗಳು; ನರರ್ + ಉರಗ = ಮನುಷ್ಯರು, ನಾಗರು; ಸುರ = ದೇವಗಣ; ಯಕ್ಷ ಕಿನ್ನರ = ಯಕ್ಷರು, ಕಿನ್ನರರು; ಗರುಡ = ಗರುಡಗಣ; ಗಂಧರ್ವಾದಿ = ಗಂಧರ್ವರು ಮೊದಲಾದ; ಸುಮನಸರೆಲ್ಲರನು = ಅಮರಗಣಕ್ಕೆ ಸೇರಿದ ಎಲ್ಲರನ್ನೂ; ಹುರುಳುಗೆಡಿಸುವೆ = ಸತ್ವಹೀನರನ್ನಾಗಿಸುತ್ತೇನೆ; ಸಾಕು ನಳಭೂವರನ = ಇಷ್ಟೇ ಸಾಕು ನಳಮಹಾರಾಜನ; ಮಾತೇಕಿನ್ನು = ಕುರಿತು

ಯೋಚಿಸುವುದೇನು ಮಹಾಕಾರ್ಯವೇ?; ಲೋಕಾಂತರದೊಳು + ಎದುರು + ಇಲ್ಲ + ಎನಗೆ = ಈ ಲೋಕ ಸಮಸ್ತದಲ್ಲೂ ನನ್ನನ್ನು ಎದುರಿಸಿ ನಿಲ್ಲುವಂಥವರು ಯಾರೂ ಇಲ್ಲ; ನೀವು + ಅಂತು + ಅರಿಯಿರೇ = ಹಾಗೆಂದು ನಿಮಗೇ ತಿಳಿಯದೇನು ಎಂದನು.

ತ್ರಿಮೂರ್ತಿಗಳಾದ ಬ್ರಹ್ಮ ವಿಷ್ಣು ಮಹೇಶ್ವರರೇ ಮೊದಲಾದ ದೇವರುಗಳು, ಮನುಷ್ಯರು, ನಾಗರು, ಸುರಗಣ, ಯಕ್ಷರು, ಕಿನ್ನರರು, ಗರುಡ, ಗಂಧರ್ವರು ಮುಂತಾದ ಅಮರಗಣದವರೆಲ್ಲರನ್ನೂ ಬುದ್ಧಿಗೆಡಿಸಿ ಸತ್ವಹೀನರಾಗಿಸಬಲ್ಲೆ. ಅಂತಹುದರಲ್ಲಿ ಈ ನಳಮಹಾರಾಜ ನನಗೆ ಯಾವ ಲೆಕ್ಕ? ನನ್ನನ್ನೆದುರಿಸಿ ನಿಲ್ಲುವಂಥವರು ಯಾರೂ ಇಲ್ಲ ಎಂಬುದನ್ನು ನೀವೇನು ಅರಿಯದವರೇನು? ಎಂದು ಕಲಿಪುರುಷನು ಕೊಚ್ಚಿಕೊಂಡನು.

10. ನಿಮಗೆ ಪೌರುಷವಿಲ್ಲ ನಳನಾ
ಕ್ರಮಿಸಿಕೊಂಡನು ಸತಿಯ ಪುರುಷಾ
ಧಮರು ನಿಮಗಿನ್ನೇಕೆ ಕೊಡಿ ವಟುವೇಷವನು ನಮಗೆ
ಕಮಲಮುಖಿಯನು ನಿಮಗೆ ಪಟ್ಟದ
ರಮಣಿಯನು ಮಾಡುವೆನುಯೆಂದು
ದ್ಭ್ರಮಿಸಿ ನುಡಿದನು ಗರ್ವದಲಿ ಕಲಿಪರುಷ ಸುರಪತಿಗೆ

ನಿಮಗೆ ಪೌರುಷವಿಲ್ಲ = ನಿಮಗೆ ಸಾಧಿಸುವ ಸಾಮರ್ಥ್ಯವಿಲ್ಲ; ನಳನಾಕ್ರಮಿಸಿಕೊಂಡನು = ನಳನು ಪಡೆದುಕೊಂಡನು; ಸತಿಯ = ಹೆಣ್ಣನ್ನು; ಪುರುಷಾಧಮರು = ಗಂಡುತನವಿಲ್ಲದವರು; ನಿಮಗಿನ್ನೇಕೆ = ನಿಮಗೆ ಇನ್ನು ಏಕೆ; ಕೊಡಿ ವಟುವೇಷವನು = ಬ್ರಹ್ಮಚಾರಿ ವೇಷವನ್ನು; ನಮಗೆ = ನನಗೆ; ಕಮಲಮುಖಿಯನು = ಕಮಲಮುಖಿಯನ್ನು ನಿಮಗೆ ಪಟ್ಟದ ರಮಣಿಯನು = ನಿಮಗೆ ಪಟ್ಟದ ರಾಣಿಯನ್ನಾಗಿ; ಮಾಡುವೆನು + ಎಂದು + ಉದ್ಭ್ರಮಿಸಿ = ಮಾಡುತ್ತೇನೆ ಎಂದು ಹುಚ್ಚಾದವನಂತೆ; ನುಡಿದನು = ಹೇಳಿದನು; ಗರ್ವದಲಿ = ತನ್ನಿಂದಲೇ ಸಾಧ್ಯವೆಂಬಂತಹ ಭ್ರಮೆಯಲ್ಲಿ; ಕಲಿಪುರುಷ = ಕಲಿಪುರುಷನು; ಸುರಪತಿಗೆ = ದೇವೇಂದ್ರನಿಗೆ.

ದೇವೇಂದ್ರನ ವಿಷಯದಲ್ಲಿ ಮಿತಿಮೀರಿದ ಕೋಪಾವೇಶದಿಂದ ಕಲಿಯು ಮಾತನಾಡುತ್ತಿದ್ದಾನೆ. ನಿಮಗೆ ಏನನ್ನಾದರೂ ಸಾಧಿಸಲೇಬೇಕೆಂಬ ಪೌರುಷವಿಲ್ಲ. ನಿಮಗೇಕೆ ಆ ಸಾಹಸ? ಕೊಡಿ, ಬ್ರಹ್ಮಚಾರಿ ವೇಷವೇ ಸಾಕು. ನನಗೆ ಆ ಹೆಣ್ಣನ್ನು ತರುವ ವಿಷಯವನ್ನು ಬಿಡಿ. ನಳನು ಪಡೆದುಕೊಂಡಿರುವ ಅವಳನ್ನು ತಂದು ನಿಮಗೆ ಪಟ್ಟದ ರಾಣಿಯನ್ನಾಗಿಸುತ್ತೇನೆ ಎಂದು ಮಹಾ ಅಟಾಟೋಪದಿಂದ ಹುಚ್ಚನಾದ ವನಂತೆ ಕಲಿಯು ದೇವೇಂದ್ರನಲ್ಲಿ ಕನಲಿ ಮಾತನಾಡಿದನು.

11. ಕೇಳಿ ಕಿವಿಮುಚ್ಚಿದರು ಹರಹರ
ಭಾಳಲೋಚನಯೆನುತ ಸಭೆಯಲಿ
ಖೂಳನಾಡಿದ ನುಡಿಗೆ ಸುರಪತಿ ಕನಲಿ ಖತಿಗೊಂಡು
ಬೀಳು ಮಾತುಗಳೇಕೆ ನಿನಗಿದು
ನೀಳಮೇಘಶ್ಯಾಮನಿಗೆ ಸಮ
ಪಾಳಿಯೆನಿಸುವ ನಳನೃಪಗೆ ಎರಡೆಣಿಸುವುದೆಯೆಂದ

ಕೇಳಿ ಕಿವಿ ಮುಚ್ಚಿದರು = ಕಲಿಯ ಮಾತು ಕೇಳಿ ಕಿವಿಗಳನ್ನು ಮುಚ್ಚಿಕೊಂಡರು; ಹರಹರ = ಹರಹರಾ!; ಭಾಳ ಲೋಚನಯೆನುತ = ಶಿವನೇ ಎಂದು ಉದ್ಗರಿಸುತ್ತ; ಸಭೆಯಲಿ = ತುಂಬಿದ ಜನ ಸಮೂಹದ ನಡುವೆ; ಖೂಳನಾಡಿದ ನುಡಿಗೆ = ದುಷ್ಟನಾದ ಕಲಿಯು ಆಡಿದ ಮಾತಿಗೆ; ಸುರಪತಿ = ದೇವೇಂದ್ರನು; ಕನಲಿ = ಕೆರಳಿ; ಖತಿಗೊಂಡು = ಕೋಪಗೊಂಡು; ಬೀಳು ಮಾತುಗಳೇಕೆ = ವ್ಯರ್ಥಾಲಾಪಗಳೇಕೆ; ನಿನಗಿದು = ನಿನಗೆ ಇದು; ನೀಳಮೇಘಶ್ಯಾಮನಿಗೆ = (ಕಪ್ಪುಮೋಡದಂತಿರುವ ಮಹಾವಿಷ್ಣು) ವಿಷ್ಣುವಿಗೆ; ಸಮಪಾಳಿಯೆನಿಸುವ = ಸರಿಸಮನಾದ; ನಳನೃಪಗೆ = ನಳಮಹಾರಾಜನಿಗೆ; ಎರಡೆಣಿಸುವುದೆಯೆಂದ = ದ್ರೋಹಮಾಡುವುದು ಸರಿಯೇ ಎಂದು ಕೇಳಿದನು.

ಜನ ಸಮೂಹದ ನಡುವೆ ಕಲಿಪುರುಷನಾಡಿದ ಮಾತುಗಳು ದೇವೇಂದ್ರನ ಕಿವಿಗೆ ಕೆಟ್ಟದಾಗಿ ಅಪಶಕುನದಂತೆ ಕೇಳಿದುದರಿಂದ ಅವನು ಎರಡೂ ಕಿವಿಗಳನ್ನು ಮುಚ್ಚಿಕೊಂಡು ಹರಹರಾ ಶಿವಶಿವಾ! ಎಂದು ಉದ್ಗರಿಸುತ್ತ ಕೆರಳಿ ಕೋಪಗೊಂಡ

ವನಾಗಿ ನಿನಗೇಕೆ ಇಂತಹ ವ್ಯರ್ಥಾಲಾಪ? ಮಹಾವಿಷ್ಣುವಿಗೆ ಸರಿಸಮನಾದ ನಳಮಹಾರಾಜನಿಗೆ ದ್ರೋಹ ಬಗೆಯುವುದು ಸರಿಯೇ ಎಂದು ಬುದ್ಧಿ ಹೇಳಿದನು.

12. ಬವಣೆಯೇಕೆ ಹಿಮಾಂಶುಕುಲಸಂ
ಭವನು ಸುಜನಾಧಾರ ನೃಪಕುಲ
ನಿವಹದೊಳು ವಿಖ್ಯಾತ ನಿತ್ಯೋದಾರ ನಿರ್ಮಳನು
ಇವಗೆ ವರವಿತ್ತೆವು ಸದಾ ನೆನೆ
ದವರ ಪಾತಕ ಹರಿವುದಿನ್ನಾ
ಭುವನಪತಿಗೆಣೆಯಾರು ಲೋಕದೊಳೆಂದನಮರೇಂದ್ರ

ಬವಣೆಯೇಕೆ = ತಲ್ಲಣವೇಕೆ; ಹಿಮಾಂಶುಕುಲಸಂಭವನು = ಹಿಮಕಿರಣನಾದ ಚಂದ್ರವಂಶದಲ್ಲಿ ಹುಟ್ಟಿದವನು; ಸುಜನಾಧಾರ = ಸಜ್ಜನರಿಗೆ ಆಧಾರವಾದವನು; ನೃಪಕುಲ = ರಾಜಾಧಿರಾಜರ; ನಿವಹದೊಳು = ಸಮೂಹದಲ್ಲಿ; ವಿಖ್ಯಾತ = ಪ್ರಸಿದ್ಧನು; ನಿತ್ಯೋದಾರ = ಸದಾ ಉದಾರಿ; ನಿರ್ಮಳನು = ಶುದ್ಧಮನದವನು; ಇವಗೆ ವರವಿತ್ತೆವು = ಆದ್ದರಿಂದಲೇ ಇವನಿಗೆ ವರವನ್ನಿತ್ತಿದ್ದೇವೆ; ಸದಾ ನೆನೆದವರ = ಅವನನ್ನು ಸದಾ ನೆನೆಯುವವರ; ಪಾತಕ = ಪಾಪಕರ್ಮಗಳು; ಹರಿವುದು + ಇನ್ನು + ಆ = ನಾಶವಾಗುತ್ತವೆ ಇನ್ನು ಆ; ಭುವನಪತಿಗೆಣೆಯಾರು = ಭುವನಪತಿಗೆ ಯಾರು ಸಮಾನರು; ಲೋಕದೊಳು + ಎಂದನು + ಅಮರೇಂದ್ರ = ಈ ಜಗತ್ತಿನಲ್ಲಿ ಎಂದು ದೇವೇಂದ್ರನು ನುಡಿದನು.

ದೇವೇಂದ್ರನು ಕಲಿಯನ್ನುದ್ದೇಶಿಸಿ, ತಲ್ಲಣವೇಕೆ? ಎಂದು ಪ್ರಶ್ನಿಸುತ್ತಾ ನಳನೃಪನ ಕುರಿತಂತೆ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದಾನೆ. ‘‘ನಳಮಹಾರಾಜನು ಪ್ರಸಿದ್ಧವಾದ ಚಂದ್ರವಂಶ ಸಂಭೂತನು. ರಾಜಾಧಿರಾಜರ ಸಮೂಹದಲ್ಲಿ ಜಗದ್ವಿಖ್ಯಾತನು. ಮಹಾ ಉದಾರಿಯೂ, ಶುದ್ಧಮನಸ್ಕನೂ, ಸಜ್ಜನರಿಗೆ ಆಶ್ರಯದಾತನೂ ಆಗಿದ್ದಾನೆ. ಅಂತಹುದರಿಂದಲೇ ಅವನಿಗೆ ನಾವು ವರವನ್ನಿತ್ತಿದ್ದೇವೆ. ಅವನನ್ನು ಯಾರು ಸದಾ ನೆನೆಯುತ್ತಾರೋ ಅಂತಹವರ ಪಾಪಕರ್ಮಗಳು ನಾಶವಾಗುತ್ತವೆ. ಆ ಭುವನಾಧಿಖ್ಯನಿಗೆ ಲೋಕಸಮಸ್ತದಲ್ಲಿ ಯಾರು ಸಮಾನರು?’’ ಎಂದು ಹೇಳಿದನು.

13. ಹಿಡಿಯೆ ಛಲವನು ಹಿಡಿದ ಬಳಿಕದ
ಬಿಡೆನು ಮತವೆನ್ನಲ್ಲಿ ನಿಷಧನ
ನಡವಿಗಟ್ಟದೆ ಮಾಣೆ ಮಾತಾಡದಿರಿ ನೀವೆನಲು
ಮಿಡುಕಿದರು ಕಡುಪಾಪಿಯಿವ ತಾ
ಬಿಡನೆನುತ ಮನನೊಂದು ಸುರಪತಿ
ತಡೆಯದೈದಿದನಮರಪುರಕವನೀಶ ಕೇಳೆಂದ

ಹಿಡಿಯೆ ಛಲವನು = ನಾನು ಹಠವಾದಿಯಲ್ಲ; ಹಿಡಿದ ಬಳಿಕದ ಬಿಡೆನು = ಹಠ ಹಿಡಿದರೆ ಅದನ್ನು ಸಾಧಿಸಿಯೇ ತೀರುವವನು; ಮತವೆನ್ನಲ್ಲಿ = ಎನ್ನಲ್ಲಿ ಅದೇ ತತ್ತ್ವ, ಅದೇ ನನ್ನ ಅಭಿಪ್ರಾಯ; ನಿಷಧನನ್ + ಅಡವಿಗೆ + ಅಟ್ಟದೆ = ನಿಷಧನಗರಾಧಿಪತಿಯನ್ನು ಕಾಡಿಗೆ ಅಟ್ಟದೆ; ಮಾಣೆ = ಸುಮ್ಮನಿರಲಾರೆ; ಮಾತಾಡದಿರಿ = ಮಾತಾಡದೆ ಸುಮ್ಮನಿರಿ; ನೀವ್ + ಎನಲು = ನೀವೆಲ್ಲರೂ ಎನ್ನಲು; ಮಿಡುಕಿದರು = ಮನನೊಂದು, ನಡುಗಿದರು; ಕಡುಪಾಪಿಯಿವ = ಇವನು ದುಷ್ಟ, ಮಹಾಪಾಪಿ; ತಾ = ಇವನು; ಬಿಡನೆನುತ = ಇನ್ನು ಸುಮ್ಮನಿರಲಾರ ಎಂದುಕೊಂಡು; ಮನನೊಂದು = ವ್ಯಥಿತನಾಗಿ; ಸುರಪತಿ= ದೇವೇಂದ್ರನು; ತಡೆಯದೆ + ಐದಿದನ್ + ಅಮರಪುರಕೆ + ಅವನೀಶ = ದೊರೆ, ಧರ್ಮರಾಯನೇ; ಅಲ್ಲಿ ನಿಲ್ಲಲು ಮನಸ್ಸಿಲ್ಲದೆ, ಸುರಪತಿಯು ಸ್ವರ್ಗಕ್ಕೆ ಮರಳಿದನು ಎಂದನು ರೋಮಶಮುನಿ.

“ನಾನು ಸಾಮಾನ್ಯವಾಗಿ ಹಠಮಾಡುವಂಥವನಲ್ಲ. ಆದರೆ ಒಮ್ಮೆ ಹಠ ಹಿಡಿದೆನೆಂದರೆ ಅದನ್ನು ಸಾಧಿಸದೆ ಬಿಡುವಂಥವನೂ ಅಲ್ಲ. ಇದೇ ನನ್ನ ಅಭಿಮತ, ಇದೇ ನನ್ನ ನಿಯಮ. ಆ ನಿಷಧಮಹಾರಾಜನನ್ನು ಕಾಡಿಗಟ್ಟದೆ ಬಿಡಲಾರೆ. ನೀವು ಮಾತನಾಡದೆ ಸುಮ್ಮನಿರಿ” ಎಂದು ಕಲಿಪುರುಷನು ಸಿಟ್ಟಾಗಿ ನುಡಿಯಲು, ಅವನ ನಿರ್ಧಾರವನ್ನು ಅರಿತ ಸುರಪತಿ ದೇವೇಂದ್ರನೂ ಇತರರೂ ಬಹಳ ನೊಂದು ಕೊಂಡು ಇವ ಮಹಾಪಾಪಿ, ದುಷ್ಟ, “ಇನ್ನಿವನು ಸುಮ್ಮನಿರಲಾರ ಎಂಬುದಾಗಿ ದುಃಖಿತ ಮನದಿಂದ ಸುಮ್ಮನಾದರು. ಅನಂತರ ಅಲ್ಲಿ ನಿಲ್ಲಲು ಮನಸ್ಸು ಒಪ್ಪದೆ

ದೇವೇಂದ್ರನು ಸ್ವರ್ಗಲೋಕಕ್ಕೆ ಮರಳಿ ಹೋದನು". ಧರ್ಮರಾಯನೇ ಕೇಳು ಎಂದು ರೋಮಶಮುನಿಯು ಕಥೆಯನ್ನು ಮುಂದುವರಿ ಸಿದನು.

14. ಇಳಿದನವನೀತಳಕೆ ಖಳಕುಳ
ತಿಳಕನೆಂದನು ತನ್ನ ಭಟರಿಗೆ
ನಲನೃಪನ ಕಟ್ಟುವಡಸಾಧ್ಯವಿದೆನಗೆಯಾತನಲಿ
ಒಲಿದಿಹಳು ಜಯವಧು ಸುಶೀಲತೆ
ನೆಲಸಿದುದು ದುಶ್ಶೀಲ ದುರ್ಗುಣ
ಬಳಸದರಸನೆನುತ್ತ ಹೊಕ್ಕನು ನಿಷಧಪಟ್ಟಣವ

ಇಳಿದನ್ + ಅವನೀತಳಕೆ = ಭೂಮಿಗೆ ಇಳಿದುಬಂದನು; ಖಳಕುಳ ತಿಳಕನೆಂದನು = ದುಷ್ಟಕೂಟದ ಮುಖಂಡನಾದ ಕಲಿಪುರುಷನು ಹೇಳಿದನು; ತನ್ನ ಭಟರಿಗೆ = ತನ್ನ ದೂತರಿಗೆ; ನಲನೃಪನ = ನಳಮಹಾರಾಜನನ್ನು; ಕಟ್ಟುವಡೆ + ಅಸಾಧ್ಯವಿದು + ಎನಗೆ + ಆತನಲಿ = ನಿರ್ಬಂಧಿಸುವ ಕಾರ್ಯವು ನನಗೆ ಅಸಾಧ್ಯವಾದುದು. ಅವನಲ್ಲಿ; ಒಲಿದಿಹಳು = ಪ್ರೀತಿಯಿಂದ ನೆಲಸಿದ್ದಾಳೆ; ಜಯವಧು = ವಿಜಯವೆಂಬ ಹೆಣ್ಣು; ಸುಶೀಲತೆ = ಸದ್ಗುಣಸದಾಚಾರಗಳು; ನೆಲಸಿದುದು = ಅವನಲ್ಲಿ ಮನೆಮಾಡಿವೆ; ದುಶೀಲ = ಕೆಟ್ಟ ನಡತೆ, ದುರ್ಗುಣ = ಕೆಟ್ಟಗುಣಗಳಿಗೆ; ಬಳಸದ + ಅರಸನು + ಎನ್ನುತ್ತ = ಈ ನೃಪನು ಎಂದೂ ಒಳಗಾಗದವನು ಎನ್ನುತ್ತಲೇ; ಹೊಕ್ಕನು ನಿಷಧ ಪಟ್ಟಣವ = ನಿಷಧನಗರ ಪ್ರವೇಶ ಮಾಡಿದನು.

ಕಲಿಪುರುಷನು ದೇವೇಂದ್ರನೊಂದಿಗಿನ ಮಾತುಕತೆ ಮುಗಿಸಿ ಆ ಕ್ಷಣವೇ ಭೂಲೋಕಕ್ಕೆ ಇಳಿದನು. ದುಷ್ಟ ಸಮೂಹದ ಮುಖಂಡನಾದ ಅವನಿಗೆ ನಳನ ಸದ್ಗುಣ ಶೀಲಗಳ ಬಗ್ಗೆ ಚೆನ್ನಾಗಿಯೇ ಅರಿವಿತ್ತು, ಆದ್ದರಿಂದಲೇ ತನ್ನ ದೂತರೊಂದಿಗೆ "ನಳಮಹಾರಾಜನನ್ನು ಯಾವುದೇ ಕೆಟ್ಟ ರೀತಿಯಲ್ಲಿ ನಿರ್ಬಂಧಿ ಸುವುದೆಂಬುದು ನನಗೂ ಅಸಾಧ್ಯವಾದ ಕೆಲಸವೇ. ಅವನಿಗೆ ಜಯ ಲಕ್ಷ್ಮಿಯು ಪ್ರೀತಿಯಿಂದ ಒಲಿದಿದ್ದಾಳೆ. ಸದ್ಗುಣ ಸದಾಚಾರಗಳು ಅವನಲ್ಲಿ ಮನೆ ಮಾಡಿವೆ. ಕೆಟ್ಟ ನಡತೆಗಳಿಗೂ, ಕೆಟ್ಟ ಗುಣಗಳಿಗೂ ಅವನು ಎಂದೂ ಒಳಗಾಗದಂಥವನು" ಎಂದು ಹೇಳುತ್ತಲೇ ನಿಷಧ ಪಟ್ಟಣ ಪ್ರವೇಶ ಮಾಡಿದನು.

15. ಮಲ್ಲಿಗೆಯ ವನ ಸಂಪಿಗೆಯ ಬನ
ವೆಲ್ಲ ಕೇತಕಿಕುಸುಮಮಯ ಮೆಳೆ
ಯೆಲ್ಲ ರುದ್ರಾಕ್ಷಿಗಳು ಸರಸೀರುಹದ ಕೊಳಗಳವು
ಬೆಲ್ಲವತ್ತಗಳಿಕ್ಷುದ್ರಾಕ್ಷಿಗ
ಳೆಲ್ಲ ಖರ್ಜೂರಾದಿ ವಸ್ತುಗ
ಳಲ್ಲದಿಲ್ಲ ವೃಥಾ ನೆಲನಿಲ್ಲ ನಳನ ರಾಜ್ಯದಲಿ

ಮಲ್ಲಿಗೆಯ ವನ = ಮಲ್ಲಿಗೆಯ ವನ; ಸಂಪಿಗೆಯ ಬನವೆಲ್ಲ = ಎಲ್ಲೆಲ್ಲೂ ಸಂಪಿಗೆಯ ವನಗಳು; ಕೇತಕೀ ಕುಸುಮಮಯ = ಕೇದಗೆ ಹೂಗಳಿಂದ ತುಂಬಿಹೋದ; ಮೆಳೆಯೆಲ್ಲ = ಪೊದರುಗಳು; ರುದ್ರಾಕ್ಷಿಗಳು = ರುದ್ರಾಕ್ಷಿಗಳು; ಸರಸೀರುಹದ = ಕಮಲಪುಷ್ಪದ; ಕೊಳಗಳು + ಅವು = ಕೊಳಗಳು ಮುಂತಾದುವೇ ತುಂಬಿದ್ದುವು; ಬೆಲ್ಲವತ್ತಗಳು + ಇಕ್ಷು + ದ್ರಾಕ್ಷಿಗಳೆಲ್ಲ = ಬಿಲ್ವಪತ್ರ ವೃಕ್ಷಗಳು, ಕಬ್ಬು, ದ್ರಾಕ್ಷಿಯ ತೋಟಗಳು; ಖರ್ಜೂರಾದಿ = ಖರ್ಜೂರ ಇತ್ಯಾದಿ; ವಸ್ತುಗಳಲ್ಲದೆ + ಇಲ್ಲ; ವಸ್ತುಗಳಿಲ್ಲದೆ ಇರುವಂತಹ ಪ್ರದೇಶಗಳೇ ಇಲ್ಲ; ವೃಥಾ ನೆಲನಿಲ್ಲ = ಬಳಕೆಯಾಗದ, ಹಾಳುಬಿದ್ದ ಪ್ರದೇಶಗಳೇ ಇಲ್ಲ; ನಳನ ರಾಜ್ಯದಲಿ = ನಳನು ಆಳುತ್ತಿದ್ದ ದೇಶದಲ್ಲಿ.

ನಳನೃಪನ ರಾಜ್ಯ ಸಿರಿ ಸಮೃದ್ಧವಾಗಿತ್ತು. ಎಲ್ಲೆಲ್ಲೂ ಸುಗಂಧಿತವಾದ ಭೂವೈಭವವೇ ಕಂಗೊಳಿಸುತ್ತಿತ್ತು. ಎಲ್ಲೆಲ್ಲೂ ಮಲ್ಲಿಗೆ ಸಂಪಿಗೆಯ ಬನಗಳು ತುಂಬಿ ತುಳುಕುತ್ತ, ಕೇದಗೆಯ ಬನಗಳೂ ಜೊತೆಗೂಡಿ ಪರಿಮಳಭರಿತವಾಗಿತ್ತು. ರುದ್ರಾಕ್ಷಿಯ ಮರ ಸಂದಣಿಸಿದುದೊಂದೆಡೆ ಮತ್ತೊಂದೆಡೆ ಕಮಲದ ಕೊಳಗಳು ಆಕರ್ಷಣೀಯ ಕೇಂದ್ರವಾಗಿದ್ದವು. ಬಿಲ್ವಪತ್ರೆ, ಕಬ್ಬು, ದ್ರಾಕ್ಷಿ, ಖರ್ಜೂರದ ತೋಟಗಳೂ ಈ ಸಮೃದ್ಧತೆಯ ಪಾಲುದಾರರಾಗಿ, ಇಂತಹದೊಂದು ವಸ್ತುವೇ ಇಲ್ಲದಿಲ್ಲವೆಂಬಂತೆ ಪಾಳುಬಿದ್ದ ನೆಲವೇ ಇರದಂತೆ ನಳನ ರಾಜ್ಯದಲ್ಲೆಲ್ಲೂ ಸಂಪತ್ಸಮೃದ್ಧ ಭೂವೈಭವ ಗಳು ತುಂಬಿ ತುಳುಕುತ್ತಿದ್ದವು.

16. ಇಲ್ಲವೆನ್ನರು ಬೇಡಿದರೆ ಬಿಡ
ರಲ್ಲಿ ಪಾಡಿನ ಪಂಥಗಳ ನುಡಿ

ಯಿಲ್ಲದನೃತವನಾಡರಗ್ಗದ ಸತ್ಯನಿರ್ಮಳರು
ಎಲ್ಲರೊಳಗತಿಹಿತರು ಕ್ರೋಧಗ
ಳಿಲ್ಲದಿಹ ಸದ್ಧರ್ಮಜೀವಿಗ
ಳಲ್ಲಿ ಮೆರೆದರು ಸುಜನರಾ ನಳನೃಪನ ರಾಜ್ಯದಲಿ

ಇಲ್ಲವೆನ್ನರು ಬೇಡಿದರೆ = ಬೇಡಿ ಬಂದವರಿಗೆ ಇಲ್ಲ ಎನ್ನುವವರೇ ಅಲ್ಲಿ ಇರಲಿಲ್ಲ; ಬಿಡರು + ಅಲ್ಲಿ = ಅವರು ಬಿಟ್ಟುಕೊಡುವವರಲ್ಲ, ಪಾಡಿನ = ಅವರವರ ರೀತಿ ರಿವಾಜು ನೀತಿ ನಿಯಮಾದಿಗಳನ್ನು; ಪಂಥಗಳ + ನುಡಿಯಿಲ್ಲದ + ಅನೃತ ವನ್ನಾಡರ್ + ಅಗ್ಗದ– ಹಟತೊಟ್ಟು 'ಹೀಗೆ' ಎಂಬಂತಹ ನುಡಿಯಿಲ್ಲ ದವರು, ಸುಳ್ಳನ್ನು ಆಡದವರು, ಶ್ರೇಷ್ಠರು; ಸತ್ಯ ನಿರ್ಮಳರು = ಸತ್ಯಸಂಧರು, ಶುದ್ಧ ಮನಃಪ್ರಕೃತಿಯುಳ್ಳವರು; ಎಲ್ಲರೊಳಗೆ + ಅತಿಹಿತರು = ಎಲ್ಲರಿಗೂ ಒಳ್ಳೆಯದನ್ನೇ ಬಯಸುತ್ತ, ಎಲ್ಲರಿಗೂ ಬೇಕಾದವರು; ಕ್ರೋಧಗಳಿಲ್ಲದಿಹ = ಕೋಪ, ಕ್ರೌರ್ಯ ಗಳಿಲ್ಲದ; ಸದ್ಧರ್ಮ ಜೀವಿಗಳಲ್ಲಿ = ಸತ್ಯವನ್ನೇ ಧರ್ಮವೆಂದು ತಿಳಿದು ಗೌರವಿಸುವಂಥವರು; ಅಲ್ಲಿ ಮೆರೆದರು = ಆ ರಾಜ್ಯದಲ್ಲಿ ಶೋಭಿತರು; ಸುಜನರು = ಶುದ್ಧಚಾರಿತ್ರ್ಯ ಮನುಷ್ಯರು; ನಳನೃಪನ ರಾಜ್ಯದಲ್ಲಿ = ನಳಮಹಾರಾಜನ ದೇಶದಲ್ಲಿ.

ನಳರಾಜನ ದೇಶದಲ್ಲಿ ಬೇಡಿ ಬಂದವರಿಗೆ ಇಲ್ಲ ಎನ್ನುವವರೇ ಇರಲಿಲ್ಲ. ಪ್ರಕೃತಿಯು ಎಷ್ಟು ಸಮೃದ್ಧವಾಗಿತ್ತೋ ಮಾನವ ಪ್ರಕೃತಿಯೂ ಅಷ್ಟೇ ಸುಸಂಸ್ಕೃತ ವಾದುದಾಗಿತ್ತು. ಅಲ್ಲಿಯ ಜನ ತಮ್ಮ ಜೀವನ ರೀತಿ ರಿವಾಜುಗಳನ್ನು ಎಂದೂ ಬಿಟ್ಟುಕೊಡುವಂಥವರಲ್ಲ. ಪಂಥ ಕಟ್ಟಿ 'ಹೀಗೆ' ಎಂದು ಕಟುನುಡಿಯಿಂದ ನಡೆವವರೇ ಅಲ್ಲ. ಸುಳ್ಳಾಡದ ಸತ್ಯನಿಷ್ಠರು, ಶುದ್ಧಮನಃ ಪ್ರಕೃತಿಯುಳ್ಳವರು, ಎಲ್ಲ ರಲ್ಲೂ ಒಳ್ಳೆಯದನ್ನೇ ಕಾಣುತ್ತ, ಎಲ್ಲರಿಗೂ ಹಿತವನ್ನೇ ಬಯಸುವಂಥವರು, ಸಂಸ್ಕೃತಿಯನ್ನೇ ಧರ್ಮವೆಂದು ತಿಳಿದು ಗೌರವಿಸುವಂಥವರು, ಶುದ್ಧಚಾರಿತ್ರ್ಯ, ಶುದ್ಧ ಸಂಸ್ಕೃತಿಯುಳ್ಳವರೇ ಆ ನಾಡಿನ ಎಲ್ಲೆಲ್ಲೂ ಶೋಭಾಯಮಾನವಾಗಿ ಮೆರೆ ಯುತ್ತಿದ್ದರು.

17. ಪತಿಯೆಡೆಗೆ ವಂಚಿಸರು ಸತಿಯರು
ಸುತರು ಪಿತೃಗಳ ನುಡಿಗಳನು ತಾ
ವತಿಗಳೆಯರಾಚಾರ ವರ್ಣಾಶ್ರಮದ ಧರ್ಮದಲಿ
ಮತಿಯುತರು ಹರಿಭಕ್ತಿಭಾವ
ವ್ರತನಿಯಮನಿಷ್ಠೆಯಲಿ ಜನಸ
ಮ್ಮತದೊಳೊಸೆದೊಪ್ಪುವರು ನೈಷಧನೃಪನ ರಾಜ್ಯದಲಿ

ಪತಿಯೆಡೆಗೆ ವಂಚಿಸರು = ತಂತಮ್ಮ ಪತಿಯರೊಂದಿಗೆ ಎಂದೂ ಮೋಸ, ಕಪಟಗಳಿಲ್ಲದವರು; ಸತಿಯರು = ಅಲ್ಲಿಯ ಸ್ತ್ರೀಯರು; ಸುತರು = ಮಕ್ಕಳು; ಪಿತೃಗಳ ನುಡಿಗಳನು = ತಮ್ಮ ತಾಯಿತಂದೆಯರ ಮಾತುಗಳನ್ನು; ತಾವು + ಅತಿಗಳೆಯರು + ಆಚಾರ = ತಾವುಗಳು ಎಂದೂ ಅತಿಕ್ರಮಿಸಿ ಹೋಗುವಂಥವರಲ್ಲ, ಸನ್ನಡತೆಯಲ್ಲಾಗಲೀ, ವರ್ಣಾಶ್ರಮದ ಧರ್ಮದಲಿ = ವರ್ಣಾಶ್ರಮ ಧರ್ಮ ಗಳಲ್ಲಿಯಾಗಲೀ; ಮತಿಯುತರು = ಮನಸ್ಸಿಟ್ಟು ನಡೆದುಕೊಳ್ಳುವವರು; ಹರಿಭಕ್ತಿಭಾವ = ಹರಿಭಕ್ತಿಯಲ್ಲಿ ಮನಸ್ಸುಳ್ಳವರು; ವ್ರತನಿಯಮ ನಿಷ್ಠೆಯಲಿ = ವ್ರತಗಳನ್ನು ವಿಧಿಬದ್ಧವಾಗಿ ನಡೆಸುವ ನಿಯಮವುಳ್ಳವರು; ಜನಸಮ್ಮತದೊಳ್ + ಒಸೆದು + ಒಪ್ಪುವರು = ಮತ್ತು ಈ ಎಲ್ಲ ವಿಷಯಗಳಲ್ಲಿಯೂ ಸಮಾಜದ ಜನರೊಂದಿಗೆ ಒಮ್ಮತದಲ್ಲಿಯೇ ನಡೆದು ಕೊಂಡು ಗೌರವಿಸಲ್ಪಟ್ಟವರು; ನೈಷಧನೃಪನ ರಾಜ್ಯದಲ್ಲಿ = ನಿಷಧರಾಜನಾದ ನಳನ ರಾಜ್ಯದಲ್ಲಿ.

ಸಾಮಾಜಿಕ ಚಿತ್ರದ ಮತ್ತೊಂದು ಮಗ್ಗುಲಾದ ಕೌಟುಂಬಿಕ ಪರಿಸರ ನಳನ ರಾಜ್ಯದಲ್ಲಿ ಹೇಗಿತ್ತೆಂಬುದನ್ನು ಈ ಚಿತ್ರ ಸ್ಪಷ್ಟಪಡಿಸುತ್ತಿದೆ. ಎಂದೂ ಅಲ್ಲಿಯ ಸ್ತ್ರೀಯರು ತಾವು ಕೈಹಿಡಿದ ಪತಿಯರಿಗೆ ಕಪಟ, ಮೋಸ ವಂಚನೆಗಳನ್ನು ಮಾಡದವರು, ಮಕ್ಕಳು ತಮ್ಮ ಹೆತ್ತವರ ಮಾತಿಗೆ ಎಂದೂ ಅತಿಕ್ರಮಿಸಿ ಹೋದಂಥವರಲ್ಲ, ಎಲ್ಲರೂ ಸನ್ನಡತೆ, ಸಚ್ಚಾರಿತ್ರ್ಯವುಳ್ಳವರಾಗಿದ್ದು, ವರ್ಣಾಶ್ರಮ ಧರ್ಮಕ್ಕನುಗುಣವಾಗಿ ನಡೆಯುವಂಥವರು, ಸಾಮಾಜಿಕ ವಿಧಿವಿಧಾನಗಳಿಗನು

ಗುಣವಾಗಿ ಜನಸಮ್ಮತ ಮಾರ್ಗದಲ್ಲಿಯೇ ನಡೆದುಕೊಂಡು ಗೌರವಾರ್ಹತೆಗಳಿಗೆ ಭಾಜನರಾದಂಥವರು ಆಗಿದ್ದರು.

18. ಅಲ್ಲಿ ತಿರುಗಿದ ಬೀದಿಬೀದಿಗ
ಳಲ್ಲಿ ಪುರಜನವರಿಯದಂತಿರ
ಲಲ್ಲಿ ಮಾಯಾರೂಪಿನಿಂದ ಪಿಶಾಚನಂದದಲಿ
ಸಲ್ಲಲಿತರಹ ವಿಷ್ಣುಭಕ್ತರಿ
ಗೆಲ್ಲ ನಯವಿದನಾಗಿ ಕುಜನರ
ನೆಲ್ಲ ಕಾಡುತ ಬಂದನರಮನೆಗಾಗಿ ಕಲಿರಾಯ

ಅಲ್ಲಿ ತಿರುಗಿದ = ಅಲ್ಲಿ ತಿರುಗಿದನು; ಬೀದಿಬೀದಿಗಳಲ್ಲಿ = ಆ ನಗರದ ಎಲ್ಲ ಬೀದಿಬೀದಿಗಳಲ್ಲೂ; ಪುರಜನರು + ಅರಿಯದಂತೆ + ಇರಲು + ಅಲ್ಲಿ = ಆ ಪಟ್ಟಣದ ಜನರು ಗುರುತುಹಿಡಿಯದಂತೆ ಅಲ್ಲಿರಲು; ಮಾಯಾರೂಪಿನಿಂದ = ಮಾಯಾವೇಷಧಾರಿಯಾಗಿ; ಪಿಶಾಚನಂದದಲಿ = ಪಿಶಾಚನಂತೆ ಅಲೆಯುತ್ತ; ಸಲ್ಲಲು + ಇತರ = ಇತರ ರೀತಿಗಳಲ್ಲಿ ಒಪ್ಪುತ್ತ; ವಿಷ್ಣುಭಕ್ತರಿಗೆಲ್ಲ = ವಿಷ್ಣುಭಕ್ತರೊಂದಿಗೆಲ್ಲ; ನಯವಿದನಾಗಿ = ಮೃದುವಾಗಿ ನಡೆದುಕೊಳ್ಳುತ್ತ; ಕುಜನರನೆಲ್ಲ = ಕೆಟ್ಟವರನ್ನೆಲ್ಲ; ಕಾಡುತ = ಪೀಡಿಸುತ್ತ; ಬಂದನರಮನೆಗಾಗಿ = ಅರಮನೆಯತ್ತ ಬಂದನು; ಕಲಿ ರಾಯ = ಕಲಿಪುರುಷನು.

ಕಲಿಪುರುಷನು ನಳನ ಪುರಪ್ರವೇಶ ಮಾಡಿದನಂತರ ಪುರಜನರು ಯಾರೂ ತನ್ನನ್ನು ಗುರುತುಹಿಡಿಯದಂತೆ ಮಾರುವೇಷಧಾರಿಯಾಗಿ ಪಿಶಾಚನಂತೆ ಬೀದಿಬೀದಿಗಳಲ್ಲಿ ಅಲೆಯುತ್ತ, ವಿಷ್ಣುಭಕ್ತರಂತಹ ಸಜ್ಜನರೊಂದಿಗೆ ನಯ ವಿನಯಗಳಿಂದ, ಮೃದು ಮಾತಿನಲ್ಲಿ ನಡೆದುಕೊಳ್ಳುತ್ತ, ದುರ್ಜನರನ್ನು ನಾನಾ ರೀತಿಯಲ್ಲಿ ಕಾಡುತ್ತ ಕೊನೆಗೆ ನಳನ ಅರಮನೆಯಲ್ಲಿಗೆ ಬಂದು ಸೇರಿದನು.

19. ಮುರಿದು ನೋಡಿದನಲ್ಲಿ ತೆಂಗಿನ
ಮರಗಳುನ್ನತ ವಿವಿಧವೃಕ್ಷದ
ಹೊರಿಗೆಯಲಿ ಕಣ್ಗೆಸೆವ ನಗರೋದ್ಯಾನವೀದಿಯಲಿ
ಉರುತರದೊಳಿಹ ಅರ್ಕಪತ್ರದ

ತರುವಿನಗ್ರದೊಳಿರ್ದ ಬಹುದಿನ
ವರಸ ಕೇಳ್ ಕಲಿಪುರುಷನಿತ್ತಲು ರಾಜಭವನದಲಿ

ಮುರಿದು ನೋಡಿದನಲ್ಲಿ = ಅಲ್ಲೆಲ್ಲ ಸುತ್ತಾಡಿ ನೋಡಿದನು; ತೆಂಗಿನ ಮರಗಳು + ಉನ್ನತ = ತೆಂಗಿನ ಮರಗಳಲ್ಲಿ, ಎತ್ತರೆತ್ತರವಾಗಿದ್ದ; ವಿವಿಧ ವೃಕ್ಷದ = ಬಗೆಬಗೆಯ ಮರಗಳಲ್ಲಿ; ಹೊರಿಗೆಯಲಿ = ಅತ್ಯುತ್ಸಾಹದಿಂದ; ಕಣ್ಗೆ + ಎಸೆವ = ಕಣ್ಣನ್ನು ಸೆಳೆಯುವ; ನಗರ + ಉದ್ಯಾನವೀದಿಯಲಿ = ನಿಷಧನಗರದ ಉದ್ಯಾನ ಗಳಲ್ಲಿದ್ದ ಬೀದಿಗಳಲ್ಲಿ; ಉರುತರದೊಳ್ + ಇಹ = ಎತ್ತರೆತ್ತರವಾಗಿದ್ದ ದೊಡ್ಡ; ಅರ್ಕಪತ್ರದ = ಎಕ್ಕೆದೆಲೆಗಳ; ತರುವಿನ + ಅಗ್ರದೊಳ್ + ಇರ್ದ = ಮರಗಳ ತುದಿಯಲ್ಲಿ ಇದ್ದನು; ಬಹುದಿನವು + ಅರಸ = ಬಹಳ ದಿನಗಳು ಅರಸನೇ; ಕೇಳ್ = ಕೇಳು; ಕಲಿಪುರುಷನ್ + ಇತ್ತಲು = ಕಲಿಪುರುಷ, ಮತ್ತೊಂದೆಡೆ; ರಾಜಭವನ ದಲಿ = ನಳನೃಪನ ಅರಮನೆಯಲ್ಲಿ.

ಕಲಿಪುರುಷನು ಅರಮನೆಯ ಸುತ್ತಮುತ್ತಲೆಲ್ಲ ತಿರುಗಿ ನೋಡಿದನು. ಬಳಿಕ ಅಲ್ಲೆಲ್ಲ ಸಮೃದ್ಧವಾಗಿ ಬೆಳೆದಿದ್ದ ತೆಂಗಿನಮರಗಳು ಹಾಗೂ ಇತರ ಬಗೆಬಗೆಯ ಎತ್ತರದ ಮರಗಳ ಮೇಲೆ, ಎಕ್ಕಗಿಡದ ಮೇಲೆ, ಹೀಗೆ ಅತ್ಯುತ್ಸಾಹದಿಂದ ಆ ನಗರದ ಉದ್ಯಾನವನಗಳಿದ್ದ ಬೀದಿಗಳಲ್ಲಿ ಬಹಳ ದಿನ ತಲೆಮರೆಸಿಕೊಂಡು ಇದ್ದನು. ಇತ್ತ ರಾಜಭವನವು ಬೇರೊಂದೇ ರೀತಿಯ ಉತ್ಸಾಹದಲ್ಲಿತ್ತು.

20. ಕರೆಸಿದನು ನಳನೃಪತಿ ಮುನಿಮು
ಖ್ಯರನು ಭೂಸುರವರ್ಗವನು ಸ
ತ್ಕರಿಸಿ ಜಪತಪಹೋಮಯಜ್ಞಾದಿಗಳನನುಗೊಳಿಸಿ
ಸುರರ ಸಂತರ್ಪಣೆಯೊಳಿರುತಿಹ
ನರಸನನುದಿನ ಪೂರ್ವಜನ್ಮಾಂ
ತರದ ಫಲವದನರಿಯೆ ಬಂದುದು ಕಾಲಗತಿ ನೃಪಗೆ

ಕರೆಸಿದನು = ಬರಮಾಡಿಕೊಂಡನು; ನಳನೃಪತಿ = ನಳಮಹಾರಾಜನು; ಮುನಿಮುಖ್ಯರನು = ಪ್ರಸಿದ್ಧರಾದ ಮುನಿ ಶ್ರೇಷ್ಠರನ್ನು; ಭೂಸುರವರ್ಗವನ್ನು =

ಬ್ರಾಹ್ಮಣ ವರ್ಗದವರನ್ನು; ಸತ್ಕರಿಸಿ = ಗೌರವಿಸಿ; ಜಪ + ತಪ + ಹೋಮ + ಯಜ್ಞ + ಆದಿಗಳನು + ಅನುಗೊಳಿಸಿ = ದೇವರ ನಾಮಗಳನ್ನು ಧ್ಯಾನಸ್ಥವಾಗಿ ಉಚ್ಚರಿಸುವ ಕ್ರಿಯೆಗಳಿಂದ ಹೋಮ ಹವನ ಹಾಗೂ ದೇವರ ಹೆಸರಿನಿಂದ ಅಗ್ನಿಗೆ ಹವಿಸ್ಸನ್ನು ಬಲಿಸಮರ್ಪಣೆಯಾಗಿ ಕೊಡುವ ಪೂಜೆ ಮುಂತಾದುವುಗಳನ್ನು ಸಿದ್ಧಮಾಡಿ; ಸುರರ = ದೇವದೇವತೆಯರಿಗೆ; ಸಂತರ್ಪಣೆಯೊಳ್ + ಇರುತಿಹನ್ = ಸಂತೃಪ್ತವಾದ ಭೋಜನಗಳನ್ನಿತ್ತು ತೃಪ್ತಿಪಡಿಸುತ್ತಾ ಇದ್ದು; ಅರಸನ್ + ಅನುದಿನ = ದಿನದಿನವೂ ಅರಸನಾದ ನಳಮಹಾರಾಜನು; ಪೂರ್ವಜನ್ಮಾಂತರದ = ತನ್ನ ಹಿಂದಿನ ಜನ್ಮಗಳ ಯಾದಿಯಲ್ಲಿ; ಫಲವದನು + ಅರಿಯೆ = ತಾನು ಗಳಿಸಿದ ಫಲವೇನೆಂಬುದನ್ನು ತಿಳಿಯಲೆಂಬಂತೆ; ಬಂದುದು ಕಾಲಗತಿ = ಬಂದಿತೇನೋ ಎಂಬಂತೆ ಮತ್ತೊಂದು ಕಾಲದ ಉರುಳುವಿಕೆ ಬಂದುದು ನೃಪಗೆ = ಅರಸನ ಜೀವನದಲ್ಲಿ.

ನಳಮಹಾರಾಜನು ಪ್ರಸಿದ್ಧರಾದ ಮುನಿಮುಖ್ಯರನ್ನೂ, ಬ್ರಾಹ್ಮಣರನ್ನೂ ಕರೆಸಿ ದಿನದಿನವೂ ಜಪತಪಗಳನ್ನು ಮಾಡಿಸಿ, ಯಜ್ಞ ಹೋಮಾದಿಗಳ ಮೂಲಕ ದೇವಾಧಿದೇವರಿಗೆ ಯಜ್ಞದ ಹವಿರ್ಭಾಗವನ್ನು ಬಲಿ ಸಮರ್ಪಣೆಯಾಗಿ ಸಲ್ಲಿಸಿ, ಎಲ್ಲರಿಗೂ ಮನಸ್ತೃಪ್ತಿಯಾಗುವಂತೆ ಸಂತರ್ಪಣೆಗಳನ್ನು ಮಾಡಿಸುತ್ತ ಇದ್ದನು. ತನ್ನ ಹಿಂದಿನ ಜನ್ಮ ಜನ್ಮಾಂತರಗಳ ಕರ್ಮಫಲವನ್ನು ತಿಳಿಯಲು ಕಾಲಕೂಡಿ ಬಂದಿತೇನೋ ಎಂಬಂತೆ ಅವನ ಜೀವನದಲ್ಲೂ ಕಾಲವು ಮತ್ತೊಂದು ಮಗ್ಗುಲಿಗೆ ಉರುಳಿತು.

21. ಒಂದು ದಿವಸದೊಳಾಗ ನೃಪನಿಗೆ
ಬಂದುದಲ್ಪಾಚಮನಕಾಲದೊ
ಳಂದು ಶುದ್ಧಾಚಮನವಿಲ್ಲದೆ ನಿಂದು ನೀರ್ಗುಡಿಯೆ
ಇಂದು ತನಗಿದೆ ಸಮಯವೆಂದಾ
ನಂದದಲಿ ಕಲಿಪುರುಷ ರಾಯನ
ಸಂಧಿಸಿದ ವಿಧಿವಶವ ತಪ್ಪಿಸಲಾರ ಹವಣೆಂದ

ಒಂದು ದಿವಸದೊಳಗಾ = ಹೀಗಿರುತ್ತ ಇರಲು ಒಂದು ದಿನ; ನೃಪನಿಗೆ = ಅರಸನಾದ ನಳನಿಗೆ; ಬಂದುದು + ಅಲ್ಪ + ಆಚಮನಕಾಲದೊಳ್ + ಅಂದು = ಸಂಧ್ಯಾವಂದನ ಸಮಯದಲ್ಲಿ; ಮಂತ್ರಪೂರ್ವಕವಾಗಿ ನೀರನ್ನು ಸೇವಿಸುವುದಕ್ಕೂ ಮುಂಚೆ; ಶುದ್ಧಾಚಮನವಿಲ್ಲದೆ = ಅಂಗಾಂಗ ಶುದ್ಧಪೂರ್ವಕವಾಗಿ ಮಂತ್ರವಿಧಿ ಗಳನ್ನು ಪೂರೈಸದೆ; ನಿಂದು = ನಿಂತು; ನೀರ್ಗುಡಿಯೆ = ತೀರ್ಥಸೇವನೆಯನ್ನು ಮಾಡಲು; ಇಂದು ತನಗಿದೆ = ಇಂದು ತನಗೆ ಕಾಲಕೂಡಿ ಬಂದಿದೆ; ಸಮಯವೆಂದು + ಆನಂದದಲಿ = ಸಮಯ ದೊರೆಯಿತು ಎಂಬ ಸಂತೋಷದಿಂದ; ಕಲಿಪುರುಷ = ಕಲಿಪುರುಷನು; ರಾಯನ ಸಂಧಿಸಿದ = ನಳರಾಯನನ್ನು ಪ್ರವೇಶಿಸಿದನು; ವಿಧಿವಶವ = ವಿಧಿಯು ಬಂದು ವಶಪಡಿಸಿಕೊಳ್ಳುವುದನ್ನು; ತಪ್ಪಿಸಲು + ಯಾರ = ತಪ್ಪಿಸುವುದು ಯಾರ; ಹವಣಿಂದ = ಪ್ರಯತ್ನದಿಂದ ತಾನೇ ಸಾಧ್ಯ? ಎಂದನು.

ನಳಮಹಾರಾಜನು ದಿನದಿನವೂ ಮಂಗಳಕರ ಜೀವನ ವಿಧಿವಿಧಾನಗಳಲ್ಲಿ ತೊಡಗಿರಲು, ಒಂದು ದಿನ ಶುಚಿರ್ಭೂತನಾಗಿ ಸಂಧ್ಯಾವಂದನ ವಿಧಿಗಳಲ್ಲಿ ಮಂತ್ರ ಪೂರ್ವಕವಾಗಿ ತೊಡಗಿಕೊಳ್ಳುವುದಕ್ಕೂ ಮೊದಲು ಶುದ್ಧಶೌಚನಾಗದೆ ಅಲ್ಪಕಾಲದಲ್ಲಿ ಆಚಮನಗಳನ್ನು ಪೂರೈಸುವುದನ್ನು ಕಲಿರಾಯನು ನೋಡಿ, ಅವನನ್ನು ಹಾಳು ಗೆಡವಲು ಇದೇ ಸುಸಮಯ ಎಂದುಕೊಂಡು ನಳಮಹಾರಾಜನ ಬದುಕನ್ನು ಪ್ರವೇಶಿ ಸಿದನು. ವಿಧಿಯ ಪ್ರಯತ್ನಗಳನ್ನು ಮೀರುವುದು ಯಾರಿಂದ ತಾನೇ ಸಾಧ್ಯ ಎಂದು ರೋಮಶ ಮುನಿಯು ಉದ್ಗರಿಸಿದನು.

ಪೂರ್ವಿಕರ ಸಮಾಜವು ತಾವು ನಂಬಿಕೊಂಡು ಬಂದ ದೈನಂದಿನ ಜೀವನವಿಧಿ ವಿಧಾನಗಳಲ್ಲಿ ನಿಯಮಬದ್ಧತೆಯನ್ನೂ, ಶುಚಿತ್ವವನ್ನೂ ಕಾಪಾಡಿಕೊಂಡು ಬಂದ ಬಗೆಯನ್ನೂ, ಅವುಗಳನ್ನು ಮೀರಿದಲ್ಲಿ ಉಂಟಾಗುವ ಅಪಾಯಗಳನ್ನು ತೆರೆದಿಡುವ ಮೂಲಕ ಆ ನಿಯಮಗಳನ್ನೂ ಸಾಂಪ್ರದಾಯಿಕ ಗೊಳಿಸುತ್ತ ಬಂದುದರ ಔಚಿತ್ಯವನ್ನು ಈ ಸಂದರ್ಭವು ಚಿತ್ರಿಸುತ್ತಿದೆ. ಪ್ರಾಚೀನ ಕನ್ನಡ ಕಾವ್ಯಗಳ ಇಂತಹ ಹಲವು ಹತ್ತು ಪ್ರಯತ್ನಗಳು ದೈನಂದಿನ ಬದುಕಿನಲ್ಲಿ

ಹಾಸುಹೊಕ್ಕಾಗಿ, ಸಂಪ್ರದಾಯದ ನಡೆಗಳಾಗಿ ಜನಜೀವನವನ್ನು ಆವರಿಸಿದುದನ್ನು ಕಾಣಬಹುದು.

22. ಕಪಟಭೂಸುರವೇಷದಲಿ ನಿ
ಷ್ಕಪಟ ನಳಭೂವರನ ಕೆಡಿಸುವ
ಯುಪಮೆಯನು ತಾ ನೆಗಳಿ ಬಂದನು ಪುಷ್ಕರನ ಹೊರೆಗೆ
ನಿಪುಣನೆಂದನು ನಿನಗೆ ನಳಭೂ
ಮಿಪನು ಸಖನೆನೆ ಕೇಳಿ ಬಂದಿಹೆ
ನಪಯಶಕೆ ಹೆದರದಿರು ನಿನಗಹುದಖಿಳಸಾಮ್ರಾಜ್ಯ

ಕಪಟಭೂಸುರ ವೇಷದಲಿ = ಕಲಿಪುರುಷನು ಕಪಟ ಬ್ರಾಹ್ಮಣನ ವೇಷದಲ್ಲಿ; ನಿಷ್ಕಪಟಿ = ಕಪಟವಿಲ್ಲದ, ಸರಳ ಮನಸ್ಸಿನ; ನಳಭೂವರನ = ನಳಮಹಾರಾಜನ; ಕೆಡಿಸುವ + ಉಪಮೆಯನು = ಜೀವನವನ್ನು ಹಾಳುಗೆಡಹುವ ಉಪಾಯವನ್ನು; ತಾ ನೆಗಳಿ ಬಂದನು = ತಾನು ಸೃಷ್ಟಿಸಿಕೊಂಡು ಬಂದನು; ಪುಷ್ಕರನ ಹೊರೆಗೆ = ಪುಷ್ಕರನ ಹತ್ತಿರ; ನಿಪುಣನೆಂದನು = ನೀನು ಬಹಳ ಜಾಣನೆಂದನು; ನಿನಗೆ ನಳಭೂಪನು = ನಿನಗೆ ನಳಮಹಾರಾಜನು; ಸಖನೆನೆ = ಮಿತ್ರನೆಂದು; ಕೇಳಿ = ಬಂದಿಹನು + ಅಪಯಶಕೆ = ಕೇಳಿ ತಿಳಿದುಕೊಂಡು ಬಂದಿದ್ದೇನೆ. ಅಪಕೀರ್ತಿಗೆ; ಹೆದರದಿರು = ಅಂಜದಿರು; ನಿನಗಹುದಖಿಳ ಸಾಮ್ರಾಜ್ಯ = ನಿನಗೆ ದಕ್ಕುವುದು ಈ ಸಮಸ್ತ ಸಾಮ್ರಾಜ್ಯವೂ.

ಕಪಟವರಿಯದ ನಳಮಹಾರಾಜನನ್ನು ಯಾವ ರೀತಿಯಲ್ಲಾದರೂ ಹಾಳುಗೆಡವಬೇಕೆಂದು ಕಾಯುತ್ತಿದ್ದ ಕಲಿಪುರುಷನು, ಕಪಟ ಬ್ರಾಹ್ಮಣನ ವೇಷದಲ್ಲಿ, ಬಂದು ನಳನನ್ನು ಕೆಡಿಸುವ ಉಪಾಯವೊಂದನ್ನು ಸೃಷ್ಟಿಸಿಕೊಂಡು ಅವನ ಆಪ್ತ ಸ್ನೇಹಿತನಾಗಿದ್ದ ಪುಷ್ಕರನಲ್ಲಿಗೆ ಬಂದು, ತನ್ನ ಸಂಚಿಗೆ ಜೊತೆಯಾಗಬೇಕೆಂದೂ ಅದಕ್ಕೆ ಪ್ರತಿಯಾಗಿ ಅವನನ್ನು ತಾನು ಸಮಸ್ತ ಸಾಮ್ರಾಜ್ಯದ ವಾರಸುದಾರ ನಾಗಿ ಸುತ್ತೇನೆಂದೂ ಆಸೆ ಹುಟ್ಟಿಸಿ, ಇದರಿಂದ ಬರುವ ಅಪಕೀರ್ತಿಗೆ ಹೆದರಬೇಕಿಲ್ಲ ವೆಂದೂ ಅಭಯವಿತ್ತನು.

23. ಬಲ್ಲೆಯಾ ನೀನೆನ್ನ ಲೋಕಕೆ
ಬಲ್ಲಿದನು ತಾ ಕಲಿಪುರುಷ ನಳ
ನಲ್ಲಿ ದ್ಯೂತವನಾಡಿ ಗೆಲಿಸುವೆ ನಿನ್ನ ನೆತ್ತದಲಿ
ಒಲ್ಲೆನೆನದಿರು ಸಕಲರಾಜ್ಯದ
ವಲ್ಲಭನ ಮಾಡುವೆನು ನಡೆ ಹುಸಿ
ಯಿಲ್ಲ ನಿಷಧನ ಕಿತ್ತು ಬಿಸುಡುವೆ ನಂಬು ನೀನೆಂದ

ಬಲ್ಲೆಯಾ ನೀನೆನ್ನ = ನಿನಗೆ ನನ್ನ ಬಗ್ಗೆ ತಿಳಿದಿದೆಯೇನು; ಲೋಕಕ್ಕೆ ಬಲ್ಲಿದನು = ನಾನು ಸಮಸ್ತ ಲೋಕಕ್ಕೂ ಶ್ರೇಷ್ಠನೂ, ಬಲಶಾಲಿಯೂ ಹೌದು; ತಾ ಕಲಿಪುರುಷ = ಕಲಿಪುರುಷನು ನಾನು; ನಳನಲ್ಲಿ = ನಳನೊಂದಿಗೆ; ದ್ಯೂತವನಾಡಿ = ಜೂಜನ್ನಾಡಿ; ಗೆಲಿಸುವೆ ನಿನ್ನ ನೆತ್ತದಲಿ = ಚದುರಂಗದಾಟದಲ್ಲಿ ನಿನ್ನನ್ನು ಗೆಲ್ಲಿಸುತ್ತೇನೆ; ಒಲ್ಲೆನೆನದಿರು = ಆಗುವುದಿಲ್ಲ ಎನ್ನಬೇಡ; ಸಕಲರಾಜ್ಯದ = ಸಮಸ್ತ ರಾಜ್ಯಗಳಿಗೂ; ವಲ್ಲಭನ ಮಾಡುವೆನು = ದೊರೆಯನ್ನಾಗಿಸುತ್ತೇನೆ; ನಡೆ = ಹೋಗೋಣ ನಡೆ; ಹುಸಿಯಿಲ್ಲ = ನಾನು ಸುಳ್ಳು ಹೇಳುತ್ತಿಲ್ಲ; ನಿಷಧನ = ನಿಷಧರಾಜ್ಯಾಧಿಪತಿಯನ್ನು; ಕಿತ್ತು ಬಿಸುಡುವೆ = ಅಧಿಕಾರದಿಂದ ಕಿತ್ತೊಗೆಯುತ್ತೇನೆ; ನಂಬು ನೀನೆಂದ = ನನ್ನ ಮಾತನ್ನು ನಂಬು ಎಂದನು.

ಆಸೆ ಆಮಿಷಗಳನ್ನು ಒಡ್ಡಿ ಕಲಿಪುರುಷನು ನಿಷಧಾಧಿಪತಿಯಾದ ನಳನನ್ನು ಹಾಳುಗೆಡವಲು ಪುಷ್ಕರನನ್ನು ಒಲಿಸಿಕೊಳ್ಳಲು ಪ್ರಯತ್ನಿಸುತ್ತಿರುವುದನ್ನು ಈ ಪದ್ಯ ವಿವರಿಸುತ್ತದೆ, "ನಿನಗೆ ನಾನು ಯಾರು, ನನ್ನ ಶಕ್ತಿ, ಪೌರುಷಗಳೆಂಥವು ಎಂಬುದು ತಿಳಿದಿದೆಯೇನು? ನಾನು ಸಮಸ್ತ ಲೋಕಕ್ಕೂ ಶ್ರೇಷ್ಠನಾದ ಕಲಿಪುರುಷ ನೀನು ನಳನೊಂದಿಗೆ ಜೂಜನ್ನಾಡು. ನಿನ್ನನ್ನು ಚದುರಂಗದಾಟದಲ್ಲಿ ನಾನು ಗೆಲ್ಲಿಸುತ್ತೇನೆ. ನಾನು ಸುಳ್ಳು ಸುಳ್ಳೇ ಆಸೆ ಹುಟ್ಟಿಸುವ ಮಾತುಗಳನ್ನಾಡುವವನಲ್ಲ. ಈ ಕೆಲಸ ಆಗುವುದಿಲ್ಲವೆನ್ನಬೇಡ. ನಿನ್ನನ್ನೇ ದೊರೆಯನ್ನಾಗಿಸುತ್ತೇನೆ. ಆ ನಿಷಧರಾಜ್ಯಾಧಿಪತಿ ಯನ್ನು ಅಧಿಕಾರ ಗದ್ದುಗೆಯಿಂದ ಕಿತ್ತೊಗೆಯುತ್ತೇನೆ ನನ್ನನ್ನು ನಂಬು" ಎಂದನು.

24. ನಂಬಿದನು ಲೇಸಾಗಿ ಭಾಷೆಯ
ನಿಂಬುಗೊಂಡುದು ಹೃದಯ ಪುಷ್ಕರ

ನೆಂಬ ಖಳ ಸಂತೋಷದಲಿ ಕಲಿಪುರುಷನೊಡಗೊಂಡು
ಅಂಬುಜಾಕ್ಷನ ಕಳೆಗೆ ತಾ ಪ್ರತಿ
ಬಿಂಬನೆನಿಸುವ ನರನ ಬಳಿಗತಿ
ಸಂಭ್ರಮದೊಳೈತಂದರಿಬ್ಬರು ರಾಯನೋಲಗಕೆ

ನಂಬಿದನು ಲೇಸಾಗಿ = ಸುಲಭವಾಗಿ ನಂಬಿದನು; ಭಾಷೆಯನ್ = ಕಲಿಯ ನುಡಿಗಳನ್ನು; ಇಂಬುಕೊಂಡುದು = ಮನೆಮಾಡಿತು; ಹೃದಯ = ಮನಸ್ಸಿನಲ್ಲಿ; ಪುಷ್ಕರನೆಂಬ ಖಳ = ಪುಷ್ಕರನೆಂಬ ದುಷ್ಟನು; ಸಂತೋಷದಲಿ = ಅತ್ಯಾನಂದದಿಂದ; ಕಲಿಪುರುಷನ + ಒಡಗೊಂಡು ಕಲಿಪುರುಷನೊಂದಿಗೆ; ಅಂಬು ಜಾಕ್ಷನ = ತಾವರೆಯಂತೆ ಕಣ್ಣುಳ್ಳವನಾದ ವಿಷ್ಣುವಿನ; ಕಳೆಗೆ = ಅನುಪಮ ಸೌಂದರ್ಯಕ್ಕೆ; ತಾ = ತಾನು; ಪ್ರತಿಬಿಂಬನೆನಿಸುವ = ಪ್ರತಿಬಿಂಬದಂತಿರುವ; ನಳನ = ನಳಮಹಾರಾಜನ; ಬಳಿಗೆ + ಅತಿ = ಹತ್ತಿರಕ್ಕೆ ಅತ್ಯಂತ; ಸಂಭ್ರಮದೊಳ್ + ಐತಂದರ್ + ಇಬ್ಬರು = ಅತ್ಯಂತ ಸಡಗರದಿಂದಲೆಂಬಂತೆ ಇಬ್ಬರೂ ಬಂದರು; ರಾಯನೋಲಗಕೆ = ನಳಮಹಾರಾಜನ ಆಸ್ಥಾನಕ್ಕೆ.

ಪುಷ್ಕರನು ಕಲಿಪುರುಷನ ಮಾತುಗಳನ್ನು ಸಂಪೂರ್ಣವಾಗಿ ನಂಬಿದನು, ಕಲಿಯ ಆಮಿಷಗಳು ಅವನ ಮನಸ್ಸಿನಲ್ಲಿ ಆಳವಾಗಿ ಬೇರೂರಿದವು. ಹಾಗಾಗಿ ಖಳನಾದ ಪುಷ್ಕರನು ಕಲಿಪುರುಷನೊಂದಿಗೆ ಹೊರಟು ಅಂಬುಜಾಕ್ಷನೆನಿಸಿದ ವಿಷ್ಣುವಿನಂತೆ ತೇಜೋಮಯನಾದ ನಳಮಹಾರಾಜನ ಆಸ್ಥಾನಕ್ಕೆ ಅತ್ಯಂತ ಸಂಭ್ರಮದಿಂದ ಇಬ್ಬರೂ ಬಂದು ಸೇರಿದರು.

ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ತಾವರೆಯು ವ್ಯಾಪಕವಾದ ಬಳಕೆಯನ್ನು ಹೊಂದಿದೆ. 1. ದೇವಾಧಿದೇವತೆಗಳ ಅಂಗಾಂಗಗಳನ್ನು, ಹುಟ್ಟನ್ನು, ಸೌಂದರ್ಯ ವನ್ನು ತಾವರೆಗೆ, ತಾವರೆ ಹೂವಿನ ಗುಣಕ್ಕೆ ಹೋಲಿಸುವುದು ಸಾಮಾನ್ಯ. ತಾವರೆಯು ನೀರು ಮತ್ತು ಮಣ್ಣಿನ ಸಹಜ ಸಾರರೂಪ ಮತ್ತು ಆಕಾಶ, ಅಗ್ನಿ, ವಾಯುಗಳ ಗುಣಸಾರವನ್ನು ಹೀರಿ ಅವುಗಳ ಸೌಂದರ್ಯವನ್ನು ತನ್ನ ಮೂಲಕ ಪ್ರದರ್ಶಿಸುವುವಂಥದು, ಅಂಟಿಯೂ ಅಂಟದ ಗುಣದ ಮೂಲಕ ಭಾರತೀಯ ಆಧ್ಯಾತ್ಮ ಗುಣವನ್ನೂ ನಿರ್ಮಲ ಗುಣವನ್ನೂ ಪ್ರಕಟಿಸುವಂಥದು. ಆದ್ದರಿಂದಲೇ

ದೇವದೇವತೆಯರನ್ನು ಅರವಿಂದಾಯತಾಕ್ಷ, ಪದ್ಮಚರಣ, ಕರಕಮಲ, ಪದ್ಮಾಕ್ಷಿ, ಪದ್ಮಗಂಧಿ ಇತ್ಯಾದಿಯಾಗಿ ಸಂಬೋಧಿಸುವಂಥದು ವಾಡಿಕೆಯಲ್ಲಿದೆ.

2. ಕಮಲಸಂಭವ ಎಂಬುದು ಕಮಲದ ಹೂವಿನ ಸ್ತ್ರೀಪುಂ-ದ್ವಿಲಿಂಗ ಗುಣವನ್ನು ಪ್ರಕಟಿಸುವಂಥದು. ಸ್ತ್ರೀ ಪುಂ ದ್ವಿಲಿಂಗದ ಕಮಲ ಪುಷ್ಪವು ಒಂದು ಎರಡಾಗುವ ಎರಡು ಒಂದಾಗಿ ಸಂಭವಿಸುವ ನೈಸರ್ಗಿಕ ಪ್ರಕ್ರಿಯೆಯನ್ನು ಸಂಕೇತಿಸುತ್ತದೆ. ಆದ್ದರಿಂದಲೇ ಬಹುಶಃ ವಿಷ್ಣುವನ್ನು ಸ್ಥಿತಿಕರ್ತ(ಪ್ರಕೃತಿಯ ವಾಸ್ತವ ಗುಣಗ್ರಾಹಿ)ಎಂಬರ್ಥದಲ್ಲಿ ಪುರಾಣಗಳು ಸಂಕೇತಿಸಿರಬಹುದು.

25. ಮಿಸುನಿ ರತ್ನಪ್ರಭೆಗಳಲಿ ರಂ
ಜಿಸುವ ಮಂಟಪದೊಳಗೆ ರಾಜ
ಪ್ರಸರಸಹಿತವನೀಶನಿದ್ದನು ಸಿಂಹಪೀಠದಲಿ
ಶಶಿಮುಖಿಯರೆಡಬಲದಿ ಕೈವಾ
ರಿಸುತ ಸಿತಚಾಮರವ ಚಿಮ್ಮಲು
ನಸುನಗುತ ಕೈ ಮುಗಿದು ಪುಷ್ಕರನೆಂದನಾ ನಳಗೆ

ಮಿಸುನಿ = ಚಿನ್ನ; ರತ್ನಪ್ರಭೆಗಳಲಿ = ರತ್ನಗಳ ಅಪೂರ್ವ ಕಾಂತಿಯಲ್ಲಿ; ರಂಜಿಸುವ = ಆಕರ್ಷಿಸುವ; ಮಂಟಪದೊಳಗೆ = ಮಂಟಪದದಲ್ಲಿ; ರಾಜ + ಪ್ರಸರ + ಸಹಿತ + ಅವನೀಶನ್ + ಇದ್ದನು = ವಿವಿಧ ರಾಜರುಗಳ ಸಮೂಹ ದೊಂದಿಗೆ ಧರಣಿಪತಿಯಾದ ನಳಮಹಾರಾಜನು ಇದ್ದನು; ಸಿಂಹಪೀಠದಲಿ = ಸಿಂಹಾಸನದಲ್ಲಿ; ಶಶಿಮುಖಿಯರು + ಎಡಬಲದಿ = ಅವನ ಎರಡೂ ಪಕ್ಕಗಳಲ್ಲಿ ಸುಂದರ ಸ್ತ್ರೀಯರು; ಕೈವಾರಿಸುತ = ಗುಣಗಾನ ಮಾಡುತ್ತ; ಸಿತಚಾಮರವ = ಬಿಳಿಬಣ್ಣದ ಬೀಸಣಿಗೆ ಯನ್ನು; ಚಿಮ್ಮಲು = ಬೀಸುತ್ತಿರಲು; ನಸುನಗುತ = ಮುಗುಳ್ನಗೆಯೊಂದಿಗೆ; ಕೈ ಮುಗಿದು = ಕೈಗಳನ್ನು ಮುಗಿದು; ಪುಷ್ಕರನೆಂದನಾ ನಳಗೆ = ಪುಷ್ಕರನು ನಳನನ್ನು ಕುರಿತು ಹೀಗೆಂದನು.

ಆಸ್ಥಾನದಲ್ಲಿಯ ಎತ್ತರವಾದ ವೇದಿಕೆಯಲ್ಲಿರಿಸಲಾಗಿದ್ದ ಹೊನ್ನಿನ ರತ್ನಸಿಂಹಾಸನದಲ್ಲಿ ಕಾಂತಿಯುತವಾಗಿ ಮಿರುಗುತ್ತ ಆಸೀನನಾಗಿದ್ದ ನಳಮಹಾ ರಾಜನಿಗೆ, ಚಂದ್ರವದನೆಯರು ಅವನ ಎಡಬಲಗಳಲ್ಲಿ ಆಶೀರ್ವಚನಪೂರ್ವಕ

ಗುಣಗಾನ ಮಾಡುತ್ತ, ಶ್ವೇತವರ್ಣದ ಚಾಮರಗಳನ್ನು ಬೀಸುತ್ತಿದ್ದಂತಹ ಸಂದರ್ಭ ದಲ್ಲಿ ಅಲ್ಲಿ ಪ್ರವೇಶಿಸಿದ ಪುಷ್ಕರನು ನಸುನಗುತ ನಳನಿಗೆ ನಮಸ್ಕರಿಸಿ ಹೇಳಲನು ವಾದನು.

26. ಅರಸ ಕೇಳೀ ವಿಪ್ರನತಿ ಭಾ
ಸುರ ಸುತೇಜದೊಳೆಸೆವ ನೆತ್ತವ
ನೆರಡ ಕಾಣಿಕೆಗೊಟ್ಟ ನನಗಿದರಲ್ಲಿ ಮನವಾಯ್ತು
ಹರವು ಹಾಸಂಗಿಗಳನಾಡುವೆ
ವಿರದೆ ಸೋತವನಾವನಾಗಲಿ
ಧರೆಯನುಳಿದು ವನಾಂತರಕೆ ತೆರಳುವುದು ಸತಿಸಹಿತ

ಅರಸ ಕೇಳೀ = ಅರಸನೇ ಆಲಿಸು; ಈ ವಿಪ್ರನು + ಅತಿ = ಈ ಬ್ರಾಹ್ಮಣನು ಬಹಳ; ಭಾಸುರ = ಪ್ರಕಾಶಮಾನವಾದ; ಸುತೇಜದೊಳೆಸೆವ = ತೇಜಸ್ಸಿನಿಂದ ಶೋಭಾಯಮಾನವಾಗಿರುವಂತಹ; ನೆತ್ತವನ್ + ಎರಡು = ಎರಡು ದಾಳಗಳನ್ನು; ಕಾಣಿಕೆಗೊಟ್ಟ = ಕಾಣಿಕೆಯಾಗಿ ಕೊಟ್ಟಿದ್ದಾನೆ; ನನಗೆ + ಇದರಲ್ಲಿ = ಇದರಲ್ಲಿ ನನಗೆ; ಮನವಾಯ್ತು = ಮನಸ್ಸಾಗಿದೆ; ಹರವು = ಅಗಲವಾಗಿ ಹರಡಿ; ಹಾಸಂಗಿಗಳನು + ಆಡುವೆವು + ಇರದೆ = ಹಾಗಾಗಿ ಪಗಡೆ ಹಾಸನ್ನು ಹಾಸಿ ನಾವು ಆಡೋಣ; ಸೋತವನು + ಆವನ್ + ಆಗಲಿ = ಸೋತವನು ಯಾರೇ ಆಗಿರಲಿ; ಧರೆಯನ್ + ಉಳಿದು = ಭೂಮಿಯನ್ನು ಬಿಟ್ಟುಕೊಟ್ಟು; ವನಾಂತರಕೆ = ಕಾಡಿನತ್ತ; ತೆರಳುವುದು = ಹೋಗುವುದು; ಸತಿಸಹಿತ = ಪತ್ನೀಸಮೇತ.

"ಅರಸನೇ, ನನ್ನೊಂದಿಗಿರುವ ಈ ಬ್ರಾಹ್ಮಣನು ನನಗೆ ಅತ್ಯಂತ ಮನೋಹರವಾದ ಎರಡು ದಾಳಗಳನ್ನು ನೀಡಿದ್ದಾನೆ. ಹಾಗಾಗಿ ಪಗಡೆಯಾಟ ವನ್ನಾಡುವ ಮನಸ್ಸಾಗಿದೆ. ಪಗಡೆಯ ಹಾಸನ್ನು ಅಗಲವಾಗಿ ಹರಡಿ ಹಾಸಿ ನಾವಿಬ್ಬರೂ ಆಡೋಣ. ಯಾರು ಪಗಡೆಯಾಟದ ಪಣದಲ್ಲಿ ಸೋಲುತ್ತಾರೋ ಅವರು ತಮ್ಮ ರಾಜ್ಯವನ್ನು ಬಿಟ್ಟುಕೊಟ್ಟು ಪತ್ನೀ ಸಮೇತ ಕಾಡಿಗೆ ಹೋಗಬೇಕು" ಎಂದು ಪುಷ್ಕರನು ನಳನಿಗೆ ಹೇಳಿದನು.

27. ಧರಣಿಪತಿ ನಿನಗಿನಿತು ಚಿತ್ತಕೆ

ಹರುಷವಾಗಿರಲಿನ್ನು ಮನದಲಿ
ಕೊರತೆದೋರಲು ಮಾಣುಯಿದು ಪಾರ್ಥಿವರ ಪಂಥ ಕಣ
ಧುರಕೆ ಬೇಂಟೆಗೆ ಜೂಜಿಗೆಂದಡೆ
ಕರೆದಡೋಸರಿಸುವುದು ನೀತಿಯೆ
ನಿರುತವಿದು ಚಿತ್ತೈಸುಯೆಂದನು ನೃಪಗೆ ಕೈಮುಗಿದು

ಧರಣಿಪತಿ = ಭೂಪಾಲನಾದ ದೊರೆಯೇ, ನಿನಗಿನಿತು = ನಿನಗೆ ಇಷ್ಟು; ಚಿತ್ತಕೆ = ಮನಸ್ಸಿಗೆ; ಹರುಷವಾಗಿರಲು + ಇನ್ನು = ಸಂತೋಷವಿರುವಾಗ ಇನ್ನೂ; ಮನದಲಿ = ಮನಸ್ಸಿನಲ್ಲಿ; ಕೊರತೆದೋರಲು= ಹಿಂಜರಿಕೆಯನ್ನು ತೋರುವುದು; ಮಾಣು + ಇದು = ಸರಿಯಲ್ಲ; ಇದು ಪಾರ್ಥಿವರ = ಇದು ಪೃಥ್ವಿಯನ್ನಾಳುವ ಕ್ಷತ್ರಿಯರ; ಪಂಥಕಣ = ಪಂಥಕಣವಲ್ಲವೇ; ಧುರಕೆ = ಯುದ್ಧಕ್ಕೆ; ಬೇಂಟೆಗೆ = ಮೃಗಗಳ ಬೇಟೆಗೆ, ಜೂಜಿಗೆಂದಡೆ = ಜೂಜುಗಳಿಗೆ ಎಂದರೆ; ಕರೆದಡೆ + ಓಸರಿಸುವುದು = ಆಹ್ವಾನಿಸಿದಾಗ ಹಿಂದೆಗೆಯುವುದು; ನೀತಿಯೆ = ಕ್ರಮವೇ?; ನಿರುತವಿದು = ಇದೇ ನ್ಯಾಯ; ಚಿತ್ತೈಸುಯೆಂದನು = ಮನಃಪೂರ್ವಕವಾಗಿ ಒಪ್ಪಿಕೋ ಎಂದನು; ನೃಪಗೆ ಕೈಮುಗಿದು = ನಳಮಹಾರಾಜನಿಗೆ ಕೈಮುಗಿದು.

“ಭೂಪಾಲನಾದ ನಳಮಹಾರಾಜನೇ, ಇಷ್ಟು ಸಂತೋಷದಿಂದಿದ್ದೀಯೆ, ಇಂತಹ ಸಮಯದಲ್ಲಿ ಯಾವುದಕ್ಕೂ ‘ಇಲ್ಲ’ ವೆನ್ನುವುದು ಸರಿಯಲ್ಲ. ಪೃಥ್ವಿಯನ್ನಾಳುವ ಕ್ಷತ್ರಿಯರ ಧರ್ಮವೆಂದರೆ, ಜೂಜು, ಬೇಟೆ, ಯುದ್ಧಗಳಿಗೆ ಎಂದೂ ಹಿಂಜರಿಯದಿರುವುದು ಹಾಗಾಗಿ ನನ್ನ ಆಹ್ವಾನವನ್ನು ತಿರಸ್ಕರಿಸಬೇಡ ಅದು ನ್ಯಾಯವಲ್ಲ ನನ್ನ ಬೇಡಿಕೆಯನ್ನು ಒಪ್ಪಿಕೋ” ಎಂದು ನಳಮಹಾರಾಜನಿಗೆ ಕೈ ಮುಗಿದು ಪುಷ್ಕರನು ಬೇಡಿದನು.

ಪದ್ಯ 25, 27 ಈ ಎರಡೂ ಪದ್ಯಗಳಲ್ಲಿ ಪುಷ್ಕರನು ‘ಕೈಮುಗಿದಿರುವ’ ಭಂಗಿಯಲ್ಲಿ ವ್ಯತ್ಯಾಸವಿದೆ. ಮೊದಲನೆಯದರಲ್ಲಿ ‘ನಸುನಗುತ’ ಕೈ ಮುಗಿದಿರುವು ದರಲ್ಲಿ ‘ನಿನಗೆ ಕಾದಿದೆ’ ಎಂಬ ಧ್ವನಿಯಿದೆ. ಎರಡನೆಯದರಲ್ಲಿ ತಾನು ಮಾಡಿದ ಕುತಂತ್ರಕ್ಕೆ ಒಪ್ಪಲೇಬೇಕು ಎಂಬಂತಹ ಒತ್ತಾಯ ಧ್ವನಿ ಇದೆ.

28. ಮೇದಿನೀಪತಿ ಕೇಳು ಸಜ್ಜನ

ಸಾಧು ಬಲ್ಲನೆ ನಳನು ಹೃದಯವ
ನಾ ದುರಾತ್ಮನ ನುಡಿಯ ಕೈಕೊಂಡಾಡಿದನು ನೃಪತಿ
ಭೇದದಲಿ ಕಲಿಪುರುಷ ಮಾಯೋ
ಪಾಧಿಯಲಿ ಪುಷ್ಕರನ ಜೂಜಿನ
ವಾದದಿಂದರೆಗಳಿಗೆಯಲಿ ಗೆಲಿಸಿದನು ವಸ್ತುಗಳ

ಮೇದಿನೀಪತಿ = ಭೂಮಿಯ ಒಡೆಯನೇ, ಧರ್ಮರಾಯನೇ; ಕೇಳು = ಆಲಿಸು; ಸಜ್ಜನ ಸಾಧು = ಸಜ್ಜನನೂ ಸಾಧುವೂ ಆದ; ಬಲ್ಲನೆ ನಳನು = ನಳಮಹಾರಾಜನು ಅರಿತಿರುವನೇ; ಹೃದಯವನ್ = ಮನಸ್ಸಿನಲ್ಲೇನಿದೆ ಎಂಬುದನ್ನು; ಆ ದುರಾತ್ಮನ = ಆ ಕೆಟ್ಟ ಮನಸ್ಸಿನ; ನುಡಿಯ = ಮಾತುಗಳನ್ನು; ಕೈಕೊಂಡು ಆಡಿದನು+ ನೃಪತಿ = ಮನಸ್ಸಿನಲ್ಲಿ ತೆಗೆದುಕೊಂಡು ಅವನನ್ನು ಹೊಗಳಿದನು ನಳ ಮಹಾರಾಜನು; ಭೇದದಲಿ = ಭೇದೋಪಾಯದಲ್ಲಿ; ಕಲಿಪುರುಷ = ಕಲಿ ಪುರುಷನು; ಮಾಯೋಪಾಧಿಯಲಿ = ಕಪಟತನದ ಹೊಗಳಿಕೆಯ ಮಾತುಗಳಲ್ಲಿ; ಪುಷ್ಕರನ = ಪುಷ್ಕರನ; ಜೂಜಿನ = ಪಂಥಾಹ್ವಾನದ; ವಾದದಿಂದ + ಅರೆಗಳಿಗೆ ಯಲಿ = ಮಾತುಗಳ ಮೂಲಕ ಅರೆಗಳಿಗೆಯಲ್ಲಿ; ಗೆಲಿಸಿದನು = ಜಯವಾಗುವಂತೆ ಮಾಡಿದನು; ವಸ್ತುಗಳ = ವಸ್ತು ವಿಶೇಷಗಳನ್ನು ಕೊಡಿಸಿ ಸಂತೋಷಪಡಿಸಿದನು.

ಧರ್ಮರಾಯನೇ ಕೇಳು, ಸಾಧುಸ್ವಭಾವದವನೂ ಸಜ್ಜನನೂ ಆದ ನಳಮಹಾರಾಜನಿಗೆ ಪುಷ್ಕರನ ಕುತಂತ್ರವಾದರೂ ಅರಿವಾಗಲು ಹೇಗೆ ಸಾಧ್ಯ? ಆ ದುರಾತ್ಮನಾದ ಪುಷ್ಕರನ ಮನೋಗತವನ್ನರಿಯದ ನಳಭೂಪಾಲನು, ಅವನ ಮಾತುಗಳೆಲ್ಲವನ್ನೂ ನಂಬಿ ಕೊಂಡಾಡಿದನು. ಹೀಗೆ ಕಲಿಪುರುಷನು ಭೇದೋ ಪಾಯ ದಲ್ಲಿ ಅರಸನನ್ನು ಅರೆಗಳಿಗೆಯಲ್ಲಿ ತನ್ನ ಮನದಿಚ್ಛೆಗೆ ತಕ್ಕಂತೆ ಒಪ್ಪಿಸಿ, ವಸ್ತು ವಿಶೇಷಗಳನ್ನು ಕೊಡಿಸುವ ಮೂಲಕ ಪುಷ್ಕರನನ್ನು ಸಂತೋಷಪಡಿಸಿದನು.

29. ದುಗನು ಪಂಚಗ ಬಾರವೆರಡಿ
ತ್ತಿಗೆಯ ಬೇಡಿದಡಲ್ಲಿ ಬೀಳ್ವುದು
ವಿಗಡ ಪುಷ್ಕರನೃಪನು ಗೆಲಿದನು ಹಲಗೆಯೊಂದರಲಿ

ಬಗೆಬಗೆಯ ರತ್ನಗಳ ಧನಧಾ
ನ್ಯಗಳ ಗಜರಥತುರಗ ಮೊದಲಾ
ದಗಣಿತ ಸುವಸ್ತುಗಳ ಸೋತನು ನೃಪತಿ ಪುಷ್ಕರಗೆ

ದುಗನು = ಎರಡು; ಪಂಚಗ = ಐದು; ಬಾರವು + ಎರಡು + ಇತ್ತಿಗೆಯ = ಬಾರದೆ ಹೋದುವು. ಇತ್ತಿಗೆ ಎರಡೆರಡು, ಬೇಡಿದಡಲ್ಲಿ ಬೀಳ್ದುವು = ಬೇಡಿದಾಗಲೆಲ್ಲ ಬಿದ್ದುವು; ವಿಗಡ = ವಿಕಟಬುದ್ಧಿಯ; ಪುಷ್ಕರನೃಪನು = ಪುಷ್ಕರದೊರೆಯು; ಗೆಲಿದನು = ಜಯಿಸಿದನು; ಹಲಗೆಯೊಂದರಲಿ = ಮೊದಲ ಪಗಡೆಯಾಟದಲ್ಲಿ; ಬಗೆಬಗೆಯ = ವಿಧವಿಧವಾದ; ರತ್ನಗಳ = ಅಪೂರ್ವ ರತ್ನಗಳನ್ನು; ಧನಧಾನ್ಯಗಳ = ಧನಧಾನ್ಯ ಸಂಗ್ರಹವನ್ನು; ಗಜರಥತುರಗ = ಆನೆ, ರಥ, ಕುದುರೆ; ಮೊದಲಾದ + ಅಗಣಿತ = ಮುಂತಾದ ಲೆಕ್ಕವಿಲ್ಲದಷ್ಟು; ಸುವಸ್ತುಗಳ = ಸಂಪದ್ಭರಿತ ವಸ್ತು ಸಂಗ್ರಹವನ್ನು; ಸೋತನು = ಪಂದ್ಯದ ಪಣವಾಗಿ ಸೋತನು; ನೃಪತಿ ಪುಷ್ಕರಗೆ = ನಳಮಹಾರಾಜನು ಪುಷ್ಕರನಿಗೆ.

ಎಷ್ಟು ಬಾರಿ ಪ್ರಯತ್ನಿಸಿ, ಎರಡು, ಐದು ಬೀಳಲೆಂದು ಬೇಡಿಕೊಂಡು ನೆತ್ತಗಳನ್ನು ಉರುಳಿಸಿದರೂ ಅವು ಬೀಳದೆ ಮತ್ತೆ ಮತ್ತೆ ಎರಡೆರಡು ಬಾರಿ ಇತ್ತಿಗೆಯೇ ಬೀಳುತ್ತಿದ್ದುದರಿಂದ ವಿಕಟಬುದ್ಧಿಯ ಪುಷ್ಕರನ ಕಪಟದಾಟಕ್ಕೆ ಬಲಿಯಾಗಿ ನಳಮಹಾರಾಜನು ರಾಜ್ಯದ ಸಂಪತ್ತಾದ ಬಗೆಬಗೆಯ ಅಪೂರ್ವ ರತ್ನಗಳನ್ನು ಚದುರಂಗ ಬಲವನ್ನು, ಧನಧಾನ್ಯ ಸಂಗ್ರಹವನ್ನು ಅಪೂರ್ವ ವಸ್ತು ವಿಶೇಷಗಳೆಲ್ಲವನ್ನೂ ಪಂದ್ಯದಲ್ಲಿ ಪಣಕಿಟ್ಟು ಸೋತು ಹೋದನು.

30. ಆಡಿದನು ಜೂಜಿನಲಿ ನೃಪ ಹೋ
ಗಾಡಿದನು ರಾಜ್ಯವನು ಕೋಶವ
ಕೇಡುಗರ ಕೈ ಮೇಳವಿಸಿದುದು ದೈವಗತಿಯಿಂದ
ಬಾಡಿತರಸನ ವದನ ಸಭೆಯಲಿ
ನೋಡಿದರು ಸಜ್ಜನರು ಮರುಗಿದ
ರಾಡಲೇನದನರಸ ಸೋತನು ವಿಧಿಯ ಘಟನೆಯಲಿ

ಆಡಿದನು ಜೂಜಿನಲಿ = ಜೂಜಾಟವಾಡಿದನು; ನೃಪ = ನಳನೃಪ; ಹೋಗಾಡಿದನು = ಕಳೆದುಕೊಂಡನು; ರಾಜ್ಯವನು = ರಾಜ್ಯಾಧಿಕಾರವನ್ನು; ಕೋಶವನ್ನು = ರಾಜ್ಯದ ಕೋಶ, ಸಂಪತ್ತನ್ನು; ಕೇಡುಗರ = ಕೇಡು ಬಯಸುವ ದುಷ್ಟರ; ಕೈ ಮೇಳವಿಸಿದುದು = ಕೈ ಮೇಲಾಯಿತು; ದೈವಗತಿಯಿಂದ = ದೈವದ ಭಿನ್ನ ನಡೆಯಿಂದ; ಬಾಡಿತರಸನ = ಬಾಡಿತು ಅರಸನ; ವದನ = ಮುಖ; ಸಭೆಯಲಿ = ಆಸ್ಥಾನದಲ್ಲಿದ್ದ ಎಲ್ಲರೆದುರು; ನೋಡಿದರು = ಅದನ್ನು ಕಂಡರು; ಸಜ್ಜನರು = ಸಜ್ಜನರು; ಮರುಗಿದರು + ಆಡಲೇನು + ಅದನು + ಅರಸ = ದುಃಖಿಸಿದರು, ಅದರ ಕುರಿತು ಏನೆಂದು ಹೇಳಲಿ ಅರಸನೇ; ಸೋತನು = ಸೋತುಹೋದನು; ವಿಧಿಯ ಘಟನೆಯಲಿ = ವಿಧಿಯು ಘಟಿಸಿದ ರೀತಿಯಲ್ಲಿ.

ನಳನೃಪನು ಪುಷ್ಕರನೊಂದಿಗೆ ಜೂಜಾಡಿ ಸೋತು, ರಾಜ್ಯ, ಕೋಶ, ಸಕಲ ಸಂಪದವನ್ನೂ ಕಳೆದುಕೊಂಡನು ದೈವ ಭಿನ್ನವಾಗಿ ಚಿಂತಿಸಿದುದರಿಂದ ದುಷ್ಟರ ಕೈ ಮೇಲಾಯಿತು. ಇದರಿಂದ ನಳನ ಮುಖವು ತುಂಬಿದ ಸಭೆಯೆದುರು ಬಾಡಿ ಹೋಯಿತು, ಸಭಾಸದರೆಲ್ಲರೂ ಸಜ್ಜನರೂ ಇದನ್ನು ಕಂಡು ವ್ಯಥೆಯಿಂದ ಮರುಗಿದರು. ಧರ್ಮರಾಯನೇ, ಈ ಕುರಿತು ಹೇಳಲಾದರೂ ಮತ್ತೇನಿದೆ? ಅರಸನೇ, ವಿಧಿಯ ಆಟದಲ್ಲಿ ನಳನಿಗೆ ಸೋಲಾಯಿತು.

31. ತೀರಿತಿನ್ನೇನವನಿಪತಿ ಭಂ
ಡಾರವಸ್ತು ಸುವಸ್ತುವೆಲ್ಲವು
ಸೇರಿತೆನಗಿಂದಿನಲಿ ಪಣವೇನಿನ್ನು ಪೇಳೆನಲು
ಭೂರಮಣ ಚಿಂತಿಸಿದ ಮನದಲಿ
ನಾರಿಯಳನೊಡ್ಡುವೆನು ಸೋತಿಹ
ಧಾರಿಣಿಯ ನೆರೆ ಗೆಲುವೆನೆನ್ನುತ ತನ್ನ ಮನದೊಳಗೆ

ತೀರಿತು + ಇನ್ನೇನು + ಅವನಿಪತಿ = ಎಲ್ಲವೂ ಮುಗಿದು ಹೋಯಿತು ಇನ್ನೇನು, ಅರಸನೇ; ಭಂಡಾರ ವಸ್ತು ಸುವಸ್ತುವೆಲ್ಲವು = ರಾಜ್ಯದ ಕೋಶವೂ, ಅಪೂರ್ವ ವಸ್ತುಸಂಗ್ರಹಗಳೆಲ್ಲವೂ; ಸೇರಿತು + ಎನಗೆ + ಇಂದಿನಲಿ = ಇಂದಿನಿಂದಲೇ ನನಗೆ ಸೇರಿಹೋದುವು; ಪಣವು + ಏನು + ಇನ್ನು = ಪಣಕ್ಕಾಗಿ

ನೀಡುವುದಿನ್ನೇನಿದೆ; ಪೇಳೆನಲು = ಹೇಳು ಎನ್ನಲು; ಭೂರಮಣ = ಭೂಪಾಲನಾದ ನಳಮಹಾರಾಜನು; ಚಿಂತಿಸಿದ ಮನದಲ್ಲಿ = ಮನದೊಳಗೇ ಆಲೋಚನಾ ಪರನಾದನು; ನಾರಿಯಳನು + ಒಡ್ಡುವೆನು = ನನ್ನ ಹೆಂಡತಿಯನ್ನು ಪಣಕ್ಕೆ ಒಡ್ಡುತ್ತೇನೆ; ಸೋತಿಹ = ಕಳೆದುಕೊಂಡಿರುವ; ಧಾರಿಣಿಯ = ಭೂಮಿ ಯನ್ನು; ನೆರೆ = ಇನ್ನು ಸೇರಿದಂತೆ; ಗೆಲುವೆನೆನ್ನುತ್ತ = ಗೆಲ್ಲುತ್ತೇನೆ ಎಂದು ತನ್ನ ಮನದೊಳಗೆ = ತನ್ನ ಮನಸ್ಸಿನೊಳಗೆ.

ಪುಷ್ಕರನು ನಳನ ರಾಜ್ಯ, ಸಂಪತ್ತೆಲ್ಲವನ್ನೂ ತನ್ನದಾಗಿಸಿಕೊಂಡ ನಂತರ ನಳನನ್ನು ಕುರಿತು, "ಅರಸನೇ, ಪಂದ್ಯವು ಮುಗಿದುಹೋಯಿತು. ನಿನ್ನ ರಾಜ್ಯಕೋಶ ಅಪೂರ್ವ ವಸ್ತು ಸಂಪತ್ತು ಸಂಗ್ರಹಗಳೆಲ್ಲವೂ ನನ್ನದಾಯಿತು. ಮತ್ತಿನ್ನೇನಾದರೂ ಪಣಕ್ಕೆ ಇಡುವುದಿದೆಯೇ" ಎಂದು ಕೇಳಿದನು. ಈಗ ನಳನು ಆಲೋಚನಾಪರನಾಗಿ, ನನ್ನ ಹೆಂಡತಿಯನ್ನೇ ಪಣಕ್ಕಿಟ್ಟು, ನನ್ನ ರಾಜ್ಯ ಮತ್ತು ಇತರ ಸಂಪತ್ತೆಲ್ಲವೂ ಸೇರಿದಂತೆ ಮರಳಿ ಗೆಲ್ಲುತ್ತೇನೆ ಎಂದು ಮನ್ನಸಿನಲ್ಲಿಯೇ ಯೋಚಿಸಿದನು.

32. ಅರಸನಾಪ್ತಪುರೋಹಿತನು ಮನ
ಹರುಷವಿಳಿದೆಯ್ತಂದನಂತಃ
ಪುರವ ಹೊಕ್ಕನು ರಾಜವದನೆಯ ಸಭೆಗೆ ತಾ ಬಂದು
ತರುಣಿಯರ ಮೇಳದಲಿ ಶೋಭಿಪ
ಪರಮರತ್ನದ ಪೀಠದಲಿ ತಾ
ಹರುಷಮಿಗೆ ರಂಜಿಸುವ ಸತಿಯಳ ಕಂಡು ಕೈ ಮುಗಿದು

ಅರಸನಾಪ್ತ ಪುರೋಹಿತನು = ಅರಸನಿಗೆ ಆಪ್ತನೂ ಹಿತಚಿಂತಕನೂ ಆಗಿದ್ದ ಪುರೋಹಿತನು; ಮನದ ಹರುಷವಿಳಿದು + ಎಯ್ತಂದನ್ + ಅಂತಃಪುರವ = ಮನಸ್ಸಿನಲ್ಲಿ ರಾಜನ ಬಗ್ಗೆ ಇದ್ದ ಸಂತೋಷವೆಲ್ಲವನ್ನು ಕಳೆದುಕೊಂಡವನಾಗಿ; ಅಂತಃಪುರಕ್ಕೆ ಬಂದನು; ಹೊಕ್ಕನು = ಪ್ರವೇಶಿಸಿದನು; ರಾಜವದನೆಯ = ರಾಜಕಳೆಯಿಂದ ಸೊಗಯಿಸುವ ಮುಖವುಳ್ಳ ರಾಣಿಯ; ಸಭೆಗೆ ತಾ ಬಂದು = ಸಭೆಗೆ ತಾನು ಬಂದು; ತರುಣಿಯರ = ಯುವ ಮನದ ಹೆಂಗಳೆಯರ; ಮೇಳದಲಿ = ಸಮೂಹದಲ್ಲಿ; ಶೋಭಿಪ = ಶೋಭಿಸುತ್ತಿದ್ದ; ಪರಮರತ್ನದ =

ಅತ್ಯಂತ ಬೆಲೆಬಾಳುವ ಅಪೂರ್ವ ರತ್ನಗಳ; ಪೀಠದಲಿ = ಆಸನದಲ್ಲಿ; ತಾ = ತಾನು; ಹರುಷಮಿಗೆ = ಪರಮ ಸಂತೋಷವುಕ್ಕಿದಂತೆ; ರಂಜಿಸುವ = ಮೆರೆಯುತ್ತಿದ್ದ; ಸತಿಯಳ ಕಂಡು = ದಮಯಂತಿಯನ್ನು ಕಂಡು; ಕೈ ಮುಗಿದು = ವಂದಿಸಿ.

ನಡೆಯುತ್ತಿದ್ದ ವಿದ್ಯಮಾನಗಳೆಲ್ಲವನ್ನೂ ನೋಡಿ ಅರಸನಿಗಾದ ಅನ್ಯಾಯ ವನ್ನು ಕಂಡು ಮರುಗಿದ ರಾಜನ ಹಿತಚಿಂತಕನಾದ ಪುರೋಹಿತನು. ಮನಸ್ಸಿನಲ್ಲಿದ್ದ ಸಂತೋಷವೆಲ್ಲ ಇಳಿದು ಹೋದಂತಾಗಿ, ಆ ಕ್ಷಣವೇ ರಾಣಿಯರ ಅಂತಃಪುರವನ್ನು ಪ್ರವೇಶಿಸಿದನು. ಅಲ್ಲಿ ನೆರೆದಿದ್ದ ಹೆಂಗಳೆಯರ ನಡುವೆ, ಅನರ್ಘ್ಯ ರತ್ನಪೀಠದಲ್ಲಿ ಕುಳಿತು ಸಂತೋಷದಲ್ಲಿ ರಾಜಕಳೆಯಿಂದ ಶೋಭಿಸುತ್ತಿದ್ದ ದಮಯಂತಿಯನ್ನು ಕಂಡು ಕೈಮುಗಿದನು.

33. ತಾಯೆ ಬಿನ್ನಹವಿಂದು ನಿಮ್ಮಯ
ರಾಯ ಸೋತನು ಜೂಜಿನಲಿ ನಿ
ರ್ದಾಯದಲಿ ಪುಷ್ಕರನು ಗೆಲಿದನು ಸಕಲರಾಜ್ಯವನು
ನೋಯಲಾಗದು ಚಿತ್ತದಲಿ ನೆರೆ
ಬೀಯವಾದುದು ಸಿರಿಯುಯಿನ್ನಿದ
ರಾಯತವ ನೀವ್ ಬಲ್ಲಿರೆಂದನು ವಿಪ್ರ ಕೈಮುಗಿದು

ತಾಯೆ ಬಿನ್ನಹವಿಂದು = ತಾಯೇ, ಒಂದು ವಿಜ್ಞಾಪನೆ, ಇಂದು; ನಿಮ್ಮಯ ರಾಯ = ನಿಮ್ಮ ಪತಿಯಾದ ಮಹಾರಾಜನು; ಸೋತನು ಜೂಜಿನಲಿ = ಜೂಜಿನಲ್ಲಿ ಸೋತು ಹೋದನು; ನಿರ್ದಾಯದಲಿ = ಸಂಪೂರ್ಣವಾಗಿ; ಪುಷ್ಕರನು ಗೆಲಿದನು = ಪುಷ್ಕರನು ಜಯಶೀಲನಾದನು; ಸಕಲರಾಜ್ಯವನು = ರಾಜ್ಯ, ಕೋಶ, ಸಿರಿಸಂಪತ್ತುಗಳೆಲ್ಲವನ್ನೂ; ನೋಯಲಾಗದು = ವ್ಯಥೆಪಡಬೇಡಿ; ಚಿತ್ತದಲಿ = ಮನಸ್ಸಿನಲ್ಲಿ; ನೆರೆ ಬೀಯವಾದುದು = ಸಂಪೂರ್ಣ ನಿಷ್ಪ್ರಯೋಜಕವಾಯಿತು; ಸಿರಿಯು + ಇನ್ನು + ಇದರ + ಆಯತವ = ಸಿರಿಸಂಪತ್ತುಗಳೆಲ್ಲವೂ, ಇನ್ನು ಇದರ ರೀತಿ ಕ್ರಮಗಳೆಲ್ಲವನ್ನೂ; ನೀವ್ = ನೀವೇ; ಬಲ್ಲಿರೆಂದನು = ಬಲ್ಲಿರಿ ಎಂದನು; ವಿಪ್ರ ಕೈಮುಗಿದು = ಬ್ರಾಹ್ಮಣನು ಕೈಮುಗಿದು.

ತಾಯೇ, ನನ್ನದೊಂದು ಬಿನ್ನಹವಿದೆ. ನಮ್ಮಯ ಅರಸನಾದ ಮಹಾರಾಜ ನಳನು ಪುಷ್ಕರನೊಂದಿಗಿನ ಜೂಜಿನಲ್ಲಿ ಸೋತುಹೋದನು. ರಾಜ್ಯ ಕೋಶಗಳಿಂದ ಮೊದಲುಗೊಂಡು ರಾಜ್ಯದ ಸಕಲ ಸಿರಿ ಸಂಪತ್ತುಗಳೆಲ್ಲವೂ ಸಂಪೂರ್ಣವಾಗಿ ಪುಷ್ಕರನ ವಶವಾಯಿತು. ನೀವೇನೂ ವ್ಯಥೆಪಡಬೇಡಿ. ಇನ್ನೂ ಈ ರಾಜ್ಯದ ಸಿರಿ ಎಲ್ಲವೂ ಅರಸನ ಪಾಲಿಗೆ ನಿಷ್ಪ್ರಯೋಜಕವಾದದ್ದು. ಸಿರಿ ಸಂಪತ್ತುಗಳ ರೀತಿ ಕ್ರಮ ಗಳೆಂಥವು ಎಂಬುದನ್ನು ನೀವೇ ಬಲ್ಲಿರಿ ಎಂದು ಬ್ರಾಹ್ಮಣರು ಕೈಮುಗಿದು ದಮಯಂತಿಗೆ ನಡೆದುದೆಲ್ಲವನ್ನು ವರದಿ ಮಾಡಿದನು.

34. ಕಮಲವನದಲಿ ಮಂಜು ಸುರಿದಾ
ಕ್ರಮದ ಬಗೆಯಲಿ ಸತಿಯಳಿಗೆ ಮುಖ
ಕಮಲ ಬಾಡಿತು ನುಡಿಯ ಕೇಳುತ ಮನದ ಚಿಂತೆಯಲಿ
ಕಮಲನಾಭನ ಕರುಣಕವಚವು
ಸಮೆದರಾರೇಗುವರು ಹರಹರ
ಕುಮತಿ ಪುಷ್ಕರನಿಂತು ಮುನಿದನೆಯೆನುತ ಮರುಗಿದಳು

ಕಮಲವನದಲಿ = ತಾವರೆಯ ವನದಲ್ಲಿ; ಮಂಜು ಸುರಿದಾ = ಮಂಜು ಸುರಿದ; ಕ್ರಮದ ಬಗೆಯಲಿ = ರೀತಿಯಲ್ಲಿ; ಸತಿಯಳಿಗೆ = ಆ ಹೆಣ್ಣುಮಗಳಿಗೆ, ಮುಖಕಮಲ = ತಾವರೆಯಂತಹ ಸುಂದರ ಮುಖವು; ಬಾಡಿತು = ಕುಂದಿ ಹೋಯಿತು; ನುಡಿಯ ಕೇಳುತ = ವಿಪ್ರನ ಮಾತನ್ನು ಕೇಳಿ; ಮನದ ಚಿಂತೆಯಲಿ = ಮುಂದೇನು? ಎಂಬ ಚಿಂತೆಯಿಂದ; ಕಮಲನಾಭನ = ವಿಷ್ಣುವಿನ (ಕಮಲವನ್ನು ಹೊಕ್ಕುಳಲ್ಲಿ ಹೊತ್ತ); ಕರುಣಕವಚವು = ಕರುಣೆಯೆಂಬ ರಕ್ಷಾ ಕವಚವು; ಸಮೆದರೆ + ಆರು + ಏಗುವರು = ಸವೆದುಹೋದರೆ ಯಾರೇನು ಮಾಡುವರು; ಹರಹರ = ಹರಹರಾ!; ಕುಮತಿ = ಕೆಟ್ಟ ಮನಸ್ಸಿನ; ಪುಷ್ಕರನಿಂತು = ಪುಷ್ಕರನು ಹೀಗೆ; ಮುನಿದನೆಯೆನುತ = ಸಿಟ್ಟುಗೊಂಡನೇ ಹೀಗೆ ಎನ್ನುತ್ತ; ಮರುಗಿದಳು = ದುಃಖಿಸಿದಳು.

ವಿಪ್ರನು ತಂದ ಮಾಹಿತಿಗಳನ್ನು ಕೇಳಿದ ದಮಯಂತಿಯ ತಾವರೆ ಯಂತಹ ಕಳಾಯುಕ್ತ ಸುಂದರ ಮುಖವು ಕಮಲವನದಲ್ಲಿ ಮಂಜು ಸುರಿದಾಗ

ಆಗುವಂತೆ ಬಾಡಿಹೋಯಿತು. ಮುಂದೇನು? ಎಂಬ ಚಿಂತೆ ಮನದೊಳಗೆ ಭಾರವಾಗಿ ಬಾಧಿಸಿ, ಪುಷ್ಕರನು ತಮ್ಮ ಮೇಲೆ ಇಷ್ಟು ಸಿಟ್ಟುಗೊಂಡನೇನು, ಹರಹರಾ! ಎಂದು ದಮಯಂತಿಯು ದುಃಖಿಸಿದಳು. ದೇವರ ಕರುಣಾಕವಚವು ಸವೆದು ಹೋದರೆ ಯಾರೇನು ಮಾಡಲು ಸಾಧ್ಯ? ಎಂಬ ಭಾವವು ಅವಳ ಮನಸ್ಸನ್ನು ಆವರಿಸಿತು.

35. ಕಮಲಮುಖಿ ನಳನೃಪಗೆ ರಾಜ್ಯ
ಭ್ರಮಣವಾಯಿತೆಯೆನುತ ಸತಿ ಭೂ
ರಮಣನೆಡೆಗೈತಂದು ಕಂಡಳು ಕಾಂತನಿಂಗಿತವ
ತಮದ ರಾಹುಗ್ರಹವು ಸೋಂಕಿದ
ದ್ಯುಮಣಿಯಂತಿರೆ ಕಂಡು ಧೈರ್ಯದಿ
ಕಮಲಮುಖಿ ಕೈಮುಗಿದು ಬಿನ್ನೈಸಿದಳು ನಿಜಪತಿಗೆ

ಕಮಲಮುಖಿ = ಕಮಲದಂತೆ ಸುಂದರವಾದ ಮುಖವುಳ್ಳ ದಮಯಂತಿಯು; ನಳನೃಪಗೆ = ನಳಮಹಾರಾಜನಿಗೆ; ರಾಜ್ಯ ಭ್ರಮಣವಾಯಿತೆ ಯೆನುತ = ಅಧಿಕಾರ ಸ್ಥಾನಕ್ಕೆ ಚ್ಯುತಿಯುಂಟಾಯಿತೆ ಎಂದು; ಸತಿ = ದಮಯಂತಿಯು; ಭೂರಮಣನೆಡೆಗೆ + ಐತಂದು = ಭೂರಮಣನಿರುವೆಡೆಗೆ ಬಂದು; ಕಂಡಳು = ನೋಡಿ, ಅರ್ಥಮಾಡಿಕೊಂಡಳು; ಕಾಂತನ + ಇಂಗಿತವ = ತನ್ನ ಮನದಿನಿಯನ ಮನಸ್ಸಿನ ಅಭಿಪ್ರಾಯವನ್ನು; ತಮದ = ತಮೋಗುಣದ; ರಾಹು ಗ್ರಹವು = ರಾಹುವಿನ ಆಕ್ರಮಣವು; ಸೋಕಿದ = ಆವರಿಸಿದ; ದ್ಯುಮಣಿಯಂತಿರೆ = ಸೂರ್ಯನಂತಿರಲು; ಕಂಡು = ನೋಡಿ; ಧೈರ್ಯದಿ = ಮನಸ್ಸಿನಲ್ಲಿ ದೃಢನಿಶ್ಚಯಗೊಂಡು; ಕಮಲಮುಖಿ = ದಮಯಂತಿಯು; ಕೈಮುಗಿದು = ಗೌರವಭಾವದಿಂದ ವಂದಿಸಿ; ಬಿನ್ನೈಸಿದಳು = ವಿನಂತಿಸಿಕೊಂಡಳು; ನಿಜಪತಿಗೆ = ತನ್ನ ಪತಿಯಾದ ಅರಸನಿಗೆ.

ದಮಯಂತಿಯು ನಳಮಹಾರಾಜನು ಅಧಿಕಾರ ಭ್ರಷ್ಟನಾದುದನ್ನು ತಿಳಿದು ಅವನನ್ನು ಆ ಸಮಯದಲ್ಲಿ ಕೈಬಿಡಬಾರದೆಂಬಂತೆ ಆ ಕ್ಷಣವೇ ನಳನಿದ್ದಲ್ಲಿಗೆ ಬಂದಳು. ಅವನ ನೋಟ ಮಾತ್ರದಿಂದಲೇ ಅವನ ಮನೋಭಿಪ್ರಾಯವನ್ನು ಹೃದ್ಗತ ಗೊಳಿಸಿಕೊಂಡು, ತಮೋಗುಣದ ರಾಹುವಿನಿಂದ ಆಕ್ರಮಿಸಲ್ಪಟ್ಟ ಸೂರ್ಯನಂತೆ,

ನಳಮಹಾರಾಜನಿರುವುದನ್ನು ಕಂಡು ಧೈರ್ಯದಿಂದ ಅವನನ್ನು ಸಮೀಪಿಸಿ ಕೈಮುಗಿದು ಭಿನ್ನವಿಸಿದಳು.

ಪ್ರಸ್ತುತ ಪದ್ಯವು ದಮಯಂತಿಯನ್ನು ಎರಡೆರಡು ಬಾರಿ ಕಮಲಮುಖಿ ಎಂದು ಸಂಬೋಧಿಸಿದೆ. ಪದ್ಯಾರಂಭದ ಕಮಲಮುಖಿಯು ಅವಳ ಕಾಂತಿಯುಕ್ತ ಸುಂದರ ವದನದೆಡೆಗೆ ಗಮನ ಸೆಳೆದರೆ, ಪದ್ಯಾಂತ್ಯದ ಕಮಲಮುಖಿಯು, ನಳನು ರಾಹುಗ್ರಸ್ತ ಸೂರ್ಯನಂತಿರುವುದನ್ನು, ಕ್ರಮೇಣ ಆ ತಮೋಗುಣದಿಂದ ಅವನು ಮುಕ್ತನಾಗಿಯೇ ಆಗುತ್ತಾನೆ ಎಂಬ ನಂಬಿಕೆಯನ್ನೂ ಅವಳಲ್ಲಿ ಹುಟ್ಟಿದ ಧೈರ್ಯವನ್ನೂ ಪ್ರಕಟಿಸುತ್ತದೆ. ಅಂತೆಯೇ ಕಮಲಮುಖಿಯು ತನ್ನ ಸೂರ್ಯನತ್ತಲೇ ಮುಖಮಾಡಿರುವುದು ಅವಳ ನಿಶ್ಚಂಚಲ ಪ್ರೀತಿಯನ್ನು ಎತ್ತಿ ತೋರಿಸುತ್ತದೆ.

36. ಶಶಿಕುಲಾಂಬುಧಿಚಂದ್ರ ರಿಪುನೃಪ
ನಿಶಿತ ಭಾಸ್ಕರತೇಜ ನಿಮಗೀ
ವ್ಯಸನ ತೋರಿತೆ ಜೂಜಿನಲಿ ಶಿವಶಿವ ಮಹಾದೇವ
ಬಿಸರುಹಾಕ್ಷನ ಕರುಣವಿದು ಸೋ
ಲಿಸಿದನೇ ಪುಷ್ಕರನುಯಿದು ವಿಧಿ
ವಶವಲಾ ತಪ್ಪೇನು ಸಾಕಿನ್ನೆಂದಳಿಂದುಮುಖಿ

ಶಶಿಕುಲ + ಅಂಬುಧಿ + ಚಂದ್ರ = ಚಂದ್ರವಂಶವೆಂಬ ಸಮುದ್ರಕ್ಕೆ ಚಂದ್ರಕಳಾ ಸದೃಶನಾದವರು; ರಿಪುನೃಪನಿಶಿತ ಭಾಸ್ಕರತೇಜ = ಶತ್ರುರಾಜ ಸಮೂಹಕ್ಕೆ ತೀಕ್ಷ್ಣವಾದ ಸೂರ್ಯತೇಜ ಸದೃಶನಾದವನು; ನಿಮಗೀ = ನಿಮಗೆ + ಈ; ವ್ಯಸನ = ಚಟ; ತೋರಿತೇ = ಗೀಳು ಹಿಡಿಯಿತೇ?; ಜೂಜಿನಲಿ = ಜೂಜಾಡುವಿಕೆಯಲ್ಲಿ; ಶಿವಶಿವ ಮಹಾದೇವ = ಶಿವಶಿವ ಮಹಾದೇವ; ಬಿಸರುಹ + ಅಕ್ಷನ = ತಾವರೆಗಣ್ಣುಳ್ಳವನಾದ ವಿಷ್ಣುವಿನ; ಕರುಣವಿದು = ಲೀಲೆ ಇದು; ಸೋಲಿಸಿದನೇ = ಪರಾಜಯಗೊಳಿಸಿದನೇ; ಪುಷ್ಕರನು + ಇದು = ಪುಷ್ಕರನು ಇದು; ವಿಧಿವಶವಲಾ = ವಿಧಿಯಾಟವೇ ಸರಿ; ತಪ್ಪೇನು = ಇದರಲ್ಲಿ ನಿಮ್ಮ ತಪ್ಪಿಲ್ಲ; ಸಾಕು + ಇನ್ನು + ಎಂದಳು + ಇಂದುಮುಖಿ = ಇನ್ನು ಇಷ್ಟಾದುದು ಸಾಕು ಎಂದು ದಮಯಂತಿಯು ಅಳಲಿದಳು.

ನಳಮಹಾರಾಜನ ಕುರಿತು ದಮಯಂತಿಯು ಹೊಂದಿದ್ದ ಮೆಚ್ಚುಗೆ, ಅವನ ಅಂದಿನ ಸ್ಥಿತಿಯ ಕುರಿತ ಪರಿತಾಪ ಅವುಗಳೊಂದಿಗೇ ಅವನನ್ನು ಸಮಾಧಾನಿಸುವ ಅವಳ ಅನುನಯದ ನುಡಿಗಳನ್ನು ಈ ಪದ್ಯ ಒಳಗೊಂಡಿದೆ. ‘‘ಚಂದ್ರವಂಶವೆಂಬ ಅನಂತ ವಿಸ್ತಾರದ ಸಾಗರಕ್ಕೆ ಚಂದ್ರಸದೃಶನಾಗಿ ಬೆಳಗುವವರು, ಶತ್ರುರಾಜ ಸಮೂಹಕ್ಕೆ ತೀಕ್ಷ್ಣವಾದ ಸೂರ್ಯಕಿರಣ ತೇಜಸಮಾನವಾಗಿ ಎದುರಾಗುವಂಥವರು ನೀವು. ಅಂತಹ ಉನ್ನತ ವ್ಯಕ್ತಿತ್ವದ ನಿಮಗೆ ಈ ಜೂಜಾಟದ ಗೀಳು ಹಿಡಿಯಿತೇನು? ಶಿವಶಿವ ಮಹಾದೇವಾ! ಇದು ವಿಷ್ಣುಮಾಯಾಲೀಲೆಯಲ್ಲದೆ ಬೇರೇನಲ್ಲ. ನಿಮ್ಮಂಥವರನ್ನು ಆ ಪುಷ್ಕರ ಸೋಲಿಸಿದನೆಂದರೆ, ಇದು ವಿಧಿಯಾಟ ವಲ್ಲದೆ ಬೇರೇನಿಲ್ಲ. ಇದರಲ್ಲಿ ನಿಮ್ಮ ತಪ್ಪಿಲ್ಲ’’ ಎಂದು ದಮಯಂತಿಯು ನಳನಿಗೆ ಪಕ್ಕಬಲ ವೆಂಬಂತೆ ನಿಂತು ನುಡಿದಳು.

ಇಲ್ಲಿ, ವಿರುದ್ಧ ಗುಣದ ಚಂದ್ರ ಮತ್ತು ಸೂರ್ಯರ ಗುಣಗಳನ್ನು ಒಬ್ಬನಿಗೇ ಒಟ್ಟಿಗೇ ಅನ್ವಯಿಸುತ್ತಿರುವುದರಲ್ಲಿ ವಿಶೇಷವಿದೆ. ವಂಶವನ್ನು ಬೆಳಗುವವನಾದ್ದರಿಂದ ಅವನು ತಂಪುಗುಣದ ಚಂದ್ರಪ್ರಭೆಗೆ ಸಮಾನ. ಶತ್ರು ಸೈನ್ಯವನ್ನು ನಾಶಗೊಳಿಸುವವನಾದ ಕಾರಣ ಉರಿಯುವ ಅಗ್ನಿಯಾದ ಸೂರ್ಯ ತೇಜ!

37. ಲಲನೆಯಾಡಿದ ನುಡಿಗೆ ಸಭೆಯವ
ರಳಲಿ ಬೈದರು ಪುಷ್ಕರನ ಕೇ
ಳೆಲವೊ ಬಾಹಿರ ಸಾಕು ತೆಗೆ ಚಾರಿಗಳನೆಂದೆನುತೆ
ಹೊಲಬುದಪ್ಪಿದ ಹುಲ್ಲೆ ಬೇಡನ
ಬಲೆಗೆ ಬಿದ್ದಂತಾಗೆ ನಳನೃಪ
ತಿಲಕನೆಂದನು ಮನದ ದುಗುಡದಿ ತನ್ನ ನಿಜಸತಿಗೆ

ಲಲನೆಯಾಡಿದ = ಆ ಹೆಣ್ಣುಮಗಳು ಆಡಿದ; ನುಡಿಗೆ = ಮಾತಿನ ವೈಖರಿಗೆ; ಸಭೆಯವರು + ಅಳಲಿ = ಸಭೆಯಲ್ಲಿದ್ದವರೆಲ್ಲರೂ ವ್ಯಾಕುಲ ಚಿತ್ತರಾಗಿ; ಬೈದರು ಪುಷ್ಕರನ = ಪುಷ್ಕರನನ್ನು ಬೈದರು, ಕೇಳೆಲವೋ = ಕೇಳು ಎಲವೊ (ಪುಷ್ಕರನು ದೊರೆಯೆಂಬುದನ್ನು ಲಕ್ಷಿಸದೆ ಏಕವಚನದ ಬಳಕೆ); ಬಾಹಿರ =

ಧರ್ಮಕ್ಕೆ ಹೊರತಾದವನೇ; ಸಾಕು ತೆಗೆ = ಇನ್ನು ಸಾಕುಮಾಡು; ಚಾರಿ ಗಳನೆಂದೆನುತ = ಪಗಡೆಗಳನ್ನು ಎಂದು ಎನ್ನುತ್ತ; ಹೊಲಬುದಪ್ಪಿದ = ದಾರಿತಪ್ಪಿದ; ಹುಲ್ಲೆ = ಜಿಂಕೆಯು; ಬೇಡನ ಬಲೆಗೆ = ಬೇಡನ ಬಲೆಗೆ; ಬಿದ್ದಂತೆ + ಆಗೆ = ಬಿದ್ದಂತಾಗಿರಲು; ನಳನೃಪತಿಲಕನೆಂದನು = ರಾಜಕುಲಕ್ಕೆ ತಿಲಕಪ್ರಾಯನಾದ ನಳ ಹೇಳಿದನು; ಮನದ = ಮನಸ್ಸಿನಲ್ಲಿದ್ದ; ದುಗುಡದಿ = ವ್ಯಾಕುಲದಿಂದ; ತನ್ನ ನಿಜಸತಿಗೆ = ತನ್ನ ಪತ್ನಿಗೆ.

ದಮಯಂತಿಯು ನಳಮಹಾರಾಜನಿಗೆ ನುಡಿದ ಸಂತೈಕೆಯ ಮಾತು ಗಳನ್ನು ಕೇಳಿ ಅಲ್ಲಿದ್ದ ಜನ ಸಮುದಾಯವು ಮತ್ತೂ ದುಃಖ, ಸಂಕಟ ಗಳಿಂದ ಪುಷ್ಕರನನ್ನು ಬೈದರು. ಅವನೂ ಸಹ ಒಂದು ಪ್ರಾಂತ್ಯದ ಅರಸ ನೆಂಬುದನ್ನೂ ಲಕ್ಷಿಸದೆ ಹೀನಾಯವಾಗಿ, 'ಎಲವೋ ಧರ್ಮಬಾಹಿರನೆ, ಇನ್ನಾದರೂ ನಿನ್ನ ಪಗಡೆಯಾಟದ ಚಾಳಿಗಳನ್ನು ಸಾಕು ಮಾಡು' ಎಂದು ಬೈದರು. ನಳನ ಸ್ಥಿತಿಯು ದಾರಿತಪ್ಪಿದ ಜಿಂಕೆಯು ಬೇಡನ ಬಲೆಗೆ ಬಿದ್ದಂತೆ ಹೃದಯ ಹಿಂಡುವಂತಿತ್ತು. ಆ ಸಂಕಟ ಸ್ಥಿತಿಯಲ್ಲಿಯೇ ತನ್ನ ಹೆಂಡತಿಯನ್ನುದ್ದೇಶಿಸಿ ನಳನು ಹೀಗೆಂದನು.

38. ತರುಣಿ ಕೇಳಪಜಯದ ನಾರಿಯ
ಸೆರಗ ಹಿಡಿದೆನು ರಾಜ್ಯಲಕ್ಷ್ಮಿಯ
ಪರರಿಗಿತ್ತುಳುಹಿದೆನು ದೇಹವನಿದಕೆಯಂಜದಿರು
ತರುಣಿ ನೀ ಕಾನನದಿ ಗಿರಿಗ
ಹ್ವರಗಳಲಿ ಬಿಡದೆಂತು ತೊಳಲುವೆ
ಹರಹರಾಯೆಂದೆನುತ ಸತಿಯನು ನೋಡಿ ಬಿಸುಸುಯ್ದ

ತರುಣಿ = ದಮಯಂತಿಯೇ; ಕೇಳ್ + ಅಪಜಯದ = ಕೇಳು, ಸೋಲೆಂಬ; ನಾರಿಯ ಸೆರಗ ಹಿಡಿದೆನು = ಹೆಣ್ಣಿನ ಸೆರಗನ್ನು ಹಿಡಿದಿದ್ದೇನೆ; ರಾಜ್ಯಲಕ್ಷ್ಮಿಯ = ಸಂಪದ್ಭರಿತವಾದ ರಾಜ್ಯವೆಂಬ ಲಕ್ಷ್ಮಿಯನ್ನು; ಪರರಿಗೆ + ಇತ್ತು + ಉಳುಹಿದೆನು = ಅನ್ಯರಿಗೆ ಕೊಟ್ಟು, ಉಳಿಸಿಕೊಂಡೆನು; ದೇಹವನು + ಇದಕೆ + ಅಂಜದಿರು = ಈ ಶರೀರವನ್ನು; ಇದರಿಂದೇನೂ ಭಯ ಭೀತಳಾಗಬೇಡ; ತರುಣಿ = ಹೆಣ್ಣೇ; ನೀ = ನೀನು; ಕಾನನದಿ = ಕಾಡಿನಲ್ಲಿ; ಗಿರಿಗಹ್ವರಗಳಲಿ = ಬೆಟ್ಟ, ಗುಹೆ,

ಮುಂತಾದುವುಗಳಲ್ಲಿ; ಎಂತು ತೊಳಲುವೆ = ಹೇಗೆ ಕಷ್ಟಪಡುತ್ತೀಯೆ; ಹರಹರಾ + ಎಂದು + ಎನುತ = ಹರಹರಾ! ಎಂದು ದುಃಖದಿಂದ ಉದ್ಗರಿಸುತ್ತ; ಸತಿಯನು = ತನ್ನ ಹೆಂಡತಿಯನ್ನು; ನೋಡಿ ಬಿಸುಸುಯ್ದು = ಕಂಡು ನಿಟ್ಟುಸಿರು ಹೊರಹಾಕಿದನು.

ದಮಯಂತಿಯೇ ಕೇಳು, ಈಗ ನಾನು ಅಷ್ಟು ಸಂಪದ್ಭರಿತವಾದ ರಾಜ್ಯಲಕ್ಷ್ಮಿಯನ್ನು ಅನ್ಯರ ಪಾಲುಮಾಡಿ, ಅಪಜಯವೆಂಬ ಹೆಣ್ಣಿನ ಸರಗನ್ನು ಹಿಡಿದಿದ್ದೇನೆ. ಇನ್ನುಳಿದಿರುವುದು ಈ ದೇಹಮಾತ್ರ ಇದರಿಂದ ನೀನು ಭೀತಳಾಗದಿರು. ಆದರೆ ಆ ಕಾಡಿನ ಬೆಟ್ಟ, ಗುಹೆ ಮುಂತಾದುವುಗಳಲ್ಲಿ ನೀನು ಹೇಗಿರುತ್ತೀಯೆ! ಹರಹರಾ! ಎಂದು ತನ್ನ ಹೆಂಡತಿಯು ಪಡಬೇಕಾಗಿರುವ ಕಷ್ಟ ಗಳನ್ನು ನೆನೆದು ನಳಮಹಾರಾಜನು ನಿಟ್ಟುಸಿರು ಬಿಟ್ಟನು.

39. ಚಿತ್ತವಿಸು ಶಶಿಕುಲಶಿರೋಮಣಿ
ಹೆತ್ತವರು ಸತಿಸುತರು ಮನೆ ಮನೆ
ವಾರ್ತೆ ಬಾಂಧವ ಧರಣಿಪರ ಭೋಗೈಕಸಂಪದವು
ನಿತ್ಯವಲ್ಲ ಶರೀರಸುಖಗಳ
ನಿತ್ಯವೆಂಬುದ ತಿಳಿಯುತೀ ನಿಜ
ಸತ್ಯವನು ಕೈಹಿಡಿದು ಸಲಹೆಂದಳು ಸರೋಜಮುಖಿ

ಚಿತ್ತವಿಸು = ಮನಸ್ಸಿಟ್ಟು ಕೇಳು; ಶಶಿಕುಲ ಶಿರೋಮಣಿ = ಚಂದ್ರವಂಶಕ್ಕೆ ಕಿರೀಟಪ್ರಾಯವಾಗಿರುವಂಥವನೇ; ಹೆತ್ತವರು = ತಂದೆ ತಾಯಿಯರು; ಸತಿಸುತರು = ಹೆಂಡತಿ, ಮಕ್ಕಳು; ಮನೆ + ಮನೆವಾರ್ತೆ = ಮನೆ, ಮನೆಯ ಆಗು ಹೋಗುಗಳು; ಬಾಂಧವ = ಬಂಧುವರ್ಗ; ಧರಣಿಪರ = ರಾಜ್ಯಕ್ಕೆ ಸಂಬಂಧಿಸಿದ; ಭೋಗ + ಏಕ + ಸಂಪದವು = ಸುಖ ಸಂತೋಷಗಳಿಗೇ ಮೀಸಲಾದ ಸಕಲೈಶ್ವರ್ಯವು; ನಿತ್ಯವಲ್ಲ = ಶಾಶ್ವತವಲ್ಲ; ಶರೀರ ಸುಖಗಳ = ದೈಹಿಕವಾದ ಸುಖಗಳನ್ನು; ನಿತ್ಯವೆಂಬುದ = ಶಾಶ್ವತವೆಂದು; ತಿಳಿಯುತೀ = ತಿಳಿಯುತ್ತ; ಈ ನಿಜಸತ್ಯವನು = ನಿಜವಾದ ಶಾಶ್ವತ ಸಂಗತಿ ಯಾವುದು ಎಂಬುದನ್ನು; ಕೈಹಿಡಿದು = ಬಿಡದೆ; ಸಲಹೆಂದಳು = ಕಾಪಾಡು ಎಂದಳು; ಸರೋಜಮುಖಿ = ದಮಯಂತಿ.

ದೊರೆಯೇ, ಚಂದ್ರವಂಶಕ್ಕೆ ಕಿರೀಟಪ್ರಾಯನಾದಂಥವನೇ ಮನಸ್ಸಿಟ್ಟು ಕೇಳು– ತಂದೆ, ತಾಯಿ, ಸತಿಸುತರು, ವಸತಿಸೌಕರ್ಯ, ಮನೆವಾರ್ತೆ, ಬಂಧುಬಳಗ, ರಾಜ್ಯ, ರಾಜೈಶ್ವರ್ಯ, ಭೋಗಭಾಗ್ಯಗಳಾವೂವೂ ಶಾಶ್ವತವಲ್ಲ. ಸತ್ಯವೊಂದೇ ನಿಜ. ಅದನ್ನು ಎಂದೆಂದಿಗೂ ಬಿಡದೆ ಕಾಪಾಡು ಎಂದು ದಮಯಂತಿಯು ನಳನಿಗೆ ಧೈರ್ಯ ಹೇಳಿದಳು.

ಕಂಗೆಡಿಸುವ ಕಷ್ಟವು ಧುತ್ತನೆ ಬಂದಾವರಿಸಿದ ಸಮಯದಲ್ಲಿಯೂ ದಮಯಂತಿಯ ದೃಢಮನಸ್ಸು, ಎದೆಗುಂದದೆ ಪರಿಸ್ಥಿತಿಯನ್ನು ನಿಭಾಯಿಸುವ ಎದೆಗಾರಿಕೆಯನ್ನು ಗಮನಿಸಬಹುದು.

40. ಚಿಂತೆ ಬೇಡೆಂದರಸನನು ಸತಿ
ಸಂತವಿಟ್ಟಳು ನೀತಿಯಲಿ ದಮ
ಯಂತಿ ನಿಜಮಂದಿರಕೆ ಸರಿಯಲು ಕಂಡು ಪುಷ್ಕರನು
ಇಂತು ಜೂಜಲಿ ಸೋತು ತಿರಿಗಿ
ನ್ನೆಂತು ರಾಜ್ಯದಿ ನಿಲುವಿರೆನೆ ಭೂ
ಕಾಂತ ವನವಾಸಕ್ಕೆ ನಿಜಸತಿಸಹಿತಲನುವಾದ

ಚಿಂತೆ + ಬೇಡೆಂದು + ಅರಸನನು = ಚಿಂತಿಸುವ ಅಗತ್ಯವಿಲ್ಲ ಎಂದು ಅರಸನಾದ ನಳನನ್ನು; ಸತಿ = ಮಡದಿಯು; ಸಂತವಿಟ್ಟಳು = ಸಮಾಧಾನಿಸಿದಳು; ನೀತಿಯಲಿ = ಜೀವನ ಧರ್ಮವನ್ನು ಹೇಳಿ; ದಮಯಂತಿ = ದಮಯಂತಿಯು; ನಿಜಮಂದಿರಕೆ ಸರಿಯಲು = ತನ್ನ ಅಂತಃಪುರದತ್ತ ಹೊರಡಲು; ಕಂಡು ಪುಷ್ಕರನು = ಅದನ್ನು ನೋಡಿದ ಪುಷ್ಕರನು; ಇಂತು = ಹೀಗೆ; ಜೂಜಲಿ ಸೋತು = ಜೂಜಿನಲ್ಲಿ ಪರಾಜಿತರಾಗಿ; ತಿರುಗಿನ್ನೆಂತು = ಮರಳಿ ಹೇಗೆ; ರಾಜ್ಯದಿ = ರಾಜ್ಯದೊಳಗೇ; ನಿಲುವಿರೆನೆ = ನಿಂತಿದ್ದೀರಿ ಎನ್ನಲು; ಭೂಕಾಂತ = ಭೂಪತಿಯಾದ ನಳನು; ವನವಾಸಕ್ಕೆ = ಕಾಡಿನಲ್ಲಿ ವಾಸವಿರಲು; ನಿಜಸತಿಸಹಿತಲಿ + ಅನುವಾದ = ತನ್ನ ಮಡದಿಯೊಂದಿಗೆ ಹೊರಡಲು ಸಿದ್ಧನಾದನು.

ಅರಸನೇ ಇನ್ನು ಚಿಂತಿಸುವ ಅಗತ್ಯವಿಲ್ಲ ಎಂದು ತನ್ನರಸನಾದ ನಳನನ್ನು ಸಮಾಧಾನಿಸಿದ ನಂತರ ದಮಯಂತಿಯು ತನ್ನ ಅಂತಃಪುರಕ್ಕೆ ಹಿಂದಿರುಗಲು ಸಿದ್ಧಳಾದುದನ್ನು ಕಂಡು ಪುಷ್ಕರನು, ಹೀಗೆ ಜೂಜಿನಲ್ಲಿ ಪರಾಜಿತರಾದ ನಂತರವೂ

ಮತ್ತೆ ರಾಜ್ಯದೊಳಗೆ ಹೇಗೆ ನಿಂತಿರುವಿರಿ ಎಂದು ಪ್ರಶ್ನಿಸಲು, ಭೂಪತಿ ನಳ ಮಹಾರಾಜನು ತನ್ನ ಮಡದಿಯೊಂದಿಗೆ ವನವಾಸಕ್ಕೆ ಹೊರಡಲು ಸಿದ್ಧನಾದನು.

41. ತಳಿತ ಮಣಿಭೂಷಣಗಳೆಲ್ಲವ
ಕಳಚಿ ಬಿಸುಟನು ಗುರುವಿನಂಘ್ರಿಗೆ
ನಳಿನಮುಖಿಸಹಿತೆರಗಿ ಹೊರವಂಟನು ನಿಜಾಲಯವ
ಬಳಿಕಲೈದಿದರಖಿಳಪುರಜನ
ಜಲದ ಕಣ್ಗಳ ಧಾರೆಯಲಿ ಗಾ
ವಳಿ ಮಸಗಿ ಮಿಗೆ ಶೋಕರವ ತುಂಬಿದುದು ಪಟ್ಟಣವ

ತಳಿತ = ಧರಿಸಿದ್ದ; ಮಣಿಭೂಷಣಗಳೆಲ್ಲವ = ರತ್ನಾಭರಣ, ವಸ್ತ್ರಾದಿಗಳೆಲ್ಲ ವನ್ನೂ; ಕಳಚಿ = ಬಿಚ್ಚಿ; ಬಿಸುಟನು = ತೊರೆದನು; ಗುರುವಿನಂಘ್ರಿಗೆ = ರಾಜಪುರೋಹಿತನ ಪಾದಗಳಿಗೆ; ನಳಿನಮುಖಿ + ಸಹಿತ + ಎರಗಿ = ನಳಿನಮುಖಿ ಯಾದ ದಮಯಂತಿಯ ಸಹಿತ ನಮಸ್ಕರಿಸಿ; ಹೊರವಂಟನು = ಹೊರ ಹೊರಟನು; ನಿಜಾಲಯವ = ಅರಮನೆಯಿಂದ; ಬಳಿಕಲು + ಐದಿದರ್ + ಅಖಿಳ ಪುರಜನ = ಬಳಿಕಹೊರಟರು ಸಮಸ್ತ ಪುರಜನರೆಲ್ಲರೂ; ಜಲದ ಕಣ್ಗಳ = ತುಂಬಿ ಬಂದ ಕಣ್ಣೀರಿನ; ಧಾರೆಯಲ್ಲಿ = ಧಾರೆಯಲಿ; ಗಾವಳಿ = ಸಾಮೂಹಿಕವಾದ ಅಬ್ಬರ ಕೂಗಾಟಗಳು; ಮಸಗಿ + ಮಿಗೆ = ಮೇರೆ ಮೀರಿರಲು; ಶೋಕರವ = ದುಃಖದಿಂದ ಅಳುವ ದನಿಯು; ತುಂಬಿದುದು ಪಟ್ಟಣವ = ಪಟ್ಟಣದಲ್ಲೆಲ್ಲ ತುಂಬಿಕೊಂಡಿತು.

ನಳಭೂಪಾಲನು ಅಲ್ಲಿಯವರೆಗೂ ಧರಿಸಿದ್ದ ರಾಜೋಚಿತವಾದ ದಿವ್ಯಾಸ್ತ್ರ ಗಳನ್ನೂ, ಮಣಿರತ್ನಖಚಿತ ಆಭರಣಗಳನ್ನೂ ಕಳಚಿ, ಅರಸಪಟ್ಟವನ್ನು ತೊರೆದನು. ಬಳಿಕ ಸತಿಸಹಿತ ರಾಜಗುರುಗಳ ಪಾದಗಳಿಗೆ ನಮಸ್ಕರಿಸಿ ಅಲ್ಲಿಂದ ಹೊರ ಹೊರಟನು. ಇದನ್ನು ಕಂಡ ನಿಷಧನಗರದ ನಾಗರಿಕರೆಲ್ಲರೂ ಒಟ್ಟೊಟ್ಟಾಗಿ ಬಂದು ನೆರೆದು ತಮ್ಮ ಅರಸನ ದುಃಸ್ಥಿತಿಯನ್ನು ಕಂಡು ದುಃಖದಾವೇಗದಿಂದ ಕಣ್ಣೀರು ಧಾರೆಯಾಗಿ ಹರಿಯುತ್ತಿರಲು, ಧ್ವನಿಯೆತ್ತಿ ಅಬ್ಬರದಿಂದ ಅಳುವ ಶಬ್ದವು ಆ ನಗರವನ್ನೆಲ್ಲ ತುಂಬಿಕೊಂಡಿತು.

42. ಸಾಲುಕಂಬನಿಗಳಲಿ ನೆನೆದರು

ವೂಳಿಗದ ಪರಿಜನರು ಮಂತ್ರಿಗ
ಳೋಲಗದ ಸಾಮಂತಸಚಿವರು ಮಲ್ಲಗಾಯಕರು
ಬಾಲೆಯರು ಬಾಲಕರು ಪುರಜನ
ಜಾಲವೆಲ್ಲವು ಶೋಕದಲಿ ಕ್ಷಿತಿ
ಪಾಲನರಸಿಯ ಕಂಡು ಮರುಗಿತು ಮಂದಿ ಗೋಳಿಡುತ

ಸಾಲು ಕಂಬನಿಗಳಲಿ = ಧಾರಾಕಾರವಾಗಿ ಹರಿಯುತ್ತಿದ್ದ ಕಣ್ಣೀರಿನಲ್ಲಿ; ನನೆದರು = ನೆಂದುಹೋದರು; ವೂಳಿಗದ ಪರಿಜನರು = ಅರಮನೆಯ ಸೇವೆ ಯಲ್ಲಿದ್ದ ಪರಿಜನರು, ಪರಿಚಾರಕರು; ಮಂತ್ರಿಗಳು + ಓಲಗದ = ಸಚಿವರು ಮತ್ತು ಆಸ್ಥಾನದ; ಸಾಮಂತಸಚಿವರು = ಸಾಮಂತರಾಜರು; ಮಲ್ಲಗಾಯಕರು = ಮಲ್ಲರು ಮತ್ತು ಗಾಯಕರು; ಬಾಲೆಯರು ಬಾಲಕರು = ಬಾಲಬಾಲೆಯರು; ಪುರಜನ ಜಾಲವೆಲ್ಲವು = ಆ ನಿಷಧ ನಗರದ ಸಮಸ್ತ ಪ್ರಜೆಗಳೂ; ಶೋಕದಲಿ = ದುಃಖತಪ್ತರಾಗಿ; ಕ್ಷಿತಿಪಾಲನರಸಿಯ = ಭೂಪಾಲನಾದ ನಳನ ಮಹಾರಾಣಿಯ ಸ್ಥಿತಿಯನ್ನು; ಕಂಡು = ನೋಡಿ; ಮರುಗಿತು ಮಂದಿ = ವ್ಯಥಿತರಾದರು; ಗೋಳಿಡುತ = ಗೋಳಾಡುತ್ತ.

ನಿಷಧನಗರದ ಪ್ರಜೆಗಳು, ಅರಮನೆಯ ಪರಿಚಾರಕರು ಪರಿವಾರದವರು, ಮಂತ್ರಿಗಳು, ಆಸ್ಥಾನದಲ್ಲಿದ್ದ ಸಾಮಂತರಾಜ ಸಮೂಹ, ಮಲ್ಲರು, ಗಾಯಕರು, ಆ ಊರಿನ ಹಿರಿಕಿರಿಯರು, ಬಾಲಬಾಲೆಯರು, ಎಲ್ಲರೂ ನಳಮಹಾರಾಜನನ್ನೂ ಅವನರಸಿಯಾದ ದಮಯಂತಿಯನ್ನೂ ಶೋಕತಪ್ತರಾಗಿ ಬಂದು ಕಂಡು, ಅವರ ಪರಿಸ್ಥಿತಿಗೆ ಮರುಗಿ ಗೋಳಾಡಿದರು.

43. ಮನದಿ ಮುನ್ನವೆ ತಿಳಿದು ನೃಪಸತಿ
ತನಯರನು ರಥದೊಳಗೆ ತಂದೆಯ
ಮನೆಗೆ ಕಳುಹಿದಳಾಪ್ತರೊಡನೆ ವಿದರ್ಭಪಟ್ಟಣಕೆ
ಜನಪ ಕೇಳಿತ್ತಲು ಮಹಾರೋ
ದನದಿ ಪಟ್ಟಣವೆಲ್ಲ ಮರುಗಲು
ವನಿತೆ ಪತಿಯೊಡನೈದಿದಳು ನಿಜಭಾವಶುದ್ಧಿಯಲಿ

ಮನದಿ ಮುನ್ನವೆ ತಿಳಿದು = ಮನಸ್ಸಿನಲ್ಲಿ ಮುಂಚೆಯೇ ಆಲೋಚಿಸಿ ನಿಶ್ಚಯಿಸಿ; ನೃಪಸತಿ = ನಳನೃಪನ ಮಡದಿ ದಮಯಂತಿಯು; ತನಯರನು = ತನ್ನ ಮಕ್ಕಳನ್ನು; ತಂದೆಯ ಮನೆಗೆ = ತನ್ನ ತಂದೆಯ ಮನೆಗೆ; ರಥದೊಳಗೆ = ರಥದಲ್ಲಿ; ಕಳುಹಿದಳಾಪ್ತರೊಡನೆ = ತನಗೆ ಆಪ್ತರಾದವರೊಂದಿಗೆ ಕಳುಹಿಸಿ ಕೊಟ್ಟಳು; ವಿದರ್ಭಪಟ್ಟಣಕೆ = ವಿದರ್ಭನಗರಕ್ಕೆ; ಜನಪ = ಧರ್ಮರಾಯನೇ; ಕೇಳು + ಇತ್ತಲು = ಆಲಿಸು, ಇತ್ತಕಡೆ; ಮಹಾರೋದನದಿ = ಮಹಾಶೋಕದಿಂದ ರೋಧಿಸುತ್ತಿದ್ದ; ಪಟ್ಟಣವೆಲ್ಲ ಮರುಗಲು = ಇಡೀ ನಿಷಧನಗರವೇ ದುಃಖದಲ್ಲಿ ಮುಳುಗಿರಲು; ವನಿತೆ = ದಮಯಂತಿಯು; ಪತಿಯೊಡನೆ + ಐದಿದಳು = ಪತಿಯೊಂದಿಗೆ ಹೊರಟಳು; ನಿಜಭಾವ ಶುದ್ಧಿಯಲಿ = ಯಾವ ರೀತಿಯ ಚಂಚಲ ಮನಸ್ಸೂ ಇಲ್ಲದ ಶುದ್ಧ ಮನ್ಸಸಿನಿಂದ.

ದಮಯಂತಿಯು ತನಗೊದಗಿದ ಮತ್ತೊಂದು ರೀತಿಯ ಬದುಕಿನ ಅವಸ್ಥೆಗೆ ಮರುಗಿ ಕೊರಗಿ ಕುಳಿತಿರಲಿಲ್ಲ. ಮೊದಲೇ ಮುಂದೇನು ಮಾಡಬೇಕಿದೆ ಯೆಂಬುದನ್ನು ಸ್ಪಷ್ಟವಾಗಿ ಲೆಕ್ಕಹಾಕಿ, ತನ್ನ ಮಕ್ಕಳನ್ನು ರಥದಲ್ಲಿ ಕೂರಿಸಿ ಆಪ್ತರೊಂದಿಗೆ ತಂದೆಯ ಮನೆಗೆ ಕಳುಹಿಸಿಕೊಟ್ಟಳು. ಧರ್ಮರಾಯನೇ ಕೇಳು, ಅನಂತರ, ಇಡೀ ನಿಷಧ ನಗರವೇ ತನ್ನ ಅರಸನಿಗಾದ ದುಃಸ್ಥಿತಿಗಾಗಿ ರೋಧಿಸುತ್ತಿರಲು, ದಮಯಂತಿ ಮಾತ್ರ ಯಾವ ರೀತಿಯ ಚಂಚಲ ಮನಸ್ಸು ತೋರದೆ ಅತ್ಯಂತ ಸ್ಥಿತಪ್ರಜ್ಞಳಂತೆ ತನ್ನರಸನ ಸಹಿತ ನಿಷಧನಗರವನ್ನು ಬಿಟ್ಟು ಹೊರಟಳು.

44. ಏನನೆಂಬೆನು ಜೀಯ ಲೋಕದ
ಮಾನಿನಿಯೆ ದಮಯಂತಿ ಸತ್ಯ
ಜ್ಞಾನಿಯಲಾ ಸತಿಯರಿಗೆ ಗುರು ಪತಿವ್ರತಾಗುಣದಿ
ಮೌನದಲಿ ಪತಿಯಂಘ್ರಿಕಮಲ
ಧ್ಯಾನದಲಿ ಮನಸಂದು ಘನಸತಿ
ಕಾನನಕೆ ಗಮನಿಸಿದಳು ವರಪುರದರಸನಾಜ್ಞೆಯಲಿ

ಏನನು + ಎಂಬೆನು = ಏನೆಂದು ಹೇಳಲಿ; ಜೀಯ = ದೊರೆಯೇ; ಲೋಕದ ಮಾನಿನಿಯೆ ದಮಯಂತಿ = ಈ ಇಹಲೋಕದ ಸಾಮಾನ್ಯ ಸ್ತ್ರೀಯೇನು ದಮಯಂತಿ?; ಸತ್ಯಜ್ಞಾನಿಯಲಾ = ವಾಸ್ತವದ ಪರಿಸ್ಥಿತಿಯೆಲ್ಲವನ್ನೂ ಅರಿತ ಜ್ಞಾನಿಯಲ್ಲವೇ; ಸತಿಯರಿಗೆ ಗುರು = ಹೆಣ್ಣು ಮಕ್ಕಳಿಗೆ ಆದರ್ಶಪ್ರಾಯ ಗುರುವಾದವಳು; ಪತಿವ್ರತಾಗುಣದಿ = ಸತಿಯಾದವಳು ಹೇಗಿರಬೇಕೆಂಬುದಕ್ಕೆ ನಿದರ್ಶನವಾದವಳು; ಮೌನದಲಿ = ಏನನ್ನೂ ಮಾತನಾಡದೆ; ಪತಿಯಂಘ್ರಿ ಕಮಲ = ಪತಿಯ ಚರಣ ಕಮಲ; ಧ್ಯಾನದಲಿ = ಧ್ಯಾನದಲ್ಲಿಯೇ; ಮನಸಂದು = ಮನಸ್ಸನ್ನು ನೆಟ್ಟು; ಘನಸತಿ = ಅತ್ಯಂತ ತೂಕವುಳ್ಳ ನಡತೆಯ ಹೆಣ್ಣುಮಗಳು; ಕಾನನಕೆ = ಕಾಡಿಗೆ; ಗಮನಿಸಿದಳು = ನಡೆದಳು; ವರಪುರದರಸನಾಜ್ಞೆಯಲಿ = ವರಪುರದರಸನ ಆಜ್ಞೆಯಂತೆ; ದೇವರ ಇಚ್ಛಾನುಸಾರವಾಗಿ.

ದೊರೆ ಧರ್ಮರಾಯನೇ ದಮಯಂತಿಯ ಹಿರಿತನದ ಗುಣಾತಿಶಯ ಗಳನ್ನು ಕುರಿತು ಏನೆಂದು ಹೇಳಲಿ, ಅವಳು ಈ ಇಹಲೋಕದ ಸಾಮಾನ್ಯ ಸ್ತ್ರೀಯರಂತಲ್ಲ. ವಾಸ್ತವ ಸತ್ಯದ ನಿಷ್ಠುರ ನಡೆಗಳನ್ನೆಲ್ಲ ಅರಿತ ಜ್ಞಾನಿಯಲ್ಲವೇ. ಹೆಣ್ಣುಮಕ್ಕಳು ಹೇಗಿರಬೇಕು ಎಂಬುದಕ್ಕೆ ಆದರ್ಶಗುರುವಾದವಳು, ಅಂದಿಗೆ ತಮಗೊದಗಿದ ಸ್ಥಿತಿಯ ಕುರಿತಂತೆ ಯಾವೊಂದೂ ಮಾತುಗಳನ್ನಾಡದೆ ಮೌನವಾಗಿ, ಗಂಭೀರವಾಗಿ ತನ್ನ ಗಂಡನ ಹಿತಚಿಂತನೆಯಷ್ಟರಲ್ಲಿಯೇ ಮನಸ್ಸಿಟ್ಟು ನಡೆದ ಅತ್ಯಂತ ತೂಕವುಳ್ಳ ಮನಸ್ಥಿತಿಯ ಹೆಣ್ಣುಮಗಳು, ದೇವರ ಇಚ್ಛೆ ಎಲ್ಲವೂ ಎಂಬಂತೆ ಮೌನವಾಗಿ ಗಂಡನ ಹಿಂದೆ ಕಾಡಿಗೆ ಹೊರಟಳು.

ಐದನೆಯ ಸಂಧಿ

ಅಡವಿಯಲಿ ಪತಿ ಕಳೆದು ಬಿಡೆ ಫಣಿ
ಯೊಡಲಿಗಿಳಿಯದೆ ಮುಂದೆ ಕರಿಗಳ
ಪಡೆಗೆರಗಿ ದಮಯಂತಿ ಹೊಕ್ಕಳು ಚೈದ್ಯನಗರಿಯನು

ಅಡವಿಯಲ್ಲಿ = ಕಾಡಿನಲ್ಲಿ; ಪತಿ ಕಳೆದು ಬಿಡೆ = ಪತಿಯು ತನ್ನನ್ನು ಅಗಲಿ ಹೊರಟು ಹೋಗಲು; ಫಣಿ = ಹಾವು; ಒಡಲಿಗಿಳಿಯದೆ = ಬಾಯಿಗೆ ಸಿಲುಕದೆ; ಮುಂದೆ = ಬಳಿಕ; ಕರಿಗಳ = ಆನೆಗಳ; ಪಡೆಗೆರಗಿ = ಸಮೂಹಕ್ಕೆ ನಮಸ್ಕರಿಸಿ; ದಮಯಂತಿ = ದಮಯಂತಿಯು; ಹೊಕ್ಕಳು ಚೈದ್ಯನಗರಿಯ = ಚೈದ್ಯನಗರವನ್ನು ಪ್ರವೇಶಿಸಿದಳು.

ದಮಯಂತಿಯನ್ನು ಸಂದರ್ಭವಶಾತ್ ನಳನು ಕಾಡಿನಲ್ಲಿ ಏಕಾಂಗಿಯಾಗಿ ಬಿಟ್ಟು ಹೊರಟುಹೋದ ಬಳಿಕ ಒಬ್ಬೊಂಟಿಗಳಾದ ದಮಯಂತಿಯು ಹಾವಿನ ಬಾಯಿಯಿಂದಲೂ ಕಾಡಾನೆಗಳ ಸಮೂಹದಿಂದಲೂ ಹೇಗೋ ಪಾರಾಗಿ, ಅಂತಿಮವಾಗಿ ಚೈದ್ಯರಾಜನ ಪಟ್ಟಣವನ್ನು ಪ್ರವೇಶಿಸಿದಳು.

1. ಕೇಳು ಕುಂತೀತನಯ ನಳನೃಪ
ಬೀಳುಕೊಟ್ಟನು ಪುರವನಲ್ಲಿಂ
ಮೇಲೆ ನಡೆದರು ಪಯಣಗತಿಯಲಿ ಹಲವು ಯೋಜನವ
ಹೇಳಲೇನದನವರ ವಿಧಿಯನು
ತಾಳಿಗೆಗಳೊಣಗಿದವು ಸತಿಯಳ
ಕಾಲೊಡೆದು ಸುರಿವರುಣಜಲದಲಿ ಬಟ್ಟೆ ಕೆಸರಾಯ್ತು

ಕೇಳು = ಆಲಿಸು; ಕುಂತೀತನಯ = ಧರ್ಮರಾಯನೇ; ನಳನೃಪ = ನಳ ಮಹಾರಾಜನು; ಬೀಳುಕೊಟ್ಟನು ಪುರವನಲ್ಲಿಂ = ನಿಷಧನಗರದಿಂದ ಬೀಳ್ಕೊಂಡನು; ಮೇಲೆ ನಡೆದರು = ಅಲ್ಲಿಂದ ಮುಂದೆ ಮುಂದೆ ನಡೆದು ನಳದಮಯಂತಿಯರು; ಪಯಣಗತಿಯಲಿ = ಪ್ರಯಾಣ ಮಾಡಿದರು; ಹಲವು ಯೋಜನವ = ಹಲವಾರು ಯೋಜನಗಳವರೆಗೆ; ಹೇಳಲೇನು + ಅದನು + ಅವರ = ಅದನ್ನು ಹೇಳಲಾದರೂ ಏನಿದೆ? ಅವರ; ವಿಧಿಯನು = ತಲೆಬರಹವನು; ತಾಳಿಗೆಗಳೊಣಗಿದವು = ನಾಲಗೆ ಗಳು ಒಣಗಿಹೋದುವು; ಸತಿಯಳ = ದಮಯಂತಿಯ; ಕಾಲು + ಒಡೆದು = ಪಾದಗಳು ಸೀಳಿ; ಸುರಿವ + ಅರುಣ ಜಲದಲಿ = ಸುರಿದ ರಕ್ತದಿಂದ; ಬಟ್ಟೆ = ನಡೆವ ದಾರಿಯು; ಕೆಸರಾಯ್ತು = ನೆನೆದು ಕೆಸರಾಯಿತು.

ಕೇಳು ಧರ್ಮರಾಯನೇ, ನಳಮಹಾರಾಜನು ಸತೀಸಮೇತ ವಿದರ್ಭಾ ನಗರವನ್ನು ಬೀಳ್ಕೊಂಡ ಬಳಿಕ ಇಬ್ಬರೂ ಅಲ್ಲಿಂದ ಮುಂದೆ ಮುಂದೆ ಹಲವು ಯೋಜನಗಳವರೆಗೆ ನಡೆದರು. ನಡೆದೂ ನಡೆದೂ ಅವರ ಹಣೆಬರಹದ ಸ್ಥಿತಿ ಎಂತಹುದೆಂಬುದನ್ನು ಹೇಳುವುದಾದರೂ ಹೇಗೆ. ಅವಳ ನಾಲಗೆಗಳು ಬತ್ತಿ ಹೋದುವು, ದಮಯಂತಿಯ ಕಾಲು ಕಾಡುದಾರಿಯ ಕಾಠಿಣ್ಯಕ್ಕೆ ಸಿಲುಕಿ ಒಡೆದು, ರಕ್ತವು ಸೋರಿ ದಾರಿಯೆಲ್ಲ ಕೆಸರಾಯಿತು.

2. ಎಳೆಯ ಬಾಳೆಯ ಸುಳಿಯು ಅನಲನ
ಜಳದ ಹೊಯ್ಲಲಿ ನೊಂದವೊಲ್ ಕಡು
ಬಳಲಿದಬಲೆಯ ಕಂಡು ನೃಪ ಮರುಗಿದನು ಮನದೊಳಗೆ
ಲಲಿತಹೇಮದ ತೂಗುಮಂಚದ
ಹೊಳೆವ ಮೇಲ್ವಾಸಿನಲಿ ಮಲಗುವ
ಲಲನೆಗೀ ವಿಧಿ ಬಂದುದೇ ಹಾಯೆನುತ ಬಿಸುಸುಯ್ದು

ಎಳೆಯ ಬಾಳೆಯ ಸುಳಿಯು = ಚಿಗುರಿದ ಬಾಳೆಗಿಡದ ಹೊಸ ಸುಳಿಯು; ಅನಲನ = ಅಗ್ನಿಯ; ಜಳದ = ಜ್ವಾಲೆಯ; ಹೊಯ್ಲಲಿ = ಹೊಡೆತದಲ್ಲಿ; ನೊಂದವೊಲ್ = ಬೆಂದುಹೋದಂತೆ; ಕಡುಬಳಲಿದ + ಅಬಲೆಯ

= ಅತೀವವಾಗಿ ಆಯಾಸಗೊಂಡ ಆ ಕೋಮಲ ಶರೀರದ ಹೆಣ್ಣು ಮಗಳನ್ನು; ಕಂಡು = ನೋಡಿ; ನೃಪ = ನಳಮಹಾರಾಜನು; ಮರುಗಿದನು = ವ್ಯಥಿತನಾದನು; ಮನದೊಳಗೆ = ಮನಸ್ಸಿನ ಒಳಗೊಳಗೇ; ಲಲಿತ ಹೇಮದ = ಸುಂದರವಾದ ಬಂಗಾರದ; ತೂಗುಮಂಚದ = ತೂಗುಯ್ಯಾಲೆಯಂತಿರುವ ಮಂಚದ; ಹೊಳೆವ = ಥಳಥಳಿಸುವ; ಮೇಲ್ವಾಸಿನಲಿ = ಮೇಲು ಹಾಸುಗೆಯಲ್ಲಿ; ಮಲಗುವ = ವಿಶ್ರಮಿಸುವ; ಲಲನೆಗೀ = ಲಲನೆಗೆ ಈ; ವಿಧಿ ಬಂದುದೆ = ಗತಿ ಬಂದಿತೇ; ಹಾ + ಎನುತ=ಹಾ! ಎಂದು ಮರುಗುತ್ತ; ಬಿಸುಸುಯ್ದು = ಬಿಸಿಯುಸಿರು ಹೊರಹಾಕಿದನು.

ಎಳೆಯ ಬಾಳೆಯ ಸುಳಿಯು ಅಗ್ನಿಜ್ವಾಲೆಯ ಹೊಡೆತಕ್ಕೆ ಸಿಲುಕಿ ಬಾಡಿ ಬತ್ತಿ ಹೋಗುವಂತೆ, ಅತೀವ ಆಯಾಸದಿಂದ ನಲುಗಿಹೋದ ಕೋಮಲ ಶರೀರಿಯಾದ ದಮಯಂತಿಯನ್ನು ಕಂಡು ನಳನೃಪನು ಮರುಗಿದನು. ವೈಭವ ಯುತವಾದ ಸುಂದರ ಬಂಗಾರದ ತೂಗು ಮಂಚದ ಹೊಳೆ ಹೊಳೆವ ಮೆತ್ತನೆಯ ಮೇಲು ಹಾಸಿಗೆಯಲ್ಲಿ ಮಲಗುವ ಲಲನೆಗೆ ಈ ವಿಧಿಯೇ ಹಾ! ಎಂದು ಮನಸ್ಸಿನೊಳಗೊಳಗೇ ಮರುಗುತ್ತ ನಳನು ಬಿಸಿಯುಸಿರು ಹೊರಚೆಲ್ಲಿದನು.

3. ಮರುಗಲಿನ್ನೇಕರಸ ಬಿಡು ವಿಧಿ
ಬರೆದ ಬರೆಹವ ತಪ್ಪಿಸಲು ಹರಿ
ಹರವಿರಿಂಚಾದಿಗಳಿಗಳವೇ ನಮ್ಮ ಪಾಡೇನು?
ಹರೆವುದಾಕ್ಷಣ ತುಂಬುವುದು ಗೋ
ಚರಿಸುವುದು ಸಿರಿ ನಿತ್ಯವೇನಿದ
ನರಿಯದವನೇ ನೋಯಲೇಕೆಂದಳು ಸರೋಜಮುಖಿ

ಮರುಗಲಿನ್ನೇಕರಸ = ಅರಸನೇ, ಇನ್ನೇಕೆ ಮರುಗುವೆ; ಬಿಡು = ದುಃಖವನ್ನು ಬಿಡು; ವಿಧಿ ಬರೆದ ಬರೆಹವ = ವಿಧಿ ಬರೆದ ಹಣೆಬರಹವನ್ನು; ತಪ್ಪಿಸಲು=ಬದಲಿಸಲು; ಹರಿಹರ + ವಿರಿಂಚಿಗಳು + ಆದಿಗೆ + ಅಳವೆ = ಬ್ರಹ್ಮವಿಷ್ಣು ಮಹೇಶ್ವರರುಗಳಿಗಾದರೂ ಸಾಧ್ಯವೇ?; ನಮ್ಮ ಪಾಡೇನು = ಇನ್ನು ನಮ್ಮ ಪಾಡಾದರೂ ಏನು?; ಹರೆವುದಾಕ್ಷಣ = ಒಂದು ಕ್ಷಣ ಬದುಕಿನಲ್ಲಿ ಎಲ್ಲವನ್ನು

ಕಳೆಯುತ್ತದೆ; ತುಂಬುವುದು = ಮತ್ತೊಂದು ಕ್ಷಣ ತುಂಬುತ್ತದೆ, ಗೋಚರಿಸುತ್ತದೆ; ಸಿರಿ=ಸಂಪತ್ತು; ನಿತ್ಯವೇನು + ಇದನು + ಅರಿಯದವನೇ = ಶಾಶ್ವತವೇನು? ಇದನ್ನು ನೀನು ಅರಿಯದವನೇನು?; ನೋಯಲೇಕೆಂದಳು = ವ್ಯರ್ಥವಾಗಿ ಏಕೆ ದುಃಖಿಸು ತ್ತೀಯೆ ಎಂದಳು; ಸರೋಜಮುಖಿ = ದಮಯಂತಿ.

ಅರಸನೇ ಇನ್ನೇಕೆ ದುಃಖಿಸುತ್ತೀಯೆ, ದುಃಖವನ್ನು ಬಿಡು ಎನ್ನುತ್ತ, ತಾನು ಅಷ್ಟು ಕಷ್ಟ ಆಯಾಸಗಳಿಂದ ಬಳಲುತ್ತಿದ್ದರೂ ದಮಯಂತಿಯು ನಳನ ಮರುಗುವ ಮನಸ್ಸನ್ನು ಕಂಡು ಸಂತೈಕೆಯ ಮಾತುಗಳನ್ನಾಡಿದಳು. ಇದೆಲ್ಲ ವಿಧಿಯ ಬರೆಹ. ಅದನ್ನು ತಪ್ಪಿಸಲು ಆ ಹರಿಹರ ಬ್ರಹ್ಮಾದಿಗಳಿಗೇ ಸಾಧ್ಯವಿಲ್ಲ. ಇನ್ನು ನಮ್ಮಂಥವರ ಪಾಡೇನು? ಬದುಕಿನಲ್ಲಿ ಸುಖ, ಸಂಪತ್ತು ಎಂದಿಗೂ ಶಾಶ್ವತವಾಗಿ ಒಂದೇ ಸಮ ಇರುವಂಥದಲ್ಲ. ಅದು ಒಮ್ಮೆ ಕಳೆದರೆ ಮತ್ತೊಮ್ಮೆ ತುಂಬಿಬರುತ್ತದೆ. ಕೆಲವೊಮ್ಮೆ ಗೋಚರಿಸುತ್ತದೆ ಅಷ್ಟೇ, ಬದುಕಿನ ಈ ವಿಷಯ ನಿನಗೆ ಗೊತ್ತಿಲ್ಲದೆ ಉಂಟೆ? ಹಾಗಿದ್ದೂ ವ್ಯರ್ಥವಾಗಿ ಏಕೆ ನೋಯುತ್ತಿದ್ದೀಯೆ ಎಂದು ದಮಯಂತಿಯು ನಳನನ್ನು ಸಮಾಧಾನಪಡಿಸಿದಳು.

4. ನುಡಿಯ ಕೇಳುತ ಮನದಿ ಮಿಡುಕುತ
ಪೊಡವಿಪನು ಸತಿಸಹಿತ ಘನಘೋ
ರಡವಿಯಲಿ ಬರುತಿರೆ ಜಗನ್ಮೋಹನದ ಪಕ್ಷಿಗಳು
ಪೊಡವಿಗಿಳಿಯಲು ಕಂಡಪೇಕ್ಷಿಸಿ
ಪಿಡಿವೆನೆಂದುರವಣಿಸಿ ನೃಪ ಹ
ಚ್ಚಡವ ಬೀಸಿದಡದನು ಕೊಂಡೊಯ್ದುವು ನಭಸ್ಥಳಕೆ

ನುಡಿಯ ಕೇಳುತ = ದಮಯಂತಿಯ ಮಾತುಗಳನ್ನು ಕೇಳುತ್ತ; ಮನದಿ ಮಿಡುಕುತ=ಮನಸ್ಸಿನೊಳಗೊಳಗೇ ದುಃಖಿಸುತ್ತ; ಪೊಡವಿಪನು = ಭೂಪತಿಯಾದ ನಳನು; ಸತಿಸಹಿತ = ತನ್ನ ಮಡದಿಯಾದ ದಮಯಂತಿಯೊಂದಿಗೆ; ಘನಘೋರಡ ವಿಯಲಿ=ಘನಘೋರವಾದ ಅಡವಿಯಲ್ಲಿ; ಬರುತಿರೆ = ಬರುತ್ತಿರಲು; ಜಗನ್ಮೋ ಹನದ ಪಕ್ಷಿಗಳು = ಅತ್ಯಂತ ಸುಂದರವಾದ ಪಕ್ಷಿಗಳು; ಪೊಡವಿ ಗಿಳಿಯಲು = ಹಾರುತ್ತ ಬಂದು ನೆಲಕ್ಕೆ ಇಳಿಯಲು; ಕಂಡು + ಅಪೇಕ್ಷಿಸಿ = ಅವುಗಳನ್ನು ಕಂಡು

ಆಸೆಪಟ್ಟು; ಪಿಡಿವೆನು+ಎಂದು+ಉರವಣಿಸಿ = ಹಿಡಿಯುತ್ತೇನೆ ಎಂದು ಆತುರಾತುರ ದಿಂದ; ನೃಪ = ನಳಮಹಾರಾಜನು; ಹಚ್ಚಡವ = ತನ್ನ ಉತ್ತರೀಯವನ್ನು; ಬೀಸಿದಡೆ + ಅದನ್ನು = ಬೀಸಿದಾಗ, ಅದನ್ನೇ; ಕೊಂಡು + ಒಯ್ದವು = ತೆಗೆದು ಕೊಂಡು ಹಾರಿ ಹೋದುವು; ನಭಸ್ಥಳಕ್ಕೆ = ಗಗನ ಮಂಡಲಕ್ಕೆ.

ನಳಮಹಾರಾಜನು ಮನಸ್ಸಿನೊಳಗೆ ದುಃಖಿಸುತ್ತಲೇ ದಮಯಂತಿಯ ಮಾತುಗಳನ್ನು ಆಲಿಸುತ್ತ, ಆ ಮಹಾದುರ್ಗಮವಾದ ಘನಘೋರ ಅಡವಿಯೊಳಗೆ ಬರುತ್ತಿರುವಾಗ, ಅವರೆದುರು ಎಲ್ಲಿಂದಲೋ ಹಾರಿಬಂದ ಅತಿಸುಂದರ ಪಕ್ಷಿಗಳು ನೆಲಕ್ಕಿಳಿದುವು. ಅವುಗಳ ಸೌಂದರ್ಯಕ್ಕೆ ಆಕರ್ಷಿತನಾದ ನಳನು ಅವುಗಳನ್ನು ಹಿಡಿಯಲು ಅಪೇಕ್ಷಿಸಿ ಆತುರದಿಂದ ತಾನು ಹೊದ್ದುಕೊಂಡಿದ್ದ ಉತ್ತರೀಯವನ್ನು ಬೀಸಿದನು. ಅವನ ದುರದೃಷ್ಟವೆಂಬಂತೆ ಆ ಪಕ್ಷಿಗಳು ಅವನ ಉತ್ತರೀಯವನ್ನೇ ಹಾರಿಸಿಕೊಂಡು ಆಕಾಶಕ್ಕೇರಿದುವು.

5. ಮೂಗಿನಲಿ ಬೆರಳಿಟ್ಟು ಮಕುಟವ
ತೂಗಿದನು ನಸುನಗುತ ನಿಂದಿರ
ಲಾಗ ಸೂಚಿಸಿದವು ನಿರಂತರ ರಾಜ್ಯಭೋಗವನು
ಬೇಗದಿಂದಪಹರಿಸಿಕೊಂಡವ
ರೀಗವಾವಿದನರಿದಿರೆಂದು ಸ
ರಾಗದಿಂದಲಿ ಮಾಯವಾದವು ಪಕ್ಷಿಯುಗಳಗಳು

ಮೂಗಿನಲಿ ಬೆರಳಿಟ್ಟು = ಅತ್ಯಾಶ್ಚರ್ಯದಿಂದ ನಳನು ಬೆರಗಾದನು; ಮಕುಟವ ತೂಗಿದನು = ಅವುಗಳ ಚಾತುರ್ಯಕ್ಕೆ ತಲೆದೂಗಿದನು; ನಸುನಗುತ = ಮುಗುಳುನಗುತ್ತ; ನಿಂದಿರಲಾಗ = ನಿಂತಿರಲು ಆಗ; ಸೂಚಿಸಿದವು = ಆ ಪಕ್ಷಿಗಳು ತಿಳಿಯಪಡಿಸಿದುವು; ನಿರಂತರ = ಎಡೆಬಿಡದೆ; ರಾಜ್ಯಭೋಗವನು = ರಾಜ್ಯದ ಸುಖ ಸಂಪತ್ತುಗಳನ್ನು; ಬೇಗದಿಂದ + ಅಪಹರಿಸಿಕೊಂಡವರು + ಈಗ + ಆವು + ಇದನು + ಅರಿದಿರು + ಎಂದು = ಕ್ಷಣಮಾತ್ರದಲ್ಲಿ ಅಪಹರಿಸಿಕೊಂಡವರು ನಾವೇ; ಇದನ್ನು ತಿಳಿದಿರು ಎಂದು ಹೇಳಿ; ಸ + ರಾಗದಿಂದಲಿ = ನೇರವಾಗಿ; ಮಾಯ ವಾದವು=ಕಣ್ಮರೆಯಾದವು; ಪಕ್ಷಿಯುಗಳಗಳು = ಜೋಡಿ ಪಕ್ಷಿಗಳು.

ಕ್ಷಣಾರ್ಧದಲ್ಲಿ ಪಕ್ಷಿಗಳ ಚಾತುರ್ಯವನ್ನು ಕಂಡ ನಳನು ಆಶ್ಚರ್ಯದಿಂದ ಬೆರಗಾದನು. ಅವುಗಳ ವೇಗ, ಸೌಂದರ್ಯ, ಚಾಕಚಕ್ಯತೆಗಳನ್ನು ಮೆಚ್ಚಿ ತಲೆದೂಗಿದನು. ಅವುಗಳ ಆ ಕಾರ್ಯವೈಖರಿ ಪೂರ್ವನಿಶ್ಚಿತವೆಂದು ತಿಳಿಯದ ಅವನನ್ನು ಉದ್ದೇಶಿಸಿ ಆ ಪಕ್ಷಿಯುಗಳಗಳು "ಎಡೆಬಿಡದೆ ನಿನ್ನ ರಾಜ್ಯದ ಸುಖ ಭೋಗಗಳೆಲ್ಲವನ್ನೂ ಕ್ಷಣಾರ್ಧದಲ್ಲಿ ಅಪಹರಿಸಿದವರು ನಾವೇ.ಇದನ್ನುತಿಳಿದುಕೋ" ಎಂದು ಹೇಳಿ, ನೇರವಾಗಿ ಆಕಾಶಮಾರ್ಗದಲ್ಲಿ ಕಣ್ಮರೆಯಾದುವು.

6. ಧರಣಿಪತಿ ಕೇಳ್ ನಿಷಧಪತಿ ಕಲಿ
ಪುರುಷ ಮಾಯವ ಬಲ್ಲನೇ ಮನ
ಮರುಗಿ ನಿರ್ವಾಣದಲಿ ನಿಂದಿರಲಾಗ ಸತಿ ಕಂಡು
ಹರಹರಾಯೆನುತಾಗ ಸೀರೆಯ
ಸೆರಗ ಹರಿದಿತ್ತಳು ನೃಪಾಲಗೆ
ಶಿರವ ನಸುಬಾಗಿದನು ನಾಚಿಕೆಯಾಗಲಿಂತೆಂದ

ಧರಣಿಪತಿ ಕೇಳ್ = ಧರ್ಮರಾಯನೇ ಆಲಿಸು; ನಿಷಧಪತಿ = ನಿಷಧ ನಗರಾಧಿಪತಿಯಾದ ನಳನು; ಕಲಿಪುರುಷ ಮಾಯವ = ಕಲಿಪುರುಷನ ಕಪಟ ಲೀಲೆಯನ್ನು; ಬಲ್ಲನೇ=ತಿಳಿದಿರುವನೇ; ಮನಮರುಗಿ = ಅತ್ಯಂತ ದುಃಖಾರ್ಥನಾಗಿ; ನಿರ್ವಾಣದಲಿ=ಬತ್ತಲೆಯಾಗಿ; ನಿಂದಿರಲಾಗ = ನಿಂತಿರಲು ಆಗ; ಸತಿ ಕಂಡು = ದಮಯಂತಿಯು ಅದನ್ನು ಅರಿತು; ಹರಹರಾಯೆನುತಾಗ = ಹರಹರಾ! ಎಂದು ಉದ್ಗರಿಸುತ್ತ, ಆಗ; ಸೀರೆಯ ಸೆರಗ = ಸೀರೆಯ ಒಂದು ತುದಿ ಭಾಗವನ್ನು; ಹರಿ ದಿತ್ತಳು=ಹರಿದು ನೀಡಿದಳು; ನೃಪಾಲಗೆ = ಧರಣಪತಿಗೆ; ಶಿರವ = ತಲೆಯನ್ನು; ನಸುಬಾಗಿದನು=ತುಸುವೇ ತಗ್ಗಿಸಿಕೊಂಡನು; ನಾಚಿಕೆಯಾಗಲು+ಇಂತು+ಎಂದ = ನಾಚಿಕೆ ಪಟ್ಟುಕೊಂಡು ಈ ರೀತಿ ಹೇಳಿದನು:

ಧರ್ಮರಾಯನೇ ಕೇಳು, ನಿಷಧಾಧಿಪತಿಯಾದ ನಳನಿಗೆ ಕಪಟಿಯಾದ ಕಲಿಪುರುಷನ ನಾಟಕವು ಹೇಗೆ ತಾನೇ ಅರ್ಥವಾದೀತು? ನಾಚಿಕೆಯಿಂದಲೂ, ದುಃಖದಿಂದಲೂ ಬತ್ತಲೆಯಾಗಿ ನಿಂತಿರಲು, ಕಂಡು ದಮಯಂತಿಯು ತನ್ನ ಸೀರೆಯ ಒಂದು ಭಾಗವನ್ನು ಹರಿದು ಅವನಿಗೆ ಹೊದೆಯಲು ನೀಡಿದಳು.

ಹರಹರಾ! ಎಂದು ಉದ್ಗರಿಸುತ್ತ ಅವಳು ನೀಡಿದ ಸೀರೆಯ ಸೆರಗನ್ನು, ಧರಣೀ ಪಾಲನಾದರೂ ಗತಿಯಿರ ದವನಂತಿದ್ದ ನಳನು ಕಂಡು ನಾಚಿಕೆಯಿಂದ ಹೀಗೆ ಹೇಳಿದನು.

7. ಧರೆಯ ನೃಪರಿಗೆ ನಿಷಧಪುರಪತಿ
ಯರಮನೆಯ ಬಾಗಿಲಿನ ಸುಮುಖವು
ದೊರಕಲದು ತಾ ಪುಣ್ಯವೆಂಬೀಯರಸುತನ ನಮಗೆ
ಹರೆದುದೆಲ್ಲ ಸಮಸ್ತರಾಜ್ಯದ
ಸಿರಿಗೆ ಬಾಹಿರನಾಗಿ ಸತಿಯಳ
ಸೆರಗನುಡುವಂತಾಯ್ತೆ ಹರಹರಯೆನುತ ಬಿಸುಸುಯ್ದ

ಧರೆಯ=ಭೂಮಿಯ; ನೃಪರಿಗೆ = ದೊರೆಗಳಿಗೆ; ನಿಷಧಪುರ + ಪತಿಯ +ಅರಮನೆಯ = ನಿಷಧಪುರಾಧಿಪತಿಯ ಅರಮನೆಯ; ಬಾಗಿಲಿನ = ಮಹಾ ದ್ವಾರದ; ಸುಮುಖವು = ದರ್ಶನವು; ದೊರಕಲು + ಅದು + ತಾ + ಪುಣ್ಯವೆಂಬ + ಅರಸುತನ = ಅದೇ ಪುಣ್ಯ ಎಂಬಂತಿದ್ದ ಆ ಅರಸಾಧಿಕಾರವು; ನಮಗೆ = ನಮಗೆ; ಹರೆದುದೆಲ್ಲ = ಎಲ್ಲವೂ ಕೈಬಿಟ್ಟು ಹೋದುವು; ಸಮಸ್ತ ರಾಜ್ಯದ =ರಾಜ್ಯಾಡಳಿತದ ಸಮಸ್ತ; ಸಿರಿಗೆ = ಭೋಗವೈಭವಗಳಿಗೆ; ಬಾಹಿರನಾಗಿ = ಯೋಗ್ಯವಿಲ್ಲದವನಾಗಿ; ಸತಿಯಳ = ಹೆಂಡತಿಯ, ಸೆರಗನುಡುವಂತಾಯ್ತೆ = ಸೀರೆಯ ತುಂಡನ್ನು ಹಂಚಿಕೊಂಡು ಉಡುವ ಗತಿ ಬಂದಿತೇ; ಹರಹರ + ಎನುತ = ಹರಹರಾ! ಎಂದು ಉದ್ಗರಿಸುತ್ತ, ಬಿಸುಸುಯ್ದು = ನಿಟ್ಟುಸಿರು ಹೊರಹಾಕಿದನು.

ನಳನಿಗೆ ತನ್ನ ರಾಜವೈಭವವು ಕ್ಷಣಾರ್ಧದಲ್ಲಿ ಕಳೆದುಹೋದ ಸಂಗತಿ ಯೊಂದಿಗೆ ಇಂದು ನಿರ್ಗತಿಕನಂತೆ ಕಾಡನ್ನಲೆಯುವಂತಾದುದರ ಕುರಿತಂತೆ ವಿಪರೀತ ವಾದ ದುಃಖವಿದೆ. ಈ ಭೂಮಂಡಲದ ರಾಜಾಧಿರಾಜರುಗಳಿಗೂ ಸಹ ನಿಷಧ ಪುರಾಧಿಪತಿಯ ಅರಮನೆಯ ಮಹಾದ್ವಾರದ ದರ್ಶನ ಮಾತ್ರವೂ ತಮಗೆ ಪುಣ್ಯ ಪ್ರಾಪ್ತಿ ಎಂದು ಭಾವಿಸುವ ಸ್ಥಿತಿ ಇತ್ತು. ಆ ಭೋಗ, ವೈಭವಾಡಂಬರಗಳು, ಆ ರಾಜಾಧಿಕಾರವಾವುದಕ್ಕೂ ಯೋಗ್ಯವಲ್ಲದ ಸ್ಥಿತಿ ಬಂತೇ! ಮೈಮೇಲೆ ಸಿರಿಸಂಪದದ

ವಸ್ತ್ರಭೂಷಣಗಳಿರಲಿ, ಹೆಂಡತಿಯ ಮೈಮೇಲಿನ ಸೀರೆಯ ಸೆರಗನ್ನು ಹಂಚಿ ಉಡುವ ಗತಿ ಬಂತೇ ಹರಹರಾ! ಎಂದು ನಳ ಭೂಪಾಲನು ನಿಟ್ಟುಸಿರು ಬಿಟ್ಟನು.

ರಾಜಾಧಿಕಾರವು ಕ್ಷತ್ರಿಯರಿಗೆ ಕೇವಲ ಭೋಗಾಡಂಬರಗಳನ್ನು ಅನುಭವಿಸುವ, ಯೋಗ್ಯತೆಯನ್ನು ಬಿಂಬಿಸುವ ಪದವಿಯಲ್ಲ. ಅದು ಅವರ ಬಾಹುಬಲ, ಅಧಿಕಾರ ದಕ್ಷತೆ, ದೂರಾಲೋಚನೆ, ವಿಚಕ್ಷಣಮತಿಯ ಸಂಕೇತವೂ ಹೌದು. ಅದನ್ನು ತಾನು ಕಳೆದುಕೊಂಡುದರ ಕುರಿತ ನಳನ ವ್ಯಥೆ ಇಲ್ಲಿ ಸ್ಪಷ್ಟವಾಗುತ್ತದೆ. ಹೀಗಾಗಿ ಕಳೆದುಹೋದುದರ ಕುರಿತಂತೆ ದಮಯಂತಿಯ ನಿರ್ವ್ಯಾಮೋಹದ ಚಿಂತನೆಗೂ ನಳನ ಚಿಂತನೆಗೂ ವ್ಯತ್ಯಾಸವಿರುವುದು ಸಹಜವಾಗಿದೆ. ತನ್ನ ರಕ್ಷಣೆಯನ್ನು ನಂಬಿಬಂದ ಹೆಣ್ಣಿನಿಂದಲೇ ತಾನು ಉಪಕೃತನಾಗಬೇಕಾಗಿ ಬಂದುದರ ಕುರಿತಂತೆ ನಳನಿಗೆ ವ್ಯಸನವೂ ಹೌದು, ಅವನ ಗಂಡುಗರ್ವಕ್ಕೆ ಬಿದ್ದ ಹೊಡೆತವೂ ಹೌದು.

8. ಧರೆಯ ಸಂಪದದಷ್ಟ ಭೋಗವ
ಪರಿಹರಿಸಿ ನಿಜಪುತ್ರಮಿತ್ರರ
ತೊರೆದು ನಂಬಿದ ಸತಿಯ ಘೋರಾರಣ್ಯಮಧ್ಯದಲಿ
ಹಿರಿದು ಬಳಲಿಸಿ ನೋಯಿಸಿದ ಕೇಳ್
ತರುಣಿಯೆನ್ನವೊಲಾರು ಪಾಪಿಗ
ಳಿರದೆ ನೀ ಹೋಗಿನ್ನು ತಂದೆಯ ಮನೆಗೆ ನಡೆಯೆಂದಾ

ಧರೆಯ = ಭೂಮಿಯ, ಸಂಪದದ + ಅಷ್ಟಭೋಗವ = ಅಷ್ಟವಿಧ ಸಂಪತ್ತುಗಳೆನಿಸಿದ ಗೃಹ, ತಲ್ಪ, ವಸ್ತ್ರ, ಆಭರಣ, ಸ್ತ್ರೀ, ಪುಷ್ಪ, ಗಂಧ, ತಾಂಬೂಲ ಮೊದಲಾದುವುಗಳನ್ನು; ಪರಿಹರಿಸಿ = ಕಳೆದುಕೊಂಡು; ನಿಜಪುತ್ರಮಿತ್ರರ = ನನ್ನ ಮಕ್ಕಳು, ಮಿತ್ರವರ್ಗವೆಲ್ಲವನ್ನೂ; ತೊರೆದು = ಬಿಟ್ಟು; ನಂಬಿದ ಸತಿಯ = ನನ್ನ ಶಕ್ತಿ ಸೌಭಾಗ್ಯಗಳನ್ನು ನಂಬಿ ಬಂದ ಹೆಂಡತಿಯನ್ನು; ಘೋರಾರಣ್ಯ ಮಧ್ಯದಲ್ಲಿ = ಇಂತಹ ದುರ್ಗಮವಾದ; ಕ್ರೂರ ಮೃಗ ಸಂತತಿಯ ಘೋರ ಅರಣ್ಯದ ನಡುವಿನಲ್ಲಿ ಹಿರಿದು = ಅಪಾರವಾದ ಕಷ್ಟದಿಂದ; ಬಳಲಿಸಿ = ಆಯಾಸಕ್ಕೂ; ಮನಃಕಷ್ಟಗಳಿಗೂ ಈಡಾಗಿಸಿ; ನೋಯಿಸಿದೆ = ನೋಯಿಸಿಬಿಟ್ಟಿದ್ದೇನೆ; ಕೇಳ್ = ಕೇಳು; ತರುಣಿ +

ಎನ್ನವೊಲ್+ಆರು = ಹೆಣ್ಣೇ; ನನ್ನಂತೆ ಯಾರು; ಪಾಪಿಗಳ್ + ಇರದೆ = ಪಾಪಿಗಳು? ಇನ್ನು ಇಲ್ಲಿರದೆ; ನೀ = ನೀನು; ಹೋಗಿನ್ನು = ಹೊರಟುಹೋಗು; ತಂದೆಯ ಮನೆಗೆ = ತಂದೆಯಿರುವಲ್ಲಿಗೆ; ನಡೆಯೆಂದಾ = ನಡೆ ಎಂದನು.

ನಳನ ಚಿತ್ತ ಮಡದಿಯನ್ನು ಸುಖವಾಗಿಡುವತ್ತ ಎಂಬುದನ್ನು ಇಲ್ಲಿ ಗುರುತಿಸಬಹುದು. ಹೆಂಡತಿಯನ್ನುದ್ದೇಶಿಸಿ ನಳಮಹಾರಾಜನು ಹೇಳುತ್ತಿದ್ದಾನೆ – "ಭೂಮಿಯ ಸಕಲ ಸೌಭಾಗ್ಯಗಳು ಎನಿಸಿದ ಗೃಹ, ತಲ್ಪ, ವಸ್ತ್ರ, ಆಭರಣ, ಸ್ತ್ರೀ, ಪುಷ್ಪ, ಗಂಧ, ತಾಂಬೂಲ ಮೊದಲಾದ ಅಷ್ಟಭೋಗಗಳನ್ನೂ, ಮಕ್ಕಳು, ಮಿತ್ರರು ಎಲ್ಲರನ್ನೂ ಕಳೆದುಕೊಂಡು, ನನ್ನನ್ನೇ ನಂಬಿ ಬಂದ ಪ್ರೀತಿಯ ಮಡದಿಯನ್ನು ಇಂತಹ ದುರ್ಗಮವಾದ, ಕ್ರೂರ ಮೃಗಗಳಿರುವ ಘೋರಾರಣ್ಯದ ಮಧ್ಯದಲ್ಲಿ ಆಯಾಸಗೊಳಿಸಿ ನೋಯಿಸಿದ್ದೇನೆ. ನನ್ನಂತೆ ಪಾಪಿಗಳು ಯಾರು ಇದ್ದಾರೆ? ಇನ್ನಾದರೂ ನೀನು ಸುಖವಾಗಿರಬೇಕು ಎಂದರೆ ನಿನ್ನ ತಂದೆಯವರಲ್ಲಿ ಹೋಗಿ ಇರುವುದರಿಂದ ಮಾತ್ರ ಸಾಧ್ಯ. ಹಾಗಾಗಿ ಈಗಿಂದೀಗಲೇ ನೀನು ನಿನ್ನ ತಂದೆಯ ಮನೆಗೆ ನಡೆ" ಎಂದನು.

9. ಇನಿಯನಾಡಿದ ನುಡಿಗೆಯಂಗನೆ
ಕನಲಿ ನುಡಿದಳು ಶೋಕದಲಿ ನೀ
ನಿನಿತು ಮುನಿದಾಡುವರೆ ಸಾಕಿನ್ನಾರು ಗತಿಯೆನಗೆ
ಅನುದಿನವು ನಾ ನಿಮ್ಮ ಪದಯುಗ
ವನಜವನು ಭಜಿಸುವುದ ತೊರೆದೀ
ತನುವ ಸೈರಿಸಲಾಪೆನೇ ಹೇಳೆಂದಳಿಂದುಮುಖಿ

ಇನಿಯನಾಡಿದ = ತನ್ನ ಪ್ರೀತಿಯ ಪತಿಯು ಆಡಿದ; ನುಡಿಗೆ + ಅಂಗನೆ = ಮಾತಿಗೆ ದಮಯಂತಿಯು; ಕನಲಿ = ಸಿಡಿದೆದ್ದು; ನುಡಿದಳು = ಹೇಳಿದಳು; ಶೋಕದಲಿ = ದುಃಖದಿಂದ; ನೀನು + ಇನಿತು = ನೀನು ಈ ರೀತಿ; ಮುನಿದು + ಆಡುವರೆ = ನಿನ್ನ ಪರಿಸ್ಥಿತಿಗೆ ಸಿಟ್ಟಾಗಿ ಈ ರೀತಿ ಮಾತನಾಡಬಹುದೆ; ಸಾಕು + ಇನ್ನು + ಆರು = ಸಾಕು ಮಾಡು, ಇನ್ನು + ಯಾರು ಗತಿಯೆನಗೆ = ಇನ್ನಾರು ಗತಿ ನನಗೆ?; ಅನುದಿನವು = ಪ್ರತಿದಿನವು; ನಾ ನಿಮ್ಮ = ನಾನು ನಿಮ್ಮ; ಪಾದಯುಗವನ

ಜವನು = ಪಾದಪದ್ಮಗಳೆರಡನ್ನೂ; ಭಜಿಸುವುದ = ಧ್ಯಾನಿಸುವುದನ್ನು; ತೊರೆದೀ = ಬಿಟ್ಟು; ಈ ತನುವ = ದೇಹವನು; ಸೈರಿಸಲು + ಆಪೆನೇ + ಹೊರೆದುಕೊಂಡು ಇರುತ್ತೇನೆಯೇ?; ಹೇಳೆಂದಳಿಂದುಮುಖಿ = ಹೇಳು ಎಂದಳು ದಮಯಂತಿ.

ತನ್ನ ಪ್ರೀತಿಯ ಪತಿಯು ಆಡಿದ ಮಾತಿಗೆ ದಮಯಂತಿಯು ಸಿಡಿದೆದ್ದಳು. ತಾನು ಅಷ್ಟು ಅನನ್ಯವಾಗಿ ಪ್ರೀತಿಸಿ, ಕಾದು, ಬಯಸಿ ಪಡೆದ ಇನಿಯನೇ ತನ್ನನ್ನು ಹೋಗು ಎಂದದ್ದು ಅವಳನ್ನು ಅಪಾರವಾಗಿ ಬಾಧಿಸಿತು. ಅತೀವ ದುಃಖದಿಂದ ಗಂಡನನ್ನುದ್ದೇಶಿಸಿ ಹೇಳಿದಳು– ನಿನ್ನ ಮಾತನ್ನು ಸಾಕು ಮಾಡು. ನಿನ್ನ ಪರಿಸ್ಥಿತಿಯ ಕುರಿತು ಸಿಟ್ಟಿದ್ದರೂ ಈ ರೀತಿಯ ಮಾತುಗಳನ್ನು ಆಡಬಹುದೇ? ನೀನೇ ನನ್ನನ್ನು ತೊರೆದರೆ ನನಗಿನ್ನಾರು ಗತಿ? ಪ್ರತಿದಿನವೂ ನಿನ್ನ ಪಾದಕಮಲಯುಗವನ್ನು ಧ್ಯಾನಿಸುತ್ತ ಇರುವ ನಾನು ನಿನ್ನನ್ನು ತೊರೆದು ಈ ದೇಹವನ್ನು ಪೋಷಿಸುತ್ತ ಇರುತ್ತೇನೆಯೇ, ಹೇಳು ಎಂದಳು.

10. ನೆಳಲು ತನುವಿನ ಬಳಿಯೊಳಲ್ಲದೆ
ಚಲಿಸುವುದೆ ತಾ ಬೇರೆ ನಿಮ್ಮಡಿ
ನಳಿನದಲಿ ಸುಖದುಃಖವಲ್ಲದೆ ಬೇರೆ ಗತಿಯುಂಟೆ
ಹಳುವವೇ ಸಾಮ್ರಾಜ್ಯ ನಿಮ್ಮಡಿ
ನೆಳಲಿನಲಿ ತಾನಿರುವೆನಲ್ಲದೆ
ನಿಳಯವೇ ನನಗಡವಿಯೆಂದೆರಗಿದಳು ಪದಯುಗಕೆ

ನೆಳಲು = ನೆರಳು; ತನುವಿನ = ದೇಹದ; ಬಳಿಯೊಳಲ್ಲದೆ = ಬಳಿಯಲ್ಲಿ ಅಲ್ಲದೆ; ಚಲಿಸುವುದೆ ತಾ ಬೇರೆ = ತಾನೇ ಬೇರೆಯಾಗಿ ಚಲಿಸುವುದೇನು?; ನಿಮ್ಮಡಿ = ನಿಮ್ಮಪಾದ; ನಳಿನದಲಿ = ಕಮಲದಲ್ಲಿ; ಸುಖದುಃಖವಲ್ಲದೆ = ನನ್ನ ಸುಖ ದುಃಖ ಇರುವುದಲ್ಲದೆ, ಬೇರೆ = ಅನ್ಯಥಾ; ಗತಿಯುಂಟೆ = ದಾರಿಯಿದೆಯೇನು?; ಹಳುವವೇ = ಕಾಡೇ; ಸಾಮ್ರಾಜ್ಯ = ದೊಡ್ಡ ರಾಜ್ಯ ಭೋಗವೆಲ್ಲವೂ, ನಿಮ್ಮಡಿ = ನಿಮ್ಮ ಪಾದದ; ನೆಳಲಿನಲಿ = ನೆರಳಿನಲ್ಲಿ; ತಾನು + ಇರುವೆನು + ಅಲ್ಲದೆ = ನಾನಿರುತ್ತೇನೆಯೇ ಹೊರತು; ನಿಳಯವೇ =

ಅರಮನೆಯೇ; ನನಗಡವಿ ಯೆಂದೆರಗಿದಳು = ನನಗೆ ಅಡವಿ ಎಂದು ಕಾಲಿಗೆ ನಮಸ್ಕರಿಸಿದಳು; ಪಾದಯುಗಕ್ಕೆ = ಪಾದಗಳಿಗೆ.

ನೆರಳು ದೇಹದ ಬಳಿಯೇ ಇರುವುದಲ್ಲದೆ, ತಾನೇ ಸ್ವತಂತ್ರವಾಗಿ, ಬೇರೆ ಯಾಗಿ ಚಲಿಸುವುದೇನು? ನಿಮ್ಮ ಪಾದದ ನೆರಳಿನಲ್ಲಿಯೇ ನನ್ನ ಬದುಕಿನ ಸುಖ ಇರುವುದೇ ಹೊರತು ನನಗೆ ಬೇರೆ ದಾರಿ ಇದೆಯೇನು? ಕಾಡೇ ನನಗೆ ಸಕಲ ಸೌಭಾಗ್ಯಗಳಿರುವ ದೊಡ್ಡ ರಾಜ್ಯ. ನಿಮ್ಮ ನೆರಳಿನಲ್ಲಿಯೇ ನಾನಿರುತ್ತೇನೆ. ಅಡವಿಯೇ ನನಗೆ ಅರಮನೆ ಎಂದು ನಳಮಹಾರಾಜನ ಪಾದಗಳಿಗೆ ನಮಸ್ಕರಿಸಿದಳು.

ವಾಲ್ಮೀಕಿ ರಾಮಾಯಣದಲ್ಲಿಯ 'ಸಹಧರ್ಮಚರೀತವ' ಎಂಬ, ಸತಿಯು ಸದಾ ಗಂಡನ ನೆರಳಾಗಿ ಚಲಿಸುವವಳು ಎಂಬ ನಂಬಿಕೆ, ಕಾಲಕ್ರಮೇಣ ಭಾರ ತೀಯ ಕಾವ್ಯಗಳಲ್ಲಿ ಬೇರೂರಿ, ಈ ನೆಲದ ಸಂಪ್ರದಾಯವಾಗಿ ಬೆಳೆದದ್ದರ ಹೆಜ್ಜೆ ಗುರುತು ಗಳು ಇವು.

11. ಎನುತ ಸುರಿದಳು ಕಣ್ಣಿನಲಿ ಕಂ
ಬನಿಯ ಮಿಡಿದಳು ಬೆರಳಿನಲಿ ಮು
ನ್ನಿನಲಿ ಮಾಡಿದ ಕರ್ಮಫಲವಿದಕೇನ ಮಾಡುವುದು
ಎನಗೆ ಚಿಂತಿಸಲೇಕೆ ನೀನಿಂ
ದಿನಲಿ ನಿರ್ಮಲಚಿತ್ತದಲಿ ಕಾ
ನನವ ಸಂಚರಿಸುವೆನು ನಿಮ್ಮೊಡನೆಂದಳಿಂದುಮುಖಿ

ಎನುತ = ಹೀಗೆ ತನ್ನೊಳಗನ್ನು ಪ್ರಕಟಪಡಿಸುತ್ತ; ಸುರಿದಳು = ಸುರಿಸಿ ದಳು; ಕಣ್ಣಿನಲಿ = ಕಣ್ಣಿನಲ್ಲಿ; ಕಂಬನಿಯ ಮಿಡಿದಳು = ದುಃಖಾಶ್ರುಗಳನ್ನು ಮಿಡಿದಳು; ಬೆರಳಿನಲ್ಲಿ = ಬೆರಳಿನಿಂದ; ಮುನ್ನಿನಲ್ಲಿ ಮಾಡಿದ = ಹಿಂದಿನ ಜನ್ಮಗಳಲ್ಲಿ ಮಾಡಿದ; ಕರ್ಮಫಲವು + ಇದಕೆ + ಏನ + ಮಾಡುವುದು = ಕರ್ಮಫಲವೇ ಇದು; ಇದಕ್ಕೆ ಏನೂ ಪರಿಹಾರವಿಲ್ಲ; ಎನಗೆ = ನನ್ನ ಕುರಿತು; ಚಿಂತಿಸಲೇಕೆ = ನೀನೇಕೆ ಚಿಂತಿಸುತ್ತೀಯೆ; ನೀನು + ಇಂದಿನಲಿ = ಇಂದು ಏನಿದೆಯೋ ಹಾಗೆ; ನಿರ್ಮಲ ಚಿತ್ತದಲಿ = ಸ್ವಾರ್ಥ ಚಿಂತನೆಗಳಿಲ್ಲದ ಶುದ್ಧ

ಭಾವಗಳಿಂದ; ಕಾನನವ = ಕಾಡಿನಲ್ಲಿ; ಸಂಚರಿಸುವೆನು = ಓಡಾಡಿಕೊಂಡಿರುತ್ತೇನೆ; ನಿಮ್ಮೊಡನೆಂದಳಿಂದುಮುಖಿ = ನಿಮ್ಮೊಡನೆ ಎಂದಳು ದಮಯಂತಿ.

ಹೀಗೆ ತನ್ನ ಮನಸ್ಸಿನ ಭಾವನೆಗಳನ್ನು ಹಂಚಿಕೊಳ್ಳುತ್ತ ದಮಯಂತಿಯ ಕಣ್ಣೀರು ಸುರಿಸುತ್ತ, ಮಧ್ಯೆಮಧ್ಯೆ ಬೆರಳುಗಳಿಂದ ಕಂಬನಿಗಳನ್ನು ತೊಡೆದುಕೊಳ್ಳುತ್ತ, ಇದೆಲ್ಲವೂ ಹಿಂದೆ ಮಾಡಿದ ಕರ್ಮಗಳ ಫಲವಷ್ಟೇ. ಇದಕ್ಕೇನೂ ಪರಿಹಾರವಿಲ್ಲ. ನನ್ನ ಕ್ಷೇಮದ ಕುರಿತು ವಿಪರೀತ ಚಿಂತಿಸುವ ಅಗತ್ಯವಿಲ್ಲ. ಇಂದು ನಮ್ಮ ಬದುಕು ಹೇಗಿದೆಯೋ ಹಾಗೆ, ನಿಮ್ಮೊಂದಿಗೆ ಕಾಡಿನಲ್ಲಿ ಸಂಚರಿಸಿಕೊಂಡಿರುತ್ತೇನೆ ಎಂದು ನಿರ್ಮಲವಾದ ಭಾವದಿಂದ ದಮಯಂತಿಯು ನುಡಿದಳು.

12. ಶೋಕವೇಕೆಲೆ ತರುಣಿ ಬಾರೆಂ
ದಾ ಕಮಲಲೋಚನೆಯ ತೋಳಿನೊ
ಳೌಕಿ ಬಿಗಿಯಪ್ಪಿದನು ಸೆರಗಿನೊಳೊರಸಿ ಕಂಬನಿಯ
ಜೋಕೆಯಲಿ ಕುಳ್ಳಿರಿಸಿ ತೊಡೆಯೊಳ
ನೇಕ ಪ್ರೀತಿಯೊಳೆಂದ ನೀನವಿ
ವೇಕಿಯೇ ಬಿಡು ಮನದ ದುಗುಡವನೆಂದನಾ ನೃಪತಿ

ಶೋಕವೇಕೆಲೆ ತರುಣಿ = ದುಃಖಿಸುವ ಅಗತ್ಯವಿಲ್ಲ ಎಲೈ ಹೆಣ್ಣೇ! ಬಾರೆಂದಾ = ಬಾ ಎಂದು; ಆ ಕಮಲಲೋಚನೆಯ = ಕಮಲದಂತೆ ಸುಂದರವಾದ ಕಣ್ಣುಗಳ ದಮಯಂತಿಯನ್ನು ಕರೆದು; ತೋಳಿನೊಳು + ಔಕಿ = ತೋಳಿನಲ್ಲಿ ಸೆಳೆದುಕೊಂಡು ಬಿಗಿಯಪ್ಪಿದನು = ಬಿಗಿದಪ್ಪಿಕೊಂಡನು; ಸೆರಗಿನೊಳೊರೆಸಿ = ಸೀರೆಯ ಅಂಚಿನಿಂದ ಒರೆಸಿ; ಕಂಬನಿಯ = ಕಣ್ಣೀರನ್ನು; ಜೋಕೆಯಲಿ = ಎಚ್ಚರಿಕೆಯಿಂದ; ಕುಳ್ಳಿರಿಸಿ = ಕುಳ್ಳಿರಿಸಿಕೊಂಡು; ತೊಡೆಯೊಳನೇಕ = ತೊಡೆಯಲ್ಲಿ, ಅನೇಕ ರೀತಿಯ; ಪ್ರೀತಿಯೊಳೆಂದ = ಪ್ರೀತಿಯ ಮಾತುಗಳಿಂದ; ನೀನವಿವೇಕಿಯೇ = ನೀನು ವಿವೇಚನೆ ಇಲ್ಲದವಳೇನು?; ಬಿಡು ಮನದ = ಬಿಡು ಮನಸ್ಸಿನಲ್ಲಿರುವ; ದುಗುಡವನೆಂದನಾ = ದುಗುಡವನ್ನು ಎಂದನು; ಆ ನೃಪತಿ = ನಳನು.

ನಳನು ದಮಯಂತಿಯನ್ನು ಸಮಾಧಾನಿಸಲು ಪ್ರಯತ್ನಿಸಿದನು. ಎಲೈ ಹೆಣ್ಣೇ! 'ಇಲ್ಲಿ ಬಾ' ಎಂದು ಆ ಕಮಲಮುಖಿಯನ್ನು ಕರೆದು ತೋಳಿನಲ್ಲಿ ಸೆಳೆದು

ಬಿಗಿದಪ್ಪಿಕೊಂಡು, ಸೀರೆಯ ಅಂಚಿನಿಂದ ಅವಳ ಕಣ್ಣೀರನ್ನು ಒರೆಸಿ, ಅತ್ಯಂತ ಜಾಗ್ರತೆಯಿಂದ ಅವಳನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು, ಅನೇಕ ರೀತಿಯ ಪ್ರೀತಿಯ ಮಾತುಗಳನ್ನಾಡಿ, ನೀನೇನು ಅವಿವೇಕಿಯೇನು ಹೀಗೆ ದುಃಖಿಸಲು? ಚಿಂತೆಯನ್ನು ಬಿಡು ಎಂದು ಅನುನಯಿಸಿದನು.

13. ಎಂದು ಸತಿಯಳ ಸಂತವಿಟ್ಟರ
ವಿಂದನಾಭಧ್ಯಾನದಲಿ ಬರೆ
ಮುಂದೆ ಘೋರಾರಣ್ಯವೆಸೆದುದು ಘನಭಯಂಕರದಿ
ಸಂದ ಖಗಮೃಗವಲ್ಲಿ ನೆರೆದಿರೆ
ಬಂದು ಹೊಕ್ಕರು ಕಾನನವನರ
ವಿಂದಸಖ ಹೊದ್ದಿದನು ಮೆಲ್ಲನೆ ಪಶ್ಚಿಮಾಂಬುಧಿಯ

ಎಂದು ಸತಿಯಳ = ಹೀಗೆ ಹೆಂಡತಿಯನ್ನು; ಸಂತವಿಟ್ಟು + ಅರವಿಂದ ನಾಭ + ಧ್ಯಾನದಲಿ = ಸಮಾಧಾನಿಸಿ ಅರವಿಂದನಾಭನಾದ ವಿಷ್ಣುವಿನ ಧ್ಯಾನದಲ್ಲಿ; ಬರೆ ಮುಂದೆ = ಹಾಗೆಯೇ ಕಾಡಿನಲ್ಲಿ ಮುಂದುವರೆಯಲು ಘೋರ + ಅರಣ್ಯವು + ಎಸೆದುದು = ಘೋರಾರಣ್ಯವೇ ಕಣ್ಣ ಮುಂದಿತ್ತು; ಘನಭಯಂಕರದಿ = ಮಹಾ ಭಯಂಕರವಾಗಿ; ಸಂದ ಖಗಮೃಗದವಲ್ಲಿ = ಕ್ರೂರ ಮೃಗಗಳು ಅಲ್ಲಿ ತುಂಬಿರಲು; ಬಂದು ಹೊಕ್ಕರು = ಅಂತಹ ಅರಣ್ಯಭಾಗವನ್ನು ಪ್ರವೇಶಿಸಿದರು; ಕಾನನವನು + ಅರವಿಂದ ಸಖ = ಆ ದುರ್ಗಮವಾದ ಕಾಡನ್ನು; ಆ ವೇಳೆಗೆ ಕಮಲದ ಪ್ರಿಯ ಮಿತ್ರನಾದ ಸೂರ್ಯನು; ಹೊದ್ದಿದನು = ಸಮೀಪಿಸಿದನು; ಮೆಲ್ಲನೆ = ನಿಧಾನವಾಗಿ; ಪಶ್ಚಿಮಾಂಬುಧಿಯ = ಪಶ್ಚಿಮ ದಿಕ್ಕಿನ ಸಮುದ್ರವನ್ನು.

ಹೀಗೆ ತನ್ನ ಹೆಂಡತಿಯನ್ನು ಸಮಾಧಾನಿಸಿದ ನಂತರ, ವಿಷ್ಣುಧ್ಯಾನ ದಲ್ಲಿಯೇ ಸತಿಪತಿಯರು ಆ ದುರ್ಗಮವಾದ ಕಾಡಿನಲ್ಲಿ ಮುಂದುವರಿಯಲು, ಮುಂದೆ ಅತ್ಯಂತ ಭಯಂಕರವಾದ ಕ್ರೂರ ಮೃಗ ಪಕ್ಷಿಗಳ ಸಮೂಹದಿಂದ ತುಂಬಿದ ಮಹಾಘನಘೋರವಾದ ಕಾಡು ಕಂಡು ಬಂದಿತು. ಅದರೊಳಗೆ

ಪ್ರವೇಶಿಸುವ ವೇಳೆಗೆ ಸೂರ್ಯನು ಪಶ್ಚಿಮ ಸಮುದ್ರವನ್ನು ಸಮೀಪಿಸಿದನು. ಇರುಳು ಆವರಿಸ ಲಾರಂ ಭಿಸಿತು.

14. ಲೋಕಕಧಿಪತಿ ನಳನ ರಾಣಿಗೆ
ಶೋಕ ಪರ್ಬಿದ ತೆರದಿ ಕತ್ತಲೆ
ಲೋಕವನು ಮುಸುಕಿದುದು ಭರಣಿಯ ಮುಚ್ಚುವಂದದಲಿ
ಭೀಕರಧ್ವನಿಗಳಿಗೆ ಹೆದರಿದ
ಳಾ ಕಮಲಲೋಚನೆಯ ಕಂಡು ವಿ
ವೇಕನಿಧಿ ಸಂತಯಿಸಿ ಬಿಗಿಯಪ್ಪಿದನು ತೂಪಿರಿದು

ಲೋಕಕೆ + ಅಧಿಪತಿ = ಲೋಕಾಧಿಪತಿಯಾದ ನಳಮಹಾರಾಜನ; ರಾಣಿಗೆ = ರಾಣಿ ದಮಯಂತಿಗೆ; ಶೋಕ = ದುಃಖವು; ಪರ್ಬಿದ ತೆರದಿ = ಹೆಚ್ಚಾದಂತೆ; ಕತ್ತಲೆ = ಕತ್ತಲೆಯು; ಲೋಕವನ್ನು = ಜಗತ್ತನ್ನು; ಮುಸುಕಿದುದು = ಆವರಿಸಿಕೊಂಡಿತು; ಭರಣಿಯ ಮುಚ್ಚುವಂದದಲಿ = ಭರಣಿಯನ್ನು ಮುಚ್ಚಿದಂತೆ; ಭೀಕರ ಧ್ವನಿಗಳಿಗೆ = ಕಾಡಿನ ವಿವಿಧ ಜೀವ ಸಂಕುಲಗಳು ಮಾಡುವ ಭಯಂಕರ ಧ್ವನಿಗಳಿಗೆ; ಹೆದರಿದಳಾ = ಹೆದರಿದಳು; ಆ ಕಮಲಲೋಚನೆಯ = ಆ ಸುಂದರ ಕಣ್ಗಳ ಒಡತಿ, ದಮಯಂತಿಯನ್ನು; ಕಂಡು = ನೋಡಿ; ವಿವೇಕನಿಧಿ = ವಿವೇಕಶಾಲಿಯಾದ ನಳನು; ಸಂತಯಿಸಿ = ಸಮಾಧಾನ ಪಡಿಸಿ; ಬಿಗಿದಪ್ಪಿದನು = ಬಿಗಿಯಾಗಿ ತಬ್ಬಿ ಹಿಡಿದನು; ತೂಪಿರಿದು = ದೃಷ್ಟಿತೆಗೆದು.

ಲೋಕಾಧಿಪತಿಯಾದ ನಳನ ರಾಣಿ ದಮಯಂತಿಗೆ ದುಃಖವು ಹೆಚ್ಚು ಹೆಚ್ಚಾಗಿ ಆವರಿಸಿಕೊಂಡಂತೆ, ಭರಣಿಯನ್ನು ಮುಚ್ಚಿದಾಗ ಒಳಗೆ ಕತ್ತಲಾಗುವಂತೆ, ಕಾಡಿನ ಭೂಮಿಯನ್ನು ಕತ್ತಲು ಆವರಿಸಿಕೊಂಡಿತು. ಕತ್ತಲಾದಂತೆಲ್ಲ ಕಾಡಿನಲ್ಲಿ ವಿವಿಧ ಮೃಗ ಪಕ್ಷಿಯಾದಿಯಾಗಿ ಜೀವಜಂತುಗಳು ಹೊರಡಿಸುತ್ತಿದ್ದ ಭೀಕರ ಧ್ವನಿಗಳು ಕಾಡಿನ ನೀರವತೆಯನ್ನು ಭಯಂಕರವಾಗಿ ಹೆಚ್ಚಿಸಿ ದಮಯಂತಿಯು ಹೆದರಿದಳು. ನಳಮಹಾರಾಜನು ಆ ಸುಂದರ ನಯನಗಳ ಒಡತಿಯಾದ ತನ್ನ ಪತ್ನಿಯನ್ನು ಕಂಡು ಬಿಗಿಯಾಗಿ ತಬ್ಬಿಹಿಡಿದು ಸಮಾಧಾನಿಸಿ, ದೃಷ್ಟಿ ನಿವಾರಣೆಯನ್ನು ಮಾಡಿದನು.

15. ತರುಣಿಯಂಜದಿರಂಜದಿರು ವಿಧಿ
ಬರೆದ ಬರೆಹವಿದೆನುತ ವೃಕ್ಷದ
ತರಗೆಲೆಯ ಹಾಸಿನಲಿ ಮಲಗಿಸಿ ಸತಿಯನೀಕ್ಷಿಸುತ
ವರರತುನಮಂಚದಲಿ ಪವಡಿಸಿ
ಪರಮಸುಖವಿಹ ಸತಿಗೆ ವಿಧಿಯಿದು
ಹರಹರಾಯೆನುತರಸ ಕಂಬನಿದುಂಬಿದನು ಮರುಗಿ

ತರುಣಿ + ಅಂಜದಿರು + ಅಂಜದಿರು = ತರುಣಿ, ಭಯಪಡಬೇಡ, ಭಯಪಡದಿರು; ವಿಧಿ ಬರೆದ = ವಿಧಿಯು ಬರೆದ; ಬರೆಹವಿದು + ಎನುತ = ಹಣೆಬರಹ ಇದು ಎನ್ನುತ್ತ; ವೃಕ್ಷದ = ಮರದ; ತರಗೆಲೆಯ = ಒಣಗಿದೆಲೆಗಳ; ಹಾಸಿನಲಿ ಮಲಗಿಸಿ = ಹಾಸುಗೆಯಲ್ಲಿ ಮಲಗಿಸಿ; ಸತಿಯನೀಕ್ಷಿಸುತ್ತ = ಹೆಂಡತಿಯನ್ನೇ ನೋಡುತ್ತ; ವರವತುನ ಮಂಚದಲಿ = ಶ್ರೇಷ್ಠವಾದ ರತ್ನಖಚಿತ ಮಂಚದಲ್ಲಿ; ಪವಡಿಸಿ = ಮಲಗಿ; ಪರಮಸುಖವಿಹ = ಪರಮಸುಖದಲ್ಲಿದ್ದ; ಸತಿಗೆ = ಹೆಣ್ಣು ಮಗಳಿಗೆ; ವಿಧಿಯಿದು = ಇದೇನು ಹಣೆಬರಹ; ಹರಹರಾ + ಎನುತ + ಅರಸ = ಹರಹರಾ ಎಂದು ಉದ್ಗರಿಸಿದ ಅರಸನು; ಕಂಬನಿದುಂಬಿದನು = ದುಃಖದಿಂದ ಕಣ್ತುಂಬಿದನು; ಮರುಗಿ = ಅವಳಿಗಾಗಿ ವ್ಯಥಿತನಾಗಿ.

ಕಾಡಿನ ಭೀಕರತೆಗೆ ಅಂಜಿದ ಮಡದಿಯನ್ನು ನಳಮಹಾರಾಜನು 'ಹೆಣ್ಣೇ ಅಂಜದಿರು ಅಂಜದಿರು' ಎಂದು ಸಮಾಧಾನಿಸಿ, ವಿಧಿ ಬರೆದ ಹಣೆ ಬರಹವಿದು ಎಂದು ಧೈರ್ಯತುಂಬಿ, ಅವಳನ್ನು ಅಲ್ಲಿಯೇ ಒಣಗಿ ತುಂಬಿಹೋಗಿದ್ದ ತರಗೆಲೆಗಳ ಹಾಸಿನಲ್ಲಿ ಮಲಗಿಸಿದನು. ನಂತರ ಅವಳನ್ನೇ ನೋಡುತ್ತಿದ್ದ ನಳನಿಗೆ, ಅರಮನೆಯ ಅನರ್ಘ್ಯರತ್ನಖಚಿತ ತೂಗುಮಂಚದಲ್ಲಿ ಮಲಗಿ ಪರಮಸುಖದಲ್ಲಿದ್ದ ಅವಳು ಹೀಗೆ ಕಾಡುಪಾಲಾಗಿ ತರಗೆಲೆಗಳ ಮೇಲೆ ಮಲಗುವಂತಾಯಿತೇ ಎಂಬ ದುಃಖವಾವರಿಸಿ, ಕಣ್ಣೀರು ತುಂಬಿಕೊಂಡು ಅವಳಿಗಾಗಿ ಮರುಗಿದನು.

16. ಎಲ್ಲರೋಪಾದಿಯ ಪತಿವ್ರತೆ
ಯಲ್ಲವೀ ದಮಯಂತಿ ಬಿಡುವವ
ಳಲ್ಲ ತನ್ನನು ತರುಣಿ ಕಾಣದ ಕಡೆಗೆ ತೆರಳಿದರೆ

ಅಲ್ಲಿ ತಂದೆಯ ಮನೆಗೆ ಹೋಗುವ
ಳಿಲ್ಲಿ ತಾನಿರೆ ಬಿಡಳೆನುತ ಮನ
ದಲ್ಲಿ ಯೋಚಿಸಿ ನಿದ್ರೆಗೈಸಿದನಾ ಮಹಾಸತಿಯ

ಎಲ್ಲರ + ಓಪಾದಿಯ = ಎಲ್ಲರ ಹಾಗೆ ಸಾಮಾನ್ಯಳಲ್ಲದವಳಾದ; ಪತಿವ್ರತೆ ಯಲ್ಲವೀ = ಪತಿವ್ರತೆಯಲ್ಲ ಈ, ದಮಯಂತಿ; ಬಿಡುವವಳಲ್ಲ ತನ್ನನು = ತನ್ನನ್ನು ಅಗಲಿ ಇರುವಂಥವಳಲ್ಲ; ತರುಣಿ = ಈ ಹೆಣ್ಣು; ಕಾಣದ ಕಡೆಗೆ ತೆರಳಿದರೆ = ಅವಳಿಗೆ ಕಾಣದಂತಹ ಸ್ಥಳಕ್ಕೆ ಹೋದೆನಾದರೆ; ಅಲ್ಲಿ = ಅಲ್ಲಿ; ತಂದೆಯ ಮನೆಗೆ = ತನ್ನ ತಂದೆಯ ಮನೆಗೆ; ಹೋಗುವಳಿಲ್ಲಿ = ಹೋಗುತ್ತಾಳೆ. ಇಲ್ಲಿ; ತಾನಿರೆ = ತಾನಿದ್ದರೆ; ಬಿಡಳೆನುತ = ತನ್ನನ್ನು ಬಿಟ್ಟು ಹೋಗುವವಳಲ್ಲ ಎನ್ನುತ್ತ; ಮನದಲ್ಲಿ ಯೋಚಿಸಿ = ಮನಸ್ಸಿನಲ್ಲಿಯೇ ಚಿಂತಿಸಿ; ನಿದ್ರೈಸಿದನು = ನಿದ್ದೆ ಮಾಡಿಸಿದನು; ಆ ಸತಿಯ = ದಮಯಂತಿಯನು.

ನಳನು ತನ್ನ ಹೆಂಡತಿಯ ವಿಶೇಷ ಗುಣವನ್ನು ಮೆಚ್ಚುಗೆಯಿಂದ ನೆನಪಿಸಿ ಕೊಳ್ಳುತ್ತ "ನನ್ನ ದಮಯಂತಿಯು ಎಲ್ಲ ಸಾಮಾನ್ಯ ಪತಿವ್ರತಾ ಸ್ತ್ರೀಯರ ಹಾಗಲ್ಲ. ಇವಳು ಎಂತಹ ಪರಿಸ್ಥಿತಿಯಲ್ಲಿಯೂ ನನ್ನನ್ನು ಮಾತ್ರ ಅಗಲಿ ಇರುವಂಥವಳಲ್ಲ. ನಾನು ಅವಳ ಕಣ್ಣಿಗೆ ಬೀಳದಿರುವಂತಹ ಸ್ಥಳಕ್ಕೆ ಹೋದೆನಾದರೆ ಮಾತ್ರ ಇವಳು ಬೇರೆ ದಾರಿ ಕಾಣದೆ ತಂದೆಯ ಮನೆಗೆ ಹೋಗುತ್ತಾಳೆ. ತಾನಿಲ್ಲಿಯೇ ಇದ್ದರೆ ತನ್ನನ್ನು ಬಿಟ್ಟಿರುವವಳಲ್ಲ" ಎಂದು ಮುಂದೆ ಮಾಡಬೇಕಾದದ್ದೇನು ಎಂದು ಯೋಚಿ ಸಲಾರಂಭಿಸುತ್ತ ಅವಳನ್ನು ನಿದ್ದೆ ಮಾಡಿಸಿದನು.

17. ಮರೆದು ಮಲಗಿದಳವಳ ಮಗ್ಗುಲ
ಸೆರಗ ಮೆಲ್ಲನೆ ಜಾರಿಸುತಲಾ
ಗರಸ ವಸನವ ಕೊಂಡು ಮಲಗಿದ ಸತಿಯನೀಕ್ಷಿಸುತ
ಮರುಗಿದನು ಮನದೊಳಗೆ ಹರಿಹರಿ
ವರ ಜಗತ್ಪತಿ ಅಡವಿಯಲಿ ಎ
ಚ್ಚರಿಸದೇ ತಾನೆಂದು ಪೋಗುವೆನೆನುತ ಬಿಸುಸುಯ್ದು

ಮರೆದು = ಮೈಮರೆತು; ಮಲಗಿದಳು + ಅವಳ = ಮಲಗಿದ್ದಳು ಅವಳ; ಮಗ್ಗುಲ = ಪಕ್ಕದಲ್ಲಿದ್ದ ಸೆರಗ = ಒಂದು ಬದಿಯ ಸೆರಗನ್ನು; ಮೆಲ್ಲನೆ = ಅವಳಿಗೆ ತಿಳಿಯದಂತೆ ಮೃದುವಾಗಿ; ಜಾರಿಸುತಲಿ + ಆಗ + ಅರಸ = ಹರಿದು ಬಿಡಿಸುತ್ತ; ಅರಸನು ವಸನವಕೊಂಡು = ಆ ತುಂಡು ಬಟ್ಟೆಯನ್ನು ತೆಗೆದುಕೊಂಡು; ಮಲಗಿದ = ನಿದ್ರಿಸುತ್ತಿದ್ದ; ಸತಿಯನೀಕ್ಷಿಸುತ = ಮಡದಿಯನ್ನೇ ನೋಡುತ್ತ; ಮರುಗಿದನು = ದುಃಖಿತನಾದನು; ಮನದೊಳಗೆ = ಮನಸ್ಸಿನೊಳಗೆ; ಹರಿಹರಿ = 'ಹರಿಹರಿ' ಎಂದು ಉದ್ಗರಿಸುತ್ತ; ವರ ಜಗತ್ಪತಿ = ಜಗದೀಶನೇ ಎಂದುದೇವರನ್ನು ನೆನೆಯುತ್ತ; ಅಡವಿಯಲಿ = ಕಾಡಿನಲ್ಲಿ; ಎಚ್ಚರಿಸದೇ = ಅವಳನ್ನು ಎಚ್ಚರಗೊಳಿಸದೇ; ತಾನೆಂದು = ತಾನು ಹೇಗೆ; ಪೋಗುವೆನೆನುತ = ಹೋಗುವುದು ಎಂದು ಚಿಂತಿಸುತ್ತ; ಬಿಸುಸುಯ್ದು = ನಿಟ್ಟುಸಿರಾದನು.

ಹಾಗೆಯೇ ಯೋಚಿಸುತ್ತ ನಳನು, ಮೈಮರೆತು ಆಯಾಸದಿಂದ ನಿದ್ರಿಸುತ್ತಿದ್ದ ದಮಯಂತಿಯ ಪಕ್ಕದಲ್ಲಿದ್ದ ಸೀರೆಯ ತುದಿ ಸೆರಗನ್ನು ಅವಳಿಗೆ ಎಚ್ಚರವಾಗದಂತೆ ಮೃದುವಾಗಿ ಪಕ್ಕಕ್ಕೆ ಸರಿಸಿ ಬಿಡಿಸಿಕೊಂಡು, ಅವಳನ್ನು ಬಿಟ್ಟಿರಲಾಗದೆ ಬಿಟ್ಟು ಹೋಗುತ್ತ, ಈ ಅಡವಿಯಲ್ಲಿ ಒಬ್ಬಳನ್ನೇ ಬಿಟ್ಟು, ಅವಳನ್ನು ಎಚ್ಚರಗೊಳಿಸದೆ ಹೇಗೆ ಹೋಗುವೆನೋ 'ಹರಿಹರೀ' ಎಂದು ಹಲುಬುತ್ತ ನಿಟ್ಟುಸಿರಾದನು.

18. ಮಡದಿಯಗಲಿದ ಬಳಿಕ ಹತ್ತೆಂ
ಟಡಿಯ ದಾಂಟುವ ಮರಳಿ ನಿಜಸತಿ
ಯೆಡೆಗೆ ತಿರುಗುವ ಚಂದ್ರಬಿಂಬಾನನೆಯನೀಕ್ಷಿಸುವ
ಅಡಸಿ ಬರೆ ದುಃಖದಲಿ ಮೆಲ್ಲಡಿ
ಯಿಡುವ ಸತಿಯನು ನೋಡಿ ಮನದು
ಗ್ಗಡದ ಶೋಕದಿ ನಡೆದ ನಳನೃಪನೊಂದು ಯೋಜನವ

ಮಡದಿಯಗಲಿದ = ಮಡದಿಯನ್ನು ಬಿಟ್ಟು ಬಂದ; ಬಳಿಕ = ಅನಂತರ; ಹತ್ತೆಂಟಡಿಯ = ಹಲವು ಹತ್ತು ಹೆಜ್ಜೆಗಳನ್ನು; ದಾಂಟುವ = ದಾಟಿ ಹೋಗುವನು; ಮರಳಿ = ಮತ್ತೆ ಮತ್ತೆ ತಿರುಗಿ; ನಿಜಸತಿಯೆಡೆಗೆ = ತನ್ನ ಹೆಂಡತಿಯತ್ತ; ತಿರುಗುವ

= ತಿರುಗಿ ನೋಡುವನು; ಚಂದ್ರಬಿಂಬ + ಆನನೆಯನ್ + ಈಕ್ಷಿಸುವ = ಚಂದ್ರಬಿಂಬದಂತೆ ಕಳಾಯುಕ್ತವಾದ ಮುಖವನ್ನು ನೋಡುವನು; ಅಡಸಿಬರೆ = ಉಕ್ಕಿಬರುತ್ತಿದ್ದ; ದುಃಖದಲಿ = ದುಃಖದಿಂದ; ಮೆಲ್ಲಡಿಯಿಡುವ = ನಿಧಾನವಾಗಿ ಹಿಂದಿರುಗಿ ಹೋಗುವವನು; ಸತಿಯನು ನೋಡಿ = ಹೆಂಡತಿಯನ್ನು ಮತ್ತೆ ಮತ್ತೆ ನೋಡುತ್ತ; ಮನದ + ಉಗ್ಗಡದ = ಮನಸ್ಸಿನಲ್ಲಿ ಉದ್ವೇಗದಿಂದ ಉಕ್ಕೇರುವ; ಶೋಕದಿ ನಡೆದ=ದುಃಖದಿಂದ ಮುಂದೆ ನಡೆಯುತ್ತ ಹೋದನು; ನಳನೃಪ ನೊಂದು = ನಳನೃಪನು + ಒಂದು; ಯೋಜನವ = ಯೋಜನದಷ್ಟು ದೂರವನ್ನು.

ಮಡದಿಯನ್ನು ನಡುಗಾಡಿನಲ್ಲಿ ಬಿಡಲಾರದೆ ಬಿಟ್ಟುಬಂದ ನಳನೃಪನ ಸ್ಥಿತಿ ಕರುಣಾಜನಕವಾಗಿತ್ತು. ಅವಳನ್ನು ಬಿಟ್ಟರೂ ಅಷ್ಟುದೂರ ನಡೆದು ಹಿಂದಿರುಗಿ ನೋಡುವನು, ಹತ್ತು ಹೆಜ್ಜೆ ದಾಟುವಷ್ಟರಲ್ಲಿ ಮುಂದುವರಿಯಲಾಗದೆ ಅವಳ ಚಂದ್ರಬಿಂಬ ಸಮಾನವಾದ ಕಳಾಯುಕ್ತ ಸುಂದರ ಮುಖವನ್ನು ನೋಡುವನು, ತನ್ನ ಮತ್ತು ಅವಳ ಸ್ಥಿತಿ ಅವನನ್ನು ಅತೀವವಾಗಿ ಕಾಡಲು ದುಃಖವುಕ್ಕಿ ಬಂದು ಹೋಗಲೋ ಬೇಡವೋ ಎಂಬಂತೆ ಮೆಲ್ಲಡಿಯಿಟ್ಟು ಮುಂದುವರಿಯುವನು, ಮತ್ತೆ ಮನಸ್ಸಿನಲ್ಲಿ ಉಕ್ಕಿಬರುವ ಉದ್ವೇಗದಿಂದ ದುಃಖಿಸುತ್ತ ಮುಂದೆ ಮುಂದೆ ಹೋಗು ವನು. ಹೀಗೆ ನಳನೃಪನು ತೀರದ ದುಃಖದಿಂದಲೇ ಸುಮಾರು ಒಂದು ಯೋಜನ ದಷ್ಟು ದೂರವನ್ನು ಕ್ರಮಿಸಿದನು.

19. ಮರುಗುವುದು ಮನವೊಮ್ಮೆ ಕಂಗಳು
ಮರಳಿ ನೋಡುವುದೊಮ್ಮೆ ಸತಿಯಳ
ಯಿರವ ಕಾಣದೆ ಕಳವಳಕೆ ಬೀಡಾದುದಾ ಹೃದಯ
ಕರಗಿತರಸನ ಧೈರ್ಯ ಚಿತ್ತದಿ
ಮುರಿದುದಗ್ಗದ ಮಹಿಮೆ ಶೋಕದ
ಹೊರಿಗೆಯಲಿ ಕಾತರಿಸಿ ನಡೆದನು ನೃಪತಿ ಕೇಳೆಂದ

ಮರುಗುವುದು = ದುಃಖಿಸುವುದು; ಮನವೊಮ್ಮೆ = ಮನಸ್ಸು ಒಮ್ಮೆ; ಕಂಗಳು = ಕಣ್ಣುಗಳು; ಮರಳಿ = ಹಿಂದಿರುಗಿ; ನೋಡುವುದೊಮ್ಮೆ = ಒಮ್ಮೆ ನೋಡುವುದು; ಸತಿಯಳಯಿರವ = ಹೆಂಡತಿಯು ಅಲ್ಲಿರುವುದನ್ನು; ಕಾಣದೆ

ಹೋಗಲಾಗಿ; ಕಳವಳಿಕೆ = ಮನಸ್ಸಿನ ತುಮುಲಕ್ಕೆ; ಬೀಡಾದುದು ಹೃದಯ = ಮನೆಯಾಗುತ್ತಿತ್ತು ಮನಸ್ಸು, ಕರಗಿತರಸನ ಧೈರ್ಯ = ಮಹಾಶೂರನೂ ಧೈರ್ಯ ಶಾಲಿಯೂ ಆದ ಅರಸನ ಮನೋಬಲವೆಲ್ಲ ಕರಗಿಹೋಯಿತು; ಚಿತ್ತದಿ = ಮನಸ್ಸಿನಲ್ಲಿ; ಮುರಿದುದಗ್ಗದ ಮಹಿಮೆ = ಮುರಿದು ಹೋಯಿತು ತಾನು ಶ್ರೇಷ್ಠನೆಂಬ ಮಹಿಮೆ; ಶೋಕದ = ದುಃಖದ; ಹೊರಿಗೆಯಲಿ = ಭಾರದಿಂದ; ಕಾತರಿಸಿ = ಮುಂದೇನೋ ಎಂಬ ಕಾತರದಿಂದ; ನಡೆದನು ನೃಪತಿ ಕೇಳೆಂದ = ನಳನೃಪನು ಹಾಗೇ ಮುಂದು ಮುಂದಕ್ಕೆ ನಡೆದನು ಕೇಳು ಧರ್ಮರಾಯನೇ ಎಂದನು ಮುನಿ.

ಕೇಳು ಧರ್ಮರಾಯನೇ ಹೀಗೆಯೇ ನಳನೃಪನು ಮತ್ತೆ ಮತ್ತೆ ಹಿಂದಿರುಗಿ ಮಡದಿಯನ್ನು ನೋಡುತ್ತ ಮನದೊಳಗೆ ಭರಿಸಲಾರದ ದುಃಖದಿಂದ ಮರುಗುತ್ತ, ಮಗದೊಮ್ಮೆ ಹಿಂದಿರುಗಿ ನೋಡುವಾಗ ದುಃಖತೀವ್ರತೆಯಲ್ಲಿ ತುಂಬಿದ ಕಣ್ಣಳಿಗೆ ಮಡದಿಯು ಕಾಣದಿರಲು ಕಾಣುವ ಹಂಬಲದಿಂದ ಕಾತರಿಸುತ್ತ ಹೊರಟ ನಳ ಮಹಾರಾಜನ ಮನಸ್ಥೈರ್ಯವೂ, ತಾನು ಮಹಾಬಲನೆಂಬ ಔನ್ನತ್ಯದ ಗರ್ವವೂ ಸೋರಿಹೋಯಿತು. ಹೀಗೇ ನಳನು ಮುಂದುವರಿದನು ಎಂದು ರೋಮಶ ಮುನಿಯು ಮತ್ತೆ ಮುಂದುವರಿದು ಹೇಳಿದನು.

20. ಕರುಣೆದೋರದೆ ನೃಪತಿ ಸತಿಯಳ
ತೊರೆದು ಬಿಸುಟನು ವನದೊಳಗೆ ಹುಲಿ
ಕರಡಿ ಮೃಗದುಪಟಳವ ತಾನಿನ್ನೆಂತು ಸೈರಿಪಳೊ
ಮೊರೆಯ ಲಾಲಿಸಿ ನೋಳ್ಪೆನೆಂದುರು
ತರದ ಪ್ರೇಮದಿ ಬಂದು ಸತಿಗೆ
ಚ್ಚರಿಸುವಂದದಿ ತರುಣಿ ತಲೆದೋರಿದನು ಪೂರ್ವದಲಿ

ಕರುಣೆದೋರದೆ = ಇಷ್ಟೆಲ್ಲಾ ದುಃಖದಲ್ಲಿ ಮುಳುಗಿದ್ದರೂ ನಳನೃಪನು ಕಿಂಚಿತ್ತೂ ಕರುಣೆ ತೋರಿಸದೆ; ಸತಿಯಳ ತೊರೆದು = ಮಡದಿಯನ್ನು ತ್ಯಜಿಸಿ; ಬಿಸುಟನು ವನದೊಳಗೆ = ಕಾಡಿನಲ್ಲೇ ಬಿಟ್ಟು ಹೊರಟನು; ಹುಲಿ ಕರಡಿ ಮೃಗದುಪಟಳವ = ಹುಲಿ ಕರಡಿ ಮೊದಲಾದ ಕ್ರೂರ ಮೃಗಗಳ ಕಾಟವನ್ನು;

ತಾನು + ಇನ್ನು + ಎಂತು = ತಾನು ಇನ್ನು ಹೇಗೆ; ಸೈರಿಪಳೋ = ಎದುರಿಸುತ್ತಾಳೋ; ಮೊರೆಯ ಲಾಲಿಸಿ = ಅವಳ ಅಳಲಿನ ಮೊರೆಯನ್ನು = ಪ್ರೀತಿಯಿಂದ ಕೇಳಿ; ನೋಳ್ಪೆನೆಂದು + ಉರುತರದ = ನೋಡುವೆನೆಂದು ಅಸಾಮಾನ್ಯವಾದ; ಪ್ರೇಮದಿ = ಪ್ರೀತಿಯಿಂದ; ಬಂದು = ಬಂದು; ಸತಿಗೆ ಚ್ಚರಿಸುವಂದದಿ = ದಮಯಂತಿಯನ್ನು ಎಚ್ಚರಗೊಳಿಸುವ ರೀತಿಯಲ್ಲಿ; ತರಣಿ = ಸೂರ್ಯನು; ತಲೆದೋರಿದನು = ಮೂಡಿದನು; ಪೂರ್ವದಲಿ = ಮೂಡಣ ದಿಕ್ಕಿನಲ್ಲಿ.

ಮನೋವ್ಯಥೆ ಏನೇ ಇರಲಿ, ನಳನೃಪನು ಕಂಚಿತ್ತೂ ಕರುಣೆಯಿಲ್ಲದೆ ಮಡದಿಯನ್ನು ಕಾಡಿನಲ್ಲಿ ಏಕಾಂಗಿಯಾಗಿ ಬಿಟ್ಟು ಹೊರಟು ಹೋದನು. ಇತ್ತ ಹುಲಿ, ಕರಡಿ ಮೊದಲಾದ ಕ್ರೂರಮೃಗಗಳ ಕಾಟವನ್ನು ಈ ಹೆಣ್ಣು ಹೇಗೆ ಸೈರಿಸುತ್ತಾಳೋ ಎಂದೂ, ಯಾರಾದರೂ ಕಾಪಾಡಲಿ ಎಂದು ಮೊರೆಯಿಡುವ ಅವಳ ದನಿಯನ್ನು ಕೇಳಿ ಅತಿಶಯವಾದ ಪ್ರೀತಿಯಿಂದ ಅವಳನ್ನೆಚ್ಚರಿಸಲು ಲಗುಬಗೆಯಿಂದ ಬರುತ್ತಿ ರುವನೋ ಎಂದೂ ಅನ್ನಿಸುವಂತೆ ಸೂರ್ಯನು ಮೂಡಣ ದಿಕ್ಕಿನಲ್ಲಿ ಮೂಡಿ ಬಂದನು.

21. ನಳಿನಮುಖಿ ಮೈಮುರಿದು ನಿದ್ರೆಯ
ತಿಳಿದು ಮೆಲ್ಲನೆ ನೋಡಿದಳು ಎಡ
ಬಲವನೀಕ್ಷಿಸಿ ಪತಿಯ ಕಾಣದೆ ಬಲಿದ ಮೂರ್ಛೆಯಲಿ
ಮಲಗಿದಳು ಮೈಮರೆದು ನಿಮಿಷಕೆ
ತಿಳಿದು ಕಾಣದೆ ಕಾತರದಿ ಹಂ
ಬಲಿಸಿ ಹಲುಬಿದಳಲ್ಲಿ ಗಿರಿತರುನಿಕರಮಧ್ಯದಲಿ

ನಳಿನಮುಖಿ = ಕಮಲದಂತೆ ನಳನಳಿಸುವ ಸೌಂದರ್ಯದ ಚೆಲುವೆ ದಮಯಂತಿಯು; ಮೈಮುರಿದು = ಆಯಾಸದಿಂದ ಮೈಮುರಿಯುತ್ತ; ನಿದ್ರೆಯ ತಿಳಿದು = ನಿದ್ರೆಯಿಂದ ಎಚ್ಚರಗೊಂಡು; ಮೆಲ್ಲನೆ ನೋಡಿದಳು = ನಿಧಾನವಾಗಿ ಕಣ್ತೆರೆದು ನೋಡಿದಳು; ಎಡಬಲವನೀಕ್ಷಿಸಿ = ಅಕ್ಕಪಕ್ಕದಲ್ಲೆಲ್ಲ ತಿರುಗಿ ನೋಡಿ; ಪತಿಯ ಕಾಣದೆ = ಪತಿಯಾದ ನಳನನ್ನು ಕಾಣದೆ; ಬಲಿದ ಮೂರ್ಛೆಯಲಿ = ಆಳವಾಗಿ ಮೂರ್ಛೆಹೋಗಿ; ಮಲಗಿದಳು = ಅಲ್ಲಿಯೇ ಒರಗಿದಳು; ಮೈಮರೆದು

= ಎಚ್ಚರವಿಲ್ಲದೆ; ನಿಮಿಷಕೆ ತಿಳಿದು = ಮತ್ತೊಂದು ನಿಮಿಷದಲ್ಲಿ ಎಚ್ಚರಗೊಂಡು; ಕಾಣದೆ = ಪತಿಯು ಕಾಣದಿರಲು; ಕಾತುರದಿ = ಕಳವಳದಿಂದ; ಅವನನ್ನು ಕಾಣುವ ಮನದಿಂದ; ಹಂಬಲಿಸಿ = ಅವನನ್ನೇ ಕಾಣಲಿಚ್ಚಿಸಿ; ಹಲುಬಿದಳಲ್ಲಿ = ಒಂದೇ ಸಮನೆ ದುಃಖಿಸಲಾರಂಭಿಸಿದಳು; ಗಿರಿತರುನಿಕರ ಮಧ್ಯದಲಿ = ಬೆಟ್ಟಗಳು, ವೃಕ್ಷಗಳು ಅಪಾರವಾಗಿ ತುಂಬಿಹೋಗಿದ್ದ ಆ ದುರ್ಗಮವಾದ ಕಾಡಿನ ನಡುವೆ.

ನಿಧಾನವಾಗಿ ದಮಯಂತಿಯು ಗಾಢನಿದ್ರೆಯಿಂದ ಎಚ್ಚರಗೊಂಡಳು, ಆಯಾಸದಿಂದ ಮೈಮುರಿಯುತ್ತ ನಿಧಾನವಾಗಿ ಕಣ್ತೆರೆದು ಅಕ್ಕಪಕ್ಕದಲ್ಲೆಲ್ಲ ತಿರುಗಿ ನೋಡಿದಳು, ತಾನಿರುವ ಸ್ಥಳದ ಅರಿವು ಮೂಡುತ್ತಿದ್ದಂತೆ ನಳನಿಗಾಗಿ ಅರಸಿದಳು. ಅವನು ಅಲ್ಲೆಲ್ಲಿಯೂ ಕಾಣದುದರಿಂದ ದಿಗಿಲಿನಿಂದ ಮೂರ್ಛೆಹೋದಳು. ಕೆಲಸಮಯದ ಅನಂತರ ಎಚ್ಚರಗೊಂಡು ನಳನನ್ನು ಕಾಣದೆ ಕಳವಳಗೊಂಡು, ಅವನನ್ನು ಕಾಣುವ ಹಂಬಲದಿಂದ ಬಹುವಾಗಿ ಹಲುಬಲಾರಂಭಿಸಿದಳು. ದುಃಖಿಸುತ್ತ ಗಿರಿತರುಗಳಿಂದ ತುಂಬಿದ ದುರ್ಗಮವಾದ ಕಾಡಿನ ನಡುವೆ ಭಯದಿಂದ ತತ್ತರಿಸಿ ಹೋದಳು.

22. ಹಾ ರಮಣ ನಳನೃಪತಿ ಹಾ ರಣ
ಧೀರ ಸದ್ಗುಣಹಾರ ರಿಪುಸಂ
ಹಾರ ನಿತ್ಯೋದಾರ ನಿರ್ಮಳಸತ್ಯಸಂಚಾರ
ಘೋರಕಾನನದೊಳಗೆ ನಂಬಿದ
ನಾರಿಯನು ಬಿಸುಡುವರೆ ತನಗಿ
ನ್ನಾರು ಗತಿ ಮುಖದೋರೆನುತ ಹಲುಬಿದಳು ದಮಯಂತಿ

ಹಾ ರಮಣ = ಹಾ ಎಂದು ನೋವಿನಿಂದ ಉದ್ಗರಿಸುತ್ತ ಪ್ರಿಯಪತಿಯೇ; ನಳನೃಪತಿ = ನಳಮಹಾರಾಜನೇ; ಹಾ ರಣಧೀರ = ಹಾ ವೀರಾಧಿವೀರ ಯುದ್ಧೋತ್ಸಾಹಿಯೇ; ಸದ್ಗುಣಹಾರ = ಸದ್ಗುಣಗಳ ಮಾಲೆಯೇ; ರಿಪುಸಂಹಾರ = ಶತ್ರುಗಳನ್ನು ಶೌರ್ಯದಿಂದ ಚೆಂಡಾಡುವಂಥವನೇ; ನಿರ್ಮಳ ಸತ್ಯಸಂಚಾರ = ಶುದ್ಧಮನಸ್ಕನೆ; ಸತ್ಯವನ್ನೇ ನಡೆಮಡಿಯಾಗಿ ಅನುಸರಿಸುವಂಥವನೇ; ಘೋರ ಕಾನನದೊಳಗೆ = ಇಂತಹ ಭಯಂಕರವಾದ ಕಾಡಿನಲ್ಲಿ; ನಂಬಿದ ನಾರಿಯನು =

ನಿನ್ನನ್ನೇ ಆಸರೆಯೆಂದು ನಂಬಿಬಂದ ಹೆಣ್ಣನ್ನು; ಬಿಸುಡುವರೆ = ಬಿಟ್ಟು ಹೋಗುವವರೇನು?; ತನಗಿನ್ನಾರು = ನನಗೆ ಇನ್ನು ಯಾರು; ಗತಿ = ಗತಿ; ಮುಖ + ತೋರು + ಎನುತ = ಮುಖತೋರು ಎಲ್ಲಿದ್ದೀಯೆ ಎನ್ನುತ್ತ; ಹಲುಬಿದಳು = ದುಃಖಿಸಿದಳು ದಮಯಂತಿ.

ಹಾ! ಪ್ರಿಯಕರ ನಳನೃಪತಿ ನಳಮಹಾರಾಜನೇ, ವೀರಾಧಿವೀರನೇ, ಸದಾ ಯುದ್ಧೋತ್ಸಾಹಿಯಾದ ಪರಾಕ್ರಮಿಯೇ, ಸದ್ಗುಣಶೀಲನೇ, ಶತ್ರುಗಳನ್ನು ಅಮಿತ ಶೌರ್ಯದಿಂದ ಸಂಹರಿಸುವಂಥವನೇ, ಉದಾರಿಯಾಗಿ ಪ್ರಜೆಗಳನ್ನು ನಿತ್ಯವೂ ಪಾಲಿಸುವಂಥಹ ಜನಾನುರಾಗಿಯೇ, ಶುದ್ಧಮನಸ್ಕನೇ, ಸತ್ಯವೇ ನಿತ್ಯದ ನಡೆಯಾಗಿ ಉಳ್ಳವನೇ, ಇಂತಹ ಸದ್ಗುಣಿಯಾದಂತಹ ನೀನು ನಿನ್ನನ್ನೇ ನಂಬಿ ನಿನ್ನಾಸರೆ ಯಲ್ಲಿದ್ದ ಹೆಣ್ಣನ್ನು ಇಂತಹ ಕಾಡಿನಲ್ಲಿ ಬಿಟ್ಟು ಹೋಗುವರೇನು? ನನಗಿನ್ನಾರು ಗತಿ, ನೀನೆಲ್ಲಿದ್ದೀಯೇ ಮುಖ ತೋರು ಎನ್ನುತ್ತ ದಮಯಂತಿಯು ದುಃಖಿಸಿದಳು.

ದಮಯಂತಿಯು ನಳಮಹಾರಾಜನ ಗುಣಶೌರ್ಯಾದಿಗಳನ್ನು ನೆನೆದು ಅವನಿಗಾಗಿ ಹಂಬಲಿಸುತ್ತಿರುವ ಈ ಚಿತ್ರಣದಲ್ಲಿ ಅನುಪ್ರಾಸಗಳು ಸೃಷ್ಟಿಸುವ ನಾದಾತ್ಮ ಕತೆಯನ್ನು ಗಮನಿಸಬಹುದು.

23. ಪೊಡವಿಗಿಳಿವೆನೊ ಹಾಯ್ದು ಪಾವಕ
ನೊಡಲ ಹೊಗುವೆನೊ ಕಾಳಕೂಟದ
ಮಡುವಿನೊಳು ಮುಳುಗುವೆನೊ ಹಾಸರೆಯೊಳಗೆ ಬೀಳುವೆನೊ
ಅಡಸಿದಾಪತ್ತಿನಲಿ ಗರಳವ
ಕುಡಿವೆನೋ ತಾನೆನುತ ಸತಿ ಬಾ
ಯ್ಬಿಡುತ ಕಾನನದೊಳಗೆ ತಿರುಗಿದಳಬಲೆ ಶೋಕದಲಿ

ಪೊಡವಿಗಿಳಿವೆನೊ = ಭೂಮಿಯೊಳಗೆ ಹುದುಗಿ ಹೋಗಲೇ; ಹಾಯ್ದು = ಹಾರಿ; ಪಾವಕನೊಡಲ = ಬೆಂಕಿಯಲ್ಲಿ; ಹೊಗುವೆನೊ = ಪ್ರವೇಶಿಸಲೇ; ಕಾಳಕೂಟದ = ಮಹಾಘನಘೋರ ವಿಷದ; ಮಡುವಿನೊಳು = ನೀರಿನ ಆಳವಾದ ಸುಳಿಯಲ್ಲಿ; ಮುಳುಗುವೆನೊ = ಮುಳುಗಿಹೋಗಲೇ; ಹಾಸರೆಯೊಳಗೆ ಬೀಳುವೆನೊ = ಹಾಸುಗಲ್ಲಿನಲ್ಲಿ ಬೀಳಲೇ; ಅಡಗಿದ + ಆಪತ್ತಿನಲಿ = ಬಂದೆರಗಿದ

ಅಪಾಯ ಕಾಲದಲ್ಲಿ; ಗರಳವ = ವಿಷವನ್ನು; ಕುಡಿವೆನೊ = ಕುಡಿಯಲೇ; ತಾನ್ + ಎನುತ = ನಾನು ಎನ್ನುತ್ತ; ಸತಿ ಬಾಯ್ಬಿಡುತ = ದಮಯಂತಿಯು ಅಳಲುತ್ತ; ಕಾನನದೊಳಗೆ = ಕಾಡಿನಲ್ಲಿ; ತಿರುಗಿದಳಬಲೆ = ನಿಸ್ಸಹಾಯಕಳಾಗಿ ಅಲೆದಾಡಿದಳು; ಶೋಕದಲಿ = ದುಃಖಿತಳಾಗಿ.

ದಿಕ್ಕೆಟ್ಟಂತವಳಾಗಿ ದಮಯಂತಿಯು ತಾನಿನ್ನೇನು ಮಾಡಬೇಕೆಂಬ ಚಿಂತೆಯಿಂದ ನಿಸ್ಸಹಾಯಕವಾಗಿ ದುಃಖಿಸಲಾರಂಭಿಸಿದಳು. ಭೂಮಿಯೊಳಗಾದರೂ ಹುದುಗಿಹೋಗಲೇ, ಅಗ್ನಿಪ್ರವೇಶವನ್ನಾದರೂ ಮಾಡಲೇ, ಬಂಡೆಗಲ್ಲಿಗೆ ಚಚ್ಚಿಕೊಂಡು ಸಾಯಲೇ, ಆಳವಾದ ಸುಳಿ ಮಡುವಿನಲ್ಲಿ ಬಿದ್ದುಬಿಡಲೇ, ಈಗ ಬಂದೆರಗಿರುವ ಆಪತ್ತನ್ನು ಹೇಗೆ ಎದುರಿಸಲಿ? ಮಹಾ ಘನಘೋರ ವಿಷವನ್ನಾದರೂ ಕುಡಿದು ಬಿಡಲೇ, ಏನು ಮಾಡಲಿ ಎಂದು ಹಲವು ಹತ್ತು ರೀತಿಯಲ್ಲಿ ತನಗೆ ಬಂದ ಆಪತ್ತಿನಿಂದ ಪಾರಾಗಲು ಸಾಯುವ ವಿವಿಧ ಮಾರ್ಗಗಳ ಕುರಿತು ಚಿಂತಿಸುತ್ತಾ ಕಾಡಿನಲ್ಲಿ ಅಲೆಯುತ್ತ ಶೋಕತಪ್ತಳಾದಳು.

ಪ್ರಸ್ತುತ ಪದ್ಯದಲ್ಲಿ ದಮಯಂತಿಯು ಸಾಯುವ ಮಾರ್ಗಗಳನ್ನು ಕುರಿತಂತೆ ಆಲೋಚಿಸುವುದು ಅವಳ ಅಧೈರ್ಯದ ಕುರುಹಲ್ಲ. ಬದಲಿಗೆ, ನಿಸ್ಸಹಾಯಕವಾದ ಗಳಿಗೆಯ ಚಿಂತೆಯ ಕ್ಷಣಗಳೆಂದು ಭಾವಿಸಬಹುದು. ಇಡೀ ಕಾವ್ಯದಲ್ಲಿ ದಮಯಂತಿ ಸಮಯೋಚಿತವಾಗಿ ತನ್ನ ಧೈರ್ಯ, ಸಹನೆ ಮತ್ತು ಕಾರ್ಯ ಕುಶಲತೆಗಾಗಿ ಮನಸೆಳೆಯುವ ಪಾತ್ರವಾಗಿ ಚಿತ್ರಿತಳಾಗಿರುವುದರಿಂದ, ದುಃಖ ಕ್ಷಣಗಳ ಹಲುಬು ವಿಕೆಯು ಅಧೈರ್ಯದ ಕ್ಷಣಗಳೆನಿಸುವುದಿಲ್ಲ.

ಈ ಪದ್ಯಾರಂಭವನ್ನು ಗಮನಿಸುತ್ತಿರುವಂತೆಯೇ ಕುಮಾರವ್ಯಾಸನ ದ್ರೌಪದಿಯ 'ಆವ ಗರಳವ ಕುಡಿವೆನೋ' ಪದ್ಯದ ಲಯ, ಚಿಂತನೆ ಮುಂತಾದುವನ್ನೇ ಮತ್ತೊಂದು ಪದ್ಯಬಂಧವಾಗಿ ಓದಿದಂತೆನಿಸುತ್ತದೆ. (ಕು.ವ್ಯಾಸಭಾರತ, ವಿರಾಟ ಪರ್ವ, ಸಂಧಿ–3, ಪದ್ಯ–57)

24. ಕಾಣಿರೇಯರಸಂಚೆಗಳೆ ನೀವ್
ಕಾಣಿರೇ ನಿಜಪತಿಯ ಶುಕಪಿಕ
ಕಾಣಿರೇ ಮೃಗಪಕ್ಷಿಗಳೆ ನಳಚಕ್ರವರ್ತಿಯನು

ಕಾಣಿರೇ ತರುಲತೆಗಳಿನಿಯನ
ಕಾಣಿರೇ ನೀವೆಂದು ಶೋಕದೊ
ಳೇಣಲೋಚನೆ ಹಲುಬಿದಳು ಹಲವಂಗದಲಿ ಪತಿಯ

ಕಾಣಿರೇ + ಅರಸ + ಅಂಚೆಗಳೆ = ಕಂಡಿರೇನೇ ರಾಜಹಂಸಗಳೇ; ಕಾಣಲಿಲ್ಲವೇ ರಾಜಹಂಸಗಳೇ/ ನೀವ್ ಕಾಣಿರೇ ನಿಜಪತಿಯ = ನೀವು ಕಂಡಿರೇನು ನನ್ನ ಪತಿಯನ್ನು/ ನಿಮಗೆ ಗೊತ್ತಿಲ್ಲವೇನು ನನ್ನ ಪತಿಯನ್ನು; ಶುಕಪಿಕ = ಗಿಳಿ ಕೋಗಿಲೆಗಳೇ; ಕಾಣಿರೇ = ನೋಡಿದಿರೇನು/ ನೋಡಲಿಲ್ಲೇನು; ಮೃಗಪಕ್ಷಿಗಳೇ = ಮೃಗ ಪಕ್ಷಿಸಂಕುಲಗಳೇ; ನಳಚಕ್ರವರ್ತಿಯನು ಕಾಣಿರೇ = ನಳ ಚಕ್ರವರ್ತಿಯನ್ನು ಕಂಡಿರೇನು; ತರುಲತೆಗಳಿನಿಯನ = ತರುಲತೆಗಳೇ, ನನ್ನ ಪ್ರಿಯ ಪತಿಯನು; ಕಾಣಿರೇ = ನೋಡಿದಿರೇನು, ನೋಡಿರೇ; ನೀವೆಂದು = ನೀವಾದರೂ ನೋಡಿ ಹೇಳಿರೇ ಎಂದು; ಶೋಕದೊಳು + ಏಣ ಲೋಚನೆ = ಹರಿಣದಂತಹ ಸುಂದರ ಕಣ್ಗಳ ದಮಯಂತಿಯು ಶೋಕತಪ್ತಳಾಗಿ; ಹಲುಬಿದಳು = ದುಃಖಿಸಿದಳು; ಹಲವಂಗದಲಿ = ಹಲವು ರೀತಿಗಳಲ್ಲಿ; ಪತಿಯ = ಪತಿಯನ್ನು ನೆನೆದು.

ದಮಯಂತಿಯು ಮೇರೆ ಮೀರಿದ ಶೋಕದಿಂದಲೂ, ನಳನಿಗೆ ಏನಾಗಿದೆ ಎಂಬ ಕಿಂಚಿತ್ ಸುಳಿವೂ ಇಲ್ಲದುದರಿಂದ ಉಂಟಾದ ತಲ್ಲಣದಿಂದಲೂ ಆ ದುರ್ಗಮವಾದ ಅರಣ್ಯದಲ್ಲಿರುವ ರಾಜಹಂಸಗಳನ್ನು, ಗಿಳಿಕೋಗಿಲೆಗಳನ್ನು, ಮೃಗ ಪಕ್ಷಿ ಸಂಕುಲಗಳನ್ನು 'ನಳಚಕ್ರವರ್ತಿಯನ್ನು ಕಂಡಿರೇನು' ಎಂದು ವಿಚಾರಿಸುತ್ತಾ ಆ ಅರಣ್ಯದಲ್ಲಿಯೇ ಮುಂದುವರಿಯುತ್ತಿದ್ದಳು.

ಪ್ರಸ್ತುತ ಪದ್ಯವು ಅಕ್ಕಮಹಾದೇವಿಯು ಚನ್ನಮಲ್ಲಿಕಾರ್ಜುನನನ್ನು ಹುಡುಕುತ್ತ ಪ್ರಕೃತಿಯ ಹಲವು ಮೃಗಪಕ್ಷಿ ಸಂಕುಲಗಳನ್ನು, ಗಿಡ ಮರ ಬಳ್ಳಿಗಳನ್ನು ನೀವು ಕಾಣಿರೇ ನೀವು ಕಾಣಿರೇ ಎಂದು ವಿಚಾರಿಸುತ್ತ ಹೋದ ಬಗೆಯನ್ನು ನೆನಪಿಸುತ್ತದೆ.

ಇಲ್ಲಿ ಬಳಸಿರುವ 'ನೀವು ಕಾಣಿರೇ' ಪ್ರಯೋಗವು ಏಕಕಾಲದಲ್ಲಿ 'ನೀವು ಕಂಡಿರೇನು' ಎಂಬ ಪ್ರಶ್ನೆಯೊಂದಿಗೆ 'ಕಾಣಲಿಲ್ಲವೇನು, ಗುರುತಿಸಲಿಲ್ಲವೇನು

ಗುರುತಿಸಿದ್ದರೂ ಸುಮ್ಮನಿರುವಿರೇನು' ಇತ್ಯಾದಿ ಅರ್ಥಗಳನ್ನೂ ಹೊಮ್ಮಿಸುತ್ತಿರುವುದನ್ನು ಗಮನಿಸಬಹುದು.

25. ಮುಡಿಕೆದರಿ ಹುಡಿಯೊಳಗೆ ಹೊರಳುತ
ಲೊಡಲನೀಡಾಡಿದಳು ಧರೆಯೊಳ
ಗಡವಿ ಪಾಲಾಗೆಂದು ಪಡೆದಳೊ ತನ್ನ ನಿಜಜನನಿ
ಮಡದಿಯರು ತನ್ನಂತೆ ಲೋಕದೊ
ಳೊಡಲ ತೆತ್ತವರುಂಟೆ ಶೋಕದಿ
ಪೊಡವಿಪತಿ ಮುಖದೋರೆನುತ ಹಂಬಲಿಸಿದಳು ಪತಿಯ

ಮುಡಿ + ಕೆದರಿ = ಕೆದರಿ ಅಸ್ತವ್ಯಸ್ತವಾಗಿದ್ದ ಮುಡಿಯೊಂದಿಗೆ; ಹುಡಿಯೊಳಗೆ = ಮಣ್ಣಿನಲ್ಲಿ; ಹೊರಳುತಲಿ + ಒಡಲನು + ಈಡಾಡಿದಳು = ದುಃಖದಿಂದ ಹೊರಳಾಡುತ್ತ ದೇಹವನ್ನು ಬೀಸಾಡಿದಳು; ಧರೆಯೊಳಗೆ + ಅಡವಿ = ಭೂಮಿಯಲ್ಲಿ ಕಾಡಿನ; ಪಾಲಾಗೆಂದು = ಪಾಲಾಗು ಎಂದು; ಪಡೆದಳೋ = ತನ್ನನ್ನು ಹೆತ್ತಳೇ; ತನ್ನ ನಿಜ ಜನನಿ = ತನ್ನ ಹೆತ್ತ ತಾಯಿ; ಮಡದಿಯರು = ಹೆಂಡತಿಯರು, ಸ್ತ್ರೀಯರು; ತನ್ನಂತೆ = ತನ್ನ ರೀತಿಯಲ್ಲಿ; ಲೋಕದೊಳೊಡಲ = ಈ ಪ್ರಪಂಚದಲ್ಲಿ ದೇಹವನು, ತೆತ್ತವರುಂಟೆ? = ಪಡೆದವರುಂಟೆ?; ಶೋಕದಿ = ದುಃಖಾರ್ತಳಾಗಿ; ಪೊಡವಿಪತಿ = ಭೂಪತಿಯಾದ ನಳ ಮಹಾರಾಜನೇ; ಮುಖದೋರೆನುತ = ಎಲ್ಲಿದ್ದೀಯೆ; ಮುಖವನ್ನು ತೋರು ಎನ್ನುತ್ತ; ಹಂಬಲಿಸಿದಳು = ಕಾತರಿಸಿದಳು; ಪತಿಯ = ಪತಿಯನ್ನು ಕಾಣಲು.

ದಮಯಂತಿಯ ಸುಂದರ ಕೇಶರಾಶಿಯು, ಅಡವಿಯಲ್ಲಿ ದಿಕ್ಕೆಟ್ಟು ಅಲೆದಾಡಿದುದರಿಂದ ಕೆದರಿಹೋಗಿ ಅಸ್ತವ್ಯಸ್ತವಾಗಿತ್ತು. ಇದ್ದಕ್ಕಿದ್ದಂತೆ ಪತಿಯನ್ನು ಕಾಣದೆ ಹೋದುದರಿಂದಲೂ ದುರ್ಗಮವಾದ ಅರಣ್ಯದಲ್ಲಿ ಏಕಾಂಗಿಯಾದುದರಿಂದಲೂ ಉಂಟಾದ ಭಯ, ಕಳವಳಗಳಿಂದ ದುಃಖ ಸಂಕಟಗಳನ್ನು ತಾಳಲಾರದೆ ನೆಲದಲ್ಲಿ ಹುಡಿಮಣ್ಣಿನ ಧೂಳಿನಲ್ಲಿ ಹೊರಳಾಡಿದಳು. ಕಾಡು ಪಾಲಾಗಲೆಂದೇ ತನ್ನ ಹೆತ್ತತಾಯಿಯು ತನ್ನನ್ನು ಪಡೆದಳೇನು? ತನ್ನಂತೆ ದುಃಖಿತರಾದ ಸ್ತ್ರೀಯರು ಈ ಲೋಕದಲ್ಲಿ ಮತ್ತೆ ಯಾರಾದರೂ ಇರಲು ಸಾಧ್ಯವೇನು ಎಂಬ ನೋವು ಹಾಗೂ

ಅನಾಥಭಾವಗಳು ಆವರಿಸಿ ಅತ್ಯಂತ ವಿಹ್ವಲಳಾಗಿ 'ಪೊಡವಿಪತಿ ನಳಮಹಾರಾಜನೇ ಎಲ್ಲಿದ್ದೀಯೆ, ಮುಖವನ್ನಾದರೂ ತೋರಬಾರದೇ' ಎಂದು ಹಲುಬುತ್ತ ಅವನನ್ನು ಕಾಣಲು ಕಾತರಿಸಿದಳು.

ಕುಮಾರವ್ಯಾಸ ಭಾರತದ, ವಿರಾಟಪರ್ವ, ಸಂಧಿ–3, ಪದ್ಯ 56 ರ ಲಯ, ಭಾಷಾ ವೈಖರಿಗಳನ್ನು ಈ ಭಾಗ ನೆನಪಿಸುತ್ತದೆ.

26. ಮಾನವಾಧಿಪ ಕೇಳು ಬನದಲಿ
ಮಾನಿನಿಗೆ ಮತ್ತೊಂದು ಕಂಟಕ
ಹಾನಿ ಬಂದುದನೇನನೆಂಬೆನು ಪತಿಗೆ ಬಾಯ್ಬಿಡುತ
ಕಾನನದ ಬಳಿವಿಡಿದು ಬರೆ ಸು
ಮ್ಮಾನದಲಿ ತರಗೆಲೆಯ ಹಕ್ಕೆಯ
ಮೌನದಲಿ ಉರಗೇಂದ್ರನಿದ್ದನು ಬಲಿದ ನಿದ್ರೆಯಲಿ

ಮಾನವಾಧಿಪ ಕೇಳು = ಮಾನವ ಕುಲಕ್ಕೇ ಅಧಿಪತಿಯಾದ ಧರ್ಮ ರಾಯನೇ ಕೇಳು; ಬನದಲಿ = ಕಾಡಿನಲ್ಲಿ; ಮಾನಿನಿ = ಆ ಹೆಣ್ಣುಮಗಳಿಗೆ; ಮತ್ತೊಂದು = ಇನ್ನೊಂದು; ಕಂಟಕ ಹಾನಿ = ಕಷ್ಟನಷ್ಟಗಳು; ಬಂದುದು + ಅದನು + ಏನನು + ಎಂಬೆನು = ಬಂದುದರ ಕುರಿತಾಗಿ ಏನೆಂದು ವರ್ಣಿಸಲಿ; ಪತಿಗೆ ಬಾಯ್ಬಿಡುತ = ಪತಿಗಾಗಿ ಹಂಬಲಿಸಿ ಅಳುತ್ತ; ಕಾನನದ = ಕಾಡಿನ; ಬಳಿವಿಡಿದು = ದಾರಿ ಹಿಡಿದು; ಬರೆ = ಬರುತ್ತಿರಲು; ಸುಮ್ಮಾನದಲಿ = ನೀರವ ಮೌನದಲ್ಲಿ; ತರಗೆಲೆಯ = ಕಾಡಿನಲ್ಲಿ ಒಣಗಿ ನೆಲದಲ್ಲಿ ಹರಡಿದ್ದ ಎಲೆಗಳ; ಹಕ್ಕೆಯ = ಆಶ್ರಯಲ್ಲಿ; ಮೌನದಲಿ = ನಿಶ್ಶಬ್ದವಾಗಿ; ಉರಗೇಂದ್ರನಿದ್ದನು = ಮಹಾಸರ್ಪನಿದ್ದನು; ಬಲಿದ = ಆಳವಾದ; ನಿದ್ರೆಯ = ನಿದ್ರೆಯಲ್ಲಿ.

ದಮಯಂತಿಯು ಅನಾಥಳಂತೆ ಮುಂದೇನು ಎಂಬುದರ ಕುರಿತಂತೆ ಯಾವುದೇ ಸ್ಪಷ್ಟತೆಯಿಲ್ಲದೆ, ನಳನಿಗಾಗಿ ಹಂಬಲಿಸುತ್ತ ಅವನನ್ನರಸಿ ಕಾಡಿನಲ್ಲಿ ಮುಂದೆ ಮುಂದೆ ಹೋಗುತ್ತಿದ್ದಂತೆ ಅವಳಿಗೆ ಮತ್ತೊಂದು ಕಷ್ಟವು ಬಂದಡಸಿತು. ಧರ್ಮರಾಯನೇ ಆ ಕುರಿತು ಏನನ್ನು ಹೇಳಲಿ, ಆ ಕಾಡಿನ ನೀರವ ಮೌನದಲ್ಲಿ

ತರಗೆಲೆಗಳ ಆಶ್ರಯದಲ್ಲಿ ಮೌನವಾಗಿ ಗಾಢನಿದ್ರೆಯಲ್ಲಿ ಒಂದು ಮಹಾಸರ್ಪವು ನಿದ್ರಿಸುತ್ತಿತ್ತು.

27. ತರಳೆ ಕಾಣದೆ ಬರುತ ಮೆಟ್ಟಿದ
ಉರಗಪತಿಯನು ಕೋಪದಲಿ ಮಿಗೆ
ಸುರಿವ ಗರಳದಿ ರೌದ್ರಮಯರೂಪಿನಲಿ ಬಾಲಕಿಯ
ತರುಬಿ ಹಿಡಿದುದು ತವಕದಲಿ ಹಿಮ
ಕರನ ನುಂಗುವ ರಾಹುವಿನವೊಲ್
ಅರಸ ಕೇಳಂಗನೆಯ ವಿಧಿಯನು ಹೇಳಲೇನೆಂದ

ತರಳೆ = ಯುವತಿ ದಮಯಂತಿಯು; ಕಾಣದೆ ಬರುತ = ದಾರಿಯಲ್ಲಿ ಬರುತ್ತ ಸರಿಯಾಗಿ ನೋಡದೆ; ಮೆಟ್ಟಿದಉರಗಪತಿಯನು = ತರಗೆಲೆಯ ಆಶ್ರಯದಲ್ಲಿ ಹುದುಗಿ ನಿದ್ರಿಸುತ್ತಿದ್ದ ಘೋರ ಸರ್ಪವನ್ನು ತುಳಿದಳು; ಕೋಪದಲಿ = ಕೋಪದಿಂದ; ಮಿಗೆ ಸುರಿವ = ಅಧಿಕವಾಗಿ ಉಕ್ಕಿ ಸುರಿಯುವ; ಗರಳದಿ = ವಿಷದಿಂದ; ರೌದ್ರಮಯ ರೂಪಿನಲಿ = ರೌದ್ರಾವತಾರ ತಾಳಿ; ಬಾಲಕಿಯ = ದಮ ಯಂತಿ ಯನ್ನು; ತರುಬಿ = ಪ್ರತಿಭಟಿಸುತ್ತ ಅಡ್ಡಗಟ್ಟಿ; ಹಿಡಿದುದು = ಆವರಿಸಿಕೊಂಡಿತು; ತವಕದಲಿ = ಅತಿ ವೇಗದಿಂದ; ಹಿಮಕರನ = ಚಂದ್ರನನ್ನು; ನುಂಗುವ ರಾಹುವಿನವೊಲ್ = ನುಂಗುವ ರಾಹುವಿನಂತೆ; ಅರಸ = ಅರಸನೇ; ಕೇಳ್ + ಅಂಗನೆಯ = ಕೇಳು ದಮಯಂತಿಯ; ವಿಧಿಯನು = ಹಣೆಬರೆಹವನು; ಹೇಳಲೇನೆಂದ = ಏನೆಂದು ವರ್ಣಿಸಲಿ ಎಂದನು.

ಯುವವಯೋಮಾನದ ದಮಯಂತಿಯು ಕಾಡಿನಲ್ಲಿ ನಲ್ಲನನ್ನು ಅರಸುತ್ತ ಅಳಲುತ್ತ ಬರುತ್ತಿರಲು ಕಾಣದೆ ಕಾಡಿನ ದಾರಿಯಲ್ಲಿ ತರಗೆಲೆಗಳ ಹಾಸಿನಲ್ಲಿ ಮಲಗಿ ನಿದ್ರಿಸುತ್ತಿದ್ದ ಘಟಸರ್ಪವನ್ನು ತುಳಿದಳು. ಇದರಿಂದ ಕ್ರೋಧೋನ್ಮತ್ತವಾದ ಆ ಸರ್ಪವು ಅಗಾಧವಾಗಿ ವಿಷವನ್ನು ಕಕ್ಕುತ್ತ ಅವಳು ಮುಂದುವರಿಯದಂತೆ ಪ್ರತಿಭಟಿಸುತ್ತ, ಚಂದ್ರನನ್ನು ರಾಹುವು ನುಂಗುವಂತೆ ಅವಳನ್ನು ಆವರಿಸಿಕೊಂಡಿತು. ಅರಸ ಧರ್ಮರಾಯನೇ ಕೇಳು ದಮಯಂತಿಯ ಹಣೆಬರಹವನ್ನು ಏನೆಂದು ವರ್ಣಿಸಲಿ ಎಂದು ರೋಮಶ ಮುನಿಯು ಹೇಳಿದನು.

28. ಹಾ ರಮಣ ನಳನೃಪತಿ ತನ್ನನ
ದಾರಿಗೊಪ್ಪಿಸಿ ಕಳೆದೆ ಹರಿಹರಿ
ಕ್ರೂರಸರ್ಪನ ಬಾಯ್ಗೆ ತುತ್ತಾದೆನೆ ಜಗನ್ನಾಥ
ಆರಿಗೊರಲುವೆನಿನ್ನು ಪ್ರಾಣವ
ನಾರು ಕಾವವರಕಟ ಬಿಡಿಸೈ
ವಾರಿಜಾಕ್ಷ ಮುಕುಂದ ಸಲಹೆಂದೊರಲಿದಳು ತರಳೆ

ಹಾ ರಮಣ = ಹಾ ರಮಣ! ಎಂದು ನೋವಿನಿಂದ ಉದ್ಗರಿಸುತ್ತ; ನಳನೃಪ = ನಳಮಹಾರಾಜನೇ; ತನ್ನನ್ನು = ನನ್ನನ್ನು; ದಾರಿಗೊಪ್ಪಿಸಿ = ಕಾಡಿನ ಪಾಲುಮಾಡಿ; ಕಳೆದೆ = ಬಿಟ್ಟುಹೋದೆಯಲ್ಲ; ಹರಿಹರಿ = ದೇವರೆ; ಕ್ರೂರಸರ್ಪನ = ಘೋರ ಸರ್ಪದ; ಬಾಯ್ಗೆ ತುತ್ತಾದೆನೆ = ಬಾಯಿಗೆ ಆಹಾರವಾದೆನೆ; ಜಗನ್ನಾಥ = ಜಗತ್ಪ್ರಭುವೇ; ಆರಿಗೆ + ಒರಲುವೆನು + ಇನ್ನು = ಇನ್ನು ಯಾರಲ್ಲಿ ನನ್ನ ದುಃಖವನ್ನು ಹೇಳಿಕೊಳ್ಳಲಿ; ಪ್ರಾಣವನಾರು = ನನ್ನ ಪ್ರಾಣವನ್ನು ಯಾರು; ಕಾವವರು + ಅಕಟಾ + ಕಾಯುವವರು, ಅಯ್ಯೋ; ಬಿಡಿಸೈ = ಕಾಪಾಡು; ವಾರಿಜಾಕ್ಷ ಮುಕುಂದ = ವಿಷ್ಣುವೇ, ಮುಕುಂದ; ಸಲಹು + ಎಂದು + ಒರಲಿದಳು = ಕಾಪಾಡು ಎಂದು ಗೋಳಾಡಿದಳು; ತರಲೆ = ಎಳೆವಯಸ್ಸಿನ ಆ ಹೆಣ್ಣುಮಗಳು.

ಹಾ! ಎಂದು ನೋವಿನಿಂದ ಚೀರುತ್ತ, ನಳನೃಪತೀ, ರಮಣಾ ಎಂದು ದಮಯಂತಿಯು ಪತಿಗಾಗಿ ಹಂಬಲಿಸಿದಳು. ನನ್ನನ್ನು ಹೀಗೆ ಕಾಡುಪಾಲುಮಾಡಿ ಬಿಟ್ಟು ಹೋದೆಯೇನು ಎಂದು ಅಳುತ್ತಾ, ದೇವರೇ ನಾನು ಘೋರ ಸರ್ಪನ ಬಾಯಿಗೆ ಆಹಾರವಾದೆನೇ, ಅಯ್ಯೋ ನನ್ನನ್ನು ಇನ್ನು ಕಾಪಾಡುವವರು ಯಾರು? ಜಗನ್ನಾಥಾ, ಮುಕುಂದಾ, ನನ್ನನ್ನು ಈ ಕಷ್ಟದಿಂದ ಕಾಪಾಡು ಎಂದು ದೇವರನ್ನು ಸ್ಮರಿಸುತ್ತ ತನ್ನ ಸ್ಥಿತಿಗೆ ಖಿನ್ನಳಾಗಿ ಗೋಳಾಡಿದಳು.

29. ಶೈಲಶಿಖರದೊಳಿರ್ದು ಕೇಳಿದ
ಬಾಲಕಿಯ ಶೋಕವನು ಬಿಲ್ಲಿನ
ಕೋಲುಗಾರನು ಕರೆದ ಬಿಲ್ಲಿನ ಶಬರನೈತಂದು
ಆ ಲತಾಂಗಿಯ ಪಿಡಿದು ನುಂಗುವ

ಕಾಲಭುಜಗನ ಕಂಡು ನಿಜಕರ
ವಾಳದಲಿ ಖಂಡಿಸಿದನಹಿಯನು ಬಿಡಿಸಿದನು ಸತಿಯ

ಶೈಲಶಿಖರದೊಳಿರ್ದು = ಬೆಟ್ಟವೊಂದರ ತುದಿಯಲ್ಲಿದ್ದು; ಕೇಳಿದ = ಆಲಿಸಿದ; ಬಾಲಕಿಯ ಶೋಕವನು = ಹೆಣ್ಣಿನ ಆಕ್ರಂದನವನ್ನು; ಬಿಲ್ಲಿನ ಕೋಲುಗಾರನು = ಬಿಲ್ಲು ಬಾಣಗಳನ್ನು ಹಿಡಿದಿದ್ದ ಅರಣ್ಯದ ಕಾವಲುಗಾರನೊಬ್ಬನು; ಕರೆದ = ಕರೆಕೊಟ್ಟುದುದರಿಂದ; ಬಿಲ್ಲಿನ ಶಬರನೈತಂದು = ಬಿಲ್ಲುಗಾರನಾದ ಬೇಡನು ಬಂದು; ಆ ಲತಾಂಗಿಯ = ಆ ಕೋಮಲೆಯನ್ನು; ಪಿಡಿದು ನುಂಗುವ = ಹಿಡಿದುಕೊಂಡು ನುಂಗುತ್ತಿದ್ದ; ಕಾಲಭುಜಗನ ಕಂಡು = ಕಾಳಸರ್ಪವನ್ನು ನೋಡಿ; ನಿಜಕರವಾಳದಲಿ = ತನ್ನ ಕತ್ತಿಯಿಂದ; ಖಂಡಿಸಿದನ್ + ಅಹಿಯನು = ಸರ್ಪವನ್ನು ತುಂಡರಿಸಿದನು; ಬಿಡಿಸಿದನು ಸತಿಯ = ದಮಯಂತಿಯನ್ನು ಹಾವಿನ ಸೆರೆಯಿಂದ ಮುಕ್ತಗೊಳಿಸಿದನು.

ದಮಯಂತಿಯು ನಾನಾ ರೀತಿಯಲ್ಲಿ ಪತಿಯನ್ನು, ಕಾವಲು ದೈವಗಳನ್ನು ಕರೆಕರೆದು ತನ್ನನ್ನು ಕಾಪಾಡಬೇಕೆಂದು ಭಿನ್ನವಿಸುತ್ತಿದ್ದ ದನಿಯನ್ನು ಆ ದುರ್ಗಮ ವಾದ ಕಾಡಿನ ಬೆಟ್ಟವೊಂದರ ತುದಿಯಲ್ಲಿದ್ದ ಅರಣ್ಯರಕ್ಷಕನು ಕೇಳಿದನು. ಅನಂತರ ಅವನ ಅಪ್ಪಣೆಯ ಮೇರೆಗೆ ಬೇಡನೊಬ್ಬನು ಬಿಲ್ಲುಬಾಣಗಳೊಂದಿಗೆ ಬಂದವನು ಕಾಳಸರ್ಪವು ದಮಯಂತಿಯನ್ನು ನುಂಗುತ್ತಿರುವುದನ್ನು ಕಂಡು, ತನ್ನ ಕತ್ತಿಯಿಂದ ಹಾವನ್ನು ತುಂಡರಿಸಿ, ಅದರ ಸೆರೆಯಿಂದ ಅವಳನ್ನು ಮುಕ್ತಗೊಳಿಸಿದನು.

30. ಹಾಯೆನುತ ಸುರರುಲಿಯೆ ಹಾವಿನ
ಬಾಯೊಳಗೆ ಸಿಲುಕಿರ್ದ ಕಮಲದ
ಳಾಯತಾಕ್ಷಿಯ ಬಿಡಿಸಿದನು ಸಂತೈಸಿದನು ಸತಿಯ
ರಾಯ ಕೇಳೈ ರಾಹುವಿನ ಕಟ
ವಾಯ ಚಂದ್ರನ ಸೆಳೆವವೋಲರಿ
ದಾಯಿತಬಲೆಗೆ ಮೂರ್ಛೆ ತಿಳಿದುದು ಶಬರಮಂತ್ರದಲಿ

ಹಾಯೆನುತ = ಹಾ! ಎಂದು ಆನಂದಾಶ್ಚರ್ಯಗಳಿಂದಲೂ; ದಮ ಯಂತಿಯ ಶೋಕ ದನಿಯಿಂದಲೂ; ಸುರರುಲಿಯೆ = ದೇವಾಧಿದೇವತೆಗಳು

ಉದ್ಗರಿಸಲು; ಹಾವಿನ ಬಾಯೊಳಗೆ = ಕಾಳಸರ್ಪನ ಬಾಯೊಳಗೆ; ಸಿಲುಕಿದ = ಸಿಕ್ಕಿಹಾಕಿಕೊಂಡಿದ್ದ; ಕಮಲದಳ + ಆಯತ + ಅಕ್ಷಿಯ = ಕಮಲದಳ ಸ್ವರೂಪದ ಕಣ್ಣುಗಳುಳ್ಳ ದಮಯಂತಿಯನ್ನು; ಬಿಡಿಸಿದನು = ಮುಕ್ತ ಗೊಳಿಸಿದನು; ಸಂತೈಸಿದನು = ದುಃಖ ಭಯಗಳಿಂದ ಒರಲುತ್ತಿದ್ದ ಅವಳನ್ನು ಸಮಾಧಾನಿಸಿದನು; ಸತಿಯ = ದಮಯಂತಿಯನ್ನು; ರಾಯ ಕೇಳೈ = ಅರಸ ಧರ್ಮರಾಯನೇ ಕೇಳು; ರಾಹುವಿನ ಕಟವಾಯ = ರಾಹುವಿನ ಬಾಯಕೊನೆಯಲ್ಲಿದ್ದ; ಚಂದ್ರನ = ಚಂದ್ರನನ್ನು; ಸೆಳೆದವೋಲ್ + ಅರಿದಾಯಿತು + ಅಬಲೆಗೆ = ಎಳೆದು ಹೊರತೆಗೆದಂತಾಯಿತು ಅವಳಿಗೆ; ಮೂರ್ಛೆ ತಿಳಿದುದು = ಮೂರ್ಛಿತ ಸ್ಥಿತಿಯಿಂದ ಹೊರಬಂದಳು; ಶಬರ ಮಂತ್ರದಲಿ = ಶಬರನ ಮಂತ್ರೋಚ್ಚಾರಣೆಯ ಫಲವಾಗಿ.

ಈ ದೃಶ್ಯವನ್ನು ಗಮನಿಸುತ್ತಿದ್ದ ದೇವಗಣವು ಆನಂದಾಶ್ಚರ್ಯ ಗಳಿಂದಲೂ, ಕಳವಳವು ನೀಗಿದ ತೃಪ್ತಿಯಿಂದಲೂ ಹಾ ! ಎಂದು ಉದ್ಗರಿಸುತ್ತಿರಲು, ಆ ಶಬರನು ಕಾಳಸರ್ಪದ ಸೆರೆಯಿಂದ ಕಮಲದಳದಂತೆ ಸುಂದರಾಕಾರವಾದ ಕಣ್ಗಳ ಚೆಲುವೆ ದಮಯಂತಿಯನ್ನು ಬಿಡಿಸಿದನು. ರಾಹುವಿನ ಬಾಯಿಯಿಂದ ಎಳೆದು ಹೊರತೆಗೆದ ಚಂದ್ರನಂತೆ ಸೊರಗಿ ಮೂರ್ಛಿತಳಾಗಿದ್ದ ಅವಳನ್ನು ಶಬರನು ಮಂತ್ರೋಚ್ಚಾರಣೆ ಯಿಂದ ರಕ್ಷಿಸಿದನು.

31. ಬಂದು ಕೆಂದಾವರೆಯ ಕೊಳದಲಿ
ಮಿಂದು ನಿಂದಿರೆ ಶಬರನೆಂದನು
ಇಂದುಮುಖಿ ನೀನೆನಗೆ ಸತಿಯಾಗೆನಲು ಖತಿಗೊಂಡು
ಇಂದೆನಗೆ ಅಸುವಿತ್ತು ಸಲಹಿದ
ತಂದೆಯಲ್ಲವೆ ನೀನು ಕೇಳು ಪು
ಳಿಂದ ಮುಳಿದರೆ ಶಪಿಸುವೆನು ಹೋಗಂದಳಿಂದುಮುಖಿ

ಬಂದು = ಹಾವಿನ ಬಾಯಿಯಿಂದ ಹೊರಬಂದು; ಕೆಂದಾವರೆಯ ಕೊಳದಲಿ = ಕೆಂದಾವರೆಗಳು ಅರಳಿದ್ದ ಕೊಳದಲ್ಲಿ; ಮಿಂದು ನಿಂದಿರೆ = ಸ್ನಾನಮಾಡಿ ದಮಯಂತಿಯು ನಿಂತಿರಲು; ಶಬರನೆಂದನು = ಆ ಬೇಡನು ಹೇಳಿದನು; ಇಂದುಮುಖಿ = ಚಂದ್ರವದನೆಯೇ; ನೀನು + ಎನಗೆ + ಸತಿಯಾಗು

+ ಎನಲು = ನೀನು ನನ್ನ ಮಡದಿಯಾಗಿರು ಎನ್ನಲು; ಖತಿಗೊಂಡು = ಕೋಪಗೊಂಡು; ಇಂದು + ಎನಗೆ = ಈ ದಿನ ನನಗೆ; ಅಸುವಿತ್ತು = ಪ್ರಾಣವನ್ನು ಮರಳಿ ತಂದಿತ್ತು; ಸಲಹಿದ = ರಕ್ಷಿಸಿದ, ತಂದೆಯಲ್ಲವೆ ನೀನು = ತಂದೆಯಾದೆಯಲ್ಲವೇ ನೀನು; ಕೇಳು ಪುಳಿಂದ = ಕೇಳು ಬೇಡನೆ; ಮುಳಿವರೆ = ಸಿಟ್ಟುಗೊಂಡರೆ; ಶಪಿಸುವೆನು = ಶಾಪವನ್ನು ನೀಡುತ್ತೇನೆ; ಹೋಗೆಂದಳಿಂದುಮುಖಿ = ಹೋಗು + ಎಂದಳು + ಇಂದುಮುಖಿ = ಸುಮ್ಮನೆ ಹೊರಟುಹೋಗು ಎಂದಳು.

ಬೇಡನ ಸಮಯೋಚಿತ ಮಂತ್ರೋಪಾಯಗಳಿಂದ ಹಾವಿನ ಸೆರೆಯಿಂದ ಹೊರಬಂದ ಚಂದ್ರಮುಖಿ ದಮಯಂತಿಯು ಅಲ್ಲಿಯೇ ಇದ್ದ ತಾವರೆಯ ಕೊಳದಲ್ಲಿ ಮಿಂದು ಶುಚಿರ್ಭೂತಳಾಗಿ ಬಂದು ನಿಂತಿರಲು ಅವಳನ್ನು ಕಂಡ ಶಬರನು 'ಚೆಲುವೆಯೇ ನೀನು ನನ್ನ ಮಡದಿಯಾಗು' ಎಂದು ಕೇಳಿಕೊಳ್ಳಲು ಕುಪಿತಳಾದ ದಮಯಂತಿಯು, ನೀನು ನನ್ನನ್ನು ಕಾಪಾಡಿ ನನ್ನ ಪ್ರಾಣವನ್ನು ಮರಳಿ ಇತ್ತುದರಿಂದ ತಂದೆಯಾದೆಯಲ್ಲವೇ? ಕೇಳು ಬೇಡನೆ, ನಾನೇನಾದರೂ ಕೋಪಗೊಂಡರೆ ಶಾಪವಿತ್ತೇನು ಹೊರಟುಹೋಗು ಎಂದು ಸಿಡಿದಳು.

32. ತರುಣಿ ಕೋಪಿಸಿ ನುಡಿಯೆ ಭಯದಲಿ
ಶಿರವ ಬಾಗಿ ಪುಳಿಂದನತ್ತಲು
ಮರಳಿದನು ದಮಯಂತಿ ಮನದಲಿ ಪತಿಗೆ ಹಂಬಲಿಸಿ
ಮರುಗುವಳು ಬನದೊಳಗೆ ಭೂಪನ
ನರಸಿ ಕಾಣದೆ ಬಯಲನಪ್ಪುವ
ಉರವಣಿಪ ಕಣ್ಣೀರಿನಲಿ ನಡೆತಂದಳಿಂದುಮುಖಿ

ತರುಣಿ = ದಮಯಂತಿಯು; ಕೋಪಿಸಿ ನುಡಿಯೆ = ಸಿಟ್ಟಿನಿಂದ ಬೈಯಲು; ಭಯದಲಿ = ಭಯದಿಂದ; ಶಿರವ ಬಾಗಿ = ತಲೆಬಾಗಿ ವಂದಿಸಿ; ಪುಳಿಂದನು + ಅತ್ತಲು = ಆ ಶಬರನು ಕಾಡಿನತ್ತ; ಮರಳಿದನು = ಹಿಂದಿರುಗಿ ಹೋದನು; ದಮಯಂತಿ = ದಮಯಂತಿಯು; ಮನದಲಿ = ಮನಸ್ಸಿನಲ್ಲಿಯೇ; ಪತಿಗೆ ಹಂಬಲಿಸಿ = ಪತಿಯನ್ನು ಕಾಣಲು ಹಂಬಲಿಸುತ್ತ; ಮರುಗುವಳು =

ದುಃಖಿಸುವಳು; ಬನದೊಳಗೆ = ಕಾಡಿನಲ್ಲಿ; ಭೂಪನನು + ಅರಸಿ ಕಾಣದೆ = ನಳ ಮಹಾರಾಜನನ್ನು ಹುಡುಕಿ ಅವನು ಕಾಣಸಿಗದಿರಲು; ಬಯಲನು + ಅಪ್ಪುವಳು + ಉರವಣಿಪ = ಶೂನ್ಯದೃಷ್ಟಿಯಿಂದ ಉಕ್ಕಿಬರುವ; ಕಣ್ಣೀರಿನಲಿ = ಕಣ್ಣೀರನ್ನು ಸುರಿಸುತ್ತ; ನಡೆತಂದಳು + ಇಂದುಮುಖಿ = ದಮಯಂತಿಯು ಮುನ್ನಡೆದಳು.

ಶಬರನ ಮಾತಿಗೆ ಪ್ರತಿಯಾಗಿ ದಮಯಂತಿಯು ಸಿಟ್ಟಿಗೆದ್ದು ಅವನನ್ನು ಬೈಯಲು ಅವನು ಹೆದರಿ ಅವಳಿಗೆ ತಲೆಬಾಗಿ ವಂದಿಸಿ ಕಾಡಿನತ್ತ ಮರಳಿ ಹೋದನು. ದಮಯಂತಿಯು ಮನದೊಗೊಳಗೇ ಪತಿಯನ್ನು ಕಾಣಲು ಹಂಬಲಿ ಸುತ್ತ, ಅವನು ಕಾಣಸಿಗದಿರಲು ದುಃಖದ ಆವೇಗದಿಂದ ಕಣ್ಣೀರು ಧಾರೆಯಾಗಿ ಸುರಿಯಲು ಮುನ್ನಡೆಯಲಾರಂಭಿಸಿದಳು.

33. ಅರಸ ಕೇಳಾಶ್ಚರ್ಯವನು ಸತಿ
ಬರುತಿರಲು ಕಾನನದಿ ನೆರೆದಿಹ
ಮರುಳು ಬಳಗವು ಭೂತಬೇತಾಳಗಳು ತೊಲಗಿದುವು
ಶರಭ ಮೊಲ ಕಾಡಾನೆ ಸಿಂಹಗ
ಳಿರದೆ ಜಾರಿದುವಲ್ಲಿ ಸತಿಯಳ
ಪರಮಪಾತಿವ್ರತ್ಯಮಹಿಮೆಗೆ ನೃಪತಿ ಕೇಳೆಂದ

ಅರಸ = ಅರಸ ಧರ್ಮರಾಯನೇ; ಕೇಳು + ಆಶ್ಚರ್ಯವನು = ಕೇಳು ಅಚ್ಚರಿಯ ಸಂಗತಿಯಿದೆ, ಸತಿ ಬರುತಿರಲು = ದಮಯಂತಿಯು ಬರುತ್ತಿರಲು; ಕಾನನದಿ = ಆ ಕಾಡಿನಲ್ಲಿ; ನೆರೆದಿಹ = ತುಂಬಿಹೋಗಿದ್ದ; ಮರುಳು ಬಳಗವು = ಪಿಶಾಚಗಳ ಸಮೂಹವೂ; ಭೂತ ಬೇತಾಳಗಳು = ಭೂತ ಭೇತಾಳಗಳು; ತೊಲಗಿದುವು = ಕಣ್ಮರೆಯಾದುವು; ಶರಭ, ಮೊಲ, ಕಾಡಾನೆ, ಸಿಂಹಗಳಿರದೆ = ಶರಭ ಸಿಂಹ ಮೊಲ ಕಾಡಾನೆ ಮುಂತಾದ ಕಾಡು ಮೃಗಗಳು ಅಲ್ಲಿ ನಿಲ್ಲದೆ; ಜಾರಿದುವಲ್ಲಿ = ಅಲ್ಲಿಂದ ಸದ್ದಿಲ್ಲದೆ ಓಟಕಿತ್ತವು; ಸತಿಯಳ = ಆ ಮಹಾಪತಿವ್ರತೆಯ; ಪರಮ ಪಾತಿವ್ರತ್ಯ ಮಹಿಮೆಗೆ = ಮಹಾ ಪತಿವ್ರತಾ ಮಹಿಮೆಗೆ ಅಂಜಿ; ನೃಪತಿ ಕೇಳೆಂದ = ರಾಜನೇ ಕೇಳು ಎಂದನು.

ಧರ್ಮರಾಯನೇ ತನ್ನದೇ ಆದ ಅತೀವ ದುಃಖದಲ್ಲಿ ಮುಳುಗಿ ಆ ದುರ್ಗಮವಾದ, ಕಾಡಿನಲ್ಲಿ ದಮಯಂತಿಯು ನಳಮಹಾರಾಜನಿಗಾಗಿ ಹಂಬಲಿಸುತ್ತ ಬರುತ್ತಿರಲು ಒಂದು ಅಚ್ಚರಿಯ ಸಂಗತಿಯು ನಡೆಯಿತು. ಕೇಳು ಆ ಮಹಾ ಪತಿವ್ರತೆಯಾದ ದಮಯಂತಿಯ ಪಾತಿವ್ರತ್ಯ ಮಹಿಮೆಗೆ ಅಲ್ಲಿರಲು ಅಂಜಿ ಪಿಶಾಚ ಸಮೂಹವೂ, ಭೂತ ಬೇತಾಳಗಳೂ, ಕ್ರೂರ ಮೃಗಗಳಾದ ಶರಭ, ಸಿಂಹ, ಮೊಲ, ಕಾಡಾನೆ ಮುಂತಾದುವುಗಳೂ ಸದ್ದಿಲ್ಲದೆ ಅಲ್ಲಿಂದ ಓಟಕಿತ್ತವು.

34. ಮುಂದೆ ಕಂಡಳು ಹೊಳೆವ ತಾಪಸ
ವೃಂದವನು ಕಣ್ಣೀರ ಸುರಿಸುತ
ಬಂದವಳನುರೆ ಕೇಳಿದರು ಮುನಿವರರು ಕರುಣದಲಿ
ಇಂದುಮುಖಿ ನೀನಾರು ಇಲ್ಲಿಗೆ
ಬಂದ ಹದನೇನೆನಲು ಶೋಕದಿ
ನೊಂದು ನುಡಿದಳು ಮುನಿಗಳಿಗೆ ಕೈ ಮುಗಿದು ವಿನಯದಲಿ

ಮುಂದೆ ಕಂಡಳು = ಮುಂದುವರಿದು ಹೋಗುತ್ತಿದ್ದಂತೆ ದಮಯಂತಿಯು ಕಂಡಳು; ಹೊಳೆವ ತಾಪಸ = ತೇಜೋವಂತರಾಗಿ ಹೊಳೆಯುವ ಮುನಿಗಳ; ವೃಂದವನು = ಸಮೂಹವನ್ನು; ಕಣ್ಣೀರ ಸುರಿಸುತ = ಕಣ್ಣೀರ ಧಾರೆಯನ್ನು ಸುರಿಸುತ್ತ; ಬಂದವಳನುರೆ = ಬಂದವಳನ್ನು; ಕೇಳಿದರು ಮುನಿವರರು = ಆ ಮುನಿ ಶ್ರೇಷ್ಠರು ಪ್ರಶ್ನಿಸಿದರು; ಕರುಣದಲಿ = ಕರುಣೆಯಿಂದ; ಇಂದುಮುಖಿ = ಸುಂದರಿಯೆ; ನೀನಾರು = ನೀನು ಯಾರು? ಇಲ್ಲಿಗೆ ಬಂದ = ಇಂತಹ ಕಾಡಿಗೆ ಬಂದಂತಹ; ಹದನೇನೆನಲು = ಕಾರಣಗಳು ಏನು ಹೇಳು ಎನ್ನಲು; ಶೋಕದಿ ನೊಂದು = ದುಃಖದಿಂದ ನೊಂದು; ನುಡಿದಳು = ಹೇಳಿದಳು; ಮುನಿಗಳಿಗೆ = ಆ ತಪಸ್ವಿಗಳಿಗೆ; ಕೈ ಮುಗಿದು = ಗೌರವ ಪೂರ್ವಕವಾಗಿ ಕೈಮುಗಿದು; ವಿನಯದಲಿ = ವಿನಯದಿಂದ.

ಹೀಗೆಯೇ ದಮಯಂತಿಯು ಆ ಕಾಡಿನಲ್ಲಿ ಮುನ್ನಡೆಯುತ್ತಿರಲು, ಅವಳಿಗೆ ಮಹಾ ತೇಜೋವಂತ ತಪಸ್ವಿಗಳ ಸಮೂಹವೊಂದು ಎದುರಾಯಿತು. ದುಃಖಿತಳು

ತಮ್ಮೆದುರು ಬಂದುದನ್ನು ಕಂಡ ಅವರು ಪ್ರೀತಿ, ಕರುಣೆಗಳಿಂದ, ಆ ದುರ್ಗಮವಾದ ಕಾಡಿಗೆ ಅವಳು ಬಂದ ರೀತಿ ಮತ್ತು ಕಾರಣಗಳನ್ನು ಕುರಿತು ಪ್ರಶ್ನಿಸಲಾಗಿ, ಅವರಿಗೆ ಗೌರವಾದರಗಳಿಂದ ಕೈ ಮುಗಿದು ದಮಯಂತಿಯು ವಿನಯಪೂರ್ವಕವಾಗಿ ಬಿನ್ನವಿಸತೊಡಗಿದಳು.

35. ಏನನೆಂಬೆನು ತನ್ನ ಪುಣ್ಯದ
ಹಾನಿಯನು ಚಿತ್ತವಿಸಿ ಕರುಣದಿ
ಮಾನನಿಧಿಗಳು ಬಲ್ಲಿರೇ ನಳಚಕ್ರವರ್ತಿಯನು
ಆ ನರೇಂದ್ರನ ಮಡದಿ ತಾ ಮು
ನ್ನೇನ ನೋಂತೆನೊ ಪತಿಯಗಲಿ ಘನ
ಕಾನನಕೆ ಗುರಿಯಾದೆನೆಂದಳು ತರುಣಿ ಬಿಸುಸುಯ್ದು

ಏನನೆಂಬೆನು = ಏನು ಹೇಳಲಿ; ತನ್ನ = ನನ್ನ; ಪುಣ್ಯದ ಹಾನಿಯನು = ಪುಣ್ಯದ ದಿನಗಳು ಕಳೆದು ಹೋದುದರ ಕುರಿತು?; ಚಿತ್ತವಿಸಿ ಕರುಣದಿ = ದಯೆಯಿಟ್ಟು ಆಲಿಸಬೇಕು; ಮಾನನಿಧಿಗಳು = ಗೌರವಾರ್ಹ ಹಿರಿಯರು; ಬಲ್ಲಿರೇ = ತಿಳಿದಿರುವಿರಲ್ಲವೇ; ನಳಚಕ್ರವರ್ತಿಯನು = ನಳಚಕ್ರವರ್ತಿಯನ್ನು; ಆ ನರೇಂದ್ರನ = ಆ ರಾಜಾಧಿರಾಜನ; ಮಡದಿ ತಾ = ಮಡದಿ ನಾನು; ಮುನ್ನೇನ = ಈ ಹಿಂದೆ ಏನು; ನೋಂತೆನೋ = ವ್ರತಾಚರಣೆ ಮಾಡಿದ್ದೆನೋ; ಪತಿಯಗಲಿ = ಪತಿಯನ್ನು ಅಗಲಿ; ಘನಕಾನನಕೆ = ಈ ಘೋರಾರಣ್ಯಕ್ಕೆ; ಗುರಿಯಾದೆನೆಂದಳು = ತುತ್ತಾದೆ ಎಂದಳು; ತರುಣಿ ಬಿಸುಸುಯ್ದು = ದಮಯಂತಿ ಚಿಂತಿತಳಾಗಿ ಬಿಸಿಯುಸಿರು ಹೊರಹಾಕುತ್ತ.

ನನ್ನ ಪುಣ್ಯದ ದಿನಗಳು ಕೈಜಾರಿ ಹೋದುದರ ಕುರಿತು ಏನೆಂದು ಹೇಳಲಿ? ತಾವು ಗೌರವಾನ್ವಿತ ತಪೋಧನರು. ನನ್ನ ಮಾತುಗಳನ್ನು ದಯಮಾಡಿ ಆಲಿಸಬೇಕು. ತಾವು ನಳಚಕ್ರವರ್ತಿಯನ್ನು ಬಲ್ಲಿರಲ್ಲವೇ? ಆ ರಾಜಾಧಿರಾಜನ ಮಡದಿ ನಾನು. ಈ ಹಿಂದಿನ ಜನ್ಮದಲ್ಲಿ ನಾನು ಮಾಡಿದ ಯಾವ ವ್ರತದ ಫಲವೋ ಏನೋ, ಈಗ ಪತಿಯನ್ನಗಲಿ ಈ ಘೋರ ಕಾನನದ ಪಾಲಾಗಿದ್ದೇನೆ ಎನ್ನುತ್ತ ದಮಯಂತಿಯು ದುಃಖದಿಂದ ಬಿಸಿಯುಸಿರನ್ನು ಹೊರಹಾಕಿದಳು.

36. ಭೂತಳವ ನಳನೃಪತಿ ದ್ಯೂತದಿ
ಸೋತು ಪುಷ್ಕರಗಿತ್ತು ಸತ್ಯದ
ನೀತಿ ತಪ್ಪದೆ ಬಂದು ಬನದಲಿ ತನ್ನನಗಲಿದನು
ಧಾತುಗುಂದದೆ ಪತಿಯ ಕಾಣದೆ
ಭೀತಿಯಲಿ ನಿಮ್ಮಡಿಯ ಕಂಡೆನು
ಭೂತದಯೆ ನಿಮಗುಂಟಲಾ ಸಲಹೆಂದಳಿಂದುಮುಖಿ

ಭೂತಳವ = ಭೂಮಿಯ ಅಧಿಪತ್ಯವನ್ನು; ನಳನೃಪತಿ = ನಳಮಹಾರಾಜನು; ದ್ಯೂತದಿ = ಜೂಜಿನಲ್ಲಿ; ಸೋತು = ಸೋತು, ಪುಷ್ಕರಗಿತ್ತು = ಪುಷ್ಕರನಿಗೆ ಇತ್ತು; ಸತ್ಯದ ನೀತಿ ತಪ್ಪದೆ ಬಂದು = ಸತ್ಯದ ದಾರಿಯನ್ನು ಬಿಡದೆ ಬಂದು; ಬನದಲಿ = ಈ ಕಾಡಿನಲ್ಲಿ; ತನ್ನನು + ಅಗಲಿದನು = ನನ್ನನ್ನು ಅಗಲಿಹೋದನು; ಧಾತುಗುಂದದೆ = ಬಲಹೀನಳಾಗದೆ; ಪತಿಯ ಕಾಣದೆ = ಪತಿಯ ಇರುವಿನ ಬಗ್ಗೆಯೇ ತಿಳಿಯದಾಗದೆ; ನಿಮ್ಮಡಿಯ = ನಿಮ್ಮ ಚರಣಗಳನ್ನು; ಕಂಡೆನು = ದರ್ಶನ ಮಾಡಿದ್ದೇನೆ; ಭೂತದಯೆ = ಎಲ್ಲ ಜೀವಿಗಳಲ್ಲೂ ಕರುಣೆಯೆಂಬುದು; ನಿಮಗುಂಟಲಾ = ನಿಮಗಿದೆಯಲ್ಲವೇ; ಸಲಹಿ + ಎಂದಳು + ಇಂದುಮುಖಿ = ನನ್ನನ್ನು ಕಾಪಾಡಿ ಎಂದಳು ದಮಯಂತಿ.

ಜೂಜಿನಲ್ಲಿ ನಳಮಹಾರಾಜನು ರಾಜ್ಯಾಧಿಪತ್ಯವನ್ನು ಪುಷ್ಕರನಿಗೆ ಸೋತು, ಪಣಕ್ಕಿಟ್ಟು ಮಾತಿಗೆ ತಪ್ಪದೆ ಸತ್ಯದ ದಾರಿಯನ್ನೇ ಹಿಡಿದು ಕಾಡಿಗೆ ಬಂದನು. ಇಲ್ಲಿ ನನ್ನನ್ನು ಅಗಲಿ ಬಿಟ್ಟುಹೋದನು. ಪತಿಯ ಕುರಿತು ಯಾವ ಸಂಗತಿಯೂ ತಿಳಿಯದಾಗಿ ಕಾಡಿನಲ್ಲಿ ಅಲೆಯುತ್ತಿರುವ ಸಂದರ್ಭದಲ್ಲಿ ನಿಮ್ಮ ದರ್ಶನವಾಯಿತು. ಕರುಣಾಮಯಿಗಳಾಗಿ ಸರ್ವಜೀವ ಜಂತುಗಳನ್ನೂ ಪೊರೆಯುವ ನೀವು ನನ್ನನ್ನು ಕಾಪಾಡಿ ಎಂದು ಭಿನ್ನವಿಸಿದಳು.

37. ನೆನೆದುದಂತಃಕರಣ ಕೇಳುತ
ಮುನಿಗಳೆಂದರು ತಾಯೆ ಶೋಕದಿ
ಕನಲಿ ಕಂಗೆಡಬೇಡ ನಿಜಪತಿರಾಜ್ಯಸಿರಿಸುತರು
ನಿನಗೆ ಬಂದಪರಿನ್ನು ಯೋಗದಿ

ಮನದಲರಿದೆವು ನಾವು ಅಂಜದಿ
ರೆನುತ ಪೇಳಿಯದೃಶ್ಯವಾದರು ಮುನಿಗಳೊಗ್ಗಿನಲಿ

ನೆನೆದುದಂತಃಕರಣ = ಮುನಿ ಸಮೂಹದ ಅಂತಃಕರಣವು ಕರಗಿ ಹೋಯಿತು; ಕೇಳುತ = ದಮಯಂತಿಯ ಮಾತುಗಳನ್ನು ಆಲಿಸುತ್ತ; ಮುನಿ ಗಳೆಂದರು = ಆ ತಾಪಸಿಗಳು ಹೇಳಿದರು; ತಾಯೆ = ತಾಯೀ; ಶೋಕದಿ ಕನಲಿ = ದುಃಖದಲ್ಲಿ ಧೈರ್ಯಗೆಡದಿರು; ಕಂಗೆಡಬೇಡ = ದಾರಿಗಾಣದೆ ಕಳವಳಿಸದಿರು; ನಿಜಪತಿರಾಜ್ಯಸಿರಿಸುತರು = ನಿನ್ನ ಪತಿಯೂ ರಾಜ್ಯವೂ ಸಿರಿಸಂಪತ್ತೂ ಸುತರೂ; ನಿನಗೆ = ನಿನ್ನಲ್ಲಿಗೆ; ಬಂದಪರಿನ್ನು = ಮತ್ತೆ ದೊರಕುವರು; ಯೋಗದಿ ಮನದಲರಿದೆವು = ಯೋಗ ದೃಷ್ಟಿಯಿಂದ ಇದನ್ನು ಅರಿತಿದ್ದೇವೆ; ನಾವು = ನಾವು; ಅಂಜದಿರೆನುತ = ಅಂಜದಿರು ಎಂದು; ಪೇಳಿ + ಅದೃಶ್ಯವಾದರು = ಹೇಳಿ ಕಣ್ಮರೆಯಾದರು; ಮುನಿಗಳೊಗ್ಗಿನಲಿ = ಆ ಮುನಿಗಳು ಗುಂಪಾಗಿ.

ದಮಯಂತಿಯ ದುಃಖದ ಮಾತುಗಳನ್ನು ಕೇಳಿ ಮುನಿ ಸಮೂಹದ ಮನಸ್ಸು ಕರಗಿತು. ಅವಳಿಗೆ ಸಮಾಧಾನದ ಮಾತುಗಳನ್ನು ಹೇಳಿದರು–‘‘ತಾಯೀ, ದುಃಖದ ಸಮಯದಲ್ಲಿ ಧೈರ್ಯಗೆಡದಿರು, ದಾರಿಗಾಣದೆ ಕಳವಳಿಸದಿರು. ನಿನ್ನ ಪ್ರಿಯಪತಿ ನಳಮಹಾರಾಜನೂ, ಅವನ ರಾಜ್ಯವೂ, ಅದೆಲ್ಲ ಸಿರಿಸಂಪತ್ತು, ನಿನ್ನ ಮಕ್ಕಳೂ ನಿನಗೆ ಮರಳಿ ದೊರಕುವುದು. ಇದನ್ನು ನಾವು ನಮ್ಮ ಯೋಗ ದೃಷ್ಟಿ ಯಿಂದ ಅರಿತಿದ್ದೇವೆ. ಅಂಜದಿರು’’ ಎಂದು ಹೇಳಿ ಅದೃಶ್ಯರಾದರು.

38. ಆ ತರುಣಿ ಬೆರಗಾಗಿ ಕನಸಿನ
ರೀತಿಯಾಯ್ತಕಟಕಟ ಮೌನಿ
ವ್ರಾತವೆತ್ತಲು ಸರಿದುದೋ ವಿಸ್ಮಯವಲಾಯೆನುತ
ಆ ತಳೋದರಿ ಪತಿಯ ಕಾಣದೆ
ಕಾತುರದಿ ಬರುತಿರಲು ಕಂಡರು
ನೂತನದ ಬೇಹಾರಿಗಳು ತೊಳಲುವ ನಿತಂಬಿನಿಯ

ಆ ತರುಣಿ = ದಮಯಂತಿಯು; ಬೆರಗಾಗಿ = ವಿಸ್ಮಿತಳಾಗಿ; ಕನಸಿನ = ಕನಸಿನಂತೆ; ರೀತಿ + ಆಯಿತು + ಅಕಟ + ಅಕಟ = ರೀತಿಯಲ್ಲಿ ನಡೆದು

ಹೋಯಿತಲ್ಲಾ ಆಹಾ!; ಮೌನಿವ್ರಾತವೆತ್ತಲು = ಮುನಿ ಸಮೂಹವು ಎತ್ತಕಡೆಗೆ; ಸರಿದುದೋ = ಹೋಯಿತೋ; ವಿಸ್ಮಯವಲಾಯೆನುತ = ಆಶ್ಚರ್ಯಕರ ವಾಗಿದೆಯಲ್ಲಾ ಎನ್ನುತ್ತ; ಆ ತಳೋದರಿ = ಆ ಸುಂದರಿ ದಮಯಂತಿಯು; ಪತಿಯ ಕಾಣದೆ = ಪತಿಯನ್ನರಸಿ ಕಾಣದೆ; ಕಾತುರದಿ = ಅವನನ್ನು ನೋಡಲಾಶಿಸಿ; ಬರುತಿರಲು = ಕಾಡಿನಲ್ಲಿ ಮುಂದು ಮುಂದಕ್ಕೆ ಬರುತ್ತಿರಲು; ಕಂಡರು = ಎದುರಾದರು; ನೂತನದ = ಅಪರಿಚಿತರಾದ; ಬೇಹಾರಿಗಳು = ವ್ಯಾಪಾರಿಗಳು; ತೊಳಲುವ = ಗಾಬರಿಗೊಂಡಿದ್ದ; ನಿತಂಬಿನಿಯ = ಸುಂದರಿಯನ್ನು.

ಇದ್ದಕ್ಕಿದ್ದಂತೆ ಅದೃಶ್ಯರಾದ ಮುನಿ ಸಮೂಹದ ರೀತಿಗೆ ವಿಸ್ಮಿತಳಾದ ದಮಯಂತಿಯು ಅಯ್ಯಯ್ಯೋ! ಇದೇನಿದು ಎಲ್ಲವೂ ಕನಸಿನಂತೆ ಭಾಸವಾಗುತ್ತಿದೆ ಎಂದು ಅಚ್ಚರಿಗೊಳ್ಳುತ್ತ, ನಳಮಹಾರಾಜನನ್ನರಸುತ್ತಾ ಕಾಡಿನಲ್ಲಿ ಗಾಬರಿಯಿಂದ ಮುಂದುವರಿಯುತ್ತಿರಲು ಅವಳಿಗೆ ವ್ಯಾಪಾರಿಗಳ ಗುಂಪೊಂದು ಎದುರಾಯಿತು.

39. ಆರಿವಳು ವನಲಕ್ಷ್ಮಿಯೋ ಸುರ
ನಾರಿಯೋ ಮಾರಾಂಗನೆಯೊ ಮದ
ನಾರಿಸತಿಯೋ ಸರಸತಿಯೊ ಮೇಣಸುರಮಾನಿನಿಯೊ
ಆರ ವನಿತೆಯೊ ಮಾಯರೂಪಿನ
ಭೂರಿಭೂತವೊ ತಿಳಿಯಲರಿದಿವ
ಳಾರೆನುತ ಭಯಗೊಂಡು ಓಡಿದರಲ್ಲಿ ಬಣಜಿಗರು

ಆರಿವಳು = ಯಾರಿವಳು; ವನಲಕ್ಷ್ಮಿಯೋ = ವನದೇವತೆಯೋ; ಸುರ ನಾರಿಯೋ = ದೇವತೆಯೋ; ಮಾರ + ಅಂಗನೆಯೋ = ಮಾರನ ಮಡದಿ ರತಿದೇವಿಯೋ; ಮದನ + ಅರಿ + ಸತಿಯೋ = ಮದನನ ವೈರಿಯಾದ ಶಿವನ ಮಡದಿ ಪಾರ್ವತಿಯೋ; ಸರಸತಿಯೋ = ಸರಸ್ವತಿಯೋ; ಮೇಣ್ + ಅಸುರ ಮಾನಿನಿಯೋ = ಅಥವಾ ರಾಕ್ಷಸ ಸ್ತ್ರೀಯೋ; ಆರ = ಯಾರ; ವನಿತೆಯೋ = ಪತ್ನಿಯೋ; ಮಾಯಾ ರೂಪಿನ = ಕಪಟವೇಷದ; ಭೂರಿಭೂತವೋ = ದೊಡ್ಡ ಪಿಶಾಚಿಯೋ; ತಿಳಿಯಲು + ಅರಿದು + ಇವಳು + ಆರು + ಎನುತ = ತಿಳಿಯ

ದಾಗಿದೆ ಇವಳು ಯಾರು ಎನ್ನುತ್ತ; ಭಯಗೊಂಡು = ಹೆದರಿ; ಓಡಿದರು + ಅಲ್ಲಿ = ಓಡತೊಡಗಿದರು ಅಲ್ಲಿಂದ; ಬಣಜಿಗರು = ವ್ಯಾಪಾರಿಗಳು.

ದುರ್ಗಮವಾದ ಆ ವನಾಂತರದೊಳಗೆ ಏಕಾಏಕಿ ಏಕಾಂಗಿಯಾಗಿ ಎದುರು ಬಂದ ರೂಪಸಿ ದಮಯಂತಿಯನ್ನು ಕಂಡ ಬಣಜಿಗ ಸಮೂಹಕ್ಕೆ ಅವಳು ಯಾರಿರಬಹುದೆಂಬ ಅರಿವಿಲ್ಲದೆ ದಿಗಿಲುಗೊಂಡು ಯೋಚಿಸುವಂತಾಯಿತು. ಯಾರಿ ವಳು? ವನದೇವತೆಯೋ? ದೇವತಾ ಸ್ತ್ರೀಯೋ? ಮನ್ಮಥನ ಮಡದಿ ರತೀ ದೇವಿಯೋ? ರಾಕ್ಷಸಿಯೋ ಅಥವಾ ಮನ್ಮಥನನ್ನು ದಹಿಸಿದ ಶಿವನ ಮಡದಿ ಪಾರ್ವತಿದೇವಿಯೋ? ಸರಸ್ವತಿಯೇ ಎದುರಾದಳೋ? ಅಥವಾ ಯಾವುದಾದರೂ ದೊಡ್ಡ ಭೂತವೇ ಈ ಕಪಟ ರೂಪದಲ್ಲಿ ಪ್ರತ್ಯಕ್ಷವಾಯಿತೋ? ಇವಳು ಯಾರೆಂ ಬುದು ತಿಳಿಯದಾಗಿದೆಯಲ್ಲ ಎಂದುಕೊಳ್ಳುತ್ತ ಆ ಬಣಜಿಗ ಸಮೂಹ ಹೆದರಿ ಓಡತೊಡಗಿತು.

40. ನೋಡಿದಳು ದಮಯಂತಿ ಭೀತಿಯ
ಲೋಡುತಿಹ ಬೀಡಿಕೆಯ ವೈಶ್ಯರ
ಹೇಡಿತನವನು ಕಂಡು ನಸುನಗುತಲ್ಲಿಗೈತಂದು
ಓಡಲೇತಕೆ ನಿಮಗೆ ಉಪಹತಿ
ಮಾಡುವಳು ತಾನಲ್ಲ ಜಗಕತಿ
ರೂಢಿಸಿದ ನಳನೃಪನ ಸತಿ ತಾನೆಂದಳಿಂದುಮುಖಿ

ನೋಡಿದಳು ದಮಯಂತಿ = ಈ ದೃಶ್ಯವನ್ನು ದಮಯಂತಿ ಗಮನಿಸಿದಳು; ಭೀತಿಯಲಿ + ಓಡುತಿಹ = ಹೆದರಿ ಪಲಾಯನ ಮಾಡುತ್ತಿರುವ; ಬೀಡಿಕೆಯ = ಬಿಡಾರ ಹೂಡಿದ್ದ; ವೈಶ್ಯರ = ವ್ಯಾಪಾರಿಗಳ; ಹೇಡಿತನವನು = ಪುಕ್ಕಲುತನವನ್ನು; ಕಂಡು = ನೋಡಿ; ನಸುನಗುತ + ಅಲ್ಲಿಗೆ + ಐತಂದು = ಮುಗುಳುನಗುತ್ತ ಅವರಲ್ಲಿಗೆ ಬಂದು; ಓಡಲು + ಏತಕೆ = ಓಡುವುದು ಏಕೆ; ನಿಮಗೆ ಉಪಹತಿ = ನಿಮಗೆ ತೊಂದರೆ; ಮಾಡುವಳು ತಾನಲ್ಲ = ನಾನು ತೊಂದರೆ ಮಾಡುವಳಲ್ಲ; ಜಗಕತಿ ರೂಢಿಸಿದ = ಜಗತ್ತಿನಲ್ಲಿ ಅತ್ಯಂತ ಪ್ರಸಿದ್ಧನಾದ;

ನಳನೃಪನ ಸತಿ = ನಳಚಕ್ರವರ್ತಿಯ ಪತ್ನಿ; ತಾನೆಂದಳಿಂದುಮುಖಿ = ನಾನು ಎಂದಳು.

ಕಾಡಿನಲ್ಲಿ ಬಿಡಾರ ಹೂಡಿದ್ದ ಬಣಜಿಗರ ಸಮೂಹವು ಅಂಜಿ ಪಲಾಯನ ಮಾಡುವ ಹವಣಿಕೆಯಲ್ಲಿದ್ದುದನ್ನು ದಮಯಂತಿ ಗಮನಿಸಿದಳು. ನಸುನಗುತ್ತ ಅವರನ್ನು ಸಮೀಪಿಸಿ ನೀವು ಅಂಜಿ ಓಡುವುದೇತಕ್ಕೆ? ನಾನು ನಿಮಗೆ ತೊಂದರೆ ಮಾಡುವಂಥವಳಲ್ಲ. ನಾನು ಜಗತ್ಪ್ರಸಿದ್ಧನಾದ ನಳಚಕ್ರವರ್ತಿಯ ಪತ್ನಿ ಎಂದು ತನ್ನನ್ನು ಪರಿಚಯಿಸಿಕೊಂಡಳು.

41. ವೀರಸೇನನ ತನಯ ನಳನೃಪ
ಧಾರಿಣಿಯನುರೆ ಸೋತು ಕಾರ್ಯದ
ಕಾರಣದಿ ನಡೆತಂದನಡವಿಗೆ ತನ್ನನಗಲಿದನು
ದಾರಿದಪ್ಪಿದೆನಿಲ್ಲಿ ನಿಮ್ಮನು
ಸೇರಿದೆನು ಪರದೇಶಿ ತನಗೊಂ
ದೂರ ತೋರಿರೆ ನೀವೆನುತ ತುಂಬಿದಳು ಕಂಬನಿಯ

ವೀರಸೇನನ ತನಯ = ನಿಷಧರಾಜ ವೀರಸೇನನ ಮಗ; ನಳನೃಪ = ನಳಮಹಾರಾಜನು; ಧಾರಿಣಿಯನು + ಉರೆ + ಸೋತು = ತನ್ನ ಸಾಮ್ರಾಜ್ಯವನ್ನೂ ಸಂಪೂರ್ಣವಾಗಿ ಕಳೆದುಕೊಂಡು; ಕಾರ್ಯದ ಕಾರಣದಿಂದ = ಒಪ್ಪಿ ಕೊಂಡ ಕಾರ್ಯಬಾಹುಳ್ಯದ ಕಾರಣದಿಂದ; ನಡೆತಂದನು + ಅಡವಿಗೆ = ಕಾಡಿಗೆ ಬಂದನು; ತನ್ನನಗಲಿದನು = ತನ್ನನ್ನು ಬಿಟ್ಟು ಅಗಲಿದ್ದಾನೆ; ದಾರಿ + ತಪ್ಪಿದೆನು + ಇಲ್ಲಿ = ಅಡವಿಯಲ್ಲಿ ದಾರಿ ಕಾಣದಾದೆನು ಇಲ್ಲಿ; ನಿಮ್ಮನು ಸೇರಿದೆನು = ನಿಮ್ಮನ್ನು ಭೇಟಿಯಾದೆ; ಪರದೇಶಿ = ದೇಶಕೋಶಗಳಿಲ್ಲದೆ ಅನಾಥೆಯಾಗಿದ್ದೇನೆ; ತನಗೆ + ಒಂದು + ಊರ = ನನಗೆ ಯಾವುದಾದರೊಂದು ಊರನ್ನು; ತೋರಿರೆ = ತೋರಿರಿ; ನೀವು + ಎನುತ = ನೀವು ಎನ್ನುತ್ತ; ತುಂಬಿದಳು ಕಂಬನಿಯ = ದುಃಖದಿಂದ ಕಣ್ತುಂಬಿಕೊಂಡಳು.

ವಣಿಕ ಸಮೂಹದೊಂದಿಗೆ ದಮಯಂತಿಯು ತನ್ನ ಪ್ರಸ್ತುತ ಸ್ಥಿತಿಯನ್ನು ಕುರಿತು ಹೇಳಿಕೊಂಡಳು. ನಿಷಧರಾಜನಾದ ವೀರಸೇನನ ಮಗ, ವೀರ

ನಳಚಕ್ರವರ್ತಿಯು ಜೂಜಿನಲ್ಲಿ ಸೋತು ತನ್ನ ಸಮಸ್ತ ಸಾಮ್ರಾಜ್ಯವನ್ನು ಕಳೆದುಕೊಂಡು, ಪಂಥದಲ್ಲಿ ಮುನ್ನವೇ ಒಪ್ಪಿಕೊಂಡ ಪ್ರಕಾರ, ವನಾಂತರಕ್ಕೆ ಬಂದನು. ಮಡದಿಯಾದ ನನ್ನನ್ನು ಕಾಡಿನಲ್ಲೇ ಬಿಟ್ಟು ಅಗಲಿದನು. ಅಡವಿಯಲ್ಲಿ ದಾರಿ ಕಾಣದೆ ಅಲೆಯುತ್ತಿರುವ ಸಂದರ್ಭದಲ್ಲಿ ನಿಮ್ಮನ್ನು ಭೇಟಿಯಾಗಿರುವೆ. ದೇಶಕೋಶಗಳಿಲ್ಲದೆ, ಜೊತೆಯ ಜನರಿಲ್ಲದೆ ಅನಾಥಳಾಗಿದ್ದೇನೆ ಯಾವುದಾದ ರೊಂದು ಊರನ್ನು ತೋರಿದರೆ ನೆಲೆಗಾಣಬಹುದು ಎಂದು ಅವರಲ್ಲಿ ಕಂಬನಿ ದುಂಬಿ ಕೇಳಿಕೊಂಡಳು.

42. ತಾಯೆ ನಿಮ್ಮ ಪದಾಬ್ಜದರ್ಶನ
ವಾಯಿತೆಮಗಿಂದಿನಲಿ ಧನ್ಯರು
ಈಯವಸ್ಥೆಗೆ ತಂದುದೇ ವಿಧಿ ನಿಮ್ಮನೆನುತೆರಗಿ
ನೋಯದಿರಿಯಿದೆ ಚೈದ್ಯಪುರವೆಂ
ದಾ ಯುವತಿಯೊಡಗೊಂಡು ಬರುತಿರೆ
ತೋಯಜಾಪ್ತನು ಪಶ್ಚಿಮಾಂಬುಧಿಗಿಳಿದನೊಲವಿನಲಿ

ತಾಯೇ = ತಾಯೀ; ನಿಮ್ಮ = ನಮಗೆ ನಿಮ್ಮ; ಪದ + ಅಬ್ಜ + ದರ್ಶನವು + ಆಯಿತು + ಎಮಗೆ + ಇಂದು = ಪಾದ ಪದ್ಮಗಳ ದರ್ಶನವು ಆಯಿತು ಇಂದು ನಮಗೆ; ಧನ್ಯರು = ಧನ್ಯರಾದೆವು; ಈಯವಸ್ಥೆಗೆ = ಈ ರೀತಿಯ ದುರವಸ್ಥೆಗೆ; ತಂದುದೇ ವಿಧಿ = ತಂದಿಟ್ಟಿತೇ ವಿಧಿಯು; ನಿಮ್ಮನು + ಎನುತ + ಎರಗಿ = ಎಂದು ಸಂತಾಪಿಸಿ, ಅವಳಿಗೆ ಬಿದ್ದು ನಮಸ್ಕರಿಸಿ; ನೋಯದಿರಿ + ಇದೇ = ವ್ಯಸನ ಪಡುವ ಅಗತ್ಯವಿಲ್ಲ, ಇದೇ; ಚೈದ್ಯಪುರವೆಂದಾ = ಚೈದ್ಯಪುರವು ಎಂದು ಆ; ಯುವತಿಯೊಡಗೊಂಡು = ದಮಯಂತಿಯನ್ನು ಕರೆದುಕೊಂಡು; ಬರುತಿರೆ= ಬರುತ್ತಿರಲು; ತೋಯಜಾಪ್ತನು = ಕಮಲದ ಆಪ್ತ ಸಖನೆನಿಸಿದ ಸೂರ್ಯನು; ಪಶ್ಚಿಮ + ಅಂಬುಧಿಗೆ + ಇಳಿದನು + ಒಲವಿನಲಿ = ತನ್ನ ಕರ್ತವ್ಯ ಪ್ರೀತಿ ಯಿಂದಲೇನೋ ಎಂಬಂತೆ ಪಶ್ಚಿಮ ಸಮುದ್ರಕ್ಕೆ ಇಳಿದನು.

ದುಃಖಿತಳಾಗಿದ್ದ ದಮಯಂತಿಯನ್ನು ಕುರಿತು ಆ ವಣಿಕ ಸಮೂಹವು ಆಪ್ತವಾಗಿ ವರ್ತಿಸಿತು. ತಾಯೇ, ನಿಮ್ಮ ಪಾದಕಮಲಗಳ ದರ್ಶನದಿಂದ ಇಂದು

ನಾವು ಧನ್ಯರಾದೆವು. ತಮ್ಮಂಥವರನ್ನು ವಿಧಿಯು ಈ ದುರವಸ್ಥೆಗೆ ತಂದಿತೇ ಎಂದು ಸಂತಾಪಿಸುತ್ತ ಅವಳ ಪಾದಗಳಿಗೆ ಗೌರವದಿಂದ ನಮಸ್ಕರಿಸಿತು. 'ಇನ್ನು ನೋಯದಿರಿ, ನೋಡಿ, ಇದುವೇ ಚೈದ್ಯಪುರ' ಎಂದು ಅವಳನ್ನು ಕರೆತಂದು ಚೈದ್ಯಪುರದತ್ತ ಬರುತ್ತಿರುವ ಹೊತ್ತಿಗೆ ಸಂಜೆಯಾಯಿತು. ಇದೇ ತನ್ನ ಪ್ರೀತಿಯ ಸ್ಥಳವೇನೋ ಎಂಬಂತೆ ಕಮಲದ ಪ್ರಿಯಸಖನಾದ ಸೂರ್ಯನು ಪಶ್ಚಿಮ ಸಮುದ್ರದಲ್ಲಿ ಇಳಿದನು.

43. ಹಗಲು ಸವೆದುದು ಹೊಂಬಿಸಿಲು ನೆರೆ
ದೆಗೆದುದತಿವೇಗದಲಿ ಕತ್ತಲೆ
ಬಿಗಿದುದವನೀತಳವ ಪೆಟ್ಟಿಗೆ ಮುಚ್ಚಿದಂದದಲಿ
ಸುಗುಣೆ ದಮಯಂತಿಯಳ ನೋಡಲು
ಸೊಗಸಿ ಬಂದನಿಮಿಷರವೋಲ್ ತಾ
ರೆಗಳು ಮೂಡಿದುವಂಬರದಿ ಪ್ರಜ್ವಲಿಪ ಕಾಂತಿಯಲಿ

ಹಗಲು ಸವೆದುದು = ಹಗಲು ಕ್ಷೀಣಿಸತೊಡಗಿತು; ಹೊಂಬಿಸಿಲು = ಹೊನ್ನ ವರ್ಣದ ಬಿಸಿಲು; ನೆರೆ + ತೆಗೆದುದು + ಅತಿ ವೇಗದಲಿ = ಸಂಪೂರ್ಣ ಮರೆಯಾಗಿ ಹೋಯಿತು ಬಹಳ ವೇಗವಾಗಿ; ಕತ್ತಲೆ = ಇರುಳು ಬಿಗಿದು ದವನೀತಳವ = ಕವಿದುಕೊಂಡಿತು ಭೂಮಿಯನ್ನು; ಪೆಟ್ಟಿಗೆ ಮುಚ್ಚಿದಂದದಲಿ = ತೆರೆದ ಪೆಟ್ಟಿಗೆಯನ್ನು ಮುಚ್ಚಿದಂತೆ; ಸುಗುಣೆ = ಸದ್ಗಣಶೀಲಳಾದ; ದಮಯಂತಿ ಯಳ ನೋಡಲು = ದಮಯಂತಿಯನ್ನು ಕಾಣಲು ಬಂದಂತೆ; ಸೊಗಸಿ = ಬೆಡಗಿನಿಂದ ಚೆಲುವಾಗಿ; ಬಂದ + ಅನಿಮಿಷರವೋಲ್ = ಬಂದಂತಹ ದೇವತೆಗಳಂತೆ; ತಾರೆಗಳು = ನಕ್ಷತ್ರಗಳು; ಮೂಡಿದುವು + ಅಂಬರದಿ = ಆಕಾಶ ದಲ್ಲಿ ಮೂಡಿದುವು; ಪ್ರಜ್ವಲಿಪ ಕಾಂತಿಯಲ್ಲಿ = ಥಳಥಳಿಸುವ ಪ್ರಭೆಯಲ್ಲಿ.

ಕ್ರಮೇಣ, ಹಗಲು ಕ್ಷೀಣಿಸುತ್ತ, ಸುತ್ತಲೆಲ್ಲ ಹರಡಿದ್ದ ಹೊನ್ನವರ್ಣದ ಬಿಸಿಲು ವೇಗವಾಗಿ ಹಿಂದೆ ಸರಿದು, ತೆರೆದ ಪೆಟ್ಟಿಗೆಯು ಮುಚ್ಚಿಹೋದಂತೆ ಕತ್ತಲು ಭೂಮಂಡಲವನ್ನು ಆವರಿಸಿಕೊಂಡಿತು. ಸದ್ಗುಣಶೀಲೆಯಾದ ದಮಯಂತಿಯನ್ನು

ಕಾಣಲು ದೇವತೆಗಳು ಚೆಲುವಾಗಿ ಬೆಡಗಿನಿಂದ ಬಂದು ನೆರೆದರೇನೋ ಎಂಬಂತೆ ಬಾನಂಗಳದಲ್ಲಿ ನಕ್ಷತ್ರಗಳು ಥಳಥಳಿಸುತ್ತ ಮೂಡಿದುವು.

ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ವಿಶೇಷವಾಗಿ ಕಂಡುಬರುವ ದೃಶ್ಯಗಳೆಂದರೆ ಮಾನವ ಪ್ರಕೃತಿ ಮತ್ತು ಬಾಹ್ಯ ಪ್ರಕೃತಿಗಳು ಪರಸ್ಪರ ಸ್ಪಂದಿಸುವ ಪ್ರಸಂಗಗಳು. ಕಾವ್ಯ ನಾಯಕಿಯರ ದುಃಖ, ಸಂತೋಷ, ಶೃಂಗಾರ ಭಾವಗಳಲ್ಲಿ ಪ್ರಕೃತಿಯು ತಾನೂ ಪಾಲ್ಗೊಂಡು ಸ್ಪಂದಿಸುವ ಚಿತ್ರಗಳು ಹಲವಾರು. ಸಾಮಾಜಿಕ, ಸಾಂಸ್ಕೃತಿಕ, ಪ್ರಾಕೃತಿಕ ಸನ್ನಿವೇಶಗಳು ಮನುಷ್ಯನ ಸಂವೇದನೆಗಳಿಗೆ ಪೋಷಕಾಂಶಗಳಾಗಿ ಮೈದೆರೆಯುವುದು ಕಾವ್ಯದ ಭಾವಮೌಲ್ಯವನ್ನು ದುಪ್ಪಟ್ಟುಗೊಳಿಸುತ್ತವೆ ಎಂಬುದು ಕವಿಯ ಚಿಂತನೆ.

44. ಅವನಿಪತಿ ಕೇಳ್ ವೈಶ್ಯಕುಲಸಂ
ಭವರು ಹಾಯ್ಕಿದರಲ್ಲಿ ಗೂಡಾ
ರವನು ಬಿಟ್ಟರು ಪಾಳೆಯವ ಮಲಗಿದರು ರಾತ್ರಿಯಲಿ
ಅವಧಿ ಬಂದುದನೇನನೆಂಬೆನು
ಕವಿದು ಕಾಡಾನೆಗಳು ಮಡುವಿಗೆ
ತವಕದಿಂ ನೀರಡಿಸಿ ಬಂದುದು ಸಿರಿಗಳಂದದಲಿ

ಅವನಿಪತಿ ಕೇಳ್= ಭೂಪಾಲನಾದ ಧರ್ಮರಾಯನೇ ಕೇಳು; ವೈಶ್ಯ ಕುಲ ಸಂಭವರು = ವೈಶ್ಯಕುಲದಲ್ಲಿ ಹುಟ್ಟಿದವರಾದ ವಣಿಕರು; ಹಾಯ್ಕಿದರಲ್ಲಿ = ಹಾಕಿದರು ಅಲ್ಲಿ; ಗೂಡಾರವನು = ಗೂಡಾರವನ್ನು ಹೊಡೆದು ತಂಗಲು ಸಿದ್ಧಮಾಡಿಕೊಂಡರು; ಬಿಟ್ಟರು ಪಾಳೆಯವ = ಶಿಬಿರವನ್ನು ರಚಿಸಿಕೊಂಡರು; ಮಲಗಿದರು ರಾತ್ರಿಯಲಿ = ಆ ರಾತ್ರಿಯಲ್ಲಿ ಅಲ್ಲಿಯೇ ಮಲಗಿದರು; ಅವಧಿ = ಕಷ್ಟದ ಕಾಲವು; ಬಂದುದನೇನನೆಂಬೆನು = ಬಂದಡಸಿತು ಅದನ್ನು ಏನೆಂದು ವರ್ಣಿಸಲಿ; ಕವಿದು ಕಾಡಾನೆಗಳು = ಕಾಡಾನೆಗಳು ಹಿಂಡು ಹಿಂಡಾಗಿ ಬಂದುವು; ಮಡುವಿಗೆ = ನೀರ್ದಾಣವನ್ನು ಅರಸಿ; ತವಕದಿಂ ನೀರಡಿಸಿ = ಬಾಯಾರಿಕೆಯಿಂದ ಆತುರಾತುರವಾಗಿ; ಬಂದುದು = ಬಂದುವು; ಸಿರಿಗಳಂದದಲಿ = ವೈಭವಪೂರ್ಣವಾಗಿ ಚೆಲುವನ್ನು ಬೀರುತ್ತ.

ಧರ್ಮರಾಯನೇ ಕೇಳು, ದಮಯಂತಿಗೆ ಎದುರಾದ ಬಣಜಿಗರು ಅದಾಗಲೇ ಇರುಳು ಅಡರಿದ ಕಾರಣ ಕಾಡಿನಲ್ಲಿಯೇ ಆ ರಾತ್ರಿಯನ್ನು ಕಳೆಯಲು ಬೀಡುಬಿಡಲು ನಿಶ್ಚಯಿಸಿ ಗುಡಾರವನ್ನು ಸಿದ್ಧಪಡಿಸಿಕೊಂಡು ಮಲಗಿದರು. ಆದರೆ ಆಪತ್ತು ಅವರೆದುರೇ ಬಂದಿತು. ಅದನ್ನಾದರೂ ಏನೆಂದು ವರ್ಣಿಸಲಿ? ಕಾಡಾನೆಗಳು ನೀರಿನ ತಾಣವನ್ನು ಅರಸಿ ಬಾಯಾರಿಕೆಯಿಂದ ಆತುರಾತುರವಾಗಿ ಅಲ್ಲಿಗೆ ಬಂದು ಮುತ್ತಿಕೊಂಡವು. ಆ ವೈಭವದ ಸಿರಿಯನ್ನು ಹೇಗೆ ವರ್ಣಿಸಲಿ ಎಂದನು ರೋಮಶ ಮುನಿ.

45. ಮುರಿದು ತರುಗಳನಿಡುತ ಮೆಳೆಗಳ
ನೊರಸಿ ಮೆಟ್ಟುತ ಕೋಡಿನಲಿ ಬಲು
ಮೊರಡಿಗಳ ಕಿತ್ತಿಡುತ ಸೊಂಡಿಲ ತೂಗಿ ಮದವೇರಿ
ಕರಿಗಳೈತರೆ ಕಂಡು ಭೀತಿಯೊ
ಳಿರದೆ ಹಾಯ್ದರು ಕೆಲವರು ಧೈರ್ಯದೊ
ಳುರುಬಿ ನಿಂದರು ಸಬಳದಲಿ ಹೊಕ್ಕಿರಿದು ಕಾದಿದರು

ಮುರಿದು = ಮುರಿದು ಹಾಕಿ; ತರುಗಳನು + ಇಡುತ = ಮರಗಳನ್ನು ಬಿಸಾಡುತ್ತ; ಮೆಳೆಗಳನು + ಒರಸಿ = ಗಿಡ ಬಿದಿರು ಇತ್ಯಾದಿ ಪೊದರುಗಳನ್ನು ಹುಡಿಗಟ್ಟಿ ಒರೆಸಿ ಹಾಕಿದಂತೆ; ಮೆಟ್ಟುತ = ತುಳಿದು ಹಾಕುತ್ತ; ಕೋಡಿನಲಿ = ದಂತಗಳಿಂದ; ಬಲುಮೊರಡಿಗಳ = ದೊಡ್ಡ ದೊಡ್ಡ ಕಲ್ಲು ದಿಣ್ಣೆಗಳನ್ನು; ಕಿತ್ತಿಡುತ = ಬುಡಸಮೇತ ಕಿತ್ತಿಡುತ್ತ; ಸೊಂಡಿಲ ತೂಗಿ = ಸೊಂಡಿಲನ್ನು ಅತ್ತಿತ್ತ ತೂಗಾಡಿಸುತ್ತ; ಮದವೇರಿ = ಮದೋನ್ಮತ್ತವಾಗಿ; ಕರಿಗಳು + ಐತರೆ = ಆನೆಗಳು ಬರಲು; ಕಂಡು = ಅವುಗಳನ್ನು ನೋಡಿ; ಭೀತಿಯೊಳಿರದೆ = ಭಯಭೀತರಾಗಿ ಅಲ್ಲಿರದೆ; ಹಾಯ್ದರು = ಓಡಿಹೋದರು; ಕೆಲವರು = ಕೆಲವರು; ಧೈರ್ಯದೊಳುರುಬಿ = ಧೈರ್ಯದಿಂದ ಅವುಗಳನ್ನೆದುರಿಸಿ; ನಿಂದರು = ಅಲ್ಲಿಯೇ ಉಳಿದರು; ಸಬಳದಲಿ = ಭಲ್ಲೆಗಳನ್ನು ಹಿಡಿದು; ಹೊಕ್ಕಿರಿದು = ಆನೆಗಳ ಹಿಂಡಿನ ನಡುವೆ ಹೊಕ್ಕು ತಿವಿದು; ಕಾದಿದರು = ಅವುಗಳೊಂದಿಗೆ ಹೋರಾಡಿದರು.

ಆನೆಗಳ ಹಿಂಡು ನೀರಡಿಕೆಯಿಂದ ಬಂದು, ಆ ಕಾಡಿನಲ್ಲಿದ್ದ ಮರಗಳನ್ನೆಲ್ಲ ಮುರಿದು ಬಿಸಾಡುತ್ತ, ಬಿದಿರು ಮೆಳೆಗಳನ್ನು ಗಿಡ ಪೊದರುಗಳನ್ನೂ ತುಳಿದು ಹುಡಿಗಟ್ಟಿ ಒರೆಸಿಹಾಕುತ್ತ, ತಮ್ಮ ದಂತಗಳಿಂದ ಅಲ್ಲಿದ್ದ ದೊಡ್ಡ ದೊಡ್ಡ ಕಲ್ಲುದಿಣ್ಣೆಗಳನ್ನು ಕಿತ್ತು ಹಾಕುತ್ತ, ಮದೋನ್ಮತ್ತವಾಗಿ ತಮ್ಮ ಸೊಂಡಿಲುಗಳನ್ನು ಆಚೀಚೆ ತೂಗಾಡಿಸುತ್ತ ಬರುತ್ತಿರುವುದನ್ನು ಕಂಡ ಬಣಜಿಗರಲ್ಲಿ ಹಲವರು ಅಲ್ಲಿಂದ ಭಯಭೀತರಾಗಿ ಓಡಿ ಹೋದರು. ಮತ್ತೆ ಕೆಲವರು ತಮ್ಮಲ್ಲಿದ್ದ ಈಟಿ ಭರ್ಜಿಗಳನ್ನು ಹಿಡಿದು ಆನೆಗಳ ಹಿಂಡನ್ನು ಹೊಕ್ಕು ತಿವಿಯುತ್ತ ಅವುಗಳೊಂದಿಗೆ ಹೋರಾಡಿದರು.

46. ತೂಳಿದುವು ಮದಕರಿಗಳವರನು
ಸೀಳಿ ಹಾಯ್ದುವು ಕೆಲರ ಮುಮ್ಮೊನೆ
ಯಾಳು ಕವಿದುದು ಹೊಕ್ಕು ಕಾದಿದರತುಳಭುಜಬಲರು
ತಾಳಬಲ್ಲರೆ ಕೆಲರು ಕರಿಗಳ
ದಾಳಿಗಿದಿರೇ ಮುರಿದು ಹಾಯ್ದರು
ಹೇಳಲೇನದನರಸ ತೆಗೆದೋಡಿದರು ದೆಸೆದೆಸೆಗೆ

ತೂಳಿದುವು = ಅಟ್ಟಿಸಿಕೊಂಡು ಹೋಗಿ ಮೇಲೆ ಬಿದ್ದುವು; ಮದಕರಿಗಳು + ಅವರನು = ಆ ಮದ್ದಾನೆಗಳು ಅವರನ್ನು; ಸೀಳಿ ಹಾಯ್ದುವು ಕೆಲರ = ಕೆಲವರನ್ನು ತಮ್ಮ ದಂತಗಳಿಂದ ಸೀಳಿ ಮುಂದೋಡಿದುವು; ಮುಮ್ಮೊನೆಯಾಳು = ಎದುರು ಭಾಗದಲ್ಲಿದ್ದ ವೀರರು; ಕವಿದುದು = ಮುತ್ತಿಕೊಂಡರು; ಹೊಕ್ಕು = ಆನೆಗಳ ಸಮೂಹದ ನಡುವೆ ಹೊಕ್ಕು; ಕಾದಿದರು + ಅತುಳ + ಭುಜಬಲರು = ಹೋರಾಡಿದರು ಅಪಾರವಾದ ತೋಳ್ಬಲವುಳ್ಳವರು; ತಾಳಬಲ್ಲರೆ = ಆನೆಗಳ ಬಲವನ್ನು ಅವರಾದರೂ ತಾಳಿಕೊಳ್ಳಬಲ್ಲರೇ?; ಕೆಲರು = ಕೆಲವರು; ಕರಿಗಳ = ಆನೆಗಳ; ದಾಳಿಗಿದಿರೇ = ದಾಳಿಗೆ ಎದುರೆದುರೇ; ಮುರಿದು = ಹೋರಾಡುವುದನ್ನು ಬಿಟ್ಟು; ಹಾಯ್ದರು = ಓಡಿಹೋದರು; ಹೇಳಲೇನದನರಸ = ಆ ದೃಶ್ಯವನ್ನು ಏನೆಂದು ವರ್ಣಿಸಲಿ?; ತೆಗೆದೋಡಿದರು = ಹಿಮ್ಮೆಟ್ಟಿ ಓಡಿದರು; ದೆಸೆದೆಸೆಗೆ = ದಿಕ್ಕಾಪಾಲಾಗಿ.

ತಮ್ಮೊಂದಿಗೆ ಕಾದಾಡಲು ಬಂದ ಬಣಜಿಗ ವೀರರನ್ನು ಆನೆಗಳ ಹಿಂಡು ಅಟ್ಟಿಸಿಕೊಂಡು ಹೋಗಿ ಮೇಲೆ ಬಿದ್ದುವು. ಕೆಲವರನ್ನು ಆ ಮದ್ದಾನೆಗಳು ತಮ್ಮ

ದಂತಗಳಿಂದ ಸೀಳಿ ಹಾಕಿ ಮುಂದೋಡಿದುವು. ಆನೆಗಳ ಎದುರುಬಿದ್ದ ವೀರರು ಅವುಗಳನ್ನು ಮುತ್ತಿಕೊಂಡರು. ಅವರೇನೋ ಅಪಾರ ತೋಳ್ಬಲವುಳ್ಳವರಾಗಿದ್ದರೂ ಆನೆಗಳ ಬಲವನ್ನು ತಾಳಿಕೊಳ್ಳಲಾಗುವುದೇನು? ಅವುಗಳನ್ನು ಎದುರಿಸಿ ಹೋರಾಡುವುದನ್ನು ಬಿಟ್ಟು ಓಡಿಹೋದರು. ಆ ದೃಶ್ಯವನ್ನೇನು ಹೇಳಲಿ ಅರಸನೇ, ಬಣಜಿಗರ ವೀರ ಸಮೂಹ ಅಲ್ಲಿಂದ ಹಿಮ್ಮೆಟ್ಟಿ ದಿಕ್ಕಾಪಾಲಾಗಿ ಓಡಿಹೋಯಿತು.

47. ತರಹರಿಸಿ ನಿಲಲರಿದು ಕರಿಗಳ
ಉರುಬು ಘನಪಿಟ್ಟಣಿಸಿ ಕೊಲುತಿದೆ
ಹರಣವನು ಹೋರಾಡಲೇಕೆಂದುಳಿದ ಪಟುಭಟರು
ತೆರಳಿತಲ್ಲಿಯದಲ್ಲಿ ವಾಣಿ
ಜ್ಯರು ಮುರಿದು ಬರೆ ಕಾಣಿತಾ ವೈ
ಶ್ಯರಿಗಧಿಪ ಚಿಂತಿಸಿದ ಹದನೇನೆಂದು ಮನದೊಳಗೆ

ತರಹರಿಸಿ = ನಿಧಾನಿಸಿ ತಾಳ್ಮೆಯಿಂದ; ನಿಲಲರಿದು = ನಿಲ್ಲಲು ಸಾಧ್ಯವಾಗದೆ; ಕರಿಗಳ = ಮದ್ದಾನೆಗಳ; ಉರುಬು = ರಭಸವು; ಘನಪಿಟ್ಟಣಿಸಿ = ತೀವ್ರವಾಗಲು; ಕೊಲುತಿದೆ ಹರಣವನು = ಅವರ ಪ್ರಾಣವನ್ನು ತೆಗೆಯುತ್ತಿರಲು; ಹೋರಾಡಲೇಕೆಂದುಳಿದ = ಅವುಗಳನ್ನು ಎದುರಿಸುವುದೇಕೆ ಎಂದು ಅಲ್ಲಿ ಅಳಿದುಳಿದಿದ್ದ; ಪಟುಭಟರು = ವೀರ ಬಣಜಿಗರು; ತೆರಳಿತಲ್ಲಿಯದಲ್ಲಿ = ಅಲ್ಲಿಂದ ತೆರಳಿದರು; ವಾಣಿಜ್ಯರು = ಆ ವಣಿಕರು; ಮುರಿದು ಬರೆ = ಹಿಂದಿರುಗಿ ಓಡಿ ಬರಲು; ಕಾಣಿ = ಕಂಡು; ತಾನು ವೈಶ್ಯರಿಗಧಿಪ = ಆ ವೈಶ್ಯ ಸಮೂಹದ ಮುಖ್ಯನು; ಚಿಂತಿಸಿದ = ಯೋಚನಾಪರನಾದನು; ಹದನೇನೆಂದು = ಮುಂದಿನ ಕ್ರಮವೇನು ಎಂದು; ಮನದೊಳಗೆ = ಮನಸ್ಸಿನೊಳಗೇ.

ಇನ್ನು ತಾಳ್ಮೆಯಿಂದ ಅಲ್ಲಿಯೇ ಇರಲು ಸಾಧ್ಯವಾಗಲಿಲ್ಲ ಆ ಬಣಜಿಗ ಸಮೂಹಕ್ಕೆ. ಮದ್ದಾನೆಗಳು ಅತ್ಯಂತ ರಭಸದಿಂದ ಆಕ್ರಮಣ ಮಾಡಿ ಪ್ರಾಣ ತೆಗೆಯುತ್ತಿದ್ದುದರಿಂದ ಇನ್ನು ಇವುಗಳನ್ನು ಎದುರಿಸುವುದೇಕೆ ಎಂದುಕೊಂಡ ಆ ವಣಿಕ ವೀರರು ಅಲ್ಲಿಂದ ತೆರಳಿದರು. ಅವರು ಹಿಂದಿರುಗಿದುದನ್ನು ಕಂಡ ಅವರ

ಮುಖ್ಯಸ್ಥನು ಇನ್ನು ಮುಂದಿನ ಹೆಜ್ಜೆ ಏನು ಎಂದು ಮನಸ್ಸಿನೊಳಗೆ ಯೋಚನಾ ಪರನಾದನು.

48. ಅಮ್ಮ ಕೇಳೀ ಮದಗಜಂಗಳು
ನಮ್ಮ ಕೊಲುತಿವೆ ಹದನ ಕಾಣೆನು
ನಮ್ಮನೇ ನೆರೆ ನಂಬಿ ಬಂದಿರಿ ಇದಕೆ ಗತಿಯೇನು
ನಿಮ್ಮನಿಲ್ಲಿಗೆ ತಂದುದೇ ವಿಧಿ
ಬೊಮ್ಮಬರೆಹವ ಮೀರುವವರಾ
ರಮ್ಮಲೋಕದೊಳೆಂದು ಮರುಗಿದ ವೈಶ್ಯಕುಲತಿಲಕ

ಅಮ್ಮ ಕೇಳೀ = ಅಮ್ಮ, ಕೇಳು ಈ; ಮದಗಜಂಗಳು = ಮದ್ದಾನೆಗಳು; ನಮ್ಮ ಕೊಲುತಿವೆ = ನಮ್ಮನ್ನು ಕೊಂದು ಹಾಕುತ್ತಿವೆ; ಹದನು ಕಾಣೆನು = ಯಾವ ರೀತಿಯಲ್ಲಿ ಪಾರಾಗುವುದೋ ತಿಳಿಯದಾಗಿದೆ, ನಮ್ಮನ್ನೇ ನೆರೆ ನಂಬಿ ಬಂದಿರಿ = ಸಂಪೂರ್ಣವಾಗಿ ನಮ್ಮನ್ನೇ ನೆಚ್ಚಿಕೊಂಡು ಬಂದಿರುವಿರಿ; ಇದಕೆ ಗತಿಯೇನು = ಈ ಸಂಕಷ್ಟಕ್ಕೆ ಪರಿಹಾರವೇನು?; ನಿಮ್ಮನಿಲ್ಲಿಗೆ = ನಿಮ್ಮನ್ನು ಈ ಸ್ಥಿತಿಗೆ; ತಂದುದೇ ವಿಧಿ = ತಂದಿಟ್ಟಿತೇ ವಿಧಿಯು?; ಬೊಮ್ಮ ಬರೆಹವ = ಬ್ರಹ್ಮ ಲಿಪಿಯನ್ನು; ಮೀರುವವರಾರಮ್ಮ = ಮೀರುವವರು ಯಾರು?; ಲೋಕದೊಳೆಂದು = ಲೋಕದಲ್ಲಿ ಎಂದು; ಮರುಗಿದ = ಕರುಣಾದ್ರ ಹೃದಯನಾಗಿ ಹೇಳಿದನು; ವೈಶ್ಯಕುಲತಿಲಕ = ಬಣಜಿಗ ವೃಂದ ಮುಖ್ಯನು.

ಯೋಚಿಸಿ ವೈಶ್ಯವೃಂದ ಮುಖ್ಯನು ದಮಯಂತಿಯಲ್ಲಿ ಆಗಿನ ಅನಿವಾರ್ಯ ಪರಿಸ್ಥಿತಿಯ ಕುರಿತು ಮಾತನಾಡಿದನು. “ಅಮ್ಮಾ ಕೇಳು, ಈ ಆನೆಗಳ ಹಿಂಡು ನಮ್ಮನ್ನು ಕೊಂದು ಹಾಕುತ್ತಿವೆ. ಇದರಿಂದ ಪಾರಾಗುವ ಮಾರ್ಗ ಯಾವುದೋ ತಿಳಿಯದಾಗಿದೆ. ನೀವೋ! ನಮ್ಮನ್ನೇ ಸಂಪೂರ್ಣವಾಗಿ ನಂಬಿಕೊಂಡು ನಮ್ಮೊಂದಿಗೆ ಬಂದಿದ್ದೀರಿ. ಈಗ ಮಾಡುವುದೇನು, ಇದಕ್ಕೆ ಪರಿಹಾರವೇನು ತಿಳಿಯದಾಗಿದೆ. ನಿಮ್ಮನ್ನು ವಿಧಿಯು ಈ ಸ್ಥಿತಿಗೆ ತಂದಿಟ್ಟಿತೇ, ಎಂದೂ ಬ್ರಹ್ಮ ಲಿಪಿಯನ್ನು ಮೀರಿದವರಾರೂ ಇಲ್ಲ ಈ ಲೋಕದಲ್ಲಿ” ಎಂದು ಅವಳ ಸ್ಥಿತಿಗಾಗಿ ಮರುಗಿದನು.

49. ಜನನವೇ ವರಭೀಮರಾಯನ
ಮನೆಯೊಳಗೆ ನಳಚಕ್ರವರ್ತಿಯೆ
ಇನಿಯನಗ್ಗದ ವೀರಸೇನನೆ ಮಾವನಾಗಿರಲು
ವನದೊಳಿಭಕರಿಗಳಿಗೆ ತಾ ನಿಜ
ತನುವ ತೆರಬೇಕೆಂಬ ಕಾರಣ
ತನಗಿರಲು ನೀವೇನ ಮಾಡುವಿರೆಂದಳಿಂದುಮುಖಿ

ಜನನವೇ = ಹುಟ್ಟಿದ್ದೇ; ವರಭೀಮರಾಯನ ಮನೆಯೊಳಗೆ = ರಾಜಾಧಿರಾಜ ಶ್ರೇಷ್ಠನಾದ ಭೀಮರಾಯನ ಅರಮನೆಯೊಳಗೆ; ನಳಚಕ್ರವರ್ತಿಯೇ = ಭೂಪತಿಗಳಲ್ಲೇ ಅಧಿಕನೆನಿಸಿದ ನಳಚಕ್ರವರ್ತಿಯೇ; ಇನಿಯನು + ಅಗ್ಗದ = ಪ್ರಿಯ ಪತಿಯಾಗಿರಲು, ಶ್ರೇಷ್ಠನಾದ; ವೀರಸೇನನೆ ಮಾವನಾಗಿರಲು = ವೀರ ಸೇನನೇ ಮಾವನಾಗಿರಲು; ವನದೊಳು + ಇಭ + ಕರಿಗಳಿಗೆ = ಕಾಡಿನಲ್ಲಿ ಆನೆ ಮುಂತಾದುವುಗಳಿಗೆ; ತಾ = ತಾನು; ನಿಜತನುವ = ನನ್ನ ದೇಹಪ್ರಾಣಗಳನ್ನು; ತೆರಬೇಕೆಂಬ ಕಾರಣ = ತೆರಬೇಕೆಂದು ವಿಧಿಯು; ತನಗಿರಲು = ನನ್ನ ಹಣೆ ಬರೆಹವಾಗಿರಲು; ನೀವೇನ = ನೀವು ತಾನೇ; ಏನು ಮಾಡುವಿರೆಂದಳಿಂದುಮುಖಿ = ಮಾಡಲು ಸಾಧ್ಯ ಎಂದಳು ದಮಯಂತಿ.

ಎಷ್ಟು ವೈಭವಯುತವಾಗಿ ಹುಟ್ಟಿ ಬೆಳೆದರೂ, ವಿಧಿ ಬರೆಹಕ್ಕೆ ಅನು ಗುಣವಾಗಿ ತಾನೇ ಬಾಳು ಒದಗಿಬರುವುದು ಎಂಬ ಧ್ವನಿ ದಮಯಂತಿಯ ಮಾತುಗಳಲ್ಲಿದೆ. ತನಗೆ ಸಹಾಯಕ್ಕಾಗಿ ಒದಗಿ ಬಂದರೆಂದು ನಂಬಿ ವಣಿಕ ಸಮೂಹದೊಂದಿಗೆ ಹೊರಟ ಅವಳನ್ನು ಕುರಿತು ವಣಿಕ ಶ್ರೇಷ್ಠನು ಮರುಗಿ ಮಾತನಾಡಿದುದಕ್ಕೆ ಪ್ರತಿಯಾಗಿ ದಮಯಂತಿ ಹೇಳುತ್ತಿದ್ದಾಳೆ. "ಹುಟ್ಟಿದ್ದು ರಾಜಾಧಿರಾಜ ಶ್ರೇಷ್ಠನಾದ ಭೀಮರಾಯನ ಅರಮನೆಯಲ್ಲಿ, ಭೂಪತಿ ಶ್ರೇಷ್ಠನಾದ ನಳಚಕ್ರವರ್ತಿಯೇ ಪ್ರಿಯಪತಿ, ವೀರ ಶ್ರೇಷ್ಠನಾದ ವೀರಸೇನನೇ ಮಾವನಾಗಿದ್ದರೂ, "ನನ್ನ ಹಣೆಬರಹದಲ್ಲಿ ಕಾಡಾನೆಗಳಿಗೆ ಬಲಿಯಾಬೇಕೆಂದಿರುವಾಗ ನೀವು ತಾನೇ ಹೇಗೆ ನನ್ನನ್ನು ರಕ್ಷಿಸಲು ಸಾಧ್ಯ?" ಎಂದಳು.

ಇಭ ಒಮ್ಮೆ ಸೊಂಡಲಿನಿಂದ ತೆಗೆದುಕೊಂಡು, ಮತ್ತೆ ಅಲ್ಲಿಂದ ಬಾಯಿಗೆ ತಿನಿಸನ್ನು ಹಾಕಿಕೊಳ್ಳುವಂಥದು. (ಇ + ಭ = ಎರಡು ಬಾರಿ ಭಕ್ಷಿಸುವುದು = ಆನೆ; ಇಭಕರಿ = ದ್ವಿರುಕ್ತಿ) 'ಜನನವೇ ಪಾಂಚಾಲರಾಯನರಮನೆ' ಎಂಬ ಕುಮಾರವ್ಯಾಸ ಭಾರತದ, ವಿರಾಟಪರ್ವ, ಸಂಧಿ-3, ಪದ್ಯ.-60 ನ್ನು ಈ ಪದ್ಯ ನೆನಪಿಸುತ್ತದೆ.

50. ಎನುತ ಕಣ್ಣೆವೆ ಬಿಗಿದು ಮನದಲಿ
ನೆನೆದಳಚ್ಯುತನಂಘ್ರಿಕಮಲವ
ವನಜನಾಭ ಮುಕುಂದ ಸಲಹೆನೆ ಕರಿಗಳಾಕ್ಷಣಕೆ
ವನಕೆ ಮರಳಿದುವವರನೆಲ್ಲರ
ವನಿತೆ ಸಂತೈಸಿದಳು ದೈವವ
ನೆನೆದ ಭಕ್ತರಿಗುಂಟೆ ಭಯವೆಲೆ ನೃಪತಿ ಕೇಳೆಂದ

ಎನುತ = ಎಂದು ಹೇಳುತ್ತ; ಕಣ್ಣೆವೆ ಬಿಗಿದು = ಕಣ್ಣುಗಳನ್ನು ಬಲವಾಗಿ ಮುಚ್ಚಿ; ಮನದಲಿ = ಮನಸ್ಸಿನಲ್ಲಿಯೇ; ನೆನೆದಳು + ಅಚ್ಯುತನ + ಅಂಘ್ರಿಕಮಲವ = ಧ್ಯಾನಿಸಿದಳು ಕೃಷ್ಣನ ಪಾದಕಮಲಗಳನ್ನು; ವನಜನಾಭ ಮುಕುಂದ= ವಿಷ್ಣುವೇ, ಮುಕುಂದಾ; ಸಲಹೆನೆ = ಸಲಹು ಎಂದು ಪ್ರಾರ್ಥಿಸಲು; ಕರಿಗಳಾಕ್ಷಣಕೆ = ಆನೆಗಳ ಹಿಂಡು ಆ ಕ್ಷಣವೇ; ವನಕೆ = ಕಾಡಿಗೆ; ಮರಳಿದುವು + ಅವರನು + ಎಲ್ಲರ = ಹಿಂದಿರುಗಿ ಹೋದುವು, ಅವರೆಲ್ಲರನ್ನೂ; ವನಿತೆ = ದಮಯಂತಿಯು; ಸಂತೈಸಿದಳು = ಸಮಾಧಾನಿಸಿದಳು; ದೈವವ ನೆನೆದ = ದೇವರನ್ನು ಧ್ಯಾನಿಸಿದ; ಭಕ್ತರಿಗುಂಟೆ = ಭಕ್ತರಿಗೆ ಇದೆಯೇ, ಭಯವೆಲೆ ನೃಪತಿ ಕೇಳೆಂದ = ಭಯ ಎಂಬುದು? ಧರ್ಮರಾಯನೇ ಕೇಳೆಂದನು ರೋಮಶ ಮುನಿ.

ವೈಶ್ಯ ಮುಖ್ಯರನ್ನು ಕುರಿತು ಮಾತನಾಡಿದ ನಂತರ ದಮಯಂತಿಯು ತನ್ನ ಕಣ್ಣುಗಳನ್ನು ಬಲವಾಗಿ ಮುಚ್ಚಿ ಮನಸ್ಸಿನಲ್ಲಿಯೇ ದೇವರನ್ನು ಧ್ಯಾನಿಸುತ್ತಾ, ಅಚ್ಯುತನಾದ ಕೃಷ್ಣನನ್ನು ನೆನೆದಳು. ಮುಕುಂದಾ, ಮಹಾವಿಷ್ಣುವೇ ನೀನೇ ಈ ಕಷ್ಟದಲ್ಲಿ ನಮ್ಮನ್ನು ರಕ್ಷಿಸು ಎಂದು ಪ್ರಾರ್ಥಿಸುತ್ತಿದ್ದಂತೆಯೇ ಆ ಕ್ಷಣವೇ ಆನೆಗಳ ಹಿಂಡು ಕಾಡಿಗೆ ಮರಳಿ ಹೋದುವು. ಅನಂತರ ದಮಯಂತಿಯು ಕಳವಳಿತರಾಗಿ

ಕಂಗೆಟ್ಟಿದ್ದ ಆ ವೈಶ್ಯವೃಂದವನ್ನು ಸಮಾಧಾನಿಸಿದಳು. ದೈವವನ್ನು ಭಕ್ತಿಯಿಂದ ನೆನೆಯುವ ಭಕ್ತರಿಗೆ ಭಯವೇಕೆ ಧರ್ಮರಾಯನೇ ಎಂದನು ರೋಮಶಮುನಿ.

'ಪಡೆದ ಜನನಿಯ ತೆರದಿ ಸ್ವಾಮಿ ಹೊಣೆಗೇಡಾಗಿ ಬಿಡದೆ ರಕ್ಷಿಪನು' ಎಂಬ ಅವರ ಕೀರ್ತನೆಯೊಂದು ಸಾರುವ ನಂಬಿಕೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

51. ಕಳೆದರಂದಿನ ರಾತ್ರಿಯನು ರವಿ
ಬೆಳಗಿದನು ಪೂರ್ವಾದ್ರಿಯಲಿ ಸಂ
ದಣಿಸಿ ನಡೆದರು ಮುಂದೆ ಕಂಡರು ಚೇದಿಪಟ್ಟಣವ
ಹೊಳೆವ ಹೇಮದ ಸೌಧಗಳ ತಳ
ತಳಿಪ ನೆಲೆಯುಪ್ಪರಿಗೆಗಳ ಕಂ
ಡೊಲಿದು ಮನಹರುಷದಲಿ ಹೊಕ್ಕರು ಸತಿಸಹಿತ ಪುರವ

ಕಳೆದರಂದಿನ ರಾತ್ರಿಯನು = ಅಂದಿನ ರಾತ್ರಿಯನ್ನು ದಮಯಂತಿಯನ್ನೂ ಸೇರಿದಂತೆ ವಣಿಕವೃಂದವು ಅಲ್ಲಿಯೇ ಕಳೆಯಿತು; ರವಿ ಬೆಳಗಿದನು = ಸೂರ್ಯ ಉದಯಿಸಿ ಬೆಳಗಿದನು; ಪೂರ್ವಾದ್ರಿಯಲಿ = ಪೂರ್ವಾಂಚಲದಲ್ಲಿ; ಸಂದಣಿಸಿ = ಗುಂಪು ಗುಂಪಾಗಿ; ನಡೆದರು = ಮುಂದು ಮುಂದಕ್ಕೆ ಹೊರಟರು; ಮುಂದೆ ಕಂಡರು = ಅನಂತರ ಮುಂದೆ ಅವರು ಕಂಡರು; ಚೇದಿಪಟ್ಟಣವ = ಚೇದಿ ನಗರವನ್ನು; ಹೊಳೆವ ಹೇಮದ = ಥಳಥಳಿಸುವ ಸ್ವರ್ಣಮಯ; ಸೌಧಗಳ = ಮೇಲು ಮಾಳಿಗೆ ಮಹಲುಗಳನ್ನು; ಥಳಥಳಿಪ = ಹೊಳೆಹೊಳೆಯುವ; ನೆಲೆಯುಪ್ಪರಿಗೆಗಳ = ಮಹಡಿಯ ಅರಮನೆಗಳನ್ನು; ಕಂಡೊಲಿದು = ಕಂಡು ಸಂತೋಷದಿಂದ; ಮನ ಹರುಷದಲಿ = ಸಂತೋಷಚಿತ್ತರಾಗಿ.

ದಮಯಂತಿಯೂ ವಣಿಕವೃಂದವೂ ಅಂದಿನ ಇರುಳನ್ನು ಆ ಕಾಡಿನಲ್ಲಿಯೇ ಕಳೆದರು; ಮರುದಿನ ಸೂರ್ಯನು ಪೂರ್ವಾಂಚಲದಲ್ಲಿ ಉದಯಿಸಿ, ಲೋಕವನ್ನು ಬೆಳಗುವ ಸಮಯಕ್ಕೆ ಅವರೆಲ್ಲರೂ ಗುಂಪು ಗುಂಪಾಗಿ ಆ ಕಾಡಿನಲ್ಲಿ ಮುಂದುವರಿದರು. ಅಲ್ಲಿಂದ ನಡೆನಡೆದು ಚೇದಿನಗರವನ್ನು ಸೇರಿದರು. ಹೊಳೆಹೊಳೆವ ಸ್ವರ್ಣಮಯವಾದ ಮೇಲುಮಾಳಿಗೆಯ ಸೌಧಗಳನ್ನೂ, ಥಳ

ಥಳಿಸುವ ಮಹಡಿಗಳುಳ್ಳ ಅರಮನೆಗಳನ್ನೂ ಕಂಡು ಆನಂದಿಸುತ್ತ ಹರ್ಷ ಚಿತ್ತರಾದರು.

52. ರಸದ ಲೇಪದ ಮಿಸುನಿಯೊ ಮಲಿನ
ವಸನದಲಿ ಹುದುಗಿರ್ದ ರತ್ನವೊ
ನಸಿದ ಮೇಘದೊಳೆಸೆವ ಚಂದ್ರನ ಬಿಂಬದಂದದಲಿ
ಶಶಿವದನೆ ಬರುತಿರಲು ಪುರಜನ
ವೊಸೆದು ನೋಡಿದುದಲ್ಲಿಗಲ್ಲಿಗೆ
ಬಿಸಜಮುಖಿಯಿವಳಾರೆನುತ ಬೆರಗಾಯ್ತು ಜನನಿಕರ

ರಸದ ಲೇಪದ = ಪಾದರಸವನ್ನು ಲೇಪಿಸಿದಂತೆ ಕಾಣುವ; ಮಿಸುನಿಯೋ = ಚಿನ್ನವೋ; ಮಲಿನ ವಸನದಲಿ = ಧೂಳಿಡಿದ ವಸ್ತ್ರದಲ್ಲಡಗಿದಂತಿರುವ; ರತ್ನವೋ = ಅಮೂಲ್ಯವಾದ ರತ್ನವೋ; ನಸಿದ = ಕ್ಷೀಣಿಸಿ ಬಾಡಿಹೋದ; ಮೇಘದೊಳೆಸೆವ = ಮೋಡದಲ್ಲಿ ಶೋಭಿಸುವ; ಚಂದ್ರನ ಬಿಂಬದಂದದಲಿ = ಚಂದ್ರ ಬಿಂಬದ ಚೆಲುವಿನಿಂದ; ಶಶಿವದನೆ = ಚಂದ್ರನಂತೆ ಕಾಂತಿಯುಕ್ತ ಮುಖವುಳ್ಳವಳಾದ ದಮಯಂತಿಯು; ಬರುತಿರಲು = ಬರುತ್ತಿದ್ದುದನ್ನು; ಪುರಜನವೊಸೆದು = ಚೇದಿನಗರದ ಜನರು ಮೆಚ್ಚುಗೆಯಿಂದ; ನೋಡಿದುದು + ಅಲ್ಲಿಗಲ್ಲಿಗೆ = ಅಲ್ಲಲ್ಲಿಯೆ ನಿಂತು ನೋಡಿದರು; ಬಿಸಜಮುಖಿ + ಇವಳು + ಆರು + ಎನುತ = ಕಮಲ ಪುಷ್ಪದಂತೆ ಮನೋಹರವಾದ ಮುಖವುಳ್ಳ ಇವಳು ಯಾರು ಎಂಬಂತೆ; ಬೆರಗಾಯ್ತು = ಆಶ್ಚರ್ಯಚಕಿತರಾಗಿ ನೋಡಿತು; ಜನನಿಕರ = ಜನಸಮೂಹ.

ಪಾದರಸವನ್ನು ಲೇಪಿಸಿರುವ ಚಿನ್ನದ ಪುತ್ಥಳಿಯೋ, ಧೂಳು ಹಿಡಿದು ಮಲಿನವಾಗಿರುವ ವಸ್ತ್ರದಲ್ಲಿ ಅಡಗಿರುವ ಅನರ್ಘ್ಯ ರತ್ನವೋ, ಮೋಡದಲ್ಲಿ ಮರೆಯಾಗಿರುವ ಕ್ಷೀಣಿಸಿರುವ ಚಂದ್ರಬಿಂಬವೋ ಎಂಬಂತೆ ಅಪಾರ ಚಂದ್ರಪ್ರಭೆ ಯಿಂದ ಮಿನುಗುತ್ತಿದ್ದ ಚೆಲುವೆ ದಮಯಂತಿಯು ದಾರಿಯಲ್ಲಿ ಬರುತ್ತಿರಲು ಚೇದಿನಗರದ ಪ್ರಜೆಗಳು ಅಲ್ಲಲ್ಲಿ ನಿಂತು ಆಶ್ಚರ್ಯ ಮತ್ತು ಮೆಚ್ಚುಗೆಯಿಂದ ಅವಳನ್ನು ನೋಡುತ್ತಿದ್ದರು.

53. ನುಡಿಗೆ ಶುಕಪಿಕ ನಲಿಯೆ ಮಿಗೆ ಸೆಳೆ
ನಡು ಬಳುಕೆ ವೃತ್ತಸ್ತನಕೆ ಸೋ
ರ್ಮುಡಿಯ ಭಾರಕೆ ಕೊರಳು ಕೊಂಕಲು ಮೆಲ್ಲಡಿಯನಿಡುತ
ಕುಡಿತೆಗಂಗಳ ನೋಟ ಕಾರ್ಮುಗಿ
ಲೊಡೆದು ಮಿಂಚುವ ಮಿಂಚಿನಂದದಿ
ಸಡಗರದಿ ಬರುತಿರ್ದಳಂಗನೆ ಹೊಳಲ ಬೀದಿಯಲಿ

ನುಡಿಗೆ ಶುಕಪಿಕನಲಿಯೆ = ಅವಳಾಡುವ ಮಾತಿನ ಇಂಪಿಗೆ ಗಿಳಿ ಕೋಗಿಲೆಗಳು ಸಂತಸದಿಂದ ನಲಿದಾಡುತ್ತಿರಲು, ಮಿಗೆ = ಅತ್ಯಧಿಕವಾಗಿ; ಸೆಳೆನಡು ಬಳುಕೆ = ತೆಳ್ಳಗಿನ ನಡುವು ಬಳುಕಾಡಲು; ವೃತ್ತಸ್ತನ = ಸುಂದರವಾಗಿ ವೃತ್ತಗೊಂಡ ಸ್ತನಭಾರಕ್ಕೆ; ಸೋರ್ಮುಡಿಯ ಭಾರಕೆ = ಬಿಚ್ಚಿದ ಕೇಶರಾಶಿಯ ಭಾರಕ್ಕೆ; ಕೊರಳು ಕೊಂಕಲು = ಕುತ್ತಿಗೆಯು ಬಳುಕಾಡಲು; ಮೆಲ್ಲಡಿಯನಿಡುತ = ಮೃದುವಾಗಿ ಹೆಜ್ಜೆಹಾಕುತ್ತ; ಕುಡಿತೆಗಂಗಳ ನೋಟ = ಬೊಗಸೆಗಣ್ಣುಗಳ ಸುಂದರ ದೃಷ್ಟಿಯು; ಕಾರ್ಮುಗಿಲೊಡೆದು = ಕಾರ್ಮೋಡವನ್ನು ತೂರಿಕೊಂಡು; ಮಿಂಚುವ = ಮಿಂಚುವ; ಮಿಂಚಿನಂದದಿ = ಮಿಂಚಿನಂತೆ ಹರಿತವಾಗಿ, ಸುಂದರವಾಗಿ; ಸಡಗರದಿ = ವೈಭವ ಪೂರ್ಣವಾಗಿ ಕಾಣುತ್ತ; ಬರುತ್ತಿರ್ದಳಂಗನೆ = ದಮಯಂತಿಯು ಬರುತ್ತಿದ್ದಳು; ಹೊಳಲ = ಪಟ್ಟಣದ; ಬೀದಿಯಲಿ = ಬೀದಿಗಳಲ್ಲಿ.

ದಮಯಂತಿಯ ರೂಪದಂತೆಯೇ ಅವಳ ನಡೆ–ನುಡಿಗಳೂ ಅತ್ಯಾಕರ್ಷಕ ವಾಗಿದ್ದುವು. ಅವಳ ನುಡಿಯ ಬೆಡಗಿಗೆ, ಕಂಠದ ಸುಭಗತೆಗೆ ಗಿಳಿ ಕೋಗಿಲೆಗಳು ಹರ್ಷೋನ್ಮತ್ತವಾಗಿ ನಲಿದಾಡುತ್ತಿದ್ದುವು. ಅವಳ ಯೌವನಭರಿತ ಸ್ತನಭಾರಕ್ಕೂ, ಬಿರಿದ ಕೇಶರಾಶಿಯ ಸೊಬಗಿಗೂ ಕೊರಳು ಕೊಂಕುತ್ತಿತ್ತು. ಆಕರ್ಷಕವಾಗಿ ತನ್ನ ತೆಳುನಡು ಬಳುಕುತ್ತಿರಲು, ಕಾರ್ಮೋಡವನ್ನು ತೂರಿಕೊಂಡು ಬರುವ ಮಿಂಚಿನ ಹಾಯ್ಕಿನಂತೆ ತನ್ನ ಕುಡಿನೋಟವನ್ನು ಹರಿಸುತ್ತ ದಮಯಂತಿಯು ಚೇದಿನಗರದ ಬೀದಿಗಳಲ್ಲಿ ಸಂಭ್ರಮದಿಂದ ನಡೆದುಬಂದಳು.

54. ಹೇಮದುಪ್ಪರಿಗೆಯಲಿ ನೃಪಸತಿ
ಕಾಮಿನಿಯರೋಲಗದೊಳೊಪ್ಪುತ

ತಾಮರಸದಳನಯನೆ ದಮಯಂತಿಯನು ತಾ ಕಂಡು
ಈ ಮಹಾಸತಿ ಯಾವಳೋ ಸು
ತ್ರಾಮನರಸಿಯೊ ಎನುತ ಕರೆಸಿದ
ಡಾ ಮಹಿಳೆ ಬಂದಳು ನೃಪಾಲನ ಸತಿಯ ಸಮ್ಮುಖಕೆ

ಹೇಮದುಪ್ಪರಿಗೆಯಲಿ = ಸುವರ್ಣ ಸೌಧದ ಕನ್ನೆ ಮಾಡದಲ್ಲಿ; ನೃಪಸತಿ = ಚೇದಿರಾಜನ ಮಡದಿಯು; ಕಾಮಿನಿಯರ + ಓಲಗದೊಳು + ಒಪ್ಪುತ = ಅರಮನೆಯ ಸ್ತ್ರೀ ಪರಿಜನರೊಂದಿಗೆ ಸಭೆಯಲ್ಲಿ ವಿರಾಜಮಾನಳಾಗಿದ್ದಳು; ತಾಮರಸದಳನಯನೆ = ಕೆಂದಾವರೆಯ ದಳಗಳಂತಿದ್ದ ಸುಂದರ ಕಣ್ಣುಗಳ; ದಮಯಂತಿಯನು ತಾ ಕಂಡು = ದಮಯಂತಿಯ ರೂಪ ಲಾವಣ್ಯ; ಬೆಡಗು ಬಿನ್ನಾಣಗಳ ಚೆಲುವನ್ನು ಕಂಡು; ಈ ಮಹಾಸತಿ = ಈ ಮಹಾಸತಿಯು; ಯಾವಳೋ = ಯಾರಿರಬಹುದು?; ಸುತ್ರಾಮನರಸಿಯೋ = ದೇವೇಂದ್ರನ ಮಡದಿ ಶಚಿದೇವಿಯೋ; ಎನುತ ಕರಸಿದಡಾ = ಎಂದುಕೊಂಡು ಕರೆಸಿದಾಗ ಆ; ಮಹಿಳೆ = ಆ ಹೆಣ್ಣುಮಗಳು ದಮಯಂತಿಯು; ಬಂದಳು ನೃಪಾಲನ = ಬಂದಳು ಚೇದಿ ರಾಜನ; ಸತಿಯ ಸಮ್ಮುಖಕೆ = ಪತ್ನಿಯ ಎದುರು.

ಕೆಂದಾವರೆಯ ಸೊಬಗಿನ ಕಣ್ಗಳ ಚೆಲುವೆ ದಮಯಂತಿಯು ಚೇದಿನಗರದ ರಸ್ತೆಯಲ್ಲಿ ನಡೆದು ಬರುತ್ತಿದ್ದ ಸಂದರ್ಭದಲ್ಲಿ ಚೇದಿಪುರದ ಅರಸಿಯು ತನ್ನ ಸುವರ್ಣಸೌಧದ ಕನ್ನೆಮಾಡದಲ್ಲಿ ಅರಮನೆಯ ಸಖೀಜನರ ಸಭೆಯಲ್ಲಿದ್ದವಳು ದಮಯಂತಿಯನ್ನು ಕಂಡು ಬೆರಗಾದಳು, ಯಾರಿವಳು? ಮಹಾಸತಿಯಂತಿದ್ದಾಳೆ! ಇಂದ್ರನ ಮಡದಿ ಶಚೀದೇವಿಯೇ ಬಂದಳೇನೋ ಎಂದು ಬೆರಗಾಗಿ ಅವಳನ್ನು ಕರೆಕಳುಹಿಸಿದಾಗ, ದಮಯಂತಿಯು ಅವಳೆದುರು ಬಂದಳು.

55. ತಾಯೆ ನೀನಾರಾವ ದೇಶದ
ರಾಯನರಸಿಯಿದೇನು ನಿನಗೀ
ಪ್ರಾಯದಲಿ ಕಳೆಗುಂದಿ ಮಾಸಿಹುದೇನು ಪೇಳೆನಲು
ಆ ಯುವತಿ ಕಣ್ಣೀರಿನಲಿ ಪೂ

ರಾಯ ಶೋಕದಲೆಂದಳಾ ತರ
ಳಾಯತಾಕ್ಷಿಗೆ ತನ್ನ ವೃತ್ತಾಂತವನು ಬಿಸುಸುಯ್ದು

ತಾಯೆ = ತಾಯೀ; ನೀನು + ಆರು + ಆವ ದೇಶದ = ನೀನು ಯಾರು? ಯಾವ ದೇಶದ; ರಾಯನ + ಅರಸಿ + ಇದೇನು = ಮಹಾರಾಣಿ? ಇದೇನು; ನಿನಗೆ + ಈ = ನಿನಗೆ ಈ; ಪ್ರಾಯದಲಿ = ತಾರುಣ್ಯದಲ್ಲಿ; ಕಳೆಗುಂದಿ = ಕಾಂತಿಹೀನವಾಗಿ; ಮಾಸಿಹುದೇನು = ಚೆಲುವು ಮಾಸಿ ಹೋಗಿದೆ ಏಕೆ; ಪೇಳು + ಎನಲು = ಹೇಳು ಎಂದೆನ್ನಲು; ಆ ಯುವತಿ = ದಮಯಂತಿಯು; ಕಣ್ಣೀರಿನಲಿ = ಕಣ್ಣೀರನ್ನು ತುಂಬಿಕೊಂಡು; ಪೂರಾಯ = ಅತೀವವಾಗಿ ತುಂಬಿಬಂದ; ಶೋಕದಲಿ + ಎಂದಳು + ಆ = ದುಃಖದಿಂದ ಹೇಳಿದಳು; ಆ ತರಳಾಕ್ಷಿಗೆ = ಚೆಲುವಾದ ಎಳೆಯ ಕಣ್ಣುಗಳ ಸುಂದರಿಗೆ; ತನ್ನ ವೃತ್ತಾಂತವನು = ತನ್ನ ಕುರಿತ ಸಮಾಚಾರ ಗಳೆಲ್ಲವನ್ನೂ; ಬಿಸುಸುಯ್ದು = ಬಿಸಿಯುಸಿರು ಹೊರಹಾಕಿ.

ತಾಯೀ ನೀನು ಯಾವ ದೇಶದ ಅರಸನ ರಾಣಿಯೋ?, ಇದೇನು ನಿನಗೆ ಈ ತಾರುಣ್ಯದಲ್ಲಿ ಕಾಂತಿಹೀನವಾಗಿ ಮಾಸಿ ಹೋಗುವಂಥ ದುರವಸ್ಥೆ ಬಂದಿತು? ಏಕೆ, ಹೇಳು ಎಂದು ಕೇಳಲು ದಮಯಂತಿಗೆ ಅತೀವವಾಗಿ ದುಃಖವುಕ್ಕಿ ಬಂದಿತು. ಕಣ್ಣೀರ ಕೋಡಿಯಲಿ ತನ್ನ ಕಥೆಯೆಲ್ಲವನ್ನು ಹೇಳಿಕೊಂಡು, ಬಿಸಿಯುಸಿರು ಹೊರ ಹಾಕಿದಳು.

56. ಕ್ಷಿತಿಯನೆಲ್ಲವ ಸೋತು ಜೂಜಲಿ
ಪತಿ ಬನಕೆ ಬಂದೆನ್ನನಗಲಿದ
ಮತಿವಿಕಳತನದಿಂದ ತಿರುಗುತ ಬಂದೆ ನಿಮ್ಮಡಿಗೆ
ಹಿತವರಾರನು ಕಾಣೆ ನೀವೇ
ಗತಿಯೆನಗೆ ಪರದೇಶಿಯನು ಪರ
ಹಿತವೆ ಪುಣ್ಯವು ರಕ್ಷಿಸೆಂದಳು ನಳನೃಪನ ರಾಣಿ

ಕ್ಷಿತಿಯನೆಲ್ಲವ = ತನ್ನ ಸಾಮ್ರಾಜ್ಯ ಸೌಭಾಗ್ಯಗಳೆಲ್ಲವನ್ನೂ; ಸೋತು ಜೂಜಲಿ = ಜೂಜಿನಲ್ಲಿ ಸೋತು; ಪತಿ = ಪತಿಯು; ಬನಕೆ = ಕಾಡಿಗೆ; ಬಂದು + ಎನ್ನನು + ಅಗಲಿದ = ಬಂದು ನನ್ನನ್ನು ಅಗಲಿ ಹೋದ; ಮತಿವಿಕಳತನದಿಂದ =

ಬುದ್ಧಿ ಗೆಟ್ಟು ಏನು ಮಾಡುವುದೆಂದು ತಿಳಿಯದೆ; ತಿರುಗುತ = ಅಲೆಯುತ್ತ ಬಂದೆ; ನಿಮ್ಮಡಿಗೆ = ನಿಮ್ಮ ಪಾದವನ್ನು ಬಂದು ಸೇರಿದೆ; ಹಿತವರಾರನು = ಹಿತೈಷಿಗಳಾದ ನನ್ನವರೆಂಬುವರನ್ನು ಯಾರನ್ನೂ; ಕಾಣೆ = ಕಾಣೆ; ನೀವೇ ಗತಿಯೆನಗೆ = ನೀವೇ ನನಗೆ ಮಾರ್ಗವನ್ನು ತೋರಬೇಕು; ಪರದೇಶಿಯನು = ನೆಲೆ, ನೆರವು ಗಳಿಲ್ಲದವಳಾಗಿದ್ದೇನೆ; ಪರಹಿತವೆ ಪುಣ್ಯವು = ಪರರಿಗೆ ಹಿತವನ್ನು ಬಯಸು ವುದೇ ಪುಣ್ಯದ ಕೆಲಸ; ರಕ್ಷಿಸೆಂದಳು = ಕಾಪಾಡಿ ಎಂದಳು; ನಳನೃಪನ ರಾಣಿ = ದಮಯಂತಿ.

ತನ್ನ ಸಾಮ್ರಾಜ್ಯ ಸೌಭಾಗ್ಯ ಸಂಪತ್ತೆಲ್ಲವನ್ನೂ ನನ್ನ ಗಂಡನು ಜೂಜಿನಲ್ಲಿ ಸೋತು ಕಾಡು ಪಾಲಾದನು. ಬಳಿಕ ನನ್ನನ್ನೂ ತೊರೆದು ಹೋದನು. ಇಂದು ನನ್ನವರೆಂಬುವರಾರೂ ನನಗಿಲ್ಲ. ನೆಲೆ ನೆರವುಗಳೂ ನನಗಿಲ್ಲ. ಪರರಿಗೆ ಹಿತ ವನ್ನುಂಟು ಮಾಡುವುದೇ ಪುಣ್ಯಕಾರ್ಯವಲ್ಲವೇ. ನೀವೇ ನನಗೆ ದಾರಿತೋರಿ ನನ್ನನ್ನು ರಕ್ಷಿಸಿ ಎಂದು ನಳ ಮಹಾರಾಜನ ರಾಣಿ ದಮಯಂತಿಯು ಚೇದಿಪುರದ ಅರಸಿಯಲ್ಲಿ ಭಿನ್ನವಿಸಿದಳು.

57. ನುಡಿಯ ಕೇಳುತ ಚೈದ್ಯಭೂಪನ
ಮಡದಿ ನೂಪುರ ಘಲಿರುಘಲಿರೆನ
ಲಡಿಯಿಡುತ ಬಂದಪ್ಪಿ ಸೆರಗಿನೊಳೊರಸಿ ಕಂಬನಿಯ
ಬಿಡು ವ್ಯಥೆಯ ವರಭೂಷಣಂಗಳ
ತೊಡು ದುಕೂಲವನುಡು ಸುಮಾಲ್ಯವ
ಮುಡಿಗೆ ಸೇರಿಸು ತರುಣಿಯೆಂದಳು ಚೈದ್ಯನೃಪನರಸಿ

ನುಡಿಯ ಕೇಳುತ = ದಮಯಂತಿಯ ಮಾತುಗಳನ್ನು ಕೇಳುತ್ತ; ಚೈದ್ಯ ಭೂಪನ ಮಡದಿ = ಚೇದಿಮಹಾರಾಜನ ರಾಣಿಯು; ನೂಪುರ = ಕಾಲ್ಗೆಜ್ಜೆಯ ಕಿಂಕಿಣಿಯು; ಘಲಿರು ಘಲಿರೆನಲಡಿಯಿಡುತ = ಘಲಿರು ಘಲಿರೆನಲು ಅಡಿಯಿಡುತ್ತ; ಬಂದಪ್ಪಿ = ಬಂದು ಅಪ್ಪಿ; ಸೆರಗಿನೊಳೊರಸಿ = ಸೀರೆಯ ಅಂಚಿನಿಂದ ಒರೆಸಿ; ಕಂಬನಿಯ = ಕಣ್ಣೀರನ್ನು; ಬಿಡು ವ್ಯಥೆಯ = ದುಃಖಿಸದಿರು; ವರಭೂಷಣಂಗಳ = ಶ್ರೇಷ್ಠವಾದ ಉಡುಗೆ ತೊಡುಗೆಗಳನ್ನು; ತೊಡು =

ಧರಿಸಿಕೋ; ದುಕೂಲವನುಡು = ರೇಷ್ಮೆಯ ಸೀರೆಯನ್ನು ಉಟ್ಟುಕೋ; ಸುಮಾಲ್ಯವ = ಸುಗಂಧಿತ ಪುಷ್ಪ ಮಾಲೆಯನ್ನು; ಮುಡಿಗೆ ಸೇರಿಸು = ಮುಡಿದುಕೋ; ತರುಣಿಯೆಂದಳು = ಹೆಣ್ಣೇ ಎಂದು ಉಪಚರಿಸಿದಳು.

ದಮಯಂತಿಯ ಮಾತುಗಳನ್ನು ಕೇಳುತ್ತ ಚೇದಿ ಮಹಾರಾಜನ ಅರಸಿಯು ತನ್ನ ಕಾಲ್ಗೆಜ್ಜೆಯನ್ನು ಘಲಿರು ಘಲಿರೆನ್ನುವಂತೆ ಶಬ್ದಮಾಡುತ್ತ ಬಂದು ದಮಯಂತಿಯನ್ನು ಪ್ರೀತಿ ಪುರಸ್ಸರವಾಗಿ ಆಲಂಗಿಸಿಕೊಂಡಳು. ತನ್ನ ಸೀರೆಯ ಅಂಚಿನಿಂದ ಅವಳ ಕಂಬನಿಯನ್ನೊರೆಸಿದಳು. ದುಃಖಿಸದಿರು, ಶ್ರೇಷ್ಠವಾದ ಚೆಲುವಾದ ಆಭರಣಗಳನ್ನು ತೊಟ್ಟುಕೋ, ರೇಷ್ಮೆಪತ್ತಲವನ್ನುಡು, ಸುಗಂಧಿತ ಪುಷ್ಪಗಳನ್ನು ತಲೆಯಲ್ಲಿ ಮುಡಿದುಕೋ ಎನ್ನುತ್ತ ಒಬ್ಬ ಮಹಾರಾಣಿಗೆ ತಕ್ಕ ವೇಷಭೂಷಣಗಳ ಅಗತ್ಯ ದಮಯಂತಿಗೆ ಇದೆ ಎಂಬುದನ್ನು ಕಂಡುಕೊಂಡು ಮಮತೆಯಿಂದಲೂ, ಗೌರವಾದರಗಳಿಂದಲೂ ನಳನ ರಾಣಿಯನ್ನು ಉಪ ಚರಿಸಿದಳು.

58. ದೇವಿ ನಿಮ್ಮುಪಚಾರವೇ ಸಂ
ಭಾವನೆಯಲಾ ನಮಗೆ ಬೇರಿ
ನ್ನಾವ ಭೂಷಣವೇಕೆ ದೇಸಿಗರಾವು ನಿಮ್ಮಡಿಯ
ಸೇವೆಯಲಿ ತಾನಿಹೆನು ಹೀನವ
ನಾವು ಬಳಸುವರಲ್ಲ ತನ್ನನು
ಕಾವ ಹದನನು ನೀವೆ ಬಲ್ಲಿರಿಯೆಂದಳಾ ಸತಿಗೆ

ದೇವಿ = ದೇವಿಯೇ; ನಿಮ್ಮುಪಚಾರವೇ = ಒಳ್ಳೆಯ ಮನಸ್ಸಿನಿಂದ ಆದರಿಸಿದುದೇ; ಸಂಭಾವನೆಯಲಾ = ಗೌರವಾರ್ಹ ಸನ್ಮಾನವು; ನಮಗೆ ಬೇರಿನ್ನಾವ = ನಮಗೆ ಬೇರೆ ಇನ್ನು ಯಾವ; ಭೂಷಣವೇಕೆ = ಅಲಂಕಾರವೇಕೆ; ದೇಸಿಗರಾವು = ನಾವು ನೆಲೆಯಿಲ್ಲದವರು; ನಿಮ್ಮಡಿಯ ಸೇವೆಯಲ್ಲಿ = ನಿಮ್ಮ ಪಾದ ಸೇವೆಯಲ್ಲಿ; ತಾನಿಹೆನು = ನಾನಿರುತ್ತೇನೆ; ಹೀನವ = ಅಲ್ಪತನದ ಕೆಲಸ ಕಾರ್ಯಗಳನ್ನು; ನಾವು ಬಯಸುವವರಲ್ಲ = ನಾವು ಬಯಸಿದವರಲ್ಲ; ತನ್ನನು ಕಾವ ಹದನನು = ನನ್ನನ್ನು ಯಾವ ರೀತಿಯಲ್ಲಿ ರಕ್ಷಿಸಬೇಕು ಎಂಬುದನ್ನು; ನೀವು ಬಲ್ಲಿರಿಯೆಂದಳಾ ಸತಿಗೆ = ನೀವೇ ತಿಳಿದಿದ್ದೀರಿ ಎಂದು ಚೇದಿರಾಣಿಗೆ ಹೇಳಿದಳು.

ಅಂದಿನ ಪರಿಸ್ಥಿತಿಯಲ್ಲಿ ರಕ್ಷಿತ ಸ್ಥಳವೊಂದರ ಅಗತ್ಯ ದಮಯಂತಿಗಿತ್ತು. ಅದನ್ನು ಅವಳು ತನ್ನ ಮಾತಿನಲ್ಲಿ ತಿಳಿಯಪಡಿಸುತ್ತಿದ್ದಾಳೆ. ಚೇದಿನಗರದ ರಾಣಿಯ ಗೌರವಾದರಪೂರ್ವಕ ಮಾತಿಗೆ ಪ್ರತಿಯಾಗಿ, 'ದೇವಿ, ನೀವು ಒಳ್ಳೆಯ ಮನಸ್ಸಿನಿಂದ ಆದರಿಸಿದುದೆ ನಮಗೆ ನೀಡಿದ ಗೌರವಾರ್ಹ ಸನ್ಮಾನವಾಗಿದೆ. ಇಂದು ನಾನು ನೆಲೆಯಿಲ್ಲದವಳು, ನನಗೇಕೆ ಶ್ರೇಷ್ಠವಾದ ಭೂಷಣ ಶೃಂಗಾರವೆಲ್ಲ? ನಿಮ್ಮ ರಕ್ಷಣೆಯ ಬಯಸಿ, ನಿಮ್ಮ ಸೇವೆಯಲ್ಲಿ ನಾನು ಇರಬಯಸುತ್ತೇನೆ. ಹೀನವಾದ ಕೆಲಸವಿಲ್ಲದಂತೆ ನನ್ನನ್ನು ರಕ್ಷಿಸುವ ಬಗೆಯನ್ನು ನೀವೇ ಬಲ್ಲಿರಿ' ಎಂದು ನುಡಿದಳು.

59. ಎನಲು ನಸುನಗುತೆಂದಳಾ ಮಾ
ನಿನಿಗೆ ತಮ್ಮಿಂದಾಗದುಪಹತಿ
ನಿನಗೆ ಪೇಳೆವು ಹೀನಕೆಲಸವ ಚಿಂತೆ ಬೇಡಿನ್ನು
ತನಗೆ ಮಗಳು ಸುನೀತಿಯಾಕೆಯ
ಮನೆಯೊಳಿರು ಸೈರಂಧ್ರಿತನದಿಂ
ದನವರತ ನೀನೆಂದು ನೇಮಿಸಿ ಕಳುಹಿದಳು ಮನೆಗೆ

ಎನಲು = ಅವಳು ಹಾಗೆ ಹೇಳಲು; ನಸುನಗುತೆಂದಳಾ = ನಸುನಗುತ್ತ ಎಂದಳು ಆ ಸ್ವಾಭಿಮಾನಿ ಹೆಣ್ಣು ಮಗಳಿಗೆ; ತಮ್ಮಿಂದ + ಆಗದು + ಉಪಹತಿ = ನಮ್ಮಿಂದ ನಿನಗೆ ಯಾವ ತೊಂದರೆಯೂ ಆಗದು; ನಿನಗೆ ಪೇಳೆವು = ನಿನಗೆ ನಾನು ಹೇಳುವುದಿಲ್ಲ; ಹೀನ ಕೆಲಸವ = ಅಲ್ಪವಾದ, ಕೀಳಾದ ಕೆಲಸಗಳನ್ನು; ಚಿಂತೆ ಬೇಡ = ಚಿಂತಿಸುವ ಅಗತ್ಯವಿಲ್ಲ; ತನಗೆ ಮಗಳು = ತನ್ನ ಮಗಳು; ಸುನೀತಿಯಾಕೆಯ = ಸುನೀತಿಯೆಂಬವಳು; ಆಕೆಯ; ಮನೆಯೊಳಿರು = ಮನೆಯಲ್ಲಿ ನೀನು ತಂಗಬಹುದು; ಸೈರಂಧ್ರಿತನದಿಂದ + ಅನವರತ = ಸದಾಕಾಲವೂ ಅವಳೊಂದಿಗೆ ಪರಿಚಾರಿಕೆಯಾಗಿ; ನೀನೆಂದು = ನೀನು ಎಂದು; ನೇಮಿಸಿ = ಕೆಲಸಕ್ಕೆ ಅವಳನ್ನು ನಿಯಮಿಸಿ; ಕಳುಹಿದಳು ಮನೆಗೆ = ದಮಯಂತಿಯನ್ನು ಮಗಳ ಮನೆಗೆ ಕಳುಹಿಸಿದಳು.

ದಮಯಂತಿಯು ಈ ರೀತಿ ನುಡಿಯಲು ಚೇದಿನಗರದರಸಿಯು ಅವಳ ಮಾತಿನರ್ಥವನ್ನು ಗ್ರಹಿಸಿ, ನಸುನಗುತ್ತ, ನಮ್ಮಿಂದ ನಿನಗೆ ಯಾವ ರೀತಿಯ

ತೊಂದರೆಯೂ ಬರುವುದಿಲ್ಲ. ನಿನಗೆ ನಾನು ಯಾವ ಹೀನಕರವಾದ ಕೆಲಸಗಳನ್ನೂ ಹೇಳುವುದಿಲ್ಲ. ಚಿಂತಿಸದಿರು, ನನ್ನ ಮಗಳು ಸುನೀತಿ ಎಂಬುವಳು. ಅವಳ ಮನೆಯಲ್ಲಿ ನೀನು ಅವಳ ಪರಿಚಾರಿಕೆಯಾಗಿ ಇರು. ಎಂದು ದಮಯಂತಿಗೆ ಕೆಲಸವನ್ನು ನೇಮಿಸಿ ಮಗಳ ಮನೆಗೆ ಕಳುಹಿಸಿಕೊಟ್ಟಳು.

60. ಚೇದಿಭೂಪನ ಮಡದಿ ತನ್ನ ಸ
ಹೋದರಿಯ ಸುತೆಯೆಂದು ಬಲ್ಲಳೆ
ಮೇದಿನಿಯೊಳಿವಳಾರ ಸತಿಯೆಂದರಿಯದಾಕೆಯನು
ಆದರಿಸಿ ಸಲಹಿದಳು ಮಗಳೋ
ಪಾದಿಯಲಿ ದಮಯಂತಿಯನು ಮನ
ಭೇದವಿಲ್ಲದೆ ಕರುಣದಿಂದಂಗನೆಯ ನೃಪನರಸಿ

ಚೇದಿಭೂಪನ ಮಡದಿ = ಚೇದಿಯರಸನ ರಾಣಿಯು; ತನ್ನ ಸಹೋದರಿಯ = ತನ್ನ ಸಹೋದರಿಯ; ಮಗಳೆಂದು ಬಲ್ಲಳೆ = ಮಗಳು ದಮಯಂತಿ ಎಂಬುದನ್ನು ಹೇಗೆ ತಾನೇ ತಿಳಿದಾಳು?; ಮೇದಿನಿಯೊಳು + ಇವಳು + ಆರ = ಈ ಭೂಮಂಡಲದಲ್ಲಿರುವವರಲ್ಲಿ ಇವಳು ಯಾರ; ಸತಿ + ಎಂದು + ಅರಿಯದೆ + ಆಕೆಯನು = ಹೆಂಡತಿ ಎಂಬುದನ್ನು ಅರಿಯದೆ ಅವಳನ್ನು; ಆದರಿಸಿ ಸಲಹಿದಳು = ಗೌರವಿಸಿ ನಡೆಸಿಕೊಂಡಳು; ಮಗಳೋಪಾದಿಯಲಿ = ತನ್ನ ಸ್ವಂತ ಮಗಳೋ ಎಂಬಂತೆ; ದಮಯಂತಿಯನು = ದಮಯಂತಿಯನ್ನು; ಮನ ಭೇದವಿಲ್ಲದೆ = ಮನಸ್ಸಿನೊಳಗೂ ಭೇದ ಭಾವಗಳಿಲ್ಲದಂತೆ; ಕರುಣ ದಿಂದಂಗನೆಯ = ಅತ್ಯಂತ ಕರುಣಾರ್ದ್ರ ಹೃದಯದಿಂದ ದಮಯಂತಿಯನ್ನು; ನೃಪನರಸಿ = ಚೇದಿರಾಜನ ಅರಸಿ.

ಚೇದಿ ಪುರದರಸನ ಮಡದಿಗೆ ದಮಯಂತಿಯು ತನ್ನ ಸಹೋದರಿಯ ಮಗಳು ಎಂಬ ಮಾಹಿತಿ ಇರಲಿಲ್ಲ ಈ ಭೂಮಂಡಲದ ಯಾವ ಅರಸನ ಮಡದಿಯೋ ಪಾಪ ಎಂದಷ್ಟೇ ಭಾವಿಸಿ ಅವಳ ಕಷ್ಟಗಳಿಗೆ ಸ್ಪಂದಿಸಿ ಅತ್ಯಂತ ಗೌರವಾದರಗಳಿಂದ ತನ್ನ ಮಗಳಂತೆಯೇ ಭಾವಿಸಿ, ಮನಸ್ಸಿನೊಳಗೂ ಎರಡು

ಎಣಿಸದೆ, ಹೃದಯಪೂರ್ವಕವಾಗಿ ಕರುಣೆಯಿಂದ ದಮಯಂತಿಯನ್ನು ನಡೆಸಿ ಕೊಂಡಳು.

61. ಮನದ ದಗೆಯಡಗಿತು ಸುನೀತಿಯ
ಮನೆಯೊಳಿದ್ದಳು ಭೇದವಿಲ್ಲದೆ
ಅನುದಿನದೊಳಾಹಾರ ನಿದ್ರಾಂಗನೆಯ ತಾನುಳಿದು
ವನಜನಾಭನ ಕರುಣದಲಿ ಬಂ
ದಿನಿಯನೆಂದಿಗೆ ಮುಖವ ತೋರುವ
ನೆನುತ ಚಿಂತಿಸುತಿರ್ದಳಾ ವರಪುರದ ಚೆನ್ನಿಗನ

ಮನದ = ಮನಸ್ಸಿನೊಳಗೆ ಕವಿದಿದ್ದ; ದಗೆಯಡಗಿತು = ದುಃಖತಾಪವು ಇಲ್ಲದಾಯಿತು; ಸುನೀತಿಯ ಮನೆಯೊಳಿದ್ದಳು = ಸುನೀತಿಯ ಮನೆಯಲ್ಲಿ ಇದ್ದಳು; ಭೇದವಿಲ್ಲದೆ = ಅನ್ಯಳೆಂಬ ಭಾವನೆಗೆ ಆಸ್ಪದವಿಲ್ಲದಂತೆ; ಅನುದಿನದೊಳಾಹಾರ = ಪ್ರತಿದಿನದ ಆಹಾರವನ್ನು; ನಿದ್ರಾಂಗನೆಯ = ನಿದ್ದೆಯನ್ನೂ; ತಾನುಳಿದು = ತಾನು ತ್ಯಜಿಸಿ; ವನಜನಾಭನ = ವಿಷ್ಣುವಿನ; ಕರುಣದಲಿ = ಕೃಪೆಯಲ್ಲಿ; ಬಂದು + ಇನಿಯನು + ಎಂದಿಗೆ = ಬಂದು ತನ್ನ ಪ್ರಿಯಪತಿಯು ಎಂದಿಗೆ; ಮುಖವ ತೋರುವನೆನುತ = ಮುಖದರ್ಶನ ತೋರುತ್ತಾನೋ ಎನ್ನುತ್ತ; ಚಿಂತಿಸುತಿರ್ದಳಾ = ಚಿಂತೆಯಲ್ಲಿಯೇ ಇದ್ದಳು; ಆ ವರಪುರದ ಚೆನ್ನಿಗನ = ವರಪುರದ ಚೆನ್ನಿಗರಾಯನನ್ನೇ.

ನೆಲೆದಪ್ಪಿದುದರಿಂದ ಉಂಟಾದ ತಪ್ತಮನವು ದಮಯಂತಿಗೆ ಈಗ ಇಲ್ಲವಾಯಿತು, ನೆಮ್ಮದಿಯಿಂದ ಸುನೀತಿಯ ಮನೆಯಲ್ಲಿ ಸುರಕ್ಷಿತಳಾಗಿದ್ದರೂ ಎಂದು ತನ್ನಿನಿಯನು ಬಂದು ಮುಖತೋರುತ್ತಾನೆ ಎಂಬ ಚಿಂತೆಯಲ್ಲಿಯೇ ನಿದ್ರಾಹಾರಗಳನ್ನು ತ್ಯಜಿಸಿ ಸದಾ ಸರ್ವದಾ ವಿಷ್ಣುಧ್ಯಾನದಲ್ಲಿ ದಿನ ಕಳೆಯುತ್ತಿದ್ದಳು.

ಆರನೆಯ ಸಂಧಿ

ಇಂದುವದನೆಯನಗಲಿ ತಾ ಮನ
ನೊಂದು ಕಾರ್ಕೋಟಕನ ದೆಸೆಯಲಿ
ಬಂದು ಹೊಕ್ಕನು ನಿಷಧಪತಿ ಋತುಪರ್ಣನಗರಿಯನು

ಇಂದುವದನೆಯನು ಅಗಲಿ = ಚಂದ್ರಕಾಂತಿಸಮ ಪ್ರಭಾಯುಕ್ತಳಾದ ದಮಯಂತಿಯನ್ನು ಬಿಟ್ಟು; ತಾ ಮನನೊಂದು = ತಾನು ಮನಸ್ಸಿನಲ್ಲಿಯೇ ದುಃಖಿಸುತ್ತ; ಕಾರ್ಕೋಟಕನ = ವಿಷಸರ್ಪದ; ದೆಸೆಯಲಿ = ಕಡಿತದ ಕಾರಣದಿಂದ; ಬಂದು ಹೊಕ್ಕನು = ಬಂದು ಪ್ರವೇಶಿಸಿದನು; ನಿಷಧಪತಿ = ನಿಷಧಾಧಿಪತಿಯಾದ ನಳನು; ಋತುಪರ್ಣ ನಗರಿಯನು = ಋತುಪರ್ಣನೆಂಬ ರಾಜನಿದ್ದ ಅಯೋಧ್ಯೆ ಯನು.

ಚಂದ್ರಕಾಂತಿಸಮ ಪ್ರಭಾಯುಕ್ತಳಾದ ಚೆಲುವೆ ದಮಯಂತಿಯನ್ನು ಕಾಡಿನಲ್ಲಿಯೇ ಏಕಾಂಗಿಯಾಗಿ ಬಿಟ್ಟು ಹೊರಟ ನಳಚಕ್ರವರ್ತಿಯು ಮನಸ್ಸಿನಲ್ಲಿಯೇ ಅತೀವ ದುಃಖತಪ್ತನಾಗಿ ಬರುತ್ತಿರಲು ಕಾರ್ಕೋಟಕನೆಂಬ ವಿಷಸರ್ಪನಿಂದ ಕಡಿಸಿ ಕೊಂಡು ಋತುಪರ್ಣನೆಂಬುವನು ಆಳುತ್ತಿದ್ದ ಅಯೋಧ್ಯಾನಗರಕ್ಕೆ ಬಂದು ತಲು ಪಿದನು.

1. ಕೇಳು ಕುಂತೀತನಯ ನಿಷಧನೃ
ಪಾಲನಿತ್ತಲು ಮರೆದು ಮಲಗಿದ
ಬಾಲಕಿಯ ಬಿಟ್ಟಡವಿಯಲಿ ಹೊರವಂಟನಾ ವನವ
ಕಾಲವಾವನ ಕೀಳು ಮಾಡದು
ಶೂಲಪಾಣಿಯೆ ಬಲ್ಲ ನಳ ಭೂ
ಪಾಲಕನ ವಿಧಿಯೇನನೆಂಬೆನು ಬಂದನಡವಿಯಲಿ

ಕೇಳು ಕುಂತೀ ತನಯ = ಆಲಿಸು ಧರ್ಮರಾಯನೇ; ನಿಷಧನೃಪಾಲ ನಿತ್ತಲು = ಈ ಕಡೆ ನಿಷಧಾಧಿಪತಿಯಾದ ನಳನು; ಮರೆದು ಮಲಗಿದ = ಮೈಮರೆತು ನಿದ್ರಿಸುತ್ತಿದ್ದ; ಬಾಲಕಿಯ = ದಮಯಂತಿಯನ್ನು; ಬಿಟ್ಟು + ಅಡವಿಯಲಿ = ಕಾಡಿನಲ್ಲಿಯೇ ಬಿಟ್ಟು; ಹೊರವಂಟನಾ ವನವ = ಆ ಕಾಡಿನಿಂದ ಹೊರಹೊರಟನು; ಕಾಲವು + ಆವನ = ಕಾಲವೆಂಬುದು ಯಾರನ್ನೂ; ಕೀಳು ಮಾಡದು = ಅಲಕ್ಷಿಸುವುದಿಲ್ಲ ಮತ್ತು ಶ್ರೇಷ್ಠ ಕನಿಷ್ಠವೆಂಬ ಭೇದ ತೋರುವುದಿಲ್ಲ; ಶೂಲಪಾಣಿಯೇ = ಕೈಯ್ಯಲ್ಲಿ ತ್ರಿಶೂಲವನ್ನು ಧರಿಸಿದ ಶಿವನೇ; ಬಲ್ಲ = ತಿಳಿದವನು; ನಳಭೂಪಾಲಕನ = ನಳಚಕ್ರವರ್ತಿಯ; ವಿಧಿಯನು + ಏನೆಂದು + ಎಂಬೆನು = ವಿಧಿಯನ್ನು ಏನೆಂದು ವರ್ಣಿಸಲಿ; ಬಂದನು + ಅಡವಿಯಲಿ = ಕಾಡಿನಲ್ಲಿ ಅಲೆದನು.

ಧರ್ಮರಾಯನೇ ಕೇಳು, ನಿಷಧ ಪುರಾಧಿಪತಿಯಾದ ನಳಮಹಾರಾಜನು ಕಾಡಿನಲ್ಲಿ ಆಯಾಸದಿಂದ ಮೈಮರೆತು ನಿದ್ರಿಸುತ್ತಿದ್ದ ದಮಯಂತಿಯನ್ನು ಆ ದಟ್ಟಡವಿಯಲ್ಲಿ ಏಕಾಂಗಿಯಾಗಿ ಬಿಟ್ಟು, ಆ ಕಾಡಿನಿಂದ ಹೊರಹೊರಟನು. ಕಾಲವೆಂಬುದು ಯಾರಲ್ಲೂ ಭೇದಭಾವ ಎಣಿಸುವುದಿಲ್ಲ. ಮುಂದೇನು ಎಂಬುದನ್ನು ಆ ಶಿವ ಮಾತ್ರ ಬಲ್ಲ. ನಳಚಕ್ರವರ್ತಿಯ ವಿಧಿಯನ್ನಾದರೂ ಏನೆಂದು ವರ್ಣಿಸಲಿ. ಅವನು ಆ ವನಾಂತರದಲ್ಲಿ ತಿರುಗಾಡುತ್ತ ಬರುತ್ತಿದ್ದನು.

2. ವನಿತೆ ಮಲಗಿಹಳೋ ಅಧೈರ್ಯದಿ
ನೆನೆವಳೋ ದೈವವನು ನಿದ್ರೆಯ
ಕನಸ ಕಂಡೇಳುವಳೊ ಕಾಣದೆ ಹಲವ ಹಂಬಲಿಸಿ
ಕನಲಿ ವಿಧಿಯನು ಬೈವಳೋ ಕಂ
ಬನಿಯ ಸುರಿವಳೊ ಶೋಕದಲಿ ನಿಜ
ತನುವ ಬಿಡುವಳೊ ಕಾಂತೆಯೆಂತಿಹಳೆನುತ ನಡೆತಂದ

ವನಿತೆ ಮಲಗಿಹಳೋ = ದಮಯಂತಿಯು ಇನ್ನೂ ನಿದ್ರಿಸುತ್ತಿದ್ದಾಳೋ; ಅಧೈರ್ಯದಿ = ಹೆದರಿ; ನೆನೆವಳೋ ದೈವವನು = ರಕ್ಷಣೆಗಾಗಿ ದೈವವನ್ನು ನೆನೆಯುತ್ತಿರುವಳೋ; ನಿದ್ರೆಯ ಕನಸ ಕಂಡೇಳುವಳೋ = ನಿದ್ದೆಯಲ್ಲಿ ಕನಸನ್ನು

ಕಂಡು ಎಚ್ಚರಗೊಳ್ಳುವಳೋ; ಕಾಣದೆ = ತನ್ನನ್ನು ಕಾಣದೆ; ಹಲವ ಹಂಬಲಿಸಿ = ಹಲವಾರು ರೀತಿಯಲ್ಲಿ ಕಳವಳಿಸಿ ತನಗಾಗಿ ಕಾತರಿಸುತ್ತ; ಕನಲಿ = ಕೋಪಗೊಂಡು; ವಿಧಿಯನು ಬೈವಳೋ = ವಿಧಿಯನ್ನು ಬೈಯುತ್ತಿರುವಳೋ; ಕಂಬನಿಯ ಸುರಿವಳೋ = ಅಳುತ್ತಿರುವಳೋ; ಶೋಕದಲಿ = ದುಃಖದಿಂದ; ನಿಜತನುವ ಬಿಡುವಳೋ = ದೇಹತ್ಯಾಗ ಮಾಡುವಳೋ; ಕಾಂತೆ + ಎಂತಿಹಳು + ಎನುತ = ತನ್ನ ಪ್ರಿಯಪತ್ನಿ ಹೇಗಿದ್ದಾಳೋ ಏನೋ ಎಂದು ಕಳವಳಿಸುತ್ತ; ನಡೆತಂದ = ನಳನು ಮುನ್ನಡೆದನು.

ಪತ್ನಿಯನ್ನು ತೊರೆದು ಹೊರಟನಾದರೂ ನಳನು ನಿರುಮ್ಮಳನಾಗಿರಲು ಸಾಧ್ಯವಾಗಲಿಲ್ಲ. ದಮಯಂತಿಯು ಇನ್ನೂ ನಿದ್ರಿಸುತ್ತಲೇ ಇದ್ದಾಳೋ ಅಥವಾ ಎಚ್ಚರಗೊಂಡು ತನ್ನನ್ನು ಕಾಣದೆ ಅಧೈರ್ಯದಿಂದ ಹಲವಾರು ರೀತಿಯಲ್ಲಿ ಕಳವಳಿಸಿ ಕಾತರಿಸಿ ದುಃಖಿಸುತ್ತ ರಕ್ಷಣೆಗಾಗಿ ದೈವವನ್ನು ನೆನೆಯುತ್ತಿರುವಳೋ, ನಿದ್ರೆಯಲ್ಲಿ ಕನಸನ್ನೇನಾದರೂ ಕಂಡು ಬೆಚ್ಚಿ ಎದ್ದಳೋ, ಅಥವಾ ತನ್ನ ದುಃಸ್ಥಿತಿಗಾಗಿ ವಿಧಿಯನ್ನೇ ಹಳಿಯುತ್ತಿರುವಳೋ, ಅಳುತ್ತಲಿರುವಳೋ ನನ್ನ ಪ್ರಿಯ ಪ್ರಾಣ ಕಾಂತೆಯು ಹೇಗಿರು ವಳೋ ಏನೋ ಎಂದು ಕಳವಳಿಸುತ್ತ ನಳನು ವನಾಂತರದಲ್ಲಿ ಮುಂದುವರಿ ಯುತ್ತಿದ್ದನು.

3. ಸುತರ ಪರರೆಡೆಗಿತ್ತು ನಂಬಿದ
ಸತಿಯ ತಂದಡವಿಯಲಿ ಮಲಗಿಸಿ
ಮತಿವಿಕಳನಾದೆನು ಪುರಾಕೃತಕರ್ಮಫಲವೈಸೆ
ಕ್ಷಿತಿಯೊಳಾರುಂಟೆನ್ನವೊಲ್ ನಿಜ
ಸತಿಗೆ ತಪ್ಪಿದ ಬಾಹಿರನುಯೆಂ
ದತಿಶಯದ ಶೋಕದಲಿ ನಡೆದನು ಶಿವಶಿವಾಯೆನುತ

ಸುತರ = ಮಕ್ಕಳನ್ನು; ಪರರೆಡೆಗಿತ್ತು = ಮತ್ತೊಬ್ಬರ ಸ್ವಾಧೀನದಲ್ಲಿರಿಸಿ; ನಂಬಿದ ಸತಿಯ = ತನ್ನ ಶೌರ್ಯ, ಪದವಿ, ಜವಾಬ್ದಾರಿಗಳನ್ನೇ ನಂಬಿ ಬಂದ ಪತ್ನಿಯನ್ನು; ತಂದು + ಅಡವಿಯಲ್ಲಿ = ಕರೆದು ತಂದು ಕಾಡಿನಲ್ಲಿ; ಮಲಗಿಸಿ = ನಿದ್ರಿಸುವಂತೆ ಮಾಡಿ; ಮತಿವಿಕಳನಾದೆನು = ಬುದ್ಧಿ ಕಳೆದುಕೊಂಡವನಂತಾಗಿದ್ದೇನೆ;

ಪುರಾಕೃತಕರ್ಮಫಲವೈಸೆ = ಹಿಂದೆ ಮಾಡಿದ ಕರ್ಮಗಳ ಫಲರೂಪ ಇದು ಅಲ್ಲವೇ; ಕ್ಷಿತಿಯೊಳು + ಆರು + ಉಂಟು + ಎನ್ನವೊಲ್ = ಈ ಭೂಮಿಯ ಮೇಲೆ ನನ್ನಂಥವರು ಯಾರಿದ್ದಾರೆ; ನಿಜಸತಿಗೆ = ಕೈಹಿಡಿದ ಧರ್ಮಪತ್ನಿಗೆ; ತಪ್ಪಿದ = ವಂಚಿಸಿದ; ಬಾಹಿರನು + ಎಂದು + ಅತಿಶಯದ = ಕರ್ತವ್ಯ ಭ್ರಷ್ಟನು ಎಂದು ವಿಪರೀತವಾಗಿ; ಶೋಕದಲಿ = ದುಃಖಿಸುತ್ತ; ನಡೆದನು = ವನದಲ್ಲಿ ಮುಂದುವರಿದನು; ಶಿವಶಿವಾಯೆನುತ = ಶಿವಶಿವಾ! ಎಂದು ದೈವಸ್ಮರಣೆಯಲ್ಲಿ.

ಮಕ್ಕಳನ್ನು ಪರರ ಸ್ವಾಧೀನದಲ್ಲಿರಿಸಿ, ತನ್ನ ಶೌರ್ಯ ಧೈರ್ಯವೆಲ್ಲವನ್ನೂ ನಂಬಿ ಕೈಹಿಡಿದ ಪ್ರಿಯ ಸತಿಯನ್ನು ಕಾಡುಪಾಲು ಮಾಡಿ ಮತಿಭ್ರಷ್ಟನಂತಾಗಿದ್ದೇನೆ. ಇವೆಲ್ಲವೂ ನನ್ನ ಪೂರ್ವಜನ್ಮದ ಕರ್ಮಫಲವಲ್ಲದೆ ಮತ್ತಿನ್ನೇನು? ಈ ಭೂಮಿ ಯಲ್ಲಿ ನನ್ನಂತೆ ಧರ್ಮ ಪತ್ನಿಗೆ ವಂಚಿಸಿದ ಭ್ರಷ್ಟರು ಇರಲು ಸಾಧ್ಯವೇ ಶಿವಶಿವಾ! ಎಂದು ಮರುಗಿದನು ನಳಮಹಾರಾಜ.

4. ಲೋಕದೊಳಗಗ್ಗಳೆಯ ಮಹಿಪರ
ನೇಕರವರೊಳಗಾರನೊಲ್ಲದೆ
ನೂಕಿ ತನ್ನನೆ ಒಲಿದು ಕೈಕೊಂಡಳು ಸರೋಜಮುಖಿ
ಆಕೆಯಗಲಿದ ಪಾತಕನು ತಾ
ನೇಕೆ ಧರೆಯೊಳು ಶಿವಶಿವಾಯೆಂ
ದಾ ಕಮಲಲೋಚನೆಗೆ ಮರುಗಿದನರಸ ಕೇಳೆಂದ

ಲೋಕದೊಳಗೆ + ಅಗ್ಗಳೆಯ = ಲೋಕದಲ್ಲಿ ಶ್ರೇಷ್ಠರಾದ, ಪ್ರಸಿದ್ಧರಾದ; ಮಹಿಪರು + ಅನೇಕರು + ಅವರೊಳಗೆ + ಆರನು + ಒಲ್ಲದೆ = ಭೂಮಂಡಲಾ ಧಿಪತಿಗಳು ಅನೇಕರಿದ್ದಾರೆ, ಅವರುಗಳಲ್ಲಿ ಯಾರನ್ನೂ ಒಪ್ಪಿಕೊಳ್ಳದೆ; ನೂಕಿ = ತಿರಸ್ಕರಿಸಿ; ತನ್ನನೆ ಒಲಿದು = ನನ್ನನ್ನೇ ಪ್ರೀತಿಸಿ; ಕೈಕೊಂಡಳು = ಮೆಚ್ಚಿ ವರಿಸಿದಳು; ಸರೋಜಮುಖಿ = ದಮಯಂತಿ; ಆಕೆಯಗಲಿದ = ಆಕೆಯನ್ನು ಅಗಲಿದ; ಪಾತಕನು = ಪಾಪಿಯು; ತಾನೇಕೆ = ನಾನು ಏಕೆ; ಧರೆಯೊಳು = ಈ ಭೂಮಿಯಲ್ಲಿರಬೇಕು; ಶಿವಶಿವಾಯೆಂದಾ = ಶಿವಶಿವಾ ಎಂದು ಆ;

ಕಮಲಲೋಚನೆಗೆ = ದಮಯಂತಿಯ ದುಸ್ಥಿತಿಗೆ; ಮರುಗಿದನು = ಮರುಗಿದನು ನಳಮಹಾರಾಜನು; ಅರಸ ಧರ್ಮ ರಾಯನೇ ಕೇಳು ಎಂದನು ರೋಮಶ ಮುನಿ.

ಧರ್ಮರಾಯನೇ ಕೇಳು ಲೋಕದಲ್ಲಿ ಪ್ರಸಿದ್ಧರೂ ಶ್ರೇಷ್ಠರೂ ಆಗಿರುವ ಅನೇಕ ಭೂಮಂಡಲಾಧೀಶರಿದ್ದರು. ಅವರುಗಳಲ್ಲಿ ಯಾರನ್ನೂ ಒಲ್ಲದೆ ದಮಯಂತಿಯು ತನ್ನನ್ನೇ ಬಯಸಿ ಒಲಿದು ವರಿಸಿದ್ದಳು. ಅಂತಹವಳನ್ನು ಅಗಲಿ ಬಂದ ಪಾಪಿ ನಾನು. ನನ್ನಂಥವನು ಈ ಭೂಮಿಯಲ್ಲಿದ್ದು ಏನು ಪ್ರಯೋಜನ ಎಂದು ದಮಯಂ ತಿಯ ದುಸ್ಥಿತಿಗಾಗಿ ನಳಮಹಾರಾಜನು ಮರುಗಿದನು.

5. ಈ ಪರಿಯೊಳತಿಶೋಕದಿಂದ ಪ್ರ
ಳಾಪಿಸುವ ನಳನೃಪತಿ ಹೆಚ್ಚಿದ
ತಾಪದಲಿ ಕಡುನೊಂದು ಬಳಲುತ ತನ್ನ ಮನದೊಳಗೆ
ಶ್ರೀಪತಿಯ ನೆಲೆಗೊಳಿಸಿ ಹೃದಯದ
ತಾಪದೊಳು ಬರುತಿರಲು ಮುಂದೆ ಸ
ಮೀಪದಲಿ ಹುತವಹನ ಮಹಿಮೆಯ ಕಂಡನವನೀಶ

ಈ ಪರಿಯೊಳು + ಅತಿಶೋಕದಿಂದ = ಈ ಪರಿಯಲ್ಲಿ ಅತ್ಯಂತ ದುಃಖದಿಂದ; ಪ್ರಳಾಪಿಸುವ = ರೋಧಿಸುತ್ತ ಬಡಬಡಿಸುವ; ನಳನೃಪತಿ = ನಳಮಹಾರಾಜನು; ಹೆಚ್ಚಿದ = ಅತಿಶಯವಾಗಿ ಮೇರೆ ಮೀರಿದ; ತಾಪದಲಿ = ಚಿಂತೆಯಿಂದ; ಕಡುನೊಂದು = ವಿಪರೀತವಾಗಿ ಮರುಗುತ್ತ; ಬಳಲುತ = ಆಯಾಸಗೊಳ್ಳುತ್ತ; ತನ್ನ ಮನದೊಳಗೆ = ತನ್ನ ಮನಸ್ಸಿನಲ್ಲಿ; ಶ್ರೀಪತಿಯ = ಶ್ರೀಹರಿಯನ್ನು; ನೆಲೆಗೊಳಿಸಿ = ಧ್ಯಾನಿಸುತ್ತ; ಹೃದಯದ = ಮನಸ್ಸಿನ; ತಾಪದೊಳು = ಚಿಂತೆಯಲ್ಲಿ ಬೆಂದು; ಬರುತಿರಲು ಮುಂದೆ = ಬರುತ್ತಿರುವಾಗ ಎದುರಿಗೆ; ಸಮೀಪದಲಿ = ಹತ್ತಿರದಲ್ಲಿಯೇ; ಹುತವಹನ = ಕಾಡ್ಗಿಚ್ಚಿನ; ಮಹಿಮೆಯ = ಆಟಾಟೋಪವನ್ನು; ಕಂಡನವನೀಶ = ನಳಭೂಪನು ಕಂಡನು.

ಈ ರೀತಿಯಲ್ಲಿ ವಿಪರೀತವಾದ ನೋವಿನಿಂದಲೂ, ಚಿಂತೆಯಿಂದಲೂ, ದಮಯಂತಿಯ ಸ್ಥಿತಿಯನ್ನು ಕುರಿತ ಮರುಕದಿಂದಲೂ ಆಯಾಸಗೊಂಡ ನಳ ನೃಪನು ಮನಸ್ಸಿನಲ್ಲಿ ಶ್ರೀಹರಿಯನ್ನು ಧ್ಯಾನಿಸುತ್ತ, ತಪ್ತ ಹೃದಯದಿಂದ ಹಾಗೆಯೇ,

ಕಾಡಿನಲ್ಲಿ ಮುಂದು ಮುಂದಕ್ಕೆ ಬರುತಿರಲು, ತನ್ನೆದುರೇ ಕಾಡ್ಗಿಚ್ಚು ಕಾಡನ್ನು ಕಬಳಿಸುತ್ತ ಧಗಧಗಿಸಿ ಉರಿಯುತ್ತಿರುವುದನ್ನು ಕಂಡನು.

6. ಏನನೆಂಬೆನು ನೃಪತಿ ಕಿಚ್ಚಿನ
ಹಾನಿಯನು ಬನದೊಳಗೆ ಚಲಿಸುತ
ಭಾನುಮಂಡಲವಡರೆ ಮುಸುಕಿದ ಹೊಗೆಯ ಹೊರಳಿಯಲಿ
ಕಾನನವನೆಡೆಗೊಂಡ ದಳ್ಳುರಿ
ಗಾನಲಾಪುದೆ ತರುನಿಕರ ವೈ
ಮಾನಿಕರು ನಡನಡುಗೆ ಬೆಂದದು ಸಕಲ ವನಭೂಮಿ

ಏನನೆಂಬೆನು = ಏನೆಂದು ವರ್ಣಿಸಲಿ; ನೃಪತಿ = ಧರ್ಮರಾಯನೇ; ಕಿಚ್ಚಿನ ಹಾನಿಯನು = ಕಾಡ್ಗಿಚ್ಚು ಉಂಟುಮಾಡುತ್ತಿದ್ದ ಹಾನಿಕಾರಕ ತೊಂದರೆಗಳನ್ನು; ಬನದೊಳಗೆ = ಕಾಡಿನಾದ್ಯಂತ; ಚಲಿಸುತ = ವ್ಯಾಪಿಸುತ್ತ; ಭಾನುಮಂಡಲವಡರೆ = ಸೂರ್ಯಮಂಡಲದವರೆಗೂ ಆವರಿಸಿಕೊಳ್ಳಲು; ಮುಸುಕಿದ = ಮುತ್ತಿಕೊಂಡ; ಹೊಗೆಯ ಹೊರಳಿಯಲಿ = ದಟ್ಟವಾದ ಹೊಗೆಯ ಸುರುಳಿಗಳಲ್ಲಿ; ಕಾನನವನು + ಎಡೆಗೊಂಡ = ಕಾಡನ್ನು ವ್ಯಾಪಿಸಿದ; ದಳ್ಳುರಿಗೆ + ಆನಲು + ಆಪುದೆ = ದಟ್ಟವಾದ ಜ್ವಾಲೆಗಳನ್ನು ತಡೆದುಕೊಳ್ಳಲಾಗುವುದೇ; ತರುನಿಕರ = ಕಾಡಿನಲ್ಲಿದ್ದ; ಗಿಡ ಮರ ಬಳ್ಳಿ ಪೊದರುಗಳು ಮುಂತಾದ ಸಸ್ಯಸಮೂಹವೂ; ವೈಮಾನಿಕರು = ಆಕಾಶ ಮಾರ್ಗದಲ್ಲಿ ವಿಮಾನಗಳಲ್ಲಿ ಸಂಚರಿಸುವ ದೇವಸಂಕುಲವೂ; ನಡನಡುಗೆ = ನಡುಗಿ ಹೋಗುವಂತೆ; ಬೆಂದುದು = ಸುಟ್ಟುಹೋಯಿತು; ಸಕಲ ವನಭೂಮಿ = ಸಮಸ್ತ ಅರಣ್ಯಪ್ರದೇಶವೆಲ್ಲ.

ಧರ್ಮರಾಯನೇ, ಆ ಕಾಡ್ಗಿಚ್ಚಿನಿಂದ ಉಂಟಾದ ಕಷ್ಟನಷ್ಟಗಳನ್ನು ಏನೆಂದು ವರ್ಣಿಸಲಿ. ಧಗಧಗಿಸುತ್ತಿದ್ದ ಕಾಡ್ಗಿಚ್ಚಿನ ಅಗ್ನಿ ಜ್ವಾಲೆಗಳು ಅರಣ್ಯದಾದ್ಯಂತ ಚಲಿಸುತ್ತ ಆಕಾಶದಲ್ಲಿಯ ಸೂರ್ಯಮಂಡಲದವರೆಗೂ ವ್ಯಾಪಿಸಿತು. ಮುತ್ತಿಕೊಂಡ ದಟ್ಟವಾದ ಹೊಗೆಯ ಸುರುಳಿಗಳು ಸಹಿಸಲಸಾಧ್ಯವಾಗಿ ಹಾನಿಯನ್ನುಂಟು ಮಾಡುತ್ತ ಇರಲು ಕಾಡಿನಲ್ಲಿದ್ದ ಗಿಡ, ಮರ, ಬಳ್ಳಿ, ಪೊದರುಗಳಾದಿಯಾಗಿ ಸಮಸ್ತ ಸಸ್ಯಸಂಕುಲವೂ,

ಆಕಾಶ ಮಾರ್ಗದಲ್ಲಿ ವಿಮಾನಗಳಲ್ಲಿ ಸಂಚರಿಸುತ್ತಿದ್ದ ದೇವ ಸಂಕುಲವೂ, ಗಡಗಡ ನಡುಗಿ ಹೋಗುವಂತೆ ಸಮಸ್ತ ಅರಣ್ಯ ಪ್ರದೇಶವೂ ಅಗ್ನಿಗಾಹುತಿಯಾದುವು.

7. ಬಿದಿರ ಮೆಳೆ ಧಗಧಗಿಸೆ ಘನ ಹೆ
ಬ್ಬಿದಿರು ಛಟಛಟಿರೆನಲು ಉರಿಯೊಳು
ಕದಳಿಗಳು ಸಿಮಿಸಿಮಿಸೆ ತರುಗಳನುರುಹಿ ಮೆಳೆಗಳಲಿ
ಗದಗದಿಸೆ ಗುಹೆಗಳಲಿ ಮೃಗತತಿ
ಬೆದರಿ ಹಾಯ್ದುವು ಪಕ್ಷಿಸಂಕುಲ
ಉದುರಿದುವು ಗರಿಸಹಿತ ಬೆಂದಾ ವನದ ಮಧ್ಯದಲಿ

ಬಿದಿರ ಮೆಳೆ = ಕಾಡ್ಗಿಚ್ಚಿನಿಂದ ಬಿದಿರ ಹಿಂಡಿಲುಗಳು; ಧಗಧಗಿಸೆ = ಧಗಧಗಿಸಿ ಉರಿಯಲು; ಘನ ಹೆಬ್ಬಿದಿರು = ಬಲಿತು ಬೆಳೆದ ದೊಡ್ಡ ದೊಡ್ಡ ಬಿದಿರುಗಳು; ಛಟಛಟಿರ್+ಎನಲು = ಛಟಛಟಿರೆಂದು ಶಬ್ದ ಮಾಡುತ್ತಾ ಮುರಿದು ಹೋಗಿ ಉರಿಯಲು; ಉರಿಯೊಳು = ಅಗ್ನಿ ಜ್ವಾಲೆಯಲ್ಲಿ; ಕದಳಿಗಳು = ಬಾಳೆಯ ಗಿಡಗಳು; ಸಿಮಿಸಿಮಿಸೆ = ಸಿಮಿಸಿಮಿಯೆಂದು ಶಬ್ದ ಮಾಡುತ್ತಾ ಉರಿಯಲು; ತರುಗಳ ನುರುಹಿ = ಮರಗಳನ್ನು ಸುಟ್ಟು ಬೂದಿ ಮಾಡಿ; ಮೆಳೆಗಳಲಿ = ಪೊದೆಗಳಲ್ಲಿ; ಗದಗದಿಸೆ = ಗದಗದ ಎಂದು ಶಬ್ದ ಮಾಡುತ್ತಾ ಉರಿದು ಹೋಗಲು; ಗುಹೆಗಳಲಿ = ಗವಿಗುಹೆಗಳಲ್ಲಿದ್ದ; ಮೃಗ ಸಂತತಿ = ಮೃಗ ಸಮೂಹವು; ಬೆದರಿ ಹಾಯ್ದುವು = ಅಗ್ನಿಜ್ವಾಲೆಗೆ ಬೆದರಿ ಹೊರಹಾರಿದುವು; ಪಕ್ಷಿಸಂಕುಲ = ಪಕ್ಷಿಸಮೂಹವು; ಉದುರಿದುವು = ಕೆಳಗೆ ಉದುರಿದುವು; ಗರಿಸಹಿತ ಬೆಂದಾ = ಗರಿಸಹಿತ ಬೆಂದು; ಆ ವನದ = ಆ ಕಾಡಿನ; ಮಧ್ಯದಲಿ = ಆ ಅರಣ್ಯಪ್ರದೇಶದ ನಡುವಿನಲ್ಲಿ.

ಕಾಡ್ಗಿಚ್ಚಿನಿಂದ ಬಿದಿರ ಹಿಂಡಿಲುಗಳು ಧಗಧಗಿಸಿ ಉರಿಯಲಾರಂಭಿಸಿದಂತೆ ಬಲಿದು ಬೆಳೆದಿದ್ದ ಹೆಬ್ಬಿದಿರ ಮೆಳೆಗಳು ಬೆಂಕಿಯ ನಾಲಗೆಗೆ ಸಿಕ್ಕು ಛಟ್ ಛಟಿರ್ ಎಂದು ಸಿಡಿದು ಶಬ್ದ ಮಾಡುತ್ತಾ ಮುರಿದು ಉರಿಯುತ್ತಿರಲು; ಆ ಭಯಂಕರ ಅಗ್ನಿಜ್ವಾಲೆಗೆ ತುತ್ತಾದ ಬಾಳೆಯ ಗಿಡಗಳು ಸಿಮಿಸಿಮಿ ಎಂದು ಉಸಿರು ನೀಗುತ್ತ ಉರಿಯಲು; ಬೆಂಕಿಯು ಮರಗಳನ್ನು ಸುಟ್ಟು ಬೂದಿಯಾಗಿ ಕರಗಿಸಿ ಪೊದೆಗಳಲ್ಲಿ

ಗದಗದಿಸಿ ಉರಿದುಹೋಗಲು; ಗುಹೆ, ಗವಿಗಳಲ್ಲಿ ವಾಸಿಸುತ್ತಿದ್ದ ಮೃಗ ಸಂತತಿಯು ಅಗ್ನಿಜ್ವಾಲೆಗೆ ತಪ್ತವಾಗಿ ಬೆದರಿ ಹೊರಹಾರಿದುವು. ಪಕ್ಷಿಸಂಕುಲವೂ ಗರಿಸಹಿತ ಬೆಂದು ಕೆಳಗುದುರಿತು. ಹೀಗೆ ಆ ಕಾಡಿನ ನಡುವೆ ಅಗ್ನಿಯ ಆಟಾಟೋಪ ಸಹಿಸಲಸಾಧ್ಯವಾಗಿತ್ತು.

8. ತೆಗೆದು ಹಾಯ್ದುವು ಸಿಂಹ ಶಾರ್ದೂ
ಲಗಳು ಕರಿಗಳ ಹಿಂಡು ನಾನಾ
ಮೃಗಗಳಗಣಿತ ಬೆಂದು ಬಿದ್ದವು ನಿಮಿಷಮಾತ್ರದಲಿ
ಚಿಗಿದು ಹಾಯ್ದುವು ಗಂಡಭೇರುಂ
ಡಗಳು ಮೊದಲಾದಖಿಳಮೃಗಪ
ಕ್ಷಿಗಳು ಕೆಡೆದುವು ಕಿಚ್ಚಿನೊಳಗವನೀಶ ಕೇಳೆಂದ

ತೆಗೆದು ಹಾಯ್ದವು = ಬೆದರಿ ನೆಗೆದು ಓಡಿದುವು; ಸಿಂಹ ಶಾರ್ದೂಲಗಳು = ಹುಲಿ ಸಿಂಹಗಳು; ಕರಿಗಳ ಹಿಂಡು = ಆನೆಗಳ ಹಿಂಡು; ನಾನಾ ಮೃಗಗಳು + ಅಗಣಿತ = ಲೆಕ್ಕವಿಲ್ಲದಷ್ಟು ವಿವಿಧ ರೀತಿಯ ಮೃಗಸಮೂಹವು; ಬೆಂದು ಬಿದ್ದವು = ಬೆಂದು ಬೂದಿಯಾದುವು; ನಿಮಿಷ ಮಾತ್ರದಲಿ = ನಿಮಿಷ ಮಾತ್ರದಲ್ಲಿ; ಚಿಗಿದು ಹಾಯ್ದುವು = ಚಿಮ್ಮಿ ಹಾರಿ ಹೋದುವು; ಗಂಡ ಭೇರುಂಡಗಳು = ಗಂಡಭೇರುಂಡ ಪಕ್ಷಿಗಳು; ಮೊದಲಾದ + ಅಖಿಳ + ಮೃಗಪಕ್ಷಿಗಳು = ಮೊದಲಾದ ಎಲ್ಲ ಜಾತಿ ವೈವಿಧ್ಯಗಳ ಮೃಗ ಪಕ್ಷಿಗಳು; ಕೆಡೆದುವು = ಪ್ರಾಣಬಿಟ್ಟು ಬಿದ್ದುವು; ಕಿಚ್ಚಿನೊಳಗವನೀಶ ಕೇಳೆಂದ= ಬೆಂಕಿಯ ಧಾಳಿಗೆ ಸಿಲುಕಿ ಅವನಿಗೊಡೆಯನಾದ ಧರ್ಮರಾಯನೇ ಕೇಳು ಎಂದನು.

ಅವನಿಗೊಡೆಯನಾದ ಧರ್ಮರಾಯನೇ ಕೇಳು, ಬೆಂಕಿಯ ಉಪಟಳವನ್ನು ಸಹಿಸಿಕೊಳ್ಳಲಾಗದೆ ಹುಲಿಸಿಂಹಗಳು, ಆನೆಗಳ ಹಿಂಡು, ಲೆಕ್ಕವಿಲ್ಲದಷ್ಟು ವಿವಿಧ ರೀತಿಯ ಮೃಗ ಸಮೂಹಗಳು ನಿಮಿಷ ಮಾತ್ರದಲ್ಲಿ ಬೆಂದು ಹೋದುವು. ಗಂಡ ಭೇರುಂಡ ಪಕ್ಷಿಗಳು ಚಿಮ್ಮಿ ಹಾರಿಹೋದುವು. ಹೀಗೆ ಆ ಕಾಡಿನಲ್ಲಿ ವಿವಿಧ ಮೃಗ ಪಕ್ಷಿಸಂಕುಲವು ಅಗ್ನಿಜ್ವಾಲೆಗೆ ಸಿಲುಕಿ ಬೆಂದು ಬೂದಿ ಯಾದುವು.

9. ಪ್ರಳಯಕಾಲದಿ ಸುಡುವ ವಡಬಾ
ನಳನೊಯೆನಲಾ ವನವ ಸುಡುತಲಿ
ಸುಳಿಸುಳಿಯುತಾಹಾರಗೊಳುತಿರಲಲ್ಲಿ ದನಿಯಾಯ್ತು
ಸಿಲುಕಿದೆನು ಪಾವಕನೊಳೆನ್ನನು
ಒಲಿದು ಹಾ ನೃಪಕುಲಶಿರೋಮಣಿ
ಕಳೆದು ಬಿಡಿಸೈ ಸುಕೃತ ನಿನಗಹುದೆಂದುದಾ ನಿನದ

ಪ್ರಳಯಕಾಲದಿ = ಪ್ರಳಯ ಕಾಲದಲ್ಲಿ; ಸುಡುವ = ಸುಟ್ಟು ಕರುಕಲಾಗಿಸುವ; ವಡಬಾನಳನೊ + ಎನಲ್ + ಆ = ಕಡಲ ಕಿಚ್ಚೋ ಎಂಬಂತೆ; ಆ ವನವ = ಆ ಅರಣ್ಯವನ್ನು; ಸುಡುತಲಿ = ಸುಟ್ಟುಹಾಕುತ್ತ; ಸುಳಿಸುಳಿಯುತ + ಆಹಾರಗೊಳುತಿರಲು + ಅಲ್ಲಿ = ಸುಳಿಸುತ್ತುತ್ತ ಆಪೋಷನ ಮಾಡುತ್ತಿರುವ ಆ ಹೊತ್ತಿಗೆ ಅಲ್ಲಿ; ದನಿಯಾಯ್ತು = ಒಂದು ಸ್ವರವು ಕೇಳಿಬಂದಿತು; ಸಿಲುಕಿದೆನು = ಸಿಕ್ಕಿಹಾಕಿಕೊಂಡಿದ್ದೇನೆ; ಪಾವಕದೊಳ್ + ಎನ್ನನು = ಬೆಂಕಿಯಲ್ಲಿ ನನ್ನನ್ನು; ಒಲಿದು = ಕರುಣೆಯಿಂದ; ಹಾ = ಹಾ!; ನೃಪಕುಲ ಶಿರೋಮಣಿ = ನೃಪಕುಲಕ್ಕೆ ಕಿರೀಟಪ್ರಾಯನಾದವನೇ, ನಳನೇ; ಕಳೆದು = ಈ ಕಷ್ಟವನ್ನು ದೂರಮಾಡಿ; ಬಿಡಿಸೈ = ಪಾರುಮಾಡು; ಸುಕೃತ = ಪುಣ್ಯ; ನಿನಗೆ + ಅಹುದು + ಎಂದುದು + ಆ = ನಿನಗೆ ಪುಣ್ಯ ಬರುತ್ತದೆ ಎಂದಿತು ಆ; ನಿನದ = ಸ್ವರ.

ಲೋಕವು ಅಂತ್ಯಗೊಳ್ಳುತ್ತದೆ ಎಂದು ಹೇಳಲಾಗುವ ಪ್ರಳಯಕಾಲದಲ್ಲಿ ಏಳುವ ಕಡಲ ಕಿಚ್ಚಿನಂತೆ ಆ ಅರಣ್ಯದಲ್ಲಿ ಎದ್ದ ಅಗ್ನಿ ಜ್ವಾಲೆಗಳು ಇಡೀ ಅರಣ್ಯ ಪ್ರದೇಶವನ್ನೇ ಸುಟ್ಟು ಹಾಕುತ್ತ, ಸುಳಿ ಸುಳಿಯಾಗಿ ಸುಳಿಯುತ್ತ ಎಲ್ಲವನ್ನೂ ಆಪೋಷನಗೊಳ್ಳುವಂತೆ ಬೂದಿ ಮಾಡುತ್ತಿರಲು, ಆ ಸಮಯದಲ್ಲಿ ಅಲ್ಲೊಂದು ಸ್ವರವು ಕೇಳಿಸಿತು. "ಬೆಂಕಿಯಲ್ಲಿ ಸಿಕ್ಕಿಹಾಕಿಕೊಂಡಿದ್ದೇನೆ. ಹಾ! ನೃಪಕುಲ ಶಿರೋಮಣಿ ನಳನೇ ಕರುಣೆಯಿಂದ ನನ್ನನ್ನು ಈ ಕಷ್ಟದಿಂದ ಪಾರುಮಾಡು. ನಿನಗೆ ಪುಣ್ಯ ಬರುತ್ತದೆ" ಎಂದು ಆ ಸ್ವರವು ಹೇಳಿತು.

ಬಡಬಾನಲ ಅಥವಾ ವಡಬಾನಲ ಎಂಬುದು ಪ್ರಳಯಕಾಲದಲ್ಲಿ ಉತ್ತರ ಸಮುದ್ರದಲ್ಲಿ ಏಳುವ ಹೆಣ್ಣು ಕುದುರೆ ಮುಖದಿಂದ ಹೊರಹೊಮ್ಮುವ ಅಗ್ನಿಜ್ವಾಲೆ. (ಸಂಸ್ಕೃತ–ಕನ್ನಡ ಶಬ್ದಕೋಶ)

10. ಆಗಲಾ ದನಿಗೇಳಿ ನೃಪತಿ ಸ
ರಾಗದಿಂದವೆ ಬಂದು ಹೊಕ್ಕನು
ಕೂಗಿದವರಾರೆನುತ ಬರುತಿರೆ ಕಂಡನುರಗಪತಿ
ಪೋಗುತಿದೆಯೆನ್ನಸುವು ಸಲಹು ಷ
ಡಾಗಮಜ್ಞ ನೃಪಾಲಯೆನಲಾ
ಭೋಗಿಯನು ಕಂಡರಸ ನೀನಾರೆಂದು ಬೆಸಗೊಂಡ

ಆಗಲ್ + ಆ ದನಿ + ಕೇಳಿ = ಆಗ ಆ ಧ್ವನಿಯನ್ನು ಆಲಿಸಿ; ನೃಪತಿ = ನೃಪಾಲ ನಳಮಹಾರಾಜನು; ಸ + ರಾಗದಿಂದವೆ = ದಯಾರ್ದ್ರನಾಗಿ; ಬಂದು = ಬಂದು; ಹೊಕ್ಕನು = ಆ ಪ್ರದೇಶವನ್ನು ಪ್ರವೇಶಿಸಿದನು; ಕೂಗಿದವರು + ಆರ್ + ಎನುತ = ಕೂಗಿದವರು ಯಾರು ಎನ್ನುತ್ತ; ಬರುತಿರೆ = ಬರುತ್ತಿರಲು; ಕಂಡನು + ಉರಗಪತಿ = ಸರ್ಪರಾಜನು ಅವನನ್ನು ನೋಡಿದನು; ಪೋಗುತಿದೆ + ಎನ್ನ + ಅಸುವು = ನನ್ನ ಪ್ರಾಣವು ಹೋಗುತ್ತಿದೆ; ಸಲಹು = ರಕ್ಷಿಸು; ಷಡಾಗಮಜ್ಞ = ಆರೂ ಆಗಮಗಳನ್ನೂ ಅರಿತಿರುವ ಜ್ಞಾನಿಯೇ; ನೃಪಾಲ + ಎನಲು + ಆ = ರಾಜನೇ ಎಂದು ಹೇಳಲು; ಆ ಭೋಗಿಯನು = ಆರ್ + ಎಂದು = ಆ ಸರ್ಪ ವನ್ನು ನೀನು ಯಾರು ಎಂದು; ಬೆಸಗೊಂಡ = ಪ್ರಶ್ನಿಸಿದನು.

ಕಾಡ್ಗಿಚ್ಚಿನ ನಡುವೆ ತೂರಿ ಬಂದ ಧ್ವನಿಯನ್ನು ಆಲಿಸಿದ ನಳಮಹಾರಾಜನು ಕರುಣಾರ್ದ್ರ ಹೃದಯನಾಗಿ ದನಿ ಬಂದತ್ತ ಬರುತ್ತ ಕೂಗಿದವರು ಯಾರು ಎಂದು ಪ್ರಶ್ನಿಸಿದಾಗ ಅವನನ್ನು ಕಂಡು ಅಗ್ನಿಜ್ವಾಲೆಯಲ್ಲಿ ಸಿಲುಕಿದ್ದ ಸರ್ಪರಾಜನು "ಷಡಾಗಮಗಳನ್ನೂ ಅರಿತ ಜ್ಞಾನಿಯಾದ ನಳಮಹಾರಾಜನೇ ನನ್ನ ಪ್ರಾಣವು ಹೋಗುತ್ತಿದೆ ನನ್ನನ್ನು ರಕ್ಷಿಸು" ಎನ್ನಲು, ನಳನು ಆ ಸರ್ಪವನ್ನುದ್ದೇಶಿಸಿ 'ನೀನು ಯಾರು' ಎಂದು ಪ್ರಶ್ನಿಸಿದನು.

11. ಉರಗಪತಿ ಕಾರ್ಕೋಟಕನು ತಾ
ನರಸ ಕೇಳೀ ಬನದೊಳಿರುತಿರೆ
ಪರಮಋಷಿ ಬಂದೆನ್ನ ತಾಗಿದನಂದು ಭೀತಿಯಲಿ

ಕರೆದು ಕೊಟ್ಟನು ಶಾಪವನು ಸಂ
ಚರಿಸದಂತಿರೆಯೆನಗೆಯಿದು ಪರಿ
ಹರವದೆಂದಿಗೆ ಮುನಿಪ ಕರುಣಿಪುದೆಂದೊಡಿಂತೆಂದ

ಉರಗಪತಿ = ಸರ್ಪರಾಜನಾದ; ಕಾರ್ಕೋಟಕನು = ಕಾರ್ಕೋಟಕ ನೆಂಬುವನು; ತಾನರಸ = ನಾನು ಅರಸನೇ; ಕೇಳು + ಈ = ಆಲಿಸು ಈ; ಬನ ದೊಳಿರುತಿರೆ = ಈ ಅರಣ್ಯದಲ್ಲಿ ವಾಸಿಸುತ್ತಿರಲು; ಪರಮಋಷಿ = ಮಹಾತಪಸ್ವಿ ಯೊಬ್ಬನು; ಬಂದೆನ್ನ = ಬಂದು ನನ್ನನ್ನು; ತಾಗಿದನಂದು = ಮುಟ್ಟಿದನು ಒಂದು ದಿನ; ಭೀತಿಯಲಿ = ಹೆದರಿಕೆಯಿಂದ; ಕರೆದು ಕೊಟ್ಟನು = ಕೊಟ್ಟನು; ಶಾಪವನು = ಶಾಪವನ್ನು; ಸಂಚರಿಸದಂತೆ + ಇರೆ + ಎನಗೆ + ಇದು = ಸಂಚರಿಸಲಾಗದಂತಿರು ಎಂದು ನನಗೆ ಇದು; ಪರಿಹರಿವದೆಂದಿಗೆ = ಎಂದು ಪರಿಹಾರವಾಗುತ್ತದೆ; ಮುನಿಪ = ಮುನಿಶ್ರೇಷ್ಠನೇ; ಕರುಣಿಸುವುದು + ಎಂದೊಡೆ + ಇಂತೆಂದ = ಕರುಣೆತೋರು ಎನ್ನಲು ಈ ರೀತಿ ಹೇಳಿದನು.

“ಅರಸನಾದ ನಳಭೂಪತಿಯೇ ಕೇಳು, ನಾನು ಕಾರ್ಕೋಟಕನೆಂಬ ಸರ್ಪರಾಜನು. ಈ ಅರಣ್ಯದಲ್ಲಿ ವಾಸಿಸುತ್ತಿದ್ದೆ. ಹೀಗಿರಲು ಒಂದು ದಿನ ಒಬ್ಬ ಮಹಾತಪಸ್ವಿಯು ತಿಳಿಯದೆ ನನ್ನನ್ನು ಮುಟ್ಟಿದನು. ನಾನು ಕಡಿದುಬಿಡಬಹುದೆಂಬ ಆ ಭೀತಿಯಲ್ಲಿಯೇ ನಾನು ಸಂಚರಿಸದೆ ಅಲ್ಲಿಯೇ ಬಿದ್ದಿರಬೇಕೆಂದು ಶಾಪವಿತ್ತನು. ಈ ಶಾಪವು ಎಂದಿಗೆ ಪರಿಹಾರವಾಗುತ್ತದೆ ಮುನಿಶ್ರೇಷ್ಠನೇ, ಕರುಣೆ ತೋರು ಎಂದು ನಾನು ಕೇಳಲು ಈ ರೀತಿ ಹೇಳಿದನು”.

12. ಇರಲಿರಲು ಕಾಲಾಂತರಕೆ ಭೂ
ವರನು ನಳನೃಪನಿಲ್ಲಿಗೈದುವ
ಧರಣಿಪನ ಕರಕಮಲ ಸೋಂಕಲು ಶಾಪವಿದು ಬಳಿಕ
ಪರಿಹರಿಪುದೆನೆ ಮುನಿಯ ವಚನದಿ
ಬರವ ಹಾರುತ್ತಿರಲು ಬಂದೈ
ಕರುಣದಿಂದಗ್ನಿಯನು ಪರಿಹರಿಸೆಂದನುರಗಪತಿ

ಇರಲು + ಇರಲು = ಹೀಗೆಯೇ ಇರುತ್ತಿರಲು; ಕಾಲಾಂತರಕೆ = ಕೆಲವು ಕಾಲದ ಬಳಿಕ; ಭೂವರನು = ಭೂ ಶ್ರೇಷ್ಠನೆನಿಸಿದ; ನಳನೃಪನು + ಇಲ್ಲಿಗೆ + ಐದುವ=ನಳ ಮಹಾರಾಜನು ಇಲ್ಲಿಗೆ ಬರುತ್ತಾನೆ; ಧರಣಿಪನ = ಆ ಧರಣಿಪಾಲನ; ಕರಕಮಲ = ಕಮಲದೋಪಾದಿಯ ಕೈಗಳು; ಸೋಂಕಲು = ತಾಗಲು; ಶಾಪವಿದು ಬಳಿಕ = ಅನಂತರದಲ್ಲಿ ಈ ಶಾಪವು; ಪರಿಹರಿಪುದು + ಎನೆ = ಪರಿಹಾರವಾಗುತ್ತದೆ ಎನ್ನಲು; ಮುನಿಯ ವಚನದಿ = ಆ ತಪಸ್ವಿಯ ಮಾತಿನಂತೆ; ಬರವ ಹಾರುತ್ತಿರಲು = ನಿನ್ನ ಬರುವಿಕೆಯನ್ನು ಎದುರು ನೋಡುತ್ತಿರಲು; ಬಂದೈ = ನೀನು ಬಂದೆ; ಕರುಣದಿಂದಗ್ನಿಯನು = ಕೃಪೆ ಮಾಡಿ ಈ ಮಹಾಗ್ನಿಯಿಂದ ಆದ ತೊಂದರೆಯನ್ನು; ಪರಿಹರಿಸು + ಎಂದನ್ + ಉರಗಪತಿ = ಪರಿಹರಿಸಿ ನನ್ನನ್ನು ರಕ್ಷಿಸು ಎಂದು ಸರ್ಪರಾಜ ಕಾರ್ಕೋಟಕನು ವಿನಂತಿಸಿದನು.

ಹೀಗೆಯೇ ಇರುತ್ತಿರಲು ಕೆಲವು ಕಾಲಾನಂತಕ ಭೂಶ್ರೇಷ್ಠನೆನಿಸಿದ ನಳಚಕ್ರವರ್ತಿಯು ಇಲ್ಲಿಗೆ ಬರುತ್ತಾನೆ. ಅವನ ಕಮಲಸದೃಶ ಕರಗಳ ಸ್ಪರ್ಶವಾದೊಡನೆ ನಿನ್ನ ಶಾಪವು ವಿಮುಕ್ತಿಗೊಳ್ಳುವುದು ಎಂದು ಆ ಮುನಿವರನು ಹೇಳಿದುದರಿಂದ, ಅವನ ಮಾತಿನಂತೆ ನಿನ್ನ ಬರವನ್ನೇ ಹಾರೈಸುತ್ತ ಇದ್ದೆ. ಈಗ ನೀನು ಬಂದಿರುವೆ ಈ ಮಹಾಗ್ನಿಯಿಂದ ನನ್ನನ್ನು ಕೃಪೆಯಿಟ್ಟು ರಕ್ಷಿಸು ಎಂದು ಸರ್ಪರಾಜ ಕಾರ್ಕೋಟಕನು ವಿನಂತಿಸಿದನು.

13. ಕರುಣದಲಿ ನೃಪ ಭೀತಿಗೊಳ್ಳದೆ
ಯುರಗಪತಿಯನು ತೆಗೆಯುತನಲನ
ಉರಿಯ ತಪ್ಪಿಸಿ ಕೊಳದ ತೀರಕೆ ತಂದು ಪರಿಚರಿಸೆ
ಕರವಿಡಿದು ಧರಣಿಪನ ಕಚ್ಚಿದ
ಡುರವಣಿಸಿ ವಿಷವೇರೆ ನೃಪತಿಯ
ಪರಮತೇಜದ ದೇಹ ಕೆಟ್ಟಿತು ವಿಕೃತರೂಪಾಗಿ

ಕರುಣದಲಿ + ನೃಪ = ಕರುಣೆಯಿಂದ ನಳಮಹಾರಾಜನು; ಭೀತಿಗೊಳ್ಳದೆ = ಭಯಭೀತನಾಗದೆ; ಉರಗಪತಿಯನು = ಉರಗಪತಿಯನ್ನು; ತೆಗೆಯುತ + ಅನಲನ = ಹೊರತೆಗೆಯುತ್ತ ಅಗ್ನಿಯ; ಉರಿಯ ತಪ್ಪಿಸಿ = ಜ್ವಾಲೆಯಿಂದ

ಪಾರುಮಾಡಿ; ಕೊಳನ ತೀರಕೆ = ಕೊಳದ ದಂಡೆಗೆ; ತಂದು = ಕರೆತಂದು; ಪರಿಚರಿಸೆ = ಉಪಚರಿಸಲು; ಕರವಿಡಿದು = ಕೈಯಲ್ಲಿ ಹಿಡಿದುಕೊಂಡು; ಧರಣಿಪನ = ನಳಮಹಾರಾಜನನ್ನು; ವಿಷವೇರೆ = ದೇಹದಾದ್ಯಂತ ವಿಷವು ಏರಲು; ನೃಪತಿಯ = ಮಹಾರಾಜನ; ಪರಮತೇಜದ = ಅತಿ ಕಾಂತಿಯುತವಾದ ದೇಹ ಕೆಟ್ಟಿತು = ದೇಹವು ಬದಲಾಯಿತು ವಿಕೃತರೂಪಾಗಿ = ವಿಕಾರ ರೂಪವಾಗಿ.

ಹಾವು ವಿಷಜಂತುವೆಂಬ ಅರಿವಿದ್ದರೂ ನಳಮಹಾರಾಜನು ಕಿಂಚಿತ್ತೂ ಭಯಭೀತನಾಗದೆ ಬೆಂಕಿಯ ತಾಪದಲ್ಲಿ ಸಿಲುಕಿ ಅಂಜಿದ್ದ ಸರ್ಪರಾಜನನ್ನು ಜ್ವಾಲೆಗಳಿಂದ ರಕ್ಷಿಸಿ ಅಲ್ಲಿಯೇ ಬಳಿಯಲ್ಲಿದ್ದ ಕೊಳದ ಬಳಿಗೆ ಕರೆದುಕೊಂಡು ಬಂದು ಶೈತ್ಯೋಪಚಾರಗಳನ್ನು ಮಾಡುತ್ತಿದ್ದಂತೆಯೇ ಸರ್ಪರಾಜನು ಮಹಾರಾಜನನ್ನು ಕಚ್ಚಿದನು. ಆ ಕ್ಷಣದಲ್ಲಿಯೇ ಅತ್ಯಂತ ವೇಗವಾಗಿ ನಳನ ದೇಹದಾದ್ಯಂತ ವಿಷವೇರಿ, ಅಪಾರ ತೇಜೋಮಯವಾಗಿ ಆಕರ್ಷಕವಾಗಿದ್ದ ಅವನ ರೂಪವು ಕೆಟ್ಟು ವಿಕಾರ ರೂಪವಾಗಿ ಬದಲಾಯಿತು.

14. ದೊಡ್ಡ ಹೊಟ್ಟೆಯ ಗೂನುಬೆನ್ನಿನ
ಅಡ್ಡ ಮೋರೆಯ ಗಂಟುಮೂಗಿನ
ದೊಡ್ಡ ಕೈಕಾಲುಗಳ ಉದುರಿದ ರೋಮಮೀಸೆಗಳ
ಜಡ್ಡು ದೇಹದ ಗುಜ್ಜುಗೊರಲಿನ
ಗಿಡ್ಡ ರೂಪಿನ ಹರುಕು ಗಡ್ಡದ
ಹೆಡ್ಡನಾದ ಕುರೂಪಿತನದಲಿ ನೃಪತಿ ವಿಷದಿಂದ

ದೊಡ್ಡ ಹೊಟ್ಟೆಯ = ಸುಂದರಾಕಾರವನ್ನು ಕಳೆದುಕೊಂಡ ಹೊಟ್ಟೆಯು ದೊಡ್ಡದಾಗಿ ಬೊಜ್ಜೇರಿಸಿಕೊಂಡಿತು; ಗೂನುಬೆನ್ನಿನ = ಬೆನ್ನು ಬಾಗಿಹೋಯಿತು; ಅಡ್ಡ ಮೋರೆಯ = ಮನ್ಮಥರೂಪಿನ ಮುಖವು ಅಡ್ಡಂಬಡ್ಡ ತಿರುಗಿಹೋಯಿತು; ಗಂಟುಮೂಗಿನ = ಮೂಗು ಗಂಟು ಗಂಟಾಯಿತು; ದೊಡ್ಡ ಕೈಕಾಲುಗಳ = ಕೈಕಾಲುಗಳು ಅಳತೆ ಮೀರಿ ದೊಡ್ಡದಾದುವು; ಉದುರಿದ ರೋಮಮೀಸೆಗಳ = ಆಕರ್ಷಕ ಗಂಡು ರೂಪಿನ ತಲೆಗೂದಲು, ಮೀಸೆಗಳೆಲ್ಲವೂ ಉದುರಿ ಬೋಳಾದುವು; ಜಡ್ಡು ದೇಹದ = ಸುಕುಮಾರ ದೇಹವು ಅಸ್ವಸ್ಥವಾಗಿ

ಒರಟೊರಟಾಯಿತು; ಗುಜ್ಜುಗೊರಲಿನ = ಕುತ್ತಿಗೆಯು ಕುಸಿದುಕೊಂಡಿತು; ಗಿಡ್ಡ ರೂಪಿನ = ದೇಹವು ಕುಳ್ಳಗಾಯಿತು; ಹರುಕು ಗಡ್ಡದ = ಗಡ್ಡವು ಹರುಕು ಮುರುಕಾಯಿತು; ಹೆಡ್ಡನಾದ = ಹೆಡ್ಡನಂತಾದನು; ಕುರೂಪಿತನದಲಿ = ಕೆಟ್ಟರೂಪದಿಂದ; ನೃಪತಿ ವಿಷದಿಂದ = ನಳಚಕ್ರವರ್ತಿಯು ವಿಷವೇರಿದ ಕಾರಣದಿಂದ.

ದೇಹಕ್ಕೆ ವಿಷವೇರಿದ ಕಾರಣದಿಂದ ಮನ್ಮಥನಂತೆ ಸುಂದರವಾದ ನಳಚಕ್ರವರ್ತಿಯ ಆಕರ್ಷಕ ರೂಪವು ವಿಕಾರವಾಗಿ ಬದಲಾಯಿತು, ಹೊಟ್ಟೆಯು ಬೊಜ್ಜೇರಿಸಿಕೊಂಡು ದೊಡ್ಡದಾಗಿ ಜೋಲಿತು, ನೇರವಾಗಿದ್ದ ಬೆನ್ನು ಗೂನಾಗಿ ಬಾಗಿತು. ಕಣ್ಸೆಳೆಯುವ ಮನೋಹರ ರೂಪಿನ ಮುಖವು ಅಡ್ಡಡ್ಡ ತಿರುಗಿಹೋಯಿತು, ಮುಖಕ್ಕೆ ಧೀರ ಶೂರ ತೇಜಸ್ಸನ್ನು ತಂದಿತ್ತಿದ್ದ ಮೂಗು ಗಂಟು ಗಂಟಾಯಿತು, ಕೈಕಾಲುಗಳು ದೊಡ್ಡದಾದುವು, ಮುಖಕ್ಕೆ ಗಂಡುಗಾಡಿಯನ್ನು ತಂದಿತ್ತಿದ್ದ ರೋಮವೂ ಮೀಸೆಗಳೂ ಉದುರಿ ಬೋಳಾದುವು. ಧೀರ ಸುಕುಮಾರ ಶರೀರವು ಅಸ್ವಸ್ಥವಾಗಿ ಒರಟೊರಟಾಯಿತು, ಕುತ್ತಿಗೆಯು ನೀಳವಾಗಿದ್ದ ತನ್ನ ಸೊಬಗನ್ನು ಕಳೆದುಕೊಂಡು ಕುಸಿದುಹೋಯಿತು, ದೇಹವು ಗಿಡ್ಡವಾಯಿತು. ಗಲ್ಲವು ಹರುಕು ಮುರುಕಾಯಿತು, ಹೀಗೆ ಆಕರ್ಷಕವಾದ ನಳನ ರೂಪು ಕುರೂಪ ಗೊಂಡಿತು.

15. ಮಾರನಾಕಾರದ ನೃಪಾಲಕ
ಕ್ರೂರರೂಪಾದನು ಪುರಾಕೃತ
ಮೀರಲಾರಳವೆಂದು ನುಡಿದನು ತನ್ನ ಮನದೊಳಗೆ
ತೋರಮಾಣಿಕವೆಂದು ಪಿಡಿದರೆ
ಭೂರಿ ಕೆಂಡವಿದಾಯ್ತು ಶಿವಶಿವ
ಕ್ರೂರಜಂತುಗಳೊಡನೆ ಸುಖತನ ಫಲಿಸಿತೆನಗೆಂದ

ಮಾರನಾಕಾರದ = ಮನ್ಮಥಾಕಾರನಾಗಿದ್ದ; ನೃಪಾಲಕ = ರಾಜ ನಳನು; ಕ್ರೂರ ರೂಪಾದನು = ಕ್ರೂರ ರೂಪನಾಗಿ ಬದಲಾದನು; ಪುರಾಕೃತ = ಹಿಂದೆ ಮಾಡಿದ ಕರ್ಮಗಳು; ಮೀರಲು + ಆರ + ಅಳವು + ಎಂದು = ಮೀರುವುದು

ಯಾರಿಂದ ತಾನೇ ಸಾಧ್ಯ ಎಂದು; ನುಡಿದನು ತನ್ನ ಮನದೊಳಗೆ = ಎಂದುಕೊಂಡನು ಮನಸ್ಸಿನೊಳಗೇ; ತೋರಮಾಣಿಕವೆಂದು = ಮಹಾಘನವಾದ ಮಾಣಿಕ್ಯವಿದು ಎಂದು ಹಿಡಿದುಕೊಂಡರೆ; ಭೂರಿ = ದೊಡ್ಡ; ಕೆಂಡವಿದು + ಆಯ್ತು = ಸುಡುವ ಕೆಂಡವಾಯಿತು; ಶಿವಶಿವ = ಶಿವಶಿವಾ ಎಂದು ನೋವು ಹತಾಶೆಗಳಿಂದ ಉದ್ಗರಿಸುತ್ತಾ; ಕ್ರೂರ ಜಂತುಗಳೊಡನೆ = ಕ್ರೂರ ಜಂತುಗಳೊಂದಿಗೆ; ಸಖತನ = ಗೆಳೆತನ ಮಾಡಿದುದು; ಫಲಿಸಿತು + ಎನಗೆ + ಎಂದ = ಈ ರೀತಿಯ ಫಲವನ್ನು ತನಗೆ ತಂದಿತ್ತಿತು ಎಂದುಕೊಂಡನು.

ಘೋರ ಸರ್ಪದ ವಿಷವೇರಿದ ನಳಚಕ್ರವರ್ತಿಯ ಮನ್ಮಥಾಕಾರದ ರೂಪು ತಟ್ಟನೆ ಕ್ರೂರರೂಪವಾಗಿ ಬದಲಾಯಿತು. ಇವೆಲ್ಲ ತನ್ನ ಪೂರ್ವಾರ್ಜಿತ ಕರ್ಮಫಲವೆಂದು ತನ್ನೊಳಗೆ ನಳನು ಅಂದುಕೊಂಡನು. ವಿಧಿಲಿಖಿತವನ್ನು ಮೀರುವುದು ಯಾರಿಂದ ತಾನೇ ಸಾಧ್ಯ? ಬಹು ಬೆಲೆಬಾಳುವ ಅನರ್ಘ್ಯರತ್ನವೆಂದು ಕೈಯಲ್ಲಿ ಹಿಡಿದರೆ ಅದು ನಿಗಿನಿಗಿ ಹೊಳೆಯುವ ಕೆಂಡವಾಯಿತಲ್ಲ ಶಿವಶಿವ! ಇದೆಲ್ಲ ಕ್ರೂರ ಜಂತುಗಳೊಂದಿಗೆ ಮಾಡಿದ ಸ್ನೇಹದ ಫಲ ಎಂದುಕೊಂಡನು ನಳಚಕ್ರವರ್ತಿ.

16. ಮುನ್ನ ಮಾಡಿದ ಕರ್ಮಫಲವಿದು
ಬೆನ್ನ ಬಿಡದಿರಲುರಗಪತಿ ಕೇ
ಳಿನ್ನು ನೋಯಲದೇಕೆ ತಾನೇ ಪಾಪಿಯಾದೆನಲ
ಪನ್ನಗಾರಿಧ್ವಜನ ಕೃಪೆ ತನ
ಗಿನ್ನು ತಪ್ಪಿದ ಬಳಿಕ ಲೋಕದೊ
ಳಿನ್ನು ಸೈರಿಸಲಾರ ವಶವೆಂದೆನುತ ಮರುಗಿದನು

ಮುನ್ನ ಮಾಡಿದ = ಈ ಹಿಂದೆ ಮಾಡಿದ್ದ; ಕರ್ಮಫಲವಿದು = ಕರ್ಮಫಲವೇ ಇದು; ಬೆನ್ನ ಬಿಡದಿರಲು + ಉರಗಪತಿ = ಬೆನ್ನಬಿಡದೆ ಹಿಂಬಾಲಿಸುತ್ತದೆ. ಸರ್ಪರಾಜನೇ; ಕೇಳಿನ್ನು = ಕೇಳು ಇನ್ನು; ನೋಯಲು + ಅದೇಕೆ = ಏತಕ್ಕಾಗಿ ವೃಥಾ ದುಃಖಿಸಬೇಕು?; ತಾನೇ = ನಾನೇ; ಪಾಪಿಯಾದೆನಲ + ಪಾಪಿ ಯಾದವನು ಅಲ್ಲವೇ; ಪನ್ನಗ + ಅರಿ + ಧ್ವಜನ = ಸರ್ಪನ ವೈರಿಯಾದ

ಗರುಡ ನನ್ನು ಧ್ವಜಲಾಂಛನವಾಗಿ ಉಳ್ಳ ಕೃಷ್ಣನ; ಕೃಪೆ = ದಯೆಯು; ತನಗಿನ್ನು = ಇನ್ನು ನನಗೆ; ತಪ್ಪಿದ ಬಳಿಕ = ಇಲ್ಲವಾದ ಮೇಲೆ; ಲೋಕದೊಳಿನ್ನು = ಇನ್ನು ಈ ಪ್ರಪಂಚದಲ್ಲಿ; ಸೈರಿಸಲು + ಆರ = ತನ್ನನ್ನು ಕಾಪಾಡುವುದು ಯಾರಿಂದ; ವಶವೆಂದು + ಎನುತ = ಸಾಧ್ಯ ಎಂದುಕೊಳ್ಳುತ್ತ; ಮರುಗಿದನು = ನಳಮಹಾ ರಾಜನು ದುಃಖಿಸಿದನು.

ಸರ್ಪರಾಜನೇ ಕೇಳು, "ಇವೆಲ್ಲವೂ ಘಟಿಸುತ್ತಿರುವುದು ನನ್ನ ಪೂರ್ವ ಜನ್ಮಾರ್ಜಿತ ಕರ್ಮಫಲದಿಂದಷ್ಟೇ. ಅದರಿಂದ ತಪ್ಪಿಸಿಕೊಳ್ಳಲು ಯಾರಿಂದ ತಾನೇ ಸಾಧ್ಯ. ಅದು ನಮ್ಮನ್ನು ಬೆಂಬಿಡದೆ ಹಿಂಬಾಲಿಸುತ್ತಲೇ ಇರುತ್ತದೆ. ಹಾಗಾಗಿ ಅದಕ್ಕಾಗಿ ವೃಥಾ ನಾನೇಕೆ ದುಃಖಿಸಲಿ. ಗರುಡಧ್ವಜನಾದ ಶ್ರೀಕೃಷ್ಣನ ಕೃಪೆಯೇ ಇಲ್ಲವಾದ ಮೇಲೆ ನನ್ನನ್ನು ಕಾಪಾಡುವುದು ಯಾರಿಂದ ಸಾಧ್ಯ?" ಎನ್ನುತ್ತ ಮರುಗಿದನು ನಳಚಕ್ರವರ್ತಿ.

ನಳಮಹಾರಾಜನಿಗೆ ಕಷ್ಟಗಳು ಬಂದೆರಗುತ್ತಿರುವುದು ತನ್ನ ಪೂರ್ವಾರ್ಜಿತ ಕರ್ಮಫಲದಿಂದಲೇ, ಅದರಿಂದ ಪಾರಾಗುವುದು ಯಾರಿಂದಲೂ ಸಾಧ್ಯವಿಲ್ಲ ಎಂಬ ದೃಢನಂಬಿಕೆ ಇದೆ. ಹಾಗಾಗಿ ತನ್ನ ಕಷ್ಟಕ್ಕಾಗಿ ಮರುಗುವುದಕ್ಕಿಂತ, ಅದರ ಹಿಂದಿರುವ ದೈವದ ಕೈ ತನ್ನನ್ನು ರಕ್ಷಿಸುತ್ತಿಲ್ಲ ಎಂಬ ಕೊರಗು ಅಧಿಕವಾಗಿದೆ. ಸರ್ಪರಾಜ ನೊಂದಿಗೇ ಮಾತನಾಡುತ್ತಿದ್ದರೂ ಈ ಎಲ್ಲ ಮಾತುಗಳೂ ಸ್ವಗತವೆಂಬಂತೆ ಧ್ವನಿ ಮಾಡುತ್ತಿವೆ.

17. ಏಕೆ ನೃಪತಿ ವೃಥಾ ಮನೋವ್ಯಥೆ
ಕಾಕಬಳಸಲು ಬೇಡ ನೀನವಿ
ವೇಕಿಯೇ ಸಾಕಿನ್ನು ನಿನಗುಪಕಾರವಂಜದಿರು
ಲೋಕ ನಿನ್ನನು ಕಾಣದಂತಿರ
ಬೇಕೆನುತಲೇರಿಸಿದೆ ಗರಳವ
ನೇಕವುಪಕಾರಂಗಳಹವದರಿಂದ ನಿನಗೆಂದ

ಏಕೆ ನೃಪತಿ = ಏಕೆ ಮಹಾರಾಜನೇ; ವೃಥಾ = ವ್ಯರ್ಥವಾಗಿ; ಮನೋವ್ಯಥೆ = ಕಳವಳ?; ಕಾಕಬಳಸಲು ಬೇಡ = ಕೆಟ್ಟದ್ದನ್ನು ಯೋಚಿಸುವುದು

ಬೇಡ; ನೀನವಿವೇಕಿಯೇ = ನೀನೇನು ಏನೂ ತಿಳಿಯದ ಅವಿವೇಕಿಯೇ?; ಸಾಕಿನ್ನು = ಇನ್ನು ಸಾಕು ಮಾಡು; ನಿನಗೆ + ಉಪಕಾರವು + ಅಂಜದಿರು = ಈ ರೂಪವನ್ನು ಹೊಂದಿದ್ದು ನಿನಗೆ ಉಪಕಾರವೇ ಆಗುತ್ತದೆ ಹೆದರದಿರು; ಲೋಕ ನಿನ್ನನು = ಈ ಪ್ರಪಂಚವು ನಿನ್ನನ್ನು; ಕಾಣದಂತೆ + ಇರಬೇಕು + ಎನುತಲಿ + ಏರಿಸಿದೆ = ಗುರುತು ಹಿಡಿಯದಿರಲೆಂದೇ ಏರಿಸಿದೆ; ಗರಳವನು + ಅನೇಕ + ಉಪಕಾರಂಗಳು + ಅಹವು + ಅದರಿಂದ = ವಿಷವನ್ನು ಇದರಿಂದ ಅನೇಕ ರೀತಿಯ ಉಪಕಾರಗಳೇ ಆಗುತ್ತವೆ; ನಿನಗೆಂದ = ನಿನಗೆ ಎಂದನು ಉರಗಾಧಿಪತಿ.

ತನ್ನ ಸ್ಥಿತಿಯನ್ನು ಕುರಿತು ವ್ಯಥಿತನಾಗಿ ಹಲುಬುತ್ತಿದ್ದ ನಳಮಹಾರಾಜನನ್ನು ಕುರಿತು ಉರಗಾಧಿಪತಿ ಕಾರ್ಕೋಟಕನು ರಾಜನಿಗೆ ಸಮಾಧಾನದ ಮಾತುಗಳನ್ನು ಹೇಳಿದನು– "ಏಕೆ ಮಹಾರಾಜನೇ ವ್ಯರ್ಥವಾಗಿ ದೀನನಂತೆ ವರ್ತಿಸುತ್ತಿದ್ದೀಯೆ. ಇದರ ಅಗತ್ಯವಿಲ್ಲ. ವಿಷದ ಕಾರಣ ನಿನ್ನ ಸುರೂಪವು ಅಳಿದು ಕುರೂಪ ವುಂಟಾದುದು ನಿನಗೆ ಉಪಕಾರವನ್ನೇ ಮಾಡುತ್ತದೆ. ಈ ಲೋಕದ ಜನ ನಿನ್ನನ್ನು ಗುರುತು ಹಿಡಿಯದಿರಲೆಂದೇ ನಿನ್ನ ಮೈಗೆ ಉದ್ದೇಶಪೂರ್ವಕವಾಗಿ ನಾನು ವಿಷವೇರಿಸಿದ್ದೇನೆ. ಇದರಿಂದ ನಿನಗೆ ಅನೇಕ ರೀತಿಯ ಪ್ರಯೋಜನಗಳೇ ಆಗುತ್ತವೆ. ಅಂಜದಿರು" ಎಂದನು.

18. ಗರಳವಿದು ಸರ್ವಾಂಗದಲಿ ಸಂ
ಚರಿಸುತಿಹ ಪರಿಯಂತ ರಿಪುಗಳ
ಶರಜಲಾಗ್ನಿಭುಜಂಗರೋಗಾದಿಗಳ ಭಯವಿಲ್ಲ
ನಿರುತವಿದು ವಜ್ರಾಂಗಿ ಬೇಡಿ
ನ್ನರಸ ಚಿಂತಿಸಬೇಡ ಕಾರ್ಯದ
ಹೊರೆಗೆ ತಾನಿದು ಬೇರೆ ಭಯ ಬೇಡಿನ್ನು ನಿನಗೆಂದ

ಗರಳವಿದು = ಈ ಘೋರವಿಷವು; ಸರ್ವಾಂಗದಲಿ = ನಿನ್ನ ಸಮಸ್ತ ಅವಯವಗಳಲ್ಲಿ; ಸಂಚರಿಸುತಿಹ ಪರಿಯಂತ = ಹರಿಯುತ್ತಿರುವವರೆಗೂ; ರಿಪುಗಳ = ಶತ್ರುಗಳ; ಶರ + ಜಲ + ಅಗ್ನಿ + ಭುಜಂಗ + ರೋಗಾದಿಗಳ = ಬಾಣ, ನೀರು, ಅಗ್ನಿ, ಹಾವು, ಮತ್ತು ಯಾವುದೇ ರೀತಿಯ ರೋಗಾದಿಗಳಿಂದ;

ಭಯವಿಲ್ಲ = ತೊಂದರೆಯಾಗದು; ನಿರುತವಿದು = ಇದು ಸತ್ಯ; ವಜ್ರಾಂಗಿ = ವಜ್ರಕವಚದಂತೆ ರಕ್ಷಿಸುತ್ತದೆ; ಬೇಡಿನ್ನರಸ ಚಿಂತಿಸಬೇಡ = ಇನ್ನು ಸಾಕುಮಾಡು ಅರಸನೇ ಚಿಂತಿಸ ಬೇಡ; ಕಾರ್ಯದ ಹೊರೆಗೆ ತಾನಿದು = ಇದು ನಿನ್ನ ಮುಂದಿನ ಕಾರ್ಯ ಭಾರಕ್ಕಾಗಿಯೇ; ಬೇರೆ ಭಯ ಬೇಡಿನ್ನು ನಿನಗೆಂದ = ಇನ್ನು ಬೇರೆ ಯಾವುದೇ ರೀತಿಯ ಭಯ ಬೇಡ ಎಂದು ಸಮಾಧಾನಿಸಿದನು.

ಮುಂದುವರಿದು ಮಾತನಾಡುತ್ತ ಕಾರ್ಕೋಟಕನು ಆ ವಿಷದಿಂದ ಉಂಟಾದ ಕುರೂಪವು ನಳನಿಗೆ ಹೇಗೆ ಉಪಕಾರಿಯೇ ಆಗುತ್ತದೆ ಎಂಬುದನ್ನು ಕುರಿತು ವಿವರಿಸಿದನು. “ಇನ್ನು ವೃಥಾ ಚಿಂತಿಸದಿರು ಅರಸನೇ, ಈ ಘೋರ ವಿಷವು ನಿನ್ನ ಸಮಸ್ತ ಅವಯವಗಳಲ್ಲಿ ಹರಿಯುತ್ತಿರುವವರೆಗೂ ನಿನ್ನನ್ನು ಶತ್ರುಗಳ ಬಾಣಪ್ರಯೋಗವಾಗಲೀ, ನೀರು, ಅಗ್ನಿ, ಹಾವು ಮೊದಲಾದುವುಗಳಾಗಲೀ, ಅಥವಾ ಯಾವುದೇ ರೀತಿಯ ರೋಗ ರುಜಿನಗಳಾಗಲೀ ಬಾಧಿಸಲಾರವು. ಇದು ಸತ್ಯ. ಯಾವಾಗಲೂ ಇದು ನಿನ್ನನ್ನು ವಜ್ರಕವಚದಂತೆ ರಕ್ಷಿಸುತ್ತದೆ. ಮತ್ತು ಇದು ನಿನ್ನ ಮುಂದಿನ ಕರ್ತವ್ಯಗಳು ನಿರಾತಂಕವಾಗಿ ನಡೆಯಲೆಂದೇ ಆದುದು. ಇನ್ನು ನಿನಗೆ ಭಯ ಬೇಡ” ಎಂದು ತಿಳಿಹೇಳಿದನು.

19. ಜನಪ ಕೇಳ್ಳೈ ಧರೆಗೆ ಋತುಪ
ರ್ಣನು ಮಹಾರಾಜೇಂದ್ರ ಗುಣನಿಧಿ
ಯಿನಕುಲಾಂಬುಧಿ ಚಂದ್ರನಾತನ ಪುರವಯೋಧ್ಯೆಯದು
ನಿನಗೆ ಬಹುದಕ್ಷಹೃದಯವು ಆ
ತನಲಿ ನೀನವಗಶ್ವ ಹೃದಯವ
ನನುಗೊಳಿಸು ಸಾಕಿನ್ನು ಚಿಂತಿಸಬೇಡ ಹೋಗೆಂದ

ಜನಪ ಕೇಳ್ಳೈ = ಜನಾಧಿಪತಿಯಾದ ಅರಸನೇ ಕೇಳು; ಧರೆಗೆ = ಈ ಭೂಮಿಗೆ; ಋತುಪರ್ಣನು ಮಹಾರಾಜೇಂದ್ರ = ಋತುಪರ್ಣನೇ ಚಕ್ರಾಧಿಪತಿ; ಗುಣನಿಧಿ+ಇನ ಕುಲಾಂಬುಧಿ = ಅತ್ಯಂತ ಗುಣಶಾಲಿ ಹಾಗೂ ಸೂರ್ಯವಂಶ ವೆಂಬ ಮಹಾಸಾಗರಕ್ಕೆ; ಚಂದ್ರನ್ + ಆತನ = ಈತ ಚಂದ್ರನಂತೆ; ಅವನ ಪುರವು+ಅಯೋಧ್ಯೆ + ಅದು = ರಾಜ್ಯ ಅಯೋಧ್ಯೆಯು; ನಿನಗೆ ಬಹುದು ಅಕ್ಷ

ಹೃದಯವು= ನಿನಗೆ ಅಶ್ವಹೃದಯವನ್ನು ಅರಿಯುವ ವಿದ್ಯೆ ತಿಳಿದಿದೆ; ಆತನಲಿ = ಋತುಪರ್ಣನಿಗೆ; ನೀನು + ಅವಗೆ + ಅಶ್ವಹೃದಯವನು + ಅನುಗೊಳಿಸು = ನೀನು ಅಶ್ವವಿದ್ಯೆಯನ್ನು ಅವನಿಗೆ ಕಲಿಸಿಕೊಡು; ಸಾಕಿನ್ನು = ಅಷ್ಟೇ ಸಾಕು; ಚಿಂತಿಸಬೇಡ = ಚಿಂತೆ ಮಾಡಬೇಡ; ಹೋಗೆಂದ = ನಿರುಮ್ಮಳನಾಗಿ ಹೋಗು ಎಂದನು.

ತನ್ನ ಮುಂದಿನ ಕಾರ್ಯ ಸಾಧನೆಗಾಗಿ ನಳಮಹಾರಾಜನು ಹೋಗ ಬೇಕಾದದ್ದು ಎಲ್ಲಿಗೆ, ಮಾಡಬೇಕಾದ ಮುಂದಿನ ಯೋಜನೆಗಳೇನು ಎಂಬುದನ್ನು ಸಹ ಕಾರ್ಕೋಟಕನು ವಿಶದವಾಗಿ ತಿಳಿಸಿಕೊಡುತ್ತಿದ್ದಾನೆ. ''ಜನಾಧಿಪತಿ ಯಾದ ಅರಸನೇ ಕೇಳು. ಈ ಮುಂದಿರುವ ಭುವಿಗೆ ಋತುಪರ್ಣನೆಂಬುವನೇ ಚಕ್ರಾಧಿಪತಿ. ಮಹಾಗುಣನಿಧಿಯಾದ ಈತನು ಸೂರ್ಯವಂಶವೆಂಬ ಮಹಾಸಾಗರಕ್ಕೆ ಚಂದ್ರನೋ ಪಾದಿಯಲ್ಲಿ ಬೆಳಕನ್ನು ತಂದವನು. ಈತನು ಅಯೋಧ್ಯೆಯ ಮಹಾರಾಜ. ನಿನಗೆ ಹೇಗಿದ್ದರೂ ಅಶ್ವಹೃದಯ ವಿದ್ಯೆಯು ಕರಗತವಾಗಿರುವುದರಿಂದ ನೀನು ಅವನಲ್ಲಿ ವಾಸ್ತವ್ಯವನ್ನು ಕಂಡುಕೊಂಡು, ಅವನಿಗೆ ಅಶ್ವವಿದ್ಯೆಯನ್ನು ಕಲಿಸು. ನಿನ್ನ ಕೆಲಸಗಳು ನಿರಾತಂಕವಾಗಿ ಸಾಗುತ್ತವೆ. ಚಿಂತಿಸಬೇಡ ಹೋಗು'' ಎಂದು ಮುಂದಿನ ಮಾರ್ಗ ವನ್ನು ಸೂಚಿಸಿದನು.

ಪ್ರಾಚೀನ ಕಾಲದ ಕಥನರೂಪಗಳು ಕೇವಲ ಕಲ್ಪಕತೆಯ ಬಣ್ಣಗಾರಿಕೆಯ ಸರಕಾಗದೆ ಕಷ್ಟ ಬಂದ ಕಾಲಕ್ಕೂ, ಸುಖದ ಕ್ಷಣಗಳು ಸುರಿದುಹೋಗುವ ಕಾಲಕ್ಕೂ ವಿವೇಕದಿಂದ ಹೆಜ್ಜೆಯಿಡುವ ಮಾರ್ಗದತ್ತ ಸೂಚನಾಫಲಕಗಳಂತೆ ಕಾರ್ಯನಿರ್ವಹಿ ಸುತ್ತವೆ ಎಂಬುದನ್ನು ಗಮನಿಸಬಹುದು.

20. ಪೊಡವಿಪನನೋಲೈಸು ವಾಘೆಯ
ಪಿಡಿದು ಬಾಹುಕನೆಂಬ ನಾಮದಿ
ನಡೆಸು ರಥವನು ಹೀನವೃತ್ತಿಯದಲ್ಲ ನಿನಗಿನ್ನು
ಬಿಡದೆ ಮುನ್ನಿನ ರೂಪು ಬೇಕಾ
ದಡೆ ನೆನೆವುದಾ ಪಕ್ಷಿಗಳ ಹ
ಚ್ಚಡವನೀವುವು ಧರಿಸಲಡಗುವುದೀ ಕುರೂಪಿತನ

ಪೊಡವಿಪನನು + ಓಲೈಸು = ಆ ಮಹಾರಾಜನು ನಿನಗೆ ಮನಸೋಲುವಂತೆ ನಡೆದುಕೋ; ವಾಘೆಯ ಪಿಡಿದು = ಕಡಿವಾಣವನ್ನು ಹಿಡಿದು; ಬಾಹುಕನೆಂಬ ನಾಮದಿ = ಬಾಹುಕನೆಂಬ ಹೆಸರಿಟ್ಟುಕೊಂಡು; ನಡೆಸು ರಥವನು = ರಥಿಕನಾಗಿ ರಥವನ್ನು ನಡೆಸು; ಹೀನವೃತ್ತಿಯದಲ್ಲ = ಅದೇನೂ ಕೀಳಾದ ವೃತ್ತಿಯಲ್ಲ; ನಿನಗಿನ್ನು = ನಿನಗೆ ಮತ್ತೆ; ಬಿಡದೆ ತ್ಯಜಿಸಲಾಗದೆ = ಮುನ್ನಿನ ರೂಪು ಬೇಕಾದಡೆ = ಮುನ್ನಿನಂತೆ ಸುಂದರ ರೂಪು ಬೇಕೆಂದಾಗ; ನೆನೆವುದು + ಆ = ನೆನಪಿಸಿಕೊ ಆ; ಪಕ್ಷಿಗಳ = ಪಕ್ಷಿಗಳನ್ನು; ಹಚ್ಚಡವನೀವುವು = ಅವು ಆ ಹಿಂದೆ ಒಯ್ದಿದ್ದ ಹಚ್ಚಡಗಳನ್ನು ನೀಡುತ್ತವೆ; ಧರಿಸಲು + ಅಡಗುವುದು + ಈ = ಅವನ್ನು ಧರಿಸಿದರೆ ಮಾಯವಾಗುವುದು ಈ; ಕುರೂಪಿತನ = ಕುರೂಪವು.

ಅತ್ಯಂತ ಸ್ನೇಹಪರ ಹಿರಿಯನಂತೆ ಕಾರ್ಕೋಟಕನು ನಳ ಮಹಾರಾಜನಿಗೆ ಮಾರ್ಗದರ್ಶನ ಮಾಡುತ್ತಿದ್ದಾನೆ. ಋತುಪರ್ಣ ಮಹಾರಾಜನಲ್ಲಿಗೆ ಹೋಗಿ ಬಾಹುಕ ನೆಂಬ ಹೆಸರಿನಿಂದ ಅವನ ರಥದ ಸಾರಥಿಯಾಗಿ ಸೇರಿಕೋ. ಅವನು ನಿನಗೆ ಮನಸೋಲುವಂತೆ ನಡೆದುಕೋ. ಸಾರಥಿಯ ಕೆಲಸವೇನೂ ಹೀನತರ ವೃತ್ತಿಯೆಂದು ಭಾವಿಸಬೇಡ. ನಿನಗೆ ಯಾವಾಗ ಮುನ್ನಿನ ರೂಪಿನ ಅವಶ್ಯಕತೆ ಇದೆ ಎನಿಸುವುದೋ ಆಗ ಆ ಪಕ್ಷಿಗಳನ್ನು ನೆನೆದುಕೋ. ಅವು ತಾವು ಈ ಹಿಂದೆ ಹಾರಿಸಿಕೊಂಡು ಹೋಗಿದ್ದ ನಿನ್ನ ಹಚ್ಚಡಗಳನ್ನು ತಂದೀಯುತ್ತವೆ. ಅವನ್ನು ಧರಿಸಿದ ಆ ಕ್ಷಣವೇ ನಿನ್ನ ಕುರೂಪವು ಮಾಯವಾಗುವುದು ಎಂದು ಋತುಪರ್ಣನಿಗೂ, ಅವನ ರಥದ ಕುದುರೆಗಳಿಗೂ ಹೇಗೆ ಕಡಿವಾಣ ಹಾಕಬೇಕೆಂಬ ಉಪಾಯವನ್ನು ಕಾರ್ಕೋಟಕನು ಹೇಳಿಕೊಟ್ಟನು.

21. ನಿನ್ನ ಹವಣೇ ಪೂರ್ವದಲಿ ಭಿ
ಕ್ಷಾನ್ನವನು ಬೇಡಿದನು ಪಶುಪತಿ
ಪನ್ನಗಾರಿಧ್ವಜನು ಕಾಯ್ದನು ಪಶುಗಳಡವಿಯಲಿ
ಉನ್ನತೈಶ್ವರ್ಯಪ್ರದನು ಶತ
ಮನ್ಯು ಬನದಲಿ ನವೆಯನೇ ಸಾ
ಯದಿರು ಮನನೋಯದಿರು ಚಿತ್ತೈಸೆಂದನುರಗಪತಿ

ನಿನ್ನ ಹವಣೀ = ಇದೇನು ನಿನ್ನೊಬ್ಬನ ಮಿತಿಯೇ; ಪೂರ್ವದಲಿ = ಈ ಹಿಂದೆ; ಭಿಕ್ಷಾನ್ನವನು ಬೇಡಿದನು = ಭಿಕ್ಷೆಯನ್ನು ಬೇಡಿದನು; ಪಶುಪತಿ = ಸರ್ವ ಜೀವಾಧಾರನಾದ ಶಿವನು; ಪನ್ನಗ + ಅರಿ + ಧ್ವಜನು = ಗರುಡ ಧ್ವಜನಾದ ಕೃಷ್ಣನೋ; ಕಾಯ್ದನು ಪಶುಗಳಡವಿಯಲಿ = ಕಾಡಿನಲ್ಲಿ ಗೋವುಗಳನ್ನು ಕಾಯ್ದನು; ಉನ್ನತ + ಐಶ್ವರ್ಯ + ಪ್ರದನು = ಮಹಾ ಶ್ರೇಷ್ಠವಾದ ಸಂಪತ್ತನ್ನು ಪ್ರದಾನ ಮಾಡುವಂಥವನು; ಶತಮನ್ಯು = ನೂರು ಯಜ್ಞಗಳನ್ನು ಮಾಡಿದ ದೇವೇಂದ್ರನು; ಬನದಲಿ ನವೆಯನೇ = ಕಾರಣಾಂತರಗಳಿಂದ ಕಾಡಿನ ಪಾಲಾಗಿ ನವೆಯಲಿಲ್ಲವೇ; ಸಾಕಿನ್ನು ಮನನೋಯದಿರು = ಇನ್ನಾದರೂ ಚಿಂತಿಸುತ್ತ ಕೊರಗದಿರು; ಚಿತ್ತೈಸೆಂದನುರಗಪತಿ = ಲಕ್ಷ್ಯವಿಟ್ಟು ಕೇಳು ಎಂದನು ಉರಗಪತಿ.

ಲೋಕದಲ್ಲಿ ಕಷ್ಟನಷ್ಟಗಳಿಗೀಡಾಗುವುದು ಸಹಜ. ಅದು ನಿನ್ನೊಬ್ಬನಿಗೆ ಬಂದೊದಗಿರುವ ಮಿತಿಯೆಂದುಕೊಂಡಿದ್ದೀಯೇನು? ಈ ಹಿಂದೆ, ಸಕಲ ಜೀವಿಗಳಿಗೂ ಪರಮಾಧಾರನಾದ ಶಿವನೇ ಕಪಾಲದಲ್ಲಿ ಭಿಕ್ಷೆ ಬೇಡುವಂತಾಗಲಿಲ್ಲವೇನು? ಸರ್ಪವೈರಿಯಾದ ಗರುಡನನ್ನೇ ತನ್ನ ಧ್ವಜ ಸಂಕೇತವಾಗಿಸಿಕೊಂಡ ಶ್ರೀಕೃಷ್ಣ ಕಾಡಿನಲ್ಲಿ ಗೋವುಗಳನ್ನು ಕಾದುಕೊಂಡಿರಲಿಲ್ಲವೇ? ಶತಯಾಗಗಳನ್ನು ಮಾಡಿದವನೂ, ಸಕಲೈಶ್ವರ್ಯಗಳನ್ನು ಒಳಗೊಂಡವನೂ ಆದ ದೇವೇಂದ್ರನು ವಿಧಿಯ ಬರೆಹದಂತೆ ಕಾರಣಾಂತರಗಳಿಂದ ಕಾಡು ಪಾಲಾಗಿ ಅಲೆಯಲಿಲ್ಲವೇ? ಮನಸ್ಸಿಟ್ಟು ಆಲಿಸು. ಸುಮ್ಮನೆ ಕೊರಗದಿರು ಎಂದು ಕಾರ್ಕೋಟಕನು ನಳನನ್ನು ಮತ್ತಷ್ಟು ಸಮಾಧಾನಿಸಿದನು.

22. ಪರಮಸತ್ಯವ್ರತದೊಳಾ ಪು
ಷ್ಕರನ ಗೆಲಿದುನ್ನತದ ರಾಜ್ಯದ
ಸಿರಿ ಮಿಗಲು ಸಾಮ್ರಾಜ್ಯವಾಳುವೆ ನಿನ್ನ ಸತಿಸಹಿತ
ವರವನಿತ್ತೆನು ನಿನಗೆಯೆಂದುಪ
ಚರಿಸಿ ಕಾರ್ಕೋಟಕನು ನಳನೃಪ
ಗರುಹುತಾಕ್ಷಣ ಮಾಯವಾದನು ರಾಯ ಕೇಳೆಂದ

ಪರಮ ಸತ್ಯವ್ರತದೊಳಾ = ಪರಮ ಸತ್ಯವ್ರತನಾಗಿ ಆ; ಪುಷ್ಕರನ = ಪುಷ್ಕರನನ್ನು; ಗೆಲಿದು + ಉನ್ನತದ = ಜಯಿಸಿ, ಶ್ರೇಷ್ಠಮಟ್ಟದ; ರಾಜ್ಯದ ಸಿರಿ

ಮಿಗಲು = ರಾಜ್ಯದ ಸರ್ವ ಸಂಪತ್ತುಗಳು ತುಂಬಿ ಬರುವಂತೆ; ಸಾಮ್ರಾಜ್ಯವಾಳುವೆ = ನಿಷಧ ಸಾಮ್ರಾಜ್ಯವನ್ನು ಮತ್ತೆ ಆಳುತ್ತೀಯೆ; ನಿನ್ನ ಸತಿಸಹಿತ = ನಿನ್ನ ಸತಿ ದಮಯಂತಿಯ ಸಮೇತ; ವರವನಿತ್ತೆನು = ವರವನ್ನು ನೀಡಿದ್ದೇನೆ; ನಿನಗೆ + ಎಂದು + ಉಪಚರಿಸಿ = ನಿನಗೆ ಎಂದು ನಳನನ್ನು ಗೌರವಯುತವಾಗಿ ಸತ್ಕರಿಸಿ; ಕಾರ್ಕೋಟಕನು = ಉರಗಾಧಿಪತಿಯಾದ ಕಾರ್ಕೋಟಕನು; ನಳನೃಪಗೆ + ಅರುಹುತ + ಆ ಕ್ಷಣ = ನಳನೃಪಗೆ ಹೇಳುತ್ತ ಆ ಕ್ಷಣವೇ; ಮಾಯವಾದನು = ಅದೃಶ್ಯ ವಾದನು; ರಾಯ ಕೇಳೆಂದ = ಕೇಳು ಧರ್ಮರಾಯನೇ ಎಂದನು ರೋಮಶ ಮುನಿ.

ನಳಮಹಾರಾಜನನ್ನು ಪರಿಪರಿಯಾಗಿ ಸಂತಯಿಸಿದ ಅನಂತರ ಕಾರ್ಕೋಟಕನು ಅವನನ್ನು ತುಂಬು ಗೌರವಯುತವಾಗಿ ಸತ್ಕರಿಸಿ ಆಶೀರ್ವಚನ ಗಳನ್ನಾಡಿದನು. ಧರ್ಮರಾಯನೇ ಕೇಳು "ಪರಮಸತ್ಯವ್ರತನಾಗಿ, ಮೋಸ ಕಪಟಗಳಿಲ್ಲದೆ ಆ ಪುಷ್ಕರನನ್ನು ಮರಳಿ ಜಯಿಸುವಂಥವನಾಗು. ಶ್ರೇಷ್ಠತಮವಾಗಿ ರಾಜ್ಯದ ಸಕಲ ಸುಖಸಂಪದಗಳು ತುಂಬಿ ಬರುವಂತೆ ಸಾಮ್ರಾಜ್ಯವನ್ನು ಮತ್ತೆ ನಿನ್ನ ಸತಿ ದಮಯಂತಿಯೊಂದಿಗೆ ಆಳುವೆ. ನಾನು ನಿನಗೆ ಹೀಗೆ ವರಪ್ರದಾನ ಮಾಡಿದ್ದೇನೆ."ಎಂದು ಹೇಳುತ್ತ ತತ್‌ಕ್ಷಣವೇ ಕಾರ್ಕೋಟಕನು ಅದೃಶ್ಯನಾದನು ಧರ್ಮರಾಯನೇ ಎಂದನು ರೋಮಶ ಮುನಿ.

23. ಬಲಿದ ಚಿಂತೆಯ ಮನದ ದುಗುಡದ
ನಳನೃಪತಿ ಕಾನನದಿ ಬರುತಿರೆ
ಮಲೆತು ತೊಲಗದ ದುಷ್ಟಮೃಗಗಳ ಕಂಡು ನಸುನಗುತ
ಹಲವು ಗಿರಿಗುಹೆ ಗಹ್ವರಂಗಳ
ಕಳೆದು ಮುಂದಣ ಜನಪದಂಗಳ
ಬಳಿವಿಡಿದು ನಡೆತಂದನಲಸದೆ ಹಲವು ಯೋಜನವ

ಬಲಿದ ಚಿಂತೆಯ = ಹೆಚ್ಚು ಹೆಚ್ಚಾಗುತ್ತಿದ್ದ ಚಿಂತೆಯ; ಮನದ ದುಗುಡದ = ಮನಸ್ಸನ್ನು ಕಾಡುತ್ತಿದ್ದ ಉಮ್ಮಳದ; ನಳನೃಪತಿ = ನಳಮಹಾರಾಜನು; ಕಾನನದಿ ಬರುತಿರೆ= ಅರಣ್ಯದಲ್ಲಿ ನಡೆದು ಬರುತ್ತಿರಲು; ಮಲೆತು ತೊಲಗದ = ತನ್ನನ್ನು

ಕಂಡ ನಂತರವೂ ಹೋಗದೆ, ತನ್ನನ್ನೆದುರಿಸುವಂತೆ ಅಲ್ಲಿಯೇ ನಿಂತಿರುವ; ದುಷ್ಟಮೃಗಗಳ = ಕಾಡಿನ ಕ್ರೂರಮೃಗಳನ್ನು; ಕಂಡು ನಸುನಗುತ = ನೋಡಿ, ತನ್ನವಸ್ಥೆ ಹೇಗಿರಬಹುದೆಂದು ಊಹಿಸಿ ಮುಗುಳ್ನಗುತ್ತ; ಹಲವು ಗಿರಿಗುಹೆ = ಹಲವಾರು ಬೆಟ್ಟ ಗುಡ್ಡಗಳು ಗುಹೆಗಳು; ಗಹ್ವರಗಳು = ಗವಿಗಳನ್ನು; ಕಳೆದು = ದಾಟಿ; ಮುಂದಣ = ಮುಂದೆ ಕಾಣುವ; ಜನಪದಂಗಳ = ಹಲವಾರು ಜನಸ್ಥಾನಗಳನ್ನು ದಾಟುತ್ತ; ನಡೆತಂದನಲಸದೆ = ನಡೆಯುತ್ತ ಹೋದನು ಆಯಾಸವಿಲ್ಲದೆ; ಹಲವು ಯೋಜನವ = ಹಲವಾರು ಯೋಜನ ದೂರ.

ಕಾರ್ಕೋಟಕನು ಎಷ್ಟೇ ಸಮಾಧಾನದ ಮಾತುಗಳನ್ನಾಡಿದರೂ ನಳಮಹಾ ರಾಜನ ಮನದ ಆಳದಲ್ಲಿ ಬಲಿತು ಹೋಗಿದ್ದ ಚಿಂತೆಯು ಕಡಿಮೆಯಾಗಲಿಲ್ಲ. ಅದರೊಂದಿಗೆ ಉಮ್ಮಳಿಸಿ ಕಾಡುತ್ತಿದ್ದ ದುಃಖವೂ ಅವನನ್ನು ಬಳಲಿಸಿತು. ಹಾಗೆಯೇ ಆ ಅರಣ್ಯದಲ್ಲಿ ಮುಂದುವರಿದು ಸಾಗುತ್ತಿರಬೇಕಾದರೆ ಅಲ್ಲಿದ್ದ ದುಷ್ಟಮೃಗಗಳು ತನ್ನ ಕುರೂಪವನ್ನು ನೋಡಿ ವಿರೋಧಿಗಳನ್ನು ಕಂಡಂತೆ ದಿಟ್ಟತನದಿಂದ ಮಲೆತು ಎದುರು ನಿಂತಿದ್ದನ್ನು ಕಂಡು ಅವನಿಗೆ ಅಂತಹ ದುಃಖದಲ್ಲಿಯೂ ನಗು ಬಂದಿತು. ಆ ನಸುನಗು ತನ್ನ ಅವಸ್ಥೆಯನ್ನು ಕುರಿತ ಪರಿಹಾಸ್ಯದ ನಗುವೂ ಆಗಿತ್ತು. ಮುಂದೆ ಮುಂದೆ ನಡೆದಂತೆ ಹಲವಾರು ಬೆಟ್ಟಗುಡ್ಡಗಳು, ಗುಹೆ ಗವಿಗಳನ್ನು ದಾಟಿ ಹಲವಾರು ಜನಸ್ಥಾನಗಳನ್ನು ದಾಟುತ್ತ ನಡೆದನು. ಸ್ವಲ್ಪವೂ ಆಯಾಸಗೊಳ್ಳದೆ ಹೀಗೆಯೇ ಹಲವಾರು ಯೋಜನ ದೂರವನ್ನು ನಡೆದು ಕಳೆದನು.

24. ಹರಿವ ನದಿಗಳ ವನತಟಾಕದ
ವರಕುಸುಮ ಮಲ್ಲಿಗೆಯ ಬನಗಳ
ಪುರದ ಪ್ರಾಂತದೊಳೆಸೆವ ಕೆಂದಾವರೆಯ ಕೊಳಗಳನು
ಉರುತರದ ಪಾನೀಯಶಾಲೆಯ
ಮರಗಳಿಂದತಿಮೆರೆವ ರಾಜ್ಯವ
ಧರಣಿಪತಿ ಸಂತಸದಿ ನೋಡುತ ಬಂದನಾಯೆಡೆಗೆ

ಹರಿವ ನದಿಗಳ = ತುಂಬಿ ಸಮೃದ್ಧವಾಗಿ ಹರಿಯುವ ನದಿಗಳ; ವನತಟಾಕದ = ವನಗಳನ್ನೂ ಕೆರೆಗಳನ್ನೂ; ವರ ಕುಸುಮ = ಶ್ರೇಷ್ಠಜಾತಿಯ

ಸುಗಂಧ ಪುಷ್ಪಗಳಾದ; ಮಲ್ಲಿಗೆಯ ಬನಗಳ = ಮಲ್ಲಿಗೆ ತೋಟಗಳನ್ನು; ಪುರದ = ಪಟ್ಟಣ ಪ್ರಾಂತದಲ್ಲಿ ಶೋಭಾಯಮಾನವಾದ; ಕೆಂದಾವರೆಯ ಕೊಳಗಳನು = ಕೆಂದಾವರೆಯಿಂದ ನಳನಳಿಸುವ ಕೊಳಗಳನ್ನು; ಉರುತರದ = ಉತ್ತಮೋತ್ತಮ ವಾದ; ಪಾನೀಯಶಾಲೆಯ = ಅರೆವಟ್ಟಿಗೆಗಳನ್ನೂ; ಮರಗಳಿಂದ + ಅತಿಮೆರೆವ = ತುಂಬಿ ತೂಗುವ ಮರಗಳನ್ನೂ ಹೊಂದಿ ಕಂಗೊಳಿಸುತ್ತಿದ್ದ; ರಾಜ್ಯವ = ಅಯೋಧ್ಯಾನಗರವನ್ನು; ಧರಣಿಪತಿ = ನಳಮಹಾರಾಜನು; ಸಂತಸದಿ ನೋಡುತ = ಆನಂದದಿಂದ ವೀಕ್ಷಿಸುತ್ತ; ಬಂದನು + ಆ + ಎಡೆಗೆ = ಆ ಪುರದತ್ತ ನಡೆದು ಬಂದನು.

ಮುಂದೆ ಮುಂದೆ ನಡೆಯುತ್ತ ಸಾಗಿದಂತೆ ನಳಮಹಾರಾಜನು ಸಮೃದ್ಧವಾಗಿ ಸೊಗಯಿಸುವ ಪ್ರಕೃತಿಯನ್ನೂ, ಮಾನವ ನಿರ್ಮಿತ ಸುಖಾವಹವಾದ ಬನ, ಕೊಳ, ಕಟ್ಟಡಗಳನ್ನು ನೋಡಿ ಸಂತೋಷಿಸಿದನು. ತುಂಬಿ ಹರಿಯುವ ನದಿಗಳು, ವನಗಳು, ಕೆರೆ, ಸರೋವರಗಳು, ಸುಗಂಧಿತ ಮಲ್ಲಿಗೆಯ ಬನಗಳು, ಕೆಂದಾವರೆಯ ಕೊಳಗಳು, ಶ್ರೇಷ್ಠಮಟ್ಟದ ಅರವಟ್ಟಿಗೆಗಳು, ಕಂಗೊಳಿಸುವ ಮರಗಳಿಂದ ತುಂಬಿದ ತೋಟಗಳು, ಮೊದಲಾದುವನ್ನು ಮೈದುಂಬಿಕೊಂಡ ಪಟ್ಟಣವನ್ನು ನಳಮಹಾರಾಜನು ಸಂತೋಷದಿಂದ ವೀಕ್ಷಿಸುತ್ತ ಆ ಪುರದೆಡೆಗೆ ನಡೆದನು.

ತಾನೇ ಸ್ವತಃ ರಾಜಾಧಿರಾಜನೆಂದೂ ಅಷ್ಟೈಶ್ವರ್ಯಭರಿತ ರಾಜ್ಯದ ತುಂಬು ಸಿರಿಯ ಒಡೆಯನೆಂದೂ ಖ್ಯಾತನಾದ ಚಕ್ರವರ್ತಿಯೊಬ್ಬನು, ಅನಾಥನಂತೆ ತಿರುಗುತ್ತ, ಮತ್ತೊಂದು ಪಟ್ಟಣದ ವೈಭವವನ್ನು ನೋಡಿ ಅದು ಹೊಸತೆಂಬಂತೆ ಆನಂದಿಸುವ ದೃಶ್ಯವು ಎದೆಯನ್ನು ತೋಯಿಸುವಂತಿದೆ. ಕಾರ್ಕೋಟಕನು ಹೇಳಿದಂತೆ ವಿಧಿಗೆ ಉಳ್ಳವರು-ಇಲ್ಲದವರೆಂಬ ಭೇದವಿಲ್ಲ. ಅದರ ಕಣ್ಣ ಕೆಳಗೆ ಎಲ್ಲವೂ ಸಮಾನ ರೇಖೆಯಲ್ಲಿ ಚಲಿಸುವ ಚಹರೆಗಳೇ ಆಗಿರುತ್ತವೆ ಎಂಬುದನ್ನು ಈ ಪದ್ಯಗಳು ಸೊಗಸಾಗಿ ಚಿತ್ರಿಸಿವೆ.

25. ಧಗಧಗಿಪ ಕೋಟಾವಳಿಯ ಹೊಗ
ರುಗುವ ಹೇಮದ ಕೊತ್ತಳಂಗಳ

ಗಗನವನು ಚುಂಬಿಸುವ ತೆನೆಗಳ ಸಾಲುರತ್ನಗಳ
ಸೊಗಸುವಾಳ್ವೇರಿಗಳ ಸುತ್ತಿರಿ
ವಗಳ ಘಾತವನಾರು ಬಲ್ಲರು
ಬಿಗಿದ ವಜ್ರಕವಾಟವೆಸೆದುದು ದಿಕ್ಕುದಿಕ್ಕಿನಲಿ

ಧಗಧಗಿಪ = ಧಗಧಗನೆ ಹೊಳೆಯುವ; ಕೋಟಾವಳಿಯ = ಕೋಟೆಗಳ ಸಾಲುಗಳಲ್ಲಿ; ಹೊಗರುವ = ಮಿಂಚುವ; ಹೇಮದ = ಚಿನ್ನದ; ಕೊತ್ತಳಂಗಳ = ಗೋಪುರಗಳನ್ನು; ಗಗನವನು ಚುಂಬಿಸುವ = ಆಕಾಶವನ್ನು ಮುತ್ತಿಡುವಂತಿದ್ದ; ತೆನೆಗಳ = ಕೋಟೆಯ ಪ್ರಾಕಾರಾಗ್ರಗಳು, ಶಿಖರಗಳು; ಸಾಲು ರತ್ನಗಳ = ಸಾಲು ಸಾಲಾಗಿ ಹುದುಗಿಸಿದ ರತ್ನಖಚಿತವಾದ; ಸೊಗಸುವ + ಆಳ್ವೇರಿಗಳ = ಸೊಬಗಿನ ಕೊತ್ತಳದ ಸುತ್ತುಗೋಡೆಗಳು; ಸುತ್ತು + ಇರಿವ + ಅಗಳ = ಮತ್ತು ಅವೆಲ್ಲವನ್ನೂ ಸುತ್ತುವರಿದ ಅಗಳುಗಳ; ಘಾತವನಾರು ಬಲ್ಲರು = ಭದ್ರತೆಯ ಆಳವನ್ನು ಭೇದಿಸಲು ಯಾರು ಬಲ್ಲರು; ಬಿಗಿದ = ಭದ್ರವಾಗಿ ರಚಿಸಿದ; ವಜ್ರ ಕವಾಟವೆಸೆದುದು = ಅತ್ಯಂತ ಭದ್ರವಾದ ಕವಾಟಗಳು ಮೆರೆಯುತ್ತಿದ್ದುವು; ದಿಕ್ಕು ದಿಕ್ಕಿನಲಿ = ಈ ಕೋಟೆಯ ಅಷ್ಟೂ ದಿಕ್ಕುಗಳಲ್ಲಿ.

ಸಂಪದ್ಭರಿತವಾದ ಅಯೋಧ್ಯಾನಗರದ ಕೋಟೆಗಳ ಸಾಲುಗಳು ಧಗಧಗಿಸಿ ಮಿಂಚುವ ಬಂಗಾರದ ಗೋಪುರಗಳಿಂದ ಮನಸೆಳೆಯುತ್ತಿದ್ದವು. ಗಗನಚುಂಬಿಯಾಗಿದ್ದ ಕೋಟೆಯ ಪ್ರಾಕಾರಗಳು; ಸಾಲುಸಾಲಾಗಿ ಹುದುಗಿಸಿದ್ದ ರತ್ನಖಚಿತವಾದ ಸೊಬಗಿನ ಕೊತ್ತಳದ ಸುತ್ತುಗೋಡೆಗಳು; ಅವುಗಳನ್ನು ಸುತ್ತುವರಿದ ಅಭೇದ್ಯವಾದ ಅಗುಳುಗಳು, ಭದ್ರವಾಗಿ ಅವುಗಳನ್ನು ಬಿಗಿದು ಹಿಡಿದಿಡುವ ವಜ್ರ ಕವಾಟಗಳು ಆ ಕೋಟೆಯ ಅಷ್ಟೂ ದಿಕ್ಕುಗಳಲ್ಲಿ ಮೆರೆ ಯುತ್ತಿದ್ದವು.

ಪ್ರಾಚೀನ ಕನ್ನಡ ಸಾಹಿತ್ಯಗಳಲ್ಲಿ ಬರುವ ಸಾಂಪ್ರದಾಯಿಕ ನಗರವರ್ಣನೆ, ಅರಮನೆಯ ಕೋಟೆ ಕೊತ್ತಲಗಳ ವರ್ಣನೆಗಳು ಆಯಾ ಆಡಳಿತಗಾರನ ಶ್ರೀಮಂತಿಕೆಯ ಕುರುಹಾಗಿ ಬರುವುದಷ್ಟೇ ಆಗಿರದೆ, ಅಲ್ಲಿದ್ದ ವಾಸ್ತುತಜ್ಞರ,

ಚಿತ್ರಕಾರರ, ಕಲಾವಿದರ, ಮತ್ತು ರಾಜನೀತಿಜ್ಞರ ಮೇಧಾವಿತನದ ಸಂಕೇತವೂ ಆಗಿರುತ್ತದೆ. ಒಂದು ಸಾಂಸ್ಕೃತಿಕ ಔನ್ನತ್ಯದ ಕುರುಹೂ ಆಗಿರುತ್ತದೆ.

26. ಹೊಳೆವ ಮಿಸುನಿಯ ರತ್ನನಿಚಯದ
ನೆಲೆನೆಲೆಯ ಸೌಧಾಗ್ರದಲಿ ಪ್ರ
ಜ್ವಲಿಪ ಹೇಮದ ಕಲಶಗಳ ರವಿಚಂದ್ರಶಾಲೆಗಳ
ಲಲನೆಯರ ನಾನಾ ವಿನೋದದ
ಹಲವು ಗೋಪುರಶಿಖರದಗಣಿತ
ನೆಲೆಯ ವರ್ಣಿಸಲರಿದಯೋಧ್ಯಾಪುರವು ರಂಜಿಸಿತು

ಹೊಳೆವ ಮಿಸುನಿಯ = ಥಳಥಳಿಸುವ ಚಿನ್ನದ; ರತ್ನನಿಚಯದ = ಅಪೂರ್ವ ರತ್ನ ಸಮಸ್ತದ; ನೆಲೆನೆಲೆಯ = ನೆಲೆವೀಡಿನಂತೆ ಶೋಭಿಸುವ; ಸೌಧಾಗ್ರದಲಿ = ಮಹಾ ಅರಮನೆಗಳ ಉಪ್ಪರಿಗೆಯ ತುತ್ತ ತುದಿಯ ಸೌಂದರ್ಯವನ್ನು; ಪ್ರಜ್ವಲಿಪ = ಮಿರುಗುವ; ಹೇಮದ ಕಲಶಗಳ = ಬಂಗಾರದ ಕಲಶಗಳನ್ನು; ರವಿಚಂದ್ರಶಾಲೆಗಳ = ಸೂರ್ಯಚಂದ್ರ ವೀದಿಗಳಲ್ಲಿ; ಲಲನೆಯರ ನಾನಾ ವಿನೋದದ = ಸ್ತ್ರೀಸಂಕುಲವು ಪ್ರದರ್ಶಿಸುವ ನಾನಾ ರೀತಿಯ ಆಮೋದ ಪ್ರಮೋದಗಳನ್ನು; ಹಲವು = ಅನೇಕಾನೇಕ; ಗೋಪುರ ಶಿಖರದಗಣಿತ = ಗೋಪುರಾಗ್ರಗಳಲ್ಲಿರುವ ವಿವಿಧ ನೆಲೆಗಳನ್ನಾಗಲಿ; ವರ್ಣಿಸಲರಿದು = ವರ್ಣಿಸಲು ಅಸಾಧ್ಯ ಎಂಬಂತೆ; ಅಯೋಧ್ಯಾ ಪುರವು= ವೈಭವೋಪೇತವಾಗಿದ್ದ ಅಯೋಧ್ಯಾಪಟ್ಟಣವು; ರಂಜಿಸಿತು = ಮನಸೆಳೆಯಿತು.

ಥಳಥಳಿಸುವ ಬಂಗಾರದ, ಅಪೂರ್ವ ರತ್ನಗಳನ್ನು ಹುದುಗಿಸಿದ ವಿವಿಧ ಅಂತಸ್ತುಗಳ ನೆಲೆವೀಡಿನಂತೆ ಶೋಭಾಯಮಾನವಾದ ಬಹುಮಹಡಿಯ ಸೌಧಗಳ ನ್ನಾಗಲೀ, ಬಹು ಉಪ್ಪರಿಗೆಗಳ ತುತ್ತತುದಿಯ ಸೌಂದರ್ಯವನ್ನು ದುಪ್ಪಟ್ಟು ಗೊಳಿಸಿರುವ ಮಿರುಗುವ ಬಂಗಾರದ ಕಳಶಗಳ ಭವ್ಯತೆಯನ್ನಾಗಲೀ, ಸೂರ್ಯ ಚಂದ್ರರ ಬೀದಿಗಳಲ್ಲಿ ಆ ನಗರದ ಚೆಲುವೆಯರು ಪ್ರದರ್ಶಿಸುವ ನಾನಾವಿಧದ ಆಮೋದ ಪ್ರಮೋದಗಳನ್ನಾಗಲೀ, ಅನೇಕಾನೇಕ ಗೋಪುರಾಗ್ರ ಗಳಲ್ಲಿರುವ ವಿವಿಧ

ನೆಲೆಗಳನ್ನಾಗಲೀ, ಎಷ್ಟು ವರ್ಣಿಸಿದರೂ ಸಾಲದು ಎಂಬಂತೆ ಅಯೋಧ್ಯಾನಗರವು ವೈಭವೋಪೇತವಾಗಿ ರಂಜಿಸಿತು.

27. ಅರಸುಗಳು ಭೂಸುರರು ಮಿಗೆ ವೈ
ಶ್ಯರು ಚತುರ್ಥರು ನಾಗರಿಕದ
ಪುರಜನರು ಸಂದಣಿಸಿತಗಣಿತ ರಾಜವೀದಿಯಲಿ
ಕರಿ ತುರಗ ರಥ ಪಾಯದಳ ಗೋ
ಚರಿಸಿತಂಗಡಿ ನವವಿಧಾನದಿ
ಮೆರೆವಯೋಧ್ಯಾಪುರವ ಕಂಡನು ತೂಗಿದನು ಶಿರವ

ಅರಸುಗಳು = ವಿವಿಧ ಭೂಮಂಡಲಾಧಿಪರು, ಸಾಮಂತ ರಾಜರು ಮೊದಲಾದವರು; ಭೂಸುರರು = ಭೂಮಿಯ ಮೇಲಿನ ದೇವತೆಗಳೆನಿಸಿದ ಬ್ರಾಹ್ಮಣರು; ಮಿಗೆ = ಅಧಿಕಧಿಕವಾಗಿ; ವೈಶ್ಯರು = ವಣಿಕ ಸಮಸ್ತರು; ಚತುರ್ಥರು = ಶೂದ್ರರು; ನಾಗರಿಕದ = ಸುಧಾರಿತ ವಲಯದ; ಪುರಜನಗಳು = ಪುರಜನಸಮೂಹ; ಸಂದಣಿಸಿತಗಣಿತ = ಲೆಕ್ಕವಿಲ್ಲದಷ್ಟು ಸೇರಿತ್ತು; ರಾಜವೀದಿಯಲಿ = ರಾಜಮಾರ್ಗದಲ್ಲಿ; ಕರಿ = ಆನೆ; ತುರುಗ = ಕುದುರೆ; ರಥ = ರಥ; ಪಾಯದಳ = ಕಾಲಾಳುಗಳ ಸಮೂಹ; ಗೋಚರಿಸಿತಂಗಡಿ = ಕಣ್ಸೆಳೆದುವು ಅಂಗಡಿಗಳ ಸಾಲುಸಾಲು; ನವವಿಧಾನದಿ = ಹೊಸಹೊಸ ರೀತಿ, ಬೆಡಗುಗಳಿಂದ; ಮೆರೆವ ಯೋಧ್ಯಾಪುರವ ಕಂಡನು = ಶೋಭಾಯಮಾನವಾಗಿ ಕಣ್ಸೆಳೆಯುವ ಅಯೋಧ್ಯಾ ನಗರವನ್ನು ಕಂಡ ನಳಮಹಾರಾಜನು; ತೂಗಿದನು ಶಿರವ = ಮೆಚ್ಚುಗೆಯಿಂದ ತಲೆದೂಗಿದನು.

ಅಯೋಧ್ಯಾನಗರದ ಬೀದಿಬೀದಿಗಳಲ್ಲಿ ವಿವಿಧ ಭೂಮಂಡಲಾಧಿಪರು, ಸಾಮಂತರು ಮೊದಲಾದ ವಿವಿಧ ಮಟ್ಟದ ಅರಸುಗಳು, ಬ್ರಾಹ್ಮಣರು, ವಣಿಕಸಮಸ್ತರಲ್ಲದೆ ಇತರ ಎಲ್ಲ ವರ್ಗದ ಜಾತಿ ಜನಾಂಗಗಳು, ಸುಧಾರಿತ ವಲಯದ ಪುರಜನರು, ಹೀಗೆ ಜನಸಮೂಹವು ಅಲ್ಲಲ್ಲಿ ಲೆಕ್ಕವಿಲ್ಲದಷ್ಟು ನೆರೆದಿತ್ತು. ರಾಜವೀಧಿಗಳಲ್ಲಿ ಇವರುಗಳಲ್ಲದೆ ಆನೆ, ಕುದುರೆ, ರಥ, ಕಾಲಾಳುಗಳ ಚದುರಂಗ ಬಲವೂ ಕಂಡಿತು. ಅಂಗಡಿಗಳ ಸಾಲುಸಾಲು ಹೊಸಹೊಸ ರೀತಿಗಳಿಂದ, ಬೆಡಗು

ಬೀರಿದ್ದುವು. ಹೀಗೆ ಶೋಭಾಯಮಾನವಾಗಿ ಕಣ್ಸೆಳೆಯುವ ಅಯೋಧ್ಯಾನಗರವನ್ನು ಕಂಡು ನಳಮಹಾರಾಜನು ಮೆಚ್ಚುಗೆಯಿಂದ ತಲೆದೂಗಿದನು.

28. ಬಂದು ಹೊಕ್ಕನು ಪುರವ ಮೆರೆವತಿ
ಚಂದವನು ನೆರೆನೋಡಿ ಮನದೊಳ
ಗಂದು ಕೊಂಡಾಡಿದನು ಋತುಪರ್ಣನ ಮಹಾಸಿರಿಯ
ತಂದುದೇ ವಿಧಿ ತನ್ನನಿಲ್ಲಿಗೆ
ಮಂದಭಾಗ್ಯನು ತಾನೆನುತ ಮನ
ನೊಂದು ನೆನೆದನು ವರಪುರಾಧಿಪ ಚೆನ್ನಕೇಶವನ

ಬಂದು ಹೊಕ್ಕನು ಪುರವ = ನಳಚಕ್ರವರ್ತಿಯು ಅಯೋಧ್ಯಾನಗರ ಪ್ರವೇಶ ಮಾಡಿದನು; ಮೆರೆವ + ಅತಿ = ಅತ್ಯಂತ ಶೋಭಾಕರವಾಗಿದ್ದ; ಚಂದವನು = ಆ ನಗರ ಸೌಂದರ್ಯವನು; ನೆರೆ ನೋಡಿ = ಆಳವಾಗಿ ಗಮನಿಸಿ; ಮನದೊಳಗೆ + ಅಂದು = ಆದಿನ ಮನಸ್ಸಿನೊಳಗೇ; ಕೊಂಡಾಡಿದನು = ಮೆಚ್ಚಿಕೊಂಡನು; ಋತುಪರ್ಣನ ಮಹಾಸಿರಿಯ = ಅಯೋಧ್ಯಾಪುರಪತಿಯಾದ ಋತುಪರ್ಣನ ಸಿರಿಸಂಪತ್ತನ್ನು; ತಂದುದೇ ವಿಧಿ ತನ್ನನಿಲ್ಲಿಗೆ = ವಿಧಿಯು ನನ್ನನ್ನು ಇಲ್ಲಿಗೆ ಕರೆತಂದಿತೇ; ಮಂದಭಾಗ್ಯನು = ಅದೃಷ್ಟಹೀನನು; ತಾನೆನುತ = ನಾನು ಎಂದು; ಮನನೊಂದು ನೆನೆದನು = ತನ್ನ ದುಃಸ್ಥಿತಿಗೆ ಮರುಗುತ್ತ; ನೆನೆದನು = ಧ್ಯಾನಿಸಿದನು; ವರಪುರಾಧಿಪ = ವರಪುರದ ದೇವನಾದ; ಚೆನ್ನಕೇಶವನ = ವಿಷ್ಣುವನ್ನು.

ಹೀಗೆ ನಳಮಹಾರಾಜನು ವಿವಿಧ ಸಂಪತ್ಸಮೃದ್ಧಿಗಳಿಂದ, ಚೆಲುವು ಸೊಗಸುಗಳಿಂದ ಸುಸಂಸ್ಕೃತ ನಗರಾಭಿವೃದ್ಧಿಗಳಿಂದ, ವಿವಿಧ ರೀತಿಯ ಪುರಜನ, ಕಲೆಗಾರ ಸಮೂಹಗಳಿಂದ ಮೆರೆಯುವ ಬೀದಿಬೀದಿಗಳಲ್ಲಿ ಸುತ್ತಾಡುತ್ತ ಅಯೋಧ್ಯಾನಗರದ ಪುರಪ್ರವೇಶ ಮಾಡಿದನು. ಆ ಪಟ್ಟಣದ ಸಮೃದ್ಧಿಗೂ ನೆಮ್ಮದಿಗೂ ಕಾರಣಕರ್ತನಾದ ಋತುಪರ್ಣನ ಸಿರಿಸೊಗಸುಗಳನ್ನು ಮನದಲ್ಲಿಯೇ ಕೊಂಡಾಡುತ್ತ, ತನ್ನಂತವನನ್ನು ವಿಧಿಯು ಹೀಗೆ ಇಲ್ಲಿಗೆ ತಂದು ನಿಲ್ಲಿಸಿತೇ ಎಂದು ಒಳಗೊಳಗೇ ಕೊರಗುತ್ತ, ಮನಸ್ಸಿನಲ್ಲಿಯೇ ವರಪುರಾಧೀಶ ಚೆನ್ನಕೇಶವನನ್ನು ಧ್ಯಾನಿಸಿದನು.

ಏಳನೆಯ ಸಂಧಿ

ಮಗಳ ಕಾಣದೆ ಭೀಮನೃಪ ಮೂ
ಜಗವ ಭೇದಿಸಿ ಚೈದ್ಯಭೂಪನ
ನಗರದಲ್ಲಿರೆ ಕಂಡು ಕರೆಸಿದ ತನ್ನ ನಿಜಸುತೆಯ

ಮಗಳ ಕಾಣದೆ = ಮಗಳೆಲ್ಲಿ ಕಾಣದೇ ಹೋದಳು ಎಂಬುದಕ್ಕಾಗಿ; ಭೀಮನೃಪ = ವಿದರ್ಭಾಧಿಪತಿ ಭೀಮನೃಪನು; ಮೂಜಗವ ಭೇದಿಸಿ = ಅವಳಿಗಾಗಿ ಮೂಲೋಕವನ್ನೂ ಹುಡುಕಿಸಿ; ಚೈದ್ಯಭೂಪನ = ಚೈದ್ಯಪುರದರಸನ; ನಗರದಲ್ಲಿರೆ ಕಂಡು = ನಗರದಲ್ಲಿರುವುದನ್ನು ಪತ್ತೆ ಹಚ್ಚಿ; ಕರೆಸಿದ = ಕರೆಸಿಕೊಂಡನು; ತನ್ನ ನಿಜಸುತೆಯ = ತನ್ನ ಮಗಳನ್ನು.

ನಳನು ಅಧಿಕಾರಭ್ರಷ್ಟನಾಗಿ ಕಾಡುಪಾಲಾದ ನಂತರ, ವಿದರ್ಭಾಧಿಪತಿ ಯಾದ ಭೀಮನೃಪನು ತನ್ನ ಮಗಳಿಗಾಗಿ ಮೂಲೋಕವನ್ನೂ ಬಿಡದಂತೆ ಹುಡು ಕಾಡಿಸಿದನು. ಕೊನೆಗೆ ಅವಳು ಚೈದ್ಯಪುರದರಸನಲ್ಲಿರುವುದನ್ನು ಪತ್ತೆ ಹಚ್ಚಿ, ಅವಳನ್ನು ತನ್ನಲ್ಲಿಗೆ ಕರೆಸಿಕೊಂಡನು.

1. ಕೇಳು ಧರ್ಮಜ ರತ್ನ ನಿರ್ಮಿತ
ದಾಲಯದ ಸೊಬಗಿನಲಿಯೋಲಗ
ಶಾಲೆಯಲಿ ಋತುಪರ್ಣನಿದ್ದನು ಸಿಂಹಪೀಠದಲಿ
ಸಾಲ ಮಕುಟದ ನೃಪರು ಭೂಸುರ
ಜಾಲ ಮಂತ್ರಿ ಪುರೋಹಿತರು ಗುಣ
ಶೀಲರುನ್ನತಸತಿಯರಿಂದೆಸೆದಿರ್ದುದಾಸ್ಥಾನ

ಕೇಳು ಧರ್ಮಜ = ಧರ್ಮರಾಯನೇ ಕೇಳು; ರತ್ನ ನಿರ್ಮಿತದಾಲಯದ = ರತ್ನಗಳಿಂದ ನಿರ್ಮಿತವಾದ ಅರಮನೆಯ; ಸೊಬಗಿನಲಿ + ಓಲಗ ಶಾಲೆಯಲಿ

= ಸೊಬಗಿನಿಂದ ಕಣ್ಸೆಳೆಯುವಂತಿದ್ದ ಆಸ್ಥಾನ ಸಭಾಮಂಟಪದಲ್ಲಿ; ಋತು ಪರ್ಣನಿದ್ದನು = ಋತುಪರ್ಣ ಮಹಾರಾಜನು; ಸಿಂಹಪೀಠದಲ್ಲಿ = ಸಿಂಹಾಸನಾರೂಢನಾಗಿದ್ದನು; ಸಾಲ ಮಕುಟದ ನೃಪರು = ಕಿರೀಟಧಾರಿಗಳಾದ ವಿವಿಧ ರಾಜರೂ; ಭೂಸುರಜಾಲ = ಬ್ರಾಹ್ಮಣರ ಸಮೂಹ; ಮಂತ್ರಿ = ಸಚಿವಸಮೂಹ; ಪುರೋಹಿತರು = ಪುರೋಹಿತಗಣ; ಗುಣಶೀಲರು + ಉನ್ನತ ಸತಿಯರಿಂದ + ಎಸೆದಿರ್ದುದು + ಆಸ್ಥಾನ = ಮಹಾ ಸದ್ಗುಣಶೀಲರು ಮತ್ತು ಉನ್ನತವರ್ಗದ ಸ್ತ್ರೀಸಂಕುಲದಿಂದ ಆಸ್ಥಾನವು ಶೋಭಾಯಮಾನವಾಗಿತ್ತು.

ಧರ್ಮರಾಯನೇ ಕೇಳು, ರತ್ನಖಚಿತವಾದ ಅರಮನೆಯ ಸುಂದರವಾದ ಆಸ್ಥಾನ ಸಭಾ ಮಂಟಪದಲ್ಲಿ ಸಿಂಹಾಸನಾರೂಢನಾಗಿದ್ದ ಮಹಾರಾಜ ಋತು ಪರ್ಣನು ಓಲಗಗೊಟ್ಟಿದ್ದನು. ಆ ಸಭೆಯಲ್ಲಿ ಕಿರೀಟಧಾರಿಗಳಾಗಿದ್ದ ವಿವಿಧೆಡೆಯ ರಾಜಾಧಿರಾಜರು ಸಾಲುಸಾಲಾಗಿ ಮಂಡಿಸಿದ್ದರು. ಅಂತೆಯೇ ಬ್ರಾಹ್ಮಣ ಸಮೂಹ, ಸಚಿವಸಮೂಹ, ಪುರೋಹಿತಗಣ, ಸದ್ಗುಣಶೀಲರ ಸಮೂಹ ಹಾಗೂ ಉನ್ನತವರ್ಗದ ಸ್ತ್ರೀಸಂಕುಲವೆಲ್ಲವೂ ನೆರೆದಿದ್ದು ಆ ಸಭೆ ಶೋಭಾಯಮಾನವಾಗಿ ಕಣ್ಸೆಳೆಯುವಂತಿತ್ತು.

2. ಇದು ಸಮಯ ತನಗೆಂದು ನಳನೃಪ
ಮುದದಿ ವೇಷವ ತಾಳ್ದು ಹರಿಯಂ
ದದಲಿ ಬಂದನು ಸಭೆಯ ಕಂಡನು ನೃಪಗೆ ಕೈಮುಗಿದು
ಸದಮಲಾಸ್ಥಾನದಲಿ ರಿಪುಭಟ
ಕದನಗಲಿಗಳು ಜೀಯೆನಲು ನಯ
ಹೃದಯದಲಿ ಬಿನ್ನೈಸಿದನು ಋತುಪರ್ಣಭೂಪತಿಗೆ

ಇದು ಸಮಯ ತನಗೆಂದು = ಇದೇ ತನಗೆ ತಕ್ಕ ಅನುಕೂಲಕರ ಸಮಯ ಎಂದು ಭಾವಿಸಿ; ನಳನೃಪ = ನಳಮಹಾರಾಜನು; ಮುದದಿ = ಸಂತೋಷದಿಂದ; ವೇಷವ ತಾಳ್ದು = ಛದ್ಮವೇಷಧಾರಿಯಾಗಿ; ಹರಿಯಂದದಲಿ ಬಂದನು = ಅವಸರವಸರವಾಗಿ ಓಡುತ್ತ ಬಂದನು; ಸಭೆಯ ಕಂಡನು = ರಾಜನು ಓಲಗದಲ್ಲಿದ್ದುದನ್ನು ಕಂಡನು; ನೃಪಗೆ ಕೈಮುಗಿದು = ಅರಸನನ್ನು ಕಂಡು

ನಮಸ್ಕರಿಸಿದನು; ಸದಮಲಾಸ್ಥಾನದಲಿ = ಶುದ್ಧತೆಯೇ ತುಂಬಿಹೋಗಿದೆಯೆಂಬಂತಿದ್ದ ಆ ಆಸ್ಥಾನಮಂಟಪದಲ್ಲಿ; ರಿಪುಭಟ ಕದನಗಲಿಗಳು = ಶತ್ರುರಾಜರೂ, ಕದನರಂಗದಲ್ಲಿ ಮಹಾಪರಾಕ್ರಮಿಗಳೂ ಆಗಿದ್ದವರೆಲ್ಲರೂ; ಜೀಯ + ಎನಲು = 'ಸ್ವಾಮೀ' ಎಂದು ಗೌರವಪೂರ್ವಕವಾಗಿ ರಾಜನಿಗೆ ನಮಸ್ಕರಿಸುತ್ತಿರಲು; ನಯಹೃದಯದಲಿ = ನಳನು ವಿನಯಪೂರ್ವಕ ಮನಸ್ಸಿನಿಂದ; ಭಿನ್ನೈಸಿದನು = ವಿನಂತಿಸಿಕೊಂಡನು; ಋತುಪರ್ಣ ಭೂಪನಿಗೆ = ಋತುಪರ್ಣ ಮಹಾರಾಜನಿಗೆ.

ಋತುಪರ್ಣ ಮಹಾರಾಜನು ಓಲಗಗೊಟ್ಟಿರುವ ವಿಷಯವನ್ನು ತಿಳಿದು ತನಗೆ ಇದೇ ತಕ್ಕ ಅನುಕೂಲಕರ ಸಮಯ ಎಂದು ನಿಶ್ಚಯಿಸಿ, ನಳನು ಸಂತೋಷದಿಂದ ಮಾರುವೇಷವನ್ನು ತಾಳಿ, ಅವಸರವಾಗಿ ಓಡುತ್ತ ರಾಜಾಸ್ಥಾನಕ್ಕೆ ಬಂದನು. ರಾಜನು ಓಲಗದಲ್ಲಿ ಮಂಡಿಸಿರುವುದನ್ನು ಕಂಡು, ಅವನಿಗೆ ವಿನಯಪೂರ್ವಕವಾದ ಮನಸ್ಸಿನಿಂದ ನಮಸ್ಕರಿಸಿದನು. ಶುದ್ಧತೆಯ ಆವಾಸ ಸ್ಥಾನದಂತಿದ್ದ ಆ ಸಭೆಯಲ್ಲಿ, ಶತ್ರುರಾಜರುಗಳೂ ಮಹಾಪರಾಕ್ರಮಿಗಳು ಮೊದಲಾದವರೆಲ್ಲರೂ 'ಸ್ವಾಮಿ' ಎಂದು ಗೌರವಪೂರ್ವಕವಾಗಿ ರಾಜನಿಗೆ ನಮಸ್ಕರಿಸುತ್ತಿರಲು ನಳನು ಅತ್ಯಂತ ವಿನೀತನಾಗಿ ರಾಜನಲ್ಲಿ ಭಿನ್ನವಿಸಿಕೊಳ್ಳತೊಡಗಿದನು.

3. ಅವನಿಪತಿ ಕೇಳ್ ನಿಮ್ಮ ಪದಕಮ
ಲವನು ಭಜಿಸುವೆ ಜೀಯ ಚಿತ್ತದಿ
ಸವಡಿನುಡಿ ತನಗಿಲ್ಲ ಬಾಹುಕನೆಂಬುದಭಿಧಾನ
ಭುವನದೊಳು ತಾನಶ್ವಕುಲಹೃದ
ಯವನು ಬಲ್ಲೆನು ಶಾಕಪಾಕದಿ
ಸವಿಗೊಳಿಪ ವರವಿದ್ಯೆ ತನಗುಂಟೆಂದನವ ನಗುತ

ಅವನಿಪತಿ ಕೇಳ್ = ಭೂಮಂಡಲಾಧೀಶನೇ ಕೇಳು; ನಿಮ್ಮ ಪದಕಮಲವನು=ನಿನ್ನ ಪಾದಕಮಲಗಳನ್ನು; ಭಜಿಸುವೆ = ಪೂಜಿಸುತ್ತೇನೆ; ಜೀಯ = ಸ್ವಾಮೀ; ಚಿತ್ತದಿ= ಮನಸ್ಸಿನಲ್ಲಿ; ಸವಡಿನುಡಿ ತನಗಿಲ್ಲ = ನನಗೆ ಎರಡು ರೀತಿಗಳಲ್ಲಿ ಮಾತನಾಡುವ ಅಭ್ಯಾಸವಿಲ್ಲ; ಬಾಹುಕನೆಂಬುದಭಿಧಾನ = ಬಾಹುಕನೆಂದು ನನ್ನ ಹೆಸರು. ಭುವನದೊಳು = ಈ ಜಗತ್ತಿನಲ್ಲಿ; ತಾನಶ್ವಕುಲ ಹೃದಯವನು ಬಲ್ಲೆನು =

ನಾನು ಅಶ್ವಗಳ ಮನಸ್ಸನ್ನು ಅರಿತು ಚಾಲಿಸುವ ವಿದ್ಯೆಯನು ಬಲ್ಲವನು; ಶಾಕಪಾಕದಿ = ಸಸ್ಯಾಹಾರದಲ್ಲೂ, ಪಾಕಶಾಸ್ತ್ರದಲ್ಲಿಯೂ; ಸವಿಗೊಳಿಪ = ಎಲ್ಲರನ್ನೂ ತೃಪ್ತಿ ಗೊಳಿಸುವ; ವರವಿದ್ಯೆ = ಕುಶಲತೆ; ತನಗೆ + ಉಂಟು + ಎಂದನು + ಅವ = ತನಗಿದೆ ಎಂದು ಹೇಳಿದನು ಅವನು; ನಗುತ = ನಗುಮುಖದಿಂದ.

ಮಹಾರಾಜಾಧಿರಾಜನೇ ಕೇಳು, ನಾನು ನಿನ್ನ ಪಾದಕಮಲಗಳಲ್ಲಿ ಸೇವೆ ಸಲ್ಲಿಸಲೆಂದೇ ಬಂದಿರುವೆ. ನನಗೆ ಎರಡು ರೀತಿಗಳಲ್ಲಿ ಮಾತನಾಡಿ ಅಭ್ಯಾಸವಿಲ್ಲ. ನಾನು ನೇರ ನಡೆನುಡಿಯುಳ್ಳವನು; ನನ್ನ ಹೆಸರು ಬಾಹುಕನೆಂದು. ಈ ಜಗತ್ತಿನಲ್ಲಿ ನನಗೆ ಅಶ್ವಗಳ ಮನಸ್ಸನ್ನು ಅರಿತು ಅವುಗಳನ್ನು ನಡೆಸುವ ವಿದ್ಯೆ ಕರಗತವಾಗಿದೆ. ನಾನು ಪಾಕಶಾಸ್ತ್ರಪ್ರವೀಣನೂ ಆಗಿದ್ದು, ರಸಪಾಕದಿಂದ ಸರ್ವರನ್ನೂ ಸಂತೃಪ್ತ ಗೊಳಿಸುವ ಕುಶಲತೆಯೂ ನನಗಿದೆ ಎಂದು ನಗು ಮುಖದಿಂದ ಋತುಪರ್ಣನಲ್ಲಿ ಭಿನ್ನವಿಸಿಕೊಂಡನು.

4. ಸೂಪಕಾರದೊಳಗ್ಗಳನು ಕಡು
ರೂಪಿನವ ತಾನಲ್ಲ ಚಿತ್ತದಿ
ಕಾಪುರುಷನೆನ್ನದಿರು ನೋಡಾ ತನ್ನ ಪೌರುಷವ
ಭೂಪ ಮುಂಗೈಗಂಕಣಕೆ ಕುಲ
ದೀಪ ಕನ್ನಡಿಯೇಕೆ ತರಿಸು ಪ್ರ
ತಾಪವಾಜಿಯನೆಂದು ಬಿನ್ನೈಸಿದನು ನಸುನಗುತ

ಸೂಪಕಾರದೊಳಗ್ಗಳನು = ನಾನು ಬಾಣಸಿಗರಲ್ಲಿ ಉತ್ತಮನು; ಕಡು ರೂಪಿನವ ತಾನಲ್ಲ = ನಾನು ಸುಂದರಾಕಾರನಲ್ಲ; ಚಿತ್ತದಿ ಕಾಪುರುಷನೆನ್ನದಿರು = ಆದರೆ ಗುಣದ ವಿಷಯದಲ್ಲೂ ಕೆಟ್ಟವನೆಂದು ಭಾವಿಸದಿರು; ನೋಡಾ ತನ್ನ ಪೌರುಷವ = ನನ್ನ ಪರಾಕ್ರಮವನ್ನು ಲಕ್ಷ್ಯವಿಟ್ಟು ನೋಡು; ಭೂಪ = ಭೂಪಾಲಕನೇ; ಮುಂಗೈಗಂಕಣಕೆ = ಮುಂಗೈಯಲ್ಲಿರುವ ಕಂಕಣವನ್ನು ನೋಡಲು, ಕುಲದೀಪ = ಶ್ರೇಷ್ಠವಾದ ದೀಪ; ಕನ್ನಡಿಯೇಕೆ = ಅಥವಾ ಕನ್ನಡಿಯ ಅಗತ್ಯವಿಲ್ಲ; ತರಿಸು = ಬರಹೇಳು; ಪ್ರತಾಪವಾಜಿಯನೆಂದು = ನುರಿತ ಬಲಿಷ್ಠವಾದ

ಕುದುರೆಯನ್ನು ಎಂದು ಬಿನ್ನೈಸಿದನು = ವಿನಂತಿಸಿದನು; ನಗುನಗುತ = ಮುಗುಳ್ನಗೆಯಿಂದ.

ಬಾಹುಕನೆಂದು ತನ್ನನ್ನು ಪರಿಚಯಿಸಿಕೊಂಡ ನಳನು ಈಗ ತನ್ನ ವಿದ್ಯಾಕುಶಲತೆ, ಪರಾಕ್ರಮಗಳನ್ನು ಕುರಿತು ಋತುಪರ್ಣನಾದಿಯಾಗಿ ಸಭೆಯಲ್ಲಿದ್ದ ಎಲ್ಲರ ಗಮನ ಸೆಳೆಯುವತ್ತ ಲಕ್ಷ್ಯವಹಿಸುತ್ತಿದ್ದಾನೆ. “ಮಹಾರಾಜನೇ ನಾನು ಪಾಕ ಶಾಸ್ತ್ರದಲ್ಲಿ ನಿಪುಣನು. ರೂಪದಲ್ಲಿ ನಾನು ಸುಂದರಾಕಾರನಲ್ಲದಿರಬಹುದು. ಆಕರ್ಷಕನಾಗಿಲ್ಲದ ನನ್ನ ಕುರೂಪವನ್ನೇ ಪ್ರಧಾನವಾಗಿ ಭಾವಿಸಿ ನನ್ನನ್ನು ಕೆಟ್ಟವನಿರಬಹುದೆಂದು ಭಾವಿಸದಿರು. ನನ್ನ ಪರಾಕ್ರಮವನ್ನು ನೋಡು. ಅರಸನೇ, ಮುಂಗೈ ಕಂಕಣವನ್ನು ನೋಡಲು ಶ್ರೇಷ್ಠವಾದ ದೀಪವೂ ಕನ್ನಡಿಯೂ ಬೇಕಿದೆಯೇನು? ಆದ್ದರಿಂದ ನನ್ನ ನಿಜ ಪರಾಕ್ರಮವನ್ನು ಅಳೆವೆಯಾದರೆ ಉತ್ತಮವಾದ, ಶಕ್ತಿಯುತವಾದ ಕುದುರೆಯನ್ನು ತರಿಸು” ಎಂದು ವಿನಯಪೂರ್ವಕವಾಗಿ ನಗುನಗುತ್ತ ವಿನಂತಿಸಿದನು.

5. ಪೊಡವಿಪತಿ ಋತುಪರ್ಣ ಬಾಹುಕ
ನುಡಿದ ವಚನಕೆ ಮೆಚ್ಚಿ ಮನದು
ಗ್ಗಡದ ತೇಜಿಯ ತರಿಸಿ ಕೊಡಲೇರಿದನು ಬೀದಿಯಲಿ
ಮಡದ ಸನ್ನೆಗೆ ಕುಣಿದು ರವೆಗಾ
ಲಿಡುತ ಜೋಡಣೆಯಿಂದ ಹಯವಡಿ
ಗಡಿಗೆ ಚಿಮ್ಮಿತು ವಾಯುವೇಗದೊಳರಸ ಕೇಳೆಂದ

ಪೊಡವಿಪತಿ = ಮಹಾರಾಜನಾದ; ಋತುಪರ್ಣ = ಋತುಪರ್ಣನು; ಬಾಹುಕ ನುಡಿದ ವಚನಕೆ = ಬಾಹುಕನ ಮಾತಿನ ಶೈಲಿಗೆ; ಮೆಚ್ಚಿ = ಮೆಚ್ಚುಗೆ ಸೂಚಿಸಿ; ಮನದುಗ್ಗಡದ = ಉತ್ಕಟವಾದ, ಪರಾಕ್ರಮಶೀಲವಾದ; ತೇಜಿಯ ತರಿಸಿ = ಕುದುರೆಯನ್ನು ತರಿಸಿ; ಕೊಡಲೇರಿದನು = ಕೊಡಲು ಅದನ್ನು ಹತ್ತಿದ ನಳನು; ಬೀದಿಯಲಿ = ಆ ಪುರದ ಅರಮನೆಯ ಹೊರಗಿನ ಬೀದಿಯಲ್ಲಿ; ಮಡದ ಸನ್ನೆಗೆ = ಹಿಮ್ಮಡಿಯನ್ನು ಒದ್ದು ನೀಡಿದ ಸೂಚನೆಗೆ; ಕುಣಿದು ರವಗಾಲಿಡುತ = ಉತ್ಸಾಹದಿಂದ ಶಬ್ದ ಮಾಡುವ ಹೆಜ್ಜೆಗಳನ್ನಿಡುತ್ತ; ಜೋಡಣೆಯಿಂದ = ಜೋಡು

ಗಾಲುಗಳಿಂದ; ಹಯವಡಿಗಡಿಗೆ = ಕುದುರೆಯು ಹೆಜ್ಜೆ ಹೆಜ್ಜೆಗೂ; ಚಿಮ್ಮಿತು = ಚಿಮ್ಮಿ ಓಡಿತು; ವಾಯುವೇಗದೊಳರಸ = ವಾಯುವೇಗದಿಂದ ಅರಸ; ಕೇಳೆಂದ = ಕೇಳು ಧರ್ಮರಾಯನೇ ಎಂದನು ರೋಮಶಮುನಿ.

ಬಾಹುಕನ ಮಾತಿನ ಶೈಲಿಗೆ ಮಹಾರಾಜ ಋತುಪರ್ಣನು ಮೆಚ್ಚಿ ತಲೆದೂಗಿದನು. ಮತ್ತು ಅವನ ಭಿನ್ನಹದಂತೆ ಅವನಿಗೆ ಪರಾಕ್ರಮಶೀಲವಾದ ಉತ್ತಮಾಶ್ವವನ್ನು ತರಿಸಿಕೊಟ್ಟನು. ಮನಸ್ಸಿನಲ್ಲಿ ಉತ್ಕಟವಾದ ಶಕ್ತಿ ನೈಪುಣ್ಯಗಳನ್ನುಳ್ಳ ಆ ಕುದುರೆಯನ್ನು ಹತ್ತಿದ ನಳನು ಅದನ್ನು ನಡೆಸಿ ಬೀದಿಯಲ್ಲಿ ಅದರ ಹಿಮ್ಮಡಿಯನ್ನು ಒದ್ದು ಸೂಚನೆಯನ್ನು ಕೊಟ್ಟ ಮರುಕ್ಷಣವೇ ಕುದುರೆಯು ಆ ಸೂಚನೆಯನ್ನು ಗ್ರಹಿಸಿ, ಪರಮೋತ್ಸಾಹದಿಂದ ಶಬ್ದ ಮಾಡುವ ಹೆಜ್ಜೆಗಳನ್ನಿಡುತ್ತ ಜೋಡುಗಾಲುಗಳನ್ನಿಡುತ್ತ ಹೆಜ್ಜೆಹೆಜ್ಜೆಗೂ ಚಿಮ್ಮಿ ಹಾರುತ್ತ ವಾಯುವೇಗದಿಂದ ಓಡಲಾರಂಭಿಸಿತು. ಅರಸನೇ ಧರ್ಮರಾಯ ಕೇಳು ಎಂದು ರೋಮಶಮುನಿಯು ಕತೆಯನ್ನು ಮುಂದುವರಿಸಿದನು.

6. ಕರದ ವಾಘೆಯ ಸಡಿಲ ಬಿಡೆ ನಿ
ಬ್ಬರದ ಗಮನದೊಳೈದಿತವನಿಯೊ
ಳುರವಣಿಸಿ ಕೆಂಧೂಳಿ ಮುಸುಕಿದುದಂಬರವ ಬಿಡದೆ
ಧರಣಿ ತಲ್ಲಣಿಸಿದುದು ಗಗನದಿ
ಸುರರು ಕೊಂಡಾಡಿದರು ರಾವುತ
ರರಸನಹುದೋ ಭಾಪು ಭಾಪೆಂದುದಾ ಸಮಸ್ತಜನ

ಕರದ ವಾಘೆಯ = ಕೈಯ್ಯಲ್ಲಿ ಹಿಡಿದಿದ್ದ ಕಡಿವಾಣವನ್ನು; ಸಡಿಲ ಬಿಡೆ = ಸಡಲಿಸಲು; ನಿಬ್ಬರದ = ಅತಿಶಯವಾದ; ಗಮನದೊಳು + ಐದಿತು + ಅವನಿಯೊಳು + ಉರವಣಿಸಿ = ಅತ್ಯಂತ ರಭಸದಿಂದ ಕುದುರೆಯು ಭೂಮಿಯ ಮೇಲೆ ಚಿಮ್ಮುತ್ತ; ಕೆಂಧೂಳಿ = ಅದರ ಓಟದ ರಭಸಕ್ಕೆ ಮಣ್ಣಿನ ಕೆಂಪುಧೂಳು; ಮುಸುಕಿದುದು + ಅಂಬರವ = ಆಕಾಶದವರೆಗೂ ಚಿಮ್ಮಿ ಆವರಿಸಿತು; ಬಿಡದೆ = ಸಂಪೂರ್ಣವಾಗಿ; ಧರಣಿ ತಲ್ಲಣಿಸಿದುದು = ಕುದುರೆಯ ವೇಗಕ್ಕೆ, ಉತ್ಸಾಹಕ್ಕೆ ಭೂಮಿಯೇ ಬೆಚ್ಚಿ ತಳಮಳಗೊಂಡಿತು; ಗಗನದಿ = ಆಕಾಶಮಾರ್ಗದಲ್ಲಿ ನೆರೆದಿದ್ದ;

ಸುರರು = ದೇವಾಧಿದೇವತೆಗಳು; ಕೊಂಡಾಡಿದರು = ಹೊಗಳಿದರು; ರಾವುತರ + ಅರಸನು + ಅಹುದೋ = ಕುದುರೆ ಸವಾರರ ನಾಯಕನಿರಬಹುದೇನೋ ಇವನು; ಭಾಪು ಭಾಪೆಂದುದಾ = ಭಲೇ! ಭಲೆ! ಎಂದು ಮೆಚ್ಚುಗೆಯಿಂದ ಉದ್ಗರಿಸಿತು; ಸಮಸ್ತ ಜನ = ಅಲ್ಲಿ ನೆರೆದಿದ್ದ ಸಮಸ್ತ ಜನ ಸಮೂಹ.

ಕುದುರೆಯು ಚಿಮ್ಮಿ ಓಡಲಾರಂಭಿಸಿದಂತೆ, ನಳನು ತಾನು ಕೈಯಲ್ಲಿ ಹಿಡಿದಿದ್ದ ಕಡಿವಾಣವನ್ನು ಸಡಿಲಿಸಿ ಬಿಡಲು, ಅತಿಶಯವಾದೊಂದು ವೇಗದಿಂದಲೂ ರಭಸದಿಂದಲೂ ಕುದುರೆಯು, ಭೂಮಿಯಿಂದ ಮೇಲಕ್ಕೆ ಚಿಮ್ಮುತ್ತ ಹೋಗಲು, ಅದರ ರಭಸಕ್ಕೆ ಮಣ್ಣಿನ ಕೆಂಪು ಧೂಳು ಚಿಮ್ಮಿ ಆಗಸದವರೆಗೂ ಆವರಿಸಿತು. ಕುದುರೆಯ ವೇಗಕ್ಕೆ ಭೂಮಿ ಬೆಚ್ಚಿ ತಳಮಳಗೊಂಡಿತು. ಆಕಾಶಮಾರ್ಗದಲ್ಲಿದ್ದ ಸುರಗಣ ನಳನ ನಿಪುಣತೆಯನ್ನು ಮೆಚ್ಚಿ ಕೊಂಡಾಡುತ್ತಿರಲು, ಋತುಪರ್ಣನ ಸಾಮಾಜಿಕರು ಭಲೆ! ಭಲೆ! ಇವನು ಯಾರೋ ಕುದುರೆ ಸವಾರರ ನಾಯಕ ನಿರಬಹುದೇನೋ ಎಂದು ಆಶ್ಚರ್ಯದಿಂದಲೂ ಮೆಚ್ಚುಗೆಯಿಂದಲೂ ಉದ್ಗರಿ ಸುತ್ತಿದ್ದರು.

7. ಮುರುಹಿ ಹಿಡಿಯಲು ಮಡದ ಸನ್ನೆಗೆ
ತಿರುಗಿತತಿವೇಗದಲಿ ಹಯವೋ
ಸರಿಸಿ ಕಿರುಬೆಮರಿಡಲು ನಿಲಿಸುತ ವಾರುವವನಿಳಿದು
ಕರವ ಮುಗಿಯಲು ನೃಪತಿ ಮೆಚ್ಚುತ
ತರಿಸಿ ಕೊಟ್ಟನು ಭೂಷಣಂಗಳ
ಹಿರಿದು ಸಂಬಳವಿತ್ತು ನಿಲಿಸಿದನರಸ ಬಾಹುಕನ

ಮುರುಹಿ ಹಿಡಿಯಲು = ಕುದುರೆಯ ಕಡಿವಾಣವನ್ನು ಡೊಂಕಾಗಿ ಬಾಗಿಸಿ ಹಿಡಿದುಕೊಳ್ಳಲು; ಮಡದ ಸನ್ನೆಗೆ = ಹಿಂಗಾಲು ಹಿಮ್ಮಡಿಗಳಿಗೆ ನೀಡಿದ ಸಂಜ್ಞೆಗನುಗುಣವಾಗಿ ಕುದುರೆಯು; ತಿರುಗಿತು + ಅತಿವೇಗದಲಿ = ಅತ್ಯಂತ ವೇಗದಿಂದ ತಿರುಗಿತು; ಹಯವು + ಓಸರಿಸಿ = ಕುದುರೆಯು ಬದಿಗೆ ಸರಿದು; ಕಿರುಬೆಮರಿಡಲು = ಆಯಾಸದಿಂದ ಸಣ್ಣಗೆ ಬೆವರಲಾರಂಭಿಸಲು; ನಿಲಿಸುತ = ಅಲ್ಲಿಗೇ ನಿಲ್ಲಿಸುತ್ತ ಕುದುರೆಯ ಓಟವನ್ನು; ವಾರುವವನಿಳಿದು = ಅದರ ಬೆನ್ನ

ಮೇಲಿನಿಂದ ಇಳಿದು; ಕರವ ಮುಗಿಯಲು = ಋತುಪರ್ಣ ಮಹಾರಾಜನಿಗೆ ವಂದಿಸಲು; ನೃಪತಿ ಮೆಚ್ಚುತ = ರಾಜನು ಮೆಚ್ಚುಗೆಯಿಂದ; ತರಿಸಿಕೊಟ್ಟನು ಭೂಷಣಂಗಳ = ನವವಸ್ತ್ರಾಭರಣಗಳನ್ನು ಕೊಟ್ಟು ಸನ್ಮಾನಿಸಿದನು; ಹಿರಿದು ಸಂಬಳವಿತ್ತು = ದೊಡ್ಡ ಮೊತ್ತದ ವೇತನವನ್ನು ನೀಡಿ; ನಿಲಿಸಿದನರಸ ಬಾಹುಕನ = ಋತುಪರ್ಣನು ತನ್ನ ಆಸ್ಥಾನದಲ್ಲಿ ಬಾಹುಕನನ್ನು ನೇಮಿಸಿಕೊಂಡನು.

ಜನರು ಭಲೇ ಭಲೇ ಎಂದು ಅಮಿತಾನಂದದಿಂದ ಮೆಚ್ಚುಗೆ ವ್ಯಕ್ತಪಡಿಸುತ್ತಿರಲು ನಳನು ಕುದುರೆಯ ಕಡಿವಾಣವನ್ನು ಡೊಂಕಾಗಿ ಬಾಗಿಸಿ ಹಿಡಿದುಕೊಳ್ಳಲು, ಕುದುರೆಯು ಅದರೊಂದಿಗೆ ತನ್ನ ಹಿಮ್ಮಡಿಗಳಿಗೆ ಅವನು ನೀಡಿದ ಸಂಜ್ಞೆಯನ್ನು ಅರಿತು ತಟ್ಟನೆ ಹಿಂದಿರುಗಿ ಬದಿಗೆ ಸರಿದು ನಿಂತಿತು. ಆಯಾಸದಿಂದ ಅದು ಸಣ್ಣಗೆ ಬೆವರಲಾರಂಭಿಸಿದುದನ್ನು ಕಂಡ ಬಾಹುಕನು ಕುದುರೆಯ ಓಟವನ್ನು ಅಲ್ಲಿಗೇ ನಿಲ್ಲಿಸಿ, ಅದರ ಬೆನ್ನ ಮೇಲಿನಿಂದ ಕೆಳಗಿಳಿದು ಋತುಪರ್ಣನಿಗೆ ವಂದಿಸಿದನು. ಅವನ ಸಾಹಸಕ್ಕೂ ಅಶ್ವಾರೋಹಣ ಸಾಮರ್ಥ್ಯಕ್ಕೂ ಮೆಚ್ಚಿದ ಅರಸನು ಅವನಿಗೆ ಉತ್ತಮ ವಸ್ತ್ರಭೂಷಣಾದಿಗಳನ್ನಿತ್ತು ಸನ್ಮಾನಿಸಿ, ಅವನನ್ನು ತನ್ನಲ್ಲಿ ಹಿರಿದಾದ ವೇತನಕ್ಕೆ ನೇಮಿಸಿಕೊಂಡನು.

8. ಜನಪ ಕೇಳ್ ಬಾಹುಕನು ವಾಲಾ
ಖ್ಯನಲಿ ಸಖ್ಯವ ಬೆಳೆಸುತಾತನ
ನನುದಿನವು ಕೂಡಿರ್ದನೊಂದಾನೊಂದುದಿನ ರಾತ್ರಿ
ವನಜಮುಖಿ ದಮಯಂತಿಯೊಳು ಚುಂ
ಬನ ಸರಸ ಸಲ್ಲಾಪದಿಂದಿಹ
ಕನಸ ಕಂಡೆಚ್ಚರದಿ ಕಾಣದೆ ಸತಿಗೆ ಹಲುಬಿದನು

ಜನಪ ಕೇಳ್ = ಕೇಳು ಧರ್ಮರಾಯನೆ; ಬಾಹುಕನು ವಾಲಾಖ್ಯನಲಿ = ವಾಲಾಖ್ಯನೆಂಬವನೊಂದಿಗೆ ಬಾಹುಕನು; ಸಖ್ಯವ = ಸ್ನೇಹವನ್ನು; ಬೆಳೆಸುತ + ಆತನನು+ಅನುದಿನವು = ಬೆಳೆಸುತ್ತ ಅವನಲ್ಲಿ ನಿತ್ಯವೂ; ಕೂಡಿರ್ದನೊಂದಾ ನೊಂದುದಿನ = ಅವನೊಂದಿಗೆ ಇರುತ್ತಿರಲು ಒಂದಾನೊಂದು ದಿನ; ರಾತ್ರಿ = ಇರುಳಿನಲ್ಲಿ; ವನಜಮುಖಿ ದಮಯಂತಿಯೊಳು = ತನ್ನ ಚೆಲುವ ಪತ್ನಿ

ದಮಯಂತಿ ನೊಂದಿಗೆ; ಚುಂಬನ ಸರಸ ಸಲ್ಲಾಪದಿಂದಿಹ = ಚುಂಬನಾದಿ ಸರಸ ಸಲ್ಲಾಪ ದೊಂದಿಗೆ ಇದ್ದಂತೆ; ಕನಸಕಂಡೆಚ್ಚರದಿ = ಕನಸನ್ನು ಕಂಡು ಫಕ್ಕನೆ ಎಚ್ಚರಗೊಂಡು ನೋಡಲು; ಕಾಣದೆ = ಅವಳನ್ನು ಕಾಣದೆ; ಸತಿಗೆ ಹಲುಬಿದನು = ಅವಳಿಗಾಗಿ ಹಂಬಲಿಸುತ್ತ ದುಃಖಿಸಿದನು.

ಧರ್ಮರಾಯನೇ ಆಲಿಸು, ಮುಂದೇನಾಯಿತೆಂದರೆ, ಬಾಹುಕನು ದಿನಗಳೆದಂತೆ ವಾಲಾಖ್ಯನೆಂಬ ಒಬ್ಬನೊಂದಿಗೆ ಸ್ನೇಹ ಬೆಳೆಸಿ, ಕ್ರಮೇಣ ಅವನೊಂದಿಗೆ ಇರುತ್ತಿದ್ದನು. ಹೀಗಿರಲು ಒಂದು ದಿನ ರಾತ್ರಿ ನಿದ್ರಿಸುತ್ತಿರಲು ತನ್ನ ಕನಸಿನಲ್ಲಿ ಪ್ರಿಯಪತ್ನಿ ದಮಯಂತಿಯೊಂದಿಗೆ ಚುಂಬನಾದಿ ಸರಸ ಸಲ್ಲಾಪ ದಲ್ಲಿರುವಂತೆ ಕನಸು ಕಾಣುತ್ತ ಫಕ್ಕನೆ ಎಚ್ಚರಗೊಂಡು ನೋಡಿದನು. ಎಲ್ಲಿಯೂ ದಮಯಂತಿಯನ್ನು ಕಾಣದೆ ವಿವಶನಾಗಿ ಅವಳಿಗಾಗಿ ಹಂಬಲಿಸುತ್ತ ಅವಳನ್ನ ಕಾಣಲು ತವಕಿಸಿದನು.

9. ಹಾ ತರುಣಿ ನಳಿನಾಕ್ಷಿ ನಯಸು
ಪ್ರೀತಿಪೂರ್ವಕದಿಂದ ಕನಸಲಿ
ಮಾತುದೋರಿದೆ ಬಂದು ನನ್ನಲಿ ಕರುಣದಿಂ ನೀನು
ಧಾತುಗುಂದಿದೆನಕಟ ಅಸುರಾ
ರಾತಿ ಬಲ್ಲನೆನುತ ಮನದಲಿ
ಕಾತರಿಸಿ ನಿಜಸತಿಗೆ ಹಲುಬಿದ ಮದನನೆಸುಗೆಯಲಿ

ಹಾ ತರುಣಿ = ಹಾ! ಎಳೆಯಳೇ; ನಳಿನಾಕ್ಷಿ = ತಾವರೆಯ ಸೊಬಗಿನ ಕಣ್ಣವಳೇ; ನಯಸು ಪ್ರೀತಿ ಪೂರ್ವಕದಿಂದ = ಕರುಣೆತೋರು ಪ್ರೀತಿಪೂರ್ವಕ ವಾಗಿ; ಕನಸಲಿ = ನನ್ನ ಕನಸಿನಲ್ಲಿ; ಮಾತುದೋರಿದೆ = ನನ್ನೊಂದಿಗೆ ಮಾತ ನಾಡಿದೆ ಬಂದು; ಕರುಣದಿಂ ನೀನು = ಕರುಣೆಯಿಂದ ನೀನು; ಧಾತುಗುಂದಿ ದೆನಕಟ = ಅಯ್ಯೋ! ಬಳಲಿ ಆಯಾಸಗೊಂಡಿದ್ದೇನೆ; ಅಸುರ + ಆರಾತಿ = ಅಸುರರ ವೈರಿಯಾದ ಕೃಷ್ಣನು; ಬಲ್ಲನೆನುತ = ಬಲ್ಲ ನನ್ನ ಕಷ್ಟವನ್ನು ಎನ್ನುತ್ತ; ಮನದಲಿ ಕಾತರಿಸಿ = ಮನಸ್ಸಿನಲ್ಲೇ ಕಾತರಿಸಿ; ನಿಜಸತಿಗೆ ಹಲುಬಿದ = ಪತ್ನಿಯನ್ನು

ಕಾಣಲು ಹಲುಬಿದನು; ಮದನನ + ಎಸುಗೆಯಲಿ = ಮನ್ಮಥನ ಬಾಣಪ್ರಹಾರಕ್ಕೆ ತುತ್ತಾಗಿ.

"ನವಯೌವನದ ಚೆಲುವೆಯೇ, ತಾವರೆಯ ಸೊಬಗಿನ ಕಣ್ಣವಳೇ, ಕರುಣೆತೋರು, ಪ್ರೀತಿ ಕರುಣೆಗಳಿಂದ ನನ್ನ ಕನಸಿನಲಿ ಬಂದು ಮಾತನಾಡಿದೆ. ಈಗಾಗಲೇ ಸಾಕಷ್ಟು ಚಿಂತೆಯಿಂದಲೂ, ನೀನು ಇಲ್ಲದುದರಿಂದಲೂ ಬಳಲಿ ಆಯಾಸಗೊಂಡಿದ್ದೇನೆ. ನನ್ನ ಕಷ್ಟಗಳೇನೆಂಬುದನ್ನು ಆ ಕೃಷ್ಣಪರಮಾತ್ಮನೇ ಬಲ್ಲ" ಎಂದು ಮಡದಿಯನ್ನು ಕಾಣಲು ಹಂಬಲಿಸುತ್ತ, ಅವಳ ಪ್ರೀತಿಮಾತುಗಳಿಗಾಗಿ ಕಾತರಿಸುತ್ತ, ತಪ್ತ ಹೃದಯದ ವಿರಹವನ್ನು ಹೆಚ್ಚಿಸುವುದರಲ್ಲಿ ಮಗ್ನನಾದ ಮನ್ಮಥನ ಬಾಣಗಳಿಗೆ ತುತ್ತಾಗಿ, ಅವಳಿಗಾಗಿ ದುಃಖಿಸಿದನು.

10. ವಿಕಳವನು ವಾಲಾಖ್ಯ ಕೇಳಿದು
ಪಕಪಕನೆ ನಗುತೆಂದನೆಲೆ ಬಾ
ಹುಕನೆ ಹಲುಬುವುದೇನು ಕಾಂತೆಗೆ ತಕ್ಕ ಬೊಂತೆಯನು
ಅಕಟ ನೀನತಿ ಚೆಲುವನೇ ಬಾ
ಲಕಿ ನಿನಗೆ ತಕ್ಕವಳೊ ಲೋಕದಿ
ಮಕರಕೇತನ ಮರುಳನೆಂದಪಹಾಸ್ಯ ಮಾಡಿದನು

ವಿಕಳವನು = ಬುದ್ಧಿಗೆಟ್ಟವನಂತೆ ಬಾಹುಕನಾಡಿದುದನ್ನು; ವಾಲಾಖ್ಯ ಕೇಳಿದು = ವಾಲಾಖ್ಯನು ಕೇಳಿ; ಪಕಪಕನೆ ನಗುತೆಂದನೆಲೆ = ಬಾಹುಕನನ್ನು ಅಪಹಾಸ್ಯ ಮಾಡಿ ಫಕಫಕನೆ ನಗುತ್ತ ಎಂದನು ಎಲೈ!; ಬಾಹುಕನೆ = ಬಾಹುಕನೆ, ಹಲುಬುವುದೇನು= ಏನೆಂದು ಬಡಬಡಿಸುತ್ತಿದ್ದೀಯೆ? ಕಾಂತೆಗೆ ತಕ್ಕ ಬೊಂತೆಯನು = ನಿನ್ನ ರೂಪಕ್ಕೆ ತಕ್ಕವಳನ್ನು?; ಅಕಟ = ಅಯ್ಯೋ; ನೀನತಿ ಚೆಲುವನೇ = ನೀನೇನು ಮಹಾ ರೂಪವಂತನೇನು?; ಬಾಲಕಿ ನಿನಗೆ ತಕ್ಕವಳೋ = ನಿನ್ನ ರೂಪಕ್ಕೆ ತಕ್ಕವಳೇ ಏನು ನಿನ್ನ ಹೆಣ್ಣು?; ಲೋಕದಿ = ಈ ಪ್ರಪಂಚದಲ್ಲಿ; ಮಕರಕೇತನ = ಮೀನಿನ ಧ್ವಜವನ್ನು ಹೊಂದಿದ ಆ ಮನ್ಮಥನು; ಮರುಳನೆಂದಪಹಾಸ್ಯ ಮಾಡಿದನು = ಹೆಣ್ಣಿನಾಸೆಯನ್ನು ಹುಟ್ಟಿಸಿದ ಆ ಮನ್ಮಥ ಹುಚ್ಚನಿರಬೇಕು ಎಂದು ಅಪಹಾಸ್ಯದಿಂದ ಮಾತನಾಡಿದನು.

ತನ್ನ ಕುರೂಪವೊಂದು ಕೊರತೆ ಎಂಬುದನ್ನೇ ಮರೆತು ಬಾಹುಕನು ಮಾತನಾಡುತ್ತಿದ್ದಾನೆಂದು ಭಾವಿಸಿ, ವಾಲಾಖ್ಯನು ಅವನನ್ನು ಅಪಹಾಸ್ಯಗೊಳಿಸುತ್ತ ಘಕಘಕನೆ ನಕ್ಕು, ಎಲವೋ ಬಾಹುಕನೆ, ಏನೆಂದು ಬಡಬಡಿಸುತ್ತಿದ್ದೀಯೆ? ನಿನ್ನ ರೂಪಕ್ಕೆ ತಕ್ಕವಳೇನು? ನೀನೇನು ಮಹಾ ರೂಪವಂತನೇನು? ನಿನ್ನಂಥವನಿಗೆ ಸಹಾ ಸುಂದರಿಯ ಹಂಬಲವೇ? ಈ ಲೋಕದಲ್ಲಿ ನಿನ್ನಂಥವನಿಗೂ ಹೆಣ್ಣಿನಾಸೆಯನ್ನು ಹುಟ್ಟಿಸಿದಂತಹ ಆ ಮನ್ಮಥ ಹುಚ್ಚನಿರಬೇಕು ಎಂದು ನಾನಾವಿಧವಾಗಿ ಅಪಹಾಸ್ಯ ಮಾಡಿದನು.

11. ಎಂದು ಹಾಸ್ಯವ ಮಾಡಿದವನೊಡ
ನೆಂದನಾ ಬಾಹುಕನು ಪೂರ್ವದೊ
ಳಂದು ಬ್ರಾಹ್ಮಣನೊಬ್ಬ ನಿಜಸತಿಯಗಲಿಯೆನ್ನೊಡನೆ
ನೊಂದು ನುಡಿದನು ವಿರಹದಲಿಯದ
ನಿಂದು ಕನಸಲಿ ಕಂಡು ಭ್ರಾಂತಿಯೊ
ಳೆಂದಡದು ತಪ್ಪೇನು ಸತಿಸುತರಿಲ್ಲ ತನಗೆಂದ

ಎಂದು ಹಾಸ್ಯವ = ಈ ರೀತಿಯಲ್ಲಿ ತನ್ನನ್ನು ಕುರಿತು ಅಪಹಾಸ್ಯವನ್ನು; ಮಾಡಿದವನೊಡನೆಂದನಾ = ಮಾಡಿದವನೊಂದಿಗೆ ಎಂದನು; ಬಾಹುಕನು = ಬಾಹುಕನು; ಪೂರ್ವದೊಳಂದು = ಈ ಹಿಂದೆ ಒಮ್ಮೆ; ಬ್ರಾಹ್ಮಣನೊಬ್ಬ = ಒಬ್ಬ ಬ್ರಾಹ್ಮಣನು; ನಿಜಸತಿಯಗಲಿ ಎನ್ನೊಡನೆ = ತನ್ನ ಹೆಂಡತಿಯನ್ನು ಅಗಲಿದ್ದವನು, ನನ್ನೊಂದಿಗೆ; ನೊಂದು ನುಡಿದನು = ದುಃಖದಿಂದ ಹೇಳಿದ್ದನು; ವಿರಹದಲಿ + ಅವನು + ಇಂದು = ವಿರಹದಿಂದ ಅದನ್ನು, ಈ ದಿನ; ಕನಸಲಿ ಕಂಡು = ಕನಸಿನಲ್ಲಿ ಕಂಡು; ಭ್ರಾಂತಿಯೊಳೆಂದಡದು = ಭ್ರಮೆಯಿಂದ ಮಾತನಾಡಿದುದು ಅದು; ತಪ್ಪೇನು = ತಪ್ಪಾಯಿತೇನು; ಸತಿಸುತರಿಲ್ಲ ತನಗೆಂದ = ನನಗೆ ಯಾವ ಸತಿಸುತರೂ ಇಲ್ಲ ಎಂದನು.

ವಾಲಾಖ್ಯನು ತಾನು ಕನಸಿನಲ್ಲಿ ಬಡಬಡಿಸಿ ದುಃಖಿಸುವುದನ್ನು ಕಂಡು ಅಪಹಾಸ್ಯ ಮಾಡಿದುದಕ್ಕೆ ಪ್ರತಿಯಾಗಿ ಬಾಹುಕನು ನಿಜವನ್ನು ಮರೆಸಿ ಅವನೊಂದಿಗೆ ಬೇರೊಂದೇ ಕಾರಣವನ್ನು ನೀಡುತ್ತಿದ್ದಾನೆ: ಈ ಹಿಂದೆ ಒಮ್ಮೆ

ಬ್ರಾಹ್ಮಣನೊಬ್ಬನು ತನ್ನ ಸತಿಯನ್ನು ಅಗಲಿದುದರಿಂದ ಉಂಟಾದ ವಿರಹದ ದುಃಖವನ್ನು ನನ್ನೊಂದಿಗೆ ಹಂಚಿಕೊಂಡಿದ್ದನು. ಅದು ಇಂದು ನನ್ನ ಕನಸಿನಲ್ಲಿ ನನ್ನನ್ನು ಕಾಡಿದುದರಿಂದ, ಭ್ರಾಂತಿಯಿಂದ ನಾನು ಆ ರೀತಿ ದುಃಖಾರ್ಥನಾದೆನು. ಇದು ಕನಸಿನ ವಿಷಯ. ನಿಜ ಜೀವನದಲ್ಲಿ ಹಾಗೇನಾದರೂ ಘಟಿಸಲು ನನಗೆ ಸತಿಸುತರು ಯಾರೂ ಇಲ್ಲ ಎಂದು ತನ್ನನ್ನು ತಾನು ಸಮರ್ಥಿಸಿಕೊಂಡನು.

12. ಅರಸ ಕೇಳಾ ಪುರದೊಳೊಬ್ಬರಿ
ಗರಿಯದಂದದಿ ನಳನಿರಲು ಭೂ
ಸುರರ ಮತದಲಿ ಕೇಳ್ದ ಭೀಮನೃಪಾಲನೀ ಹದನ
ಧರೆಯನೆಲ್ಲವ ಜೂಜಿನಲಿ ಪು
ಷ್ಕರಗೆ ಸೋತು ನಳನೃಪನಡವಿಗೆ
ತೆರಳಿದನು ಸತಿಸಹಿತವೆನೆ ಹೊರಳಿದನು ಶೋಕದಲಿ

ಅರಸ ಕೇಳಾ = ಅರಸ ಧರ್ಮರಾಯನೇ ಕೇಳು; ಆ ಪುರದೊಳು + ಒಬ್ಬರಿಗು + ಅರಿಯದ + ಅಂದದಿ = ಆ ನಗರದಲ್ಲಿ ಒಬ್ಬರಿಗೂ ತನ್ನ ಪೂರ್ವಜೀವನದ ವಿಷಯವು ತಿಳಿಯದಂತೆ; ನಳನಿರಲು = ನಳಮಹಾರಾಜನು ಇರಲು; ಭೂಸುರರ ಮತದಲಿ = ಬ್ರಾಹ್ಮಣರ ಮೂಲಕ; ಕೇಳ್ದ = ವಿಷಯವನ್ನು ಕೇಳಿ ತಿಳಿದುಕೊಂಡನು; ಭೀಮನೃಪಾಲನೀ ಹದನ = ನಳನ ಕುರಿತಾದ ಎಲ್ಲ ವಿಷಯಗಳನ್ನು ಭೀಮನೃಪಾಲನು; ಧರೆಯನೆಲ್ಲವ = ತನ್ನ ಸಮಸ್ತ ಸಾಮ್ರಾಜ್ಯವನ್ನೂ; ಜೂಜಿನಲಿ ಪುಷ್ಕರಗೆ ಸೋತು = ಪುಷ್ಕರನಿಗೆ ಜೂಜಿನಲ್ಲಿ ಸೋತು; ನಳನೃಪನಡವಿಗೆ = ನಳನೃಪನು ಅರಣ್ಯಕ್ಕೆ; ತೆರಳಿದನು = ಹೊರಟುಹೋದನು; ಸತಿಸಹಿತವೆನೆ = ಮಡದಿಸಹಿತ ಎಂದು; ಹೊರಳಿದನು ಶೋಕದಲಿ= ಅತೀವ ದುಃಖದಿಂದ ವ್ಯಾಕುಲ ಚಿತ್ತನಾದನು.

ರಾಜಾ ಧರ್ಮರಾಯನೇ ಆಲಿಸು. ನಳಚಕ್ರವರ್ತಿಯು ಈ ರೀತಿ ಬಾಹುಕನೆಂಬ ಹೊಸ ನಾಮಧೇಯದಿಂದ ಋತುಪರ್ಣನ ನಗರಿಯಲ್ಲಿ ಯಾರೊಬ್ಬರಿಗೂ ತನ್ನ ಗುರುತು ಸಿಗದಂತೆ ಜಾಗರೂಕನಾಗಿರುತ್ತಲಿರಲು, ಇತ್ತ ಬ್ರಾಹ್ಮಣರ ಮೂಲಕ ಭೀಮನೃಪಾಲನಿಗೆ, ತನ್ನಳಿಯ ನಳಮಹಾರಾಜನು ರಾಜ್ಯ

ಸಮಸ್ತವನ್ನೂ ಜೂಜಿನಲ್ಲಿ ಪುಷ್ಕರನಿಗೆ ಸೋತು, ಸತಿಸಹಿತ ಅರಣ್ಯಕ್ಕೆ ತೆರಳಿದನು ಎಂಬ ಸುದ್ದಿ ತಿಳಿದು ಅಪಾರ ದುಃಖದಲ್ಲಿ ಮುಳುಗಿದನು.

13. ಹಾ ಮಗಳೆ ದಮಯಂತಿ ನಿಷಧಸ
ನಾಮನನು ಕೈ ಹಿಡಿದು ಬಾಳುವ
ನೇಮವನು ಬಿಸುಟಡವಿಗಟ್ಟಿತೆ ವಿಧಿ ವಿಕರ್ಮಫಲ
ಭೀಮನೃಪನುದರದಲಿ ಜನಿಸಿ ವಿ
ರಾಮವಾದುದೆ ನಿನ್ನ ಸಿರಿಮುಖ
ತಾಮರಸವನು ಕಾಣೆ ತೋರೆಂದರಸ ಹಲುಬಿದನು

ಹಾ ಮಗಳೆ ದಮಯಂತಿ = ಹಾ! ಎಂದು ನೋವಿನಿಂದ ಕುದಿಯುತ್ತ ಮಗಳನ್ನು ನೆನೆದನು; ನಿಷಧಸನಾಮನನು = ಪ್ರಸಿದ್ಧನಾದ ನಿಷಧಚಕ್ರವರ್ತಿಯನ್ನು; ಕೈಹಿಡಿದು = ವರಿಸಿ; ಬಾಳುವ ನೇಮವನು = ಮಹಾರಾಣಿಯಾಗಿ ವೈಭವದಿಂದ ಬಾಳಬೇಕಿದ್ದ ನಿಯಮವನ್ನು; ಬಿಸುಟಡವಿಗಟ್ಟಿತೆ = ಕಿತ್ತುಕೊಂಡು ನಿನ್ನನ್ನು ಕಾಡಿಗಟ್ಟಿತೆ; ವಿಧಿ ವಿಕರ್ಮಫಲ = ವಿಧಿ ಮತ್ತು ವಿಕಟವಾದ ಪೂರ್ವಜನ್ಮ ಕರ್ಮಫಲ; ಭೀಮನೃಪನುದರದಲಿ = ಚಕ್ರವರ್ತಿಯಾದ ಭೀಮನೃಪನ ಹೊಟ್ಟೆಯಲಿ; ಜನಿಸಿ = ಹುಟ್ಟಿ; ವಿರಾಮವಾದುದೆ ನಿನ್ನ ಸಿರಿಮುಖ = ಕಳೆದುಹೋಯಿತೇ ನಿನ್ನ ಸಿರಿಭಾಗ್ಯಗಳೆಲ್ಲ; ತಾಮರಸವನು ಕಾಣೆ = ನಿನ್ನ ಕಮಲದಂತಹ ಚೆಲುವನ್ನು ಕಾಣದಾದೆನಲ್ಲ; ತೋರೆಂದರಸ ಹಲುಬಿದನು = ನಿನ್ನ ಸಿರಿಮುಖವನ್ನು ತೋರು ಎಂದು ಅರಸನು ದುಃಖಿಸಿದನು.

ನಳ ಚಕ್ರವರ್ತಿಯು ಸತಿಸಮೇತ ವನಾಂತರವಾಸಿಯಾದ ವಿಷಯವನ್ನು ತಿಳಿದ ಭೀಮನೃಪನಿಗೆ ಆಘಾತವಾಯಿತು. ಹಾ! ಎಂದು ನೋವಿನಿಂದ ತುಡಿಯುತ್ತ ಮಗಳನ್ನು ನೆನೆದು ಸಂಕಟದಿಂದ ಶೋಕಿಸಿದನು. "ಮಗಳೇ ದಮಯಂತಿ, ನಿಷಧರಾಜ ನಳಚಕ್ರವರ್ತಿಯಂತಹವನ್ನು ಕೈಹಿಡಿದು ಮಹಾರಾಣಿಯಾಗಿ ವೈಭವದಿಂದ ಬಾಳಬೇಕೆಂಬ ನಿನ್ನ ಬದುಕಿನ ನೇಮವನ್ನೆ ಕಿತ್ತುಕೊಂಡು ವಿಧಿಯು ನಿನ್ನನ್ನು ಕಾಡಿಗಟ್ಟಿತೆ? ಇದು ವಿಧಿಯು ತಂದಿತ್ತ ವಿಕಟವಾದ ಕರ್ಮಫಲ. ಭೀಮನೃಪನ ಹೊಟ್ಟೆಯಲ್ಲಿ ಹುಟ್ಟಿಯೂ ಮಗಳೇ, ನಿನ್ನ ಸಿರಿಸೌಭಾಗ್ಯಗಳೆಲ್ಲ ವೃಥಾ

ಕಳೆದು ಹೋದುವೆ ತಾವರೆಯ ಕಾಂತಿಯ ನಿನ್ನ ಸಿರಿಮುಖವನ್ನು ಕಾಣದಾದೆನಲ್ಲ. ನಿನ್ನ ಮುಖವನ್ನು ತೋರು" ಎಂದು ಭೀಮನೃಪ ಅತೀವ ನೋವಿನಿಂದ ಹಲುಬಿದನು.

14. ಮಗಳೆ ಮೋಹದ ಸುತರನಾರಿಗೆ
ತೆಗೆದು ಬಿಸುಟೆ ನಿರಾಸೆಯಲಿಯೀ
ಬಗೆಗೆ ತಂದುದೆ ವಿಧಿಯು ನಿನ್ನನು ಹರಮಹಾದೇವ
ಹೋಗಲುಬಹುದೇ ಕಾನನದೊಳಿಹ
ಮೃಗಗಳಿಂದೇನಾದಳೋ ಪತಿ
ಯಗಲಿದನೊ ಬೇತಾಳ ನುಂಗಿತೊಯೆನುತ ಹಲುಬಿದನು

ಮಗಳೆ = ಮಗಳೇ; ಮೋಹದ = ಪ್ರೀತಿಯ; ಸುತರನಾರಿಗೆ ತೆಗೆದು ಬಿಸುಟೆ = ಮಕ್ಕಳನ್ನು ಅಲಕ್ಷಿಸಿ ಯಾರಿಗೆ ಕೊಟ್ಟು ಬಿಟ್ಟಿದ್ದೀಯೆ?; ನಿರಾಸೆಯಲಿಯೀ = ಸಾಕಲಾರದ ನಿರಾಶೆಯಿಂದ ಈ; ಬಗೆಗೆ ತಂದುದೆ = ಈ ಮಟ್ಟಕ್ಕೆ ತಂದಿತೇನು; ವಿಧಿಯು ನಿನ್ನನ್ನು = ನಿನ್ನದೃಷ್ಟವು ನಿನ್ನನ್ನು; ಹರಮಹಾದೇವ = ಹರಮಹಾದೇವಾ; ಹೊಗಲುಬಹುದೇ = ಕಾಡಿಗೆ ಹೋಗಲು ನಿನ್ನಿಂದಾಯಿತೇ; ಕಾನನದೊಳಿಹ = ಕಾಡಿನಲ್ಲಿರುವ; ಮೃಗಗಳಿಂದೇನಾದಳೋ = ಕ್ರೂರ ಮೃಗಗಳಿಗೇನಾದರೂ ಬಲಿಯಾದಳೋ; ಪತಿಯಗಲಿದನೋ = ಪತಿಯು ಬಿಟ್ಟು ಹೊರಟುಹೋದನೋ; ಬೇತಾಳ = ದೆವ್ವಗಳು; ನುಂಗಿತೊಯೆನುತ = ನುಂಗಿ ಹಾಕಿದವೋ ಎಂದು; ಹಲುಬಿದನು = ದುಃಖಿಸಿದನು.

ಅತ್ಯಂತ ವೇದಾನಾಪೂರ್ಣವಾಗಿ ಭೀಮನೃಪನು ತನ್ನೊಳಗಿನ ಸಂಕಟ, ಭಯ, ತಳಮಳಗಳಿಂದ ದಮಯಂತಿಗೆ ಆಗಿರಬಹುದಾದ ತೊಂದರೆಗಳ ಕುರಿತು ಚಿಂತೆಗೀಡಾಗಿ ಹಲುಬಲಾರಂಭಿಸಿದನು. "ಮಗಳೇ, ನಿನ್ನ ಮಕ್ಕಳೆಲ್ಲಿ? ನಿಮ್ಮ ಪ್ರೀತಿಯ ಮಕ್ಕಳನ್ನು ಸಾಕಲು ಕಷ್ಟವಾಗಿ ಅಥವಾ ಅಲಕ್ಷಿಸಿ ಯಾರತ್ತ ಕೊಟ್ಟು ಬಿಟ್ಟಿದ್ದೀಯೆ? ನಿನ್ನನ್ನು ವಿಧಿಯು ಈ ಮಟ್ಟಕ್ಕೆ ತಂದು ನಿಲ್ಲಿಸಿತೆ? ಹರಮಹಾದೇವಾ! ಸುಕುಮಾರಳಾದ ನಿನ್ನಿಂದ ಕಾಡಿಗೆ ಹೋಗಲು ಸಾಧ್ಯವಾಯಿ ತಾದರೂ ಹೇಗೆ? ನನ್ನ ಮಗಳು ಕಾಡಿನಲ್ಲಿರುವ ಕ್ರೂರ ಮೃಗಗಳಿಗೇನಾದರೂ ಆಹಾರವಾದಳೋ?

ಅಥವಾ ಪತಿಯೇ ಅವಳನ್ನು ಅಗಲಿ ಹೊರಟುಹೋದನೋ? ದೆವ್ವಗಳಿಗೆ ಬಲಿಯಾಗಿರಬಹುದೇ?" ಎಂದು ವಿಧವಿಧವಾಗಿ ಹಲುಬುತ್ತ ಅಪಾರ ಚಿಂತೆಗೊಳಗಾದನು.

15. ಬಡವರುದರದೊಳುದಿಸಿ ಸುಖವನು
ಪಡೆಯಲೊಲ್ಲದೆ ಬಂದು ನೀನೀ
ಪೊಡವಿಪತಿಯುದರದಲಿ ಸಂಜನಿಸುವರೆ ಎಲೆ ತಾಯೆ
ಗಿಡಮೆಳೆಗಳಾರಣ್ಯದಲಿ ತನು
ವಿಡಿದು ಸೈರಿಪುದೆಂದು ಮಗಳೇ
ಸುಡು ತನುವನಿದನೆಂದು ಮರುಗಿದಳವಳ ನಿಜಜನನಿ

ಬಡವರ + ಉದರದೊಳು + ಉದಿಸಿ = ಬಡವರ ಹೊಟ್ಟೆಯಲ್ಲಿ ಹುಟ್ಟಿ; ಸುಖವನು ಪಡೆಯಲೊಲ್ಲದೆ = ಸುಖ ಸೌಭಾಗ್ಯದಿಂದಿರಲು ಬಯಸದೆ; ಬಂದು ನೀನೀ = ನೀನು ಈ; ಪೊಡವಿಪತಿಯ + ಉದರದಲಿ = ರಾಜಾಧಿರಾಜನ ಹೊಟ್ಟೆಯಲ್ಲಿ; ಸಂಜನಿಸುವರೆ ಎಲೆ ತಾಯೆ = ಹುಟ್ಟಿದೆ ಏಕೆ ಎಲೆ ತಾಯೆ; ಗಿಡಮೆಳೆಗಳ + ಅರಣ್ಯದಲಿ = ಗಿಡ, ಪೊದರುಗಳು ತುಂಬಿರುವ ಆ ಅರಣ್ಯದಲ್ಲಿ; ತನುವಿಡಿದು = ಸುಕುಮಾರ ದೇಹವನ್ನುಳ್ಳ ನೀನು; ಸೈರಿಪುದೆಂದು = ಕಷ್ಟಗಳನ್ನು ಸಹಿಸುವುದು ಹೇಗೆ; ಮಗಳೇ ಸುಡು ತನುವನಿದನೆಂದು = ಮಗಳೇ ಸುಡು, ಈ ದೇಹವು ಇನ್ನೇತಕೆ ಎಂದು; ಮರುಗಿದಳವಳ = ಮರುಗಿದಳು ದಮಯಂತಿಯ; ನಿಜಜನನಿ = ತಾಯಿ.

ದಮಯಂತಿಯ ತಾಯಿಗೆ ಮಗಳು ಕಾಡುಪಾಲಾದ ವಿಷಯ ತಿಳಿದು ಹೆತ್ತೊಡಲು ಚುರುಕ್ ಎಂದಿತು. ಬಡವರ ಹೊಟ್ಟೆಯಲ್ಲಾದರೂ ಹುಟ್ಟಿದ್ದಲ್ಲಿ ಮಗಳು ಜೀವಂತವಾಗಿದ್ದು ಸುಖ ಸೌಖ್ಯಗಳಲ್ಲಾದರೂ ಇರುತ್ತಿದ್ದಳೇನೋ. ಯಾಕಾದರೂ ಮಗಳೇ ಈ ಭೂಮಂಡಲಾಧೀಶ, ರಾಜಾಧಿರಾಜನ ಹೊಟ್ಟೆಯಲ್ಲಿ ಹುಟ್ಟಿದೆ? ಗಿಡ, ಪೊದರುಗಳು ತುಂಬಿಹೋಗಿರುವ ಅರಣ್ಯದಲ್ಲಿ ಸುಕುಮಾರಳಾದ ನೀನು ಕಷ್ಟಗಳನ್ನು ಹೇಗಾದರೂ ಸಹಿಸುತ್ತೀಯೆ, ಎಲೆ ತಾಯೆ! ನನಗಾದರೂ ಇನ್ನು

ದೇಹವು ಇದೇತಕೆ, ಸುಡು ನನ್ನ ಈ ಜನ್ಮವನ್ನು ಎಂದು ಸಂಕಟದಿಂದ ದಮಯಂತಿಯ ತಾಯಿ ದುಃಖತಪ್ತಳಾದಳು.

16. ಸತಿಪತಿಗಳೀಪರಿಯ ಶೋಕೋ
ನ್ನತಿಯ ಸೈರಿಸಲಾರದಾ ಮಾ
ರುತನ ಸಖನೊಳು ಪುಗುವೆವೆಂದುರವಣಿಸಿ ನಡೆತರಲು
ಕ್ಷಿತಿಪ ಕೇಳಿಂತವರು ಬರುತಿರೆ
ಮತಿಯುತನೆ ಚಿಂತೆಯನು ಬಿಡು ಪತಿ
ವ್ರತೆಗೆ ಹಾನಿಯೆ ಸುಖದೊಳಿಹಳೆಂದುದು ನಭೋನಿನದ

ಸತಿಪತಿಗಳು + ಈ ಪರಿಯ = ಭೀಮನೃಪನೂ ಅವನ ರಾಣಿಯೂ ಈ ರೀತಿ; ಶೋಕೋನ್ನತಿಯ = ವಿಪರೀತವಾದ ಶೋಕವನ್ನು; ಸೈರಿಸಲಾರದಾ = ಸೈರಿಸಲಾರದೆ ಆ; ಮಾರುತನ ಸಖನೊಳು = ವಾಯು ಸಖನಾದ ಅಗ್ನಿಯಲ್ಲಿ; ಪುಗುವೆವು + ಎಂದು + ಉರವಣಿಸಿ = ಪ್ರವೇಶಿಸುತ್ತೇವೆಂದು ಅವಸರದಿಂದ; ನಡೆತರಲು = ಪ್ರಯತ್ನಿಸುತ್ತಿರಲು; ಕ್ಷಿತಿಪ = ಕ್ಷಿತಿಪಾಲಕನಾದ ಧರ್ಮರಾಯನು; ಕೇಳು + ಇಂತು + ಅವರು = ಕೇಳು ಈ ರೀತಿ ಅವರಗಳು ನಿರ್ಧರಿಸಿ ಬರುತಿರೆ = ಬರುತ್ತಿರಲು; ಮತಿಯುತನೆ = ವಿವೇಕಿಯಾದ ಭೀಮನೆ; ಚಿಂತೆಯನು ಬಿಡು = ದುಃಖಿಸಿ ಚಿಂತಾಕುಲನಾಗದಿರು; ಪತಿವ್ರತೆಗೆ ಹಾನಿಯೆ = ಪತಿವ್ರತೆಯಾದ ದಮಯಂತಿಗೆ ಹಾನಿಯಾಗಲು ಸಾಧ್ಯವೆ?; ಸುಖದೊಳು + ಇಹಳು + ಎಂದುದು = ಕ್ಷೇಮದಿಂದಿದ್ದಾಳೆ ಎಂದಿತು; ನಭೋನಿನದ = ಆಕಾಶವಾಣಿ.

ಭೀಮನೃಪನೂ ಅವನ ರಾಣಿಯೂ ಈ ರೀತಿ ದುಃಖಾತಿಶಯದಿಂದ ಸಂಕಟವನ್ನು ತಾಳಲಾರದೆ, ತಾವಿನ್ನು ಬದುಕಿ ಪ್ರಯೋಜನವೇನು ಎಂದು ನಿರ್ಧರಿಸಿದಂತೆ ಅಗ್ನಿಪ್ರವೇಶ ಮಾಡುವುದೇ ಸರಿಯೆಂದು ನಿರ್ಧರಿಸಿ ಅವಸರ ವಸರವಾಗಿ ಬರುತ್ತಿರುವಾಗ, "ವಿವೇಕಿಯಾದ ಭೀಮನೇ, ಚಿಂತಾಕುಲನಾಗದಿರು. ವೃಥಾ ವ್ಯಥೆಯನ್ನು ಬಿಡು. ಪತಿವ್ರತೆಯಾದ ದಮಯಂತಿಗೆ ಹಾನಿಯುಂಟಾಗಲು ಸಾಧ್ಯವೇನು. ಅವಳು ಸುಖವಾಗಿ, ಕ್ಷೇಮವಾಗಿದ್ದಾಳೆ" ಎಂದು ಆಕಾಶವಾಣಿಯು ಉಲಿಯಿತು.

17. ಎಂದ ವಾಕ್ಯವ ಕೇಳಿ ಭೂಸುರ
ವೃಂದದಲಿ ಮುನಿಯೋರ್ವ ನುಡಿದನು
ಸಂದ ಪರಮಾನಂದಜ್ಯೋತಿರ್ಮಯನ ವಾಕ್ಯವಿದು
ಇಂದುಮುಖಿ ದಮಯಂತಿ ನಳನೃಪ
ರೆಂದಿಗೂ ಸುಕ್ಷೇಮಿಗಳು ನೀ
ವಿಂದು ಕಳುಹಿಸಿ ಚರರ ಭೇದಿಸಲೆಂದನಾ ಮುನಿಪ

ಎಂದ ವಾಕ್ಯವ ಕೇಳಿ = ಈ ರೀತಿ ಉಲಿದ ಆಕಾಶವಾಣಿಯ ಮಾತು ಗಳನ್ನು ಆಲಿಸಿ; ಭೂಸುರ ವೃಂದದಲಿ = ಬ್ರಾಹ್ಮಣ ಸಮೂಹದಲ್ಲಿದ್ದ; ಮುನಿ ಯೋರ್ವ ನುಡಿದನು = ಒಬ್ಬ ಮುನಿಯು ಹೇಳಿದನು; ಸಂದ ಪರಮಾನಂದ ಜ್ಯೋತಿರ್ಮಯನ = ಮಹಾ ಆನಂದಮಯನೆನಿಸಿದ ಜ್ಯೋತಿ ಸ್ವರೂಪನಾದ ಪರಮಾತ್ಮನ; ವಾಕ್ಯವಿದು = ಮಾತು ಇದು; ಇಂದುಮುಖಿ ದಮಯಂತಿ = ಚಂದ್ರಪ್ರಭಾಯುಕ್ತಳಾದ ದಮಯಂತಿಯೂ; ನಳನೃಪರೆಂದಿಗೂ = ನಳನೃಪನೂ ಎಂದಿಗೂ; ಸುಕ್ಷೇಮಿಗಳು = ಇಬ್ಬರೂ ಕ್ಷೇಮದಿಂದ ಇರುತ್ತಾರೆ; ನೀವಿಂದು ಕಳುಹಿಸಿ ಚರರ = ನೀವು ಇಂದೇ ಚಾರರನ್ನು ಕಳುಹಿಸಿ; ಭೇದಿಸಲೆಂದನಾ ಮುನಿಪ = ಅವರೆಲ್ಲಿದ್ದಾರೆಂದು ಪತ್ತೆಹಚ್ಚಲಿ ಎಂದು ಆ ಮುನಿವರನು ಹೇಳಿದನು.

ಆಕಾಶವಾಣಿಯು ಉಲಿದ ದಮಯಂತಿಯ ಕುರಿತ ಮಾತುಗಳನ್ನಾಲಿಸಿ, ಅಲ್ಲಿ ನೆರೆದಿದ್ದ ಬ್ರಾಹ್ಮಣ ಸಮೂಹಲ್ಲಿದ್ದ ಮುನಿವರನೊಬ್ಬನು "ಇದಾ ಮಹಾ ಆನಂದಮಯವಾದ, ಜ್ಯೋತಿಸ್ವರೂಪ ಪರಮಾತ್ಮನ ನುಡಿ. ಚಂದ್ರಪ್ರಭಾಸಮ ಕಾಂತಿಯುತಳಾದ ದಮಯಂತಿಯೂ, ನಳನೃಪನೂ ಇಬ್ಬರೂ ಎಂದಿಗೂ ಕ್ಷೇಮವಾಗಿರುತ್ತಾರೆ. ಅವರೆಲ್ಲಿದ್ದಾರೆಂಬುದನ್ನು ನಿಮ್ಮ ಚಾರರನ್ನು ಕಳುಹಿ ಹುಡುಕಿಸಿ ಪತ್ತೆಹಚ್ಚಿ" ಎಂದು ಹೇಳಿದನು.

ಪ್ರಾಚೀನ ಕನ್ನಡ ಕಾವ್ಯಗಳಲ್ಲಿ 'ರಾಜ'ನೆಂದರೆ ಕೇವಲ ಸಿಂಹಾಸನಾಧೀಶ ಆಡಳಿತಗಾರನೆಂದಷ್ಟೇ ಚಿತ್ರಣಗಳಿರದೆ. ಅವನ ನಿರ್ಧಾರಗಳಲ್ಲಿ ಕುಟುಂಬದ ಹಾಗೂ ಸಾಮಾಜಿಕರ ಪಾತ್ರವೂ ಎಷ್ಟು ಮುಖ್ಯವಾಗಿತ್ತು ಎಂದು ಒತ್ತಿ ಹೇಳುವ ಇಂತಹ ಹೇರಳವಾದ ಪ್ರಸಂಗಗಳಿರುವುದನ್ನು ಗಮನಿಸಬಹುದು.

18. ಎನಲು ಮುನಿಪನ ಮಾತಿನಲಿ ಅರ
ಮನೆಗೆ ಬಂದು ವಿಶಾಲಚಿಂತೆಯ
ಮನದಲಿರಲಿನನಿಳಿದನಸ್ತಾಂಬುಧಿಗೆ ವಹಿಲದಲಿ
ಜನಪನಾ ರಾತ್ರಿಯಲಿ ನಿದ್ರಾಂ
ಗನೆಯನುಳಿಯಲು ಪೂರ್ವಶೈಲದಿ
ದಿನಪ ತಲೆದೋರಿದನು ಹರೆದುದು ರಜನಿಯಾಕ್ಷಣಕೆ

ಎನಲು = ಎಂದು ಹೇಳಲು; ಮುನಿಪನ ಮಾತಿನಲಿ = ಮುನಿಯ ಮಾತಿನಂತೆ; ಅರಮನೆಗೆ ಬಂದು = ಅರಮನೆಗೆ ಬಂದನು; ವಿಶಾಲ ಚಿಂತೆಯ = ಗಾಢವಾಗಿ ಕಾಡುವ ಚಿಂತೆಯ; ಮನದಲಿ + ಇರಲು + ಇನನು + ಇಳಿದನು + ಅಸ್ತ + ಅಂಬುಧಿಗೆ = ಮನಸ್ಸಿನಲ್ಲಿರಲು, ಅದೇ ಸಮಯದಲ್ಲಿ ಸೂರ್ಯನು ಪಶ್ಚಿಮ ಕಡಲಿಗೆ ಇಳಿದನು; ವಹಿಲದಲಿ = ತ್ವರೆಯಿಂದ; ಜನಪನಾ ರಾತ್ರಿಯಲಿ = ಜನಾಧಿಪತಿ ಭೀಮನು ಅಂದು ಇರುಳಿನಲ್ಲಿ ನಿದ್ರ + ಅಂಗನೆಯನು + ಉಳಿಯಲು = ನಿದ್ರೆಯೆಂಬ ಅಂಗನೆಯನ್ನು ತೊರೆದು, ನಿದ್ರಾಹೀನನಾಗಲು; ಪೂರ್ವಶೈಲದಿ = ಪೂರ್ವಾಂಚಲದಲ್ಲಿ; ದಿನ + ಪ = ದಿನವನ್ನು ಆಳುವವನಾದ ಸೂರ್ಯನು; ತಲೆದೋರಿದನು = ಉದಯಿಸಿದನು; ಹರೆದುದು = ಮಾಯವಾಯಿತು; ರಜನಿ + ಆ + ಕ್ಷಣಕೆ = ಕತ್ತಲು ಆ ಕ್ಷಣದಲ್ಲೇ ಸರಿದು ಬೆಳಕಾಯಿತು.

ಮುನಿಯ ಮಾತನ್ನು ಗಂಭೀರವಾಗಿ ಪರಿಗಣಿಸಿ ಭೀಮನೃಪನು ಪತ್ನಿಸಮೇತ ತನ್ನರಮನೆಗೆ ಬಂದನು. ಏನಾದರೇನು? ಅವನು ಗಾಢವಾಗಿ ಚಿಂತಾಕ್ರಾಂತನಾದನು. ಆ ಸಮಯದಲ್ಲಿ ಸೂರ್ಯನು ಪಡುವಣ ಕಡಲಿನಲ್ಲಿ ತ್ವರೆಯಿಂದ ಮುಳುಗಿದನು. ಅಂದು ರಾತ್ರಿ ಭೀಮನೃಪನಿಗೆ ನಿದ್ರೆ ಬರಲಿಲ್ಲ. ಮರುದಿನ ಸೂರ್ಯನುದಯಿಸಿ ಸಂಪೂರ್ಣ ಇರುಳು ಸರಿದು ಬೆಳಕಾಯಿತು.

19. ಅರಸ ಕರೆಸಿದ ವಿಪ್ರರನು ಭೂ
ಸುರರಿಗೆಂದನು ನೀವು ಕರುಣದಿ
ಧರೆಯೊಳೆಲ್ಲಿಹಳೆನ್ನ ಸುತೆ ದಮಯಂತಿ ನಳನೃಪರ

ಇರವ ಕಾಂಬುದು ಕಂಡು ಕರೆತಂ
ದರಿಗೆ ಕೊಡುವೆನು ಧರೆಯೊಳರ್ಧವ
ನಿರುತವೆಂದುಪಚರಿಸಿ ಕಳುಹಿದ ಭೀಮನೃಪನವರ

ಅರಸ ಕರೆಸಿದ = ಅರಸನು ಅಪ್ಪಣೆ ಮಾಡಿ ಬರಹೇಳಿದನು; ವಿಪ್ರರನು = ಬ್ರಾಹ್ಮಣರನ್ನು; ಭೂಸುರರಿಗೆಂದನು = ಬ್ರಾಹ್ಮಣರಿಗೆ ಹೇಳಿದನು; ನೀವು ಕರುಣದಿ = ದಯೆ, ಕರುಣೆಗಳಿಂದ; ಧರೆಯೊಳು + ಎಲ್ಲಿಹಳು + ಎನ್ನ ಸುತೆ = ಈ ಭೂಮಂಡಲದಲ್ಲಿ ನನ್ನ ಮಗಳು ಎಲ್ಲಿದ್ದಾಳೆ; ದಮಯಂತಿ ನಳನೃಪರ = ನಳಮಹಾರಾಜ ಹಾಗೂ ದಮಯಂತಿ ಇವರ; ಇರವ ಕಾಂಬುದು = ಎಲ್ಲಿರುವರೆಂಬುದನ್ನು ಕಂಡು ಹಿಡಿಯಿರಿ; ಕಂಡು ಕರೆತಂದರಿಗೆ = ಪತ್ತೆ ಹಚ್ಚಿ ಅವರನ್ನು ಕರೆತಂದವರಿಗೆ; ಕೊಡುವೆನು ಧರೆಯೊಳರ್ಧವ = ನನ್ನ ಸಾಮ್ರಾಜ್ಯದ ಅರ್ಧಭಾಗವನ್ನು ನೀಡುತ್ತೇನೆ; ನಿರುತವೆಂದುಪಚರಿಸಿ = ಇದು ಸತ್ಯ ಎಂದು ಆ ಬ್ರಾಹ್ಮಣರನ್ನು ಸನ್ಮಾನಿಸಿ; ಕಳುಹಿದ = ಬೀಳ್ಕೊಟ್ಟನು; ಭೀಮನೃಪವರ = ಶ್ರೇಷ್ಠನಾದ ಭೀಮನೃಪನು.

ಮರುದಿನ ಬೆಳಗಾಗುತ್ತಿದ್ದಂತೆ ಭೀಮನೃಪನು ಮುನಿವರರು ಆದೇಶಿಸಿದಂತೆ ಕಾರ್ಯ ಪ್ರವೃತ್ತನಾದನು. ಬ್ರಾಹ್ಮಣೋತ್ತಮರಿಗೆ ಕರೆಕಳುಹಿಸಿ ಬರಮಾಡಿಕೊಂಡನು. ನೀವು ಕರುಣೆಯಿಂದ ನನ್ನ ಮಗಳೆಲ್ಲಿದ್ದಾಳೆಂಬುದನ್ನು ಪತ್ತೆಹಚ್ಚಿರಿ. ನನ್ನ ಮಗಳು ದಮಯಂತಿ ಹಾಗೂ ನಳಮಹಾರಾಜನ ಇರವು ಎಲ್ಲಿ ಎಂಬುದನ್ನು ಕಂಡು ಹಿಡಿದು ಕರೆತಂದವರಿಗೆ ನನ್ನ ಸಾಮ್ರಾಜ್ಯದ ಅರ್ಧಭಾಗವನ್ನು ನೀಡುತ್ತೇನೆ. ಇದು ಸತ್ಯ ಎಂದು ಅವರಿಗೆ ಆದೇಶಿಸಿ, ಗೌರವಪೂರ್ವಕವಾಗಿ ಅವರನ್ನು ಸನ್ಮಾನಿಸಿ ಬೀಳ್ಕೊಟ್ಟನು.

20. ಹರಿದರರಸಾಳುಗಳು ಪಶ್ಚಿಮ
ಶರಧಿ ದಕ್ಷಿಣಶರಧಿ ಪೂರ್ವದ
ಶರಧಿಯುತ್ತರ ಕುರುನರೇಂದ್ರರ ಸೀಮೆ ಪರಿಯಂತ
ಪುರಗಳಲಿ ವನವೀದಿಯಲಿ ತ
ದ್ಗಿರಿಗಳಲಿ ನಾನಾ ದಿಗಂತದೊ
ಳರಸಿ ಕಾಣದೆ ಮುಂದೆ ನಡೆದರು ಹಲವು ದಿವಸದಲಿ

ಹರಿದರು + ಅರಸರ + ಆಳುಗಳು = ಅರಸನ ಆಜ್ಞಾನುಸಾರ ಅರಮನೆಯ ಪರಿಜನರು ತ್ವರೆಯಿಂದ ಹೊರಟರು; ಪಶ್ಚಿಮ ಶರಧಿ = ಪಶ್ಚಿಮ ಸಮುದ್ರ; ದಕ್ಷಿಣ ಶರಧಿ = ದಕ್ಷಿಣ ದಿಕ್ಕಿನ ಸಮುದ್ರ; ಪೂರ್ವದ ಶರಧಿಯುತ್ತರ = ಪೂರ್ವದಿಕ್ಕಿನ ಸಮುದ್ರ ಹಾಗೂ ಉತ್ತರ ದಿಕ್ಕಿನ; ಕುರುನರೇಂದ್ರರ = ಕುರುಕುಲದರಸ ಸಾಮ್ರಾಜ್ಯದ; ಸೀಮೆ ಪರಿಯಂತ = ಕೊನೆಯವರೆಗೂ; ಪುರಗಳಲಿ = ನಗರನಗರಗಳಲ್ಲಿ; ವನವೀದಿಯಲಿ = ಕಾಡುದಾರಿಗಳಲ್ಲಿ; ತದ್ಗಿರಿಗಳಲಿ = ಅಲ್ಲಲ್ಲಿ ಇದ್ದ ಬೆಟ್ಟ ಗುಡ್ಡಗಳಲ್ಲಿ; ನಾನಾ ದಿಗಂತದೊಳರಸಿ = ನಾನಾ ದಿಕ್ಕಿನ ಮೂಲೆ ಮೂಲೆಗಳಲ್ಲೂ ಹುಡುಕಿ; ಕಾಣದೆ = ಅವರುಗಳನ್ನು ಪತ್ತೆ ಹಚ್ಚಲಾಗದೆ; ಮುಂದೆ ನಡೆದರು ಹಲವು ದಿವಸಗಳಲಿ = ಹಲವಾರು ದಿನಗಳ ಪರ್ಯಂತ ಹೀಗೆಯೇ ಹುಡುಕಾಟವನ್ನು ಮುಂದುವರಿಸಿದರು.

ಅರಸನಾಜ್ಞೆಯ ಅನುಸಾರ ಅರಮನೆಯ ಪರಿಜನರು ತ್ವರೆಯಿಂದ ಹೊರಟು ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣಗಳೆಂದು ಎಲ್ಲ ದಿಕ್ಕುಗಳ ಎಲ್ಲೆವರೆಗೂ ಹುಡುಕಲಾರಂಭಿಸಿದರು. ಕುರುನರೇಂದ್ರರ ಸಾಮ್ರಾಜ್ಯದ ಎಲ್ಲೆಯವರೆಗೂ ಬಿಡದೆ ಶೋಧಿಸಿದರು. ನಗರ ನಗರಗಳಲ್ಲಿ, ಕಾಡದಾರಿಗಳಲ್ಲಿ, ಅಲ್ಲಲ್ಲಿ ಇದ್ದ ಬೆಟ್ಟಗುಡ್ಡಗಳಲ್ಲಿ ನಾನಾ ದಿಕ್ಕಿನ ಮೂಲೆ ಮುಡುಕುಗಳನ್ನು ಬಿಡದೆ ಹುಡುಕಿದರೂ ಎಲ್ಲಿಯೂ ದಮಯಂತಿ, ನಳನೃಪರ ಸುಳಿಹಿಲ್ಲದೆ, ಅವರ ಪತ್ತೆ ಸಿಗಲಾರದೆ ಮತ್ತೆ ಮತ್ತೆ ಹಲವು ಯೋಜನ ಪರ್ಯಂತ ಹುಡುಕಾಟವನ್ನು ಮುಂದುವರಿಸಿದರು.

21. ಪುರನಗರ ಬೀದಿಗಳ ಮಧ್ಯದಿ
ನೆರೆದ ಸಭೆಯಲಿ ಮಾರ್ಗದಲಿ ಸಂ
ಚರಿಸುವವರನು ಕಂಡು ಕೇಳುತ ಬಂದರಲ್ಲಲ್ಲಿ
ಇರವ ಕಾಣದೆ ಬಳಲಿ ಚಿಂತಿಸಿ
ಮರುಗುತವನೀಸುರರು ಭೇದಿಸು
ತಿರಲು ಮೂವರು ಬೇರೆ ಹೊಕ್ಕರು ಚೈದ್ಯನಗರಿಯನು

ಪುರನಗರ ಬೀದಿಗಳ ಮಧ್ಯದಿ = ನಗರಾರಂಭದ ಮುಂದಿನ ಬೀದಿಗಳ ಮಧ್ಯದಲ್ಲಿ; ನೆರೆದ ಸಭೆಯಲಿ = ಜನರು ಸೇರಿದ್ದಲ್ಲಿ, ಸಭಾಮಂಟಪಗಳಲ್ಲಿ;

ಮಾರ್ಗದಲಿ ಸಂಚರಿಸುವವರನು = ಮಾರ್ಗ ಮಧ್ಯದಲ್ಲಿ ಸಂಚರಿಸುವವರನ್ನೂ ಬಿಡದೆ; ಕಂಡು ಕೇಳುತ = ನೋಡಿ, ವಿಚಾರಿಸುತ್ತ; ಬಂದರಲ್ಲಲ್ಲಿ = ಅಲ್ಲಲ್ಲಿ ಹೀಗೇ ಪ್ರಯತ್ನಿಸುತ್ತ ಬಂದರು; ಇರವ ಕಾಣದೆ = ಎಲ್ಲಿಯೂ ಅವರು ಇದ್ದ ಕುರುಹು ಸಿಗದೆ; ಬಳಲಿ ಚಿಂತಿಸಿ = ಆಯಾಸಗೊಂಡು ಚಿಂತಾಕ್ರಾಂತರಾಗಿ; ಮರುಗುತ + ಅವನೀ + ಸುರರು = ದುಃಖಕ್ಕೀಡಾದ ಬ್ರಾಹ್ಮಣರು; ಭೇದಿಸುತಿರಲು = ಕಂಡು ಹಿಡಿಯಲು ಪ್ರಯತ್ನಿಸುತ್ತಿರಲು; ಮೂವರು = ಅವರಲ್ಲಿ ಮೂರು ಮಂದಿ; ಬೇರೆ ಹೊಕ್ಕರು = ಗುಂಪಿನಿಂದ ಬೇರಾಗಿ ಹೊಕ್ಕರು; ಚೈದ್ಯನಗರಿಯನು = ಚೈದ್ಯ ನಗರಿಯನ್ನು.

ಭೀಮನೃಪನಾಜ್ಞೆಯನ್ನು ಹೊತ್ತ ಬ್ರಾಹ್ಮಣರು ಹುಡುಕಾಟವನ್ನು ಮುಂದುವರಿಸುತ್ತ, ಊರ ಹೊರಗಿನ ನಗರಾರಂಭ ಬೀದಿಗಳ ಮಧ್ಯದಲ್ಲೂ, ಜನಸಮೂಹ ಕಂಡೆಡೆಗಳಲ್ಲಿಯೂ, ಸಭಾಮಂಟಪಗಳಲ್ಲೂ, ಮಾರ್ಗಮಧ್ಯ ಸಂಚರಿಸುವವರಲ್ಲಿಯೂ ಬಿಡದೆ ನಳದಮಯಂತಿಯರ ಕುರಿತು ವಿಚಾರಿಸುತ್ತ ಬಿಡದೆ ಅಲ್ಲಲ್ಲಿ ಹೀಗೇ ವಿಚಾರಿಸುತ್ತ ಬಂದರು. ಎಲ್ಲಿಯೂ ಅವರ ಇರವು ಕುರುಹು ದೊರೆಯದಿದ್ದುದರಿಂದ ಚಿಂತಾಕ್ರಾಂತರಾಗಿ, ಆಯಾಸಗೊಂಡ ಆ ಬ್ರಾಹ್ಮಣರು ದುಃಖಕ್ಕೀಡಾದರು. ಆದರೂ ರಾಜಾಜ್ಞೆಯ ಜವಾಬ್ದಾರಿ ಅವರನ್ನು ಕರ್ತವ್ಯ ಪರರನ್ನಾಗಿಸಿದ್ದುದರಿಂದ ಮತ್ತೆ ಮತ್ತೆ ಹುಡುಕಾಟಕ್ಕೆ ತೊಡಗುತ್ತಲೇ ಇದ್ದು, ಈ ಮಧ್ಯೆ ಆ ಗುಂಪಿನ ಮೂವರು ಬೇರೆಯಾಗಿ ಹೊರಟು ಚೈದ್ಯನಗರಿಯನ್ನು ಪ್ರವೇಶಿಸಿದರು.

22. ಅಲ್ಲಿ ವಾರ್ತೆಯ ಕೇಳಿದರು ಬೂ
ವಲ್ಲಭನ ಕ್ರತುಸಮಯವೆಂದವ
ರೆಲ್ಲ ಗಮನಿಸಲು ಕಂಡು ಮೂವರು ಕೂಡುತವರೊಡನೆ
ನಿಲ್ಲದೈದಿದರರಮನೆಗೆ ತಮ
ಗಲ್ಲಿ ದಕ್ಷಿಣೆ ತೃಪ್ತಿಭೋಜನ
ವೆಲ್ಲ ಸಿಗಲಹುದೆನುತ ಹೊಕ್ಕರು ಯಜ್ಞಮಂಟಪವ

ಅಲ್ಲಿ ವಾರ್ತೆಯ ಕೇಳಿದರು = ಅಲ್ಲಿ ಅವರಿಗೆ ಒಂದು ಸುದ್ದಿಯು ದೊರೆಯಿತು; ಬೂವಲ್ಲಭನ = ಚೈದ್ಯಪುರದರಸನು; ಕ್ರತುಸಮಯವು + ಎಂದು + ಅವರೆಲ್ಲ = ಯಜ್ಞವನ್ನು ಮಾಡಿಸುತ್ತಿದ್ದಾನೆಂದು ತಿಳಿದು ಊರವರೆಲ್ಲರೂ; ಗಮನಿಸಲು ಕಂಡು = ಹೊರಟಿದ್ದನ್ನು ಕಂಡು; ಮೂವರು = ಆ ಮೂರೂ ಜನ ಬ್ರಾಹ್ಮಣರು; ಕೂಡುತವರೊಡನೆ = ಆ ಗುಂಪಿನೊಂದಿಗೆ ಸೇರಿಕೊಂಡು; ನಿಲ್ಲದೆ + ಐದಿದರು + ಅರಮನೆಗೆ = ಎಲ್ಲರೂ ಶೀಘ್ರವಾಗಿ ಅರಮನೆಯನ್ನು ಸೇರಿದರು; ತಮಗಲ್ಲಿ ದಕ್ಷಿಣೆ = ತಮಗೆ ಅಲ್ಲಿ ದಕ್ಷಿಣೆಯೂ; ತೃಪ್ತಭೋಜನವೆಲ್ಲ = ಸಂತೃಪ್ತವಾಗಿ ಭೋಜನವೂ ಮುಂತಾದುವೆಲ್ಲ; ಸಿಗಬಹುದೆನುತ = ದೊರೆಯ ಬಹುದೆಂಬ ಆಸೆಯಿಂದ; ಹೊಕ್ಕರು ಯಜ್ಞಮಂಟಪವ = ಯಜ್ಞಶಾಲೆಯನ್ನು ಪ್ರವೇಶಿಸಿದರು.

ಚೇದಿನಗರದರಸನು ಯಜ್ಞವೊಂದನ್ನು ಹಮ್ಮಿಕೊಂಡಿದ್ದಾನೆಂಬೊಂದು ಮಾಹಿತಿಯು ಅಲ್ಲಿಗೆ ತಲುಪಿದ ಭೀಮನೃಪನು ಕಳುಹಿದ ಬ್ರಾಹ್ಮಣರಿಗೆ ದೊರೆಯಿತು. ಅಲ್ಲಿಗೆ ಹೋಗುತ್ತಿದ್ದ ಅನೇಕ ಸಾಮಾಜಿಕರ ಗುಂಪಿನಲ್ಲಿ ಸೇರಿಕೊಂಡು ಈ ಮೂವರು ಬ್ರಾಹ್ಮಣರೂ ತಮಗೂ ಅಲ್ಲಿ ಯಥೇಚ್ಛವಾಗಿ ದಕ್ಷಿಣೆಯೂ ಸುಗ್ರಾಸ ಭೋಜನವೂ ಸಂತೃಪ್ತವಾಗಿ ದೊರೆಯಬಹುದು ಎಂಬ ಆಸೆಯಿಂದ ಯಜ್ಞಶಾಲೆಗೆ ಬಂದು ಸೇರಿದರು.

23. ಜನಪನವನೀಸುರರ ಮಂತ್ರದ
ಲನಿಲಸಖನಾರಾಧಿಸಲು ನೃಪ
ತನುಜೆಯಾದ ಸುನೀತೆಯೊಳು ದಮಯಂತಿ ಭಾವಿಸುತ
ವನಿತೆಯಿರೆ ಕಂಡನು ಸುದೇವನು
ಮನದೊಳನುಮಾನಿಸಿದನೀ ಮಾ
ನಿನಿ ಮಹಾಸತಿಯೆನುತ ವಿಸ್ಮಯಗೊಂಡ ಮನದೊಳಗೆ

ಜನಪನು + ಅವನೀ + ಸುರರ = ಚೈದ್ಯಪುರದರಸನು ಬ್ರಾಹ್ಮಣರ; ಮಂತ್ರದಲಿ+ಅನಿಲಸಖನ + ಆರಾಧಿಸಲು = ಮಂತ್ರ ಪೂರ್ವಕವಾಗಿ ವಾಯುವಿನ ಮಿತ್ರನಾದ ಅಗ್ನಿಯನ್ನು ಆರಾಧಿಸುತ್ತಿರುವಾಗ; ನೃಪತನುಜೆಯಾದ=ರಾಜನ

ಮಗಳಾದ; ಸುನೀತೆಯೊಳು = ಸುನೀತಿಯೊಂದಿಗೆ; ದಮಯಂತಿ ಭಾವಿಸುತ = ದಮಯಂತಿಯು ಅವಳ ಪರಿಚರ್ಯೆಯನ್ನು ಮಾಡುತ್ತಿರಲು; ವನಿತೆಯಿರೆ = ದಮಯಂತಿ ಇರಲು; ಸುದೇವನು = ಬ್ರಾಹ್ಮಣರ ಗುಂಪಿನಲ್ಲಿದ್ದ ಸುದೇವನು; ಮನದೊಳು + ಅನುಮಾನಿಸಿದನು + ಈ = ಮನಸ್ಸಿನೊಳಗೇ ಸಂದೇಹಿಸಿದನು; ಈ ಮಾನಿನಿ = ಈ ಗೌರವಸ್ಥ ಹೆಣ್ಣುಮಗಳು; ಮಹಾಸತಿಯೆನುತ = ಸಾಮಾನ್ಯ ಸ್ತ್ರೀಯಲ್ಲ; ಮಹಾಪತಿವ್ರತೆಯೇ ಸರಿ ಎಂದುಕೊಳ್ಳುತ್ತ; ವಿಸ್ಮಯಗೊಂಡ = ಇಂಥವಳು ಪರಿಚಾರಿಕೆಯಾಗಿರಲು ಸಾಧ್ಯವೇ ಎಂಬಿತ್ಯಾದಿ ಸಂದೇಹಗಳಿ ಗೊಳ ಗಾದನು; ಮನದೊಳಗೆ = ಮನಸ್ಸಿನ ಒಳಗೊಳಗೇ.

ಚೈದ್ಯಪುರದರಸು ಬ್ರಾಹ್ಮಣರು ಮಂತ್ರಘೋಷದೊಂದಿಗೆ, ಮಂತ್ರಪೂರ್ವಕ ವಾಗಿ ಯಜ್ಞದ ಅಗ್ನಿಯನ್ನಾರಾಧಿಸುತ್ತಿರುವ ಸಂದರ್ಭದಲ್ಲಿ, ಅರಸನ ಮಗಳಾದ ಸುನೀತಿಯೊಂದಿಗೆ, ಅವಳಿಗೆ ಸಖಿಯಾಗಿ ನೇಮಕಗೊಂಡಿದ್ದ ದಮಯಂತಿಯು ಅವಳ ಕೆಲಸ ಕಾರ್ಯಗಳಲ್ಲಿ ನೆರವಾಗುತ್ತಿರಲು ಅವಳನ್ನು ಬ್ರಾಹ್ಮಣರ ಗುಂಪಿನಲ್ಲಿದ್ದ ಸುದೇವನೆಂಬುವನು ಗಮನಿಸಿದನು. ಈ ಹೆಣ್ಣು ಮಗಳು ಪರಿಚಾರಿಕೆಯೆಂಬಂತೆ ಕಾಣುತ್ತಿಲ್ಲ. ಈಕೆ ಸಾಮಾನ್ಯ ಸ್ತ್ರೀಯಲ್ಲ. ಮಹಾಸತಿಯ ಲಕ್ಷಣಗಳಿರುವ ಈಕೆ ಪರಿಚಾರಿಕೆಯಲ್ಲಿರಲು ಹೇಗೆ ಸಾಧ್ಯ ಎಂದು ಮನಸ್ಸಿನೊಳಗೇ ಗಾಢವಾದ ಸಂದೇಹಕ್ಕೊಳಗಾದನು.

24. ಮುಗಿಲು ಮುಸುಕಿದ ಚಂದ್ರಬಿಂಬವೊ
ಪಗಲೊಳೆಸೆವ ಸುದೀಪಕಾಂತಿಯೊ
ಹೊಗೆಯೊಳೆಸಗಿದ ಚಿತ್ರಪ್ರತಿಮೆಯೊ ಹೇಳಲೇನವಳ
ಉಗಿದು ಬಿಸುಟ ವಿಭೂಷಣದ ಮೈ
ಲಿಗೆಯ ಸೀರೆಯ ಮಲಿನತನು ಕಳೆ
ತೆಗೆದು ಕೈಗಲ್ಲದಲಿ ನಿಂದಿರೆ ಕಂಡನಾ ಸತಿಯ

ಮುಗಿಲು ಮುಸುಕಿದ = ಮೋಡಗಳಿಂದ ಆವೃತವಾದ; ಚಂದ್ರಬಿಂಬವೋ = ಚಂದ್ರಬಿಂಬವೋ; ಪಗಲೊಳೆಸೆವ = ಹಗಲ ಹೊತ್ತಿನಲ್ಲಿ ಬೆಳಗುತ್ತಿರುವ; ಸುದೀಪಕಾಂತಿಯೋ = ಉಜ್ವಲವಾದ ದೀಪಕಾಂತಿಯೋ; ಹೊಗೆಯೊಳೆಸಗಿದ =

ಹೊಗೆಯಿಂದ ತಯಾರಿಸಿದ; ಚಿತ್ರಪ್ರತಿಮೆಯೊ = ಸೋಜಿಗದ ವರ್ಣರಂಜಿತ ಗೊಂಬೆಯೋ; ಹೇಳಲೇನವಳ = ಹೇಗೆಂದು ವರ್ಣಿಸುವುದು ಅವಳನ್ನು; ಉಗಿದು ಬಿಸುಟ = ತಿರಸ್ಕರಿಸಿ ತೊರೆದ; ವಿಭೂಷಣದ = ಆಭರಣಗಳ; ಮೈಲಿಗೆಯ ಸೀರೆಯ = ಶುಭ್ರವಾಗಿಲ್ಲದ ಸೀರೆಯ; ಮಲಿನತನು = ಕೊಳಕಾದ ಶರೀರದ; ಕಳೆತೆಗೆದು = ಕಳೆಗುಂದಿ; ಕೈಗಲ್ಲದಲಿ ನಿಂದಿರೆ = ಗಲ್ಲಕ್ಕೆ ಕೈಕೊಟ್ಟು ಚಿಂತೆಯಲ್ಲಿರುವವಳಂತೆ ನಿಂತಿರಲು; ಕಂಡನಾ ಸತಿಯ = ಆ ಹೆಣ್ಣು ಮಗಳನ್ನು ಸುದೇವನು ನೋಡಿದನು.

ದಮಯಂತಿಯನ್ನು ಸುದೇವನು ಇನ್ನೂ ಗಂಭೀರವಾಗಿ ಪರಿಶೀಲಿಸಿದನು. ಮೋಡಗಳಿಂದ ಆವೃತವಾದ ಚಂದ್ರಬಿಂಬವೋ, ಹಗಲ ಬೆಳಕಿನಲ್ಲಿ ತೇಜೋಹೀನವಾಗಿ, ಮಸುಕಾಗಿ ಕಾಣುತ್ತಿರುವ ಉಜ್ವಲ ದೀಪಕಾಂತಿಯೋ, ಹೊಗೆಯಿಂದ ನಿರ್ಮಿತವಾದ ಸೋಜಿಗದ ವರ್ಣರಂಜಿತ ಪ್ರತಿಮೆಯೋ ಇವಳನ್ನು ಹೇಗೆಂದು ವರ್ಣಿಸುವುದು ಎಂದು ಅವಳ ಮಸುಕಾಗಿದ್ದ ಉಜ್ವಲ ಪ್ರಭಾಯುಕ್ತ ಚೆಲುವನ್ನು ನೋಡಿ ಸುದೇವನು ಯೋಚನೆಗೀಡಾದನು. ಅವಳು ಅಲಂಕಾರರಹಿತಳಾಗಿದ್ದಳು. ಆಭರಣಗಳನ್ನು ತ್ಯಜಿಸಿ, ಮಲಿನವಾದ ವಸ್ತ್ರಗಳೂ, ಶುಭ್ರತೆಗೆ ಮನಸ್ಸುಕೊಡದ ಶರೀರವೂ ಉಳ್ಳವಳಾಗಿ, ಕಳೆಗುಂದಿ, ಚಿಂತಾಕ್ರಾಂತಳಂತೆ ಗಲ್ಲಕ್ಕೆ ಕೈಕೊಟ್ಟು ನಿಂತಿದ್ದ ಆ ಹೆಣ್ಣು ಮಗಳನ್ನು ಸುದೇವನು ವಿಶೇಷವಾಗಿ ಗಮನಿಸಿದನು.

25. ಇದು ಪತಿವ್ರತಧರ್ಮವಹುದೀ
ಸುದತಿ ತೊರೆದಿಹಳೆಲ್ಲವನು ನೃಪ
ವಧುವ ಕಾಣಿಸಿಕೊಂಬೆನೆಂದು ಸುದೇವ ನಡೆತಂದು
ಹದನಿದೇನೌ ತಾಯೆ ನಿಮ್ಮಯ
ವದನಕಮಲವು ಬಾಡಿ ಕುಡುಮಾ
ಸಿದುಡಿಗೆಯಲಿಹುದೇನು ಕಾರಣವೆನುತಲಿಂತೆಂದ

ಇದು ಪತಿವ್ರತ ಧರ್ಮವಹುದು = ಇದು ನಿಜವಾದ ಪತಿವ್ರತಾಧರ್ಮ; ಈ ಸುದತಿ = ಈ ಸುಂದರ ಸ್ತ್ರೀ; ತೊರೆದಿಹಳೆಲ್ಲವನು = ಉದ್ದೇಶಪೂರ್ವಕವಾಗಿಯೇ ಎಲ್ಲ ಬಾಹ್ಯ ಶ್ರೀಮಂತಿಕೆಯನ್ನು ತ್ಯಜಿಸಿದ್ದಾಳೆ; ನೃಪವಧುವ = ಇವಳು

ರಾಜಪತ್ನಿಯೇ; ಕಾಣಿಸಿಕೊಂಬೆನೆಂದು = ಇವಳನ್ನು ಭೇಟಿ ಮಾಡುತ್ತೇನೆ ಎಂದು; ಸುದೇವ ನಡೆತಂದು = ಸುದೇವನು ಅವಳಲ್ಲಿಗೆ ಬಂದು; ಹದನಿದೇನೌ = ಇದೇನು ಈ ರೀತಿ ಇರುವಿರಿ?; ತಾಯೆ = ತಾಯೀ; ನಿಮ್ಮಯ = ನಿಮ್ಮ; ವದನ ಕಮಲವು = ತಾವರೆಯ ಮುಖವು; ಬಾಡಿ = ಕಂದಿಹೋಗಿ; ಕಡುಮಾಸಿದ + ಉಡುಗೆಯಲಿ + ಇಹುದು + ಏನು = ವಿಪರೀತವಾಗಿ ಮಲಿನವಾಗಿರುವ ಉಡುಗೆಯಲ್ಲಿ ಇರುವ; ಕಾರಣವೆನುತಲಿಂತೆಂದ = ಕಾರಣವೇನು ಎನ್ನುತ್ತ ಹೀಗೆ ಹೇಳಿದನು.

ದಮಯಂತಿಯ ವೇಷ ಭೂಷಣಗಳನ್ನು ಗಮನಿಸಿದ ಸುದೇವನು ಮನಸ್ಸಿ ನಲ್ಲಿಯೇ ಇದೇ ನಿಜವಾದ ಪತಿವ್ರತಾ ಧರ್ಮ ಎಂದುಕೊಂಡನು. ಈ ಸುಂದರ ಸ್ತ್ರೀಯು ಎಲ್ಲ ಆಡಂಬರ, ಶ್ರೀಮಂತಿಕೆಗಳನ್ನು ಉದ್ದೇಶಪೂರ್ವಕವಾಗಿಯೇ ತೊರೆದಿದ್ದಾಳೆ. ಇವಳು ರಾಜಪತ್ನಿಯೇ ಸರಿ. ಇರಲಿ, ಇವಳನ್ನು ಭೇಟಿಮಾಡಿ ನೋಡುತ್ತೇನೆ ಎಂದುಕೊಂಡು ಅವಳಲ್ಲಿಗೆ ಬಂದನು. ಇದೇನು ಈ ರೀತಿ ಇರುವಿರಿ ತಾಯೇ, ನಿಮ್ಮ ತಾವರೆಯಂತಹ ಸುಕೋಮಲ ಮುಖವು ಬಾಡಿದೆ, ವಸ್ತ್ರಗಳು ವಿಪರೀತ ಮಲಿನವಾಗಿವೆ ಕಾರಣವೇನು? ಎಂದು ಕೇಳುತ್ತಲೇ, ಹೇಳ ಲಾರಂಭಿಸಿದನು.

26. ಇಂದುವದನೆ ವಿದರ್ಭಪಟ್ಟಣ
ದಿಂದ ಬಂದೆನು ತಾನು ಭೂಸುರ
ವಂದ್ಯನೆನ್ನಭಿಧಾನ ಕೇಳು ಸುದೇವನೆಂಬುವುದು
ಇಂದು ನಿಮ್ಮನು ನೋಡ ಕಳುಹಿದ
ತಂದೆ ಭೀಮನೃಪಾಲನಾತನ
ನಂದನಗೆ ತಾ ಸಖನು ಚಿತ್ತೈಸೆನ್ನ ಬಿನ್ನಪವ

ಇಂದುವದನೆ = ಚಂದ್ರನಂತೆ ಕಾಂತಿಯುತಳೇ; ವಿದರ್ಭಪಟ್ಟಣದಿಂದ ಬಂದೆನು = ನಾನು ವಿದರ್ಭನಗರಿಯಿಂದ ಬಂದಿದ್ದೇನೆ; ತಾನು = ನಾನು; ಭೂಸುರವಂದ್ಯನು + ಎನ್ನ + ಅಭಿದಾನ = ಭೂಮಂಡಲದ ದೇವತೆಗಳೆಂದು ಗೌರವಿಸಲ್ಪಟ್ಟ ಬ್ರಾಹ್ಮಣ ವರ್ಗದವನು, ನನ್ನ ಹೆಸರು; ಕೇಳು ಸುದೇವನೆಂಬುದು = ಆಲಿಸು, ಸುದೇವನೆಂದು; ಇಂದು ನಿಮ್ಮನು ನೋಡ ಕಳುಹಿದ = ನಿಮ್ಮನ್ನು

ನೋಡಲೆಂದೇ ಇಂದು ನನ್ನನ್ನು ಕಳುಹಿಸಿದ್ದಾನೆ; ತಂದೆ ಭೀಮನೃಪಾಲನಾತನ = ತಂದೆ ಭೀಮಮಹಾರಾಜನು ಅವನ; ನಂದನಗೆ = ಮಗನಿಗೆ; ತಾ ಸಖನು = ನಾನು ಮಿತ್ರ; ಚಿತ್ತೈಸೆನ್ನ ಭಿನ್ನಪವ = ಮನಸ್ಸಿಟ್ಟು ಕೇಳು ನನ್ನ ವಿನಂತಿಯನ್ನು.

ಚಂದ್ರನಂತೆ ಕಾಂತಿಯುತವಾದ ಸೊಬಗುಳ್ಳವಳೇ, ನಾನು ವಿದರ್ಭ ನಗರಿಯಿಂದ ಬಂದಿದ್ದೇನೆ. ನಾನು ಸಾಮಾಜಿಕರಿಂದ ಗೌರವಾರ್ಹವೆನಿಸಿಕೊಂಡ ಬ್ರಾಹ್ಮಣನು. ನನ್ನ ಹೆಸರು ಸುದೇವನೆಂದು. ನಿಮ್ಮನ್ನು ನೋಡಲೆಂದೇ ವಿದರ್ಭ ನಗರದ ನೃಪಾಲ ಭೀಮದೇವನು ನನ್ನನ್ನು ಇಲ್ಲಿಗೆ ಇಂದು ಕಳುಹಿಸಿದ್ದಾನೆ. ಅವನ ಮಗನ ಮಿತ್ರ ನಾನು. ನಿನ್ನಲ್ಲಿ ನನ್ನದೊಂದು ವಿಜ್ಞಾಪನೆ ಇದೆ ಗಮನವಿಟ್ಟು ಕೇಳು.

27. ಕ್ಷಿತಿಪ ಭೀಮನೃಪಾಲನಾತನ
ಸತಿಸುತರು ಬಾಂಧವ ಸಹೋದರ
ರತಿಶಯರು ನಿಮ್ಮಯ ಕುಮಾರರು ಕುಶಲರಿಂದಿನಲಿ
ಕ್ಷಿತಿಯನಗಲುತ ನಳನೃಪತಿ ನಿಜ
ಸತಿಸಹಿತ ವನಕೈದಿದುದ ಕೇ
ಳುತಲಿ ನಿಮ್ಮವರೆಲ್ಲ ಶೋಕಾಬ್ಧಿಯಲಿ ಮುಳುಗಿಹರು

ಕ್ಷಿತಿಪ = ಭೂಮಂಡಲಾಧೀಶ; ಭೀಮನೃಪಾಲನಾತನ = ಭೀಮ ನೃಪಾಲನೂ ಆತನ; ಸತಿಸುತರು = ಅವನ ಹೆಂಡತಿ ಮಕ್ಕಳು; ಬಾಂಧವ = ಬಂಧು ಬಳಗದವರು; ಸಹೋದರರತಿಶಯರು = ಶ್ರೇಷ್ಠರಾದ ಸಹೋದರರು; ನಿಮ್ಮಯ ಕುಮಾರರು = ನಿಮ್ಮ ಮಕ್ಕಳು; ಕುಶಲರು + ಇಂದಿನಲಿ = ಸೌಖ್ಯವಾಗಿದ್ದಾರೆ, ಇಂದಿನವರೆಗೂ; ಕ್ಷಿತಿಯನಗಲುತ = ತನ್ನ ಸಮಸ್ತ ಭೂಭಾಗ್ಯಗಳೆಲ್ಲವನ್ನೂ ಕಳೆದುಕೊಂಡು; ನಳನೃಪತಿ = ನಳಭೂಪಾಲನು; ನಿಜಸತಿಸಹಿತ = ತನ್ನ ಪತ್ನೀಸಮೇತ; ವನಕೆ + ಐದಿದುದ = ವನಾಂತರಕ್ಕೆ ತೆರಳಿದುದನ್ನು; ಕೇಳುತಲಿ = ಕೇಳುತ್ತಿದ್ದಂತೆ; ನಿಮ್ಮವರೆಲ್ಲ = ನಿಮ್ಮ ಬಂಧುಬಾಂದವರೆಲ್ಲರೂ; ಶೋಕಾಬ್ಧಿಯಲಿ = ಶೋಕಸಾಗರದಲ್ಲಿ; ಮುಳುಗಿಹರು = ಮುಳುಗಿದ್ದಾರೆ.

“ಭೂಮಂಡಲಾಧೀಶ್ವರನಾದ ಭೀಮನೃಪಾಲನೂ ಆತನ, ಸತಿಸುತರು– ಹೆಂಡತಿ ಮಕ್ಕಳು, ಬಂಧುಬಳಗದವರು, ಸಹೋದರರು ಎಲ್ಲರೂ ಶ್ರೇಷ್ಠರೂ,

ವಿಶೇಷರೂ ಎನಿಸಿಕೊಂಡು ಕುಶಲದಿಂದಿದ್ದಾರೆ. ನಿಮ್ಮ ಮಕ್ಕಳು ಇಂದಿನವರೆಗೂ ಕುಶಲದಿಂದಿದ್ದಾರೆ. ತನ್ನ ಸಮಸ್ತ ಭೂಭಾಗ್ಯಗಳೆಲ್ಲವನ್ನೂ ಕಳೆದುಕೊಂಡು ನಳ ಚಕ್ರವರ್ತಿಯು ತನ್ನ ಪತ್ನೀಸಮೇತ ವನಾಂತರಕ್ಕೆ ತೆರಳಿರುವ ಸುದ್ದಿಯನ್ನು ಕೇಳುತ್ತಿದ್ದಂತೆ ನಿಮ್ಮ ಬಂಧು ಬಾಂಧವರೆಲ್ಲರೂ ದುಃಖಸಾಗರದಲ್ಲಿ ಮುಳುಗಿದ್ದಾರೆ".

28. ಘೋರತರಶೋಕವನು ಸೈರಿಸ
ಲಾರದಾ ಸತಿಪತಿಗಳಿಬ್ಬರು
ಸೋರುತಿಹ ಕಂಬನಿಗಳಲಿ ಕರೆದೆಮ್ಮ ಕಳುಹಿದರು
ಧಾರಿಣಿಯಲರಸುತಲಿ ಬಂದೆವು
ವಾರಿಜಾನನೆ ನಿಮ್ಮ ಕಂಡೆವು
ಸೇರಿತೆಮ್ಮಯ ಪುಣ್ಯವೆಂದು ಸುದೇವ ಕೈಮುಗಿದ

ಘೋರತರ ಶೋಕವನು = ಘೋರತರವಾದ ಅಪಾರ ಶೋಕವನ್ನು; ಸೈರಿಸಲಾರದಾ = ಸೈರಿಸಲು ಆಗದೆ ಆ; ಸತಿಪತಿಗಳಿಬ್ಬರು = ಭೀಮನೃಪಾಲನೂ, ಮಹಾರಾಣಿಯೂ; ಸೋರುತಿಹ ಕಂಬನಿಗಳಲಿ = ಧಾರಾಕಾರವಾಗಿ ದುಃಖಾಶ್ರುಗಳನ್ನು ಸುರಿಸುತ್ತ; ಕರೆದೆಮ್ಮ = ನನ್ನನ್ನು ಕರೆದು; ಕಳುಹಿದರು = ನಿಮ್ಮನ್ನು ಪತ್ತೆಹಚ್ಚಲು ಕಳುಹಿದ್ದಾರೆ; ಧಾರಿಣಿಯಲಿ + ಅರಸುತಲಿ = ಭೂಮಂಡಲದ ಸಮಸ್ತ ಪ್ರದೇಶಗಳಲ್ಲಿಯೂ ನಿಮ್ಮನ್ನು ಅರಸುತ್ತ; ಬಂದೆವು = ಇಲ್ಲಿಗೆ ಬಂದಿದ್ದೇವೆ; ವಾರಿಜಾನನೆ = ಕಮಲದ ಮುಖದವಳೇ; ನಿಮ್ಮನ್ನು ಕಂಡೆವು = ಇಲ್ಲಿ ನಿಮ್ಮನ್ನು ಕಂಡೆವು; ಸೇರಿತೆಮ್ಮಯ ಪುಣ್ಯವೆಂದು = ನಮ್ಮ ಪುಣ್ಯವು ಕೈಗೂಡಿದಂತಾಯಿತು, ಎಂದು; ಸುದೇವ ಕೈಮುಗಿದ = ಸುದೇವನು ಕೈಮುಗಿದು ನುಡಿದನು.

"ನೀವು ವನಾಂತರಕ್ಕೆ ತೆರಳಿದ ಅತ್ಯಂತ ಘೋರತರವಾದ ಸುದ್ಧಿಯನ್ನು ಕೇಳಿದ ನಂತರ ಅಪಾರವಾದ ದುಃಖವನ್ನು ಸೈರಿಸಲಾರದೆ ಸತಿಪತಿಯರಾದ ಭೀಮನೃಪಾಲನೂ ಮಹಾರಾಣಿಯೂ ಧಾರಾಕಾರವಾಗಿ ದುಃಖಾಶ್ರುಗಳನ್ನು ಮಿಡಿಯುತ್ತ, ನನ್ನನ್ನು ಕರೆದು ನಿಮ್ಮನ್ನು ಹುಡುಕಿ ಪತ್ತೆಹಚ್ಚಲು ಕಳುಹಿಸಿದ್ದಾರೆ. ಭೂಮಂಡಲದ ಸಮಸ್ತ ಕೋನಕೋನಗಳಲ್ಲೂ ನಿಮ್ಮನ್ನು ಹುಡುಕುತ್ತ ಈಗ ಇಲ್ಲಿಗೆ

ಬಂದಿದ್ದೇವೆ. ಕಮಲದ ಸೊಬಗಿನ ಮುಖದವಳೇ, ನಿನ್ನನ್ನು ಇಂದು ಇಲ್ಲಿ ಕಂಡೆವು. ನಮ್ಮ ಪುಣ್ಯವು ಕೈಗೂಡಿದಂತಾಯಿತು" ಎಂದು ಸುದೇವನು ದಮಯಂತಿಗೆ ಗೌರವಪೂರ್ವಕ ವಿನಯದಿಂದ ಕೈಮುಗಿದು ನುಡಿದನು.

29. ವನಿತೆ ಕೇಳುತ ಶೋಕಜಲದಲಿ
ನೆನೆದು ಬುಧಕುಲತಿಲಕನನು ಬಾ
ರೆನುತ ಮನ್ನಿಸಿ ತನ್ನವರನಡಿಗಡಿಗೆ ಬೆಸಗೊಳಲು
ವನಿತೆ ನೋಡಿದಳಾ ಸುದೇವನ
ಜನನಿಗರುಹಲು ಬಂದಳಾ ವಿ
ಪ್ರನನು ನೀವಾರೆನಲು ನುಡಿದನು ಬಂದ ಸಂಗತಿಯ

ವನಿತೆ ಕೇಳುತ = ದಮಯಂತಿಯು ಸುದೇವನ ಮಾತುಗಳನ್ನು ಕೇಳುತ್ತ; ಶೋಕಜಲದಲಿ ನೆನೆದು = ಉಕ್ಕಿ ಬಂದ ದುಃಖದ ಕಣ್ಣೀರಿನಲ್ಲಿ ಮುಳುಗಿಹೋಗಿ; ಬುಧಕುಲತಿಲಕನನು = ಪಂಡಿತ ಶ್ರೇಷ್ಠನನ್ನು; ಬಾರೆನುತ ಮನ್ನಿಸಿ = ಬಾ ಎಂದು ಕರೆದೊಯ್ದು ಗೌರವಾದರಗಳಿಂದ ಸತ್ಕರಿಸಿ; ತನ್ನವರನು + ಅಡಿಗೆ + ಅಡಿಗೆ = ತನ್ನ ಬಂಧು ಬಳಗದವರೆಲ್ಲರನ್ನು ಕುರಿತು ಮತ್ತಷ್ಟು, ಬಹಳಷ್ಟು; ಬೆಸಗೊಳಲು = ಪ್ರಶ್ನಿಸಲು; ವನಿತೆ = ದಮಯಂತಿಯು ನೋಡಿದಳಾ = ನೋಡಿದಳು ಆ; ಸುದೇವನ = ಸುದೇವನನ್ನು; ಜನನಿಗರುಹಲು = ತಾನು ನೋಡಿದ್ದನ್ನು ಚೈದ್ಯರಾಜನ ಮಹಾರಾಣಿಗೆ ತಿಳಿಸಲು; ಬಂದಳಾ = ರಾಣಿಯು ಬಂದು; ಆ ವಿಪ್ರನನು = ಆ ಬ್ರಾಹ್ಮಣೋತ್ತಮನನ್ನು; ನೀವಾರೆನಲು = ನೀವು ಯಾರೆಂದು ಕೇಳಲು; ನುಡಿದನು ಬಂದ ಸಂಗತಿಯ = ತಾನು ಬಂದ ಕಾರಣವೇನೆಂಬುದನ್ನು ಹೇಳಿದನು.

ದಮಯಂತಿಯು ಸುದೇವನ ಮಾತುಗಳನ್ನು ಆಲಿಸುತ್ತ ಉಕ್ಕಿಬಂದ ದುಃಖದಿಂದ ಕಣ್ಣೀರಿನಲ್ಲಿ ಮುಳುಗಿಹೋದಳು. ಬಳಿಕ ಆ ಬ್ರಾಹ್ಮಣೋತ್ತಮನನ್ನು ಕರೆದುಕೊಂಡು ಹೋಗಿ ಗೌರವಾದರಗಳಿಂದ ಸತ್ಕರಿಸಿ, ತನ್ನ ಬಂಧು ಬಳಗದವರನ್ನೆಲ್ಲರನ್ನೂ ಕುರಿತು ಮತ್ತೆ ಮತ್ತೆ ಕೇಳಿ ತಿಳಿದುಕೊಂಡಳು. ಹಾಗೆಯೇ ಪ್ರಶ್ನಿಸುತ್ತ ಆ ಬ್ರಾಹ್ಮಣೋತ್ತಮನನ್ನು ಕುರಿತು ಮಹಾರಾಣಿಗೆ ತಿಳಿಸಲು, ಅವಳು

ಬಂದು ನೀವು ಯಾರು ಎಂದು ಕೇಳಲು ಅವನು ವಿವರವಾಗಿ ತಾನು ಬಂದ ಕಾರಣವೇನೆಂಬುದನ್ನು ಹೇಳತೊಡಗಿದನು.

30. ಕೇಳು ತಾಯೆ ವಿದರ್ಭಪತಿ ಭೂ
ಪಾಲನಾತ್ಮಜೆ ಪತಿಯೊಡನೆ ತ
ನ್ನಾಲಯವನುಳಿದು ವನಕೈದಿದಳೆನಲು ನೃಪ ಕೇಳಿ
ತಾಳಲಾರದೆ ನೋಡಿ ಕರೆತರ
ಹೇಳಿ ಕಳುಹಲು ಬಂದೆನಿಲ್ಲಿಗೆ
ಬಾಲೆ ದಮಯಂತಿಯಳ ಕಂಡೆನೆನುತ್ತ ಕೈಮುಗಿದ

ಕೇಳು ತಾಯೆ = ಆಲಿಸು ತಾಯೀ; ವಿದರ್ಭಪತಿ = ವಿದರ್ಭದೇಶದ ರಾಜ; ಭೂಪಾಲನ + ಆತ್ಮ + ಜೆ = ಮಗಳು; ಪತಿಯೊಡನೆ = ತನ್ನ ಪತಿಯೊಂದಿಗೆ; ತನ್ನ + ಆಲಯವನು + ಉಳಿದು = ತನ್ನ ಅರಮನೆಯನ್ನು ತೊರೆದು; ವನಕೆ + ಐದಿದಳು + ಎನಲು = ವನಾಂತರಕ್ಕೆ ತೆರಳಿದಳು ಎಂದು ಹೇಳಲು; ನೃಪಕೇಳಿ = ಅದನ್ನು ಕೇಳಿದ ಅರಸ ಭೀಮನು; ತಾಳಲಾರದೆ = ದುಃಖ ಸಂಕಟಗಳನ್ನು ತಾಳಲಾರದೆ; ನೋಡಿ = ಹುಡುಕಿ; ಕರೆತರಹೇಳಿ ಕಳುಹಲು = ಕರೆದು ತರವಂತೆ ಹೇಳಿ ಕಳುಹಿಸಿರುವುದರಿಂದ; ಬಂದೆನಿಲ್ಲಿಗೆ = ಇಲ್ಲಿಗೆ ಬಂದಿದ್ದೇನೆ. ಬಾಲೆ = ಈ ಹೆಣ್ಣು ಮಗಳು; ದಮಯಂತಿಯಳ = ದಮಯಂತಿಯನ್ನು; ಕಂಡೆನೆನುತ್ತ = ಕಂಡುಹಿಡಿದೆ ಎನ್ನುತ್ತ; ಕೈ ಮುಗಿದ = ರಾಣಿಗೆ ವಿನಯದಿಂದ ಕೈಮುಗಿದನು.

“ಆಲಿಸು ತಾಯೀ, ವಿದರ್ಭದೇಶದ ರಾಜನಾದ ಭೀಮನೃಪಾಲನು, ತನ್ನ ಮಗಳು ಅರಮನೆಯನ್ನು ಬಿಟ್ಟು ಪತಿಯೊಂದಿಗೆ ವನಾಂತರಕ್ಕೆ ತೆರಳಿದಳು ಎಂಬ ವಿಷಯವನ್ನು ಇತರರ ಮೂಲಕ ತಿಳಿದು ಅಪಾರ ಶೋಕದಲ್ಲಿ ಮುಳುಗಿದನು. ಬಳಿಕ ದುಃಖ ಸಂಕಟಗಳನ್ನು ತಾಳಲಾರದೆ ಎಲ್ಲ ಕಡೆಗಳಲ್ಲಿ ಹುಡುಕಿ ಪತ್ತೆಹಚ್ಚಿ ಅವಳನ್ನು ಕರೆತರಬೇಕೆಂದು ಆದೇಶಿಸಿ ನನ್ನನ್ನು ಕಳುಹಿಸಿದನು. ಆ ಕಾರಣ ಇಲ್ಲಿಗೆ ಬಂದಿದ್ದೇನೆ ಮತ್ತು ದಮಯಂತಿಯನ್ನು ಕಂಡೆ” ಎಂದು ರಾಣಿಗೆ ಹೇಳಿ ವಿನಯದಿಂದ ಕೈಮುಗಿದನು.

31. ಕೇಳಿ ಶಿವಶಿವಯೆನುತ ಶೋಕವ
ತಾಳಿ ತೆಗೆದಪ್ಪಿದಳು ಮಗಳೆ ವಿ
ಟಾಳಿಸಿತೆ ಸಿರಿ ರಾಜ್ಯಸಂಪದವೀ ಮಹಾವ್ಯಥೆಯ
ಭಾಳದಲಿ ವಿಧಿ ಬರೆದನೇ ಜನ
ಪಾಲ ನಳನೃಪನೆತ್ತ ಸರಿದನೊ
ಕಾಲಗತಿಯಿಂತಾಯಿತೇ ಹಾಯೆನುತ ಮರುಗಿದಳು

ಕೇಳಿ ಶಿವಶಿವಯೆನುತ = ಈ ಸುದ್ದಿಯನ್ನು ಕೇಳಿ ವಿಸ್ಮಯಾಶ್ಚರ್ಯಗಳಿಂದ 'ಶಿವಶಿವ' ಎಂದು ಉದ್ಗರಿಸುತ್ತ; ಶೋಕವ ತಾಳಿ = ದುಃಖಪೂರಿತಳಾಗಿ; ತೆಗೆದಪ್ಪಿದಳು = ದಮಯಂತಿಯನ್ನು ಸೆಳೆದು ಅಪ್ಪಿಕೊಂಡಳು; ಮಗಳೆ ವಿಟಾಳಿಸಿತೆ = ಮಗಳೆ ಕಳೆದುಹೋಯಿತೆ; ಸಿರಿ = ಸಂಪತ್ತೂ, ರಾಜ್ಯಸಂಪದವೀ = ಸಾಮ್ರಾಜ್ಯ ಭೋಗಭಾಗ್ಯಗಳೆಲ್ಲವೂ; ಈ ಮಹಾವ್ಯಥೆಯ = ಈ ಅಪಾರ ದುಃಖವನ್ನು; ಭಾಳದಲಿ = ಹಣೆಯಲ್ಲಿ; ವಿಧಿ ಬರೆದನೇ = ವಿಧಿಯು ಬರೆದನೇ; ಜನಪಾಲ = ಜನಾಧಿಪತಿಯಾದ; ನಳನೃಪನು + ಎತ್ತ + ಸರಿದನೋ = ನಳಮಹಾರಾಜನು ಎತ್ತ ಕಡೆ ಹೋದನೋ; ಕಾಲಗತಿಯಿಂತಾಯಿತೇ = ನಿಮ್ಮ ಪರಿಸ್ಥಿತಿಯು ಹೀಗಾಯಿತೇ; ಹಾಯೆನುತ = ಹಾ! ಎಂದು ದುಃಖಾತಿಶಯದಿಂದ; ಮರುಗಿದಳು = ಸಂಕಟ ಪಟ್ಟಳು.

ವಿಪ್ರೋತ್ತಮನಾದ ಸುದೇವನಿಂದ ನಿಷಧಾಧಿಪತಿ ನಳನ ಕುರಿತ ಸಮಾಚಾರವನ್ನು, ಅದರಿಂದ ದುಃಖಿತರಾದ ವಿದರ್ಭಾಧಿಪತಿಯ ವಿಚಾರವನ್ನೂ, ದಮಯಂತಿಯು ತಮ್ಮಲ್ಲೇ ಇರುವ ಸಂಗತಿಯನ್ನೂ ತಿಳಿದ ಚೇದಿರಾಜನ ಮಹಾರಾಣಿಯು ದುಃಖ, ವಿಸ್ಮಯಗಳಿಂದ 'ಶಿವಶಿವ' ಎಂದು ಉದ್ಗರಿಸುತ್ತ, ಶೋಕಾರ್ತಳಾಗಿ ತನ್ನೆದುರಿದ್ದ ದಮಯಂತಿಯನ್ನು ಸೆಳೆದು ಪ್ರೀತಿಯಿಂದ ಆಲಂಗಿಸಿಕೊಂಡಳು. "ಮಗಳೆ, ನಿನ್ನ ಅರಸುತನದ ಸುಖ ಸೌಭಾಗ್ಯದ ದಿನಗಳೆಲ್ಲವೂ ಈ ರೀತಿ ಕಳೆದು ಹೋಯಿತೇ! ನಿನ್ನ ಹಣೆಯಲ್ಲಿ ಆ ವಿಧಿ ಇಂತಹ ಕೊರತೆಯನ್ನು ಬರೆದನೇ? 'ಹಾ,' ನಳಮಹಾರಾಜನಾದರೂ ಎತ್ತ ಹೊರಟು ಹೋದನೋ" ಎಂದು ದುಃಖದಿಂದ ಸಂಕಟಪಟ್ಟಳು.

32. ಬಾಲೆ ಬಿಡು ಶೋಕವನು ಭೀಮನೃ
ಪಾಲನರಸಿಗೆ ತಂಗಿ ತಾ ತ
ನ್ನಾಲಯದಿ ಕಡುನೊಂದೆ ಮಗಳೇ ಸಾಕು ನಮ್ಮೊಡನೆ
ಪೇಳದಿಹರೆ ಸುನಂದನೆಗೆ ಸಮ
ಪಾಳಿ ನೀನೆಮಗೆಂದು ತಳ್ಕಿಸಿ
ಪಾಲಿಸಿದಳತಿಕರುಣದಲಿ ದಮಯಂತಿಯನು ಜನನಿ

ಬಾಲೆ ಬಿಡು ಶೋಕವನು = ಮಗಳೇ, ದುಃಖಿಸಬೇಡ; ಭೀಮನೃಪಾಲನ + ಅರಸಿಗೆ = ಭೀಮನೃಪಾಲನ ರಾಣಿಗೆ; ತಂಗಿ ತಾ = ನಾನು ತಂಗಿ; ತನ್ನಾಲಯದಿ = ನನ್ನ ಅರಮನೆಯಲ್ಲಿಯೂ; ಕಡುನೊಂದೆ ಮಗಳೇ = ಬಹಳವಾಗಿ ನೊಂದಿದ್ದೀಯೆ ಮಗಳೇ; ಸಾಕು = ದುಃಖವನ್ನು ಸಾಕುಮಾಡು; ನಮ್ಮೊಡನೆ = ನಮ್ಮೊಂದಿಗೂ; ಪೇಳದಿಹರೆ = ಹೇಳದೇ ಇರುವರೇನು; ಸುನಂದೆಗೆ ಸಮಪಾಳಿ = ನನ್ನ ಮಗಳಾದ ಸುನಂದನೆಗೆ ಸಮಳಾದವಳೇ; ನೀನೆಮಗೆಂದು = ನೀನು ನಮಗೆ ಎಂದು; ತಳ್ಕಿಸಿ = ಆಲಂಗಿಸಿ; ಪಾಲಿಸಿದಳತಿ ಕರುಣದಲಿ = ಪ್ರೀತಿಯನ್ನು ತೋರಿದಳು ಕರುಣಾಪೂರಿತಳಾಗಿ; ದಮಯಂತಿಯನು = ದಮಯಂತಿಯನ್ನು; ಜನನಿ = ಅವಳ ಚಿಕ್ಕತಾಯಿ.

ದಮಯಂತಿಯನ್ನು ಕುರಿತಾದ ಎಲ್ಲ ವಿಷಯಗಳನ್ನು ತಿಳಿದ ಚೇದ್ಯ ಮಹಾರಾಣಿಯು ದಮಯಂತಿಗೆ ಧೈರ್ಯ ಹೇಳಿದಳು. ಮಗಳೇ, ದುಃಖಿಸಬೇಡ. ಭೀಮನೃಪಾಲನ ರಾಣಿಗೆ ನಾನು ತಂಗಿ. ನನ್ನ ಅರಮನೆಯಲ್ಲಿದ್ದುಕೊಂಡು ನೀನು ಬಹಳವಾಗಿ ನೊಂದಿದ್ದೀಯೆ. ಇನ್ನಾದರೂ ನಿನ್ನ ದುಃಖವನ್ನು ಸಾಕುಮಾಡು. ವಿಷಯವೇನೆಂಬುದನ್ನು ನಮ್ಮೊಂದಿಗೂ ಹೇಳದೆ ಇರುವರೇನು? ನೀನೂ ನನ್ನ ಮಗಳಾದ ಸುನಂದೆಯಂತೆಯೇ ಎನ್ನುತ್ತಾ ಅತ್ಯಂತ ಪ್ರೀತಿ ವಾತ್ಸಲ್ಯಗಳಿಂದ ದಮಯಂತಿಯನ್ನು ಸೆಳೆದು ಆಲಂಗಿಸಿಕೊಂಡು ಧೈರ್ಯ ಹೇಳಿದಳು.

33. ಕಿರಿಯ ತಂದೆ ಸುಬಾಹು ಮರುಗಿದ
ವರಕುವರಿ ದಮಯಂತಿ ನಿನ್ನಯ

ಪುರುಷನಿಲ್ಲದೆ ಚಿಂತೆಯಿಂದೆಲ್ಲವನು ನೀ ತೊರೆದು
ಕರಗಿ ಕಂದಿದೆ ಮಗಳೆ ತಾನಿಂ
ತರಿದುದಿಲ್ಲಲ ನಿನ್ನ ಪುರುಷನ
ಕರೆಸಿ ಕೊಡುವೆನು ನಾನು ಚಿಂತಿಸಬೇಡ ನೀನೆಂದ

ಕಿರಿಯ ತಂದೆ = ದಮಯಂತಿಯ ಚಿಕ್ಕಪ್ಪ; ಸುಬಾಹು ಮರುಗಿದ = ಸುಬಾಹುವು ವಿಷಯ ತಿಳಿದು ಮರುಗಿದ; ವರಕುವರಿ ದಮಯಂತಿ = ಮಗಳೇ, ಉತ್ತಮಳೇ ದಮಯಂತಿ; ನಿನ್ನಯ ಪುರುಷನಿಲ್ಲದೆ = ಗಂಡನಿಲ್ಲದೆ; ಚಿಂತೆಯಿಂದೆಲ್ಲವನು = ವ್ಯಥೆಯಿಂದ ಎಲ್ಲ ಸುಖ ಸೌಭಾಗ್ಯಗಳನ್ನು; ನೀ ತೊರೆದು = ನೀನು ತ್ಯಜಿಸಿ; ಕರಗಿ ಕುಂದಿದೆ ಮಗಳೇ = ಸೊರಗಿ ಸಣ್ಣಾಗಿದ್ದೀಯೆ ಮಗಳೇ; ತಾನು + ಇಂತು + ಅರಿದುದಿಲ್ಲಲ = ತನಗೆ ಹೀಗೆಂದು ಅರಿಯಲಾಗದೆ ಹೋಯಿತಲ್ಲ; ನಿನ್ನ ಪುರುಷನ = ನಿನ್ನ ಪತಿಯನ್ನು; ಕರೆಸಿಕೊಡುವೆನು ನಾನು = ನಾನು ಹುಡುಕಿಸಿ ಕೊಡುತ್ತೇನೆ; ಚಿಂತಿಸಬೇಡ ನೀನೆಂದ = ಇದಕ್ಕಾಗಿ ನೀನು ಚಿಂತಿಸದಿರು. ಎಂದು ದಮಯಂತಿಯನ್ನು ಸಮಾಧಾನಿಸಿದನು.

ದಮಯಂತಿಯ ಕಿರಿಯ ತಂದೆಯಾದ ಚೇದಿರಾಜ ಸುಬಾಹುವೂ ವಿಷಯ ವೇನೆಂಬುದನ್ನು ತಿಳಿದುಕೊಂಡು ಪರಿಸ್ಥಿತಿಯ ವಿಷಮತೆಗಾಗಿ, ದಮಯಂತಿಯ ಸ್ಥಿತಿಗಾಗಿ ಮರುಗಿದನು. "ಮಗಳೇ, ಉತ್ತಮಳೇ ದಮಯಂತಿ, ನಿನ್ನ ಪುರುಷನನ್ನು ಕಾಣದೆ ದುಃಖ ಕಳವಳಗಳಿಂದ ಎಲ್ಲ ಸುಖ ಸೌಭಾಗ್ಯಗಳನ್ನು ತ್ಯಜಿಸಿ, ಚಿಂತೆಯಿಂದ ಕೊರಗಿ ಕೃಶಳಾಗಿದ್ದೀಯೆ, ಮಗಳೇ, ವಿಷಯ ಇಂತಿದೆಯೆಂಬುದು ನನ್ನ ಅರಿವಿಗೆ ಬಾರದೆ ಹೋಯಿತು. ಚಿಂತಿಸಬೇಡ ನಿನ್ನ ಪತಿ ಎಲ್ಲೇ ಇದ್ದರೂ ಅವನನ್ನು ಹುಡುಕಿಸಿ ಕರೆತರುತ್ತೇನೆ. ನೀನಿನ್ನು ಸಮಾಧಾನಚಿತ್ತಳಾಗಿರು" ಎಂದು ಭರವಸೆ ನೀಡಿದನು.

34. ತರಳೆ ಬಾರೆಂದೆನುತ ಕಣ್ಣಿನೊ
ಝೊರೆವ ಕಂಬನಿಗಳನು ಸೆರಗಿನೊ
ಝೊರಸಿ ದಮಯಂತಿಯನು ಮನ್ನಿಸಿ ಬಂದನೋಲಗಕೆ
ಕರೆಸಿದನು ಭೂಸುರ ಸುದೇವನ

ನಿರುತ ಮಣಿಭೂಷಣಗಳಿಂದುಪ
ಚರಿಸಿ ಕಳುಹಲು ಬಂದ ಭೀಮನೃಪಾಲನೋಲಗಕೆ

ತರಳೆ = ಮಗೂ; ಬಾರೆಂದೆನುತ = ಇತ್ತ ಬಾರೆಂದು ಕರೆದು; ಕಣ್ಣಿ ನೊಳೊರೆವ = ಕಣ್ಣಿನಿಂದ ಉಕ್ಕಿ ಹರಿಯುತ್ತಿದ್ದ; ಕಂಬನಿಗಳನು = ಕಣ್ಣೀರನ್ನು; ಸೆರಗಿನೊಳೊರಸಿ = ತನ್ನ ಮೇಲುತ್ತರೀಯದ ಅಂಚಿನಿಂದ ಒರೆಸಿ; ದಮ ಯಂತಿಯನ್ನು ಮನ್ನಿಸಿ = ಅವಳಿಗೆ ಔದಾರ್ಯವನ್ನು ತೋರಿಸಿ; ಬಂದನೋಲಗಕೆ = ಆಸ್ಥಾನ ಮಂಟಪಕ್ಕೆ ತೆರಳಿದನು; ಕರೆಸಿದನು ಭೂಸುರ ಸುದೇವನ = ವಿಪ್ರೋತ್ತಮನಾದ ಸುದೇವನಿಗೆ ಬರಹೇಳಿದನು; ನಿರುತ = ಅನರ್ಘ್ಯವಾದ; ಮಣಿಭೂಷಣಗಳಿಂದುಪಚರಿಸಿ = ರತ್ನಾಭರಣಾದಿಗಳನ್ನು ಕೊಟ್ಟು ಸತ್ಕರಿಸಿ; ಕಳುಹಲು = ಕಳುಹಿಸಿಕೊಡಲು; ಬಂದ ಭೀಮನೃಪಾಲನೋಲಗಕೆ= ಸುದೇವನು ಮರಳಿ ವಿದರ್ಭನಗರಕ್ಕೆ ಭೀಮನೃಪಾಲನ ಆಸ್ಥಾನಕ್ಕೆ ಬಂದನು.

ಅನಂತರ ಚೇದಿರಾಜನು ದಮಯಂತಿಯನ್ನುದ್ದೇಶಿಸಿ, 'ಮಗೂ ಇತ್ತ ಬಾ' ಎಂದು ಕರೆದು ಪ್ರೀತಿಯಿಂದ, ಅವಳ ಕಣ್ಣಿಂದ ಉಕ್ಕಿ ಹರಿಯುತ್ತಿದ್ದ ಕಣ್ಣೀರನ್ನು ತನ್ನ ಉತ್ತರೀಯದಿಂದ ಒರೆಸಿ, ಅವಳನ್ನು ಸಮಾಧಾನಿಸಿ, ಆಸ್ಥಾನ ಮಂಟಪಕ್ಕೆ ತೆರಳಿದನು. ಅಲ್ಲಿ ವಿಪ್ರೋತ್ತಮನಾದ ಸುದೇವನಿಗೆ ಕರೆಕಳುಹಿಸಿ, ಅವನಿಗೆ, ಅನರ್ಘ್ಯವಾದ ವಸ್ತು, ರತ್ನಾಭರಣಗಳನ್ನು ನೀಡಿ ಸತ್ಕರಿಸಿ ಗೌರವಪೂರ್ವಕವಾಗಿ ಬೀಳ್ಕೊಟ್ಟನು. ಬಳಿಕ ಸುದೇವನು ಅಲ್ಲಿಂದ ತೆರಳಿ ವಿದರ್ಭನಗರದ ಭೀಮನೃಪನ ಓಲಗ ಶಾಲೆಗೆ ಬಂದನು.

35. ಅರಸ ಕೇಳು ವಿದರ್ಭಪತಿ ಮನ
ಮರುಗುತಿರಲಾ ಸಮಯದಲಿ ಭೂ
ಸುರ ಸುದೇವನು ಬಂದು ಕೈ ಮುಗಿದೆಂದನೀ ಹದನ
ತರುಣಿ ದಮಯಂತಿಯನು ಕಂಡೆನು
ಹರುಷ ಮಿಗಲಾ ಚೈದ್ಯಪುರದಲಿ
ವರಜನನಿ ಚಿಕ್ಕಮ್ಮನಲ್ಲಿಹಳೆಂದನಾ ವಿಬುಧ

ಅರಸ ಕೇಳು = ಧರ್ಮರಾಯನೇ; ವಿದರ್ಭಪತಿ = ಭೀಮನೃಪಾಲನು; ಮನಮರುಗುತಿರಲಾ ಸಮಯದಲಿ = ಮಗಳನ್ನು ನೆನೆದು ಕೊರಗುತ್ತಿರುವಾ ಸಮಯದಲ್ಲಿ; ಭೂಸುರ ಸುದೇವನು ಬಂದು = ವಿಪ್ರೋತ್ತಮನಾದ ಸುದೇವನು ಬಂದು; ಕೈ ಮುಗಿದೆಂದನೀ ಹದನ = ಕೈಮುಗಿದು ಈ ರೀತಿಯಲ್ಲಿ ಹೇಳಿದನು; ತರುಣಿ ದಮಯಂತಿಯನು ಕಂಡೆನು = ಮಗಳು ದಮಯಂತಿಯನ್ನು ನೋಡಿದೆ; ಹರುಷ ಮಿಗಲಾ = ಅತ್ಯಂತ ಸಂತೋಷದಿಂದ; ಆ ಚೈದ್ಯಪುರದಲಿ = ಆ ಚೈದ್ಯನಗರದ; ವರಜನನಿ = ತನ್ನ ಪ್ರೀತಿಯ; ಚಿಕ್ಕಮ್ಮನಲ್ಲಿಹಳೆಂದನಾ ವಿಬುಧ = ಚಿಕ್ಕಮ್ಮನೊಂದಿಗಿದ್ದಾಳೆ ಎಂದು ಹೇಳಿದನು.

ಧರ್ಮರಾಯನೇ ಕೇಳು, ವಿದರ್ಭನಗರಾಧಿಪತಿಯಾದ ಭೀಮನೃಪಾಲನು ತನ್ನ ಮಗಳನ್ನು ನೆನೆದು ದುಃಖವಶನಾಗಿರುತ್ತಿದ್ದ ಆ ಸಮಯದಲ್ಲಿ ವಿಪ್ರೋತ್ತಮನಾದ ಸುದೇವನು ಬಂದು ಕೈಮುಗಿದು, ನಾನು ದಮಯಂತಿಯನ್ನು ಕಂಡೆನು, ಚೈದ್ಯನಗರದ ತನ್ನ ಚಿಕ್ಕಮ್ಮನೊಂದಿಗೆ ಸುಖ ಸಂತೋಷಗಳಿಂದ ಸೌಖ್ಯವಾಗಿದ್ದಾಳೆ ಎಂದು ತಿಳಿಸಿದನು.

36. ಕಂಡು ಮಾತಾಡಿದೆನು ಸತಿಯಳ
ಮಂಡೆ ಮಾಸಿದೆ ಮಲಿನ ವಸನದೆ
ಗಂಡನಗಲಿದ ಚಿಂತೆಯಲಿ ಮುಖ ಬಾಡಿ ದೇಹವನು
ದಂಡಿಸಿದಳನ್ನದಲಿ ಮನ ಮುರಿ
ಗೊಂಡುದಾ ಸತಿಗಿನಿಯನನು ನೆರೆ
ಕಂಡು ಹೇಳುವರಾರೆನುತ ಮರುಗುವಳು ಮನದೊಳಗೆ

ಕಂಡು ಮಾತನಾಡಿದೆನು ಸತಿಯಳ = ದಮಯಂತಿಯನ್ನು ನೋಡಿ ಮಾತಾಡಿಸಿದೆ; ಮಂಡೆ ಮಾಸಿದೆ = ಕೇಶರಾಶಿಯು ಆರೈಕೆಯಿಲ್ಲದೆ ನಿಸ್ತೇಜವಾಗಿದೆ; ಮಲಿನ ವಸನದೆ = ನಿರಾಸಕ್ತಿಯಿಂದ ವಸ್ತ್ರವೂ ಮಲಿನವಾಗಿದೆ; ಗಂಡನಗಲಿದ ಚಿಂತೆಯಲಿ = ಪತಿಯು ಅಗಲಿ ಹೋದನೆಂದು ಚಿಂತಾಕುಲಳಾಗಿ; ಮುಖಬಾಡಿ = ಕಾಂತಿಯುತವಾಗಿದ್ದ ಮುಖವೀಗ ಕಳಾಹೀನವಾಗಿದೆ; ದೇಹವನು = ಶರೀರವನ್ನೂ; ದಂಡಿಸಿದಳನ್ನದಲಿ = ದಂಡಿಸಿದ್ದಾಳೆ ಊಟದಲ್ಲಿಯೂ; ಮನ

ಮುರಿಗೊಂಡುದು = ಮನಸ್ಸಿಲ್ಲದಾಯಿತು; ಸತಿಗಿನಿಯನನು = ಆ ಹೆಣ್ಣುಮಗಳಿಗೆ ತನ್ನ ಪ್ರಿಯ ಪತಿಯನ್ನು; ನೆರೆ ಕಂಡು = ಸರಿಯಾಗಿ ಹುಡುಕಿ ಕರೆತಂದು; ಹೇಳುವರಾರೆನುತ = ಹೇಳುವವರಾದರೂ ಯಾರಿದ್ದಾರೆ ಎನಿಸಿ; ಮರುಗುವಳು ಮನದೊಳಗೆ = ಮನಸ್ಸಿನೊಳಗೊಳಗೇ ದುಃಖಿಸುತ್ತಿದ್ದಾಳೆ.

ಸುದೇವನು ತನ್ನ ಮಾತುಗಳನ್ನು ಮುಂದುವರಿಸಿದನು, "ದಮಯಂತಿ ಯನ್ನು ನಾನು ಹುಡುಕುತ್ತಾ, ಕೊನೆಗೆ ಅವಳನ್ನು ಕಂಡು ಮಾತನಾಡಿಸಿದೆ. ಅವಳು ಕ್ಷೇಮವಾಗಿದ್ದರೂ ಸುಖವಾಗಿಲ್ಲ. ಕೇಶರಾಶಿಯು ಒಪ್ಪಓರಣವಿಲ್ಲದೆ, ಆರೈಕೆಯಿಲ್ಲದೆ ಮಾಸಿಹೋಗಿದೆ. ವಸ್ತ್ರಾದಿಗಳ ಬಗ್ಗೆಯೂ ಅವಳಿಗೆ ನಿರಾಸಕ್ತಿ ಮೂಡಿರುವುದರಿಂದ ಅವಳು ಧರಿಸಿರುವ ವಸ್ತ್ರವೂ ಮಲಿನವಾಗಿದೆ. ಪತಿಯು ತನ್ನನ್ನಗಲಿ ಹೋದ ನೆಂಬುದು ಅವಳನ್ನು ವಿಪರೀತವಾಗಿ ಬಾಧಿಸಿದೆ. ಚಿಂತಾಕುಲಳಾಗಿರುವ ಅವಳ ಮುಖವೀಗ ಕಾಂತಿಹೀನವಾಗಿ ಬಾಡಿಹೋಗಿದೆ. ದೇಹವನ್ನೂ ದಂಡಿಸಿದ್ದಾಳೆ. ನಿದ್ರಾಹಾರಗಳಲ್ಲಿ ಮನಸ್ಸಿಲ್ಲ. ಅವಳಿಗೆ ತನ್ನ ಪ್ರಿಯಪತಿಯನ್ನು ಹುಡುಕಿ ಕರೆತರುವವರಾದರೂ ಯಾರಿದ್ದಾರೆ ಎಂಬ ಕೊರಗು ಮನಸ್ಸಿನೊಳಗೊಳಗೇ ದುಃಖಿ ಸುತ್ತಿದ್ದಾಳೆ."

37. ಕೇಳುತರಸನ ವದನಕಾಂತಿ ವಿ
ಶಾಲವಾದುದು ಮನದಿ ಹರುಷವ
ತಾಳಿ ಹೊಂಪುಳಿವೋಗಿ ಭೀಮನೃಪಾಲ ಕರೆಸಿದನು
ಬಾಲೆಯರ ತನ್ನಾಪ್ತಸಚಿವರ
ಮೇಳದಲಿ ನಿಜಸುತೆಯ ಕರೆತರ
ಹೇಳಿ ರತ್ನಾಭರಣಗಳನ್ನಿತ್ತವರ ಕಳುಹಿದನು

ಕೇಳುತರಸನ = ಸುದೇವನ ಮಾತುಗಳನ್ನು ಕೇಳುತ್ತಿದ್ದಂತೆ ಭೀಮ ನೃಪಾಲನ; ವದನಕಾಂತಿ ವಿಶಾಲವಾದುದು = ಮುಖವು ಕಳೆಗೂಡಿ ಸಂತೋಷ ದಿಂದ ಅರಳಿಕೊಂಡಿತು; ಮನದಿ ಹರುಷವ ತಾಳಿ= ಮನಸ್ಸು ಸಂತೋಷಗೊಂಡು; ಹೊಂಪುಳಿವೋಗಿ = ರೋಮಾಂಚಿತನಾಗಿ; ಭೀಮನೃಪಾಲ ಕರೆಸಿದನು = ಕರೆಕಳುಹಿಸಿದನು; ಬಾಲೆಯರ = ಅರಮನೆಯ ಸ್ತ್ರೀ ಸಂಕುಲವನ್ನೂ; ತನ್ನಾಪ್ತ

ಸಚಿವರ = ಹಿತೈಷಿಗಳಾದ ಮಂತ್ರಿಗಳನ್ನೂ; ಮೇಳದಲಿ = ಸಮೂಹದೊಂದಿಗೆ; ನಿಜಸುತೆಯ = ಮಗಳನ್ನು; ಕರೆತರಹೇಳಿ = ಕರೆದುಕೊಂಡು ಬರಲು ಆದೇಶಿಸಿ; ರತ್ನ + ಆಭರಣಗಳನ್ನಿತ್ತು + ಅವರ = ಅನರ್ಘ್ಯ ಮಣಿರತ್ನಾ ಭರಣಗಳನ್ನು ಉಡುಗೊರೆಯಾಗಿ ಕೊಟ್ಟು, ಅವರುಗಳನ್ನು; ಕಳುಹಿಸಿದನು = ಬೀಳ್ಕೊಟ್ಟನು.

ತನ್ನ ಮಗಳನ್ನು ಕುರಿತು ಸುದೇವನು ನೀಡಿದ ಮಾಹಿತಿಗಳನ್ನು ಕೇಳುತ್ತಿದ್ದಂತೆ ಭೀಮನ ಮುಖವು ಸಂತೋಷದಿಂದ ಅರಳಿ ಕಳೆಗೂಡಿತು. ರೋಮಾಂಚಿತನಾಗಿ ಅರಮನೆಯಲ್ಲಿದ್ದ ಸಂಬಂಧಿತ ಸ್ತ್ರೀ ಸಮೂಹವನ್ನೂ ಆಪ್ತಸಚಿವ ಸಮೂಹವನ್ನೂ ಕರೆಕಳುಹಿಸಿ, ತಕ್ಷಣದಲ್ಲಿಯೇ ತನ್ನ ಮಗಳನ್ನು ಕರೆತರಬೇಕೆಂದು, ಆದೇಶಿಸಿದನು. ಮತ್ತು ಅವರೆಲ್ಲರಿಗೆ ಅನರ್ಘ್ಯವಾದ ಮಣಿರತ್ನಾಭರಣಗಳನ್ನು ಉಡುಗೊರೆಯಾಗಿ ನೀಡಿ ಬೀಳ್ಕೊಟ್ಟನು.

38. ಬಂದರಲ್ಲಿಗೆ ಚೈದ್ಯನೃಪತಿಯ
ನಂದು ಕಾಣಿಸಿಕೊಂಡರವರನು
ಮಂದಿರದ ಸುಕ್ಷೇಮವನು ಕೇಳಿದರೆ ಹೇಳಿದರು
ಇಂದುಮುಖಿ ದಮಯಂತಿಯನು ಕಳು
ಹೆಂದು ಭೀಮನೃಪಾಲ ಹರುಷದೊ
ಳಿಂದು ನಿಮಗುಡುಗೊರೆಗಳನು ಕಳುಹಿದನು ಕೇಳೆಂದು

ಬಂದರಲ್ಲಿಗೆ = ಭೀಮನೃಪಾಲಯದ ಸಚಿವಗಣದವರೆಲ್ಲ ಬಂದರು; ಚೈದ್ಯನೃಪತಿಯನಂದು = ಚೈದ್ಯಪುರದರಸನನ್ನು; ಕಾಣಿಸಿಕೊಂಡರು + ಅವರನು = ಭೇಟಿಮಾಡಿದರು. ಅವರನ್ನು; ಮಂದಿರದ ಸುಕ್ಷೇಮವನು ಕೇಳಿದರೆ ಹೇಳಿದರು = ವಿದರ್ಭನಗರದ ಭೀಮರಾಜನ ಕುಟುಂಬ, ಪರಿವಾರದವರೆಲ್ಲರ ಕ್ಷೇಮ ಸಮಾಚಾರ ಗಳೆಲ್ಲವನ್ನೂ ಕೇಳಿದಾಗ ಎಲ್ಲವನ್ನೂ ಹೇಳಿದರು; ಇಂದುಮುಖಿ ದಮಯಂತಿಯನು = ದಮಯಂತಿಯನ್ನು; ಕಳುಹೆಂದು = ಕಳುಹಿಕೊಡಿ ಎಂದು; ಹರುಷದೊಳಿಂದು = ಈ ದಿನ ಅತ್ಯಂತ ಸಂತೋಷಚಿತ್ತನಾಗಿ; ಭೀಮನೃಪಾಲ = ಭೀಮರಾಜನು; ನಿಮಗುಡುಗೊರೆಗಳನು = ನಿಮಗೆ ಉಡುಗೊರೆಗಳನ್ನು; ಕಳುಹಿದನು ಕೇಳೆಂದು = ಕಳುಹಿಸಿದ್ದಾನೆ ಎಂದು ಹೇಳಿದನು.

ಭೀಮರಾಜನ ಅಪ್ಪಣೆಯಂತೆ ಅವನ ಆಪ್ತ ಸಚಿವರೂ, ಸ್ತ್ರೀಸಮೂಹವೂ ಎಲ್ಲರೂ ಚೈದ್ಯನಗರಿಗೆ ಬಂದು ಅರಸನಾದ ಸುಬಾಹುವನ್ನು ಕಂಡರು. ಸುಬಾಹುವು ಅವರೆಲ್ಲರಿಂದಲೂ ವಿದರ್ಭರಾಜ ಮತ್ತಿತರರ ಕ್ಷೇಮ ಸಮಾಚಾರಗಳನ್ನೆಲ್ಲ ಕೇಳಿ ತಿಳಿದುಕೊಂಡನು. ಬಳಿಕ ಭೀಮರಸನು ತನ್ನ ಮಗಳು ದಮಯಂತಿಯನ್ನು ಕಳುಹಿಸಿ ಕೊಡುವಂತೆ ವಿನಂತಿಸಿರುವುದಾಗಿಯೂ, ತನ್ನ ಮಗಳ ಕ್ಷೇಮ ಚಿಂತನೆ ಯಿಂದ ಕಂಗೆಟ್ಟಿದ್ದ ಅರಸನು ಅವಳು ಚೈದ್ಯಪುರದರಸನಲ್ಲಿರುವುದನ್ನು ತಿಳಿದು ಸಂತೋಷ ಚಿತ್ತನಾದನೆಂದೂ, ತನ್ನ ಕಡೆಯಿಂದ ರಾಜನು ಉಡುಗೊರೆಗಳನ್ನು ಕೊಟ್ಟು ಕಳುಹಿ ಸಿರುವುದಾಗಿಯೂ ತಿಳಿಸಿದರು.

39. ಅರಸ ಕೇಳು ಸುಬಾಹು ಭೂಪತಿ
ಕರೆಸಿದನು ಮಂತ್ರಿಗಳ ಭೀಮನ
ಪುರಕೆ ಪಯಣವ ಮಾಡಿದನು ದಮಯಂತಿಯನು ಕರೆದು
ತರುಣಿ ನೀ ನಮ್ಮಲ್ಲಿ ತಿಂಗಳು
ಹೊರೆದೆ ದೇಹವ ಕಷ್ಟದಲಿಯೆಂ
ದುರುತರದ ಪ್ರೇಮದಲಿ ಕೊಟ್ಟನು ಸಕಲಭೂಷಣವ

ಅರಸ ಕೇಳು = ಆಲಿಸು ಧರ್ಮರಾಯನೇ; ಸುಬಾಹು ಭೂಪತಿ = ಅರಸನಾದ ಸುಬಾಹುವು; ಕರೆಸಿದನು ಮಂತ್ರಿಗಳ = ಮಂತ್ರಿಗಳನ್ನು ಬರಮಾಡಿದನು; ಭೀಮನಪುರಕೆ = ಭೀಮರಾಜನ ವಿದರ್ಭನಗರಿಗೆ; ಪಯಣವ ಮಾಡಿದನು = ತಕ್ಷಣವೇ ಪ್ರಯಾಣ ಮಾಡಿದನು; ದಮಯಂತಿಯನು ಕರೆದು = ದಮಯಂತಿಯನ್ನು ಕರೆದು; ತರುಣಿ ನೀ ನಮ್ಮಲ್ಲಿ = ಮಗಳೇ, ನೀನು ನಮ್ಮ ಮನೆಯಲ್ಲಿ; ತಿಂಗಳು ಹೊರೆದು ದೇಹವ = ತಿಂಗಳು ದಿನಗಳಿದ್ದು ಬಹಳವಾಗಿ ದೈಹಿಕ ಶ್ರಮ ಪಟ್ಟೆ; ಕಷ್ಟದಲಿ + ಎಂದು + ಉರುತರದ; ಕಷ್ಟಪಟ್ಟಿದ್ದೀಯೆ ಎಂದು ಅತಿಶಯವಾದ; ಪ್ರೇಮದಲಿ ಕೊಟ್ಟನು = ಪ್ರೀತಿಯಿಂದ ನೀಡಿದನು, ಸಕಲ ಭೂಷಣವ = ಸಕಲ ಆಭರಣಾದಿಗಳನ್ನು.

ಆಲಿಸು ಧರ್ಮರಾಯನೇ, ಅರಸನಾದ ಸುಬಾಹುವು ತಕ್ಷಣವೇ ಮಂತ್ರಿ ಗಳನ್ನು ಬರಮಾಡಿದನು. ವಿದರ್ಭನಗರಕ್ಕೆ ಪ್ರಯಾಣ ಮಾಡಲನುವಾದನು. ಮತ್ತು

ದಮಯಂತಿಯನ್ನು ಕರೆದು ಮಗಳೇ, ನೀನು ನನ್ನರಮನೆಯಲ್ಲಿ ಬಹಳವಾಗಿ ಶ್ರಮಪಟ್ಟು ದಿನಗಳನ್ನು ಕಳೆದಿದ್ದೀಯೆ ಎಂದು, ಆದರಿಸಿ ಅವಳನ್ನು ಪ್ರೀತಿ ವಾತ್ಸಲ್ಯಗಳಿಂದ ಕರೆದು ಸಕಲಾಭರಣಗಳನ್ನು ನೀಡಿದನು.

40. ತರಿಸಿದನು ದಂಡಿಗೆಯೊಳಗೆ ಕು
ಳ್ಳಿರಿಸಿ ಸತಿಯರ ಗಡಣದಲಿ ಮಂ
ದಿರವ ಹೊರವಂಟರಸನೇರಿದ ಗಜದ ಕಂಧರವ
ಮೆರೆವ ನಾನಾ ವಾದ್ಯರಭಸದಿ
ಕರಿ ತುರಗ ಕಾಲಾಳ ಸಂದಣಿ
ನಡೆತಂದು ಹೊಕ್ಕ ವಿದರ್ಭಪಟ್ಟಣವ

ತರಿಸಿದನು ದಂಡಿಗೆಯೊಳಗೆ ಕುಳ್ಳಿರಿಸಿ = ಅನಂತರ ಸುಬಾಹುವು ಹೆಣ್ಣುಮಕ್ಕಳಿಗೆ ಉಚಿತವಾದ ಪಲ್ಲಕ್ಕಿಯನ್ನು ತರಿಸಿ, ಅದರಲ್ಲಿ ದಮಯಂತಿಯನ್ನು ಕುಳ್ಳಿರಿಸಿ; ಸತಿಯರ ಗಡಣದಲಿ = ಹೆಣ್ಣು ಮಕ್ಕಳ ಸಮೂಹದೊಂದಿಗೆ; ಮಂದಿರವ = ಅರಮನೆಯನ್ನು; ಹೊರವಂಟು + ಅರಸನು + ಏರಿದ = ಹೊರ ಹೊರಡುತ್ತ ಅರಸನು ತಾನೂ ಹತ್ತಿದನು; ಗಜದ ಕಂಧರವ = ಆನೆಯ ಮೇಲೆ ಕುಳಿತು; ಮೆರೆವ = ಮೊಳಗುವ; ನಾನಾ ವಾದ್ಯರಭಸದಿ = ನಾನಾ ವಾದ್ಯ ವೈಭವದಲ್ಲಿ; ಕರಿತುರಗ ಕಾಲಾಳು = ಆನೆ ಕುದುರೆ ಪದಾತಿ; ಸಂದಣಿ + ಉರವಣಿಸೆ = ಗುಂಪು ಗುಂಪಾಗಿ ಮೆರೆಯುತ್ತಿರಲು; ನಡೆತಂದು = ಬಂದು; ಹೊಕ್ಕ ವಿದರ್ಭಪಟ್ಟಣವ = ವಿದರ್ಭನಗರವನ್ನು ಪ್ರವೇಶಿಸಿದನು.

ಚೇದಿನಗರದ ಅರಸನು ಈಗ ಮಹಾ ಸಂಭ್ರಮದಿಂದ ವಿದರ್ಭನಗರಕ್ಕೆ ಹೊರಡಲನುವಾದನು. ವಿಶೇಷ ಪಲ್ಲಕ್ಕಿಯನ್ನು ತರಿಸಿ ಅದರಲ್ಲಿ ದಮಯಂತಿಯನ್ನು ಕುಳ್ಳಿರಿಸಿ, ಅವಳೊಂದಿಗೆ ಸ್ತ್ರೀಸಮೂಹವೊಂದನ್ನು ಮೇಲುಸ್ತುವಾರಿಗೂ ಸಖೀ ಸಾತತ್ಯಕ್ಕೂ ಇರಲೆಂದು ಆದೇಶಿಸಿದನು. ತಾನೂ ಒಂದು ಉತ್ತಮವಾದ ಆನೆಯನ್ನು ತರಿಸಿ ಹತ್ತಿ, ನಾನಾ ವಿಧ ವಾದ್ಯಘೋಷ ಸಮೇತ ವೈಭವಯುತವಾಗಿ ಅರಮನೆಯಿಂದ ಹೊರಟನು. ಜೊತೆಗಿದ್ದ ಆನೆ, ಕುದುರೆ, ಪದಾತಿ ಸೈನ್ಯಗಳು ಈ

ಮೆರವಣಿಗೆಯಲ್ಲಿ ಗುಂಪು ಗುಂಪಾಗಿ ಹೊರಟು ಮೆರೆಯುತ್ತಿರಲು ಸಂಭ್ರಮದಿಂದ ವಿದರ್ಭನಗರವನ್ನು ಪ್ರವೇಶಿಸಿದನು.

41. ದೂತರೈದಿದರೊಸಗೆಯಲಿ ಜನ
ಜಾತ ನಲಿಯಲು ಬಂದು ಬೇಗದಿ
ಭೂತಳೇಂದ್ರಗೆ ಕೈಮುಗಿದು ದಮಯಂತಿ ಬಂದಳೆನೆ
ಮಾತ ಕೇಳಿದನದನು ಬಲಸಂ
ಗಾತಲೈತಂದವರ ಕಂಡತಿ
ಪ್ರೀತಿಯಿಂ ತಕ್ಕೈಸಿ ಕರೆತಂದನು ನಿಜಾಲಯಕೆ

ದೂತರು + ಐದಿದರು + ಒಸಗೆಯಲಿ = ಚೇದಿರಾಜನ ಆಗಮನದ ಮಂಗಲವಾರ್ತೆಯನ್ನು ದೂತರು ಮಹಾರಾಜನಿಗೆ ವರದಿಮಾಡಲು ಹೋದರು; ಜನಜಾತ ನಲಿಯಲು = ನಗರದ ಜನಸಮೂಹವು ಆನಂದದಿಂದ ನಲಿದಾಡಲು; ಬಂದು ಬೇಗದಿ = ತ್ವರೆದಿಂದ ಬಂದು; ಭೂತಳ + ಇಂದ್ರಗೆ = ಭೂಮಂಡ ಲಾಧಿಪತಿಯಾದ ಭೀಮ ನೃಪಾಲನಿಗೆ; ಕೈಮುಗಿದು = ನಮಸ್ಕರಿಸಿ; ದಮಯಂತಿ ಬಂದಳೆನೆ = ದಮಯಂತಿಯು ಆಗಮಿಸಿದಳು ಎಂದು ವರದಿ ಮಾಡಲು; ಮಾತ ಕೇಳಿದನದನು = ಆ ವಾರ್ತೆಯನ್ನು ಕೇಳಿದ ಅರಸನು; ಬಲಸಂಗಾತಲಿ + ಐತಂದು + ಅವರ = ಚತುರಂಗಬಲ, ಅರಮನೆಯ ಪರಿಜನ ಮುಖ್ಯರೆಲ್ಲರ ಸಹಿತವಾಗಿ ಬಂದು ಎಲ್ಲರನ್ನೂ ಎದುರುಗೊಂಡು; ಕಂಡು + ಅತಿಪ್ರೀತಿಯಿಂ = ನೋಡಿ ಅತಿ ಪ್ರೀತಿಯಿಂದ; ತಕ್ಕೈಸಿ = ಆಲಂಗಿಸಿಕೊಂಡು; ಕರೆತಂದನು = ಎಲ್ಲರನ್ನೂ ಸ್ವಾಗತ ಪೂರ್ವಕವಾಗಿ ಕರೆದುಕೊಂಡು ಬಂದನು; ನಿಜಾಲಯಕೆ = ತನ್ನ ಅರಮನೆಗೆ.

ಚೇದಿರಾಜನು ಬಲಾಬಲ ಪರಿಜನ ಸಮೇತ ವಿದರ್ಭನಗರ ಪ್ರವೇಶ ಮಾಡಿದುದನ್ನು ಕಂಡ ಪರಿಜನಮುಖ್ಯರು ಆ ಮಂಗಲವಾರ್ತೆಯನ್ನು ಮಹಾರಾಜ ಭೀಮನಿಗೆ ವರದಿ ಮಾಡಲು ಬಂದರು. ಜನಸಮೂಹವು ದಮಯಂತಿಯ ಆಗಮನವನ್ನು ಕಂಡೊಡನೆ ಹರ್ಷೋದ್ಗಾರದಿಂದ, ಸಂಭ್ರಮದಿಂದ ನಲಿದಾಡು ತ್ತಿರಲು, ಭೀಮನ ದೂತರು ಅವನಲ್ಲಿಗೆ ಸಂಭ್ರಮದಿಂದ ಅವಸರವಸರವಾಗಿ ಬಂದು ಕೈಮುಗಿದು ನಮಸ್ಕರಿಸಿ ದಮಯಂತಿಯ ಆಗಮನವನ್ನು ವರದಿ

ಮಾಡಿದರು. ಆ ಶುಭಸಮಾಚಾರವನ್ನು ಆಲಿಸಿದ ಭೀಮನೃಪಾಲನು ತನ್ನ ಚತುರಂಗಬಲ, ಅರಮನೆಯ ಪರಿಜನ ಮುಖ್ಯರು ಮತ್ತಿತರ ಎಲ್ಲ ರೀತಿಯ ಕುಟುಂಬ ಮುಖ್ಯರೊಂದಿಗೆ ಬಂದು ಎಲ್ಲರನ್ನೂ ಎದುರುಗೊಂಡು, ಸಂತೋಷ ಚಿತ್ತನಾಗಿ ಅತಿ ಪ್ರೀತಿಯಿಂದ ಆಲಂಗಿಸಿಕೊಂಡು ಸ್ವಾಗತಪೂರ್ವಕವಾಗಿ ಅರಮನೆ ಯೊಳಗೆ ಕರೆದುಕೊಂಡು ಹೋದನು.

42. ಅವನಿಪತಿ ಕೇಳಾ ಪುರದೊಳು
ತ್ಸವವನದನೇನೆಂಬೆನಂದಿನ
ದಿವಸದೊಳಗರಮನೆಯೊಳಾ ದಮಯಂತಿಯನು ಜನನಿ
ತವಕದಿಂ ಬಿಗಿಯಪ್ಪಿದಳು ಬಾಂ
ಧವರು ಸಂತೋಷಿಸಿದರನಿಬರು
ಯುವತಿಯರು ನಿಜತನಯರಾಲಿಂಗಿಸಿದರಂಗನೆಯ

ಅವನಿಪತಿ ಕೇಳಾ = ಅವನಿಪತಿ ಧರ್ಮರಾಯನೇ ಕೇಳು; ಆ ಪುರದೊಳು + ಉತ್ಸವವನು + ಅದನು + ಏನೆಂಬೆನು + ಅಂದಿನ = ವಿದರ್ಭನಗರದ ವಿಜೃಂಭಣೆ, ಸಂಭ್ರಮೋತ್ಸಾಹಗಳನ್ನು ಏನೆಂದು ವರ್ಣಿಸಲಿ, ಅಂದಿನ; ದಿವಸದೊಳಗೆ + ಅರಮನೆಯೊಳು + ಆ = ಅಂದು ಆ ಅರಮನೆಯಲ್ಲಿ; ದಮಯಂತಿಯನು ಕಂಡು = ದಮಯಂತಿಯನ್ನು ಕಂಡು; ಜನನಿ = ಅವಳ ತಾಯಿಯು; ತವಕದಿಂ = ಅತ್ಯಂತ ಉತ್ಸಾಹ, ಆವೇಗಗಳಿಂದ; ಬಿಗಿಯಪ್ಪಿದಳು = ಬಿಗಿಯಾಗಿ ಆಲಂಗಿಸಿಕೊಂಡಳು; ಬಾಂಧವರು = ನೆಂಟರು; ಬಳಗ ಬಾಂಧವರು = ಅಲ್ಲಿದ್ದ ಬಂಧು ಬಾಂಧವರೆಲ್ಲರೂ; ಸಂತೋಷಿಸಿದರನಿಬರು = ಎಲ್ಲರೂ ಅವಳನ್ನು ಕಂಡು ಸಂತೋಷಿಸಿದರು; ಯುವತಿಯರು = ಅರಮನೆಯ ಸ್ತ್ರೀಪರಿವಾರವೂ; ನಿಜತನಯರು + ಆಲಿಂಗಿಸಿದರು + ಅಂಗನೆಯ = ದಮಯಂತಿಯ ಮಕ್ಕಳೂ ಸಹ ಪ್ರೀತ್ಯಾದರಗಳಿಂದ ತಮ್ಮ ತಾಯಿಯನ್ನು ಕಂಡು ಬಂದು ತಬ್ಬಿಕೊಂಡರು.

ಧರ್ಮರಾಯನೇ ಕೇಳು, ದಮಯಂತಿಯನ್ನು ಕಾಣದೆ ಹತಾಶನಾಗಿ ದುಃಖಾತಿಶಯದಿಂದ ಕಳವಳಿತರಾಗಿದ್ದ ಅರಮನೆಯ ಪರಿಜನರು ಹಾಗೂ ಪುರದ

ನಾಗರಿಕರು ದಮಯಂತಿಯ ಆಗಮನವನ್ನು ಕಂಡರು. ಆ ಸಂದರ್ಭದಲ್ಲಿ ವಿದರ್ಭನಗರದ ವಿಜೃಂಭಣೆ, ಸಂಭ್ರಮೋತ್ಸಾಹಗಳ ಪರಿಯನ್ನು ಏನೆಂದು ವರ್ಣಿಸಲಿ, ಅರಮನೆಯಲ್ಲಿ ಈ ಸಂಭ್ರಮ ಇಮ್ಮಡಿಯಾಗಿತ್ತು. ಅವಳನ್ನು ಕಂಡ ತಕ್ಷಣ ತಾಯ ಹೃದಯ ಹರ್ಷಾನಂದದಿಂದ ಉಬ್ಬಿಹೋಯಿತು. ಅವಳು ಬಂದು ತವಕದಿಂದ, ಉತ್ಸಾಹ, ಆವೇಗಗಳಿಂದ ದಮಯಂತಿಯನ್ನು ಬಿಗಿಯಪ್ಪಿದಳು. ನೆಂಟರು, ಬಂಧುಬಾಂಧವರೂ ಸಹಾ ಅವಳನ್ನು ಕಂಡು ಸಂತೋಷಿಸಿದರು. ಅರಮನೆಯ ಸ್ತ್ರೀಪರಿವಾರವೂ, ದಮಯಂತಿಯ ಮಕ್ಕಳೂ ಅವಳನ್ನು ಪ್ರೀತ್ಯಾದರ ಗಳಿಂದ ಕಂಡು ತಬ್ಬಿಹಿಡಿದು ತಮ್ಮ ಅಗಲಿಕೆಯ ನೋವನ್ನು ನೀಗಿಕೊಂಡರು.

43. ಮಗನ ನೋಡಿದಳಿಂದ್ರಸೇನನ
ತೆಗೆದು ತಕ್ಕೈಸಿದಳು ಕರೆದಳು
ಮಗಳ ಚಂದ್ರಾಸ್ಯಳನು ತೊಡೆಯೊಳಗಿಟ್ಟು ಮಮತೆಯಲಿ
ಮೊಗವನೀಕ್ಷಿಸಿ ಮೊಲೆಗಳಲಿ ತೊರೆ
ದುಗುವ ಹಾಲಿನ ಜನನಿ ಮಿಗೆ ನೀ
ರೊಗುವ ಕಣ್ಣೀರಿನಲಿ ಸಂತೈಸಿದಳು ನಿಜಸುತರ

ಮಗನ ನೋಡಿದಳು + ಇಂದ್ರಸೇನನ = ದಮಯಂತಿಯು ತನ್ನ ಮಗನಾದ ಇಂದ್ರಸೇನನನ್ನು ನೋಡಿದಳು; ತೆಗೆದು ತಕ್ಕೈಸಿದಳು = ಧಾವಿಸಿ ಮಗನನ್ನು ತೆಕ್ಕೆಯಲ್ಲಿ ಅಪ್ಪಿಕೊಂಡಳು; ಕರೆದಳು ಮಗಳು ಚಂದ್ರಾಸ್ಯಳನು = ಮಗಳು ಚಂದ್ರಾಸ್ಯಳನ್ನು ಪ್ರೀತಿಯಿಂದ ತನ್ನತ್ತ ಬಾರೆಂದು ಕರೆದಳು; ತೊಡೆಯೊಳಗಿಟ್ಟು ಮಮತೆಯಲಿ = ಮಗುವನ್ನೆತ್ತಿಕೊಂಡು ತನ್ನ ಮಡಿಲಲ್ಲಿಟ್ಟುಕೊಂಡು, ಪ್ರೀತಿ ವಾತ್ಸಲ್ಯಗಳಿಂದ; ಮೊಗವನೀಕ್ಷಿಸಿ = ಮಗುವಿನ ಮುಖವನ್ನು ನೋಡಿ ಮುದ್ದಿಸಿ; ಮೊಲೆಗಳಲಿ ತೊರೆದುಗುವ ಹಾಲಿನ = ಮೊಲೆಗಳಲಿ ಉಕ್ಕಿ ಹರಿಯುವ ಹಾಲಿನ; ಜನನಿಮಿಗೆ = ತಾಯ್ತನವು ಅಧಿಕವಾಗಿ ಪ್ರಕಟಗೊಳ್ಳಲು; ನೀರೊಗುವ = ಉಕ್ಕಿ ಹರಿವ; ಕಣ್ಣೀರಿನಲಿ = ಕಣ್ಣೀರಿನೊಂದಿಗೆ; ಸಂತೈಸಿದಳು ನಿಜಸುತರ = ತನ್ನ ಮಕ್ಕಳನ್ನು ಸಮಾಧಾನಿಸಿದಳು.

ಬಳಿಕ ದಮಯಂತಿಯು ತನ್ನ ಮಕ್ಕಳೆಡೆ ಗಮನ ಹರಿಸಿದಳು. ಅವರತ್ತ ನೋಡಿ ಧಾವಿಸಿ ಬಂದು ತನ್ನ ಮಗ ಇಂದ್ರಸೇನನನ್ನು ಅಪ್ಪಿಕೊಂಡಳು. ಮಗಳು ಚಂದ್ರಾಸ್ಯಳನ್ನು ತನ್ನತ್ತ ಬಾರೆಂದು ಕರೆದು ಪ್ರೀತಿಯಿಂದ ಮುದ್ದಿಸಿ ಮಡಿಲಲ್ಲಿ ಮಲಗಿಸಿಕೊಂಡು ತಾಯ ವಾತ್ಸಲ್ಯದಿಂದ ಮೊಲೆಗಳಲ್ಲಿ ಹಾಲು ಉಕ್ಕಿ ಹರಿಯುತ್ತಿರಲು, ಸಹಜ ತಾಯ್ತನದ ಭಾವ ಉಕ್ಕಲು ಕಣ್ಣುಗಳಿಂದ ಚಿಮ್ಮಿ ಹರಿವ ಕಣ್ಣೀರಿನೊಂದಿಗೆ ಮಕ್ಕಳನ್ನು ಸಮಾಧಾನಿಸಿದಳು.

44. ಕಂತುಪಿತನೊಲುಮೆಯಲಿ ಧರಣೀ
ಕಾಂತ ಭೀಮನೃಪಾಲ ಬಾಂಧವ
ಸಂತತಿಯನಾದರಿಸಿ ಕಳುಹಿದನವರನುಚಿತದಲಿ
ಸಂತಸವು ನಿಜಪತಿಯನಗಲಿದ
ಚಿಂತೆಯಲಿ ಮನಗುಂದಿದಳು ದಮ
ಯಂತಿ ನೆನೆಯುತಲಿರ್ದಳಾ ವರಪುರದ ಚೆನ್ನಿಗನ

ಕಂತುಪಿತನೊಲುಮೆಯಲಿ = ಮನ್ಮಥನ ತಂದೆಯಾದ ಮಹಾವಿಷ್ಣುವಿನ ಪ್ರೀತಿ ದಯೆಗಳಿಂದ; ಧರಣೀಕಾಂತ ಭೀಮನೃಪಾಲ = ಭೂಮಂಡಲಾಧೀಶನಾದ ಭೀಮನೃಪಾಲನು; ಬಾಂಧವ ಸಂತತಿಯನಾದರಿಸಿ = ತನ್ನ ಅರಮನೆಯಲ್ಲಿ ಸೇರಿದ್ದ ಬಂಧು ಬಾಂಧವರೆಲ್ಲರನ್ನೂ ಗೌರವಾದರಗಳಿಂದ ಸತ್ಕರಿಸಿ; ಕಳುಹಿದನು + ಅವರನು + ಉಚಿತದಲಿ = ಅವರವರ ಯೋಗ್ಯತಾನುಸಾರವಾಗಿ ಸನ್ಮಾನಿಸಿ ಕಳುಹಿಸಿಕೊಟ್ಟನು; ಸಂತತವು = ಬಹಳ ದಿನಗಳಿಂದಲೂ; ನಿಜಪತಿಯನಗಲಿದ = ತನ್ನ ಪತಿಯನ್ನು ಅಗಲಿದ; ಚಿಂತೆಯಲಿ = ಬೇಗುದಿಯಲ್ಲಿ; ಮನಗುಂದಿದಳು = ಮನಸ್ಸಿನಲ್ಲಿದ್ದ ಸಂತೋಷ, ಸಂಭ್ರಮಗಳನ್ನು ಕಳೆದುಕೊಂಡು ಎದೆಗುಂದಿದಳು; ದಮಯಂತಿ = ದಮಯಂತಿಯು; ನೆನೆಯುತಿರ್ದಳಾ = ಧ್ಯಾನಸ್ಥಳಾಗಿ ಮನದೊಳಗೆ ನೆನೆಯುತ್ತಿದ್ದಳು; ಆ ವರಪುರದ ಚೆನ್ನಿಗನ = ವರಪುರದ ಚೆನ್ನಿಗರಾಯನನ್ನು.

ಮಹಾವಿಷ್ಣುವನ್ನು ಸದಾಕಾಲ ಪ್ರಾರ್ಥಿಸುತ್ತಿದ್ದ ಭೀಮನೃಪಾಲನ ಮೇಲೆ ದೇವರ ಪ್ರೀತಿಪೂರ್ವಕ ಆಶೀರ್ವಾದಗಳಿದ್ದುದರಿಂದ, ಭೂಮಂಡಲಾಧೀಶನಾದ

ಅವನು ತನ್ನ ಅರಮನೆಯಲ್ಲಿ ಸೇರಿದ್ದ ತನ್ನ ಸಕಲ ಬಂಧು ಬಾಂಧವರನ್ನೆಲ್ಲ ಪ್ರೀತಿಪೂರ್ವಕವಾಗಿ ಸತ್ಕರಿಸಿ, ಅವರವರಿಗೆ ಉಚಿತವಾದ ರೀತಿಯಲ್ಲಿ ಸನ್ಮಾನಿಸಿ ಅವರುಗಳನ್ನು ಬೀಳ್ಕೊಟ್ಟನು. ಅರಮನೆಯಲ್ಲಿ ಈ ರೀತಿ ಸಮಸ್ತ ಪರಿಜನವೂ ಸಂಭ್ರಮ, ವಿಜೃಂಭಣೆಗಳಲ್ಲಿ ತಲ್ಲೀನವಾಗಿದ್ದರೂ ದಮಯಂತಿಯು ಮಾತ್ರ ತನ್ನ ಪ್ರಿಯಪತಿಯನ್ನಗಲಿದ ಬೇಗುದಿಯಲ್ಲಿ ನಿರಂತರವಾಗಿ ನವೆಯುತ್ತ, ಅವನನ್ನು ಕಾಣದೆ ಚಿಂತೆಯಿಂದ ಧೈರ್ಯಗೆಟ್ಟು ವರಪುರದ ಚೆನ್ನಿಗರಾಯನ ಧ್ಯಾನದಲ್ಲಿದ್ದಳು.

ಎಂಟನೆಯ ಸಂಧಿ

ಸುರರ ದುಂದುಭಿ ಮೊಳಗೆ ಧರಣೀ
ಸುರರುಲಿಯೆ ಮುರಹರನ ಕರುಣದಿ
ತರುಣಿ ದಮಯಂತಿಯಳನೊಡಗೂಡಿದನು ನಳನೃಪತಿ

ಸುರರ = ದೇವಲೋಕದ; ದುಂದುಭಿ ಮೊಳಗೆ = ದಂದುಭಿ ಇತ್ಯಾದಿ ವಾದ್ಯಗಳು ಮೊಳಗಲು; ಮುರಹರನ = ಮುರನೆಂಬ ರಾಕ್ಷಸನನ್ನು ಕೊಂದ ಕೃಷ್ಣನ; ಕರುಣದಿ = ದಯೆಯಿಂದ; ತರುಣಿ ದಮಯಂತಿಯ + ಒಡಗೂಡಿದನು = ದಮಯಂತಿಯೊಂದಿಗೆ ಸಮಾಗಮವನ್ನು ಹೊಂದಿದನು; ನಳನೃಪತಿ = ನಳಮಹಾ ರಾಜ.

ಮುರಹರನಾದ ಕೃಷ್ಣನ ಕೃಪಾಕಟಾಕ್ಷದಿಂದ ನಳ ಮಹಾರಾಜನಿಗೆ ತನ್ನ ಪತ್ನಿಯಾದ ದಮಯಂತಿಯೊಂದಿಗೆ ಸಮಾಗಮವಾಯಿತು. ಸಂತೋಷ ಸಂಭ್ರಮ ಸೂಚಕವಾಗಿ ದೇವದುಂದುಭಿಗಳು ಮೊಳಗಿದುವು.

1. ಕೇಳಿದೈ ರಾಜೇಂದ್ರ ಧರ್ಮನೃ
ಪಾಲ ತೊರೆದಳು ಸಕಲ ವಿಭವವ
ಧೂಳಿ ಮುಸುಕಿದ ಮುಡಿಯ ಮಾಸಿದ ವಸನಗಳ ನೋಡಿ
ಕೇಳಿದಳು ಪೂರ್ವೋತ್ತರವ ಭೂ
ಪಾಲನವನಿಯನುಳಿದು ನಿನ್ನವ
ನಾಲಯದೊಳೆಂತಗಲಿದನು ಹೇಳೆಂದಳಾ ಜನನಿ

ಕೇಳಿದ್ಯೆ ರಾಜೇಂದ್ರ ಧರ್ಮನೃಪಾಲ = ರಾಜ ಶ್ರೇಷ್ಠನಾದ ಧರ್ಮರಾಯನೇ ಕೇಳಿದೆಯೇನು?; ತೊರೆದಳು ಸಕಲ ವಿಭವವ = ದಮಯಂತಿಯು ತನ್ನ ರಾಜ ವೈಭವಗಳನ್ನೆಲ್ಲವನ್ನೂ ತ್ಯಜಿಸಿದಳು; ಧೂಳಿ ಮುಸುಕಿದ = ಧೂಳು ಹಿಡಿದ; ಮುಡಿಯ = ಕೇಶದ; ಮಾಸಿದ ವಸನಗಳ = ಮಲಿನಗೊಂಡ ಉಡುಗೆಗಳ; ನೋಡಿ ಕೇಳಿದಳು ಪೂರ್ವೋತ್ತರವ = ಅಲ್ಲಿಯವರೆಗೆ ನಡೆದ ಎಲ್ಲ ಸಮಾಚಾರಗಳನ್ನು ಕುರಿತು ವಿಚಾರಿಸಿದಳು; ಭೂಪಾಲನು + ಅವನಿಯನು + ಉಳಿದು = ನಳನು ರಾಜಭ್ರಷ್ಟನಾಗಿ; ನಿನ್ನ + ಅವನು + ಆಲಯದೊಳು + ಎಂದು + ಅಗಲಿದನು = ನಿನ್ನನ್ನು ಅವನು ಅರಮನೆಯಿಂದ ಅಗಲಿದ ಬಗೆ ಹೇಗೆ; ಹೇಳೆಂದಳು + ಆ + ಜನನಿ = ಹೇಳು ಎಂದು ಅವಳ ತಾಯಿ ಕೇಳಿದಳು.

ರಾಜಾಧಿರಾಜನಾದ ಧರ್ಮರಾಯನೇ, ತಂದೆಯ ಅರಮನೆಯನ್ನು ಸೇರಿದ ದಮಯಂತಿಯು ಆನಂತರದ ದಿನಗಳಲ್ಲಿ ಹೇಗಿದ್ದಳೆಂಬುದನ್ನು ಕೇಳಿದೆಯೇನು? ಯಾವ ರೀತಿಯ ಸುಖ, ಸಂತೋಷ ರಾಜವೈಭವಗಳನ್ನು ಬಯಸದೆ ಎಲ್ಲವನ್ನೂ ತ್ಯಜಿಸಿದಳು. ಅವಳು ಆಡಂಬರದ ಉಡುಗೆ ತೊಡುಗೆಗಳತ್ತ ಕಿಂಚಿತ್ತೂ ಗಮನಹರಿಸದೆ ಮಲಿನಗೊಂಡ ಉಡುಗೆಗಳಲ್ಲಿಯೇ ಇರುತ್ತಿದ್ದುದನ್ನೂ, ತನ್ನ ಕೇಶರಾಶಿಯ ಸೌಂದರ್ಯದತ್ತ ಗಮನ ಹರಿಸದೆ ಧೂಳು ಹಿಡಿದ ಮುಡಿಯೊಂದಿಗೇ ಇರುತ್ತಿದ್ದುದನ್ನು ಗಮನಿಸಿದ ಅವಳ ತಾಯಿಯು ನಳಚಕ್ರ ವರ್ತಿಯು ಅವಳನ್ನು ಅಗಲುವ ಪೂರ್ವದಲ್ಲಿಯೂ, ಅಗಲಿದ ನಂತರವೂ ಏನೇನು ಸಮಾಚಾರಗಳು ನಡೆದುವೋ ಅವೆಲ್ಲವನ್ನೂ ವಿವರವಾಗಿ ತಿಳಿದುಕೊಳ್ಳಲು ಬಯಸಿ ದಮಯಂತಿಯನ್ನು ವಿಚಾರಿಸಲಾರಂಭಿಸಿದಳು. ನಳನು ಅವಳನ್ನು ಅಗಲಿದ ಬಗೆಯ ಕುರಿತಂತೆ ವಿವರವಾಗಿ ತಿಳಿಸುವಂತೆ ಕೇಳಿದಳು.

2. ಕಪಟದಲಿ ಪುಷ್ಕರನು ರಾಜ್ಯವ
ನಪಹರಿಸಿದನು ಜೂಜಿನಲಿ ನಳ
ನೃಪತಿ ಸೋತಾರಣ್ಯಕೈದಿದನೊಂದು ವಸ್ತ್ರದಲಿ

ಗುಪಿತದಿಂ ಬರೆ ಮುಂದೆ ಪಕ್ಷಿಗ
ಳುಪಮೆಯಲಿ ಕೊಂಡೊಯ್ಯೆ ವಸನವ
ಕೃಪಣತನದಲಿ ತನ್ನ ಸೀರೆಯೊಳೊಯ್ದನರ್ಧವನು

ಕಪಟದಲಿ = ಮೋಸದಿಂದ; ಪುಷ್ಕರನು, ರಾಜ್ಯವನು + ಅಪಹರಿಸಿದನು = ನಳನ ರಾಜ್ಯಭೋಗಗಳೆಲ್ಲವನ್ನೂ ಕಸಿದುಕೊಂಡನು; ಜೂಜಿನಲಿ = ಪುಷ್ಕರನೊಂದಿಗಿನ ದ್ಯೂತದಲ್ಲಿ; ನಳನೃಪತಿ = ನಳಮಹಾರಾಜನು; ಸೋತು + ಅರಣ್ಯಕೆ + ಐದಿದನು + ಒಂದು ವಸ್ತ್ರದಲಿ = ಅಪಜಯ ಹೊಂದಿ ಅರಣ್ಯಕ್ಕೆ ತೆರಳಿದನು, ಏಕವಸ್ತ್ರಧಾರಿಯಾಗಿ; ಗುಪಿತದಿಂ ಬರೆ = ರಹಸ್ಯವಾಗಿ, ಯಾರಿಗೂ ತಿಳಿಯದಂತೆ ತೆರಳಲು; ಮುಂದೆ = ಅನಂತರ ಮುಂದುವರಿಯುತ್ತಿದ್ದಂತೆ; ಪಕ್ಷಿಗಳು + ಉಪಮೆಯಲಿ = ಪಕ್ಷಿಗಳ ರೂಪದಲ್ಲಿ; ಕೊಂಡು + ಒಯ್ಯೆ = ತೆಗೆದುಕೊಂಡು ಹೋಗಲು; ವಸನವ = ವಸ್ತ್ರವನ್ನು; ಕೃಪಣತನದಲಿ = ಹಾಗಾಗಿ ಜಿಪುಣತನದಿಂದ; ತನ್ನ = ನನ್ನ; ಸೀರೆಯೊಳ್ + ಒಯ್ದನ್ + ಅರ್ಧವನು = ಸೀರೆಯಲ್ಲಿಯೇ ಅರ್ಧಭಾಗವನ್ನು ಹರಿದು ಉಟ್ಟುಕೊಂಡು ಹೋದನು.

ದಮಯಂತಿಯು ತಾಯಿಗೆ ಅತ್ಯಂತ ದುಃಖದಿಂದ ನಡೆದುದೆಲ್ಲವನ್ನೂ ವಿವರವಾಗಿ ತಿಳಿಸಿದಳು. ಪುಷ್ಕರನೊಂದಿಗಿನ ಕಪಟ ದ್ಯೂತದಲ್ಲಿ ಅಪಜಯ ಹೊಂದಿದ ನಳಮಹಾರಾಜನು ತನ್ನ ಸಕಲ ರಾಜ್ಯ, ಭೋಗೈಶ್ವರಾದಿಗಳೆಲ್ಲವನ್ನೂ ಸೋತು, ಪಂಥದ ನಿಯಮದಂತೆ ಉಟ್ಟ ಬಟ್ಟೆಯಲ್ಲಿ ಅರಣ್ಯಕ್ಕೆ ತೆರಳಿದನು. ಅಲ್ಲಿಯೂ ಅವನ ದುರದೃಷ್ಟವು ಪಕ್ಷಿಗಳ ರೂಪದಲ್ಲಿ ಬೆನ್ನಟ್ಟಿ ಬಂದು ಅವು ನಳನು ಉಟ್ಟ ಆ ತುಂಡು ವಸ್ತ್ರವನ್ನೂ ಸೆಳೆದುಕೊಂಡು ಹಾರಿಹೋದುವು. ಹಾಗಾಗಿ ಜಿಪುಣತನದಿಂದ ನನ್ನ ಸೀರೆಯಲ್ಲೇ ಅರ್ಧಭಾಗವನ್ನು ಹರಿದು ಉಟ್ಟುಕೊಂಡು ಹೋಗಬೇಕಾಗಿ ಬಂತು.

3. ಮರೆದು ಮಲಗಿದೆ ರಾತ್ರಿಯಲಿ ಎ
ಚ್ಚರಿಸದೇ ನೃಪ ತೆರಳಿದನು ಕಾ
ತರಿಸಿ ಕಂಬನಿಯೊಳಗೆ ಬಂದೆನು ಚೈದ್ಯನಗರಿಯಲಿ
ಕರುಣಿ ಚಿಕ್ಕಮ್ಮನಲಿ ತಿಂಗಳು
ಹೊರೆದೆನೀ ದೇಹವನು ಇಲ್ಲಿಗೆ
ಕರೆಸಿದಿರಿ ನೀವೆನುತ ಕಂಬನಿದುಂಬಿದಳು ತರಳೆ

ಮರೆದು = ಮೈಮರೆತು; ಮಲಗಿದೆ = ನಿದ್ರಿಸಿದ್ದೆ; ರಾತ್ರಿಯಲಿ ಎಚ್ಚರಿಸದೇ = ಆ ರಾತ್ರಿಯ ಗಾಢನಿದ್ರೆಯಲ್ಲಿದ್ದ ನನ್ನನ್ನು ಎಚ್ಚರಗೊಳಿಸದೆ; ನೃಪ = ನಳಮಹಾರಾಜನು; ತೆರಳಿದನು = ಹೊರಟುಹೋದನು; ಕಾತರಿಸಿ = ಅವನಿಗಾಗಿ ಹಂಬಲಿಸಿ; ಕಂಬನಿಯೊಳಗೆ ಬಂದೆನು = ಹುಡುಕಾಡಿ ದುಃಖದಿಂದ ಬಂದೆನು; ಚೈದ್ಯನಗರಿಯಲಿ = ಚೈದ್ಯನಗರಕ್ಕೆ; ಕರುಣಿ ಚಿಕ್ಕಮ್ಮನಲಿ = ಮಮತಾಮಯಿಯಾದ ಚಿಕ್ಕಮ್ಮನ ಆಸರೆಯಲ್ಲಿ; ತಿಂಗಳು ಹೊರೆದೆನು + ಈ = ತಿಂಗಳವರೆಗೆ ದಿನಗಳನ್ನು ದೂಡಿದೆನು; ಈ ದೇಹವನು = ಈ ದೇಹವನ್ನು ಹೇಗೋ ಪೊರೆದೆನು; ಇಲ್ಲಿಗೆ ಕರೆಸಿದಿರಿ = ಅನಂತರ ನನ್ನನ್ನಿಲ್ಲಿಗೆ ಕರೆಸಿಕೊಂಡಿರಿ; ನೀವು + ಎನುತ = ನೀವು ಎಂದು; ಕಂಬನಿ + ತುಂಬಿದಳು = ಶೋಕದಿಂದ ಕಣ್ತುಂಬಿಕೊಂಡಳು; ತರಳೆ = ದಮಯಂತಿ.

ತನ್ನ ಕಷ್ಟದ ದಿನಗಳನ್ನು ನೆನೆಸಿಕೊಂಡು ಅತೀವ ಶೋಕತಪ್ತಳಾದ ದಮಯಂತಿಯು ನಡೆದುದನ್ನು ಮುಂದುವರಿಸಿ ಹೇಳಿದಳು, “ಅಂದು ರಾತ್ರಿ ಆಯಾಸದಿಂದ ಗಾಢ ನಿದ್ರೆಯಲ್ಲಿ ಮೈಮರೆತು ನಿದ್ರಿಸಿದ್ದ ಸಂದರ್ಭದಲ್ಲಿ ನನ್ನನ್ನು ಎಚ್ಚರಗೊಳಿಸದೆ ನಳಮಹಾರಾಜನು ಆ ಕಾಡಿನಲ್ಲಿಯೇ ನನ್ನನ್ನು ಬಿಟ್ಟು ಹೊರಟುಹೊದನು. ಅವನನ್ನು ಕಾಣದೆ ಅವನಿಗಾಗಿ ಕಾತರಿಸಿ, ಗಾಬರಿಯಿಂದ ಆ ಕಾಡಿನಲ್ಲಿ ಹುಡುಕುತ್ತ ದುಃಖದಿಂದ ಕಂಬನಿ ಸುರಿಸುತ್ತ ಈ ಚೈದ್ಯನಗರವನ್ನು ಹೇಗೋ ಬಂದು ತಲುಪಿದೆ. ದಯಾಮಯಿಯಾದ ಚಿಕ್ಕಮ್ಮನ ಆಸರೆಯಲ್ಲಿ ಈ ದೇಹವನ್ನು ಸಾಕಿದೆ, ಅಷ್ಟರಲ್ಲಿ ನೀವು ನನ್ನನ್ನು ನಿಮ್ಮಲ್ಲಿಗೆ ಕರೆಸಿಕೊಂಡಿರಿ” ಎನ್ನುತ್ತ ದಮಯಂತಿಯು ಮತ್ತೆ ಕಣ್ತುಂಬಿಕೊಂಡು ವಿವರಿಸಲಾರಂಭಿಸಿದಳು.

4. ಏನನೆಂಬೆನು ತನ್ನ ಪುಣ್ಯದ
ಹಾನಿಯನು ಎಲೆ ತಾಯೆ ಲೋಕದ
ಮಾನಿನಿಯೊಳಾರುಂಟು ಎನ್ನವೊಲ್ ತೊಳಲಿ ಬಳಲಿದರು
ದಾನವಾಮರರೊಳಗೆ ಕಾಣೆ ಸ
ಮಾನರನು ನಳನೃಪಗೆಯಿನ್ನಿದ
ಕೇನ ಮಾಡುವೆನೆನುತ ಕಂಬನಿದುಂಬಿದಳು ತರುಣಿ

ಏನನೆಂಬೆನು = ಏನೆಂದು ವಿವರಿಸಲಿ; ತನ್ನ ಪುಣ್ಯದ ಹಾನಿಯನು = ನನ್ನ ಅದೃಷ್ಟದ ಅವಸಾನದ ಕಥೆಯನ್ನು; ಎಲೆ ತಾಯೆ, = ತಾಯೇ; ಲೋಕದ = ಈ ಪ್ರಪಂಚದ, ಮಾನಿನಿಯೊಳು + ಆರುಂಟು = ಸ್ತ್ರೀಯರಲ್ಲಿ ಯಾರಿದ್ದಾರೆ; ಎನ್ನವೊಲ್ = ನನ್ನಂತೆ; ತೊಳಲಿ ಬಳಲಿದವರು = ಅಲೆದು ಆಯಾಸಗೊಂಡವರು; ದಾನವ + ಅಮರರ + ಒಳಗೆ = ದೇವತೆಗಳಲ್ಲಾಗಲೀ, ರಾಕ್ಷಸರಲ್ಲಾಗಲೀ, ಕಾಣೆ = ನಾನು ಕಂಡಿಲ್ಲ, ಸಮಾನರನು = ಸರಿಸಮಾನರನ್ನು; ನಳನೃಪಗೆ + ಇನ್ನು + ಇದಕೆ + ಏನ = ನಳನೃಪನಿಗೆ ಇನ್ನು ಇದಕ್ಕೆ ಏನು; ಮಾಡುವೆನು + ಎನುತ = ನಾನು ತಾನೇ ಏನನ್ನು ಮಾಡಲು ಸಾಧ್ಯ ಎನ್ನುತ್ತ; ಕಂಬನಿ + ತುಂಬಿದಳು ತರುಣಿ = ದಮಯಂತಿಯು ದುಃಖಿಸಿದಳು.

"ಎಲೈ ತಾಯೇ, ನಾನು ಪಟ್ಟ ಕಷ್ಟಗಳನ್ನೂ, ಅನುಭವಿಸಿದ ದುಃಖಗಳನ್ನೂ ಏನೆಂದು ವರ್ಣಿಸಲಿ? ಈ ಪ್ರಪಂಚದಲ್ಲಿ ನನ್ನಂತೆ ಅಲೆದು ಆಯಾಸಗೊಂಡು ದುಃಖಕ್ಕೆ ಒಳಗಾದ ಸ್ತ್ರೀಯರು ಯಾರಿದ್ದಾರೆ? ದೇವ ಸಂಕುಲದಲ್ಲಾಗಲೀ, ರಾಕ್ಷಸರಲ್ಲಾಗಲೀ ನನ್ನಂತೆ ಭಾಗ್ಯಹೀನರನ್ನು ನಾನು ಇಲ್ಲಿಯವರೆಗೆ ಕಂಡಿಲ್ಲ. ಅಂತೆಯೇ ನಳಮಹಾರಾಜನಿಗೆ ಸರಿಸಮಾನರಾದಂಥ ವರನ್ನೂ ನಾನೆಲ್ಲಿಯೂ ಕಂಡಿಲ್ಲ. ಆದರೆ ಈಗಿನ ನನ್ನ ಈ ಸ್ಥಿತಿಗೆ ನಾನಾದರೂ ಏನನ್ನು ಮಾಡಲು ಸಾಧ್ಯ" ಎಂದು ದಮಯಂತಿಯು ತನ್ನ ಕಷ್ಟಗಳನ್ನು ಹೇಳಿಕೊಳ್ಳುತ್ತಲೇ ನಳಮಹಾರಾಜನ ಉತ್ತಮೋತ್ತಮ ಗುಣಶೀಲ ಪರಾಕ್ರಮಗಳನ್ನೂ ನೆನಪಿಸಿಕೊಳ್ಳುತ್ತ ಮತ್ತೆ ಮತ್ತೆ ದುಃಖಕ್ಕೊಳಗಾದಳು.

ಅಂತಹ ಪರಿಸ್ಥಿತಿಯಲ್ಲಿಯೂ ದಮಯಂತಿಯು ನಳಮಹಾರಾಜನ ಉತ್ತಮೋತ್ತಮ ಗುಣಾತಿಶಯಗಳನ್ನು ಕೊಂಡಾಡುತ್ತಿರುವುದು, ಅವನು ತನ್ನನ್ನಗಲಿದ ಕುರಿತಂತೆ ಯಾವ ರೀತಿಯ ಅಪಶಬ್ದಗಳನ್ನೂ ಆಡದಿರುವುದು ಅವಳ ಆರ್ದ್ರ ಹೃದಯ ಸ್ಪಂದನವನ್ನು ನಿದರ್ಶಿಸುತ್ತದೆ.

5. ಆರಿಗೆರಡೆಣಿಸಿದೆನೊ ಹಿರಿಯರ
ಗಾರುಗೆಡಿಸಿದೆನೋ ವೃಥಾ ಮು
ನ್ನಾರ ನೋಂಪಿಗಪಾರವಿಘ್ನವ ಮಾಡಿ ಕೆಡಿಸಿದೆನೊ

ಆರನಳಲಿಸಿದೆನೊ ತಪೋವ್ರತ
ನಾರ ಜರೆದೆನೊ ತನ್ನ ನಿಜಸಂ
ಸಾರವೀ ತೆರನಾಯ್ತು ಶಿವಶಿವಯೆನುತ ಮರುಗಿದಳು

ಆರಿಗೆ + ಎರಡೆಣಿಸಿದೆನೊ = ಯಾರಿಗೆ ನಾನು ಕೇಡೆಣಿಸಿದ್ದೆನೋ; ಹಿರಿಯರ = ಹಿರಿಯರಾದ ಯಾರು ಯಾರಿಗೆ; ಗಾರು + ಕೆಡಿಸಿದೆನೋ = ಒರಟು ಮಾತುಗಳಿಂದ ನಿಂದಿಸಿ ನೋಯಿಸಿದ್ದೆನೋ; ವೃಥಾ = ಕಾರಣವಿಲ್ಲದೆ; ಮುನ್ನೆ + ಆರ = ಈ ಹಿಂದೆ ಯಾರ; ನೋಂಪಿಗೆ + ಅಪಾರ ವಿಘ್ನವ = ವ್ರತಗಳಿಗೆ ಮಹಾ ಹಾನಿಯನ್ನು; ಮಾಡಿ ಕೆಡಿಸಿದೆನೋ = ಮಾಡಿ ಹಾಳುಗೆಡವಿದ್ದೆನೋ; ಆರನು + ಅಳಲಿಸಿದೆನೋ = ಯಾರನ್ನು ದುಃಖಕ್ಕೀಡು ಮಾಡಿದ್ದೆನೋ; ತಪೋವ್ರತನ + ಆರ = ಯಾವ ತಪೋನಿರತರನ್ನು; ಜರೆದೆನೋ = ಬೈದು ಅವಮಾನಿಸಿದ್ದೆನೋ; ತನ್ನ = ನನ್ನ; ನಿಜ ಸಂಸಾರವು + ಈ = ಸುಂದರವಾದ ಸಂಸಾರವು; ಈ ತೆರನು + ಆಯ್ತು = ಈ ರೀತಿಯಾಯಿತು; ಶಿವಶಿವ + ಎನುತ = ಶಿವಶಿವಾ ಎನ್ನುತ್ತ; ಮರುಗಿದಳು = ದುಃಖಿಸಿದಳು.

ದಮಯಂತಿಯು ತನ್ನ ಹಾಗೂ ತನ್ನ ಕುಟುಂಬದ ಅಂದಿನ ಸ್ಥಿತಿಗೆ ತಾನು ಪೂರ್ವಜನ್ಮದಲ್ಲಿ ಮಾಡಿದ ಯಾವ ಕಾರ್ಯಗಳು ಕಾರಣವಾಗಿವೆಯೋ ಎಂದು ದುಃಖಿಸುತ್ತ ಪುನಃ ತನ್ನಿಂದಾದ ಕಾರ್ಯಗಳನ್ನು ವಿಮರ್ಶೆಗೊಡ್ಡಿಕೊಳ್ಳುತ್ತಿದ್ದಾಳೆ. ನಾನು ಯಾರಿಗೆ ಕೇಡೆಣಿಸಿದ್ದೆನೋ, ಯಾವ ಯಾವ ಹಿರಿಯರನ್ನು ಗೌರವಿಸದೆ ಒರಟು ಮಾತುಗಳಿಂದ ನೋವುಂಟು ಮಾಡಿದ್ದೆನೋ, ಕಾರಣವೇ ಇಲ್ಲದೆ ಈ ಹಿಂದೆ ಯಾರ ವ್ರತಗಳಿಗೆ ಮಹಾ ಹಾನಿಯನ್ನುಂಟು ಮಾಡಿದ್ದೆನೋ, ಯಾರು ಯಾರನ್ನು ಎಂತೆಂತಹ ದುಃಖಗಳಿಗೆ ಈಡು ಮಾಡಿದ್ದೆನೋ, ಯಾವ ತಪೋನಿಷ್ಠರ ವ್ರತವನ್ನು ಕೆಡಿಸಿ, ಬೈದು ಅವಮಾನಿಸಿದ್ದನೋ, ಇಂದು ಆ ಎಲ್ಲವೂ ನನ್ನ ಸಂಸಾರವು ಹಾಳು ಬೀಳಲು ಕಾರಣವಾದುವೇ ಶಿವಶಿವಾ ಎಂದು ಮರುಗಿದಳು.

ಇಲ್ಲಿ ಗಮನಿಸಬೇಕಾದ ವಿಶೇಷವೇನೆಂದರೆ, ಪ್ರಾಚೀನ ಕಾವ್ಯಗಳಲ್ಲಿಯ ಸ್ತ್ರೀ ಪಾತ್ರಗಳು ಮತ್ತು ಪುರುಷ ಪಾತ್ರಗಳು ತಮಗೆ ಎದುರಾಗುವ ಸಮಸ್ಯೆಗಳೆಲ್ಲವೂ

ತನ್ನ ಪೂರ್ವಾರ್ಜಿತ ಕರ್ಮ ವಿಶೇಷಗಳಿಂದಲೇ ಘಟಿಸುವಂಥವು ಎಂದು ನಂಬುತ್ತ ಅವುಗಳನ್ನು ಎದುರಿಸಲು ಸಿದ್ಧವಾಗುವ ರೀತಿ. ಹಾಗೆಯೇ ಗಂಡು ಆ ಸಮಸ್ಯೆಗಳೆಲ್ಲವನ್ನೂ ಸಾಮಾಜಿಕ ವಲಯದಲ್ಲಿ ಎದುರಿಸಿದರೆ, ಹೆಣ್ಣು ಆ ಸಮಸ್ಯೆಗಳ ಪರಿಣಾಮಗಳಿಗೆ ಕೌಟುಂಬಿಕ ವಲಯದಲ್ಲಿ ಮುಖಾಮುಖಿ ಯಾಗುವುದು. ಒಂದು ಸಾಮಾಜಿಕ ಬದ್ಧತೆಯಲ್ಲಿ ಗಂಡು-ಹೆಣ್ಣುಗಳ ಗುಣವಿಶೇಷ ಗಳನ್ನು ಕಾವ್ಯಗಳು ಸಾಂಪ್ರದಾಯಿಕಗೊಳಿಸುತ್ತ ಬಂದ ಚಿತ್ರವೂ ಇದಾಗಿದೆ ಎಂಬುದನ್ನು ಲಕ್ಷಿಸಬೇಕು.

6. ಕ್ಷಿತಿಯೊಳೆಲ್ಲಿಹನೋ ಪರಸ್ತ್ರೀ
ರತಿಗೆ ಮನಸೋತನೋ ತಪಸಿನ
ವ್ರತವ ಕೈಕೊಂಡನೋ ದನುಜರ ಬಲೆಗೆ ಸಿಲುಕಿದನೊ
ವಿತಳಕಿಳಿದನೊ ಚೆಲುವಿನಮರಾ
ವತಿಗೆ ನಡೆದನೊ ತೊರೆದು ನಳಭೂ
ಪತಿಯ ಕಾಣೆನು ತನಗೆ ಗತಿಯೇನೆಂದಳಿಂದುಮುಖಿ

ಕ್ಷಿತಿಯೊಳು + ಎಲ್ಲಿ + ಇಹನೋ = ಈ ಭೂಮಿಯ ಯಾವ ಭಾಗದಲ್ಲಿ ಇದ್ದಾನೋ; ಪರಸ್ತ್ರೀ ರತಿಗೆ = ಪರಸ್ತ್ರೀಯರ ಮೋಹದ ಆಕರ್ಷಣೆಗೆ; ಮನಸೋತನೋ = ಮನಸ್ಸನ್ನು ಕೊಟ್ಟನೋ; ತಪಸಿನ ವ್ರತವ = ತಪಶ್ಚರ್ಯೆಯ ವ್ರತವನ್ನು; ಕೈಕೊಂಡನೋ = ಆಚರಿಸುತ್ತಿರುವನೋ; ದನುಜರ ಬಲೆಗೆ = ದುಷ್ಟ ರಾಕ್ಷಸರ ಮಾಯಾವಿತನಕ್ಕೆ; ಸಿಲುಕಿದನೋ = ಸಿಕ್ಕಿಕೊಂಡಿರುವನೋ; ವಿತಳ ಕಿಳಿದನೋ = ಅಧೋಲೋಕಗಳತ್ತ ಇಳಿದಿರುವನೋ; ಚೆಲುವಿನ + ಅಮರಾವತಿಗೆ = ಅಮರಾವತಿಯ ಚೆಲುವಿಗೆ ಮನಸೋತು; ನಡೆದನೋ = ಅಲ್ಲಿಗೆ ನಡೆದನೋ; ತೊರೆದು = ಅವನನ್ನು ಅಗಲಿ; ನಳಭೂಪತಿಯ ಕಾಣೆನು = ನಳಮಹಾರಾಜನು ಎಲ್ಲಿರುವನೆಂದೇ ಅರಿಯದಾಗಿದ್ದೇನೆ; ತನಗೆ = ನನಗೆ; ಗತಿ + ಏನೆಂದಳು + ಇಂದುಮುಖಿ = ಅವನಿಲ್ಲದೆ ಇನ್ನಾರು ಗತಿ ಎಂದು ದಮಯಂತಿಯು ದುಃಖಿ ಸಿದಳು.

ತನ್ನ ಮನದೊಳಗೆ ಅದುಮಿ ಹಿಡಿದಿದ್ದ ಅಪಾರ ದುಃಖ ದುಮ್ಮಾನಗಳನ್ನು ದಮಯಂತಿ ಈಗ ಹೊರಹಾಕುತ್ತಿದ್ದಾಳೆ. "ನನ್ನ ಪತಿಯು ಈಗ ಎಲ್ಲಿದ್ದಾನೋ, ಹೇಗಿರುವನೋ, ಈ ಭೂಮಂಡಲದ ಯಾವ ಭಾಗದಲ್ಲಿ ಇರುವನೋ ಅರಿಯದಾಗಿದೆ. ಯಾರಾದರೂ ಪರಸ್ತ್ರೀಯ ಮೋಹದ ಬಲೆಯಲ್ಲೇನಾದರೂ ಸಿಲುಕಿ ನನ್ನನ್ನು ಮರೆತು ತೊರೆದು ಹೋದನೋ, ಅಥವಾ ಯಾವುದಾದರೂ ರಾಕ್ಷಸರ ಕಪಟಕ್ಕೆ ಸಿಲುಕಿದ್ದಾನೋ, ಅಧೋಲೋಕಕ್ಕೇ ಇಳಿದಿರುವನೋ, ಅಥವಾ ಅಮರಾವತಿಯ ಚೆಲುವಿಗೆ ಮನಸೋತು ಇಹಲೋಕವನ್ನೇ ತ್ಯಜಿಸಿಹೋದನೋ, ಅವನಿಲ್ಲದೆ ಈಗ ನನಗಿನ್ನಾರು ಗತಿ" ಎಂದು ಶೋಕತಪ್ತಳಾದಳು.

7. ಪತಿವಿಹೀನೆಗೆ ಸಲುವುದೇ ಸು
ವ್ರತ ಸುಭೋಜನ ಸೌಖ್ಯ ಸುಖಸಂ
ಗತಿಗಳುಂಟೇ ತಾಯೆ ಭಾವಿಸಿ ನೋಡು ಚಿತ್ತದಲಿ
ಸತಿಯರಿಗೆ ಪತಿದೈವವೆಂದಾ
ಶ್ರುತಿವಚನವಾಡುವುದು ತನಗಾ
ಬಳಿಕ ಗತಿಯಿಲ್ಲೆಂದಳಿಂದುಮುಖಿ

ಪತಿವಿಹೀನೆಗೆ = ಪತಿಯನ್ನು ಕಳೆದುಕೊಂಡವಳಿಗೆ; ಸಲುವುದೇ = ಒಪ್ಪುವುದೇ; ಸುವ್ರತ = ಶುಭಕರವಾದ ವ್ರತಾಚರಣೆಗಳು; ಸುಭೋಜನ = ಒಳ್ಳೆಯ ಸವಿಭೋಜನ; ಸೌಖ್ಯ = ಸುಖ; ಸುಖ ಸಂಗತಿಗಳುಂಟೆ = ಒಳ್ಳೆಯ ಸುದ್ದಿ ಸಮಾಚಾರಗಳಿರಲು ಸಾಧ್ಯವೇ; ತಾಯೆ = ಅಮ್ಮಾ; ಭಾವಿಸಿ ನೋಡು ಚಿತ್ತದಲಿ= ನಿನ್ನೊಳಗೆ ನೀನೇ ಯೋಚಿಸಿ ನೋಡು; ಸತಿಯರಿಗೆ = ಹೆಣ್ಣು ಮಕ್ಕಳಿಗೆ; ಪತಿದೈವವೆಂದು + ಆ = ಪತಿಯೇ ಪ್ರತ್ಯಕ್ಷ ದೈವ ಎಂದು; ಶ್ರುತಿವಚನವು + ಆಡುವುದು = ಆ ವೇದಗಳೇ ನುಡಿದಿವೆ; ತನಗೆ + ಆ = ನನಗೆ ಆ; ಪತಿಯನು + ಅಗಲಿದ = ಪತಿಯನು ಅಗಲಿದ; ಬಳಿಕ = ಅನಂತರದಲ್ಲಿ; ಗತಿಯಿಲ್ಲ + ಎಂದಳು + ಇಂದುಮುಖಿ = ಬೇರೆ ಗತಿಯಿಲ್ಲ ಎಂದಳು ದಮಯಂತಿ.

ತಾಯೇ, ನಿನಗೆ ತಿಳಿಯದುದು ಏನಿದೆ? ನೀನೇ ಯೋಚಿಸಿ ನೋಡು. ಹೆಣ್ಣಿಗೆ ಪತಿಯೇ ಪರದೈವ ಎಂಬುದಾಗಿ ವೇದಗಳೇ ನುಡಿದಿವೆ. ಪತಿಯನ್ನು

ಅಗಲಿದವಳಿಗೆ ಶುಭಕರವಾದ ವ್ರತಾಚರಣೆಗಳು ಒಪ್ಪುವುದೇನು? ಒಳ್ಳೆಯ ಸುಖ, ಸವಿ ಭೋಜನಗಳಾಗಲೀ, ಶುಭ ಸುದ್ದಿಸಮಾಚಾರಗಳಾಗಲೀ, ಸುಖೀ ಜೀವನ ವಿಧಿ ವಿಧಾನಗಳಾಗಲೀ ಸಾಧ್ಯವಿದೇಯೇನು? ಅಂತೆಯೇ ಪತಿಯನ್ನು ಅಗಲಿದ ಬಳಿಕ ನನಗೂ ಬೇರೆ ಗತಿಯಿಲ್ಲ ಎಂದು ದಮಯಂತಿ ಅಳಲಿದಳು.

ಎಲ್ಲ ಸಮಾಜಗಳೂ ತಂತಮ್ಮ ಕಾಲಗತಿಗನುಸಾರವಾಗಿ ಕೆಲಕೆಲವು ರೂಢಿ ಸಂಪ್ರದಾಯಗಳ, ಕಟ್ಟುಕಟ್ಟಳೆಗಳ ನಿಯಮದಡಿಯಲ್ಲಿ ತಮ್ಮ ಬದುಕು ಮತ್ತು ಚಿಂತನ ಕ್ರಮಗಳನ್ನು ಅನುಸರಿಸುವುದೇ ರೂಢಿ. ಅದರಂತೆ ದಮಯಂತಿಯು ಪತಿಯನ್ನು ಅಗಲಿದ ಸತಿಯು ಹೇಗಿರಬೇಕೆಂಬುದರ ಕುರಿತಂತೆ ವೇದಾದಿ ಶ್ರುತಿ ನಿಯಮಗಳು ವಿಧಿಸಿರುವುದನ್ನು ತಾಯಿಯ ಹತ್ತಿರ ಪುನರುಚ್ಚರಿಸುತ್ತಿದ್ದಾಳೆ. ಸ್ತ್ರೀಯನ್ನು ಕುರಿತ ಇಂತಹ ಪಾರಂಪರಿಕ ಚಿಂತನಕ್ರಮ ಕನಕದಾಸರಂತಹ ವಿಚಾರಶೀಲರಲ್ಲೂ ಒಳಮುಖವಾಗಿ ಪ್ರವಿಸುವುದನ್ನು ಗಮನಿಸಬಹುದು.

8. ಧರೆಯೊಳೆಲ್ಲಿಹನೋ ವಿಚಾರಿಸಿ
ಕರೆಸಿಕೊಡು ಎಲೆ ತಾಯೆ ಎನ್ನಯ
ಪುರುಷನಿಲ್ಲದ ಬಳಿಕ ಬಿಡುವೆನು ತನುವನೆಂದೆನಲು
ಮರುಗಿದಳು ಮಗಳೆಂದ ಮಾತಿಗೆ
ಕರಗಿ ಕಂಬನಿದೊಡೆದು ತನ್ನಯ
ಪುರುಷನೊಡನಿಂತೆನಲು ಭೀಮನೃಪಾಲ ಚಿಂತಿಸಿದ

ಧರೆಯೊಳು + ಎಲ್ಲಿಹನೋ = ಈ ಭೂಮಂಡಲದಲ್ಲಿ ಎಲ್ಲಿದ್ದಾನೋ; ವಿಚಾರಿಸಿ = ಹುಡುಕಿಸಿ; ಕರೆಸಿಕೊಡು = ಕರೆತರುವಂತೆ ವ್ಯವಸ್ಥೆಮಾಡು; ಎಲೆ ತಾಯೆ = ತಾಯೇ; ನನ್ನಯ = ನನ್ನ; ಪುರುಷನಿಲ್ಲದ = ಗಂಡನು ಇಲ್ಲದ; ಬಳಿಕ ಬಿಡುವೆನು = ಕಾರಣ ತ್ಯಾಗ ಮಾಡುತ್ತೇನೆ; ತನುವನು + ಎಂದು + ಎನಲು = ದೇಹವನ್ನು ಎಂದು ಹೇಳಲು; ಮರುಗಿದಳು = ಕನಿಕರದಿಂದ ಸಂತಾಪಗೊಂಡಳು; ಮಗಳು + ಎಂದ ಮಾತಿಗೆ = ಮಗಳು ಆಡಿದ ನುಡಿಗಳನ್ನು ಕೇಳಿ; ಕರಗಿ = ಮನಸ್ಸು ದ್ರವಿಸಿ ಹೋಗಿ; ಕಂಬನಿ + ತೊಡೆದು = ಕಣ್ಣೀರನ್ನು ಒರೆಸಿ; ತನ್ನಯ = ತನ್ನ; ಪುರುಷನ + ಒಡನೆ + ಇಂತು + ಎನಲು = ನೃಪಾಲನಾದ ಗಂಡನೊಂದಿಗೆ

ಈ ಕುರಿತು ಚರ್ಚಿಸಲು; ಭೀಮನೃಪಾಲ = ಭೀಮನೃಪಾಲನು; ಚಿಂತಿಸಿದ = ಮುಂದೇನು ಮಾಡುವುದು ಎಂಬುದರ ಕುರಿತು ಆಲೋಚನೆಗೊಳಗಾದನು.

ತನ್ನ ತಾಯಿಯಲ್ಲಿ ನಳನೃಪಾಲನು ಕಾಣದೆ ಹೋದ ಪ್ರಸಂಗದಿಂದ ಮೊದಲುಗೊಂಡು ಅಲ್ಲಿಯವರೆಗೆ ಆದುದೆಲ್ಲವನ್ನೂ ತಿಳಿಸಿದ ದಮಯಂತಿಯು ಅವನನ್ನು ಬಿಟ್ಟು ತಾನು ಉಳಿಯಲಾರಳೆಂದೂ, ಅವನೆಲ್ಲಿದ್ದಾನೆಂಬುದನ್ನು ಹುಡುಕಿಸಿ ಕರೆತರಬೇಕೆಂದು ವಿನಂತಿಸಿದಳು. ಮಗಳ ಜೀವನಕ್ಕಾದ ದುರಂತಗಳನ್ನು ಆಲಿಸಿದ ತಾಯಿಯು ಸಂತಾಪದಿಂದ ಮಗಳ ಕಣ್ಣೀರನ್ನು ಒರೆಸಿ, ಅವಳ ಕುರಿತಾದ ಸಮಸ್ತ ಸಂಗತಿಗಳೆಲ್ಲವನ್ನೂ ಭೀಮನೃಪಾಲನಿಗೆ ಅರುಹಿ, ಅವನನ್ನು ಹುಡುಕಿಸುವ ಕುರಿತು ಚರ್ಚಿಸಲು ಮಗಳಿಗೊದಗಿದ ಕಷ್ಟದ ಕುರಿತು ಭೀಮನು ಆಳವಾದ ಚಿಂತೆಯಲ್ಲಿ ಮುಳುಗಿದನು.

9. ಅರಸ ಕೇಳು ವಿದರ್ಭಭೂಪತಿ
ಕರೆಸಿದನು ಭೂಸುರರನವರಿಗೆ
ಪರಮವಸ್ತುವನಿತ್ತು ಕಳುಹಿದ ನಿಷಧಪತಿಯಿರವ
ಶರಧಿಮೇರೆಯೊಳೆಲ್ಲ ಭೇದಿಸಿ
ಕರೆದು ತಾರೆನಲವರು ಬರುತಿರೆ
ಕರೆಸಿದಳು ದಮಯಂತಿಯವರೊಡನೆಂದಳೀ ಮಾತ

ಅರಸ ಕೇಳು = ಧರ್ಮರಾಯನೇ ಆಲಿಸು; ವಿದರ್ಭಭೂಪತಿ = ವಿದರ್ಭರಾಜಾಧಿಪನಾದ ಭೀಮನೃಪಾಲನು; ಕರೆಸಿದನು = ಹೇಳಿ ಕಳುಹಿಸಿದನು; ಭೂಸುರರನು + ಅವರಿಗೆ = ಭೂಸುರರೆನಿಸಿದ ಬ್ರಾಹ್ಮಣರನ್ನು ಹಾಗೂ ಅವರಿಗೆ; ಪರಮವಸ್ತುವನಿತ್ತು = ಶ್ರೇಷ್ಠವಾದ ವಸ್ತು ವೈವಿಧ್ಯಗಳನ್ನು ದಾನ ಪ್ರದಾನ ಮಾಡಿ; ಕಳುಹಿದ = ಕಳುಹಿಸಿದನು; ನಿಷಧಪತಿಯಿರವ = ನಿಷಧಪತಿಯ ವಾಸ್ತವ್ಯವನ್ನು; ಶರಧಿ ಮೇರೆಯೊಳೆಲ್ಲ = ಸಮುದ್ರ ಪರ್ಯಂತದವರೆಗೂ; ಭೇದಿಸಿ = ಹುಡುಕಾಡಿ; ಕರೆದು ತಾರೆನಲು + ಅವರು = ಕರೆತನ್ನಿ ಎಂದು ಅಪ್ಪಣೆ ಮಾಡಲು; ಅವರು ಬರುತಿರೆ = ಅರಸನಾಜ್ಞೆಯನುಸಾರವಾಗಿ ಅಲ್ಲಿಂದ ಹೊರಟು ಬರುತ್ತಿರಲು;

ಕರೆಸಿದಳು = ಅವರಿಗೆ ಹೇಳಿ ಕರೆಸಿಕೊಂಡಳು; ದಮಯಂತಿ + ಅವರೊಡನೆ + ಎಂದಳು + ಈ ಮಾತ = ದಮಯಂತಿಯು ಅವರೊಂದಿಗೆ ಹೀಗೆ ಹೇಳಿದಳು.

ಮಗಳ ಜೀವನದ ಕುರಿತಂತೆ ಚಿಂತಿತನಾದ ವಿದರ್ಭರಾಜ ಭೀಮನು ತಡಮಾಡದೆ ಭೂಸುರರೆನಿಸಿದ ಬ್ರಾಹ್ಮಣರನ್ನು ಕರೆಸಿ, ಅವರನ್ನು ಉತ್ತಮೋತ್ತಮ ವಸ್ತು ವೈವಿಧ್ಯಗಳಿಂದ ಗೌರವಿಸಿ, ಸಮುದ್ರ ಮೇರೆ ಪರ್ಯಂತ ಹುಡುಕಾಡಿ, ಎಲ್ಲಿದ್ದರೂ ನಿಷಧಾಧಿಪತಿ ನಳನನ್ನು ಪತ್ತೆಹಚ್ಚಿ ಕರೆತರಬೇಕೆಂದು ಆಜ್ಞಾಪಿಸಿದನು. ಅದರಂತೆ ಅವರೆಲ್ಲರೂ ಅರಮನೆಯಿಂದ ಹೊರಬರುತ್ತಿರುವ ಸಂದರ್ಭದಲ್ಲಿ ದಮಯಂತಿಯು ಅವರನ್ನು ತನ್ನೆಡೆಗೆ ಕರೆಸಿಕೊಂಡು ಅವರೊಂದಿಗೆ ಹೀಗೆ ಹೇಳಿದಳು.

10. ನಳನೃಪತಿ ನಿಜರಾಜತೇಜವ
ನುಳಿದು ತಾ ಪ್ರತಿರೂಪುದಾಳಿಹ
ನಿಳೆಯೊಳಗ್ಗದ ಸಭೆಯೊಳಗೆ ನೀವೆಂಬುದೀ ನುಡಿಯು
ಹಳುವದಲಿ ಸತಿಯುಟ್ಟ ಸೀರೆಯ
ಸೆಳೆಯುತರ್ಧವ ಕೊಂಡು ನಾರಿಯ
ಕಳೆದು ಹೋದವರುಂಟೆಯೆನಲುತ್ತರವ ಪೇಳುವನು

ನಳನೃಪನು = ನಳಮಹಾರಾಜನು; ನಿಜರಾಜತೇಜವನು + ಉಳಿದು = ರಾಜನಿಗೆ ಶೋಭಿಸುವ ತೇಜೋಮಯ ಗಂಭೀರ ರೂಪವನ್ನು ಬಿಟ್ಟು; ತಾ = ತಾನು; ಪ್ರತಿರೂಪು + ತಾಳಿಹನು + ಇಳೆಯೊಳು + ಅಗ್ಗದ = ಈ ಭೂಮಂಡಲದ ಸಾಮಾನ್ಯರಲಿ ಸಾಮಾನ್ಯರಂತೆ ಇರುತ್ತಾನೆ ಶ್ರೇಷ್ಠಮಟ್ಟದ; ಸಭೆ ಯೊಳಗೆ = ಜನರು ನೆರೆದಿರುವ ಸಮೂಹಗಳಲ್ಲಿ; ನೀವೆಂಬುದು + ಈ ನುಡಿಯು = ನೀವು ಈ ರೀತಿಯಲ್ಲಿ ನುಡಿಯಬೇಕು; ಹಳುವದಲಿ = ಕಾಡಿನಲ್ಲಿ; ಸತಿಯುಟ್ಟ ಸೀರೆಯ = ಹೆಂಡತಿಯು ಉಟ್ಟಿದ್ದ ಸೀರೆಯಲ್ಲಿ; ಸೆಳೆಯುತ + ಅರ್ಧವ ಕೊಂಡು = ಅರ್ಧಭಾಗವನ್ನು ಹರಿದುಕೊಂಡು; ನಾರಿಯ ಕಳೆದು = ಹೆಂಡತಿಯನ್ನು ಅಲ್ಲಿಯೇ ಬಿಟ್ಟು ಅಗಲಿ; ಹೋದವರುಂಟೆ + ಎನಲು + ಉತ್ತರವ ಹೇಳುವನು =

ಹೋದವರು ಇಲ್ಲಿ ಯಾರಾದರೂ ಇದ್ದಾರೆಯೇ ಎಂದು ಕೇಳಿ. ನಳನು ಅಲ್ಲಿದ್ದಲ್ಲಿ ನಿಮ್ಮ ಪ್ರಶ್ನೆಗೆ ಖುದ್ದಾಗಿ ಉತ್ತರಿಸುತ್ತಾನೆ.

"ನೀವು ನಳನನ್ನು ಹುಡುಕುತ್ತ ಹೋಗುವಾಗ ಒಂದು ವಿಷಯವನ್ನು ಮನಸ್ಸಿನಲ್ಲಿಟ್ಟುಕೊಳ್ಳಿ. ನಳಮಹಾರಾಜನು ನಿಮಗೆ ರಾಜಗಾಂಭೀರ್ಯದ ತೇಜೋ ಮಯ ರೂಪದಲ್ಲಿ ಸಿಗಲಾರ. ಸಾಮಾನ್ಯರಲ್ಲಿ ಸಾಮಾನ್ಯರಂತೆಯೇ ವೇಷತಾಳಿ ರುತ್ತಾನೆ. ಅವನನ್ನು ಹಾಗಿರುವ ವೇಷದಲ್ಲಿ ನೀವು ಸುಲಭವಾಗಿ ಗುರುತಿಸುವುದು ಸುಲಭ ಸಾಧ್ಯವಲ್ಲ. ಆದ್ದರಿಂದ ನೀವು ನಾನು ಹೇಳಿರುವಂತೆ ಶ್ರೇಷ್ಠ ಮಟ್ಟದ ಜನಸಮೂಹದ ನಡುವೆ ಈ ಮಾತುಗಳನ್ನು ಹೇಳಿ, "ಉಡಲು ಬೇರೆ ಬಟ್ಟೆಯಿಲ್ಲದೆ, ಹೆಂಡತಿಯು ಉಟ್ಟ ಸೀರೆಯಲ್ಲಿಯೇ ಅರ್ಧವನ್ನು ಸೆಳೆದು ಹರಿದುಟ್ಟುಕೊಂಡು, ಅವಳನ್ನು ಕಾಡಿನಲ್ಲಿಯೇ ಬಿಟ್ಟಗಲಿರುವವರು ಇಲ್ಲಿ ಯಾರಾದರೂ ಇದ್ದಾರೆಯೇ" ಎನ್ನಿ. ಅಲ್ಲಿ ನಳನಿದ್ದಲ್ಲಿ ಅವನೇ ತಾನಾಗಿಯೇ ನಿಮ್ಮ ಪ್ರಶ್ನೆಗೆ ಉತ್ತರಿಸುತ್ತಾನೆ."

11. ಆ ನುಡಿಯ ತಂದೆನಗೆ ನೀವನು
ಮಾನವಿಲ್ಲದೆ ಪೇಳೆನುತ ಸ
ನ್ಮಾನದಿಂ ಬೀಳ್ಕೊಟ್ಟಳಂಗನೆ ತೆರಳಿದರು ಬಳಿಕ
ಮಾನವೇಂದ್ರರ ಸಭೆಯ ನೋಡಿ ನಿ
ಧಾನಿಸುತ ನಾನಾ ದಿಗಂತ
ಸ್ಥಾನದಲಿ ನಗರಿಗಳ ಭೇದಿಸುತೈದಿದರು ಪಥವ

ಆ ನುಡಿಯ = ಅವನಾಡುವ ಮಾತನ್ನು; ತಂದು + ಎನಗೆ = ಅದರಂತೆಯೇ ನನಗೆ; ನೀವು + ಅನುಮಾನವು + ಇಲ್ಲದೆ = ನೀವು ಯಾವೊಂದು ಅನುಮಾನಗಳಿಗೆ ಆಸ್ಪದವಿಲ್ಲದಂತೆ; ಪೇಳಿ + ಎನುತ = ಹೇಳಿ ಎಂದು ಹೇಳುತ್ತ; ಸನ್ಮಾನದಿಂ = ಅವರನ್ನು ಸನ್ಮಾನಿಸಿ; ಬೀಳ್ಕೊಟ್ಟಳು + ಅಂಗನೆ = ದಮಯಂತಿಯು ಕಳುಹಿಸಿಕೊಟ್ಟಳು; ತೆರಳಿದರು ಬಳಿಕ = ಅವರೆಲ್ಲ ಅಲ್ಲಿಂದ ಹೊರಹೋದರು; ಮಾನವೇಂದ್ರರ ಸಭೆಯ ನೋಡಿ = ಅಲ್ಲಿಂದ ತಾವು ಕಂಡ ಮಹಾಮಹಾರಾಜಾಧಿ ರಾಜರ ಓಲಗಶಾಲೆಗಳನ್ನೂ, ಸಭಾಸಂದರ್ಭಗಳನ್ನೂ ನೋಡಿದರು; ನಿಧಾನಿಸುತ್ತ = ಅತ್ಯಂತ ಸಾವಧಾನದಿಂದ; ನಾನಾ ದಿಗಂತ ಸ್ಥಾನಗಳಲ್ಲಿ = ನಾನಾ ರೀತಿಯಲ್ಲಿ

ದಿಕ್ಕುದಿಕ್ಕುಗಳವರೆಗೂ ಸಾಗಿದರು; ನಗರಿಗಳ = ಹಲವಾರು ನಗರಗಳನ್ನು; ಭೇದಿಸುತ + ಐದಿದರು ಪಥವ = ಹೊಕ್ಕು ಹುಡುಕುತ್ತ ಹಲವೆಡೆಗಳನ್ನು ಸುತ್ತಿದರು.

"ಅವನಾಡುವ ಮಾತುಗಳನ್ನು ಯಾವ ಅನುಮಾನಗಳಿಗೆ ಆಸ್ಪದವಿಲ್ಲ ದಂತೆ ನೀವು ಬಂದು ನನಗೆ ತಿಳಿಸಿ" ಎಂದು ದಮಯಂತಿಯು ಅವರನ್ನು ರಾಜೋಚಿತ ಮರ್ಯಾದೆಗಳೊಂದಿಗೆ ಗೌರವಿಸಿ ಕಳುಹಿಸಿಕೊಟ್ಟಳು. ಆ ಬ್ರಾಹ್ಮಣರು ರಾಜಾಜ್ಞೆಯಂತೆ ನಳಮಹಾರಾಜನನ್ನು ಹುಡುಕುತ್ತ, ವಿವಿಧ ರಾಜಾಸ್ಥಾನಗಳ ಓಲಗ ಶಾಲೆಗಳಲ್ಲಿ, ಮಹಾ ನಗರಿಗಳ ಬೀದಿಬೀದಿಗಳಲ್ಲಿಯ ಮಹಾಜನರ ಸಭೆಗಳಲ್ಲಿ, ಊರು ಹರ ದಾರಿಗಳಲ್ಲಿ, ದಿಕ್ಕುದಿಕ್ಕುಗಳಲ್ಲಿ ಸಾಗಿದರು.

ದಮಯಂತಿಯು ನಳನನ್ನು ಕಳೆದುಕೊಂಡು ದುಃಖಿತಳಾಗಿ ಕಾಡು ಮೇಡುಗಳಲ್ಲಿ ಅನಾಥೆಯಂತೆ ಅಲೆದ ಸಂದರ್ಭದಲ್ಲಿ ಅಬಲೆಯಂತೆ ಕಂಡು ಬಂದರೂ, ವಾಸ್ತವವಾಗಿ ಮಹಾ ಚತುರಳೂ, ಸಂಯಮಿಯೂ, ದೂರದೃಷ್ಟಿಯು ಳ್ಳವಳೂ, ರಾಜತಾಂತ್ರಿಕ ಕುಶಲಿಯೂ ಆಗಿದ್ದಳೆಂಬುದನ್ನು ಇಂತಹ ಅನೇಕ ಸಂದರ್ಭಗಳಲ್ಲಿ ಕವಿ ಗಮನಕ್ಕೆ ತರುತ್ತಾನೆ. ಅವಳ ಧೈರ್ಯದ ನಡೆ ಕಾವ್ಯದುದ್ದಕ್ಕೂ ನಳಮಹಾರಾಜನ ಆಡಳಿತ ಕೌಶಲ್ಯಗಳನ್ನು ಗೌಣವಾಗಿಸುವಷ್ಟು ಶಕ್ತಿಯುತವಾಗಿ ರುವುದನ್ನು ಗಮನಿಸಬಹುದು.

12. ಇಳೆಯಮರರಲ್ಲಲ್ಲಿ ಗಿರಿವನ
ಗಳ ನಿರೀಕ್ಷಿಸಿ ಕೆಲವು ಋಷಿಗಳ
ನಿಳಯಗಳ ನೋಡುತ್ತ ಕಾನನಗಳೆದು ಬೇಗದಲಿ
ಜಲಧಿ ಮೇರೆಯ ಮಧ್ಯದಲಿ ಭೂ
ವಳಯವೆಲ್ಲವ ಶೋಧಿಸುತ ತನು
ಬಳಲಿಕೆಯ ಭಾವಿಸದೆ ನಡೆದರು ಮುಂದೆ ಪಥವಿಡಿದು

ಇಳೆಯ + ಅಮರರ್ + ಅಲ್ಲಲ್ಲಿ = ಬ್ರಾಹ್ಮಣರು; ಅಲ್ಲಲ್ಲಿ ಆ ಸಮಸ್ತ ಭೂಪ್ರದೇಶದಲ್ಲಿದ್ದ; ಗಿರಿವನಗಳ = ಪರ್ವತ, ಅರಣ್ಯಗಳೆಲ್ಲವನ್ನೂ; ನಿರೀಕ್ಷಿಸಿ = ಕಣ್ಣಲ್ಲಿ ಕಣ್ಣಿಟ್ಟು ನೋಡಿ; ಕೆಲವು ಋಷಿಗಳ ನಿಳಯಗಳ ನೋಡುತ್ತ = ಅಲ್ಲಲ್ಲಿ ಇದ್ದ ಕೆಲವು ಋಷ್ಯಾಶ್ರಮಗಳನ್ನು ಬಿಡದೆ ನೋಡುತ್ತ; ಕಾನನಗಳೆದು = ಕಾಡುಗಳನ್ನು

ದಾಟಿ; ಬೇಗದಲಿ = ಬೇಗ ಬೇಗ; ಜಲಧಿ ಮೇರೆಯ ಮಧ್ಯದಲ್ಲಿ = ಸಮುದ್ರ ಪರ್ಯಂತಯಿರುವ; ಭೂವಳಯವೆಲ್ಲವ = ಭೂಭಾಗಗಳೆಲ್ಲವನ್ನೂ; ಶೋಧಿಸುತ = ಹುಡುಕಾಡುತ್ತ; ತನು ಬಳಲಿಕೆಯ = ದೇಹಾಯಾಸವನ್ನು; ಭಾವಿಸದೆ = ಲೆಕ್ಕಿಸದೆ; ನಡೆದರು ಮುಂದೆ = ಮುಂದಕ್ಕೆ ಸಾಗಿದರು; ಪಥವಿಡಿದು = ತಾವು ಸಾಗಬೇಕಿದ್ದ ಮಾರ್ಗದತ್ತ.

ಭೂಸುರರೆನಿಸಿದ ಬ್ರಾಹ್ಮಣರೆಲ್ಲರೂ ಭೀಮನೃಪಾಲನ ಆಜ್ಞಾನುಸಾರ ಭೂಮಿಯ ಸಮಸ್ತ ಭಾಗಗಳಲ್ಲಿ ನಳನೃಪನ ಹುಡುಕಾಟಕ್ಕೆ ತೊಡಗಿದರು. ಬೆಟ್ಟ ಕಾಡುಗಳೆನ್ನದೆ ಎಲ್ಲವನ್ನೂ ಕಣ್ಣಲ್ಲಿ ಕಣ್ಣಿಟ್ಟು ಎಚ್ಚರಿಕೆಯಿಂದ ಹುಡುಕುತ್ತ, ಋಷ್ಯಾಶ್ರಮಗಳನ್ನೂ ಬಿಡದಂತೆ ಎಲ್ಲ ಸ್ಥಳಗಳನ್ನೂ ಸೂಕ್ಷ್ಮವಾಗಿ ಪರೀಕ್ಷಿಸುತ್ತ ನಡೆದರು. ಹಾಗೆಯೇ ಮುಂದು ಮುಂದಕ್ಕೆ ಸಾಗುತ್ತ ಆ ಎಲ್ಲ ಕಾಡು, ಬೆಟ್ಟ ಪ್ರದೇಶಗಳನ್ನೂ ದಾಟಿ ದೇಹಾಯಾಸವನ್ನು ಸ್ವಲ್ಪವೂ ಲೆಕ್ಕಿಸದೆ ತಮ್ಮ ಅನ್ವೇಷಣೆಯ ದಾರಿ ಹಿಡಿದರು.

13. ಮುಂದೆ ಬರುತಿರೆ ಕಂಡರೊಬ್ಬನ
ಸಂದ ಯಾಚಕ ಭೂಸುರನನೆ
ಲ್ಲಿಂದ ಬಂದಿರಿಯೆನಲಯೋಧ್ಯಾನಗರದಿಂದೆನಲು
ಕುಂದದಲ್ಲಿ ವಿಶೇಷವೇನುಂ
ಟೆಂದೆನಲು ಪೇಳಿದನು ಮಖವಹು
ದೆಂದ ವಿಪ್ರನ ಮಾತಿನಿಂದೈದಿದರಯೋಧ್ಯೆಯನು

ಮುಂದೆ ಬರುತಿರೆ = ಹಾಗೆಯೇ ಮುಂದು ಮುಂದಕ್ಕೆ ಸಾಗುತ್ತಿರಲಾಗಿ; ಕಂಡರೊಬ್ಬನ = ಒಬ್ಬನನ್ನು ಕಂಡರು; ಸಂದ ಯಾಚಕ = ತಿರಿದುಣ್ಣುವ; ಭೂಸುರನನು + ಎಲ್ಲಿಂದ = ಬ್ರಾಹ್ಮಣನಾದ ಅವನನ್ನು ವಿಚಾರಿಸಿದರು; ಬಂದಿರಿ + ಎನಲು + ಅಯೋಧ್ಯಾ ನಗರದಿಂದ + ಎನಲು = 'ಎಲ್ಲಿಂದ ಬಂದಿರಿ' ಎಂದು ಕೇಳಲು; ಆ ಬ್ರಾಹ್ಮಣ ಯಾಚಕನು 'ಅಯೋಧ್ಯಾನಗರದಿಂದ' ಎಂದುತ್ತರಿಸಲು; ಕುಂದದೆ + ಅಲ್ಲಿ = ಅಷ್ಟಕ್ಕೇ ಸುಮ್ಮನಾಗದೆ ಅಲ್ಲಿ; ವಿಶೇಷವೇನು + ಉಂಟು + ಎಂದು + ಎನಲು = ಅಲ್ಲಿ ಏನು ವಿಶೇಷ ಎಂದು ಕೇಳಲು; ಹೇಳಿದನು

ಮಖವಹುದು + ಎಂದ = ಅಲ್ಲಿ ಯಾಗ ನಡೆಯುತ್ತಿದೆ ಎಂದು ಹೇಳಿದನು; ವಿಪ್ರನ = ಬ್ರಾಹ್ಮಣನ; ಮಾತಿನಿಂದ + ಐದಿದರ್ + ಅಯೋಧ್ಯೆಯನು = ಮಾತಿನಿಂದ ಅವರೆಲ್ಲರೂ ಅಯೋಧ್ಯೆಗೆ ತೆರಳಿದರು.

ಬ್ರಾಹ್ಮಣರ ಸಮೂಹವು ನಳಚಕ್ರವರ್ತಿಯ ಇರವನ್ನು ಅನ್ವೇಷಿಸುತ್ತಾ ಹಾಗೇ ಮುಂದು ಮುಂದಕ್ಕೆ ತೆರಳುತ್ತಿರಲು ಮಾರ್ಗಮಧ್ಯದಲ್ಲಿ ಒಬ್ಬ ಬ್ರಾಹ್ಮಣ ಯಾಚಕನನ್ನು ಕಂಡರು. ಕುತೂಹಲದಿಂದ ಅವನನ್ನು 'ಎಲ್ಲಿಂದ ಬಂದಿರಿ' ಎಂದು ವಿಚಾರಿಸಲಾಗಿ ಅವನು 'ಅಯೋಧ್ಯೆಯಿಂದ' ಎಂದನು. ಅಷ್ಟಕ್ಕೆ ಸುಮ್ಮನಿರದೆ ಅವರು "ಅಲ್ಲೇನು ವಿಶೇಷ" ಎಂದು ವಿಚಾರಿಸಲು, ಅಲ್ಲಿ ಒಂದು ಯಾಗ ನಡೆಯುತ್ತಿ ರುವುದಾಗಿ ಅವನು ತಿಳಿಸಿದುದರಿಂದ ಪ್ರೇರಿತರಾಗಿ ಅವರೆಲ್ಲರೂ ತಮ್ಮ ಕಾರ್ಯ ಸಿದ್ಧಿಸಬಹುದೆಂದು ಅಯೋಧ್ಯೆಗೆ ತೆರಳಿದರು.

14. ಮರುದಿವಸ ಋತುಪರ್ಣ ಮುನಿಮು
ಖ್ಯರು ಸಹಿತಲೋಲಗದೊಳಿರೆ ಕಂ
ಡರು ಮಹಾಸಭೆಯೊಳಗೆ ಹೊಕ್ಕರು ನಿಂದು ಕೈನೆಗಹಿ
ಹಿರಿಯರಿದೆ ಸಾಮಾಜಿಕರು ಸ
ಚ್ಚರಿತರಿದೆಲಾ ಕೇಳಿ ನೀವೆಂ
ದುರುತರದ ಗಂಭೀರವಾಕ್ಯದೊಳೆಂದನಾ ವಿಪ್ರ

ಮರುದಿವಸ = ಮರುದಿನ; ಋತುಪರ್ಣ = ಋತುಪರ್ಣನು; ಮುನಿಮುಖ್ಯರು = ಪ್ರಧಾನ ಮುನಿಮುಖ್ಯರು; ಸಹಿತಲು + ಓಲಗದೊಳಿರೆ = ಸಹಿತ ಸಭಾಸ್ಥಾನವನ್ನಲಂಕರಿಸಿರಲು; ಕಂಡರು = ನೋಡಿದರು; ಆ ಮಹಾ ಸಭೆಯೊಳಗೆ= ಆ ಮಹಾಸಭೆಯೊಳಗೆ; ಹೊಕ್ಕರು = ಪ್ರವೇಶಿಸಿದರು; ನಿಂದು ಕೈನೆಗಹಿ = ಆ ಸಭೆಯಲ್ಲಿ ಒಬ್ಬನು ಎದ್ದು ನಿಂತು ಕೈಮೇಲಕ್ಕೆತ್ತಿ; ಹಿರಿಯರಿದೆ = ಹಿರಿಯರಿದ್ದೀರಿ; ಸಾಮಾಜಿಕರು = ಜನಸಾಮಾನ್ಯ ಪ್ರಜೆಗಳಿದ್ದೀರಿ; ಸಚ್ಚರಿತರಿದೆಲಾ = ಸಚ್ಚಾರಿತ್ರ್ಯವುಳ್ಳವರಿದ್ದೀರಿ; ಕೇಳಿ = ಆಲಿಸಿ; ನೀವೆಂದು + ಉರುತರದ = ನೀವೆಲ್ಲರೂ ಎಂದು ಅತ್ಯಂತ ಉಚ್ಚಕಂಠದಲ್ಲಿ; ಗಂಭೀರ ವಾಕ್ಯದೊಳು + ಎಂದನು + ಆ ವಿಪ್ರ = ಗಂಭೀರವಾದ ಮಾತುಗಳಲ್ಲಿ ಘೋಷಿಸಿದನು ಆ ಬ್ರಾಹ್ಮಣ.

ಮರುದಿನ ವಿದರ್ಭನಗರದ ಆ ಬ್ರಾಹ್ಮಣ ಪ್ರಮುಖರೆಲ್ಲರೂ ಋತುಪರ್ಣನು ಮುನಿಮುಖ್ಯರೊಂದಿಗೆ ಓಲಗಗೊಟ್ಟಿರುವಂತಹ ಸಮಯದಲ್ಲಿ ಆ ಸಭೆಗೆ ಪ್ರವೇಶಿಸಿದನು. ಆ ಸಂದರ್ಭದಲ್ಲಿ, ಆ ಸಭೆಯಲ್ಲಿದ್ದ ಒಬ್ಬ ಬ್ರಾಹ್ಮಣನು ಎದ್ದು ನಿಂತು ಕೈ ಮೇಲಕ್ಕೆತ್ತಿ ಅಲ್ಲಿದ್ದವರೆಲ್ಲರನ್ನೂ ಉದ್ದೇಶಿಸಿ "ಹಿರಿಯರೇ, ಪುರ ಪ್ರಮುಖರೇ ಸಾಮಾಜಿಕರೆ, ಸಚ್ಚಾರಿತ್ರ್ಯರೇ, ನೀವೆಲ್ಲರೂ ಆಲಿಸಿ", ಎಂದು ಉಚ್ಚಕಂಠದ ಗಂಭೀರ ಸ್ವರದಲ್ಲಿ ಹೇಳಿದನು.

15. ಹಳುವದಲಿ ಬಂದಲಸಿ ಮಲಗಿದ
ಕುಲಸತಿಯ ವಸನಗೊಳಗರ್ಧವ
ಕಳೆದುಕೊಂಡೊಯ್ದಗಲಿ ಪೋದವರುಂಟೆ ರಾತ್ರಿಯಲಿ
ಇಳೆಯನಾಳುವ ನೃಪರ ಸತ್ಯದ
ಬಳಕೆಗಿದು ಲೇಸಲ್ಲವೆನೆ ಮನ
ವಳುಕಿ ನಸುನಗೆಯಿಂದ ನುಡಿದನು ಒಲಿದು ಬಾಹುಕನು

ಹಳುವದಲಿ = ಕಾಡಿನಲ್ಲಿ; ಬಂದಲಸಿ ಮಲಗಿದ = ಅಲೆದಾಡಿದ ಆಯಾಸದಿಂದ ಮೈಮರೆತು ಮಲಗಿದ್ದ; ಕುಲಸತಿಯ = ಧರ್ಮಪತ್ನಿಯ; ವಸನದೊಳಗೆ + ಅರ್ಧವ = ಸೀರೆಯಲ್ಲಿ ಅರ್ಧಭಾಗವನ್ನು; ಕಳೆದುಕೊಂಡು + ಒಯ್ದು + ಅಗಲಿ = ಹರಿದುಕೊಂಡು ಹೋಗಿ ಅವಳನ್ನು ಅಲ್ಲಿಯೇ ಬಿಟ್ಟು; ಪೋದವರು ಉಂಟೆ = ಹೋಗಿರುವಂಥವರು ಇಲ್ಲಿ ಯಾರಾದರೂ ಇದ್ದಾರೆಯೇ; ರಾತ್ರಿಯಲಿ = ರಾತ್ರಿಯ ವೇಳೆಯಲ್ಲಿ; ಇಳೆಯನು + ಆಳುವ = ಭೂಮಂಡಲವನ್ನು ಆಳುವ; ನೃಪರ = ರಾಜಾಧಿರಾಜರ; ಸತ್ಯದ = ಧರ್ಮಪರವಾದ; ಬಳಕೆಗೆ + ಇದು = ನಡವಳಿಕೆಗೆ ಇದು; ಲೇಸಲ್ಲವು + ಎನೆ = ಸರಿಯಲ್ಲ ಅಲ್ಲವೇ ಎಂದು ಕೇಳಲು; ಮನವು + ಅಳುಕಿ = ಮನಸ್ಸಿನೊಳಗೊಳಗೇ ಅಳುಕುತ್ತ; ನಸುನಗೆಯಿಂದ = ಮೆಲ್ಲನೆ ಸ್ವಲ್ಪವೇ ನಗುತ್ತ; ನುಡಿದನು = ಹೇಳಿದನು; ಒಲಿದು ಬಾಹುಕನು = ಆ ಬ್ರಾಹ್ಮಣನ ಮಾತಿಗೆ ಒಪ್ಪಿದವನಂತೆ ಬಾಹುಕನು.

"ಕಾಡಿನಲ್ಲಿ ಅಲೆದಾಡಿ ಆಯಾಸಗೊಂಡು ಮೈಮರೆತು ನಿದ್ರಿಸುತ್ತಿದ್ದ ಧರ್ಮಪತ್ನಿಯ ಸೀರೆಯಲ್ಲಿ ಅರ್ಧವನ್ನು ಹರಿದುಕೊಂಡು, ಅವಳನ್ನು ರಾತ್ರಿಯ

ವೇಳೆಯಲ್ಲಿ ಆ ದುರ್ಗಮವಾದ ಕಾಡಿನಲ್ಲಿ ಒಬ್ಬಳನ್ನೇ ಬಿಟ್ಟು ಹೋದವರಿದ್ದಾರೆಯೇ ಈ ಸಭೆಯಲ್ಲಿ! ಭೂಮಂಡಲವನ್ನು ಆಳುವ ಕರ್ತವ್ಯಪರ ಭೂಮಂಡಲಾಧೀಶರ ಧರ್ಮಪರ ನಿಯಮಗಳಿಗೆ ಇದು ಒಪ್ಪುವುದೇ" ಎಂದು ಎಲ್ಲರಿಗೂ ಕೇಳುವಂತೆ ಹೇಳಲು, ಮನದೊಳಗೊಳಗೇ ಅಳುಕಿದರೂ ಬಹಿರಂಗವಾಗಿ ಮೆಲುನಗುತ್ತ ಆ ಬ್ರಾಹ್ಮಣನ ಮಾತನ್ನು ಒಪ್ಪಿದವನಂತೆ ಬಾಹುಕನು ನುಡಿದನು.

16. ಕ್ಷಿತಿಯಮರರೆಲ್ಲಿಂದ ಬಂದಿರಿ
ಸತಿಯನಗಲಿದ ಬಾಹಿರನು ಅವ
ಪತಿಯೆ ಸಾಕಂತಿರಲಿ ಬಿಡು ಋತುಪರ್ಣನೋಲಗದಿ
ಅತಿಶಯದ ನುಡಿಗೇಳ್ದೆವಕಟಾ
ಸತಿಗೆ ವಂಚನೆಯಲ್ಲವದು ನಿಜ
ಪತಿಗೆ ಕೊರತೆಯದೆಂದು ಸೂಚಿಸಿ ನುಡಿದ ವಿಪ್ರರಿಗೆ

ಕ್ಷಿತಿಯ + ಅಮರರು + ಎಲ್ಲಿಂದ ಬಂದಿರಿ = ಭೂಮಿಯ ಮೇಲಿನ ದೇವತೆಗಳೆನಿಸಿದ ಬ್ರಾಹ್ಮಣೋತ್ತಮರೇ, ತಾವೆಲ್ಲ ಎಲ್ಲಿಂದ ಬಂದಿದ್ದೀರಿ; ಸತಿಯನು + ಅಗಲಿದ = ಹೆಂಡತಿಯನ್ನು ಅಗಲಿ ಹೋದ; ಬಾಹಿರನು = ಧರ್ಮಮಾರ್ಗಕ್ಕೆ ಬಹಿಷ್ಕೃತನು; ಅವ = ಅವನು; ಪತಿಯೆ = ಕೈಹಿಡಿದ ಪತಿಯೇನು; ಸಾಕು + ಅಂತಿರಲಿ ಬಿಡು = ಆ ವಿಷಯ ಅಲ್ಲಿಗೇ ಸಾಕು ಬಿಡು; ಋತುಪರ್ಣನ + ಓಲಗದಿ = ಋತುಪರ್ಣನ ಆಸ್ಥಾನದಲ್ಲಿ; ಅತಿಶಯದ = ಅತ್ಯಪರೂಪದ; ನುಡಿ + ಕೇಳ್ದೆವು + ಅಕಟಾ = ಅಯ್ಯೋ, ಇಂತಹ ಕೆಟ್ಟ ಸುದ್ದಿಯನ್ನು ಕೇಳಿದೆವು; ಸತಿಗೆ = ಕೈಹಿಡಿದ ಧರ್ಮಪತ್ನಿಗೆ; ವಂಚನೆಯಲ್ಲವು + ಅದು = ಮಾಡಿದ ಮೋಸ ಮಾತ್ರವಲ್ಲ, ಅದು; ನಿಜಪತಿಗೆ = ಗಂಡನಾದವನಿಗೆ; ಕೊರತೆ + ಅದೆಂದು = ಅಪಮಾನಕರವಾದ ಸಂಗತಿ ಎಂದು; ಸೂಚಿಸಿ ನುಡಿದ = ಸೂಚ್ಯವಾಗಿ ತಿಳಿಸಿ ಹೇಳಿದನು; ವಿಪ್ರರಿಗೆ = ಅಲ್ಲಿಗೆ ಬಂದಿದ್ದ ಬ್ರಾಹ್ಮಣರಿಗೆ.

ವಿಪ್ರರ ಪ್ರಶ್ನೆಗೆ ತಾನಾಗಿಯೇ ಮಾತಿಗೆ ತೊಡಗಿಕೊಂಡ ಬಾಹುಕನು ಅವರನ್ನು ಕುರಿತು ವಿವರಗಳನ್ನು ಕೇಳಿದನು. "ಭೂಮಿಯ ಮೇಲಿನ ದೇವರುಗಳೆಂದೇ ಖ್ಯಾತರಾದ ವಿಪ್ರೋತ್ತಮರೇ, ತಾವೆಲ್ಲ ಎಲ್ಲಿಂದ ಬಂದಿದ್ದೀರಿ? ಕೈಹಿಡಿದು

ತನ್ನನ್ನೇ ನಂಬಿರುವ ಧರ್ಮಪತ್ನಿಯನ್ನು ಅಗಲಿ ಹೋದವನು ಧರ್ಮ ಮಾರ್ಗಕ್ಕೂ ಬಹಿಷ್ಕೃತನೇ ಸರಿ. ಅಂಥವನು ಕೈಹಿಡಿದ ಪತಿ ಎನಿಸಿಕೊಳ್ಳುವುದಕ್ಕೆ ಯೋಗ್ಯನಲ್ಲ, ಇರಲಿ, ಆ ವಿಷಯವನ್ನು ಅಲ್ಲಿಗೇ ಬಿಡಿ. ಆದರೆ ಋತುಪರ್ಣನ ಆಸ್ಥಾನದಲ್ಲಿ ಇಂತಹ ಅತ್ಯಪರೂಪದ ನುಡಿಯನ್ನು ಕೇಳಿದೆವು. ಅಯ್ಯೋ, ಈ ಸಂಗತಿಯು ಕೈಹಿಡಿದ ಧರ್ಮಪತ್ನಿಗೆ ಮಾಡಿದ ವಂಚನೆ ಎನ್ನಲಾಗದು. ಗಂಡನಾದವನಿಗೆ ಸಹಾ ಇದು ಅಪಮಾನಕರವಾದ ಸಂಗತಿ" ಎಂದು ಅತ್ಯಂತ ಸೂಚ್ಯವಾಗಿ ಬಾಹುಕನು ತಿಳಿಸಿ ಹೇಳಿದನು.

17. ಈತನಾರು ಕುರೂಪಿ ನೈಷಧ
ನೀತನೋ ಸಭೆಯೊಳಗೆ ತಾನೀ
ಮಾತನಾಡಲದೇಕೆ ಸಂಶಯವೆನುತ ಮನದೊಳಗೆ
ದೂತರಾಲೋಚಿಸುತ ಬಂದರು
ಭೂತಳಾಧಿಪ ಭೀಮನೃಪ ಸಂ
ಜಾತೆಯನು ಕಂಡೆರಗಿ ಕೈಮುಗಿದೆಂದರೀ ಹದನ

ಈತನಾರು = ಇವನು ಯಾರು?; ಕುರೂಪಿ = ಕೆಟ್ಟ ರೂಪವುಳ್ಳವನು; ನೈಷಧನೀತನೋ = ಈತನೇ ನಿಷಧ ಮಹಾರಾಜ ನಳನೋ; ಸಭೆಯೊಳಗೆ = ರಾಜಸಭೆಯಲ್ಲಿ; ತಾನು + ಈ = ಇವನು ಹೀಗೆ; ಮಾತನಾಡಲು + ಅದೇಕೆ = ಮಾತನಾಡುವ ಅವಶ್ಯಕತೆ ಏನಿತ್ತು; ಸಂಶಯವೆನುತ = ಅನುಮಾನಾಸ್ಪದವಾಗಿದೆ ಈತನ ನಡವಳಿಕೆ ಎಂದುಕೊಳ್ಳುತ್ತ; ಮನದೊಳಗೆ = ಅವರೆಲ್ಲರೂ ತಂತಮ್ಮ ಮನಸ್ಸಿನೊಳಗೇ ಚಿಂತಿಸಿಕೊಳ್ಳುತ್ತ; ದೂತರು + ಆಲೋಚಿಸುತ = ವಿದರ್ಭರಾಜನು ಕಳುಹಿದ್ದ ದೂತರಾದ ಬ್ರಾಹ್ಮಣರು ಚರ್ಚಿಸುತ್ತ; ಬಂದರು = ಮರಳಿ ಬಂದರು; ಭೂತಳಾಧಿಪ = ಭೂಮಂಡಲಾಧೀಶನಾದ; ಭೀಮನೃಪ = ಭೀಮನೃಪನ; ಸಂಜಾತೆ ಯನ್ನು = ಮಗಳನ್ನು; ಕಂಡು + ಎರಗಿ = ಕಂಡು ಕಾಲಿಗೆ ಬಿದ್ದು ನಮಸ್ಕರಿಸಿ; ಕೈಮುಗಿದು + ಎಂದರೀ = ಕೈ ಮುಗಿದು ಹೇಳಿದರು; ಈ ಹದನ = ಈ ರೀತಿ ನಡೆದ ಸಂಗತಿಗಳೆಲ್ಲವನ್ನೂ.

ಬಾಹುಕನ ಮಾತುಗಳನ್ನು ಕೇಳಿ ಬ್ರಾಹ್ಮಣೋತ್ತಮರಿಗೆ ಏನೊಂದೂ ಅರ್ಥವಾಗದಾಯಿತು. ಇವನು ಯಾರು? ಇಷ್ಟು ಕೆಟ್ಟ ರೂಪವುಳ್ಳವನು ಯಾರಾಗಿರಲು ಸಾಧ್ಯ. ಒಂದೊಮ್ಮೆ ಇವನೇ ನಿಷಧ ಮಹಾರಾಜನಾದ ನಳನಿರಬಹುದೋ? ರಾಜಸಭೆಯಂತಹ ಗಂಭೀರ ಪರಿಸರದಲ್ಲಿ ಇವನು ಹೀಗೆಲ್ಲ ಮಾತನಾಡಬಹುದೇ? ಇದು ಯಾಕೋ ಸಂಶಯಾಸ್ಪದವಾಗಿ ಕಾಣುತ್ತಿದೆ. ಇವನ ನಡವಳಿಕೆ ಅರ್ಥವಾಗದಂತಿದೆ ಎಂದು ತಮ್ಮ ತಮ್ಮಲ್ಲೇ ಯೋಚಿಸಿಕೊಳ್ಳುತ್ತ ಮರಳಿ ವಿದರ್ಭ ರಾಜ್ಯಕ್ಕೆ ಬಂದು, ದಮಯಂತಿಯನ್ನು ಕಂಡು ಕಾಲಿಗೆ ಬಿದ್ದು ನಮಸ್ಕರಿಸಿ ನಡೆದುದೆಲ್ಲವನ್ನೂ ಅವಳಿಗೆ ಹೇಳಿದರು.

18. ದೇವಿಯರು ಚಿತ್ತೈಸುವುದು ಭುವ
ನಾವಳಿಗಳೆಲ್ಲವನು ನೋಡಿದು
ನಾವು ಮುಂದೈತರಲು ಕಂಡೆವಯೋಧ್ಯೆನಗರಿಯನು
ಭೂವರನ ಋತುಪರ್ಣರಾಯನ
ಸೇವೆಯಲ್ಲಿ ಕುರೂಪಿಯೋರ್ವನು
ಜೀವಸಖನಾತಂಗೆ ಬಾಹುಕನೆಂಬ ನಾಮದಲಿ

ದೇವಿಯರು = ಅರಸಿಯರು; ಚಿತ್ತೈಸುವುದು = ನಮ್ಮ ಮಾತನ್ನು ಆಲಿಸಬೇಕು; ಭುವನ + ಆವಳಿಗಳು + ಎಲ್ಲವನು = ಪ್ರಪಂಚವೆಲ್ಲವನ್ನೂ; ನೋಡಿದು = ನಳಮಹಾರಾಜನಿಗಾಗಿ ಸುತ್ತಿ ನೋಡಿದೆವು; ನಾವು = ನಾವೆಲ್ಲರೂ; ಮುಂದೈತರಲು = ಮುಂದು ಮುಂದಕ್ಕೆ ತೆರಳುತ್ತಿರಲು; ಕಂಡೆವು + ಅಯೋಧ್ಯಾನಗರಿಯನು = ಅಯೋಧ್ಯಾನಗರವನ್ನು ಕಂಡೆವು; ಭೂವರನ = ಅಲ್ಲಿಯ ರಾಜಶ್ರೇಷ್ಠನಾದ; ಋತುಪರ್ಣರಾಯನ = ಋತುಪರ್ಣನ; ಸೇವೆಯಲ್ಲಿ = ಆಡಳಿತದಲ್ಲಿ ಸೇವೆಸಲ್ಲಿಸುತ್ತಿದ್ದ; ಕುರೂಪಿಯೋರ್ವನ = ಒಬ್ಬ ಕುರೂಪಿಯನ್ನು; ಜೀವಸಖನು + ಆತಂಗೆ = ಆತನಿಗೆ ಪ್ರಾಣಪ್ರಿಯ ಸಖನಾಗಿದ್ದಾನೆ; ಬಾಹುಕನೆಂಬ ನಾಮದಲ್ಲಿ = ಬಾಹುಕನೆಂಬುದು ನಾಮಧೇಯದಲ್ಲಿ.

‘‘ಅರಸಿಯೇ, ನಮ್ಮ ಮಾತುಗಳನ್ನು ಆಲಿಸುವಂಥವಳಾಗು. ನಾವು ರಾಜಾಜ್ಞೆಯನುಸಾರವಾಗಿ ನಳಮಹಾರಾಜನ ಇರವನ್ನು ಅರಸುತ್ತ ಭೂಮಂಡಲದ

ವಿವಿಧ ಪ್ರದೇಶಗಳೆಲ್ಲವನ್ನೂ ಸುತ್ತಿದೆವು. ಹಾಗೆಯೇ ಮುಂದು ಮುಂದಕ್ಕೆ ತೆರಳುತ್ತಿರಲಾಗಿ ಅಯೋಧ್ಯಾನಗರಿಯನ್ನು ಕಂಡು ಅಲ್ಲಿಗೆ ಹೋದೆವು. ಅಲ್ಲಿಯ ರಾಜಶ್ರೇಷ್ಠನು ಋತುಪರ್ಣನೆಂಬುವನು. ಅವನ ಸೇವೆಯಲ್ಲಿರುವವನು ಒಬ್ಬ ಮಹಾ ಕುರೂಪಿ. ಈತ ರಾಜನಿಗೆ ಪ್ರಾಣಸಖನು. ಅವನ ಹೆಸರು ಬಾಹುಕನೆಂದು" ಎಂದು ಬ್ರಾಹ್ಮಣರು ಹೇಳಿದರು.

19. ತುರಗನಿಕರದ ಶಿಕ್ಷೆಯಲಿ ಮಂ
ದಿರದ ಬಾಣಸಿತನದ ಕೆಲಸದಿ
ನೆರೆ ನಿಪುಣನೆಂದೆನಿಸಿಕೊಂಡಿಹ ನೃಪನ ಸಭೆಯೊಳಗೆ
ಪರುಠವಿಸಿ ನೀವೆಂದ ಮಾತನು
ವರಸಭಾಮಧ್ಯದಲಿ ನುಡಿಯ
ಲ್ಕಿರದೆ ತಾನೀ ಮಾತನೆಂದನು ನಗುತ ಬಾಹುಕನು

ತುರಗನಿಕರದ = ಆ ಬಾಹುಕನು ಕುದುರೆಗಳ ಸಮೂಹದ; ಶಿಕ್ಷೆಯಲಿ = ಶಿಕ್ಷಣದಲ್ಲಿಯೂ; ಮಂದಿರದ = ಅರಮನೆಯ; ಬಾಣಸಿತನದ ಕೆಲಸದಿ = ಪಾಕಶಾಲೆಯ ಕೆಲಸದಲ್ಲಿಯೂ; ನಿಪುಣನೆಂದೆನಿಸಿಕೊಂಡಿಹ = ಅತ್ಯಂತ ಚತುರ ನೆಂದು ಹೆಸರುವಾಸಿಯಾಗಿದ್ದಾನೆ. ನೃಪನ = ರಾಜನ; ಸಭೆಯೊಳಗೆ = ಆಸ್ಥಾನದಲ್ಲಿ; ಪರುಠವಿಸಿ = ವಿಸ್ತಾರವಾಗಿ ಹೇಳಿ; ನೀವೆಂದ ಮಾತನು = ಹೀಗೆಯೇ ಹೇಳಬೇಕೆಂದು ನೀವು ವಿಧಿಸಿದ ಮಾತುಗಳನ್ನು; ವರಸಭಾ ಮಧ್ಯದಲಿ = ಶ್ರೇಷ್ಠಾತಿ ಶ್ರೇಷ್ಠರಿದ್ದ ಆ ಆಸ್ಥಾನ ಸಭೆಯಲ್ಲಿ; ನುಡಿಯಲ್ಕೆ + ಇರದೆ = ಹೇಳಲು, ಆತನು ಸುಮ್ಮನಿರದೆ; ತಾನು + ಈ ಮಾತನೆಂದನು = ಈ ರೀತಿ ಮಾತನಾಡಿದನು; ನಗುತ ಬಾಹುಕನು = ಮುಗುಳುನಗುತ್ತ ಬಾಹುಕನು.

"ರಾಜ ಸಖನಾದ ಬಾಹುಕನೆಂಬುವನು ಅಶ್ವಶಿಕ್ಷಣದಲ್ಲಿಯೂ, ಅರಮನೆಯ ಪಾಕಶಾಲೆಯಲ್ಲಿಯೂ, ಅತ್ಯಂತ ನಿಪುಣನೆಂದು ಪ್ರಸಿದ್ಧನಾಗಿದ್ದಾನೆ. ರಾಜಸಭೆಯಲ್ಲಿ ನಾವು ನೀವು ಹೇಳಿಕೊಟ್ಟಂಥ ಮಾತುಗಳನ್ನು ವಿಸ್ತಾರವಾಗಿ ಹೇಳಿದೆವು. ಆಗ ಆ ಬಾಹುಕನು ಸುಮ್ಮನಿರದೆ ನಸುನಗುತ ಈ ರೀತಿ ಮಾತ ನಾಡಿದನು."

20. ಸತಿಗೆ ವಂಚನೆಗೈದ ಪತಿ ತಾ
ಮತಿವಿಕಳನಂತಿರಲಿ ಭೂಸುರ
ಪತಿಯೆ ಕೇಳಾ ಸತಿಗೆ ಭಂಗವೆ ಪತಿಗೆ ಕೊರತೆ ಕಣಾ
ಪತಿವ್ರತವನಾಚರಿಸುವಳು ನಿಜ
ಪತಿಯ ಗುಣದೋಷಗಳನೆಣಿಪಳೆ
ಗತಿಗೆ ಕಾರಣ ಸತ್ಯವೇ ತನಗೆಂದನವ ನಗುತ

ಸತಿಗೆ = ಧರ್ಮಪತ್ನಿಗೆ; ವಂಚನೆಗೈದ = ಮೋಸ ಮಾಡಿದ; ಪತಿ ತಾ = ಪತಿಯಾದವನು ತಾನು; ಮತಿ ವಿಕಳನಂತಿರಲಿ = ಮತಿಭ್ರಮಣನಾಗಿರಬೇಕು, ಅದು ಹಾಗಿರಲಿ; ಭೂಸುರಪತಿಯೇ = ರಾಜಾಧಿರಾಜನೇ; ಕೇಳು + ಆ ಸತಿಗೆ = ಕೇಳು ಇದು ಆ ಧರ್ಮಪತ್ನಿಗೆ ಅವಮಾನವೇ; ಪತಿಗೆ ಕೊರತೆ ಕಣಾ = ಆ ಪತಿಯಾದವನಿಗೇ ಅವಮಾನಕರವಾದ ವಿಷಯ; ಪತಿವ್ರತವನಾಚರಿಸುವಳು = ಪತಿಯೇ ಪರದೈವವೆಂಬುದನ್ನೇ ವ್ರತವನ್ನಾಗಿ ಭಾವಿಸುವವಳು; ನಿಜ ಪತಿಯ = ತನ್ನ ಗಂಡನ; ಗುಣದೋಷಗಳನು + ಎಣಿಪಳೆ = ತನ್ನ ಗಂಡನ ಕುಂದು ಕೊರತೆಗಳನ್ನು ವಿಪರೀತವೆಂದು ಭಾವಿಸುತ್ತಾಳೆಯೇ? ಸತಿಗೆ ಕಾರಣ ಸತ್ಯವೇ = ಮೋಕ್ಷಕ್ಕೆ ಸತ್ಯಧರ್ಮಾಚರಣೆಯೇ ಕಾರಣ; ತನಗೆಂದನವ ನಗುತ = ಎಂದನು ನಸುನಗುತ ಆ ಬಾಹುಕ.

ಬಾಹುಕನು ರಾಜನನ್ನು ಕುರಿತು ಶ್ರೇಷ್ಠವಾದ ಸತೀಧರ್ಮವು ಯಾವುದು ಎಂಬುದರ ಕುರಿತು ವಿವರಿಸಿ ಹೇಳಿದ ತಾಯೇ. ತನ್ನ ಧರ್ಮಪತ್ನಿಗೆ ಮೋಸಮಾಡಿದ ಪತಿಯು ನಿಜವಾಗಿ ಮತಿಭ್ರಮಣನಾಗಿದ್ದಿರಬಹುದು. ಆ ವಿಷಯವು ಹಾಗಿರಲಿ, ರಾಜಾಧಿರಾಜನೇ ಕೇಳು, ಆ ಸತಿಯಾದವಳಿಗೆ ಇದು ಖಂಡಿತಾ ಅವಮಾನ ಎನ್ನಲಾಗದು. ವಾಸ್ತವವಾಗಿ ಹೇಳಬೇಕೆಂದರೆ ಇದು ಪತಿಯಾದವನಿಗೇ ಅವಮಾನಕರವಾದ ವಿಷಯ. ಪತಿಯೇ ಪರದೈವವೆಂಬುದನ್ನೇ ತನ್ನ ಜೀವನದ ವ್ರತಾಚರಣೆ ಎಂಬಂತೆ ಭಾವಿಸುವವಳು ತನ್ನ ಗಂಡನ ಗುಣದೋಷಗಳನ್ನು ವಿಪರೀತವಾಗಿ ಭಾವಿಸುತ್ತಾಳೆಯೇ, ಸತ್ಯಧರ್ಮಾಚರಣೆಯೇ

ತನ್ನ ಮೋಕ್ಷಕ್ಕೆ ದಾರಿ ಎಂಬುದಾಗಿ ಆ ಬಾಹುಕನು ನಸುನಗುತ್ತ ನುಡಿದನು ಎಂದು ಬ್ರಾಹ್ಮಣರು ಮತ್ತೆ ಆ ಬಾಹುಕನ ನುಡಿಗಳನ್ನು ಕುರಿತು ಹೇಳಲಾರಂಭಿಸಿದರು.

21. ಪತಿಯ ತಪ್ಪೆಣಿಸುವ ಸತಿ ಪತಿ
ವ್ರತೆಯೆ ಧರಣಿಯ ಪಾಲಿಸುವ ಜನ
ಪತಿಯ ನಿಂದಿಸುವಾತ ಸೇವಕನೇ ನಿಧಾನಿಸಲು
ಪಿತನ ವಾಕ್ಯವನತಿಗಳೆವವನು
ಸುತನೆ ಗುರುವಿನ ಮಾತನೆಣಿಸದ
ಪತಿತ ಪಾತಕಿ ಶಿಷ್ಯನೇ ತಾನೆಂದ ಬಾಹುಕನು

ಪತಿಯ = ಗಂಡನ; ತಪ್ಪೆಣಿಸುವ ಸತಿ = ತಪ್ಪುಗಳನ್ನೇ ಹುಡುಕುವ ಪತ್ನಿ; ಪತಿವ್ರತೆಯೆ = ಪತಿವ್ರತೆ ಎನಿಸಿಕೊಳ್ಳಲು ಸಾಧ್ಯವೇ?; ಧರಣಿಯ ಪಾಲಿಸುವ ಜನಪತಿಯ ನಿಂದಿಸುವಾತ = ಭೂಪಾಲಕನಾದ ದೊರೆಯನ್ನು ಆಪಾದಿಸುವವನು ಸೇವಕರೆನಿಸುತ್ತಾನೆಯೋ; ನಿಧಾನಿಸಲು = ಆಶ್ರಯವನ್ನು ನೀಡಿದ; ಪಿತನ = ತಂದೆಯ; ವಾಕ್ಯವನು + ಅತಿಗಳೆವವನು = ಮಾತನ್ನು ಅಲ್ಲಗಳೆಯುವವನು; ಸುತನೆ = ಮಗನೆನಿಸುವನೆ?; ಗುರುವಿನ = ವಿದ್ಯಾದಾನ ಮಾಡಿದ ಗುರುವಿನ; ಮಾತನು + ಎಣಿಸದ = ಮಾತನ್ನು ಗೌರವಿಸದ; ಪತಿತ = ನೀತಿಹೀನನೂ ಧರ್ಮಭ್ರಷ್ಟನೂ; ಪಾತಕಿ = ಪಾಪಿಷ್ಟನೂ; ಶಿಷ್ಯನೇ = ಶಿಷ್ಯನೆನಿಸುತ್ತಾನೆಯೇ; ತಾನೆಂದ ಬಾಹುಕನು = ಎಂದು ಬಾಹುಕನು ಹೇಳಿದನು.

"ಸಾಮಾಜಿಕ ಸ್ವಾಸ್ಥ್ಯವನ್ನು ಕುರಿತಂತೆ ಅಂದಿದ್ದ ನೀತಿ ನಿಯಮಗಳನ್ನು, ಧಾರ್ಮಿಕ ಚಿಂತನೆಗಳನ್ನೂ ಬಾಹುಕನು ಪ್ರಸ್ತಾಪಿಸುತ್ತಿದ್ದಾನೆ. ತನ್ನ ಕೈಹಿಡಿದ ಗಂಡನ ಕಾರ್ಯ, ಗುಣ, ಶೀಲಗಳಲ್ಲಿ ತಪ್ಪನ್ನೇ ಹುಡುಕಿ ಆಪಾದಿಸುವ ಪತ್ನಿಯನ್ನು ಪತಿವ್ರತೆ ಎನ್ನಲಾಗುತ್ತದೆಯೇ?, ಧರಣಿಯನ್ನು ಪಾಲಿಸುವ, ಜನಪಾಲಕನಾದ ದೊರೆಯನ್ನು ನಿಂದಿಸುವವನು ಸೇವಕನೆನಿಸುತ್ತಾನೆಯೇ? ತನ್ನ ಇತಿಮಿತಿಗಳನ್ನು ತಾಳಿಕೊಂಡು ಆಶ್ರಯ ನೀಡುವ ತಂದೆಯ ಮಾತನ್ನು ಗೌರವಿಸದವನು ಮಗನೆನಿಸುತ್ತಾನೆಯೇ, ವಿದ್ಯಾದಾನ ಮಾಡಿದ ಜ್ಞಾನಪ್ರದ ಗುರುವಿನ ಮಾತನ್ನು ಗೌರವಿಸದ, ನೀತಿಹೀನನೂ

ಧರ್ಮಭ್ರಷ್ಟನೂ ಪಾಪಿಷ್ಟನೂ ಆದವನು ಶಿಷ್ಯನೆನಿಸಿಕೊಳ್ಳಲು ಅರ್ಹನೇ" ಎಂದು ಬಾಹುಕನು ಪ್ರಶ್ನಿಸಿದನು.

22. ಎನಲು ತಲೆದೂಗಿದಳು ಈ ಮಾ
ತಿನಲಿ ಸಂಶಯವಿಲ್ಲದಿಹುದೆಂ
ದೆನುತ ಕಂಬನಿದುಂಬಿದಳು ದಮಯಂತಿ ಮನದೊಳಗೆ
ಇನಿಯನಹುದಾತನ ಪರೀಕ್ಷೆಗೆ
ನೆನೆಯಬೇಕೆಂದನುವನೆಂದಾ
ವನಿತೆ ತಂದೆಯನುಜ್ಞೆಯಲಿ ಕರೆದಳು ಸುದೇವನನು

ಎನಲು = ಬ್ರಾಹ್ಮಣರು ಬಾಹುಕನ ಮಾತುಗಳನ್ನು ಕುರಿತು ಹೇಳಲು; ತಲೆದೂಗಿದಳಾ = ದಮಯಂತಿಯು ಒಪ್ಪಿದವಳಂತೆಯೂ ಅರ್ಥವಾದಂತೆಯೂ ತಲೆದೂಗಿದಳು; ಈ ಮಾತಿನಲಿ = ಈ ಮಾತುಗಳು ತನ್ನ ಪತಿಯವೇ ಹೌದು; ಸಂಶಯವಿಲ್ಲದಿಹುದು + ಎಂದೆನುತ = ಕಿಂಚಿತ್ತೂ ಅನುಮಾನವಿಲ್ಲ ಎನ್ನುತ್ತ; ಕಂಬನಿದುಂಬಿದಳು = ಆನಂದ, ದುಃಖಗಳಿಂದ ಕಣ್ಣೀರು ತುಂಬಿಕೊಂಡಳು; ದಮಯಂತಿ ಮನದೊಳಗೆ = ತನ್ನ ಮನಸ್ಸಿನಲ್ಲಿಯೇ ದಮಯಂತಿಯು; ಇನಿಯ ನಹುದು + ಆತನ = ಇವನು ತನ್ನ ಮನಃಪ್ರಿಯನಾದ ನಳನೇ ಹೌದು, ಆತನನ್ನು; ಪರೀಕ್ಷೆಗೆ = ಪರೀಕ್ಷೆಗೊಳಪಡಿಸುವ ವಿಧಾನವನ್ನು; ನೆನೆಯಬೇಕೆಂದು + ಅನುವ ನೆಂದು + ಆ ವನಿತೆ = ಯೋಚಿಸಬೇಕೆಂದುಕೊಂಡ ಅವಳು; ತಂದೆ ಯಾಜ್ಞೆಯಲಿ = ತಂದೆಯೊಂದಿಗಿನ ಸಮಾಲೋಚನೆಯಲ್ಲಿ; ಕರೆದಳು ಸುದೇವನನು = ಸುದೇವನನ್ನು ಕರೆಸಿಕೊಂಡಳು.

ದಮಯಂತಿಯ ಅನುಜ್ಞೆಯಂತೆ ತೆರಳಿದ್ದ ಬ್ರಾಹ್ಮಣರು ಬಾಹುಕನ ಮಾತುಗಳನ್ನು ಕುರಿತು ವರದಿ ಮಾಡಲು ದಮಯಂತಿಗೆ ವಿಷಯದ ಗಂಭೀರತೆ ಏನೆಂಬುದು ಅರ್ಥವಾಯಿತು. ಹಾಗಾಗಿ ಆ ವರದಿಯನ್ನು ಒಪ್ಪಿದವಳಂತೆಯೂ ಅದರ ಒಳ ಮರ್ಮಗಳೇನು ಎಂಬುದು ಅರ್ಥವಾಯಿತು ಎಂಬಂತೆಯೂ ತಲೆದೂಗಿದಳು. ಬಾಹುಕನಾಡಿರುವ ಆ ಮಾತುಗಳು ತನ್ನ ಪತಿಯವೇ ಹೌದು ಅದರಲ್ಲಿ ಸಂಶಯವೇ ಇಲ್ಲ ಎಂದುಕೊಳ್ಳುತ್ತ ಪತಿಯನ್ನು ನೆನೆದು ಆನಂದ

ದಿಂದಲೂ, ಆವನ ಸ್ಥಿತಿಯನ್ನು ಅರಿತ ದುಃಖದಿಂದಲೂ ಕಣ್ಣೀರು ತುಂಬಿಕೊಂಡಳು. ಮನಸ್ಸಿನೊಳಗೊಳಗೇ ಅವಳು ಈ ಬಾಹುಕನು ತನ್ನ ಮನಃಪ್ರಿಯನಾದ ನಳನೇ ಹೌದು ಎಂದು ಮತ್ತೆ ಮತ್ತೆ ಮಥಿಸಿಕೊಳ್ಳುತ್ತ ಆತನನ್ನು ಮತ್ತೊಮ್ಮೆ ಪರೀಕ್ಷೆ ಗೊಳಪಡಿಸಿ ಅವನ ಕುರಿತು ಖಚಿತವಾಗಿ ನಿರ್ಧರಿಸಬೇಕು. ಹಾಗೆ ಪರೀಕ್ಷಿಸುವ ವಿಧಾನವು ಯಾವುದು ಎಂದುಕೊಳ್ಳುತ್ತ ತಂದೆಯೊಂದಿಗೆ ಎಲ್ಲವನ್ನು ಚರ್ಚಿಸಿ ಸುದೇವನನ್ನು ಮುಂದಿನ ಕಾರ್ಯಕ್ಕಾಗಿ ಕರೆಸಿಕೊಂಡಳು.

ದಮಯಂತಿಯ ತೀಕ್ಷ್ಣ ವಿಮರ್ಶನ ಚಾತುರ್ಯ, ಪ್ರತಿಯೊಂದನ್ನು ಸಹನೆ ಯಿಂದ ಪರೀಕ್ಷಿಸಿ ನಿರ್ಧರಿಸಬೇಕೆಂಬ ವಿವೇಕ, ಹಿರಿಯರೊಂದಿಗೆ ಚರ್ಚಿಸಿ ಪ್ರತಿ ಯೊಂದು ವಿಷಯವನ್ನು ಲೆಕ್ಕಿಸಬೇಕೆಂಬ ವ್ಯವಧಾನ ಮತ್ತು ಹಿರಿಯರ ಕುರಿತಂತೆ ಅವಳಿಗಿರುವ ಗೌರವ, ಬದ್ಧತೆ ಮುಂತಾದುವುಗಳನ್ನು ಈ ಪದ್ಯ ಗಮನಕ್ಕೆ ತರುತ್ತದೆ.

23. ಇಳೆಯಮರ ಬಾರೆಂದು ವಿವರವ
ತಿಳುಹಿ ಪಯಣವ ಮಾಡಿ ಕಳುಹಲು
ಹೊಳಲ ಹೊರವಂಟನು ಸುದೇವನು ಹಲವು ಯೋಜನವ
ಕಳೆದು ಬರುತಿರೆ ಮುಂದೆ ಕಂಡನು
ಲಲಿತರತ್ನಪ್ರಭೆಯ ಗೋಪುರ
ಹೊಳೆವಯೋಧ್ಯಾಪುರವನೀಕ್ಷಿಸಿ ಹೊಕ್ಕನವನಂದು

ಇಳೆಯಮರ = ಬ್ರಾಹ್ಮಣೋತ್ತಮನೇ; ಬಾರೆಂದು = ಬಾ ಎಂದು ಕರೆಸಿ ಕೊಂಡು; ವಿವರವ ತಿಳುಹಿ = ಮುಂದೇನೇನು ಮಾಡಬೇಕೆಂಬುದರ ಕುರಿತ ಎಲ್ಲ ಯೋಜನೆ, ಉಪಾಯಗಳ ಬಗ್ಗೆಯೂ ವಿವರಿಸಿ; ಪಯಣವ ಮಾಡಿ ಕಳುಹಲು = ಅವನ ಪ್ರಯಾಣಕ್ಕೆ ಬೇಕಾದ ಎಲ್ಲ ಸಿದ್ಧತೆಗಳನ್ನು ಮಾಡಿಸಿ ಕಳುಹಿಸಿಕೊಡಲು; ಹೊಳಲ = ಆ ಪಟ್ಟಣದಿಂದ; ಹೊರವಂಟನು = ಹೊರ ಹೊರಟನು; ಸುದೇವನು = ಸುದೇವನು; ಹಲವು ಯೋಜನವ = ಹಲವು ಗಾವುದ ದೂರವನ್ನು; ಕಳೆದು ಬರುತಿರೆ = ಕ್ರಮಿಸಿ ಮುಂದುವರಿಯುತ್ತಿರಲು; ಮುಂದೆ ಕಂಡನು = ಎದುರಿಗೇ ಕಂಡನು; ಲಲಿತರತ್ನಪ್ರಭೆಯ = ಮನೋಹರವಾಗಿ ಜ್ವಲಿಸುತ್ತಿರುವ ರತ್ನಗಳಿಂದ ಶೋಭಿಸುತ್ತಿದ್ದ; ಗೋಪುರ = ಗೋಪುರವನ್ನು; ಹೊಳೆವ + ಅಯೋಧ್ಯಾಪುರವನು

+ ಈಕ್ಷಿಸಿ = ಹೊಳೆಯುತ್ತಿದ್ದ ಅಯೋಧ್ಯಾ ನಗರಿಯನ್ನು ಕಣ್ತುಂಬಿ ನೋಡಿ; ಹೊಕ್ಕನು + ಅವನು + ಅಂದು = ಅಂದು ಆ ಪುರದ ಒಳಹೊಕ್ಕನು.

ದಮಯಂತಿಯು ತಾನು ತನ್ನ ತಂದೆಯೊಂದಿಗೆ ಸಮಾಲೋಚಿಸಿ ನಿರ್ಣಯಿಸಿದ ಉಪಾಯಗಳನ್ನು ಬ್ರಾಹ್ಮಣೋತ್ತಮನಾದ ಸುದೇವನಿಗೆ ವಿವರವಾಗಿ ಮನದಟ್ಟು ಮಾಡಿಸಿದಳು. ಅವನು ಅಯೋಧ್ಯೆಯಲ್ಲಿರಲು ಬೇಕಾದ ಎಲ್ಲ ರೀತಿಯ ಪ್ರಯಾಣದ ಸಿದ್ಧತೆಗಳನ್ನು ಮಾಡಿಸಿ ಕಳುಹಿಸಿದಳು. ಸುದೇವನು ಬಳಿಕ ವಿದರ್ಭದಿಂದ ಹೊರಹೊರಟು ಹಲವು ಗಾವುದ ದೂರವನ್ನು ಕ್ರಮಿಸುತ್ತಿದ್ದಂತೆ, ಎದುರಿಗೆ, ಹೊನ್ನ ಗೋಪುರಗಳನ್ನುಳ್ಳ, ರತ್ನಪ್ರಭೆಯಿಂದ ಮನೋಹರವಾಗಿ ಶೋಭಿಸುತ್ತಿದ್ದ ಅಯೋಧ್ಯಾನಗರಿಯನ್ನು ಕಂಡು ಪುರದ ಒಳಹೊಕ್ಕನು.

24. ಇಟ್ಟ ಫಣೆಯೊಳಗೆಸೆವ ಮಟ್ಟಿಯ
ತೊಟ್ಟ ಹೊಸ ಯಜ್ಞೋಪವೀತದ
ಕಟ್ಟಿಯಿರುಕಿದ ಕಕ್ಷಪಾಳದ ಬೆರಳ ಜಪಸರದ
ಉಟ್ಟ ಧೋತ್ರದ ಬಳಲುಗಚ್ಚೆಯ
ಸ್ವೈಗಚ್ಚರಿರೂಪಿನಲಿ ಪರ
ಮೇಷ್ಠಿಯಂದದಿ ಬಂದನಾ ಋತುಪರ್ಣನೋಲಗಕೆ

ಇಟ್ಟ ಫಣೆಯೊಳಗೆ + ಎಸೆವ = ಹಣೆಯ ಮೇಲೆ ಶೋಭಾಯಮಾನವಾಗಿ ಧರಿಸಿದ್ದ; ಮಟ್ಟಿಯ = ಗೋಪಿಯ; ತೊಟ್ಟ ಹೊಸ ಯಜ್ಞೋಪವೀತದ = ಮೈಮೇಲೆ ತೊಟ್ಟಿದ್ದ ಹೊಸ ಜನಿವಾರದ; ಕಟ್ಟಿಯಿರುಕಿದ ಕಕ್ಷಪಾಳದ = ಕಂಕುಳಲ್ಲಿ ಅವುಚಿ ತುರುಕಿಕೊಂಡಿದ್ದ ಚೀಲದ; ಬೆರಳ ಜಪಸರದ = ಬೆರಳಲ್ಲಿ ಎಣಿಸುತ್ತಿದ್ದ ಜಪಸರದ; ಉಟ್ಟ ಧೋತ್ರದ = ಕಚ್ಚೆಹಾಕಿ ಉಟ್ಟುಕೊಂಡಿದ್ದ ಧೋತ್ರದ; ಸ್ವೈಗಚ್ಚರಿರೂಪಿನಲಿ = ತನ್ನದೇ ಆದ ರೀತಿಯ ಅಚ್ಚರಿ ಹುಟ್ಟಿಸುವಂತಹ ವೇಷದಲ್ಲಿ; ಪರಮೇಷ್ಠಿಯ + ಅಂದದಿ = ಬ್ರಹ್ಮನಂತೆ ವಿರಾಜಿಸುತ್ತ; ಹೊಸಸೃಷ್ಟಿ ರೂಪದಲ್ಲಿ, ಬಂದನು + ಆ; ಋತುಪರ್ಣನ ಓಲಗಕ್ಕೆ = ಋತುಪರ್ಣ ಮಹಾರಾಜನ ಆಸ್ಥಾನಕ್ಕೆ ಬಂದು ಸೇರಿದನು.

ಸುದೇವನು ದಮಯಂತಿಯು ಸೂಚಿಸಿದ ಉಪಾಯದಂತೆ ತನ್ನ ವೇಷವನ್ನು ಸಂಪೂರ್ಣವಾಗಿ ಬದಲಾಯಿಸಿಕೊಂಡನು. ಹಣೆಯ ಮೇಲೆ ಗೋಪಿಚಂದನವನ್ನು ಶೋಭಾಯಮಾನವಾಗಿ ಧರಿಸಿದನು. ಮೈಮೇಲೆ ಜನಿವಾರವನ್ನೂ, ಕೈಬೆರಳಲ್ಲಿ ಜಪಸರವನ್ನೂ, ತುರುಕಿಕೊಂಡಿದ್ದ ಕಂಕುಳ ಚೀಲವನ್ನೂ ಕಚ್ಚೆಯ ಧೋತ್ರವನ್ನೂ ಉಟ್ಟುಕೊಂಡು, ತನ್ನದೇ ಆದ ವಿಶಿಷ್ಟ ಶೈಲಿಯ ಸೊಬಗಿನಿಂದ ಬ್ರಹ್ಮದೇವನಂತೆ ವಿರಾಜಿಸುತ್ತಾ ಋತುಪರ್ಣ ರಾಜನ ಆಸ್ಥಾನಕ್ಕೆ ಬಂದು ಸೇರಿದನು.

25. ಆರು ನೀವೆಲ್ಲಿಂದ ಬಂದಿರಿ
ದೂರದೇಶದ ಹಿರಿಯರಿಳೆಯೊಳು
ಕಾರಣವದೇನಿರುವುದಲ್ಲಿ ವಿಶೇಷವೇನೆನಲು
ಭೂರಮಣ ಕೇಳವನಿಯಲಿ ಸಂ
ಚರಿಸುತ ಬಂದೆವು ವಿದರ್ಭಕೆ
ಭೂರಿನೃಪರೈತರುತಲಿದೆ ಚತುರಂಗಬಲಸಹಿತ

ಆರು = ಯಾರು?; ನೀವೆಲ್ಲಿಂದ ಬಂದಿರಿ = ನೀವು ಎಲ್ಲಿಯವರು, ದೂರದೇಶದ ಹಿರಿಯರು ಇಳೆಯೊಳು = ಬಹಳ ದೂರದೇಶದಿಂದ ಆಗಮಿಸಿರುವ, ಪ್ರಸಿದ್ಧರಾದ ಹಿರಿಯರಂತೆ ಕಾಣುತ್ತಿದ್ದೀರಿ; ಕಾರಣವು + ಅದೇನು + ಇರುವುದು + ಅಲ್ಲಿ = ಆ ದೇಶದಲ್ಲಿ ಅದೇನು ವಿಶೇಷ ಇರುವುದು?; ವಿಶೇಷವೇನೆನಲು = ಬಂದ ಉದ್ದೇಶವೇನು ಎಂದು ಕೇಳಲು; ಭೂರಮಣ = ರಾಜನೇ; ಕೇಳು + ಅವನಿಯಲಿ = ಕೇಳು, ಈ ಭೂಮಂಡಲದಲ್ಲಿ; ಸಂಚರಿಸುತ್ತಾ ಬಂದೆವು = ಸಂಚಾರ ಮಾಡುತ್ತ ಬಂದಿದ್ದೇವೆ; ವಿದರ್ಭಕೆ = ವಿದರ್ಭದೇಶಕ್ಕೆ; ಭೂರಿನೃಪರು + ಐತರುತಲಿದೆ = ಅತ್ಯಂತ ಪ್ರಸಿದ್ಧರಾದ ಮಹಾಪರಾಕ್ರಮಶಾಲಿ ರಾಜಾಧಿರಾಜರ ದಂಡೇ ಬಂದು ಸೇರುತ್ತಿದೆ; ಚತುರಂಗ ಬಲಸಹಿತ = ಅಗಾಧ ಚತುರಂಗ ಸೇನೆಯ ಸಹಿತ.

ಮಹಾಬ್ರಾಹ್ಮಣ ವೇಷದಲ್ಲಿ ದೈವಕಳೆಯೊಂದಿಗೆ ಶೋಭಿಸುತ್ತ ಆಸ್ಥಾನಕ್ಕೆ ಬಂದ ವೇಷಧಾರಿ ಸುದೇವನನ್ನು ಕಂಡ ಋತುಪರ್ಣನು ಕುತೂಹಲದಿಂದ ಅವನ ಪೂರ್ವಾಪರ ವಿಚಾರಿಸಿದನು. "ತಾವು ಯಾರು? ಎಲ್ಲಿಂದ ಬಂದಿರಿ? ಯಾವುದೋ ದೂರದೇಶಕ್ಕೆ ಸೇರಿದ ಪ್ರಸಿದ್ಧ ಹಿರಿಯ ಬ್ರಾಹ್ಮಣರಂತೆ ಕಾಣುತ್ತಿದ್ದೀರಿ. ಆ ನಿಮ್ಮ

ದೇಶದ ವಿಶೇಷವೇನು? ಇಲ್ಲಿಗೆ ಬಂದಿರುವ ಉದ್ದೇಶವೇನು?" ಎಂದು ದೀರ್ಘವಾಗಿ ಪ್ರಶ್ನೆಗಳನ್ನು ಹೊರಹಾಕಲು, ಸುದೇವನು "ರಾಜಾಧಿರಾಜನೇ, ನಾನು ಈ ಭೂಮಂಡಲದ ಎಲ್ಲೆಡೆಯೂ ಸಂಚರಿಸುತ್ತ ಇಲ್ಲಿಗೆ ಬಂದೆ. ವಿದರ್ಭದೇಶದಲ್ಲಿ ವಿಶೇಷವೊಂದು ನಡೆಯುತ್ತಿದೆ. ಅಲ್ಲಿಗೆ ಎಲ್ಲೆಡೆಯಿಂದಲೂ ಮಹಾಪರಾಕ್ರಮ ಶಾಲಿಗಳಾದ ರಾಜಾಧಿರಾಜರ ದಂಡೇ ತಂತಮ್ಮ ಚತುರಂಗ ಸೇನಾಬಲಸಹಿತವಾಗಿ ಬಂದು ಸೇರುತ್ತಿದೆ".

26. ದೇಶದೇಶದ ಯಾಚಕರು ಧರ
ಣೀಶರುನ್ನತ ತುರಗ ಗಜ ರಥ
ಭೂಸುರರು ಮಂತ್ರಿಗಳು ದೈವಜ್ಞರು ಸುಗಾಯಕರು
ಭಾಸುರದ ತೇಜದಲಿ ಜನ ಸಂ
ತೋಷದಲಿ ನಡೆತರುತಲಿದೆ ಪರ
ವಾಸುದೇವನೆ ಬಲ್ಲ ದಮಯಂತಿಯ ಸ್ವಯಂವರವ

ದೇಶ ದೇಶದ ಯಾಚಕರು = ಬೇರೆ ಬೇರೆ ದೇಶಗಳಿಂದ ಬಂದ ವಿವಿಧ ರೀತಿಯ ಬೇಡಿಕೆಯುಳ್ಳವರು; ಧರಣೀಶರು + ಉನ್ನತ = ಭೂಮಂಡಲಾಧೀಶರು, ವೈಭವದಿಂದ; ತುರಗ = ಕುದುರೆ; ಗಜ = ಆನೆ; ರಥ; ಭೂಸುರರು = ಬ್ರಾಹ್ಮಣರು; ಮಂತ್ರಿಗಳು = ಸಚಿವ ವೃಂದ; ದೈವಜ್ಞರು = ಹಸ್ತಸಾಮುದ್ರಿಕ ಜ್ಞಾನಿಗಳು; ಸುಗಾಯಕರು = ಪ್ರಸಿದ್ಧಗಾಯಕರು; ಭಾಸುರದ = ರಮಣೀಯವಾದ; ತೇಜದಲಿ = ತೇಜಸ್ಸಿನಿಂದ; ಜನ = ಜನರು; ಸಂತೋಷದಲಿ = ಬಹಳ ಸಂತೋಷಚಿತ್ತರಾಗಿ; ನಡೆತರುತಲಿದೆ = ಬಂದು ಸೇರುತ್ತಿದ್ದಾರೆ; ಪರ ವಾಸುದೇವನೆ ಬಲ್ಲ = ಅಲ್ಲಿಯ ಸಡಗರದ ವೈಭವವನ್ನು ದೇವರು ಮಾತ್ರ ವರ್ಣಿಸಬಲ್ಲ; ದಮಯಂತಿಯ ಸ್ವಯಂವರವ = ದಮಯಂತಿಯ ಸ್ವಯಂವರದ ಸಡಗರವನ್ನು.

"ರಾಜಾಧಿರಾಜನೇ ಕೇಳು, ವಿದರ್ಭನಗರಕ್ಕೆ ಬೇರೆ ಬೇರೆಡೆಗಳಿಂದ ನಾನಾಪ್ರಕಾರವಾಗಿ ವಿವಿಧ ರೀತಿಯ ಬೇಡಿಕೆಗಳನ್ನುಳ್ಳ ಜನರ ದಂಡೇ ಬಂದಿಳಿಯುತ್ತಿದೆ. ಮಹಾ ಪರಾಕ್ರಮಿಗಳೆಂದು ಪ್ರಸಿದ್ಧರಾದ ಭೂಮಂಡಲಾಧೀಶರು, ಬ್ರಾಹ್ಮಣರು, ಸಚಿವವೃಂದ, ಪ್ರಸಿದ್ಧ ಗಾಯಕರು, ಮಹಾತೇಜೋಮಯವಾಗಿ ವಿರಾ

ಜಿಸುವ ನಾನಾ ವರ್ಗದ ಜನ ಪ್ರಮುಖರು, ರಾಜಾಧಿರಾಜರ ಚತುರಂಗ ಬಲಸೇನೆ, ಹಸ್ತಸಾಮುದ್ರಿಕ ಶಾಸ್ತ್ರವನ್ನು ಬಲ್ಲ ಜ್ಯೋತಿಷಿಗಳ ದಂಡು ಎಲ್ಲವೂ ಬಂದು ಸೇರುತ್ತಿವೆ. ಅಲ್ಲಿ ದಮಯಂತಿಯ ಸ್ವಯಂವರವು ಮಹಾ ವೈಭವಯುತವಾಗಿ ನಡೆಯಲಿದೆ. ಆ ವೈಭವವನ್ನು ವರ್ಣಿಸಲು ಆ ದೇವರಿಂದ ಮಾತ್ರ ಸಾಧ್ಯ. ಆ ಸಡಗರದ, ಉತ್ಸಾಹದ ಉನ್ನತಿಕೆಯನ್ನು ಏನೆಂದು ವರ್ಣಿಸಲಿ".

27. ಶಯನದಲಿ ಮಲಗಿದ ಸತಿಯನಡ
ವಿಯಲಿ ನಳನೃಪನಗಲಿ ಹೋದನು
ನಯವಿಹೀನಳಿಗಾಗಿ ರಚಿಸಿದರಾ ಸ್ವಯಂವರವ
ಪಯಣ ನಿಮಗುಂಟೀಗಳೆನೆ ನೃಪ
ಬಯಸಿ ಹೆಣ್ಣಿನ ಮೋಹದಲಿ ವಾ
ಜಿಯ ವರೂಥಕೆ ಹೂಡಬೇಳಿದ ಕರೆಸಿ ಬಾಹುಕನ

ಶಯನದಲಿ ಮಲಗಿದ = ರಾತ್ರಿಯಲಿ ನಿದ್ರೆಯಲ್ಲಿದ್ದ; ಸತಿಯನು + ಅಡವಿಯಲಿ = ಪತ್ನಿಯನ್ನು ನಡುಗಾಡಿನಲ್ಲಿ; ನಳನೃಪನು + ಅಗಲಿ = ನಳಮಹಾರಾಜನು ಅಗಲಿ; ಹೋದನು = ಹೊರಟು ಹೋದನು; ನಯ ವಿಹೀನಳಿಗಾಗಿ = ನೀತಿಭ್ರಷ್ಟಳಿಗಾಗಿ; ರಚಿಸಿದರು + ಆ ಸ್ವಯಂವರವ = ಆ ಸ್ವಯಂ ವರವನ್ನು ಏರ್ಪಡಿಸಿದ್ದಾರೆ; ಪಯಣ = ಪ್ರಯಾಣವು; ನಿಮಗೆ + ಉಂಟು + ಈಗಳು + ಎನೆ = ನಿಮಗೂ ಸಹ ಒಪ್ಪುತ್ತದೆ ತಾವೂ ಹೋಗಬಹುದು ಎನ್ನಲು; ನೃಪ = ರಾಜ ಋತುಪರ್ಣನು; ಬಯಸಿ ಹೆಣ್ಣಿನ ಮೋಹದಲಿ = ಹೆಣ್ಣಿನ ಮೋಹವಾವರಿಸಿ; ಅವಳನ್ನು ಪಡೆಯಲು ಬಯಸಿ; ವಾಜಿಯ = ಕುದುರೆಯನ್ನು; ವರೂಥಕೆ = ರಥಕ್ಕೆ; ಹೂಡದೇಳಿದ = ಹೂಡಲು ಆಜ್ಞೆಮಾಡಿದ; ಕರೆಸಿ ಬಾಹುಕನ = ಅಶ್ವವಿದ್ಯಾನಿಪುಣನಾದ ಬಾಹುಕನನ್ನು ಕರೆಸಿ.

ಸುದೇವನು ಮತ್ತೆ ತನ್ನ ಮಾತುಗಳನ್ನು ಮುಂದುವರೆಸಿ ಹೇಳಲಾರಂಭಿಸಿದನು, "ದೊರೆಯೇ ರಾತ್ರಿಯಲ್ಲಿ ಮೈಮರೆತು ನಿದ್ರಿಸುತ್ತಿದ್ದ ಧರ್ಮ ಪತ್ನಿಯನ್ನು ಕಾಡಿನಲ್ಲಿ ಏಕಾಂಗಿಯಾಗಿ ಬಿಟ್ಟಗಲಿ ನಳಮಹಾರಾಜನು ಹೊರಟುಹೋದನು. ಬಳಿಕ ನೀತಿಭ್ರಷ್ಟಳಾದ ದಮಯಂತಿಗಾಗಿ ಸ್ವಯಂವರವನ್ನು

ಏರ್ಪಡಿಸಲಾಗಿದೆ. ನಿಮಗೂ ಅದರಲ್ಲಿ ಪಾಲ್ಗೊಳ್ಳಲು ಪ್ರಯಾಣಗಳು ಆಗಬಹುದು" ಎನ್ನಲು, ಋತುಪರ್ಣನಿಗೆ ಸ್ವಯಂವರದಲ್ಲಿ ಭಾಗವಹಿಸಿ ಆ ಹೆಣ್ಣನ್ನು ಪಡೆಯ ಬೇಕೆಂಬ ಮೋಹವು ಆವರಿಸಿತು. ಆ ಕ್ಷಣವೇ ಅಶ್ವವಿದ್ಯಾಪರಿಣತನಾದ ಬಾಹುಕ ನನ್ನು ಬರಹೇಳಿ ಕುದುರೆಗಳನ್ನು ರಥಕ್ಕೆ ಹೂಡಿ ಪ್ರಯಾಣಕ್ಕೆ ಸಿದ್ಧಮಾಡ ಬೇಕೆಂದು ಆಜ್ಞೆಮಾಡಿದನು.

28. ಹೈಹಸಾದವೆನುತ್ತ ವಂದಿಸಿ
ಬಾಹುಕನು ಮಂದಿರಕೆ ಬಂದು ವಿ
ವಾಹವುಂಟೇ ಮರಳಿ ದಮಯಂತಿಗೆ ಜಗನ್ನಾಥ
ಈ ಹದನವಾರಿಂದಲಾದುದೊ
ದ್ರೋಹಿಯಾ ದಮಯಂತಿಯಿದು ಸಂ
ದೇಹವಾಗಿದೆ ಎನುತ ಚಿಂತಿಸಿ ಬಂದನರಮನೆಗೆ

ಹೈಹಸಾದವೆನುತ್ತ = 'ಅಪ್ಪಣೆ'ಯನ್ನು ಶಿರಸಾವಹಿಸಿದ್ದೇನೆ ಎನ್ನುತ್ತ; ವಂದಿಸಿ = ರಾಜನಿಗೆ ನಮಸ್ಕರಿಸಿ; ಬಾಹುಕನು ಮಂದಿರಕೆ ಬಂದು = ಬಾಹುಕನು ತನ್ನ ಮನೆಗೆ ಬಂದ; ವಿವಾಹವುಂಟೆ ಮರಳಿ ದಮಯಂತಿಗೆ = ತನ್ನ ದಮಯಂತಿಗೆ ಮರಳಿ ವಿವಾಹವೇ; ಜಗನ್ನಾಥ = ಓ! ದೇವರೇ ಎಂದು ನಿಡುಸುಯ್ಯುತ್ತ; ಈ ಹದನವು + ಆರಿಂದಲು + ಆದುದೋ = ಈ ವ್ಯವಸ್ಥೆ ಯಾರಿಂದಾಯಿತೋ!; ದ್ರೋಹಿ + ಆ + ದಮಯಂತಿ + ಇದು = ದಮಯಂತಿಯು ದ್ರೋಹಿಯೇ ಹೌದು; ಇದು ಸಂದೇಹವಾಗಿದೆ = ಆದರೂ ಈ ಸಂಗತಿಯು ಅನುಮಾ ನಾಸ್ಪದವಾಗಿದೆ; ಎನುತ ಚಿಂತಿಸಿ = ಎಂದುಕೊಳ್ಳುತ್ತ ಚಿಂತೆಗೀಡಾಗಿ; ಬಂದನರ ಮನೆಗೆ = ಅರಮನೆಗೆ ಬಂದನು.

ಅರಸನ ಅಪ್ಪಣೆಯನ್ನು ಶಿರಸಾವಹಿಸಿ ಒಪ್ಪಿ ಹಸಾದ ಎನ್ನುತ್ತ ಅವನಿಗೆ ವಂದಿಸಿದ ಬಾಹುಕನು ತನ್ನ ಮನೆಗೆ ಮರಳಿದನು, ಅವನ ಮನಸ್ಸು ಗಲಿಬಿಲಿಗೊಳಗಾಗಿತ್ತು. ತನ್ನ ದಮಯಂತಿಗೆ ಮರಳಿ ವಿವಾಹವೇ, ಓ, ಜಗನ್ನಾಥ ಎಂದು ನಿಡುಸುಯ್ದರೂ ಅವನ ಪ್ರಕ್ಷುಬ್ಧ ಮನಸ್ಥಿತಿಯ ನಡುವೆಯೇ ದಮಯಂತಿಯು ಹೀಗೆ ದ್ರೋಹವೆಸಗಲಾರಳು ಎಂಬುದೊಂದು ಆಶಾಕಿರಣವೂ

ಅನುಮಾನವೂ ತಕ್ಕೈಸಿಕೊಂಡು ಕಾಡುತ್ತಿತ್ತು. ಹಾಗೆಯೇ ಅದೇ ಚಿಂತೆಯಲ್ಲಿ ಅರ ಮನೆಗೆ ಹಿಂದಿರುಗಿದನು.

29. ಲಾಯದೊಳಗುತ್ತಮದ ತೇಜಿಯ
ನಾಯ್ದು ಹೂಡಿದ ರಥಕೆ ಸೇರಿಸಿ
ವಾಯುವೇಗದ ತೇರ ನಿಲಿಸಿದ ತಂದು ನೃಪನೆಡೆಗೆ
ರಾಯನೇರಲು ಕರಿ ತುರಗ ರಥ
ಪಾಯದಳ ಸಂದಣಿಸಿದುದು ನೆಲ
ಬಾಯ ಬಿಡೆ ಹೊರವಂಟ ನೃಪ ಘನವಾದ್ಯರಭಸದಲಿ

ಲಾಯದೊಳಗುತ್ತಮದ = ಅರಮನೆಯ ಲಾಯದಲ್ಲಿದ್ದ ಅತ್ಯುತ್ತಮವಾದ; ತೇಜಿಯನಾಯ್ದು = ಕುದುರೆಯನ್ನು ಹುಡುಕಿ ಆಯ್ದು; ಹೂಡಿದ ರಥಕೆ ಸೇರಿಸಿ = ಸಿದ್ಧಗೊಳಿಸಲಾಗಿದ್ದ ರಥಕ್ಕೆ ಸೇರಿಸಿದನು; ವಾಯುವೇಗದ ತೇರ = ವಾಯು ವೇಗದಲ್ಲಿ ಹರಿಯಬಲ್ಲಂತಹ ಆ ರಥವನ್ನು; ನಿಲಿಸಿದ ತಂದು ನೃಪನೆಡೆಗೆ = ಋತುಪರ್ಣನಿದ್ದಲ್ಲಿಗೆ ತಂದು ನಿಲ್ಲಿಸಿದನು; ರಾಯನೇರಲು = ಮಹಾರಾಜನು ಅದನ್ನು ಹತ್ತಿಕೊಳ್ಳಲು; ಕರಿ ತುರಗ ರಥ ಪಾಯದಳ = ಅವನೊಂದಿಗೆ ಆನೆ, ಕುದುರೆ, ರಥ, ಕಾಲಾಳು ಸೈನ್ಯವಷ್ಟೂ; ಸಂದಣಿಸಿದುದು = ಬಂದು ನೆರೆದುವು; ನೆಲ ಬಾಯಬಿಡೆ = ಭೂಮಿಯು ಬೊಬ್ಬಿರಿದು ಬಾಯ ಬಿಡುವಂತೆ ಮಹಾಘೋಷ ದೊಂದಿಗೆ; ಹೊರವಂಟ ನೃಪ = ಋತುಪರ್ಣನು ಹೊರಹೊರಟನು; ಘನವಾದ್ಯ ರಭಸದಲಿ = ಘನವಾದ್ಯಗಳ ಮಂಗಳ ಘೋಷವೂ ಜೊತೆಗೂಡಲು.

ಅರಮನೆಗೆ ಬಂದ ಬಾಹುಕನು ತನ್ನ ಚಿಂತೆಯನ್ನು ಬದಿಗಿಟ್ಟು ಅರ ಮನೆಗೆ ಬಂದು ಅಲ್ಲಿಯ ಲಾಯದಲ್ಲಿ ಕಟ್ಟಿದ್ದ ಕುದುರೆಗಳಲ್ಲಿ ಅತ್ಯುತ್ತಮವಾಗಿ ಓಡಬಲ್ಲಂತಹ, ಮತ್ತು ಎಲ್ಲ ರೀತಿಯಲ್ಲೂ ಸಮರ್ಥವಾಗಿರುವಂತಹ ಕುದುರೆಯೊಂದನ್ನು ಆಯ್ಕೆ ಮಾಡಿಕೊಂಡು ಅದನ್ನು ರಥಕ್ಕೆ ಹೂಡಿ, ವಾಯು ವೇಗದಲ್ಲಿ ಹರಿಯಬಲ್ಲಂತಹ ರಥವನ್ನು ರಾಜಾಧಿರಾಜನೆಡೆಗೆ ತಂದು ನಿಲ್ಲಿಸಿದನು. ಬಳಿಕ ರಾಜನು ರಥವೇರಿ ಹೊರಡಲು ಅವನೊಂದಿಗೆ ಭಾರಿ ಸಡಗರ ಸಂಭ್ರಮ

ಗಳೊಂದಿಗೆ ಮೊಳಗುವ ಘನವಾದ್ಯ ಘೋಷವೂ ಆನೆ, ಕುದುರೆ, ರಥ, ಕಾಲಾಳು ಮುಂತಾಗಿ ಚತುರಂಗ ಬಲವೂ ಹೊರಹೊರಟವು.

30. ಜನಪನೆಂದನು ಬಾಹುಕಗೆ ಮಾ
ನಿನಿಯನೀಕ್ಷಿಸಬೇಕು ನಿಲ್ಲದು
ಮನವಿದೊಂದೇ ದಿನಕೆ ನಡೆಸು ವಿದರ್ಭಪುರವರಕೆ
ಎನಲು ನಕ್ಕನು ಮನದೊಳಗೆ ತ
ನ್ನಿನಿಯಳಿಗೆ ವಿಧಿ ಬರೆದನೇ ಶಾ
ಸನವ ಮೀರುವರಾರೆನುತ ಮರುಗಿದನು ನಳನೃಪತಿ

ಜನಪನೆಂದನು ಬಾಹುಕಗೆ = ಜನಾಧಿಪತಿಯಾದ ರಾಜನು ಹೇಳಿದನು ಬಾಹುಕನಿಗೆ; ಮಾನಿನಿಯನೀಕ್ಷಿಸಬೇಕು = ಸ್ವಯಂವರಕೆ ಸಿದ್ಧವಾಗಿರುವ ಆ ಹೆಣ್ಣನ್ನು ನಾನು ನೋಡಬೇಕು; ನಿಲ್ಲದು ಮನವು + ಇದೊಂದೇ ದಿನಕೆ = ಮನಸ್ಸನ್ನು ನಿಯಂತ್ರಿಸಲಾಗುತ್ತಿಲ್ಲ. ಇದೊಂದೇ ದಿನದೊಳಗೆ; ನಡೆಸು = ರಥವನ್ನು ಹರಿಸು; ವಿದರ್ಭಪುರವರಕೆ ಎನಲು = ಶ್ರೇಷ್ಠವಾದ ಆ ವಿಗರ್ಭನಗರಕ್ಕೆ ಎಂದೆನ್ನಲು; ನಕ್ಕನು ಮನದೊಳಗೆ = ಬಾಹುಕನು ಮನಸ್ಸಿನೊಳಗೇ ನಕ್ಕನು; ತನ್ನಿನಿಯಳಿಗೆ = ತನ್ನ ಮನಃ ಪ್ರಿಯೆಗೆ; ವಿಧಿ ಬರೆದನೇ ಶಾಸನವ = ವಿಧಿ ಹೀಗಾಗಲೆಂದೇ ಬರೆದಿದ್ದನೇ ಹಣೆಬರಹವನ್ನು; ಮೀರುವರಾರೆನುತ = ಅದನ್ನು ಮೀರಲು ಯಾರು ಶಕ್ತರು ಎಂದುಕೊಂಡು; ಮರುಗಿದನು ನಳನೃಪತಿ = ಮನಸ್ಸಿನೊಳಗೇ ಮರುಗಿದನು ನಳಮಹಾರಾಜ.

ಬಾಹುಕನು ರಥವನ್ನು ಹೊರಹೊರಡಿಸಿದಾಗ "ವಿದರ್ಭಪುರದೆಡೆಗೆ ಆದಷ್ಟು ವೇಗವಾಗಿ ರಥವನ್ನು ಹರಿಸು. ಅದು ಒಂದೇ ದಿನದೊಳಗೆ ಅಲ್ಲಿಗೆ ತಲುಪಬೇಕು. ನನಗೆ ಆ ಸ್ವಯಂವರ ವಧುವನ್ನು ನೋಡುವ ಹಂಬಲ ಬಹಳ ವಾಗಿದೆ" ಎಂದು ಅಯೋಧ್ಯೆಯ ಜನಾಧಿಪತಿಯಾದ ಋತುಪರ್ಣನು ಅಪ್ಪಣೆ ಮಾಡಿದನು. ಅವನ ಮನದಾತುರವನ್ನು ಗಮನಿಸಿದ ಬಾಹುಕನಿಗೆ ನಗು ಬಂತು. ಹಾಗೆಯೇ ತನ್ನಿನಿಯಳಾದ ದಮಯಂತಿಯ ಹಣೆಯಲ್ಲಿ ವಿಧಿ ಹೀಗೊಂದು

ಶಾಸನವನ್ನು ಬರೆದನೇ, ವಿಧಿ ಬರೆಹವನ್ನು ಮೀರುವವರಾರು ಎಂಬ ವ್ಯಥಿತ ಹತಾಶ ಭಾವವೂ ಒಳಗಿಂದೊಳಗೇ ಉಕ್ಕಿ ತನ್ನ ಮತ್ತು ದಮಯಂತಿಯ ಸ್ಥಿತಿಗಾಗಿ ಮರುಗಿದನು.

31. ಕರದ ವಾಘೆಯ ಸಡಿಲ ಬಿಡೆ ಮುಂ
ಬರಿದು ಚಿಮ್ಮಿದುವಡಿಗಡಿಗೆ ರಥ
ತುರಗ ಹಾಯ್ದುದು ತೇರು ಮುಂದಕೆ ಪವನವೇಗದಲಿ
ಭರದೊಳೈತರೆ ನೃಪನ ಹಚ್ಚಡ
ಧರೆಗೆ ಬೀಳಲು ಸಾರಥಿಯನೆ
ಚ್ಚರಿಸಿದನು ಋತುಪರ್ಣನಿದಕಿನ್ನೇನು ಹದನೆನುತ

ಕರದ ವಾಘೆಯ ಸಡಿಲ ಬಿಡೆ = ರಾಜನ ಆತುರವನ್ನು ಮನದಲ್ಲಿ ಭಾವಿಸಿದ ಬಾಹುಕನು ಕೈಯ್ಯಲ್ಲಿ ಹಿಡಿದಿದ್ದ ಕಡಿವಾಣವನ್ನು ಸಡಿಲಬಿಡಲು; ಮುಂಬರಿದು = ಮುಂದು ಮುಂದಕ್ಕೆ ಹರಿದು; ಚಿಮ್ಮಿದುವಡಿಗಡಿಗೆ= ಕುದುರೆಯು ಅಡಿಗಡಿಗೂ ರಭಸದಿಂದ ಚಿಮ್ಮುತ್ತ ಧಾವಿಸಿತು; ರಥ, ತುರಗ ಹಾಯ್ದುದು ತೇರು = ರಥದೊಂದಿಗೆ ಕುದುರೆಯು ವೇಗವಾಗಿ ಹಾಯ್ದು ಹೋಯಿತು; ಪವನ ವೇಗದಲಿ = ವಾಯು ವೇಗದಲ್ಲಿ; ಭರದೊಳು + ಐತರೆ = ಹಾಗೆ ಅತ್ಯಂತ ರಭಸದಿಂದ ರಥವು ಹರಿದೋಡಿದುದರ ಫಲವಾಗಿ; ನೃಪನ ಹಚ್ಚಡ = ನೃಪನು ಹೊದ್ದ ಮೇಲು ಹೊದಿಕೆಯು; ಧರೆಗೆ ಬೀಳಲು = ಗಾಳಿಗೆ ಹಾರಿ ಭೂಮಿಗೆ ಬೀಳಲು; ಸಾರಥಿಯನೆಚ್ಚರಿಸಿದನು = ಆ ಕ್ಷಣವೇ ರಾಜನು ಸಾರಥಿಯ ಗಮನ ವನ್ನು ಅತ್ತ ಸೆಳೆದನು. ಋತುಪರ್ಣನು + ಇದಕೆ + ಇನ್ನೇನು = ಇದಕ್ಕೆ ಇನ್ನು ಏನು ಮಾಡುವುದು; ಹದನೆನುತ = ಮುಂದಿನ ಕ್ರಮ ಹೇಗೆ ಎಂದನು ಋತುಪರ್ಣ.

ಋತುಪರ್ಣನ ಮನದವಸರವನ್ನು ಗಮನಿಸಿದ ಬಾಹುಕನು ವೇಗವಾಗಿ ಹೋಗಲುದ್ದೇಶಿಸಿ ಕೈಯ್ಯಲ್ಲಿ ಹಿಡಿದಿದ್ದ ಕುದುರೆಯ ಕಡಿವಾಣವನ್ನು ಸಡಿಲಗೊಳಿಸಿದನು. ಆ ಕ್ಷಣದಲ್ಲಿಯೇ ಕುದುರೆಯು ಮುಂದು ಮುಂದಕ್ಕೆ ವೇಗವಾಗಿ ರಭಸದಿಂದ ಚಿಮ್ಮಿ ಧಾವಿಸುತ್ತ ವಾಯುವೇಗದಿಂದ ಹರಿದೋಡಿತು. ಆ

ವಾಯು ವೇಗಕ್ಕೆ ಋತುಪರ್ಣನು ಹೊದೆದುಕೊಂಡಿದ್ದ ಮೇಲು ಹೊದಿಕೆಯು ಗಾಳಿಗೆ ಹಾರಿ ಭೂಮಿಗೆ ಬಿದ್ದಿತು. ಅದನ್ನು ಕಂಡ ನೃಪನು ಬಾಹುಕನ ಗಮನವನ್ನು ಅತ್ತ ಸೆಳೆದು ಈಗ ಮುಂದೇನು ಮಾಡುವುದು ಎಂದು ಕೇಳಿದನು.

32. ಜೀಯ ಚಿತ್ತೈಸುರವಣಿಸಿ ನಿ
ರ್ದಾಯದಲಿ ಹಿಂದುಳಿದುದಂಬರ
ವಾಯುಗತಿಯಲಿ ದಾಟಿ ಬಂದೆವು ಹಲವು ಯೋಜನವ
ಹೋಯಿತಾ ಮಾತೇಕೆ ನಡೆಯೆನೆ
ರಾಯ ಮೆಚ್ಚಿದ ಸಾರಥಿಯ ಬಿರು
ದಾಯಕನು ನೀನೆಂದು ಕೊಂಡಾಡಿದನು ಬಾಹುಕನ

ಜೀಯ = ಸ್ವಾಮೀ; ಚಿತ್ತೈಸು + ಉರವಣಿಸಿ = ಗಮನಿಸು, ವೇಗವಾಗಿ; ನಿರ್ದಾಯದಲಿ = ಸಂಪೂರ್ಣವಾಗಿ ನಾವು ಮುಂದೆ ಸಾಗುತ್ತಿರುವುದರಿಂದ; ಹಿಂದುಳಿದುದು + ಅಂಬರ = ತಾವು ಹೊದ್ದ ಹಚ್ಚಡವು ಈಗಾಗಲೇ ಬಹಳ ಹಿಂದೆ ಉಳಿಯಿತು; ವಾಯುಗತಿಯಲಿ = ಬಹಳ ವೇಗದಿಂದ; ದಾಟಿ ಬಂದೆವು = ಸಾಗಿ ಬಂದಿದ್ದೇವೆ; ಹಲವು ಯೋಜನವ = ಹಲವು ಯೋಜನ ದೂರ; ಹೋಯಿತು + ಆ ಮಾತೇಕೆ = ಹೋದದ್ದು ಹೋಯಿತು; ಈಗ ಅದರ ಚಿಂತೆ ಏಕೆ?; ನಡೆ + ಎನೆ = ಮುಂದೆ ನಡೆ ಎನ್ನಲು; ರಾಯ ಮೆಚ್ಚಿದ ಸಾರಥಿಯ = ರಾಜನಿಗೆ ಸಾರಥಿಯ ಸಾಮರ್ಥ್ಯವು ಮೆಚ್ಚು ಮೂಡಿಸಿತು. ಬಿರುದಾಯಕನು ನೀನು + ಎಂದು = 'ಸಮರ್ಥನೆಂಬ ಬಿರುದಿಗೆ ನೀನು ತಕ್ಕವನು' ಎಂದು; ಕೊಂಡಾಡಿದನು ಬಾಹುಕನ = ಬಾಹುಕನನ್ನು ಹೊಗಳಿದನು.

ಸ್ವಾಮೀ, ಗಮನಿಸಿ, ಅಡೆತಡೆಗಳಿಲ್ಲದೆ ವಾಯುವಿನಂತೆ ಅತ್ಯಂತ ವೇಗವಾಗಿ ಸಾಗಿ ಹೋಗುತ್ತಿರುವ ಕಾರಣ ಹಾರಿಹೋದ ತಮ್ಮ ಹಚ್ಚಡವು ಈಗಾಗಲೇ ಬಹಳ ಹಿಂದೆ ಉಳಿದಿದೆ. ಅಲ್ಲಿಂದ ಬಹು ಯೋಜನಗಳನ್ನು ದಾಟಿ ಬಂದಿದ್ದೇವೆ. ಹೋದದ್ದು ಹೋಯಿತು. ಈಗದರ ಚಿಂತೆಯೇಕೆ? ಮುಂದೆ ನಡೆಯುವುದರತ್ತ ಗಮನ ಹರಿಸೋಣ ಎಂದ ಬಾಹುಕನ ನಡೆ, ನುಡಿ, ಸಾರಥ್ಯದ ಸಾಮರ್ಥ್ಯ

ವೆಲ್ಲವನ್ನೂ ಕಂಡು ಋತುಪರ್ಣನಿಗೆ ಅವನೆಡೆಗೆ ಅಪಾರ ಮೆಚ್ಚುಗೆ ಮೂಡಿತು. 'ಸಮರ್ಥ' ಎಂಬ ಬಿರುದಿಗೆ ನೀನು ತಕ್ಕವನು ಎಂದು ಬಾಹುಕನನ್ನು ಕೊಂಡಾಡಿದನು.

33. ಮುಂದೆ ಕಂಡನು ಬರುತಲಡವಿಯೊ
ಳೊಂದು ತಾರೆಯ ಮರನನದರೊಳು
ಸಂದ ಫಲಪರ್ಣಂಗಳೆಣಿಸದೆ ಸೂತ ಪೇಳೆನಲು
ಇಂದೆನಗೆ ಮತಿದೋರದವನಿಪ
ಕುಂದದೆನಿಸಿದ ಪೇಳು ನೀನೆನ
ಗೆಂದೊಡಾ ಸಾರಥಿಗೆ ಲೆಕ್ಕವನರುಹಿದನು ನೃಪತಿ

ಮುಂದೆ ಕಂಡನು = ಮುಂದೆ ಸಾಗುತ್ತಿರುವ ಸಂದರ್ಭದಲ್ಲಿ ಕಂಡನು; ಬರುತಲಿ + ಅಡವಿಯೊಳು + ಒಂದು = ಕಾಡನ್ನು ದಾಟಿ ಬರುತ್ತಲಿರುವಾಗ; ತಾರೆಯ ಮರನನ್ + ಅದರೊಳು = ಒಂದು ತಾರೆಯ ಮರವನ್ನು ಅದರಲ್ಲಿ; ಸಂದ = ಬಿಟ್ಟಿರುವ; ಫಲ ಪರ್ಣಂಗಳೆಣಿಸದೆ = ಹಣ್ಣು ಮತ್ತು ಎಲೆಗಳನ್ನು ಎಷ್ಟಿವೆ ಎಂದು ಎಣಿಸದೆಯೇ; ಸೂತ ಪೇಳೆನಲು = ಎಷ್ಟಿದೆ ಸಾರಥಿಯೇ ಹೇಳು ಎಂದು ರಾಜನು ಕೇಳಲು; ಇಂದು + ಎನಗೆ = ಈ ದಿನ ನನಗೆ; ಮತಿ + ತೋರದು + ಅವನಿಪ = ಮನಸ್ಸು ಸರಿಯಿಲ್ಲ ದೊರೆಯೇ; ಕುಂದದೆನಿಸಿದ ಪೇಳು = ಏನನ್ನೂ ಮರೆಮಾಡದೆ ನಿನಗೆ ಅನಿಸಿದ್ದನ್ನು ಹೇಳು; ನೀನು + ಎನಗೆ + ಎಂದೊಡೆ + ಆ = ನೀನೇ ನನಗೆ ಎನ್ನಲು; ಆ ಸಾರಥಿಗೆ = ಆ ಬಾಹುಕನಿಗೆ ಲೆಕ್ಕವನು + ಅರುಹಿದನು ನೃಪತಿ = ಮಹಾರಾಜನು ಸರಿಯಾದ ಲೆಕ್ಕವನ್ನು ಹೇಳಿದನು.

ಹಾಗೆಯೇ ಮಹಾರಾಜನನ್ನು ಬಾಹುಕನು ವಾಯುವೇಗದಿಂದ ಮುಂದು ಮುಂದಕ್ಕೆ ಕರೆದೊಯ್ಯುತ್ತಿರುವಾಗ ಮುಂದೆ ಒಂದೆಡೆಯಲ್ಲಿ ಎದುರಾದ ಕಾಡನ್ನು ದಾಟಿ ಬರುವಾಗ ಮಹಾರಾಜನು ತಮ್ಮೆದುರು ಕಂಡ ಒಂದು ತಾರೆಯ ಮರವನ್ನು ತೋರಿಸಿ ಬಾಹುಕನಿಗೆ 'ಅದರಲ್ಲಿರುವ ಎಲೆಗಳನ್ನು ಹಣ್ಣನ್ನೂ ಎಷ್ಟಿದೆ ಎಂದು ಎಣಿಸದೆಯೇ ಲೆಕ್ಕಮಾಡಿ ಹೇಳು' ಎಂದು ಕೇಳಲು, ಬಾಹುಕನು "ದೊರೆಯೇ

ಇಂದೇಕೋ ನನ್ನ ಮನಸ್ಸು ಸರಿಯಿಲ್ಲ, ಏನೊಂದೂ ತಿಳಿಯುತ್ತಿಲ್ಲ. ಅದೇನೆಂಬುದನ್ನು ನೀನೇ ಮರೆಮಾಚದೆ ಹೇಳು" ಎನ್ನಲು ರಾಜನು ತಾನೇ ಸರಿಯಾದ ಲೆಕ್ಕವನ್ನು ಹೇಳಿದನು.

34. ಇಳಿದು ರಥವನು ಬಂದು ವೃಕ್ಷದ
ಬಳಿಗೆ ನಿಂದಾ ಶಾಖೆಗಳಲಿಹ
ಫಲದ ಪರ್ಣಂಗಳೆಣಿಸಿದನಾ ಪದ್ಮಸಂಖ್ಯೆಯಲಿ
ಒಲಿದು ಲೆಕ್ಕವ ಕಂಡು ತಾ ಮನ
ನಲಿದು ನಳನೃಪ ಪುಷ್ಕರನ ತಾ
ಗೆಲುವ ಹದನಾಯ್ತೆನುತ ಬರೆ ಕಲಿಪುರುಷನಿದಿರಾದ

ಇಳಿದು ರಥವನು = ಬಾಹುಕನು ರಥದಿಂದಿಳಿದು; ಬಂದು ವೃಕ್ಷದ ಬಳಿಗೆ = ವೃಕ್ಷದ ಹತ್ತಿರ ಬಂದು; ನಿಂದು + ಆ ಶಾಖೆಗಳಲಿ + ಇಹ = ನಿಂತು, ಆ ಕೊಂಬೆಗಳಲ್ಲಿ ಇರುವ; ಫಲದ = ಹಣ್ಣುಗಳನ್ನೂ; ಪರ್ಣಂಗಳನು + ಎಣಿಸಿದನು + ಆ = ಎಲೆಗಳನ್ನೂ ಎಣಿಸಿದನು; ಆ ಪದ್ಮ ಸಂಖ್ಯೆಯಲಿ = ಶತ ಲಕ್ಷಕೋಟಿ ಸಂಖ್ಯೆಯಲ್ಲಿ; ಒಲಿದು ತಾ ಲೆಕ್ಕವ ಕಂಡು = ಆ ಲೆಕ್ಕಾಚಾರವನ್ನು ಕಂಡು ಹಿಗ್ಗಿ; ತಾ ಮನ ನಲಿದು = ಅವನ ಮನಸ್ಸು ಹಿಗ್ಗಿ ಹೋಗಲು; ನಳನೃಪ = ನಳಮಹಾರಾಜನು; ಪುಷ್ಕರನ ತಾ ಗೆಲುವ ಹದನಾಯ್ತೆನುತ = ಪುಷ್ಕರನನ್ನು ಗೆಲ್ಲುವ ಸಮಯವು ಸಮೀಪಿಸಿತು ಎಂದುಕೊಳ್ಳುತ್ತ; ಬರೆ = ಬರುತ್ತಿರಲು; ಕಲಿಪುರುಷನು + ಇದಿರಾದ = ಕಲಿಪುರುಷನು ಎದುರು ಬಂದನು.

ಕುತೂಹಲಿತನಾದ ಬಾಹುಕನು ತನ್ನ ಮನಸ್ಸು ಅಪಾರ ಕ್ಷೋಭೆಗೊಳಗಾಗಿದ್ದರೂ ರಥದಿಂದ ಕೆಳಗಿಳಿದು ಬಂದು ಮರದ ಹತ್ತಿರ ನಿಂತು ಅದರ ಕೊಂಬೆಗಳಲ್ಲಿದ್ದ ಹಣ್ಣು ಹಾಗೂ ಎಲೆಗಳನ್ನು ಎಣಿಸಿದನು. ಅವು ಋತುಪರ್ಣನು ಹೇಳಿದ್ದಂತೆಯೇ ಶತಲಕ್ಷ ಕೋಟಿ ಸಂಖ್ಯೆಯಲ್ಲಿದ್ದುದನ್ನು ಕಂಡು ರಾಜನ ಲೆಕ್ಕಾಚಾರದ ಶಕ್ತಿಯನ್ನು ಕಂಡು ಸಂತೋಷದಿಂದ ಹಿಗ್ಗಿಹೋದನು. ಮನಸ್ಸು ಪ್ರಫುಲ್ಲಿತವಾಗಿದ್ದನ್ನು ಗಮನಿಸಿಕೊಳ್ಳುತ್ತ, ತಾನು ಪುಷ್ಕರನನ್ನು ಗೆಲ್ಲುವ

ಸಮಯ ಸಮೀಪಿಸುತ್ತಿರುವಂತಿದೆ ಎಂದುಕೊಂಡನು. ಅದನ್ನೇ ಯೋಚಿಸುತ್ತ ಮುಂದಕ್ಕೆ ಬರುತ್ತಿದ್ದಂತೆ ಎದುರಿಗೆ ತಟ್ಟನೆ ಕಲಿಪುರುಷನು ಇದಿರಾದನು.

35. ಎಲೆ ನೃಪಾಲಕ ನಿನ್ನ ಸತ್ಯದ
ನೆಲೆಯನೀಕ್ಷಿಸಬೇಕೆನುತ ಬಂ
ದಳಲಿಸಿದೆ ಹಿರಿದಾಗಿ ನೋಯದಿರಿನ್ನು ಚಿತ್ತದಲಿ
ತೊಲಗಿದೆನು ಇಂದಿನಲಿ ಶುಭಮಂ
ಗಳಕರವು ನನಗಪ್ಪುದೆನಲಾ
ನಳನೃಪತಿ ಖತಿಗೊಂಡು ಶಾಪವ ಕೊಡದೆ ಮನ್ನಿಸಿದ

ಎಲೆ ನೃಪಾಲಕ = ಕಲಿಪುರುಷನು ನಳನನ್ನು ಕುರಿತು ಮಾತನಾಡಲಾರಂಭಿಸಿದನು, ಎಲೈ ರಾಜನೇ; ನಿನ್ನ ಸತ್ಯದ = ನಿನ್ನ ಸತ್ಯವಂತಿಕೆಯ; ನೆಲೆಯನು + ಈಕ್ಷಿಸಬೇಕು + ಎನುತ = ಸಾಮರ್ಥ್ಯವನ್ನು ಪರೀಕ್ಷಿಸಬೇಕು ಎಂದು; ಬಂದು ಅಳಲಿಸಿದೆ ಹಿರಿದಾಗಿ = ವಿಪರೀತವಾಗಿ ನಿನ್ನನ್ನು ಕಾಡಿಸಿ ಪೀಡಿಸಿದೆ; ನೋಯದಿರು + ಇನ್ನು ಚಿತ್ತದಲಿ = ಇನ್ನು ಮನಸ್ಸಿನಲ್ಲಿ ಕೊರಗದಿರು; ತೊಲಗಿದೆನು = ನಿನ್ನನ್ನು ಕಾಡಿಸದೆ ಹೊರಟು ಹೋಗುತ್ತಿದ್ದೇನೆ; ಇಂದಿನಲಿ = ಇಂದೇ, ಈಗಲೇ; ಶುಭಮಂಗಳಕರವು = ಇದು ಶುಭಕರವೂ ಮಂಗಳಕರವೂ ಆಗಿದೆ; ನನಗಪ್ಪುದು + ಎನಲು = ನನಗೆ ಎಂದೆನಲು; ಆ ನಳನೃಪತಿ = ನಳಮಹಾರಾಜನು; ಖತಿಗೊಂಡು = ವಿಪರೀತವಾಗಿ ಕೋಪಗೊಂಡನು; ಶಾಪವ ಕೊಡದೆ = ಆದರೂ ಆ ಕಲಿಪುರುಷನಿಗೆ ಶಾಪ ಹಾಕದೆ; ಮನ್ನಿಸಿದ = ಅವನ ತಪ್ಪನ್ನು ಕ್ಷಮಿಸಿದನು.

ನಳಮಹಾರಾಜನು ಅಂದುಕೊಂಡಂತೆಯೇ ಅವನ ಜೀವನದ ಸುಮಧುರ ಕ್ಷಣಗಳು ಮರಳಿ ಎದುರಾದುವೇನೋ ಎಂಬಂತೆ ಕಲಿಪುರುಷನು ಇದಿರಾದನು. ನಳನನ್ನು ಕಂಡು ಕಲಿಪುರುಷನು ಹೇಳಲಾರಂಭಿಸಿದನು. "ಎಲೈ ನೃಪಾಲಕನೇ, ನಿನ್ನ ಸತ್ಯವಂತಿಕೆಯ ಸಾಮರ್ಥ್ಯವೇನು ಎಂಬುದನ್ನು ಪರೀಕ್ಷಿಸಲೆಂದೇ ಇಲ್ಲಿಯವರೆಗೆ ನಿನ್ನನ್ನು ಕಾಡಿಸಿ ಪೀಡಿಸಿ ಅಳಲಿಸಿದೆ. ಇನ್ನು ಮನಸ್ಸಿನಲ್ಲಿರುವ ಕೊರಗನ್ನು ಬಿಡು. ಇಂದೇ, ಈಗಲೇ ನಾನು ನಿನ್ನನ್ನು ಬಿಟ್ಟು ತೊಲಗಿ ಹೋಗುತ್ತಿದ್ದೇನೆ. ಇದು ನನಗೆ

ಮಂಗಳಕರವೂ ಶುಭಕರವೂ ಆಗಿದೆ" ಎಂದು ಹೇಳಲು ನಳಮಹಾರಾಜನಿಗೆ ಅವನ ಮೇಲೆ ವಿಪರೀತ ಸಿಟ್ಟು ಬಂತು. ಆದರೂ ಅದನ್ನು ತೋರಗೊಡದೆ, ಅವನಿಗೆ ಶಾಪ ಹಾಕದೆ ಅವನ ತಪ್ಪನ್ನು ಕ್ಷಮಿಸಿದನು.

36. ಮಾನವಾಧಿಪ ಕೇಳು ಲೋಕಕೆ
ದೀನಜನಬಾಂಧವನು ನಳನೃಪ
ಕಾನನದೊಳವನತ್ತ ಕಳುಹಿಸಿ ಬಂದು ರಥವೇರಿ
ಆ ನರೇಂದ್ರಂಗಶ್ವಹೃದಯವ
ತಾನರುಹಿ ಆತನಲಿ ಪಡೆದನು
ಸಾನುರಾಗದಿ ಭೂರುಹದ ಹೃದಯವನು ನಿಮಿಷದಲಿ

ಮಾನವಾಧಿಪ ಕೇಳು = ರೋಮಶನು ಧರ್ಮರಾಯನಿಗೆ ನಳನನ್ನು ಕುರಿತು ಹೇಳುವುದನ್ನು ಮುಂದುವರಿಸಿದನು. ಮಾನವ ಶ್ರೇಷ್ಠನೇ ಕೇಳು; ಲೋಕಕೆ = ಪ್ರಪಂಚದಲ್ಲಿ; ದೀನಜನಬಾಂಧವನು ನಳನೃಪ = ನಳಮಹಾರಾಜನು ದೀನ ಜನರಿಗೆ ಬಂಧುವಂತಿದ್ದನು; ಕಾನನದೊಳ್ + ಅವನ + ಅತ್ತ ಕಳುಹಿಸಿ = ಕಾಡಿನಲ್ಲಿ ಎದುರಾದ ಆ ಕಲಿಪುರುಷನನ್ನು ಅತ್ತ ಕಳುಹಿಸಿ; ಬಂದು ರಥವೇರಿ = ಬಂದು ಪುನಃ ರಥವೇರಿದನು; ಆ ನರೇಂದ್ರಂಗೆ + ಅಶ್ವಹೃದಯವ = ಋತುಪರ್ಣನೆಂಬ ಆ ರಾಜಶ್ರೇಷ್ಠನಿಗೆ ತಾನು ಕಲಿತಿದ್ದ ಅಶ್ವವಿದ್ಯೆಯನ್ನು; ತಾನರುಹಿ = ತಾನೇ ಕಲಿಸಿದನು; ಆತನಲಿ ಪಡೆದನು = ಪ್ರತಿಯಾಗಿ ಅವನಿಂದ ಕಲಿತುಕೊಂಡನು; ಸಾನುರಾಗದಿ = ಬಹಳ ಇಷ್ಟಪಟ್ಟು; ಭೂರುಹದ ಹೃದಯ ವನು = ವೃಕ್ಷವಿದ್ಯೆಯನ್ನು; ನಿಮಿಷದಲಿ = ಆಗಲೇ ನಿಮಿಷಮಾತ್ರದಲ್ಲಿ.

ರೋಮಶನು ಧರ್ಮರಾಯನಿಗೆ ಕಥೆಯನ್ನು ಹೇಳುವುದನ್ನು ಮುಂದುವರಿಸಿದನು. ಎಲೈ ಮಾನವ ಶ್ರೇಷ್ಠ ಧರ್ಮರಾಯನೇ ಕೇಳು, ಪ್ರಪಂಚದಲ್ಲಿ ನಳಮಹಾರಾಜನು ದೀನಜನರಿಗೆ ಬಂಧುವಂತಿದ್ದನು. ಕಲಿಪುರುಷನನ್ನು ಕಾಡಿನಲ್ಲಿ ಅತ್ತ ಕಳುಹಿಸಿ ಬಂದು ಪುನಃ ರಥವೇರಿ ಋತುಪರ್ಣನೆಂಬ ಅಯೋಧ್ಯಾ ರಾಜಶ್ರೇಷ್ಠನಿಗೆ ತನಗೆ ಒಲಿದಿದ್ದ ಅಶ್ವಹೃದಯವನ್ನು ಕಲಿಸಿದನು. ಹಾಗೆಯೇ ಅವನಿಂದ

ತಾನು ವೃಕ್ಷವಿದ್ಯೆಯನ್ನು ಆಗಲೇ ನಿಮಿಷ ಮಾತ್ರದಲ್ಲಿ ಬಹಳ ಇಷ್ಟಪಟ್ಟು ಕಲಿತು ಕೊಂಡನು.

37. ಕರದ ವಾಘೆಯ ಕೊಂಡು ನೃಪಗೆ
ಚ್ಚರಿಸಿ ನೂಕಿದ ತೇಜಿಗಳು ಹೂಂ
ಕರಿಸಿ ಮನ ಮುಂಕೊಂಡು ಹಾಯ್ದುದು ಬಿಟ್ಟ ಸೂಟಿಯಲಿ
ಭರದ ಗಮನವನೇನನೆಂಬೆನು
ನೆರೆದ ಜನವಲ್ಲಲ್ಲಿ ನಿಂದುದು
ಧರೆಯೊಳೀ ಸಾರಥಿಗೆ ಸರಿಯಾರರಸ ಕೇಳೆಂದ

ಕರದ ವಾಘೆಯ ಕೊಂಡು = ಬಳಿಕ ಮತ್ತೆ ಕೈಯ್ಯಲ್ಲಿ ಕುದುರೆಯ ಕಡಿವಾಣವನ್ನು ಹಿಡಿದನು; ನೃಪಗೆಚ್ಚರಿಸಿ = ಋತುಪರ್ಣನಿಗೆ ಎಚ್ಚರದಿಂದರ ಬೇಕೆಂದು ಸೂಚಿಸಿ; ನೂಕಿದ ತೇಜಿಗಳು = ಕುದುರೆಗಳನ್ನು ಚಪ್ಪರಿಸಿ ಸೂಚನೆ ನೀಡಿದನು; ಹೂಂಕರಿಸಿ ಮನ ಮುಂಕೊಂಡು = ಅವನ ಸೂಚನೆಯನ್ನರಿತು ಕುದುರೆಗಳು ಹೂಂಕರಿಸುತ್ತ ಮನೋವೇಗದಲ್ಲಿ; ಹಾಯ್ದುವು ಬಿಟ್ಟ ಸೂಟಿಯಲಿ = ಹಾಯ್ದೋಡಿದುವು ಅತಿ ವೇಗವ ಹಿಡಿದು; ಭರದ = ಅವು ಕೊಂಡ ವೇಗದ; ಗಮನ ವನು + ಏನನು + ಎಂಬೆನು = ಸಂಚಾರ ಲಕ್ಷ್ಯವನ್ನು ಏನೆಂದು ವರ್ಣಿಸಲಿ; ನೆರೆದ = ಗುಂಪುಗೂಡಿದ; ಜನವು + ಅಲ್ಲಲ್ಲಿ = ಜನಸಮೂಹವು ಅಲ್ಲಲ್ಲಿ; ನಿಂದುದು = ನಿಂತು ನೋಡಿತು; ಧರೆಯೊಳ್ + ಈ ಸಾರಥಿಗೆ = ಈ ಭೂಮಂಡದಲ್ಲಿ ಇಂತಹ ಸಾರಥಿಗೆ; ಸರಿಯಾರು + ಅರಸ + ಕೇಳೆಂದ = ಸರಿಸಾಟಿಯಾಗಿರುವಂಥವರು ಯಾರಿದ್ದಾರೆ ಅರಸನೇ ಎಂದ ರೋಮಶ ಮುನಿ.

“ತಿರುಗಿ ಬಂದು ರಥವನ್ನೇರಿ ಬಾಹುಕನು ಕುದುರೆಯ ಕಡಿವಾಣವನ್ನು ಹಿಡಿದು, ಋತುಪರ್ಣನಿಗೆ ಎಚ್ಚರದಿಂದಿರಲು ಸೂಚಿಸಿ, ಕುದುರೆಗಳ ಬೆನ್ನು ಚಪ್ಪರಿಸಿ ಸೂಚನೆಗಳನ್ನು ನೀಡಲು ಅವನ ಮನದಿಂಗಿತವನ್ನು ಗ್ರಹಿಸಿದ ಕುದುರೆಗಳು ಹುಮ್ಮಸ್ಸಿನಿಂದ ಹೂಂಕರಿಸುತ್ತ ಮನೋವೇಗದಲ್ಲಿ ಹಾಯ್ದು ಓಡಿದುವು. ಅವುಗಳ ವೇಗದ ಅತಿಶಯತೆಯನ್ನು ನಾನಾದರೂ ಹೇಗೆಂದು ವರ್ಣಿಸಲಿ ಧರ್ಮರಾಯನೇ ಕೇಳು, ಅವು ಲಕ್ಷ್ಯವಿಟ್ಟ ಸಂಚಾರ ಪಥಗಮನದ ವೇಗಕ್ಕೆ ಬೆರಗಾಗಿ ಆ ಪ್ರದೇಶದಲ್ಲಿ ಸಂಚರಿಸುತ್ತಿದ್ದ ಜನಸಮೂಹವು ಅಲ್ಲಲ್ಲಿ ನಿಂತು ವೀಕ್ಷಿಸುತ್ತಿತ್ತು. ಈ

ಭೂಮಂಡಲದಲ್ಲಿ ನಳಮಹಾರಾಜನಂತಹ ಚತುರ ಸಾರಥಿ ಮತ್ತೊಬ್ಬರನ್ನು ನಾಕಾಣೆ" ಎಂದನು ರೋಮಶ ಮುನಿ.

38. ತುರಗಹೇಷಾರವದ ಗಾಲಿಯ
ಧರಧುರದ ಚೀತ್ಕೃತಿಯ ಸಾರಥಿ
ಯುರವಣೆಯ ರಥದಚ್ಚುಗಳ ಝೇಂಕಾರನಾದದಲಿ
ಭರದಿ ಕೆಂಧೂಳಿಡುತ ಬರಲಾ
ಪುರಜನರು ಸಂದಣಿಸಿ ನೋಡಲು
ಪರಿಚರರು ಬಂದರು ವಿದರ್ಭನೃಪಾಲಗರುಹಿದರು

ತುರಗಹೇಷಾರವದ = ಕುದುರೆಗಳ ಕೆನೆತದ ಶಬ್ದದ; ಗಾಲಿಯ ಧರಧುರದ ಚೀತ್ಕೃತಿಯ = ರಥದ ಗಾಲಿಗಳ ಅಬ್ಬರದ ಕಿರ್ ಗುಟ್ಟುವಿಕೆಯ ಗದ್ದಲದ; ಸಾರಥಿಯ + ಉರವಣೆಯ = ಸಾರಥಿಯು ಆತುರದಿಂದ ಸಡಗರಿಸುವ; ರಥದಚ್ಚುಗಳ = ರಥದ ಅಚ್ಚುಗಳ; ಝೇಂಕಾರನಾದದಲಿ = ಝೇಂಕಾರನಾದದಲ್ಲಿ; ಭರದಿ = ರಭಸದಿಂದ; ಕೆಂಧೂಳಿಡುತ = ಕೆಂಧೂಳನ್ನು ಎಬ್ಬಿಸುತ್ತ; ಬರಲು + ಆ ಪುರಜನರು = ಆ ನಗರದ ಪ್ರಜೆಗಳೆಲ್ಲರೂ; ಸಂದಣಿಸಿ = ಗುಂಪುಗೂಡಿಕೊಂಡು ಬಂದು; ನೋಡಲು = ನೋಡುತ್ತಿರಲು; ಪರಿಚರರು = ಅರಮನೆಯ ಪರಿಚಾರಕರು; ಬಂದರು = ಕುತೂಹಲದಿಂದ ಬಂದು ನೋಡಿ; ವಿದರ್ಭನೃಪಾಲಗೆ + ಅರುಹಿದರು = ವಿದರ್ಭರಾಜ ಭೀಮನೃಪನಿಗೆ ವಿಷಯವನ್ನು ಹೇಳಿದರು.

ಹರಿದೋಡುವ ವೇಗದೊಂದಿಗೆ ಬೆರೆತ ಕುದುರೆಗಳ ಉತ್ಸಾಹದ ಹೇಷಾರವ ಶಬ್ದ, ರಥದ ಗಾಲಿಗಳ ಅಬ್ಬರದ ಕಿರುಗಟ್ಟುವಿಕೆಯ ಗದ್ದಲ, ರಥವನ್ನು ಓಡಿಸುತ್ತಿದ್ದ ಸಾರಥಿಯ ಸಡಗರದ ದನಿ, ಅವೆಲ್ಲವುಗಳೊಂದಿಗೆ ರಥದ ಅಚ್ಚುಗಳ ಝೇಂಕಾರ ನಾದದೊಂದಿಗೆ ರಭಸದಿಂದೋಡುವ ರಥವು ಕೆಂಧೂಳನ್ನು ಮುಗಿಲೆತ್ತರಕ್ಕೆ ಚಿಮ್ಮಿಸುತ್ತ ಬರುತ್ತಿರಲು, ಪುರಜನರೆಲ್ಲರೂ ಅಲ್ಲಲ್ಲಿ ಗುಂಪುಗೂಡಿ ನೋಡುತ್ತಿರಲು, ಅರಮನೆಯ ಪರಿಚಾರಕರೂ ಇದೇನು ಎಂದು ಬಂದು ನೋಡಿ ವಿದರ್ಭರಾಜನಾದ ಭೀಮನೃಪನಿಗೆ ಮಾಹಿತಿಯನ್ನು ನೀಡಿದರು.

39. ಬಂದನೇ ಋತುಪರ್ಣನೆನುತಾ
ನಂದ ಮಿಗೆ ಕರೆಸಿದನು ಸಚಿವರ
ಮಂದಿಯನು ಕಳುಹಿಸಲು ಕರೆತಂದರು ನಿಜಾಲಯಕೆ
ಸಂದಣಿಯ ಪರಿಹರಿಸಿ ನೃಪ ಮುದ
ದಿಂದ ಬೇರರಮನೆಯೊಳುಲುಪೆಗ
ಳಿಂದಯೋಧ್ಯಾಪತಿಯ ಸತ್ಕರಿಸಿದನು ಭೀಮನೃಪ

ಬಂದನೇ ಋತುಪರ್ಣನ್ + ಎನುತ + ಆನಂದ ಮಿಗೆ = ಋತು ಪರ್ಣನನ್ನೇ ಎದುರು ನೋಡುತ್ತಿರುವವನಂತೆ ಭೀಮನೃಪನು ಋತುಪರ್ಣನು ಬಂದನೇನು ಎಂದು ಆನಂದವುಕ್ಕುತ್ತಿರಲು; ಕರೆಸಿದನು = ಹೇಳಿ ಕಳುಹಿಸಿದನು; ಸಚಿವರ = ಮಂತ್ರಿಗಳನ್ನು; ಮಂದಿಯನು ಕಳುಹಿಸಲು = ಋತುಪರ್ಣನನ್ನು ಸ್ವಾಗತಿಸಿ ಕರೆತರಲು ಸೂಕ್ತ ಪರಿವಾರದವರನ್ನು ಕಳುಹಿಸಲು; ಕರೆತಂದರು ನಿಜ + ಆಲಯಕೆ = ಅವರು ಋತುಪರ್ಣನನ್ನು ಅರಮನೆಗೆ ಕರೆದುಕೊಂಡು ಬಂದರು; ಸಂದಣಿಯ = ಅವರನ್ನು ನೋಡಲೆಂದು ಕುತೂಹಲದಿಂದ ಗುಂಪುಗೂಡಿದ ಜನರನ್ನು; ಪರಿಹರಿಸಿ = ಅಲ್ಲಿಂದ ಕದಲಿಸಿ; ನೃಪ ಮುದದಿಂದ = ಸಂತೋಷದಿಂದ ಅರಸನು; ಬೇರೆ + ಅರಮನೆಯೊಳು + ಉಲುಪೆಗಳಿಂದ + ಅಯೋಧ್ಯಾಪತಿಯ = ಅತಿಥಿಯಾಗಿ ಬಂದ ಅಯೋಧ್ಯಾಧಿಪತಿಯನ್ನು ಬೇರೊಂದು ಅರಮನೆಯಲ್ಲಿ ತೊಂದರೆಯಾಗದಂತೆ ತಂದಿರಿಸಿ, ಸೂಕ್ತ ಉಡುಗೊರೆಗಳಿಂದ; ಸತ್ಕರಿಸಿದನು = ಗೌರವಿಸಿ, ಸನ್ಮಾನಿಸಿದನು; ಭೀಮನೃಪ = ಭೀಮನೃಪನು.

ಋತುಪರ್ಣ ಮಹಾರಾಜನ ಆಗಮನ ವಾರ್ತೆಯನ್ನು ಕೇಳಿ ಭೀಮನೃಪನು ಅಪಾರವಾಗಿ ಸಂತೋಷಪಟ್ಟನು. ಅವನು ಮೇರೆಮೀರಿದ ಉತ್ಸಾಹದಿಂದ ಅವನನ್ನು ಸ್ವಾಗತಿಸಿ ತನ್ನ ಅರಮನೆಗೆ ಕರೆತರಲು ಮಂತ್ರಿಗಳನ್ನು ಕಳುಹಿಸಿದನು. ಅಲ್ಲಿ ಕುತೂಹಲದಿಂದ ನೆರೆದಿದ್ದ ಜನಜಂಗುಳಿಯನ್ನು ಚೆದರಿಸಿ ಅತಿಥಿಗೆ ತೊಂದರೆ ಯಾಗದಂತೆ ಬೇರೊಂದು ಅರಮನೆಯಲ್ಲಿ ಉಳಿದುಕೊಳ್ಳುವ ವ್ಯವಸ್ಥೆ ಮಾಡಿ ಅವನನ್ನು ವಿಶೇಷ ಉಡುಗೊರೆಗಳಿಂದ ಸತ್ಕರಿಸಿದನು.

40. ಕೇಳಿದಳು ದಮಯಂತಿ ವಾರ್ತೆಯ
ತಾಳಿದಳು ಹರುಷವನು ಮನದಲಿ
ಫಾಲಲೋಚನನಿಂದ ಫಲಿಸಿತು ಪುಣ್ಯವೆನಗಿಂದು
ಬಾಲೆ ಕೇಳೆನಗಿಂದು ಶೋಕ
ಜ್ವಾಲೆ ಪರಿಹರವಾಯ್ತು ಮಂಗಳ
ದೇಳಿಗೆಯು ಪಸರಿಸಿತು ಶುಭಕರವೆಂದಳಿಂದುಮುಖಿ

ಕೇಳಿದಳು ದಮಯಂತಿ ವಾರ್ತೆಯ = ಋತುಪರ್ಣನು ಬಂದ ಸುದ್ದಿಯನ್ನು ದಮಯಂತಿ ಕೇಳಿದಳು, ತಾಳಿದಳು ಹರುಷವನು ಮನದಲಿ = ಅತ್ಯಂತ ಸಂತೋಷವನ್ನು ತಾಳಿದಳು ಮನಸ್ಸಿನಲ್ಲೇ; ಫಾಲಲೋಚನನಿಂದ = ಹಣೆಗಣ್ಣನಾದ ಶಿವನ ಕೃಪೆಯಿಂದ; ಫಲಿಸಿತು ಪುಣ್ಯವು + ಎನಗೆ + ಇಂದು = ಇಂದು ನಾನು ಹಿಂದೆ ಮಾಡಿದ ಪುಣ್ಯದ ಫಲವು ದೊರಕಿತು; ಬಾಲೆ ಕೇಳು + ಎನಗೆ ಇಂದು = ಗೆಳತಿಯೇ ಕೇಳು ಈ ದಿನ ನನಗೆ; ಶೋಕ ಜ್ವಾಲೆ = ಒಡಲನ್ನು ಕುದಿಸುತ್ತಿದ್ದ ದುಃಖಾಗ್ನಿಯು; ಪರಿಹಾರವಾಯ್ತು + ಆ = ನಂದಿಹೋಯಿತು; ಮಂಗಳದ + ಏಳಿಗೆಯು = ಇನ್ನು ಶುಭಕರವಾದ ಉನ್ನತಿಯು ಪ್ರಾಪ್ತವಾಗಿ; ಪಸರಿಸಿತು + ಶುಭಕರವು + ಎಂದಳು + ಇಂದುಮುಖಿ = ಶುಭಕರವಾದ ಸಮಯಗಳು ಅಧಿಕಾಧಿಕವಾಗುತ್ತಿದೆ ಎಂದಳು ದಮಯಂತಿ.

ಅಯೋಧ್ಯಾಧಿಪತಿಯಾದ ಋತುಪರ್ಣನು ತಮ್ಮ ಅರಮನೆಗೆ ಬಂದ ಸುದ್ದಿಯನ್ನು ಚಾರರಿಂದ ಕೇಳಿದ ದಮಯಂತಿಯು ಮನಸ್ಸಿನಲ್ಲಿಯೇ ಸಂತೋಷ ದಿಂದ ಸಂಭ್ರಮಿಸಿದಳು. "ಹಣೆಗಣ್ಣನಾದ ಶಿವನ ಕೃಪಾಕಟಾಕ್ಷದಿಂದ ತನ್ನ ಒಡಲೊಳಗೆ ಕುದಿಯುತ್ತಿದ್ದ ದುಃಖಾಗ್ನಿಯು ಈಗ ನಂದಿಹೋಯಿತು. ಇನ್ನು ತನ್ನ ಬದುಕಿನ ಉನ್ನತಿಯು ಶುಭಕರವಾಗಿ ಪಸರಿಸುತ್ತಲೇ ಇರುತ್ತದೆ ಕೇಳು ಗೆಳತಿ" ಎಂದು ತನ್ನ ಆಪ್ತ ಸಖಿಯೊಂದಿಗೆ ಆನಂದವನ್ನು ಹಂಚಿಕೊಂಡಳು.

41. ಖಿನ್ನನಾದನು ಚಿತ್ತದಲಿ ಋತು
ಪರ್ಣ ಭೂಸುರನೆಂದ ಮಾತಿನ
ಬಿನ್ನಣಕೆ ಮರುಳಾಗಿ ಬಂದೆನು ಮೂಢನಾದೆನಲ

ಭಿನ್ನವಿಲ್ಲದೆ ಕೊಂಡ ನಾಚಿಕೆ
ಗಿನ್ನು ಹದನೇನೆನುತ ಗುಣಸಂ
ಪನ್ನ ಮರುಗಿದ ತನ್ನ ಮನದ ದುರಂತಚಿಂತೆಯಲಿ

ಖಿನ್ನನಾದನು ಚಿತ್ತದಲಿ ಋತುಪರ್ಣ = ವಿದರ್ಭರಾಜನಲ್ಲಿಗೆ ಬಂದ ನಂತರ ಋತುಪರ್ಣ ಮಹಾರಾಜನು ಮನಸ್ಸಿನಲ್ಲಿಯೇ ದುಃಖಿತನಾದನು; ಭೂಸುರನು + ಎಂದ = ಬ್ರಾಹ್ಮಣನು ಹೇಳಿದ; ಮಾತಿನ ಬಿನ್ನಣಕೆ = ಮಾತಿನ ಮೋಡಿಗೆ; ಮರುಳಾಗಿ ಬಂದೆನು = ಮರುಳಾಗಿ ಇಲ್ಲಿಗೆ ಬಂದೆ; ಮೂಢನಾದೆನಲ = ಮೂಢನಾಗಿ ಹೋದೆನಲ್ಲ!; ಭಿನ್ನವಿಲ್ಲದೆ = ಮತ್ತೊಂದು ರೀತಿಯಲ್ಲೂ ಯೋಚಿಸದೆ; ಕೊಂಡ ನಾಚಿಕೆಗೆ + ಇನ್ನು = ತೆಗೆದುಕೊಂಡ ನಾಚಿಕೆಗೇಡಿನ ನಿರ್ಧಾರಕ್ಕೆ ಇನ್ನು; ಹದನೇನು + ಎನುತ = ಬೇರೆ ದಾರಿಯೇನು ಎನುತ; ಗುಣಸಂಪನ್ನ = ಗುಣ ಸಂಪನ್ನನಾದ ಋತುಪರ್ಣನು; ಮರುಗಿದ = ಬೇಸರಪಟ್ಟುಕೊಂಡನು; ತನ್ನ ಮನದ = ತನ್ನ ಮನಸ್ಸಿನ; ದುರಂತ ಚಿಂತೆಯಲಿ = ಶೋಕತಪ್ತ ಕೊರಗಿನಲ್ಲಿ.

ವಿದರ್ಭರಾಜನ ಆತಿಥ್ಯಕ್ಕೆ ಒಳಗಾದ ಅಯೋಧ್ಯಾಧಿಪತಿ ಋತುಪರ್ಣನಿಗೆ ತಾನು ಆ ಬ್ರಾಹ್ಮಣನ ಮಾತಿನ ಮೋಡಿಗೆ ಮರುಳಾಗಿ ಸ್ವಲ್ಪವೂ ಯೋಚಿಸದೆ ಮೂಢನಾದೆ ಇಲ್ಲಿಗೆ ಬಂದದ್ದು ನಾಚಿಕೆಗೇಡಿನ ಕೆಲಸವಾಯಿತಲ್ಲ. ಇನ್ನು ಬೇರೆ ದಾರಿಯೇನಿದೆ ಎಂದು ಗುಣಸಂಪನ್ನನಾದ ಅವನು ಮನದೊಳಗೇ ಬೇಸರ ಪಟ್ಟುಕೊಳ್ಳುತ್ತ ಕೊರಗಿದನು.

42. ಓಲಗವನಿತ್ತನು ವಿದರ್ಭನೃ
ಪಾಲ ಕರೆಸಿದ ಮಂತ್ರಿ ಬಾಂಧವ
ಜಾಲವನು ಋತುಪರ್ಣ ಬಂದನು ಬಾಹುಕನು ಸಹಿತ
ಸಾಲಮಣಿಪೀಠದಲಿ ಕುಳ್ಳಿರೆ
ಬಾಲೆಯರ ಸಂಗೀತನೃತ್ಯದ
ಕೇಳಮೇಳದಿ ರಂಜಿಸಿತು ಭೂಪಾಲನಾಸ್ಥಾನ

ಓಲಗವನಿತ್ತನು ವಿದರ್ಭನೃಪಾಲ = ವಿದರ್ಭರಾಜ ಭೀಮನೃಪನು; ಕರೆಸಿದ ಮಂತ್ರಿ ಬಾಂಧವಜಾಲವನು = ಮಂತ್ರಿ, ಮತ್ತಿತರ ಬಂಧು ಬಾಂಧವರನೆಲ್ಲ ಕರೆಸಿ ಓಲಗವನ್ನು ಏರ್ಪಡಿಸಿದನು; ಋತುಪರ್ಣ ಬಂದನು ಬಾಹುಕನು ಸಹಿತ = ಅಲ್ಲಿಗೆ ಬಾಹುಕನೊಂದಿಗೆ ಋತುಪರ್ಣನು ಬಂದನು; ಸಾಲಮಣಿಪೀಠದಲಿ ಕುಳ್ಳಿರೆ = ಅಲ್ಲಿ ಮಣಿಖಚಿತವಾದ ಸಾಲುಸಾಲಾದ ರತ್ನಪೀಠಗಳಲ್ಲಿ ಎಲ್ಲರೂ ಕುಳಿತಿರಲು; ಬಾಲೆಯರ = ಹೆಣ್ಣು ಮಕ್ಕಳ; ಸಂಗೀತನೃತ್ಯದ ಕೇಳಮೇಳದಿ = ಸಂಗೀತ ನೃತ್ಯಾದಿ ಸರ್ವಸಂಭ್ರಮದಿಂದ; ರಂಜಿಸಿತು = ಶೋಭಾಯಮಾನವಾಯಿತು; ಭೂಪಾಲನಾಸ್ಥಾನ = ಭೂಪಾಲನಾದ ಭೀಮನ ಆಸ್ಥಾನ.

ವಿದರ್ಭರಾಜನಾದ ಭೀಮನು ಮಂತ್ರಿ ಮಾಗಧರಾದಿಯಾಗಿ ಸಮಸ್ತ ಬಂಧುಬಾಂಧವರೆಲ್ಲರನ್ನೂ ಆಹ್ವಾನಿಸಿ ಓಲಗವನ್ನಿತ್ತನು. ಅಲ್ಲಿಗೆ ಬಾಹುಕನೊಂದಿಗೆ ಋತುಪರ್ಣ ಮಹಾರಾಜನೂ ಆಗಮಿಸಿದನು. ಎಲ್ಲರೂ ಅಲ್ಲಿ ವ್ಯವಸ್ಥೆಗೊಳಿಸಿದ್ದ ಸಾಲುಸಾಲಾದ ರತ್ನಮಣಿಪೀಠಗಳಲ್ಲಿ ಆಸೀನರಾಗಲು ಹೆಣ್ಣು ಮಕ್ಕಳ ಸಂಗೀತ ನೃತ್ಯಾದಿ ಕೇಳಮೇಳಗಳಿಂದ ಆ ಸಭೆಯು ಭೀಮರಾಜನ ಸಹಿತ ಸರ್ವ ಸಂಭ್ರಮದಿಂದ ಶೋಭಾಯಮಾನವಾಗಿ ರಂಜಿಸಿತು.

43. ನಾರಿಯರ ಮರೆಗೊಂಡು ಸಭೆಯಲಿ
ಸಾರಥಿಯ ಕುಬ್ಜಾವತಾರವ
ನೋರೆಗಣ್ಣಿನೊಳೀಕ್ಷಿಸುತ ದಮಯಂತಿ ಮನದೊಳಗೆ
ಆರಿವನು ನಳನೃಪನ ಹೋಲುವ
ಚಾರುಚಿನ್ಹೆಗಳಿಲ್ಲ ತೋರ್ಕೆ ವಿ
ಕಾರವಾಗಿದೆ ರೂಪೆನುತ ಚಿಂತಿಸಿದಳಿಂದುಮುಖಿ

ನಾರಿಯರ ಮರೆಗೊಂಡು = ಆ ಆಸ್ಥಾನ ಸಭೆಯಲ್ಲಿ ದಮಯಂತಿಯು ಸ್ತ್ರೀಯರ ಗುಂಪಿನಲ್ಲಿ ಕಾಣದಂತೆ ಕುಳಿತು; ಸಭೆಯಲಿ = ಆ ಸಭೆಯಲ್ಲಿ; ಸಾರಥಿಯ = ಸಾರಥಿಯಾಗಿ ಬಂದಿದ್ದ ಬಾಹುಕನ; ಕುಬ್ಜ + ಅವತಾರವನು + ಓರೆಗಣ್ಣಿನೊಳು + ಈಕ್ಷಿಸುತ = ಕುಳ್ಳಾದ ರೂಪವನ್ನು ಓರೆಗಣ್ಣಿಂದ ಪರೀಕ್ಷಿಸಿ ನೋಡುತ್ತ; ದಮಯಂತಿ ಮನದೊಳಗೆ = ದಮಯಂತಿಯು ಮನಸ್ಸಿನಲ್ಲಿಯೇ;

ಆರು + ಇವನು = ಇವನು ಯಾರು?; ನಳನೃಪನ ಹೋಲುವ = ನಳಮಹಾರಾಜನನ್ನು ಹೋಲುವಂತಹ; ಚಾರು ಚಿಹ್ನೆಗಳಿಲ್ಲ = ಯಾವುದೇ ರೀತಿಯ ಮೋಹಕ ಸೌಂದರ್ಯದ ಶುಭ ಚಹರೆಗಳೂ ಕಾಣಿಸುತ್ತಿಲ್ಲ; ತೋರ್ಕೆ = ಕಾಣುತ್ತಿರುವ ರೂಪವೋ; ವಿಕಾರವಾಗಿದೆ ರೂಪೆನುತ = ವಿಕಾರವಾಗಿದೆಯಲ್ಲ ಎಂದುಕೊಳ್ಳುತ್ತ; ಚಿಂತಿಸಿದಳು + ಇಂದುಮುಖಿ = ಚಿಂತೆಗೊಳಗಾದಳು.

ಆ ತುಂಬಿದ್ದ ರಾಜಸಭೆಯಲ್ಲಿ ದಮಯಂತಿಯು ಯಾರಿಗೂ ಕಾಣದಂತೆ ಸ್ತ್ರೀಯರ ಗುಂಪಿನಲ್ಲಿ ಮರೆಯಾಗಿ ಕುಳಿತುಕೊಂಡು ಬಾಹುಕನತ್ತ ಓರೆಗಣ್ಣಿಂದ, ಸೂಕ್ಷ್ಮವಾಗಿ ಪರೀಕ್ಷಕ ನೋಟ ಹರಿಸಿದಳು. ಅವನ ಕುಳ್ಳಾದ ವಿಕಾರ ರೂಪವನ್ನು ನೋಡಿ, ಯಾರಿವನು? ನಳಮಹಾರಾಜನನ್ನು ಹೋಲುವ ಯಾವುದೇ ರೀತಿಯ ಮೋಹಕ ಸೌಂದರ್ಯದ ಕುರುಹುಗಳೂ ಶುಭ ಚಹರೆಗಳೂ ಕಾಣುತ್ತಿಲ್ಲ. ಬದಲಿಗೆ ನೋಡಲು ವಿಕಾರವಾಗಿದ್ದಾನಲ್ಲ ಎಂದುಕೊಳ್ಳುತ್ತ ಚಿಂತೆಗೊಳಗಾದಳು.

44. ಒರೆದೊರೆದು ನೋಡಿದಳು ಸೂತನ
ಸಿರಿಮೊಗದ ಕಾಂತಿಯನು ಕಳೆಗುಂ
ದಿರುವ ಕಾಯವ ಕಪ್ಪಿನಿಂದುದುರಿರ್ದ ರೋಮದಲಿ
ಪರಿಕಿಸಲ್ಕೀ ರೂಪು ಕೈಕೊಂ
ಡಿರುವನೇ ನಳನೃಪತಿ ಶಿವಶಿವ
ಮುರಹರನು ತಾ ಬಲ್ಲನೆಂದುಮ್ಮಳಿಸಿದಳು ತರಳೆ

ಒರೆದು + ಒರೆದು ನೋಡಿದಳು = ಮತ್ತೆ ಮತ್ತೆ ಪ್ರಯತ್ನಪಟ್ಟು ಪರೀಕ್ಷಿಸಿ ನೋಡಿದಳು; ಸೂತನ = ಸಾರಥಿಯ; ಸಿರಿಮೊಗದ ಕಾಂತಿಯನು = ಸುರಸುಂದರವಾದ ಮುಖಕಾಂತಿಯನ್ನು; ಕಳೆಗುಂದಿರುವ ಕಾಯವ = ತೇಜೋವಿಹೀನವಾಗಿರುವ ದೇಹವನ್ನು; ಕಪ್ಪಿನಿಂದ + ಉದುರಿರ್ದ = ಕಪ್ಪಿಡಿದು ಕುಂದಿ ಉದುರಿಹೋದ; ರೋಮದಲಿ = ಕೂದಲುಗಳ; ಪರಿಕಿಸಲ್ಕೆ ಈ = ನನ್ನನ್ನು ಪರೀಕ್ಷಿಸಿ ನೋಡಲೆಂದೇ ಈ; ರೂಪು = ಈ ರೂಪವನ್ನು; ಕೈಕೊಂಡಿರುವನೇ = ತಾಳಿದ್ದಾನೋ; ನಳನೃಪತಿ = ನಳಮಹಾರಾಜನು; ಶಿವಶಿವ = ಶಿವಶಿವಾ!

ಎಂದುದ್ಗರಿಸಿ; ಮುರಹರನು = ಪರಶಿವನೇ; ತಾಬಲ್ಲನೆಂದು + ಉಮ್ಮಳಿಸಿದಳು ತರಳೆ = ಬಲ್ಲ ಎಂದು ದುಃಖಿಸಿದಳು ದಮಯಂತಿ.

ದಮಯಂತಿಯು ಪುನಃಪುನಃ ಬಾಹುಕನನ್ನು ಪರೀಕ್ಷಿಸಿ ನೋಡಿದಳು. ಸಾರಥಿಯು ಸುಮುಖದ ನಳಮಹಾರಾಜನನ್ನು ಹೋಲುವನೇನೋ ಎಂದು ಸೂಕ್ಷ್ಮವಾಗಿ ನೋಟ ಹರಿಸುತ್ತಾ, ಅವನ ಕುಬ್ಜ ಆಕಾರವನ್ನೂ ವಿಕಾರವಾದ ರೂಪವನ್ನೂ ಗಮನಿಸಿ, ಯಾರಿವನು? ಸುಂದರನೂ ತೇಜೋಮಯನೂ, ಮೋಹಕ ಕಾಯನೂ ಆದ ನಳಮಹಾರಾಜನನ್ನು ಹೋಲುವ ಯಾವುದೇ ಕುರುಹುಗಳೂ ಇವನಲ್ಲಿ ಕಾಣುತ್ತಿಲ್ಲ ಎಂದುಕೊಳ್ಳುತ್ತ ಚಿಂತಾಕುಲಳಾದಳು. ಶಿವಶಿವಾ! ನಳ ಮಹಾರಾಜನು ನನ್ನನ್ನು ಪರೀಕ್ಷಿಸುವ ಸಲುವಾಗಿಯೇ ಈ ರೂಪ ತಾಳಿರುವನೇನೋ! ಆ ಪರಶಿವನೇ ಬಲ್ಲ ಎಂದುಕೊಂಡಳು.

45. ಹರೆದುದೋಲಗವಲ್ಲಿ ನಿಜಮಂ
ದಿರಕೆ ಬಂದಾಲೋಚಿಸುವ ಮಿಗೆ
ತರುಣಿಯರ ಕಳುಹಿಸಲು ಬಂದರು ಬಾಣಸಿನ ಮನೆಗೆ
ಇರವ ಕಂಡರು ಪಾಕದಲಿ ಕೈ
ಕರಣವನು ನೆರೆ ಸೂಪಕಾರನ
ಪರಿಯ ಹೊಗಳುತ ಬಂದು ಬಿನ್ನೈಸಿದಳು ಭಾಮಿನಿಗೆ

ಹರೆದುದು + ಓಲಗವು + ಅಲ್ಲಿ = ಅಲ್ಲಿಗೆ ಓಲಗವು ಕೊನೆಗೊಂಡಿತು; ನಿಜಮಂದಿರಕೆ = ಸಭಾಸದರು ತಂತಮ್ಮ ಮನೆಗಳಿಗೆ ತೆರಳಲು; ದಮಯಂತಿಯೂ ತನ್ನ ಅಂತಃಪುರಕ್ಕೆ ಮರಳಿದಳು; ಬಂದು ಆಲೋಚಿಸುತ = ಬಂದ ನಂತರ ದೀರ್ಘವಾಗಿ ಆಲೋಚಿಸುತ್ತಲೇ; ಮಿಗೆ ತರುಣಿಯರ ಕಳುಹಿಸಲು = ಕೊನೆಗೆ ಅರಮನೆಯ ಪರಿಚಾರಿಕೆಯರನ್ನು ನಳನನ್ನು ಹುಡುಕಲು ಕಳುಹಿಸಲು; ಬಂದರು = ಅವರು ಬಂದರು; ಬಾಣಸಿನ ಮನೆಗೆ = ಅಡುಗೆ ಮನೆಗೆ; ಇರವ ಕಂಡರು = ಇರುವಿಕೆಯನ್ನು ನೋಡಿದರು; ಪಾಕದಲಿ = ಅಡುಗೆಯಲ್ಲಿ; ಕೈಕರಣವನು = ಕೈಯ್ಯನ್ನೂ ಸಾಮಗ್ರಿಗಳನ್ನೂ ಬಳಸಿಕೊಂಡು ತಲ್ಲೀನನಾಗಿದ್ದ; ನೆರೆ = ಚೆನ್ನಾಗಿ, ಸಂಪೂರ್ಣವಾಗಿ; ಸೂಪಕಾರನ ಪರಿಯ = ಅಡುಗೆಯವನ ಪರಿಣಿತ

ಶೈಲಿಯನ್ನು; ಹೊಗಳುತ ಬಂದು = ಸಂತೋಷದಿಂದ ಕೊಂಡಾಡುತ್ತ; ಬಿನ್ನೈಸಿದಳು ಭಾಮಿನಿಗೆ = ದಮಯಂತಿಗೆ ಬಂದು ತಿಳಿಸಿದರು.

ಅನಂತರ ಓಲಗ ಸಭೆಯು ಸಮಾಪ್ತಗೊಳ್ಳಲು ಎಲ್ಲ ಸಭಾಸದರೂ ತಂತಮ್ಮ ಮನೆಗಳಿಗೆ ತೆರಳಲು, ದಮಯಂತಿಯೂ ತನ್ನ ಅಂತಃಪುರಕ್ಕೆ ಹಿಂದಿರುಗಿದಳು. ಬಳಿಕ ನಳನನ್ನು ಕುರಿತಂತೆಯೇ ದೀರ್ಘವಾದ ಚಿಂತೆಯಲ್ಲಿ ಮುಳುಗಿದವಳು ಆಲೋಚಿಸುತ್ತಲೇ ಅರಮನೆಯ ಪರಿಚಾರಿಕೆಯರನ್ನು ನಳನನ್ನು ಮತ್ತೆ ಅಲ್ಲಿ ಇಲ್ಲಿ ಹುಡುಕಿ ನೋಡಲು ಕಳುಹಿಸಿದಳು. ಅವರು ಹುಡುಕುತ್ತ ಅರಮನೆಯ ಪಾಕಶಾಲೆಗೆ ಬಂದರು. ಅಲ್ಲಿದ್ದ ಬಾಣಸಿಗನ ಕೈಚಳಕವನ್ನೂ, ಅಡುಗೆಯಲ್ಲಿ ತಲ್ಲೀನನಾಗಿದ್ದ ಅವನ ಕಾರ್ಯಕ್ಷಮತೆಯನ್ನು ಕಂಡು ಹಿಗ್ಗುತ್ತ ಆ ಕುರಿತು ಹೊಗಳುತ್ತ ದಮಯಂತಿಯಲ್ಲಿಗೆ ಬಂದು ವಿಷಯವನ್ನು ತಿಳಿಸಿದರು.

46. ತಾಯೆ ಚಿತ್ತೈಸಿನ್ನವನ ಕರ
ಣಾಯತನವೇನೆಂಬೆ ಲೋಕದ
ಸ್ತ್ರೀಯರೊಳಗಿನ್ನಿಲ್ಲ ರಚಿಸುವ ಶಾಕಪಾಕದಲಿ
ಮಾಯವನು ಮಿಗೆ ತಿಳಿಯಲರಿಯದು
ಪಾಯದಿಂದಿದೀಕ್ಷಿಸಲು ಸಕಲ ರ
ಸಾಯನವು ಪರಿಪಕ್ವವಾಗಿದೆ ಪೇಳಲರಿಯದೆಮಗೆ

ತಾಯೇ = ತಾಯೀ; ಚಿತ್ತೈಸು + ಇನ್ನು + ಅವನ = ಕೇಳು ವಂಥವಳಾಗು, ಇನ್ನು + ಅವನ; ಕರಣ + ಆಯತನವನು + ಏನೆಂಬೆ = ಅವನ ಕೈ ಚಳಕವನ್ನು ಏನೆಂದು ವರ್ಣಿಸಲಿ; ಲೋಕದ = ಈ ಜಗತ್ತಿನ; ಸ್ತ್ರೀಯರೊಳಗೆ + ಇನ್ನು + ಇಲ್ಲ = ಸ್ತ್ರೀ ಸಂಕುಲದಲ್ಲೇ ಎಲ್ಲೂ ಸಿಗಲಾರರು; ರಚಿಸುವ = ತಯಾರಿಸುವ; ಶಾಕಪಾಕದಲಿ = ಪಾಕವಿದ್ಯಾ ಚಾತುರ್ಯದಲ್ಲಿ; ಮಾಯವನು = ಆ ಕಾರ್ಯ ಕೌಶಲ್ಯವನ್ನು; ಮಿಗೆ ತಿಳಿಯಲು + ಅರಿಯದು; ಯಾವ ರೀತಿ ಹೊಗಳಿದರೂ ಸಾಲದು; ಉಪಾಯದಿಂದ + ಇದು + ಈಕ್ಷಿಸಲು = ನಿಜ ಹೇಳಬೇಕೆಂದರೆ ಇದೊಂದು ಅದ್ಭುತ ವಿದ್ಯೆಯೇ ಸರಿ; ಸಕಲ ರಸಾಯನವು =

ಸಕಲ ರಸಗಳೂ ಪರಿಪಕ್ವವಾಗಿರುವಂಥದು; ಹೇಳಲು + ಅರಿದು + ಎಮಗೆ = ಅದನ್ನು ವರ್ಣಿಸುವುದಾದರೂ ಹೇಗೆ ಎಂಬುದು ನಮಗೆ ತಿಳಿಯುತ್ತಿಲ್ಲ.

ಅಡುಗೆಮನೆಗೆ ಪರೀಕ್ಷಾರ್ಥವಾಗಿ ತೆರಳಿದ, ದಮಯಂತಿಯು ಕಳುಹಿಸಿದ ಪರಿಚಾರಿಕೆಯರು ಬಾಹುಕನ ಪಾಕವಿದ್ಯಾ ನೈಪುಣ್ಯವನ್ನು ಕಂಡು ಬೆರಗಾದರು. ದಮಯಂತಿಯಲ್ಲಿಗೆ ಮರಳಿದ ಅವರು "ತಾಯಿ, ಅಲ್ಲಿರುವ ಬಾಣಸಿಗನ ಕೈಚಳಕವನ್ನು ಏನೆಂದು ವರ್ಣಿಸುವುದು. ಅವನ ರಸಪಾಕವಿದ್ಯೆಗೆ ಸರಿಸಮ ನಾದವರು ಈ ಜಗತ್ತಿನ ಸ್ತ್ರೀಸಂಕುಲದಲ್ಲೇ ಹುಡುಕಿದರೂ ಸಿಗಲಾರರು. ಅವನು ತಯಾರಿಸುವ ಪಾಕನೈಪುಣ್ಯವು ಅದ್ಭುತ ಮಾಯಾವಿದ್ಯೆಯಂಥದು. ಆ ಮಟ್ಟಿಗಿನ ಪರಿಪಕ್ವ ಪಾಕಸಮರಸವನ್ನು ಹೇಗೆಂದು ವರ್ಣಿಸುವುದೆಂಬುದೇ ನಮಗೆ ತಿಳಿಯದಾಗಿದೆ" ಎಂದು ವಿಸ್ಮಯಭರಿತರಾಗಿ ಹೊಗಳಿದರು.

47. ದಾದಿಯರು ಬಾಹುಕನ ಗುಣಗಳ
ಭೇದಿಸಿದರೊಂದೊಂದು ಬಗೆಯ ತ
ಳೋದರಿಗೆ ಬಿನ್ನೈಸೆ ನಿಶ್ಚೈಸಿದಳು ದಮಯಂತಿ
ಆದಡವ ನಳನಹುದು ಗುಣದಲಿ
ಭೇದಿಸುವೆನಿನ್ನೊಮ್ಮೆಯೆನುತ ವಿ
ನೋದದಿಂದಾಡುವ ಕುಮಾರರ ತರಿಸಿದಳು ತರುಣಿ

ದಾದಿಯರು = ಅಂತಃಪುರದ ಪರಿಚಾರಿಕೆಯರು; ಬಾಹುಕನ ಗುಣಗಳ = ಬಾಹುಕನು ತೋರಿದ ಪಾಕಚಾತುರ್ಯಗಳ; ಭೇದಿಸಿದರು + ಒಂದೊಂದು ಬಗೆಯ = ಒಂದೊಂದು ರೀತಿ, ನೀತಿ, ಶೈಲಿಗಳನ್ನೂ ಪರಿಶೀಲಿಸಿದರು; ತಳೋದರಿಗೆ = ಸುಂದರಿಯಾದ ದಮಯಂತಿಗೆ; ಬಿನ್ನೈಸೆ = ಭಿನ್ನವಿಸಲು; ದಮಯಂತಿಯು + ಆದಡೆ + ಅವ = ಹೀಗಿದ್ದ ಮೇಲೆ ಅವನು; ನಳನಹುದು = ನಳನೇ ಆಗಿದ್ದಾನೆ; ಗುಣದಲಿ = ಚಾತುರ್ಯದಲ್ಲಿ; ಭೇದಿಸುವೆನು + ಇನ್ನೊಮ್ಮೆ + ಎನುತ = ಮತ್ತೊಂದು ಬಾರಿ ಪರೀಕ್ಷಿಸಿ ನೋಡುತ್ತೇನೆ ಎಂದುಕೊಂಡು; ವಿನೋದದಿಂದ + ಆಡುವ = ಸಂತೋಷದಿಂದ ಆಟವಾಡುತ್ತಿದ್ದ; ಕುಮಾರರ = ತನ್ನ ಮಕ್ಕಳನ್ನು; ಕರೆಸಿದಳು ತರುಣಿ = ಬಳಿಗೆ ಕರೆಸಿಕೊಂಡಳು.

ದಮಯಂತಿಯ ಆದೇಶದಂತೆ, ಅವಳ ಅಂತಃಪುರದ ಪರಿಚಾರಿಕೆಯರು ಬಾಹುಕನ ಪಾಕಶಾಕದ ಶೈಲಿಯ ಒಂದೊಂದು ಬಗೆಯನ್ನೂ ಸೂಕ್ಷ್ಮವಾಗಿ ಪರಿಶೀಲಿಸಿ ದಮಯಂತಿಗೆ ವರದಿ ಮಾಡಿದರು. ಅದನ್ನೆಲ್ಲ ವಿವರವಾಗಿ ತಿಳಿದು, ಅವೆಲ್ಲವೂ ನಳನ ಚಾತುರ್ಯವನ್ನೇ ಹೋಲುವುದನ್ನು ಗಮನಿಸಿ, ಈ ಕುರೂಪ ಬಾಣಸಿಗ ಬಾಹುಕನು ನಳನೇ ಆಗಿರಬೇಕು ಎಂದು ತೀರ್ಮಾನಿಸಿದರೂ ಮತ್ತೊಮ್ಮೆ ಪರೀಕ್ಷಿಸಿ ನೋಡುವುದು ಉಚಿತವೆಂದು ನಿರ್ಧರಿಸಿ, ಹೊರಗೆ ಆನಂದದಿಂದ ಆಟವಾಡುತ್ತಿದ್ದ ತನ್ನ ಮಕ್ಕಳನ್ನು ಕರೆಸಿಕೊಂಡಳು.

48. ತರಳರಿಗೆ ನೀರೆರೆದು ಕಾಂಚನ
ವರದುಕೂಲವನಿತ್ತು ದಿವ್ಯಾ
ಭರಣಭೂಷಿತರಾದ ತನಯರ ದಾದಿಯರ ಕೈಯ
ಪಿಡಿದು ಕಳುಹಲು ಬಾಣಸಿನ ಮಂ
ದಿರದ ಬಾಗಿಲ ಮುಂದೆ ಬಿಡೆ ಸಂ
ಚರಿಸಿ ಸುಳಿದಾಡುವರ ಕಂಡನು ನೃಪತಿ ಹರುಷಿಸುತ

ತರಳರಿಗೆ ನೀರು + ಎರೆದು = ತನ್ನ ಎಳೆಯ ವಯಸ್ಸಿನ ಮಕ್ಕಳಿಗೆ ಸ್ನಾನ ಮಾಡಿಸಿದಳು; ಕಾಂಚನ ವರದುಕೂಲವನು + ಇತ್ತು = ಶ್ರೇಷ್ಠಮಟ್ಟದ ಹೊನ್ನಿನ ಪಟ್ಟೆ ಜರಿಗಳುಳ್ಳ ಉಡುಗೆಗಳನ್ನು ಉಡಿಸಿ; ದಿವ್ಯ + ಆಭರಣ + ಭೂಷಿತರಾದ = ಶ್ರೇಷ್ಠ ಮಟ್ಟದ ಆಭರಣಗಳಿಂದ ಅಲಂಕರಿಸಿದ; ತನಯರ = ತನ್ನ ಮಕ್ಕಳನ್ನು; ದಾದಿಯರ ಕೈಯ ಪಿಡಿದು = ದಾದಿಯರ ಕೈಹಿಡಿದುಕೊಂಡು ಹೋಗಲು ನಿರ್ದೇಶಿಸಿ; ಕಳುಹಲು = ಕಳುಹಿಸಿಕೊಡಲು; ಬಾಣಸಿಗನ = ಬಾಣಸಿಗನಾದ ಬಾಹುಕನ; ಮಂದಿರದ ಮುಂದೆ ಬಿಡೆ = ತಂಗಿದ್ದ ಮಂದಿರದ ಮುಂದೆ ಬಿಡಲು; ಸಂಚರಿಸಿ = ಅಲ್ಲಿಯೇ ಓಡಾಡುತ್ತ; ಸುಳಿದಾಡುವರ = ಮತ್ತೆ ಮತ್ತೆ ಸುಳಿದಾಡುವ ಮಕ್ಕಳನ್ನು; ಕಂಡನು ನೃಪತಿ = ನಳಮಹಾರಾಜನು ನೋಡಿದನು; ಹರುಷಿಸುತ = ಸಂತೋಷಗೊಂಡನು.

ದಮಯಂತಿಯು ತನ್ನ ಎಳೆಯ ಮಕ್ಕಳನ್ನು ಕರೆದುಕೊಂಡು ಬಂದು ಸ್ನಾನಮಾಡಿಸಿದಳು, ಶ್ರೇಷ್ಠವಾದ ಪಟ್ಟೆ ಜರಿಗಳುಳ್ಳ ಹೊನ್ನಿನ ಉಡುಗೆಗಳನ್ನೂ,

ದಿವ್ಯಾಭರಣಗಳನ್ನೂ ತೊಡಿಸಿ ಅಲಂಕರಿಸಿದಳು. ಬಳಿಕ ತನ್ನ ಪರಿಚಾರಿಕೆಯರ ಕೈಹಿಡಿದು ಹೋಗುವಂತೆ ನಿರ್ದೇಶಿಸಿ ಬಾಹುಕನು ತಂಗಿದ್ದ ಮಂದಿರದ ಮುಂದೆ ಬಿಟ್ಟಳು. ತನ್ನ ಮುಂದೆ ಮತ್ತೆ ಮತ್ತೆ ಸುಳಿದಾಡುತ್ತ ಸಂಚರಿಸುತ್ತ ಇದ್ದ ಆ ಮಕ್ಕಳನ್ನು ನಳಮಹಾರಾಜನು ಹರ್ಷದಿಂದ ನೋಡಿದನು.

49. ತರಳರನು ಪಿಡಿದೆತ್ತಿ ತೊಡೆಯೊಳ
ಗಿರಿಸಿ ಮುದ್ದಾಡಿದನು ನೋಡುತ
ಸುರಿವ ಕಂಬನಿಗಳಲಿ ಬಾಹುಕ ಮರುಗುತಿರಲಂದು
ಮರೆಯ ಜಾಲಂಧ್ರದಲಿ ಕಂಡಳು
ತರುಣಿ ನಳನೃಪನೀತನಹುದೆಂ
ದುರುತರದ ಪ್ರೇಮದಲಿ ಬಂದಳು ಜನನಿಯರಮನೆಗೆ

ತರಳರನು = ಆ ಎಳೆಯ ಮಕ್ಕಳನ್ನು; ಪಿಡಿದು + ಎತ್ತಿ = ಹಿಡಿದು ಎತ್ತಿಕೊಂಡು; ತೊಡೆಯೊಳಗೆ + ಇರಿಸಿ = ತೊಡೆಯ ಮೇಲೆ ಕುಳ್ಳಿರಿಸಿಕೊಂಡು; ಮುದ್ದಾಡಿದನು = ಮುದ್ದಾಡಿದನು; ನೋಡುತ = ಆ ಮಕ್ಕಳನ್ನು ನೋಡುತ್ತ; ಕಂಬನಿಗಳಲಿ = ದುಃಖ ಮತ್ತು ಆನಂದದಿಂದ ಸುರಿಯುವ ಕಣ್ಣೀರಿನಿಂದ; ಬಾಹುಕ ಮರುಗುತಿರಲು + ಅಂದು = ಬಾಹುಕನು ದುಃಖಿಸುತ್ತಿರಲು; ಪತಿಯ = ಅವನ ಮನಸ್ಸು ಮತ್ತು ಆಲೋಚನಾ ವಿಧಾನಗಳನ್ನು; ಜಾಲಂಧ್ರದಲಿ ಕಂಡಳು ತರುಣಿ = ಅರಮನೆಯ ಜಾಲಂಧ್ರಗಳ ಹಿಂದೆ ಮರೆಯಾಗಿ ನಿಂತು ವೀಕ್ಷಿಸಿದ ದಮಯಂತಿಯು; ನಳನೃಪನೀತನು + ಅಹುದು + ಎಂದು + ಉರುತರದ = ಇವನೇ ನಳ ಮಹಾರಾಜನೆಂಬುದನ್ನು ಖಚಿತಪಡಿಸಿಕೊಂಡು ಅತ್ಯಧಿಕವಾದ; ಪ್ರೇಮದಲಿ ಬಂದಳು = ಪ್ರೀತಿಯುಕ್ಕುವ ಸಂಭ್ರಮದಲ್ಲಿ ಬಂದಳು; ಜನನಿಯ + ಅರಮನೆಗೆ = ತಾಯಿಯ ಅಂತಃಪುರಕ್ಕೆ.

ಅನಂತರ ನಳಮಹಾರಾಜನು ಒಬ್ಬ ತಂದೆಗೆ ಸಹಜವಾದ ರೀತಿಯಲ್ಲಿ ಆ ಎಳೆಯ ಮಕ್ಕಳನ್ನು ಎತ್ತಿ ತನ್ನ ತೊಡೆಯ ಮೇಲೆ ಕೂರಿಸಿಕೊಂಡು ಪ್ರೀತಿಯಿಂದ ಮುದ್ದಾಡಿದನು. ಉಕ್ಕಿಬಂದ ಆನಂದಮಿಶ್ರಿತ ದುಃಖದ ಕಣ್ಣೀರಿನಿಂದ ಅವನು ಮರುಗುತ್ತಿದ್ದುದನ್ನು ಅಂತಃಪುರದ ಜಾಲಂಧ್ರಗಳ ಹಿಂದೆ ಮರೆಯಾಗಿ ನಿಂತು

ವೀಕ್ಷಿಸುತ್ತಿದ್ದ ದಮಯಂತಿಗೆ ಅವನೇ ನಳಮಹಾರಾಜನೆಂಬುದು ಮನದಟ್ಟಾಯಿತು. ಅತ್ಯಧಿಕ ಪ್ರೇಮದಿಂದ ಸಡಗರ ಸಂಭ್ರಮಗಳೊಂದಿಗೆ ಅವಳು ತನ್ನ ತಾಯಿಯ ಅಂತಃಪುರಕ್ಕೆ ಬಂದಳು.

50. ತಾಯೆ ಸಂಶಯವಿಲ್ಲ ನೈಷಧ
ರಾಯನೀತನು ಸೂತನಲ್ಲ ವಿ
ಡಾಯದಲಿ ಬಂದಿಹನು ನೋಡು ಕುರೂಪಿವೇಷದಲಿ
ರಾಯರೊಳಗಗ್ಗಳೆಯ ನಳನೃಪ
ಮಾಯವನು ತೋರಿಹನು ಇವನ ನಿ
ಜಾಯತವ ತಾ ಬಲ್ಲೆ ಕರೆಸೆಂದಳು ಸರೋಜಮುಖಿ

ತಾಯೆ ಸಂಶಯವಿಲ್ಲ = ಅಮ್ಮಾ, ಕಿಂಚಿತ್ತೂ ಸಂಶಯವೇ ಇಲ್ಲ; ನೈಷಧರಾಯನು + ಈತನು = ಇವನೇ ನೈಷಧಾಧಿಪತಿಯಾದ ನಳಮಹಾರಾಜನು; ಸೂತನಲ್ಲ = ಇವನು ಸಾರಥಿಯಲ್ಲ; ವಿಡಾಯದಲಿ = ಆಡಂಬರದಿಂದ ಕೂಡಿದ ಹೊಸ ಸಾಮರ್ಥ್ಯದಿಂದ; ಬಂದಿಹನು ನೋಡು = ಬಂದಿದ್ದಾನೆ ನೋಡು; ಕುರೂಪಿ ವೇಷದಲಿ = ಕುರೂಪಿಯಂತೆ ವೇಷಧಾರಿಯಾಗಿ; ರಾಯರೊಳಗೆ + ಅಗ್ಗಳೆಯ = ರಾಜರಾಜರಲ್ಲಿ ಶ್ರೇಷ್ಠನಾದ; ನಳನೃಪ = ನಳಮಹಾರಾಜನು; ಮಾಯವನು ತೋರಿಹನು = ಇಲ್ಲದ ಭ್ರಮೆಯನ್ನು ಹುಟ್ಟಿಸಿದ್ದಾನೆ; ಇವನ ನಿಜಾಯತನವ = ಇವನ ನಿಜಸ್ವರೂಪವೇನೆಂಬುದನ್ನು; ತಾ ಬಲ್ಲೆ = ನಾನು ತಿಳಿದಿದ್ದೇನೆ; ಕರೆಸು + ಎಂದಳು ಸರೋಜಮುಖಿ = ಅವನನ್ನು ಈಗಲೇ ಇಲ್ಲಿಗೆ ಬರಹೇಳು ಎಂದಳು ದಮಯಂತಿ.

"ತಾಯೇ, ಕಿಂಚಿತ್ತೂ ಅನುಮಾನವೇ ಇಲ್ಲ. ಇವನೇ ಸಾಕ್ಷಾತ್ ನೈಷಧಾಧಿಪತಿ ನಳಮಹಾರಾಜನು. ಬರಿದೇ ತೋರಿಕೆಯ ಆಡಂಬರದಿಂದ ನಮಗೆ ಭ್ರಮೆ ಹುಟ್ಟಿಸಲು ಕುರೂಪವೇಷದಿಂದ ಸಾರಥಿಯಾಗಿ ಬಂದಿದ್ದಾನಷ್ಟೇ. ರಾಜರಾಜರಲ್ಲಿ ಅತಿಶ್ರೇಷ್ಠನಾದ ನಳಮಹಾರಾಜನೇ ಇವನು. ಇವನ ನಿಜಸ್ವರೂಪ ವೇನೆಂಬುದು ನನಗೆ ಚೆನ್ನಾಗಿಯೇ ತಿಳಿದಿದೆ. ಅವನನ್ನು ಈಗಲೇ ಇಲ್ಲಿಗೆ ಕರೆಸು" ಎಂದು ದಮಯಂತಿಯು ತಾಯಿಯೊಂದಿಗೆ ಹೇಳಿಕೊಂಡಳು.

51. ಧರಣಿಪತಿಯನುಮತದೊಳಾತನ
ಕರೆಸಿದಳು ನೃಪನರಸಿ ಬಾಹುಕ
ನಿರದೆ ಬಂದನು ರಾಜಮಂದಿರದಲಿ ಕುಳ್ಳಿರಲು
ತರಳೆ ಮಾಸಿದ ಸೀರೆಯಲಿ ಗರ
ಗರಿಕೆ ತಪ್ಪಿದ ಚೆಲುವಿನಲಿ ನಿಂ
ದಿರಲು ಕಂಡನು ಸತಿಯ ತಲೆಬಾಗಿದನು ಲಜ್ಜೆಯಲಿ

ಧರಣಿಪತಿಯ + ಅನುಮತದೊಳು + ಆತನ = ಭೀಮರಾಜನ ಮಹಾರಾಣಿಯು ಭೀಮನೃಪನ ಅನುಮತಿಯ ಮೇರೆಗೆ ಬಾಹುಕನನ್ನು; ಕರೆಸಿದಳು = ಬರಮಾಡಿಕೊಂಡಳು; ನೃಪನರಸಿ = ಭೀಮನ ಮಹಾರಾಣಿ; ಬಾಹುಕನು + ಇರದೆ ಬಂದನು = ಅದರಂತೆ, ಬಾಹುಕನೂ ತಡಮಾಡದೆ ಬಂದನು; ರಾಜಮಂದಿರದಲ್ಲಿ ಕುಳ್ಳಿರಲು = ರಾಜಮಂದಿರಕ್ಕೆ ಆಗಮಿಸಿ ಕುಳಿತುಕೊಂಡಿರಲು; ತರಳೆ ಮಾಸಿದ ಸೀರೆಯಲಿ = ದಮಯಂತಿಯು ಮಲಿನವಾಗಿ ಮಾಸಿಹೋಗಿದ್ದ ಉಡುಪಿನಲ್ಲಿ; ಗರಿಗರಿಕೆ ತಪ್ಪಿದ ಚೆಲುವಿನಲಿ = ತಾಜಾತನವನ್ನು ಕಳೆದುಕೊಂಡ ಚೆಲುವಿನಿಂದ; ನಿಂದಿರಲು = ಅಲ್ಲಿಯೇ ನಿಂತಿರಲು; ಕಂಡನು ಸತಿಯ = ಬಾಹುಕನು ತನ್ನ ಹೆಂಡತಿಯನ್ನು ನೋಡಿದನು; ತಲೆಬಾಗಿದನು ಲಜ್ಜೆಯಲಿ = ತನ್ನ ನಡವಳಿಕೆಯ ಅರಿವಿನಿಂದ ಲಜ್ಜೆಗೊಂಡು ತಲೆತಗ್ಗಿಸಿದನು.

ಭೀಮನೃಪನ ಅರಸಿಯು ಮಗಳ ಮಾತನ್ನು ಅನುಮೋದಿಸಿ ವಿಷಯ ವನ್ನು ಪತಿಯ ಗಮನಕ್ಕೆ ತಂದು, ಅವನ ಅನುಮತಿಯ ಮೇರೆಗೆ ಬಾಹುಕನಿಗೆ ಹೇಳಿ ಕಳುಹಿಸಿ ಅರಮನೆಗೆ ಕರೆಸಿಕೊಂಡಳು. ಅಂತೆಯೇ ಬಾಹುಕನು ಬಂದು ರಾಜಮಂದಿರದಲ್ಲಿ ಕುಳಿತಿದ್ದ ಸಂದರ್ಭದಲ್ಲಿ ದಮಯಂತಿಯು ಮಲಿನಗೊಂಡು ಮಾಸಿಹೋದ ಸೀರೆಯಲ್ಲಿ, ನಾವೀನ್ಯವನ್ನು ಕಳೆದುಕೊಂಡು ಕಂದಿಹೋದ ಚೆಲುವಿ ನಲ್ಲಿ ಅಲ್ಲಿಯೇ ನಿಂತಿದ್ದುದನ್ನು ಕಂಡ ಬಾಹುಕನು ನಡೆದುದೆಲ್ಲದರ ಹಿನ್ನೆಲೆಯನ್ನು ಅರಿತವನಾಗಿ ನಾಚಿಕೆಯಿಂದ ತಲೆತಗ್ಗಿಸಿದನು.

52. ಹಿಮಕರಾನ್ವಯತಿಲಕ ವಸುಧಾ
ರಮಣ ಪುಣ್ಯೋದಯ ಸುಭಾಷಿತ

ವಿಮಲಗುಣ ಚಾರಿತ್ರಸನ್ನುತ ಸತ್ಯಸಂಚಾರ
ಕುಮತಿ ಪುಷ್ಕರ ಮುನಿದನೇ ವಿ
ಕ್ರಮದರಿದ್ರತೆ ಬಂದುದೇ ಸಾ
ಕಮಿತಭುಜಬಲ ಪಾಲಿಸೆಂದಳು ಪತಿಗೆ ದಮಯಂತಿ

ಹಿಮಕರ + ಅನ್ವಯ + ತಿಲಕ = ಚಂದ್ರವಂಶಕ್ಕೆ ತಿಲಕಪ್ರಾಯನಾದವನೇ; ವಸುಧಾರಮಣ = ಭೂವಲ್ಲಭನೇ; ಪುಣ್ಯೋದಯ = ಪುಣ್ಯವಂತನೇ; ಸುಭಾಷಿತ = ಸುಸಂಸ್ಕೃತವಾದ ನುಡಿಯುಳ್ಳವನೇ; ವಿಮಲಗುಣ = ಕಳಂಕರಹಿತವಾದ ಗುಣಶಾಲಿಯಾದವನೇ; ಚಾರಿತ್ರಸನ್ನುತ = ಒಳ್ಳೆಯ ಗುಣನಡತೆಯುಳ್ಳವನೆಂದು ಖ್ಯಾತನಾದವನೇ; ಸತ್ಯಸಂಚಾರ= ಸತ್ಯವೇ ಮೂರ್ತಿವತ್ತಾಗಿ ಸಾಕ್ಷಾತ್ಕಾರ ಗೊಂಡವನೇ; ಕುಮತಿ ಪುಷ್ಕರ ಮುನಿದನೇ = ಇಂತಹ ನಿಮ್ಮಲ್ಲಿ ದುಷ್ಟ ಪುಷ್ಕರನು ಕೆಟ್ಟದಾಗಿ ದ್ವೇಷಗೊಂಡನೇ; ವಿಕ್ರಮದರಿದ್ರತೆ ಬಂದುದೇ = ಅವನನ್ನು ಎದುರಿಸಲಾರದಂತಹ ಪರಾಕ್ರಮ ಹೀನರಾದಿರೇನು?; ಸಾಕು + ಅಮಿತ ಭುಜಬಲ = ಸಾಕು ಮಾಡು ಅಪಾರವಾದ ಭುಜಬಲ ಪರಾಕ್ರಮಿಯೇ; ಪಾಲಿಸೆಂದಳು ಪತಿಗೆ ದಮಯಂತಿ = ಇನ್ನಾದರೂ ನನ್ನನ್ನು ಕಾಪಾಡು ಎಂದು ದಮಯಂತಿಯು ಪತಿಗೆ ಬಿನ್ನವಿಸಿದಳು.

ಬಾಹುಕನೇ ನಳಮಹಾರಾಜನೆಂಬುದನ್ನು ದೃಢಪಡಿಸಿಕೊಂಡ ದಮ ಯಂತಿಗೆ ವೀರಾಧಿವೀರನಾದ ನಳನಿಗೆ ಪುಷ್ಕರನಂತಹ ದುಷ್ಟನಿಗೆ ಬಲಿಯಾಗು ವಂತಹ ದುಸ್ಥಿತಿ ಬಂದಿತೇ ಎಂದೆನಿಸಿ ದುಃಖವುಂಟಾಯಿತು. ನಳಮಹಾರಾಜನನ್ನು ಕುರಿತು ನೇರನೇರ ತನ್ನ ಮನಸ್ಸಿನಲ್ಲಿದ್ದುದನ್ನು ಹೊರಗೆಡವಿದಳು. "ಭೂಮಂಡಲದಲ್ಲಿ ಪ್ರಸಿದ್ಧಿ ಪಡೆದ ಚಂದ್ರವಂಶಕ್ಕೆ ತಿಲಕಪ್ರಾಯನಾದವನೇ, ಭೂವಲ್ಲಭನಾದ ನಳನೇ ಪುಣ್ಯವೇ ಉದಯಿಸಿದಂತಿರುವವನೇ, ಸುಸಂಸ್ಕೃತವಾದ ನಡೆನುಡಿಗಳುಳ್ಳವನೇ, ಕಳಂಕರಹಿತ ಗುಣಶಾಲಿಯೇ, ಒಳ್ಳೆಯ ಗುಣನಡತೆ ಯುಳ್ಳವನೆಂದು ಖ್ಯಾತನಾದವನೇ, ಸತ್ಯವೇ ಸಾಕ್ಷಾತ್ಕಾರಗೊಂಡಂಥವನೇ, ಇಂತಹ ನಿನ್ನಲ್ಲಿಯೇ ದುಷ್ಟ ಪುಷ್ಕರನು ದ್ವೇಷಸಾಧಿಸಿದನೇನು? ಅಂಥವನನ್ನು ಎದುರಿಸ ಲಾರದಷ್ಟು ನೀನು ಪರಾಕ್ರಮಹೀನನಾದೆಯೇನು? ಅಪಾರ ಭುಜಬಲ ಪರಾಕ್ರಮಿ ಯಾದ ನೀನು ಇನ್ನಾದರೂ ಇಂತಹ ನಿರ್ಧಾರಗಳಿಗೆ ಬಲಿಯಾಗುವುದನ್ನು

ಸಾಕುಮಾಡು. ನನ್ನನ್ನು ಕಾಪಾಡು" ಎಂದು ದಮಯಂತಿಯು ನಳನಲ್ಲಿ ಬಿನ್ನವಿಸಿ ಕೊಂಡಳು.

53. ಮುನ್ನ ಮಾಡಿದ ಕರ್ಮಫಲ ಋತು
ಪರ್ಣನಲಿ ಸೇವೆಯನು ಮಾಡುವು
ದುನ್ನತಿಕೆಯಲಿ ಬಂದುದೇ ಮಿಗೆ ಸಾರ್ವಭೌಮರಿಗೆ
ತನ್ನ ಪುಣ್ಯದ ಹಾನಿ ತಾನಿದ
ಕಿನ್ನು ಬಳಲುವುದೇನು ಗುಣಸಂ
ಪನ್ನ ರಕ್ಷಿಸು ಸತಿಯನೆಂದೆರಗಿದಳು ಪದಯುಗಕೆ

ಮುನ್ನ ಮಾಡಿದ ಕರ್ಮಫಲ = ಇದು ಪೂರ್ವಜನ್ಮದಲ್ಲಿ ಮಾಡಿದ ಕರ್ಮಫಲ; ಋತುಪರ್ಣನಲಿ ಸೇವೆಯನು = ಋತುಪರ್ಣನಲ್ಲಿ ಸೇವೆಯನ್ನು; ಮಾಡುವುದು + ಉನ್ನತಿಕೆಯಲಿ = ಉತ್ತಮಿಕೆ (ವ್ಯಂಗ್ಯ); ಬಂದುದೇ ಮಿಗೆ = ಬಂದಿತೇ; ಸಾರ್ವಭೌಮರಿಗೆ = ಚಕ್ರವರ್ತಿ ಸಾಮ್ರಾಟನಿಗೆ; ತನ್ನ ಪುಣ್ಯದ ಹಾನಿ = ಇವೆಲ್ಲವೂ ನೀವು ಗಳಿಸಿದ ಪುಣ್ಯಕ್ಷಯದ ಫಲ; ತಾವಿದಕಿನ್ನು = ತಾವು ಇದಕ್ಕಾಗಿ ಇನ್ನು; ಬಳಲುವುದೇನು = ಬಳಲುವುದರಿಂದ ಪ್ರಯೋಜನವಿಲ್ಲ ಗುಣಸಂಪನ್ನ ರಕ್ಷಿಸು = ಗುಣಸಂಪನ್ನನೇ ಕಾಪಾಡು; ಸತಿಯನು + ಎಂದು + ಎರಗಿದಳು = ಕಾಪಾಡು ಎಂದು ಪತಿಯ ಪಾದಗಳಿಗೆ ನಮಸ್ಕರಿಸಿದಳು.

ಎಷ್ಟೇ ಕಷ್ಟ ದುಃಖಗಳನ್ನನುಭವಿಸಿದ್ದರೂ ದಮಯಂತಿಯು ನಳನನ್ನು ತಾನೇ ಸಮಾಧಾನದಿಂದ ಸಂತೈಸಿದಳು, "ಇವೆಲ್ಲವೂ ಪೂರ್ವಜನ್ಮದಲ್ಲಿ ಮಾಡಿರುವ ಕರ್ಮಫಲ. ಒಬ್ಬ ಮಹಾ ಸಾಮ್ರಾಟನಾದ ನಳಮಹಾರಾಜನಂಥ ವೀರಾಧಿವೀರನು ಋತುಪರ್ಣನಲ್ಲಿ ಸೇವೆ ಮಾಡಿಕೊಂಡಿರುವಂಥ ದುಸ್ಥಿತಿಗಿಳಿದಿರುವನೇ? ಇದು ನೀವು ಗಳಿಸಿದ ಪುಣ್ಯಕ್ಷಯದ ಸಂಕೇತ. ಇನ್ನು ಆಗಿಹೋಗಿರುವ ಸಂಗತಿಗಳಿಗಾಗಿ ದುಃಖಿಸುವುದರಿಂದ ಯಾವ ಪ್ರಯೋಜನವೂ ಇಲ್ಲ. ಹಾಗಾಗಿ ಗುಣಸಂಪನ್ನನಾದ ಮಹಾರಾಜನೇ, ನನ್ನನ್ನು, ನಿನ್ನ ಸತಿಯನ್ನು ರಕ್ಷಿಸು" ಎಂದು ಪತಿಯ ಪಾದಗಳಿಗೆ ಎರಗಿದಳು.

54. ತುರುಬ ಹಿಡಿದೆತ್ತಿದನು ಸತಿಯಳ
ಸುರಿವ ಕಂಬನಿದೊಡೆದು ನುಡಿದನು
ಬರಿದೆ ಚಿಂತಿಸಲೇಕೆ ಮಾನಿನಿ ಬಿಡು ಮನೋವ್ಯಥೆಯ
ಅರಿಯದವಳೇಂ ನೀನು ಲೋಕದ
ಸರಸಿಜಾಕ್ಷಿಯರೆಲ್ಲರಿಗೆ ವರ
ಗುರುವಲಾ ಬರಿದೆನ್ನ ಬಯಸಲು ಬೇಡ ಹೋಗೆಂದ

ತುರುಬ ಹಿಡಿದೆತ್ತಿದನು = ನಳನು ತನಗೆರಗಿದ ದಮಯಂತಿಯ ತಲೆಯನ್ನು ಹಿಡಿದು ಮೇಲೆತ್ತಿದನು; ಸತಿಯಳ ಸುರಿವ = ಹೆಂಡತಿಯು ಸುರಿಸುತ್ತಿದ್ದ; ಕಂಬನಿ + ತೊಡೆದು = ಕಂಬನಿಯನ್ನು ಒರೆಸಿ; ನುಡಿದನು = ಹೇಳಿದನು ಬರಿದೆ ಚಿಂತಿಸಲೇಕೆ = ವೃಥಾ ಚಿಂತಿಸುವುದಾದರೂ ಏಕೆ; ಮಾನಿನಿ = ಮಾನವಂತಳೇ; ಬಿಡು ಮನೋವ್ಯಥೆಯ = ಮನದೊಳಗೆ ಇನ್ನೂ ಚಿಂತಿಸುವ ಅಗತ್ಯವಿಲ್ಲ; ಅರಿಯದವಳೇಂ ನೀನು = ನೀನೇನು ತಿಳುವಳಿಕೆಗಳಿಲ್ಲದವಳೇನು; ಲೋಕದ = ಈ ಪ್ರಪಂಚದ; ಸರಸಿಜಾಕ್ಷಿಯರು + ಎಲ್ಲರಿಗೆ = ಎಲ್ಲ ಮಹಿಮಾನ್ವಿತ ಸ್ತ್ರೀ ಸಂಕುಲಕ್ಕೆ; ವರ ಗುರುವಲಾ = ಶ್ರೇಷ್ಠಮಟ್ಟದ ಗುರುವಲ್ಲವೇ ನೀನು; ಬರಿದೆ + ಎನ್ನ = ಸುಮ್ಮನೆ ನನ್ನನ್ನು; ಬಯಸಲು ಬೇಡ = ಬಯಸಬೇಡ; ಹೋಗು + ಎಂದ = ಹೋಗು ಎಂದನು.

ತನ್ನ ಕಾಲುಗಳಿಗೆ ಬಿದ್ದು ನಮಸ್ಕರಿಸಿದ ಪತ್ನಿಯನ್ನು ನಳನು ಮೇಲೆತ್ತಿ, ಸುರಿಯುತ್ತಿದ್ದ ಕಂಬನಿಯನ್ನೊರೆಸಿದನು. ಬಳಿಕ "ವೃಥಾ ಚಿಂತಿಸುವುದಾದರೂ ಏಕೆ? ಮಾನಿನಿಯೇ ಮನೋವ್ಯಥೆಯನ್ನು ಬಿಡು, ನೀನೇನು ಅರಿಯದವಳೇನು? ಲೋಕದ ಸ್ತ್ರೀ ಸಂಕುಲಕ್ಕೆ ಗುರುವಲ್ಲವೇ ನೀನು? ಏಕೆ ಸುಮ್ಮನೆ ನನ್ನನ್ನು ಬಯಸುತ್ತೀಯೆ? ಹೋಗು" ಎಂದನು.

55. ವಿನಯಹೀನನು ತಾನು ಮನದಲಿ
ನೆನೆದು ತಪ್ಪಿದ ನಿರ್ದಯನು ಕಾ
ನನದಿ ನಿನ್ನನು ಬಿಸುಟು ಕಳೆದ ದುರಾತ್ಮ ಬಾಹಿರನ
ನೆನೆವರೇ ಬಿಡು ಮರುಳೆ ನಿನಗಿಂ

ದಿನಲಿ ಮಾಳ್ಪ ಪುನಸ್ಸ್ವಯಂವರ
ಮನಕೆ ಸರಿಬಂದವನ ನೀನೊಲಿಸೆಂದನಾ ನೃಪತಿ

ವಿನಯಹೀನನು ತಾನು = ನಾನು ವಿನಯವಂತನಲ್ಲ; ಮನದಲಿ ನೆನೆದು = ಮನಸ್ಸಿನಲ್ಲಿ ನಿನ್ನ ಮೇಲೆ ಪ್ರೀತಿ ಇದ್ದರೂ; ತಪ್ಪಿದ ನಿರ್ದಯನು = ಕರ್ತವ್ಯವನ್ನು ತಪ್ಪಿದ ನಿರ್ದಯಿ; ಕಾನನದಿ = ಕಾಡಿನಲ್ಲಿ; ನಿನ್ನನ್ನು ಬಿಸುಟು = ನಿನ್ನೊಬ್ಬಳನ್ನೇ ಬಿಟ್ಟಗಲಿ; ಕಳೆದು = ಹೋದ; ದುರಾತ್ಮ ಬಾಹಿರನ = ಕೆಟ್ಟ ಮನಸ್ಸಿನವನು, ಧರ್ಮಕ್ಕೆ ಹೊರಗಾದವನು; ನೆನೆವರೇ ಬಿಡು ಮರುಳೆ = ನನ್ನಂಥವನನ್ನು ನೆನೆಯುತ್ತಾರೆಯೇ ಮರುಳೇ?; ನಿನಗಿಂದಿನಲಿ = ನಿನಗೆ ಇಂದು; ಮಾಳ್ಪ = ನಡೆಸಲಿರುವ; ಪುನಸ್ಸ್ವಯಂವರ = ಪುನಸ್ಸ್ವಯಂವರದಲ್ಲಿ; ಮನಕೆ ಸರಿಬಂದವನ = ಮನಸ್ಸಿಗೆ ಹಿಡಿಸಿದವನನ್ನು; ನೀನು + ಒಲಿಸು + ಎಂದನು + ಆ = ನೀನು ಮದುವೆಯಾಗು ಎಂದನು ಆ ನೃಪತಿ.

“ನಾನು ವಿನಯವಂತನಲ್ಲ. ನಿನ್ನೊಬ್ಬಳನ್ನೇ ಅರಣ್ಯದಲ್ಲಿ ಬಿಟ್ಟಗಲಿ ಬಂದ ದುರಾತ್ಮ, ನಿಷ್ಕರುಣಿ ನಾನು. ನನ್ನಂತಹ ನಿಯಮಬಾಹಿರನನ್ನು ಮತ್ತೆ ಸ್ಮರಿಸುವುದು ತರವಲ್ಲ. ಮರುಳೇ! ನನ್ನನ್ನು ಕುರಿತು ನೆನೆಯಬೇಡ. ಇಂದು ನಿನಗೆ ಪುನಃ ಸ್ವಯಂವರದ ಏರ್ಪಾಡಾಗಿದೆ. ನಿನ್ನ ಮನಸ್ಸಿಗೆ ಹಿಡಿಸಿದವರನ್ನು ವರಿಸು” ಎಂದು ನಳಮಹಾರಾಜನು ನುಡಿದನು.

56. ಎನಲು ಕರ್ಣಂಗಳಿಗೆ ಸಬಳದ
ಮೊನೆಗಳಿರಿದಂತಾಗೆ ಸತಿ ಕ
ಣ್ಣಿನಲಿ ತುಂಬಿದಳುದಕವನು ಹರಹರ ಶಿವಾಯೆನುತ
ಎನಗೆಯಿನ್ನುಪುನಸ್ಸ್ವಯಂವರ
ಮನದೊಳುಂಟೇ ನೀವು ಬರಬೇ
ಕೆನುತ ವಾರ್ತೆಯ ಕಲ್ಪಿಸಿದೆ ಕೇಳೆಂದಳಿಂದುಮುಖಿ

ಎನಲು = ಹೀಗೆನ್ನಲು; ಕರ್ಣಂಗಳಿಗೆ = ಕಿವಿಗಳಿಗೆ; ಸಬಳದ = ಕಬ್ಬಿಣದ ಸಲಾಕೆಯ; ಮೊನೆಯೊಳು + ಇರಿದಂತೆ + ಆಗೆ + ಹರಿತವಾದ ತುದಿಗಳಿಂದ ಚುಚ್ಚಿದಂತಾಗಲು; ಸತಿ ಕಣ್ಣಿನಲಿ = ದಮಯಂತಿಯು ಕಣ್ಣಿನಲ್ಲಿ;

ತುಂಬಿಹಳು + ಉದಕವನು = ನೀರು ತುಂಬಿಕೊಂಡಳು; ಹರಹರ ಶಿವಾ + ಎನುತ = ನೋವಿ ನಿಂದ ಹರಹರ ಶಿವಾ, ಎಂದು ಉದ್ಗರಿಸುತ್ತ; ಎನಗೆ + ಇನ್ನು = ನನಗಿನ್ನು; ಪುನಃಸ್ವಯಂವರ = ಮತ್ತೊಂದು ಸ್ವಯಂವರವೆಂಬುದು; ಮನದೊಳು + ಉಂಟೇ = ಆಸೆ ಮನಸ್ಸಿನಲ್ಲಿದೆಯೆಂದು ತಿಳಿದಿರೇನು?; ನೀವು ಬರಬೇಕು + ಎನುತ = ನೀವು ಬರಬೇಕೆಂಬ ಉದ್ದೇಶದಿಂದ; ವಾರ್ತೆಯ = ಸ್ವಯಂವರ ಉಂಟೆಂಬ ಸುದ್ಧಿಯನ್ನು; ಕಲ್ಪಿಸಿದೆ = ಹರಡಿಸಿದೆನಷ್ಟೇ; ಕೇಳೆಂದಳು + ಇಂದುಮುಖಿ = ಎಂದು ನಳನಲ್ಲಿ ಬಿನ್ನವಿಸಿದಳು ದಮಯಂತಿ.

ನಳನು ತನ್ನನ್ನು ಕುರಿತು ಮತ್ತೊಂದು ಮದುವೆಯಾಗಿ ಸುಖವಾಗಿರು ಎಂದು ಹೇಳಿದುದನ್ನು ಕೇಳಿ ದಮಯಂತಿಯು ಹೌಹಾರಿದಳು. ಅದೊಂದು ಮಾತೇ ಅವಳ ಕಿವಿಗಳನ್ನು ಹರಿತವಾದ ಕಬ್ಬಿಣದ ಸಲಾಕೆಯಿಂದ ಚುಚ್ಚಿದಂತೆ ಅಪಾರವಾಗಿ ನೋಯಿಸಿತು. 'ಹರಹರಾಶಿವ' ಎಂದು ನೋವಿನಿಂದ ಉದ್ಗರಿಸುತ್ತ "ನನಗೆ ಮತ್ತೊಂದು ಸ್ವಯಂವರವನ್ನೇರ್ಪಡಿಸಿ ಮದುವೆಯಾಗುವ ಮನದಾಸೆಯಿದೆ ಯೆಂದು ತಿಳಿದಿರೇನು? ನೀವು ಎಲ್ಲಿದ್ದರೂ ಈ ಸುದ್ದಿ ಕೇಳಿಯಾದರೂ ಬಂದೇ ಬರುವಿರೆಂದು ನಿರೀಕ್ಷೆಯಿಂದ ಸ್ವಯಂವರದ ಸುದ್ದಿಯನ್ನು ಬಿತ್ತರಿಸಿದೆನಷ್ಟೇ" ಎಂದು ದುಃಖದಿಂದ ಕಣ್ಣಿನಲ್ಲಿ ನೀರು ತುಂಬಿಕೊಂಡಳು.

57. ನಂಬಿದೆನು ಲೇಸಾಗಿ ಮನದೊಳ
ಗಿಂಬುಗೊಂಡುದು ವಿಕೃತಿರೂಪಿನ
ಡೊಂಬಿಯೇಕಿದು ಸಕಲಧರ್ಮವಿಚಾರವಂತರಿಗೆ
ಅಂಬುಜಾಕ್ಷನ ರೂಪಿನಲಿ ಪ್ರತಿ
ಬಿಂಬವಲ್ಲದೆ ನೀವು ಬಯಲಾ
ಡಂಬರದ ನುಡಿಯೇಕೆ ಸಾಕಿನ್ನೆಂದಳಿಂದುಮುಖಿ

ನಂಬಿದೆನು ಲೇಸಾಗಿ = ನಾನು ಸಂಪೂರ್ಣವಾಗಿ ನಂಬಿದ್ದೇನೆ; ಮನದೊಳಗೆ + ಇಂಬುಕೊಂಡುದು = ಮನಸ್ಸಿನಲ್ಲಿ ಆಳವಾಗಿ ನಿಮ್ಮ ರೂಪು ನಾಟಿಹೋಗಿದೆ; ವಿಕೃತಿ ರೂಪಿನ = ವಿಕಾರವಾದ ಈ ರೂಪಿನ; ಡೊಂಬಿಯೇಕೆ + ಇದು = ತೋರಿಕೆಯಾದರೂ ಏತಕ್ಕೆ? ಇದು; ಸಕಲಧರ್ಮ ವಿಚಾರವಂತರಿಗೆ =

ಸಕಲ ಧರ್ಮಗಳನ್ನೂ ತಿಳಿದು ಚಿಂತಿಸುವಂತಹ ವಿವೇಕಿಗಳಿಗೆ?; ಅಂಬುಜಾಕ್ಷನ = ಶ್ರೀ ಮಹಾವಿಷ್ಣುವಿನಂತಹ; ರೂಪಿನಲಿ = ರೂಪಿನ; ಪ್ರತಿಬಿಂಬವಲ್ಲವೇ ನೀವು = ಪ್ರತಿರೂಪವಾಗಿರುವಂಥವರು ನೀವು; ಬಯಲಾಡಂಬರದ = ಹಾಗಿರುವಾಗ ಅರ್ಥವಿಲ್ಲದ ಇಂತಹ ಕೃತ್ರಿಮವಾದ; ನುಡಿಯೇಕೆ = ಮಾತುಗಳೇಕೆ?; ಸಾಕಿನ್ನು + ಎಂದಳು + ಇಂದುಮುಖಿ = ಇದನ್ನೆಲ್ಲ ಇನ್ನು ಸಾಕುಮಾಡಿ ಎಂದಳು ದಮಯಂತಿ.

ಮುಂದುವರಿಯುತ್ತಾ ದಮಯಂತಿಯು ನಳನ ವೇಷವನ್ನು ಕುರಿತು ನೇರನೇರ ಖಂಡಿಸುವ ಮಾತುಗಳನ್ನಾಡಿದಳು– "ನಾನು ನಿಮ್ಮನ್ನೇ ಸಂಪೂರ್ಣವಾಗಿ ನಂಬಿದ್ದೇನೆ. ನಿಮ್ಮ ಗುಣ, ರೂಪಗಳು ನನ್ನ ಮನಸ್ಸಿನಲ್ಲಿ ಆಳವಾಗಿ ನಾಟಿವೆ. ಈಗ ಈ ವಿಕಾರವಾದ, ಬಾಹ್ಯಾಡಂಬರದ ರೂಪಿನ ಅವಶ್ಯಕತೆ ಇದೆಯೇ? ಸಕಲ ಧರ್ಮಗಳನ್ನೂ ಅರಿತು ಅನುಸರಿಸುವ ವಿಚಾರವಂತರೂ ವಿವೇಕಿಗಳೂ ಆದ ನಿಮ್ಮಂಥವರಿಗಿದು ಭೂಷಣವೇ? ಮಹಾವಿಷ್ಣುವಿನ ಪ್ರತಿರೂಪದಂತಿರುವ ನೀವು ಈಗ ಇಂತಹ ಕೃತಕವಾದ ಮಾತುಗಳನ್ನೇಕೆ ಆಡುತ್ತಿರುವಿರಿ? ಇನ್ನಾದರೂ ಇವನ್ನೆಲ್ಲ ಸಾಕುಮಾಡಿ" ಎಂದಳು.

58. ನಡೆಯುತೆಡಹಿದ ಪಟ್ಟದಾನೆಯ
ಪಿಡಿದು ಕೊಲ್ಲುವರುಂಟೆ ನಂಬಿದ
ಮಡದಿಯಲ್ಲವೆ ತಾನು ಬಿರುನುಡಿಯೇಕೆ ನಳನೃಪತಿ
ಅಡವಿಯಲಿ ಕಡುನೊಂದು ದೇಹವ
ಬಿಡದೆಯುಳುಹಿದೆನಿನ್ನು ಪ್ರಾಣದ
ಗೊಡವೆಯಿನ್ನೇಕೆನುತ ಕಂಬನಿದುಂಬಿದಳು ತರಳೆ

ನಡೆಯುತ + ಎಡಹಿದ + ಪಟ್ಟದ + ಆನೆಯ = ರಾಜನೇ; ನಡೆಯುತ್ತಿರುವಾಗ ಎಡವಿಬಿದ್ದ ಪಟ್ಟದಾನೆಯನ್ನು; ಪಿಡಿದು = ಹಿಡಿದು; ಕೊಲ್ಲುವರುಂಟೆ = ಕೊಲ್ಲುವುದು ನ್ಯಾಯವೇ?; ನಂಬಿದ ಮಡದಿಯಲ್ಲವೇ ತಾನು = ನಿಮ್ಮನ್ನೇ ನಂಬಿ ಬಂದ ಮಡದಿಯಲ್ಲವೇ ನಾನು?; ಬಿರುನುಡಿಯೇತಕೆ = ಹಾಗಿರುವಾಗ ಒರಟು ಮಾತುಗಳೇಕೆ?; ನಳನೃಪತಿ ಅಡವಿಯಲಿ = ನಳನೃಪತಿಯೇ, ಕಾಡಿನಲ್ಲಿ; ಕಡು

ನೊಂದು = ಅಪಾರವಾಗಿ ಕಷ್ಟಗಳನ್ನನುಭವಿಸಿ; ದೇಹವ = ಪ್ರಾಣವನ್ನು; ಬಿಡದೆಯುಳುಹಿದೆನು + ಇನ್ನು = ನೀಗಿಕೊಳ್ಳದೆ ಉಳಿಸಿಕೊಂಡಿದ್ದೇನೆ, ಇನ್ನು; ಪ್ರಾಣದ ಗೊಡವೆ + ಇನ್ನೇಕೆ + ಎನುತ = ಇನ್ನು ನಿಮ್ಮ ದರುಶನವಾದ ನಂತರ ನನಗೆ ಈ ಪ್ರಾಣದ ಗೊಡವೆ ಏಕೆ? ಎನ್ನುತ್ತ; ಕಂಬನಿ + ತುಂಬಿದಳು ತರಳೆ = ಕಣ್ಣೀರು ತುಂಬಿಕೊಂಡಳು.

"ನಳನೃಪತಿಯೇ, ನಡೆಯುತ್ತಿರುವಾಗ ಆಕಸ್ಮಿಕವಾಗಿ ಎಡವಿಬಿದ್ದ ಪಟ್ಟದಾನೆಯನ್ನು ಅದರ ರೀತಿನೀತಿ ಅರ್ಹತೆ ಪದವಿಗಳನ್ನೊಂದನ್ನೂ ಲಕ್ಷಿಸದೆ ಹಿಡಿದು ಕೊಲ್ಲುವುದು ನ್ಯಾಯವೇನು? ನಾನು ನಿಮ್ಮನ್ನೇ ನಂಬಿ ಬಂದವಳಲ್ಲವೇನು? ಮಡದಿಯಾದ ನನ್ನಲ್ಲೇ ಇಂತಹ ಬಿರುಸಾದ ಕಠಿಣ ಮಾತುಗಳನ್ನಾಡಬಹುದೇ? ಕಾಡಿನಲ್ಲಿ ಬಹುವಾಗಿ ಕಷ್ಟಪಟ್ಟರೂ ನಿಮ್ಮನ್ನು ಕಾಣಬೇಕೆಂದು ಈ ಶರೀರವನ್ನು ಇಲ್ಲಿಯವರೆಗೆ ರಕ್ಷಿಸಿಕೊಂಡು ಬಂದಿದ್ದೇನೆ. ಇನ್ನು ಈಗ ನಿಮ್ಮ ದರ್ಶನವಾಯಿತು ಇನ್ನು ಈ ಪ್ರಾಣದ ಹಂಗೇಕೆ ನನಗೆ" ಎಂದು ಅತ್ಯಂತ ದುಃಖಪರಳಾಗಿ ಕಣ್ಣೀರು ತುಂಬಿಕೊಂಡಳು ದಮಯಂತಿ.

59. ನೋಯೆ ನೊಂದಿಹ ಸತಿಯನಾಡಲು
ನ್ಯಾಯವೇನಿದು ನಿಮಗೆ ಕೇಳೆಲೆ
ರಾಯ ನಿಮ್ಮನು ನೋಡೆ ಕಳುಹಿದೆ ಚರರ ದಿಕ್ಕಿನಲಿ
ಮಾಯರೂಪಿದ ಕಾಣಲಾರದೆ
ಬಾಯ ಬಿಡುತಿರಲಿನ್ನಯೋಧ್ಯೆಯ
ರಾಯನಲಿ ನೂತನದ ಸಾರಥಿಯೆನಲು ಕೇಳಿದೆನು.

ನೋಯೆ ನೊಂದಿಹ = ಈಗಾಗಲೇ ಸಾಕಷ್ಟು ನೋಯಿಸಿದ್ದೀರಿ, ಇನ್ನೂ ಹೀಗೆ ನೊಂದಿರುವ; ಸತಿಯನು + ಆಡಲು = ಸತಿಯನ್ನು ಆಕ್ಷೇಪಿಸಿ ನೋಯಿಸಲು; ನ್ಯಾಯವೇನು + ಇದು ನಿಮಗೆ = ನಿಮಗೇ ನ್ಯಾಯವೆಂದು ತೋರುತ್ತದೆಯೇ?; ಕೇಳು + ಎಲೆ ರಾಯ = ಆಲಿಸು ಮಹಾರಾಜನೇ; ನಿಮ್ಮನ್ನು ನೋಡೆ = ನಿಮ್ಮನ್ನು ಹುಡುಕಲೆಂದೇ; ಕಳುಹಿದೆ ಚರರ ದಿಕ್ಕಿನಲಿ = ಚಾರರನ್ನು ದಿಕ್ಕುದಿಕ್ಕಿಗೂ ಕಳುಹಿಸಿದ್ದೆ; ಮಾಯಾ ರೂಪು + ಇದ = ನಿಮ್ಮ ಈ

ಕಪಟರೂಪನ್ನು; ಕಾಣಲಾರದೆ = ಗುರುತಿಸಲಾಗದೆ; ಬಾಯ ಬಿಡುತಿರಲು + ಇನ್ನು + ಅಯೋಧ್ಯೆಯ = ಮುಂದೇನು ಎಂದು ಚಿಂತಿಸುತ್ತಿರುವ ಸಂದರ್ಭದಲ್ಲಿ ಅಯೋಧ್ಯೆಯ; ರಾಯನಲಿ = ರಾಜನಲ್ಲಿ; ನೂತನದ ಸಾರಥಿ + ಎನಲು ಕೇಳಿದೆನು = ಒಬ್ಬ ಹೊಸಬನಾದ ಸಾರಥಿಯಿದ್ದಾನೆ ಎಂಬ ಸುದ್ದಿಯನ್ನು ಕೇಳಿದೆನು.

“ರಾಜನೇ, ಈಗಾಗಲೇ ಸಾಕಷ್ಟು ನೋಯಿಸಿದ್ದೀರಿ. ನೊಂದು ದುಃಖಿತಳಾಗಿರುವ ಹೆಂಡತಿಯನ್ನು ಮತ್ತೆ ನೋಯಿಸುವುದು ನಿಮ್ಮಂಥವರಿಗೇ ನ್ಯಾಯವೆಂದು ತೋರುತ್ತದೆಯೇ? ಆದರೆ ನಿಮ್ಮ ಈ ಕಪಟವೇಷದ ಕಾರಣ ಅವರು ನಿಮ್ಮನ್ನು ಗುರುತಿಸಲಾರದೆ ಹೋದರು. ಮುಂದೇನು ಎಂದು ದಾರಿಕಾಣದೆ ಬಾಯಿಬಿಡುತ್ತಿರುವಾಗ ಅಯೋಧ್ಯೆಯ ರಾಜನಲ್ಲಿ ಒಬ್ಬ ಹೊಸಬನಾದ ಸಾರಥಿ ಇರುವನೆಂಬ ಸುದ್ದಿ ಕೇಳಿ ಬಂತು” ಎಂದಳು.

60. ಆಗ ಭೂಸುರಪತಿ ಸುದೇವನ
ಬೇಗಲಟ್ಟಿದೆ ನಿಮ್ಮ ಬಳಿಗೆ ಸ
ರಾಗದಿಂದುತ್ತರಕೆ ಪ್ರತ್ಯುತ್ತರವ ಪೇಳ್ದಿರಲ
ಈಗಲಿದು ಸಂಶಯವೆ ತಾನದ
ಕಾಗಿ ಕರೆಸಿ ಸ್ವಯಂವರವ ನಿಮ
ಗಾಗಿ ಪೇಳಿದೆನಿದರ ತಪ್ಪೇನೆಂದಳಿಂದುಮುಖಿ

ಆಗ ಭೂಸುರಪತಿ = ಆಗ ಬ್ರಾಹ್ಮಣೋತ್ತಮನಾದ; ಸುದೇವನ = ಸುದೇವನನ್ನು; ಬೇಗಲು + ಅಟ್ಟಿದೆ ನಿಮ್ಮ ಬಳಿಗೆ = ನಿಮ್ಮ ಬಳಿಗೆ ಬೇಗ ಹೋಗು ಎಂದು ಕಳುಹಿದೆ; ಸರಾಗದಿಂದ + ಉತ್ತರಕೆ = ಅವನು ನಿಮ್ಮ ಬಳಿ ಪ್ರಶ್ನಿಸಿದಾಗ ಅಡೆತಡೆ ಮಾಡದೆ; ಪ್ರತ್ಯುತ್ತರವ = ಪ್ರತಿಯಾಗಿ ಉತ್ತರವನ್ನು; ಪೇಳ್ದಿರಲ = ಹೇಳಿದಿರಲ್ಲವೆ; ಈಗಲು + ಇದು + ಸಂಶಯವೆ = ಇದರ ನಂತರವೂ ಈ ವಿಷಯವು ಅನುಮಾನಾಸ್ಪದವಾಗಿಯೇ ಇದ್ದುದರಿಂದ; ತಾನು + ಅದಕಾಗಿ = ಅದೇ ಕಾರಣವಾಗಿ ನಾನು; ಕರೆಸಿ; ಸ್ವಯಂವರವ = ಸ್ವಯಂವರಕ್ಕಾಗಿ ಆಹ್ವಾನಿಸಿ; ನಿಮಗಾಗಿ = ನಿಮಗೋಸ್ಕರವಾಗಿಯೇ; ಪೇಳಿದೆನಿದರ = ಏರ್ಪಡಿಸಿದ್ದೆ, ಇದರಲ್ಲಿ;

ತಪ್ಪೇನು + ಎಂದಳು + ಇಂದುಮುಖಿ = ಇದರಲ್ಲಿ ನನ್ನ ತಪ್ಪೇನಿದೆ ಎಂದು ಪ್ರಶ್ನಿಸಿದಳು.

"ಇದರ ಬಳಿಕ ನಾನು ನಿಮ್ಮನ್ನು ಪರೀಕ್ಷಿಸಲೆಂದೇ ಬ್ರಾಹ್ಮಣೋತ್ತಮನಾದ ಸುದೇವನನ್ನು ಕರೆಸಿ ನಿಮ್ಮ ಬಳಿಗೆ ಕಳುಹಿಸಿದೆ. ಪರೀಕ್ಷಾರ್ಥವಾಗಿ ಅವನು ಕೇಳಿದುದಕ್ಕೆಲ್ಲ ನೀವು ತಡೆಯಿಲ್ಲದೆ ಸರಾಗವಾಗಿ ಉತ್ತರಿಸಿದರಲ್ಲವೆ. ಆದರೂ ಅನುಮಾನಕ್ಕೆ ಆಸ್ಪದವಿಲ್ಲದಿರಲಿ ಎಂದು ನಿಮ್ಮನ್ನು ಬರಮಾಡಿಕೊಳ್ಳಲೆಂದೇ ಸ್ವಯಂವರಕ್ಕಾಗಿ ಆಹ್ವಾನಿಸಲು ನೀವು ಬಂದಿರಿ. ಇದೆಲ್ಲವನ್ನೂ ನಾನು ಯೋಜಿಸಿದುದು ನಿಮ್ಮನ್ನು ಕಾಣಲೆಂದೇ. ಇದರಲ್ಲಿ ನನ್ನ ತಪ್ಪೇನಿದೆ" ಎಂದು ದಮಯಂತಿಯು ಕೇಳಿದಳು.

61. ಜನನುತನೆ ಕೇಳಾದಿಯಲಿ ಯೌ
ವನವ ನಿನಗೊಪ್ಪಿಸಿದೆನಲ್ಲದೆ
ತನುಮನೋವಾಕ್ಕಾಯಕರ್ಮಂಗಳಲಿ ತಾನೆರಡ
ನಿನಗೆ ನೆನೆದವಳಲ್ಲ ನೀನೇ
ನನಗೆ ಗತಿಯೆಂದಿಹುದನರಿಯಾ
ಜನಪ ರಕ್ಷಿಸು ಕೈಪಿಡಿದು ಸಲಹೆಂದಳಿಂದುಮುಖಿ

ಜನನುತನೆ = ಪ್ರಜೆಗಳಿಂದ ಹೊಗಳಿಕೆಗೆ ಪಾತ್ರರಾದವನೇ; ಕೇಳು + ಆದಿಯಲಿ = ಆಲಿಸು, ನಮ್ಮ ವಿವಾಹವಾದ ಹೊಸತರಲ್ಲಿ; ಯೌವನವ = ನನ್ನ ಯೌವನವನ್ನು; ನಿನಗೆ + ಒಪ್ಪಿಸಿದೆನು + ಅಲ್ಲದೆ = ನಿನಗೆ ಒಪ್ಪಿಸಿದೆ, ಅಲ್ಲದೆ; ತನು + ಮನೋ + ವಾಕ್ + ಕಾಯ ಕರ್ಮಂಗಳಲಿ = ಶರೀರದಿಂದಾಗಲಿ, ಮನಸ್ಸಿನಿಂದಾಗಲಿ, ಮಾತಿನಿಂದಾಗಲಿ, ದೈಹಿಕವಾದ ಕಾರ್ಯಕರ್ಮಗಳಿಂದಾಗಲಿ; ತಾನೆರಡ ನಿನಗೆ ನೆನೆದವಳಲ್ಲ = ನಾನು ನಿನಗೆ ಎಂದೂ ಮೋಸಮಾಡಿ ನಡೆದುಕೊಂಡವಳಲ್ಲ, ನೀನೇ ನನಗೆ; ಗತಿ + ಎಂದು + ಇಹೆನು + ಅರಿಯಾ = ಗತಿ ಎಂದು ಬಾಳುತ್ತ ಬಂದಿರುವುದನ್ನು ತಿಳಿದಿಲ್ಲವೇನು; ಜನಪ = ಜನಾಧಿಪತಿಯೇ; ರಕ್ಷಿಸು ಕೈಪಿಡಿದು = ನನ್ನನ್ನು ಕೈಹಿಡಿದು ರಕ್ಷಿಸು; ಸಲಹೆಂದಳು + ಇಂದುಮುಖಿ = ಕಾಪಾಡು ಎಂದಳು ದಮಯಂತಿ.

ಪ್ರಜೆಗಳ ಹೊಗಳಿಕೆಗೆ ಪಾತ್ರನಾದ ರಾಜನೇ, ಕೇಳು, ನಮ್ಮ ವಿವಾಹವಾದ ಹೊಸತರಲ್ಲಿ ನಾನು ನನ್ನ ಯೌವನವನ್ನು ನಿನಗೆ ಒಪ್ಪಿಸಿದ್ದೆ. ಅಷ್ಟೇ ಅಲ್ಲದೆ ದೈಹಿಕವಾಗಿಯಾಗಲಿ, ಮಾನಸಿಕವಾಗಿಯಾಗಲೀ, ಮಾತಿನಿಂದಾಗಲೀ, ಅಥವಾ ದೈನಂದಿನ ಕಾರ್ಯಕರ್ಮಗಳಿಂದಾಗಲೀ ಎಂದೂ ನಿನಗೆ ವ್ಯತಿರಿಕ್ತವಾಗಿ ನಡೆದುಕೊಂಡವಳಲ್ಲ ಎಂಬುದು ನಿನಗೇ ತಿಳಿದಿದೆಯಲ್ಲವೇ? ಜನಾಧಿಪತಿ ನಳನೇ ನೀನೇ ನನ್ನನ್ನು ಕೈಹಿಡಿದು ಕಾಪಾಡಬೇಕು ಎಂದು ದಮಯಂತಿಯು ಮತ್ತೆ ಕೇಳಿ ಕೊಂಡಳು.

62. ಇದಕೆ ಯಮ ವರುಣಾನಿಲೇಂದ್ರರು
ಮದನಜನಕನೆ ಸಾಕ್ಷಿಯೆನೆ ಮೇ
ಘದಲಿ ನುಡಿದನು ವಾಯು ನಳನೃಪನೊಡನೆ ಸತ್ಯವನು
ಚದುರ ಕೇಳ್ ದಮಯಂತಿ ಲೋಕದ
ಸುದತಿಯೇ ತಿಳಿ ಲೋಕಪಾವನೆ
ಯಿದಕೆ ಸಂಶಯವೇಕೆ ಪಾಲಿಸು ಸತಿಯ ನೀನೆಂದು

ಇದಕೆ ಯಮ + ವರುಣ + ಅನಿಲ + ಇಂದ್ರರು = ಈ ಎಲ್ಲ ಘಟನಾ ವಳಿಗಳಿಗೆ ಯಮ, ವರುಣ, ವಾಯು, ಇಂದ್ರರು; ಮದನಜನಕನೆ ಸಾಕ್ಷಿ + ಎನೆ = ಮತ್ತು ಮದನಜನಕನಾದ ಕೃಷ್ಣನೇ ಸಾಕ್ಷಿ ಎಂದು ಹೇಳಲು; ಮೇಘದಲಿ ನುಡಿದನು ವಾಯು = ವಾಯುದೇವನು ಆಕಾಶ ಮಾರ್ಗದಲ್ಲಿ ಅಶರೀರಿಯಾಗಿ ಹೇಳಿದನು; ನಳನೃಪನ + ಒಡನೆ = ನಳ ನೃಪನೊಂದಿಗೆ; ಸತ್ಯವನು = ನಡೆದ ನಿಜ ಸಂಗತಿಗಳೆಲ್ಲವನ್ನೂ; ಚದುರ ಕೇಳ್ = "ಚತುರನಾದ ರಾಜನೇ, ಕೇಳು; ದಮಯಂತಿ = ದಮಯಂತಿಯು; ಲೋಕದ = ಪ್ರಪಂಚದ; ಸುದತಿಯೇ ತಿಳಿ = ಅತ್ಯಂತ ಗೌರವಾರ್ಹ ಹೆಣ್ಣು ಮಗಳೆಂಬುದನ್ನು ನಂಬು; ಲೋಕಪಾವನೆ = ಅವಳು ಅತ್ಯಂತ ಪಾವನ ಚರಿತ್ರಳು; ಇದಕೆ = ಇದರಲ್ಲಿ; ಸಂಶಯವೇಕೆ = ನಿನಗೇಕೆ ಅನುಮಾನ; ಪಾಲಿಸು ಸತಿಯ ನೀನು + ಎಂದು = ಅವಳನ್ನು ಪರಿಗ್ರಹಿಸು" ಎಂದು.

ಈ ಎಲ್ಲ ಘಟನಾವಳಿಗಳಿಗೆ ಯಮ, ವರುಣ, ವಾಯು, ಇಂದ್ರ ಹಾಗೂ ಆ ಮದನ ಜನಕನಾದ ದೇವ ಕೃಷ್ಣನೇ ಸಾಕ್ಷಿ ಎಂದು ದಮಯಂತಿಯು ಹೇಳಲು, ಆಕಾಶ ಮಾರ್ಗದಲ್ಲಿದ್ದ ವಾಯುವಿನ ಅಶರೀರವಾಣಿಯು ದಮಯಂತಿಯ ಮಾತುಗಳಿಗೆ ಸಮರ್ಥನೆ ನೀಡುವಂತೆ ಕೇಳಿಸಿತು. "ಚತುರನಾದ ರಾಜನೇ, ದಮಯಂತಿಯು, ಈ ಪ್ರಪಂಚದ ಅತ್ಯಂತ ಘನತೆ ಗೌರವಗಳುಳ್ಳ ಹೆಣ್ಣು ಮಗಳೆಂಬುದನ್ನು ನಂಬು. ಅವಳು ಮಹಾಪಾವನಚರಿತಳು, ಇದರಲ್ಲಿ ನಿನಗೇಕೆ ಸಂಶಯ? ಅವಳು ನಿನ್ನ ಮಡದಿ, ಅವಳನ್ನು ಪರಿಗ್ರಹಿಸು" ಎಂಬುದಾಗಿ.

63. ಪವನನಾಡಿದ ನುಡಿಯ ಕೈಕೊಂ
ಡವನಿಪತಿ ಬಿನ್ನೈಸಿದನು ಕೈ
ತವಕದಲಿ ಕಲಿಯಿಂದ ನೊಂದೆನು ನಿಮ್ಮ ದರುಶನದಿ
ಬವಣೆ ಹಿಂಗಿ ಕೃತಾರ್ಥನಾದೆನು
ಭುವಿಯೊಳಿನ್ನೇನೆನುತ ಪಕ್ಷಿಯ
ಹವಣ ಮನದಲಿ ನೆನೆಯೆ ಬಂದುದು ದಿವ್ಯಮಯವಸನ

ಪವನನಾಡಿದ ನುಡಿಯ = ವಾಯುದೇವನು ಹೇಳಿದ ನುಡಿಗಳನ್ನು; ಕೈಕೊಂಡು + ಅವನಿಪತಿ = ಭೂಪೇಂದ್ರನಾದ ನಳನು ಒಪ್ಪಿಕೊಂಡು; ಬಿನ್ನೈಸಿದನು = ಈ ರೀತಿ ವಿನಂತಿಸಿದನು; ಕೈ ತವಕದಲಿ ಕಲಿಯಿಂದ = ಕಲಿಪುರುಷನ ಕೈವಾಡಕ್ಕೆ ಬಲಿಯಾಗಿ; ನೊಂದೆನು = ನಾನು ಕಷ್ಟಗಳಿಗೀಡಾದೆನು, ನಿಮ್ಮ ದರುಶನದಿ = ನಿಮ್ಮ ದರ್ಶನದಿಂದ; ಬವಣೆ ಹಿಂಗಿ = ಕಷ್ಟ ಮತ್ತು ತೊಂದರೆಗಳು ದೂರವಾಗಿ; ಕೃತಾರ್ಥನಾದೆನು = ಧನ್ಯನಾದೆ; ಭುವಿಯೊಳು + ಇನ್ನೇನು + ಎನುತ = ಈ ಲೋಕದಲ್ಲಿ ನನಗಿನ್ನೇನು ಬೇಕಿದೆ ಎನ್ನುತ್ತ; ಪಕ್ಷಿಯ ಹವಣ = ಈ ಹಿಂದೆ ಪಕ್ಷಿಯು ನುಡಿದಿದ್ದ ಕ್ರಮದಲ್ಲಿ; ಮನದಲ್ಲಿ ನೆನೆಯೆ = ಮನಸ್ಸಿನಲ್ಲಿಯೇ ಅದನ್ನು ಧ್ಯಾನಿಸಲು; ಬಂದುದು ದಿವ್ಯಮಯ ವಸನ = ಅವನ ದಿವ್ಯಮಯವಾದ ಪಟ್ಟೆದುಕೂಲ ವಸ್ತ್ರಗಳು ಬಂದವು.

ವಾಯುದೇವನು ನುಡಿದ ನುಡಿಗಳನ್ನು ಕೇಳಿಸಿಕೊಂಡ ನಳನು ಆ ಮಾತುಗಳನ್ನು ಅಂಗೀಕರಿಸಿ, ಅವನಲ್ಲಿ ಈ ರೀತಿ ವಿನಂತಿಸಿಕೊಂಡನು. ಆಕಸ್ಮಿಕವಾಗಿ

ಕಲಿಪುರುಷನ ಕೈವಾಡಕ್ಕೆ ಸಿಕ್ಕಿ ನಾನು ಕಷ್ಟಗಳಿಗೀಡಾದೆನು. ಈಗ ನಿಮ್ಮ ದರ್ಶನದಿಂದ ನನ್ನ ಕಷ್ಟ., ತೊಂದರೆಗಳೆಲ್ಲವೂ ದೂರವಾದುವು. ನಾನೀಗ ಧನ್ಯನಾದೆ. ಈ ಲೋಕದಲ್ಲಿ ಅದಕ್ಕಿಂತ ನನಗಿನ್ನೇನು ಬೇಕು? ಎನ್ನುತ್ತ, ಈ ಮೊದಲು ಪಕ್ಷಿಗಳು ತನ್ನ ವಸ್ತ್ರಗಳನ್ನು ಹಾರಿಸಿಕೊಂಡು ಹೋಗಿದ್ದು, ಕಾಲಾ ನಂತರದಲ್ಲಿ ತಮ್ಮನ್ನು ನೆನೆದಾಗ ಅವನ್ನು ಮರಳಿ ಪಡೆಯಬಹುದೆಂದು ಹೇಳಿದ್ದನ್ನು ನೆನೆಯುತ್ತ, ಪಕ್ಷಿಗಳನ್ನು ಮನಸ್ಸಿನಲ್ಲಿಯೇ ಧ್ಯಾನಿಸಲು ಆ ಕ್ಷಣವೇ ದಿವ್ಯಾಂಬರಗಳು ಅವನೆದುರಿಗೆ ಪ್ರತ್ಯಕ್ಷವಾದುವು.

64. ಧರಿಸಿದನು ನಳನಾ ದುಕೂಲವ
ಪರಿಹರಿಸಿತಾ ರೂಪು ಮುನ್ನಿನ
ಪರಮತೇಜದ ದಿವ್ಯತನುವಿನೊಳೆಸೆದು ರಂಜಿಸಲು
ಸುರರ ದುಂದುಭಿ ಮೊಳಗೆ ಮಲ್ಲಿಗೆ
ಯರಲ ಮಳೆ ಸೂಸಿದರು ಗಗನದಿ
ಸುರಸತಿಯರಕ್ಷತೆಯ ತಳಿದರು ಹರಸಿ ನಳನೃಪಗೆ

ಧರಿಸಿದನು ನಳನು ಆ + ದುಕೂಲವ = ಪಟ್ಟೆ ದಿವ್ಯಾಂಬರಗಳನ್ನು ನಳನು ಧರಿಸಿದೊಡನೆಯೇ; ಪರಿಹರಿಸಿತು + ಆ ರೂಪು = ಅವನ ಕುರೂಪವು ಥಟ್ಟನೆ ಮಾಯವಾಯಿತು; ಮುನ್ನಿನ = ಮೊದಲಿದ್ದಂತೆಯೇ; ಪರಮತೇಜದ = ಮಹಾ ತೇಜೋಮಯವಾದ; ದಿವ್ಯ ತನುವಿನೊಳು + ಎಸೆದು ರಂಜಿಸಲು = ದಿವ್ಯ ಶರೀರಿಯಾಗಿ ಶೋಭಿಸಲು; ಸುರರ ದುಂದುಭಿ ಮೊಳಗೆ = ಸುರಲೋಕದ ಮಂಗಳ ದುಂದುಭಿ ವಾದ್ಯಗಳು ಮೊಳಗಲು; ಮಲ್ಲಿಗೆಯರಲ = ಮಲ್ಲಿಗೆ ಹೂವಿನ; ಮಳೆ ಸೂಸಿದರು = ಮಳೆಯನ್ನೇ ಧಾರೆಯಾಗಿ ಕರೆದರು; ಗಗನದಿ = ಆಕಾಶ ಮಾರ್ಗದಲ್ಲಿ; ಸುರಸತಿಯರು + ಅಕ್ಷತೆಯ = ದೇವಾಂಗನೆಯರು ಮಂಗಳಾ ಕ್ಷತೆಯನ್ನು; ತಳಿದರು = ಚಿಮುಕಿಸಿದರು; ಹರಸಿ ನಳನೃಪಗೆ = ನಳಮಹಾ ರಾಜನನ್ನು ಹರಸಿ.

ನಳನು ಪಕ್ಷಿಗಳಿಂದ ಪಡೆದ ದಿವ್ಯಾಂಬರಗಳನ್ನು ಧರಿಸುತ್ತಿದ್ದ ಆ ಕ್ಷಣವೇ ಅವನ ವಿಕಾರವಾದ ಕುರೂಪವು ಮಾಯವಾಯಿತು. ಮೊದಲಿನಂತೆಯೇ

ಮನಮೋಹಕವಾದ ತೇಜೋಮಯ ದಿವ್ಯ ಶರೀರಿಯಾಗಿ ಶೋಭಿಸಿದನು. ಆಗ ದೇವಲೋಕದ ಸುರರು ದುಂದುಭಿಯೇ ಮೊದಲಾದ ಮಂಗಳವಾದ್ಯಗಳನ್ನು ಮೊಳಗಿಸಲು ಸುರಸತಿಯರು ಅವನ ಮೇಲೆ ಮಲ್ಲಿಗೆ ಹೂವಿನ ಮಳೆಯನ್ನೇ ಕರೆದರು. ದೇವಾಂಗನೆಯರು ಅವನನ್ನು ಹರಸುತ್ತ ಮಂಗಳಾಕ್ಷತೆಯನ್ನು ಚಿಮುಕಿಸಿದರು.

65. ಸುರರು ಕೊಂಡಾಡಿದರು ಯಮ ಭಾ
ಸ್ಕರ ವಿರಿಂಚಾದಿಗಳುಲಿಯೆ ವರ
ತರುಣಿ ಬಂದೆರಗಿದಳು ಪತಿಯಂಘ್ರಿಯಲಿ ದಮಯಂತಿ
ಹರುಷದಲಿ ಬಿಗಿಯಪ್ಪಿದನು ಭೂ
ಸುರರು ಸಂಭ್ರಮಿಸಿದರು ವರಪುರ
ದರಸ ಚೆನ್ನಿಗರಾಯ ಸಲಹಿದನವರ ಕರುಣದಲಿ

ಸುರರು = ದೇವಾಧಿದೇವತೆಗಳು; ಕೊಂಡಾಡಿದರು = ಅವನನ್ನು ಹಾಡಿಹೊಗಳಿದರು; ಯಮ, ಭಾಸ್ಕರ ವಿರಿಂಚಿ + ಆದಿಗಳು ಉಲಿಯೆ = ಯಮ, ಸೂರ್ಯ, ಬ್ರಹ್ಮ ಮೊದಲಾದವರು ಮಂಗಳಸೂಚಕ ಆಶೀರ್ವಚನಗಳನ್ನು ಹೇಳಲು; ವರತರುಣಿ = ಪರಮ ಪತಿವ್ರತೆ ಎಂಬ ಖ್ಯಾತಿವೆತ್ತ ದಮಯಂತಿಯು; ಬಂದು + ಎರಗಿದಳು = ಬಂದು ನಮಸ್ಕರಿಸಿದಳು; ಪತಿಯ + ಅಂಘ್ರಿಯಲಿ = ಪತಿಯಾದ ನಳಮಹಾರಾಜನ ಪಾದಗಳಿಗೆ; ಹರುಷದಲಿ = ಸಂತೋಷದಿಂದ; ಬಿಗಿಯಪ್ಪಿದನು = ನಳನು ಅವಳನ್ನು ಬಿಗಿಯಾಗಿ ಆಲಂಗಿಸಿಕೊಂಡನು; ಭೂಸುರರು = ಬ್ರಾಹ್ಮಣ ಶ್ರೇಷ್ಠರು; ಸಂಭ್ರಮಿಸಿದರು = ಸಂಭ್ರಮಗೊಂಡರು; ವರಪುರದ + ಅರಸ = ವರಪುರದ ದೇವನಾದ; ಚೆನ್ನಿಗರಾಯ = ಚೆನ್ನಿಗರಾಯನು; ಸಲಹಿದನು ಅವರ ಕರುಣದಲಿ= ಅವರನ್ನು ಪ್ರೀತಿಯಿಂದ ಸಲಹಿದನು.

ದೇವಾಧಿದೇವತೆಯರು ನಳನನ್ನು ಹಾಡಿಹೊಗಳಿದರು. ಯಮ,ಸೂರ್ಯ, ಬ್ರಹ್ಮನೇ ಮೊದಲಾದ ದೇವಸಂಕುಲವು ಅವನನ್ನು ಮಂಗಳಸೂಚಕ ಆಶೀರ್ವಚನ ಗಳಿಂದ ಹರಸಲು, ಪರಮ ಪತಿವ್ರತೆ ಎಂಬ ಖ್ಯಾತಿವೆತ್ತ ದಮಯಂತಿಯು ಬಂದು

ಪತಿಯ ಕಾಲುಗಳಿಗೆ ನಮಸ್ಕರಿಸಿದಳು. ಸಂತೋಷವು ಮೇರೆ ಮೀರಲು ನಳಮಹಾರಾಜನು ಅವಳನ್ನು ಬಿಗಿಯಾಗಿ ಅಪ್ಪಿಕೊಳ್ಳಲು, ಬ್ರಾಹ್ಮಣ ಶ್ರೇಷ್ಠರು ಸಂಭ್ರಮಿಸಲು, ವರಪುರದ ಮಹಾಪ್ರಭುವಾದ ಚೆನ್ನಿಗರಾಯನು ಅವರನ್ನು ತನ್ನ ದಯಾಮಯ ಕೃಪಾಕಟಾಕ್ಷಗಳಿಂದ ಸಲಹಿದನು.

ಒಂಬತ್ತನೆಯ ಸಂಧಿ

ಕದನದಲಿ ಪುಷ್ಕರನ ಬಲವನು
ಸದೆದು ಜೂಜಿಂ ಗೆಲಿದು ರಾಜ್ಯವ
ಮುದದಿ ಪಾಲಿಸುತಿರ್ದನಾ ಸತಿಸಹಿತ ನಳನೃಪತಿ

ಕದನದಲಿ = ಕಾಳಗದಲ್ಲಿ; ಪುಷ್ಕರನ ಬಲವನು = ಪುಷ್ಕರನ ಸೇನಾ ಬಲ, ರಾಜಕೀಯ ಬಲಗಳನ್ನು; ಸದೆದು = ನುರಿದು ಹಾಕಿ; ಜೂಜಿಂ ಗೆಲಿದು = ದ್ಯೂತದಲ್ಲಿ ಗೆದ್ದು; ರಾಜ್ಯವ ಮುದದಿ = ತನ್ನ ರಾಜ್ಯವನ್ನು ಆನಂದದಿಂದ; ಪಾಲಿಸುತಿರ್ದನು + ಆ = ಆಳುತ್ತಿದ್ದನು; ಸತಿಸಹಿತ ನಳನೃಪತಿ = ತನ್ನ ಸತಿ ಸಮೇತನಾಗಿ ನಳಚಕ್ರವರ್ತಿ.

ದೇವಾಧಿದೇವತೆಗಳಿಂದ ಸತೀಸಮೇತ ಆಶೀರ್ವಚನಗಳನ್ನು ಪಡೆದ ನಂತರ ನಳಮಹಾರಾಜನು ಪುಷ್ಕರನೊಂದಿಗೆ ಯುದ್ಧ ಮಾಡಿ, ದ್ಯೂತದಲ್ಲಿಯೂ ಜಯಿಸಿ ತನ್ನ ರಾಜ್ಯವನ್ನು ಮರಳಿಪಡೆದು ಸಂತೋಷದಿಂದ ಸತಿಸಮೇತ ತನ್ನ ರಾಜ್ಯವನ್ನು ಪಾಲಿಸುತ್ತಿದ್ದನು.

1. ಕೇಳು ಪಾಂಡುಕುಮಾರ ನಳಭೂ
ಪಾಲನಭ್ಯುದಯವನು ಮಂಗಳ
ದೇಳಿಗೆಯನೇನೆಂಬೆ ದಮಯಂತಿಯ ಮಹೋತ್ಸವವ
ಲೀಲೆಯಲಿ ಮಜ್ಜನವ ಮಾಡಿ ದು
ಕೂಲಮಣಿಭೂಷಣವ ಧರಿಸಿ ಚ
ಡಾಳಿಸುವ ಕಾಂತಿಯಲಿ ಸಿಂಹಾಸನದಿ ಕುಳ್ಳಿರ್ದ

ಕೇಳು ಪಾಂಡುಕುಮಾರ = ಧರ್ಮರಾಯನೇ ಕೇಳು; ನಳ ಭೂಪಾಲನ ಅಭ್ಯುದಯವನ್ನು = ನಳ ಮಹಾರಾಜನ ಏಳಿಗೆಯನ್ನು; ಮಂಗಳದ + ಏಳಿಗೆಯನು + ಏನೆಂಬೆ = ಮಂಗಳಕರವಾದ ಏಳಿಗೆಯನ್ನು ಏನೆಂದು ವರ್ಣಿಸಲಿ; ದಮಯಂತಿಯ ಮಹೋತ್ಸವವ = ದಮಯಂತಿಯ ಮಹಾಸಡಗರ ಸಂಭ್ರಮ ಉತ್ಸವಗಳನ್ನು; ಲೀಲೆಯಲ್ಲಿ = ಆನಂದಕರವಾಗಿ; ಮಜ್ಜನವ ಮಾಡಿ = ಶುಭ ಸ್ನಾನಾದಿಗಳನ್ನು ಮಾಡಿ; ದುಕೂಲ ಮಣಿಭೂಷಣವ = ನವನವೀನವಾದ ಪಟ್ಟೆ ರೇಷ್ಮೆ ಬಟ್ಟೆಗಳನ್ನು; ಧರಿಸಿ = ಉಟ್ಟು; ಚಡಾಳಿಸುವ ಕಾಂತಿಯಲಿ = ತೇಜಃಪೂರ್ಣವಾದ ಕಾಂತಿಯಿಂದ ಶೋಭಿಸುತ್ತ; ಸಿಂಹಾಸನದಿ ಕುಳ್ಳಿರ್ದ = ಸಿಂಹಾಸನಾರೂಢನಾಗಿ ಕುಳಿತಿದ್ದನು.

ನಳಮಹಾರಾಜನು ಮತ್ತೆ ತನ್ನ ರಾಜ್ಯಕೋಶಗಳನ್ನು ಪಡೆದ ನಂತರ ಅವನ ಆಳ್ವಿಕೆಯ ಅಭ್ಯುದಯವನ್ನು ಏನೆಂದು ವರ್ಣಿಸಲಿ? ಪಾಂಡುಕುಮಾರನಾದ ಧರ್ಮರಾಯನೇ ಕೇಳು. ಅವನ ಪ್ರಿಯಸತಿ ದಮಯಂತಿಯ ಮಹಾ ಸಡಗರ ಸಂಭ್ರಮ ಉತ್ಸವಾದಿಗಳನ್ನು ವರ್ಣಿಸಲು ಅಸಾಧ್ಯ. ನಳಮಹಾರಾಜನು ಆನಂದಕರವಾಗಿ ಶುಭಸ್ನಾನಾದಿಗಳನ್ನು ಮಾಡಿ ನವನವೀನವಾದ ಪಟ್ಟೆ ಜರಿವಸ್ತ್ರಗಳನ್ನು ಕಾಂತಿಯುಕ್ತ ತೊಡುಗೆಗಳನ್ನು ಧರಿಸಿ ಮಹಾತೇಜೋವಂತ ಮೂರ್ತಿಯಾಗಿ ಶೋಭಿಸುತ್ತ ಸಿಂಹಾಸನಾರೂಢನಾಗಿದ್ದನು.

2. ಈತನಾರು ಪಿತಾಮಹನೊ ಪುರು
ಹೂತನೋ ಮನ್ಮಥನೋ ಲಕ್ಷ್ಮೀ
ನಾಥನೊ ಚಂದ್ರಮನೊ ಶಂಕರನೋ ಮಹಾದೇವ
ಈತನೇ ನಳನೃಪತಿ ಭೂಪಿ
ಖ್ಯಾತನೆಲ್ಲಿಂದಿಲ್ಲಿ ಬಂದನು
ಪೂತು ಮಝರೇ ಎನುತ ಕೊಂಡಾಡಿತು ನೃಪಸ್ತೋಮ

ಈತನಾರು ಪಿತಾಮಹನೊ = ಇವನು ಯಾರು? ಬ್ರಹ್ಮನೋ; ಪುರುಹೂತನೇನೋ = ಇಂದ್ರನೋ; ಮನ್ಮಥನೋ = ಸುರಸುಂದರ ಮದನನೋ; ಲಕ್ಷ್ಮೀನಾಥನೋ = ಲಕ್ಷ್ಮೀಪ್ರಿಯ ಪತಿಯಾದ ಮಹಾವಿಷ್ಣುವೋ; ಚಂದ್ರಮನೋ =

ಕಾಂತಿಯುಕ್ತನಾದ ಚಂದ್ರಮನೋ; ಶಂಕರನೋ = ಮಂಗಳಕರನಾದ ಶಿವನೋ; ಮಹಾದೇವ = ದೇವ ದೇವನೇ; ಈತನೇ ನಳನೃಪತಿ = ಇವನೇ ನಳಚಕ್ರವರ್ತಿ; ಭೂವಿಖ್ಯಾತನೂ + ಎಲ್ಲಿಂದ ಇಲ್ಲಿ ಬಂದನು = ಭೂಮಂಡಲದಲ್ಲಿ ಅತಿ ಪ್ರಸಿದ್ಧನಾದ ಇವನು ಎಲ್ಲಿಂದ ಬಂದವನು; ಪೂತು ಮಝುರೇ = ಬಾಪು ಬಪ್ಪರೆ; ಎನುತ ಕೊಂಡಾಡಿತು = ಎಂದು ವಿಸ್ಮಯಾನಂದ ಮೆಚ್ಚುಗೆಗಳಿಂದ ಹೊಗಳಿತು; ನೃಪಸ್ತೋಮ = ನೆರೆದಿದ್ದ ರಾಜಾಧಿರಾಜರ ಸಮೂಹ.

ತೇಜೋಮೂರ್ತಿಯಾಗಿ ಸಿಂಹಾಸನಾರೂಢನಾಗಿದ್ದ, ಪತ್ನೀಸಮೇತ ನಳಮಹಾರಾಜನನ್ನು ಕಂಡು ಅಲ್ಲಿ ನೆರೆದಿದ್ದ ರಾಜಾಧಿರಾಜರ ಸಮೂಹವು ಬೆರಗಿನಿಂದಲೂ ಮಹಾನಂದದಿಂದಲೂ ಮೆಚ್ಚಿ ಹೊಗಳಲಾರಂಭಿಸಿತು– “ಯಾರೀತ? ಆ ಸೃಷ್ಟಿಕರ್ತ ಪರಬ್ರಹ್ಮನೋ, ದೇವೇಂದ್ರನೋ, ಸುರಸುಂದರ ರೂಪಿಯಾದ ಮನ್ಮಥನೋ; ಲಕ್ಷ್ಮೀಪ್ರಿಯನಾದ ಆ ಮಹಾವಿಷ್ಣುವೇ ಸಾಕ್ಷಾತ್ಕರಿಸಿರುವನೋ, ಕಾಂತಿಪುಂಜವೇ ಆದ ಚಂದ್ರಮನೇ ಧರೆಗಿಳಿದಿರುವನೋ, ಮಂಗಳಕರ ಮೂರ್ತಿಯಾದ ಶಂಕರನೋ ಮಹಾದೇವಾ! ಈತನೇ ನಳಚಕ್ರವರ್ತಿ. ಭೂವಿಖ್ಯಾತನಾದ ಈತನೆಲ್ಲಿಂದ ಬಂದನು? ಬಾಪು ಬಪ್ಪರೇ! ಎಂದು ಆನಂದಾತಿರೇಕದ ಘೋಷವೆಬ್ಬಿಸಿತು.

3. ಬಂದು ಕಂಡುದು ನಿಖಿಳಪುರಜನ
ವಂದು ಕಾಣಿಕೆಗೊಟ್ಟು ಮುದದಲಿ
ಸಂದಣಿಸೆ ಋತುಪರ್ಣ ಬಂದನು ಮಂತ್ರಿಜನಸಹಿತ
ಸಂದ ಮಣಿಕಾಂಚನ ಸುವಸ್ತುವ
ತಂದು ಸಮುಖದೊಳಿರಿಸಿ ವಿನಯದಿ
ನಿಂದು ಬಿನ್ನೈಸಿದನು ಕರಗಳ ಮುಗಿದು ನಳನೃಪಗೆ

ಬಂದು ಕಂಡುದು = ಅಲ್ಲಿ ಬಂದು ನೋಡಿತು; ನಿಖಿಳಪುರಜನವು + ಅಂದು = ಇಡೀ ನಿಷಧ ಪುರಜನ ಸಮೂಹವೇ ಬಂದು ಸೇರಿತು; ಕಾಣಿಕೆ + ಕೊಟ್ಟು = ಕಾಣಿಕೆಗಳನ್ನು ನೀಡಿ; ಮುದದಲಿ ಸಂದಣಿಸೆ = ಸಂತೋಷದಿಂದ ಗುಂಪುಗೂಡಿ ನಿಂತಿರಲು; ಋತುಪರ್ಣ ಬಂದನು ಮಂತ್ರಿಜನ ಸಹಿತ = ಮಂತ್ರಿ

ಮಾಗಾಧಾದಿಗಳೊಡಗೂಡಿ ಋತುಪರ್ಣನು ಆಗಮಿಸಿದನು; ಸಂದ ಮಣಿಕಾಂಚನ ಸುವಸ್ತುವ = ಉತ್ತಮ ದರ್ಜೆಯ ಮಣಿಖಚಿತ ಚಿನ್ನಾಭರಣವೇ ಮೊದಲಾದ ಶ್ರೇಷ್ಠ ವಸ್ತುಗಳನ್ನು; ತಂದು ಸಮುಖದೊಳು + ಇರಿಸಿ = ತಂದು ರಾಜಸಭೆಯ ಸಮ್ಮುಖದಲ್ಲಿಟ್ಟು; ವಿನಯದಿ ನಿಂದು = ವಿನಯಪೂರ್ವಕವಾಗಿ ನಿಂತು; ಬಿನ್ನೈಸಿದನು ಕರಗಳ ಮುಗಿದು = ಕೈಗಳನ್ನು ಮುಗಿದು ವಿನಂತಿಸಿಕೊಂಡನು; ನಳನೃಪಗೆ = ನಳಮಹಾರಾಜನಲ್ಲಿ.

ಹೀಗೆ ನಳಮಹಾರಾಜನ ಸಿಂಹಾಸನಾರೋಹಣ ಸಂದರ್ಭದಲ್ಲಿ ನಿಷಧ ಪುರದ ಸಮಸ್ತ ಪ್ರಜಾಸಮೂಹವು ಮಹಾಸಂಭ್ರಮದಿಂದ ನೆರೆದು, ರಾಜನಿಗೆ ಕಾಣಿಕೆಗಳನ್ನು ನೀಡಿತು ಮತ್ತು ಗುಂಪುಗುಂಪಾಗಿ ನಿಂತು ಅಂದಿನ ಸುಮು ಹೂರ್ತದಲ್ಲಿ ಭಾಗಿಯಾಗಿರುವಾಗ, ಅಲ್ಲಿಗೆ ಋತುಪರ್ಣನೂ ತನ್ನ ಸಕಲ ಸಚಿವ ಸಂಪುಟದೊಂದಿಗೆ ಬಂದು, ದಿವ್ಯಮಣಿಕಾಂಚನಾದಿ ಉತ್ತಮವಾದ ವಸ್ತು ವೈವಿಧ್ಯವನ್ನು ನಳಸಭೆಯ ಜನಸಮ್ಮುಖದಲ್ಲಿ ತಂದಿತ್ತು ರಾಜನ ಎದುರಿಗೆ ವಿನಯಪೂರ್ವಕವಾಗಿ ಕೈಮುಗಿದು ನಿಂತು ಹೇಳಲಾರಂಭಿಸಿದನು.

4. ಸೋಮಕುಲ ನೃಪಸಾರ್ವಭೌಮ ಸ
ನಾಮ ಮಂಗಳನಿಳಯ ಜಿತಸಂ
ಗ್ರಾಮ ಧೀರ ವಿರೋಧಿಸಾಮಜಸಿಂಹ ದಯಾಶೀಲ
ತಾಮಸನು ಮತಿಗೇಡಿ ಮಾನವ
ಪಾಮರನ ಗುಣದೋಷವೆಣಿಸದೆ
ಪ್ರೇಮದಿಂದೊಲಿದೆನ್ನ ನೀ ಸಲಹೆಂದು ಕೈಮುಗಿದ

ಸೋಮಕುಲ ನೃಪಸಾರ್ವಭೌಮ = ಚಂದ್ರವಂಶದ ರಾಜ ಪರಂಪರೆಯ ಸಾರ್ವಭೌಮನೇ; ಮಂಗಳನಿಳಯ = ಎಲ್ಲ ಶುಭಕರ ಸಂಗತಿಗಳಿಗೂ ಆಶ್ರಯಸ್ಥಾನವಾದವನೇ; ಜಿತಸಂಗ್ರಾಮ ಧೀರ = ಯುದ್ಧಗಳನ್ನು ಜಯಸಿದ ಧೀರನೇ; ವಿರೋಧಿಸಾಮಜಸಿಂಹ = ಶತ್ರುಗಳೆಂಬ ಮದ್ದಾನೆಗಳಿಗೆ ಸಿಂಹ ಸ್ವರೂಪ ದಂತಿರುವವನೇ; ದಯಾಶೀಲ = ದಯಾಗುಣನೇ; ತಾಮಸನು = ಜಡ ಪ್ರಕೃತಿ ಯವನೂ; ಮತಿಗೇಡಿ = ಬುದ್ಧಿಹೀನ ಮನುಷ್ಯನೂ; ಪಾಮರನ = ಅರಿವು

ಗೇಡಿಯೂ ಆದ ನನ್ನ; ಗುಣದೋಷವೆಣಿಸದೆ = ಸ್ವಭಾವಗಳನ್ನಾಗಲೀ ದೋಷಗಳನ್ನಾಗಲೀ ಪ್ರಧಾನವಾಗಿ ಭಾವಿಸದೆ; ಪ್ರೇಮದಿಂದ + ಒಲಿದು + ಎನ್ನ ನೀ = ಪ್ರೀತಿಯಿಂದ ಅನುಗ್ರಹಿಸಿ ನೀನು; ಸಲಹೆಂದು ಕೈಮುಗಿದು = ಕಾಪಾಡು ಎಂದು ಕೈಮುಗಿದು ಕೇಳಿಕೊಂಡನು.

"ಚಂದ್ರವಂಶದ ರಾಜಪರಂಪರೆಯಲ್ಲಿ ಬಂದ ರಾಜಾಧಿರಾಜರಲ್ಲಿ ಸಾರ್ವಭೌಮನಾಗಿ ವಿಖ್ಯಾತನಾದವನೇ, ಎಲ್ಲ ಶುಭಕರ ಸಂಗತಿಗಳಿಗೂ ಆಶ್ರಯಸ್ಥಾನ ಎನಿಸಿದವನೇ, ಮಹಾಯುದ್ಧಗಳನ್ನು ಜಯಿಸಿದ ಧೀರನೇ, ಶತ್ರುಗಳೆಂಬ ಮದ್ದಾನೆಗಳಿಗೆ ಸಿಂಹಸ್ವರೂಪ ವೈರಿಯಾದವನೇ, ದಯಾಗುಣವೇ ಸಹಜ ಸ್ವಭಾವ ಎಂಬಂತಿರುವವನೇ, ನಾನು ಜಡಸ್ವರೂಪನು. ಬುದ್ಧಿಗೇಡಿಯಾಗಿ ಅರಿವುಗೇಡಿ ಯಾಗಿರುವ ಸಾಮಾನ್ಯ ಮನುಷ್ಯ. ಇಂತಹ ನನ್ನ ಸ್ವಭಾವಗಳನ್ನೂ, ದೋಷಗಳನ್ನೂ, ಪ್ರಧಾನವಾಗಿ ಎಣಿಸದೇ ಪ್ರೀತಿಯಿಂದ ಅನುಗ್ರಹಿಸಿ ನನ್ನನ್ನು ಸಲುಹುವುದು" ಎಂದು ಋತುಪರ್ಣನು ಕೈಮುಗಿದು ಕೇಳಿಕೊಂಡನು.

5. ರೂಢಿಯಲಿ ನಾ ನಿಮ್ಮನರಿಯದ
ಮೂಢಮತಿಯವಿವೇಕಿ ತುರಗವ
ಹೂಡಿದಾಗಲೆ ರಥಕೆ ಆದಿಯೊಳರಿದೆನೇ ತಾನು
ಮಾಡಿದಪರಾಧಗಳನೊಂದನು
ನೋಡಲಾಗದು ಚಿತ್ತದಲಿ ಖಯ
ಖೋಡಿಯಿಲ್ಲದೆ ಸಲಹಬೇಕೆಂದೆರಗಿದನು ಪದಕೆ

ರೂಢಿಯಲಿ ನಾ = ಪ್ರಖ್ಯಾತರಾದ; ನಿಮ್ಮನ್ನು + ಅರಿಯದ = ನಿಮ್ಮ ಬಗ್ಗೆ ತಿಳಿಯದ ನಾನು; ಮೂಢಮತಿ + ಅವಿವೇಕಿ = ಅಜ್ಞಾನಿಯೂ ಅವಿವೇಕಿಯೂ ಆದೆ; ತುರಗವ ಹೂಡಿದಾಗಲೇ = ಕುದುರೆಯನ್ನು ರಥಕ್ಕೆ ಹೂಡಿದಾಗಲೇ; ಆದಿಯೊಳು + ಅರಿದೆನೇ = ನಿಮ್ಮನ್ನು ಗುರುತಿಸಿದೆನೇ; ತಾನು = ನಾನು; ಮಾಡಿದ + ಅಪರಾಧಗಳನು + ಒಂದನು = ಮಾಡಿರುವ ಅಪರಾಧಗಳನ್ನು ಒಂದನ್ನೂ; ನೋಡಲಾಗದು = ಗಮನಿಸಬಾರದು; ಚಿತ್ತದಲಿ = ಮನಸ್ಸಿನಲಿ; ಖಯಖೋಡಿ +

ಇಲ್ಲದೆ = ಯಾವುದೇ ರೀತಿಯ ದಾಕ್ಷಿಣ್ಯವನ್ನೂ ಇಟ್ಟುಕೊಳ್ಳದೆ; ಸಲಹಬೇಕು + ಎಂದು ನಳನ ಪಾದಗಳಿಗೆ ಬಿದ್ದು ನಮಸ್ಕರಿಸಿದನು.

"ನೀವು ಪ್ರಖ್ಯಾತ ಭೂಮಂಡಲಾಧೀಶರೆಂಬುದನ್ನು ಗಮನಿಸಿದೆ, ಅವಿವೇಕಿಯೂ, ಅಜ್ಞಾನಿಯೂ ಆದೆ. ನೀವು ರಥಕ್ಕೆ ಕುದುರೆಯನ್ನು ಹೂಡಿದ ರೀತಿಯಲ್ಲೇ, ನಿಮ್ಮನ್ನು ಗುರುತಿಸದೇ ಹೋದೆ. ನಾನು ಮಾಡಿದ ಈ ಎಲ್ಲ ಅಪರಾಧಗಳನ್ನೊಂದನ್ನೂ ಪ್ರಧಾನವಾಗಿ ಭಾವಿಸದೆ, ಮನಸ್ಸಿನಲ್ಲಿ ನನ್ನ ಬಗ್ಗೆ ಯಾವುದೇ ರೀತಿಯ ದಾಕ್ಷಿಣ್ಯವನ್ನೂ ಇಟ್ಟುಕೊಳ್ಳದೆ ನನ್ನನ್ನು ಕಾಪಾಡಿ" ಎನ್ನುತ್ತಾ ಋತುಪರ್ಣನು ನಳಚಕ್ರವರ್ತಿಯ ಪಾದಗಳಿಗೆ ಬಿದ್ದು ನಮಸ್ಕರಿಸಿದನು.

6. ಈ ಪರಿಯೊಳೆನಲಾ ನೃಪನ ಸಂ
ತಾಪವನು ಪರಿಹರಿಸಿ ನಳನೃಪ
ತಾ ಪಿರಿದು ಮಣಿಭೂಷಣಂಗಳನಿತ್ತು ನಸುನಗುತ
ಕೋಪವಿನಿಸಿಲ್ಲೆಂದಯೋಧ್ಯಾ
ಭೂಪನನು ಮನ್ನಿಸುವ ಸಮಯದಿ
ತಾಪಸರನೊಡಗೊಂಡು ಬಂದನು ಒಲಿದು ಮೈತ್ರೇಯ

ಈ ಪರಿಯೊಳು + ಎನಲು + ಆ = ಋತುಪರ್ಣನು ಹೀಗೆ ನುಡಿಯಲು; ನೃಪನ ಸಂತಾಪವನು = ಆ ನೃಪನ ಮನಸ್ಸಿನ ಬೇಗುದಿಯನ್ನು; ಪರಿಹರಿಸಿ= ಹೋಗಲಾಡಿಸಿ; ನಳನೃಪ ತಾ ಪಿರಿದು = ನಳನೃಪನು ತಾನು ಅತಿಶಯವಾದ; ಮಣಿಭೂಷಣಂಗಳನು + ಇತ್ತು = ಅವನಿಗೆ ಶ್ರೇಷ್ಠವಾದ ಮಣಿಖಚಿತ ರತ್ನಾಭರಣಗಳನ್ನು ನೀಡಿ; ನಸುನಗುತ = ಮುಗುಳ್ನಗೆ ಬೀರುತ್ತ; ಕೋಪವೆನಗಿಲ್ಲೆಂದು + ಅಯೋಧ್ಯಾ ಭೂಪನನು = ನನಗೇನೂ ಕೋಪವಿಲ್ಲ ಎಂದು ಹೇಳಿ ಅಯೋಧ್ಯಾಧಿಪತಿಯನ್ನು ಋತುಪರ್ಣನನ್ನು; ಮನ್ನಿಸುವ = ಗೌರವಿಸುತ್ತಿದ್ದ; ಸಮಯದಿ = ಸಂದರ್ಭದಲ್ಲಿ; ತಾಪಸರನು + ಒಡಗೊಂಡು = ಮುನಿವೃಂದದೊಂದಿಗೆ; ಬಂದನಾ ಒಲಿದು ಮೈತ್ರೇಯ = ಮೈತ್ರೇಯನೆಂಬ ಮುನಿ ಮುಖ್ಯನು ಆ ರಾಜಸಭೆಗೆ ಬಂದನು.

ಋತುಪರ್ಣನು ಹೀಗೆ ತನ್ನ ಮನದಿಂಗಿತವನ್ನು ಬಹಿರಂಗವಾಗಿ ಹೊರಗೆಡವಲು ಅದನ್ನು ಕೇಳಿದ ನಳನೃಪತಿಯು ಮುಗುಳುನಗುತ್ತ, ಅವನ ಮನದಳಲನ್ನು ಹೋಗಲಾಡಿಸಿ, ಅವನಿಗೆ ಅತಿಶಯವಾದ ರತ್ನಾಭರಣಗಳನ್ನಿತ್ತು ಗೌರವಿಸಿ ನನಗೆ ನಿನ್ನಲ್ಲಿ ಯಾವ ರೀತಿಯ ಕೋಪವೂ ಇಲ್ಲವೆಂದು ಸ್ಪಷ್ಟಪಡಿಸುತ್ತಿದ್ದ ಆ ಸಂದರ್ಭದಲ್ಲಿ, ಮೈತ್ರೇಯನೆಂಬ ಬ್ರಹ್ಮರ್ಷಿಯು ತನ್ನ ಮುನಿ ವೃಂದದೊಂದಿಗೆ ಇಚ್ಛಾ ಪೂರ್ವಕವಾಗಿ ಆ ರಾಜಸಭೆಗೆ ಬಂದನು.

7. ಬಂದ ಮುನಿಗವನೀಶ ಚರಣ
ದ್ವಂದ್ವದಲಿ ಚಾಚಿದನು ಮಕುಟವ
ನಂದು ಪಿಡಿದೆತ್ತಿದನು ನಸುನಗುತಲ್ಲಿ ಕುಳ್ಳಿರ್ದ
ಎಂದನೆಲೆ ನಳನೃಪತಿ ನಿನಗೆ ಮು
ಕುಂದನೊಲುಮೆಯು ಆವ ಕಾಲದಿ
ಸಂದಿರಲುಯಿನ್ನಾವುದರಿದಿಲ್ಲೆಂದನಾ ಮುನಿಪ

ಬಂದ ಮುನಿಗೆ + ಅವನೀಶ = ತನ್ನ ಅರಮನೆಗೆ ಆಗಮಿಸಿದ ಮುನಿಯನ್ನು ಕಂಡು ವಸುಧಾಧಿಪತಿಯಾದ ನಳನು; ಚರಣದ್ವಂದ್ವದಲಿ = ಅವರ ಪಾದಗಳಲ್ಲಿ; ಚಾಚಿದನು ಮಕುಟವನಂದು = ಬಿದ್ದು ಸಾಷ್ಟಾಂಗ ನಮಸ್ಕಾರವನ್ನು ಮಾಡಿದನು; ಅವನನ್ನು + ಪಿಡಿದು + ಎತ್ತಿದನು = ಅವನನ್ನು ಮುನಿಯು ಕೈ ಹಿಡಿದು ಮೇಲಕ್ಕೆಬ್ಬಿಸಿದನು; ನಸುನಗುತ + ಅಲ್ಲಿ ಕುಳ್ಳಿರ್ದ = ಸಂತೋಷದಿಂದ ಮುಗುಳ್ನಗೆ ನಗುತ್ತ ಅಲ್ಲಿ ಕುಳಿತ ಮುನಿಯು; ಎಂದನು + ಎಲೈ ನೃಪತಿ = ಹೀಗೆ ಹೇಳಿದನು, ಎಲೈ ರಾಜನೇ; ನಿನಗೆ ಮುಕುಂದನ + ಒಲುಮೆಯು = ನಿನಗೆ ಶ್ರೀ ಮಹಾವಿಷ್ಣುವಿನ ಕೃಪಾಕಟಾಕ್ಷವು; ಆವಕಾಲದ = ಯಾವಾಗಲಿಂದಲೂ; ಸಂದಿರಲು + ಇನ್ನಾವುದು + ಅರಿದು + ಇಲ್ಲ + ಎಂದನು + ಆ + ಮುನಿಪ = ಇದ್ದೇ ಇರುವುದರಿಂದ ನಿನ್ನಿಂದ ಮಾಡಲಾಗದುದು ಮತ್ತೇನೂ ಉಳಿದಿಲ್ಲ ಎಂದನು.

ತನ್ನ ಅರಮನೆಗೆ ಬಂದ ಮುನಿಯನ್ನು ಕಂಡ ವಸುಧಾಧಿಪತಿಯಾದ ನಳನು ಎದ್ದು ಬಂದು ಮುನಿಯ ಎರಡೂ ಕಾಲಿಗೆ ದೀರ್ಘದಂಡ ನಮಸ್ಕಾರ ಮಾಡಿದನು. ಅವನನ್ನು ತನ್ನ ಕೈಗಳಿಂದ ಮೇಲೆತ್ತಿ, ಅಲ್ಲೇ ಕುಳಿತುಕೊಂಡು

ನಸುನಗುತ್ತ, ಎಲೈ ರಾಜನೇ, ಆ ಮಹಾವಿಷ್ಣುವಿನ ಕೃಪಾಕಟಾಕ್ಷವು ನಿನ್ನ ಮೇಲೆ ಎಂದಿನಿಂದಲೂ ಇದ್ದೇ ಇದೆ. ನಿನ್ನಿಂದಾಗದುದು ಯಾವುದು ಇಲ್ಲ ಎಂದನು.

8. ಕಲಿಪುರುಷನಿಂದಾದುದುಪಹತಿ
ಲಲನೆ ಪುತ್ರರನಗಲಿ ಕಷ್ಟವ
ಬಳಸಿದೆಯಲಾ ನೊಂದು ಸತ್ಯವ ಬಿಡದೆ ಸಂಚರಿಸಿ
ಸುಲಭನಾದೆ ಕುಲಾಂಗನೆಯ ವ್ರತ
ಫಲದ ಪುಣ್ಯೋದಯದಿ ನಿಜಸಿರಿ
ಫಲಿಸಿತಿನ್ನೀ ಲೋಕದಲಿ ನಿನಗಾರು ಸರಿಯೆಂದ

ಕಲಿಪುರುಷನಿಂದ + ಆದುದು + ಉಪಹತಿ = ಕಲಿಪುರುಷನಿಂದ ಅಪಾರವಾದ ತೊಂದರೆಗಳಾದುವು; ಲಲನೆ = ಹೆಂಡತಿ; ಪುತ್ರರನು + ಅಗಲಿ = ಮಕ್ಕಳನ್ನು ಅಗಲಿ; ಕಷ್ಟವ = ತೊಂದರೆಗಳನ್ನು; ಬಳಸಿದೆಯಲ್ಲಾ = ಅನುಭವಿಸಿದೆ ಯಲ್ಲಾ ಅರಸನೇ; ನೊಂದು = ಎಷ್ಟೇ ನೊಂದರೂ; ಸತ್ಯವ ಬಿಡದೆ = ಸತ್ಯದ ದಾರಿಯನ್ನೇ ಬಿಡದೆ; ಸಂಚರಿಸಿದೆ = ಎಲ್ಲೆಲ್ಲೂ ಅಲೆದೆ; ಸುಲಭನಾದೆ = ಹಾಗಾಗಿಯೇ ನೀನು ಎಲ್ಲರಿಗೂ ಮತ್ತೆ ದೊರೆಯುವಂತಾದೆ; ಕುಲಾಂಗನೆಯ = ನಿನ್ನ ವಂಶದ ಗೌರವವನ್ನು ಸದಾಚರಣೆಗಳನ್ನು ಬಿಡದೆ ವ್ಯವಹರಿಸಿದ ನಿನ್ನ ಹೆಂಡತಿಯ; ವ್ರತಫಲದ = ವ್ರತಾಚರಣೆಗಳ; ಪುಣ್ಯೋದಯದಿ = ಪುಣ್ಯಫಲ ವೆಂಬಂತೆ; ನಿಜಸಿರಿ = ನಿನಗೆ ದೊರೆಯಬೇಕಾಗಿದ್ದ ಸಕಲಭೋಗ್ಯ ಭಾಗ್ಯಗಳೂ; ಫಲಿಸಿತು = ಮರಳಿ ಫಲ ನೀಡಿದವು; ಇನ್ನು ಈ ಲೋಕದಲ್ಲಿ = ಹೀಗಾಗಿ ಇನ್ನು ಈ ಜಗತ್ತಿನಲ್ಲಿ; ನಿನಗಾರು ಸರಿಯೆಂದು = ನಿನಗೆ ಸರಿಸಾಟಿಯಾಗಿರುವವರು ಯಾರಿದ್ದಾರೆ ಎಂದನು.

ಮುನಿಯು ತನ್ನ ಮಾತುಗಳನ್ನು ಮುಂದುವರಿಸುತ್ತಾ, ಅರಸನೇ, ಕಲಿಪುರುಷನ ಕಡೆಯಿಂದ ನೀನು ಅಪಾರವಾದ ಕಷ್ಟನಷ್ಟಗಳಿಗೆ, ತೊಂದರೆಗಳಿಗೆ ಒಳಗಾದೆ. ಹೆಂಡತಿ ಮಕ್ಕಳನ್ನು ಅಗಲಿ ವೃಥಾ ಕಷ್ಟಪಟ್ಟೆ. ಆದರೆ ಎಷ್ಟೇ ನೊಂದುಬೆಂದರೂ ಸತ್ಯದ ದಾರಿಯನ್ನು ಬಿಡದೆ ಎಲ್ಲೆಲ್ಲೋ ಅಲೆದೆ. ಆದ್ದರಿಂದಲೇ ನೀನು ಮತ್ತೆ ಎಲ್ಲರಿಗೂ ದೊರೆಯುವಂತಾದೆ. ನಿನ್ನ ವಂಶದ ಗೌರವವನ್ನೂ

ಸದಾಚರಣೆಗಳಿಗೆ ಕಿಂಚಿತ್ತೂ ಕುಂದು ಬರದಂತೆ ವ್ಯವಹರಿಸಿದ ನಿನ್ನ ಹೆಂಡತಿಯ ವ್ರತಾಚರಣೆಗಳ ಪುಣ್ಯವು ಫಲಿಸಿತೆಂಬಂತೆ ನಿನಗೆ ದೊರೆಯಬೇಕಾಗಿದ್ದ ಸಕಲ ಭೋಗಭಾಗ್ಯಗಳೂ ಮರಳಿ ಫಲನೀಡಿದುವು. ಹೀಗಿರುವಾಗ ಈ ಜಗತ್ತಿನಲ್ಲಿನ್ನು ನಿನಗೆ ಸರಿಸಾಟಿಯಾಗಿರುವಂಥವರು ಯಾರು ಇದ್ದಾರೆ ಹೇಳು'' ಎಂದನು.

9. ಹರಿಯ ನೆಲೆಗೆಡಿಸಿದನು ಪರಮೇ
ಶ್ವರನ ಭಿಕ್ಷವನೆತ್ತಿಸಿದ ಸರ
ಸಿರುಹಭವ ತಾ ಶಿರವ ಪೋಗಾಡಿದನು ಪೂರ್ವದಲಿ
ಕರುಣಹೀನನು ನಿನ್ನ ಸೋಂಕಲು
ತೆರನ ಕಾಣದೆ ಹಲವು ದಿನ ಕಾ
ತರಿಸಿ ಛಲದಲಿ ತೊಡಚಿಬಿಟ್ಟನು ಮನದ ಭೀತಿಯಲಿ

ಹಿರಿಯ ನೆಲೆಗೆಡಿಸಿದನು = ಕಲಿಪುರುಷನ ಆಟಾಟೋಪ ಇಂದಿನದೇನಲ್ಲ. ಈ ಹಿಂದೆ ವಿಷ್ಣುವಿಗೇ ನೆಲೆಯಿಲ್ಲದಂತೆ ಗೊತ್ತುಗುರಿಯಿಲ್ಲದಂತೆ ತಪ್ಪಿಸಿದ್ದನು; ಪರಮೇಶ್ವರನ = ಈಶ್ವರನನ್ನೇ; ಭಿಕ್ಷವನೆತ್ತಿಸಿದ = ಭಿಕ್ಷಾಟನೆ ಮಾಡುವಂತಹ ಸ್ಥಿತಿಗೆ ತಂದನು; ಸರಸಿರುಹಭವ ತಾ = ಬ್ರಹ್ಮನ; ಶಿರವ ಪೋಗಾಡಿದನು ಪೂರ್ವದಲಿ = ಈ ಹಿಂದೆ ಶಿರವೇ ಹಾರಿಹೋಗುವಂತೆ ಮಾಡಿದ; ಕರುಣಹೀನನು = ಅವನಿಗೆ ದಯಾ ದಾಕ್ಷಿಣ್ಯಗಳೆಂಬುವೇ ಇಲ್ಲ; ನಿನ್ನ ಸೋಕಲು = ನಿನ್ನನ್ನೂ ಮುಟ್ಟಿ ಹಾಳು ಮಾಡಲೆಂದು ಪ್ರಯತ್ನಿಸಿದ; ತೆರನ ಕಾಣದೇ = ಆದರೆ ಅದಕ್ಕೆ ಆಸ್ಪದ ದೊರೆಯದೆ; ಹಲವು ದಿನ ಕಾತರಿಸಿ = ಬಹಳ ಕಾಲದಿಂದ ಕಾಯುತ್ತಿದ್ದ; ಛಲದಲಿ = ಅಂತೂ ಹಿಡಿದ ಪಟ್ಟು ಬಿಡದೆ; ತೊಡಚಿಬಿಟ್ಟನು = ತೊಡಗಿಬಿಟ್ಟನು; ಮನದ ಭೀತಿಯಲಿ = ಸೋಲುವೆನೆಂಬ ಹೆದರಿಕೆಯನ್ನಿಟ್ಟುಕೊಂಡೇ.

“ಅರಸನೇ, ಈ ಕಲಿಪುರುಷನ ಆಟಾಟೋಪ ಇಂದಿನದೇನಲ್ಲ. ಹಿಂದೆಯೇ ಇವನು ವಿಷ್ಣುವಿಗೆ ನೆಲೆಯಿಲ್ಲದಂತೆ, ಗೊತ್ತುಗುರಿಯಿಲ್ಲದಂತೆ ಮಾಡಿದ್ದನು; ಹಿಂದೆ ಬ್ರಹ್ಮನ ಶಿರವೇ ಹಾರಿಹೋಗುವಂತೆ ಮಾಡಿದ್ದನು; ಅವನಿಗೆ ದಯೆ, ಕರುಣೆಗಳೆಂದರೆ ಏನೆಂಬುದೇ ತಿಳಿಯದು. ನಿನ್ನನ್ನೂ ಮುಟ್ಟಿ ಹಾಳುಮಾಡಲೆಂದು

ಬಹಳ ಕಾಲದಿಂದ ಕಾಯುತ್ತಲೇ ಇದ್ದ. ಆದರೆ ಅದಕ್ಕೆ ಆಸ್ಪದವೇ ದೊರೆತಿರಲಿಲ್ಲ. ಅಂತೂ ಛಲದಿಂದ ಹಿಡಿದ ಪಟ್ಟು ಬಿಡದೆ, ತನ್ನ ಕಾರ್ಯಸಾಧನೆ ಆಗುತ್ತದೋ ಇಲ್ಲವೋ ಎಂಬ ಭೀತಿಯಿದ್ದೂ ನಿನಗೆ ಗಂಟುಬಿದ್ದ" ಎಂದು ಮುನಿಯು ನಳಮಹಾರಾಜನಿಗೆ ಸಮಾಧಾನವನ್ನು ಹೇಳಿದನು.

10. ಎಲ್ಲ ನೃಪರಂತಲ್ಲ ಲಕ್ಷ್ಮೀ
ವಲ್ಲಭನ ಪ್ರತಿಬಿಂಬ ನಿನ್ನಲಿ
ನಿಲ್ಲಬಲ್ಲನೆ ಕಲಿಪುರುಷನತಿ ಬೇಗ ತೆರಳಿದನು
ಸಲ್ಲಲಿತ ಸಾಮ್ರಾಜ್ಯಪದವಿಂ
ದೆಲ್ಲ ನಿನಗಹುದೆಂದು ಧರಣೀ
ವಲ್ಲಭನ ಸತ್ಕರಿಸಿ ಕೊಂಡಾಡಿದನು ಮೈತ್ರೇಯ

ಎಲ್ಲ ನೃಪರಂತಲ್ಲ = ನೀನು ಇತರ ರಾಜರಂತಲ್ಲ; ಲಕ್ಷ್ಮೀವಲ್ಲಭನ = ಸಾಕ್ಷಾತ್ ಲಕ್ಷ್ಮೀನಾರಾಯಣನ; ಪ್ರತಿಬಿಂಬ = ಪ್ರತಿರೂಪವಾಗಿದ್ದೀಯೆ; ನಿನ್ನಲಿ ನಿಲ್ಲಬಲ್ಲನೆ = ನಿನ್ನಲ್ಲಿ ನೆಲೆಸಲು ಸಾಧ್ಯವೇ; ಕಲಿಪುರುಷನು + ಅತಿಬೇಗ ಮರಳಿದನು = ಕಲಿಪುರುಷನಿಗೆ? ಆದ್ದರಿಂದಲೇ ಅತ್ಯಂತ ತ್ವರೆಯಲ್ಲಿ ನಿನ್ನನ್ನು ಬಿಟ್ಟು ತೊಲಗಿ ಹೋದನು. ಸಲ್ಲಲಿತ = ಮನೋಹರನೆ; ಸಾಮ್ರಾಜ್ಯಪದವಿಯಿಂದ + ಎಲ್ಲ = ಸಿಂಹಾಸನಾರೂಢನಾದ ನಿನಗೆ ಎಲ್ಲ ಸಾಮ್ರಾಜ್ಯಪದವಿಗಳೂ; ನಿನಗಹುದು + ಎಂದು = ನಿನಗೆ ಕೈವಶವಾಗಲಿವೆ ಎಂದು; ಧರಣೀವಲ್ಲಭನ = ಭೂಪತಿಯಾದ ನಳನನ್ನು; ಸತ್ಕರಿಸಿ = ಗುಣಗೌರವದಿಂದ ಆಶೀರ್ವದಿಸಿ; ಕೊಂಡಾಡಿದನು ಮೈತ್ರೇಯ = ಮೈತ್ರೇಯನು ನಳಮಹಾರಾಜನನ್ನು ಹೊಗಳಿದನು.

ಮೈತ್ರೇಯನು ಮುಂದುವರಿದು, "ಮನೋಹರನೆ, ನೀನು ಎಲ್ಲರಂತೆ ಸಾಮಾನ್ಯ ರಾಜನಲ್ಲ. ಸಾಕ್ಷಾತ್ ಲಕ್ಷ್ಮೀನಾರಾಯಣನ ಪ್ರತಿರೂಪವಾಗಿದ್ದೀಯೆ. ನಿನ್ನಂಥವನಲ್ಲಿ ಕೇಡು ಬಗೆಯಲಾಗುವುದೇ? ಆದ್ದರಿಂದಲೇ ಆ ಕೆಡುಕು ಬುದ್ಧಿಯ ಕಲಿಪುರುಷನು ಅತಿ ವೇಗವಾಗಿ ನಿನ್ನನ್ನು ಬಿಟ್ಟು ತೊಲಗಿಹೋದನು. ಈಗ ಸಾಮ್ರಾಜ್ಯ ಪದವಿಯ ಸಿಂಹಾಸನಾರೂಢನಾಗಿರುವ ನಿನಗೆ ಎಲ್ಲ ಭೋಗಭಾಗ್ಯಗಳೂ ಕೈವಶವಾಗಲಿವೆ" ಎಂದು ನಳನನ್ನು ಗುಣಗೌರವಪೂರ್ವಕ ಹೊಗಳಿ ಸತ್ಕರಿಸಿದನು.

11. ಎಂದು ಹರಸಿದನವನಿಪಗೆ ಮುದ
ದಿಂದ ಮಂತ್ರಾಕ್ಷತೆಗಳಲಿ ಮುನಿ
ವೃಂದ ಸಂತೋಷಿಸಿತು ನೃಪ ಸಿಂಹಾಸನದೊಳಿರಲು
ಇಂದುವದನೆಯರಾರತಿಯ ನಲ
ವಿಂದಲೆತ್ತಿದರಲ್ಲಿ ಸತಿಯರು
ಸಂದಣಿಸಿ ಪಾಡಿದರು ಶೋಭಾನವನು ಮನವೊಲಿದು

ಎಂದು ಹರಸಿದನು + ಅವನಿಪಗೆ = ಹೀಗೆ ಮುಂತಾಗಿ ಅವನಿಪತಿಯಾದ ನಳನಿಗೆ ಹರಸಿದನು; ಮುದದಿಂದ = ಸಂತೋಷದಿಂದ; ಮಂತ್ರಾಕ್ಷತೆಗಳಲಿ = ಮಂತ್ರಪೂರ್ವಕವಾಗಿ ಅಕ್ಷತೆಗಳನ್ನು ಅರಸನ ಮೇಲೆ ತಳಿದು; ಮುನಿವೃಂದ ಸಂತೋಷಿಸಿತು = ಮೈತ್ರೇಯನೊಡಗೂಡಿ ಮುನಿಸಮೂಹವು ಸಂತೋಷಪಟ್ಟಿತು; ನೃಪ = ದೊರೆಯು; ಸಿಂಹಾಸನದೊಳಿರಲು = ಸಿಂಹಾಸನಾರೂಢನಾಗಿರಲು; ಇಂದುವದನೆಯರು + ಆರತಿಯ = ಅರಮನೆಯ ಹಿರಿಯ ಸುಮಂಗಲಿಯರು ಆರತಿ ಯನ್ನೆತ್ತಿ; ನಲವಿಂದಲಿ + ಎತ್ತಿದರು + ಅಲ್ಲಿ = ಸಡಗರದಿಂದ ಎತ್ತಿದರು ಸತಿಯರು; ಸಂದಣಿಸಿ = ಹಾಗೆಯೇ ಗುಂಪುಗೂಡಿ; ಪಾಡಿದರು ಶೋಭಾನವನು = ಮಂಗಳ ಗೀತಗಳನ್ನು ಹಾಡಿದರು; ಮನವೊಲಿದು = ಹೃದಯಾಂತರಾಳದ ಪ್ರೀತಿಯಿಂದ.

ಅವನಿಪತಿಯಾದ ನಳಮಹಾರಾಜನನ್ನು ಮೈತ್ರೇಯನು ಮನಃಪೂರ್ವಕ ವಾಗಿ ಹರಸುತ್ತಿದ್ದಂತೆ, ಜೊತೆಯಲ್ಲಿದ್ದ ಸಮಸ್ತ ಮುನಿವೃಂದವೂ ಮಂತ್ರಪೂರ್ವಕ ವಾಗಿ ಅರಸನಿಗೆ ಮಂತ್ರಾಕ್ಷತೆಗಳನ್ನು ತಳಿದು ಸಂತೋಷದಿಂದ ಹಿಗ್ಗಿತು. ನಳನು ಸಿಂಹಾಸನಸ್ಥನಾದ ಸಂಭ್ರಮದ ವೇಳೆ, ಅರಮನೆಯ ಹಿರಿಯ ಸುಮಂಗಲಿಯರು ಸಡಗರದಿಂದ ಆರತಿಯನ್ನೆತ್ತಲು, ನೆರೆದಿದ್ದ ಸ್ತ್ರೀಸಂಕುಲವು ಸಂಭ್ರಮದಿಂದ ಗುಂಪುಗೂಡಿ ಹೃತ್ಪೂರ್ವಕವಾಗಿ ಪ್ರೀತಿಯಿಂದ ಶೋಭಾನದ ಮಂಗಳ ಗೀತೆಗಳನ್ನು ಹಾಡಿದರು.

12. ಊದಿದುವು ಕಹಳೆಗಳು ಶಂಖವು
ನಾದಿಸಿತು ಭೇರೀ ಮೃದಂಗ ವಿ

ನೋದದಿಂ ರಂಜಿಸಿತು ನಾನಾ ವಾದ್ಯರಭಸದಲಿ
ಮೇದಿನೀಶ್ವರರಾಗ ಮುಯ್ಯಗ್ಳ
ನೋದಿಸಿದರವನಿಪಗೆ ಸತಿಗಿ
ನ್ನೈದೆತನ ಮಿಗಲೆಂದು ಹರಸಿತು ಮುನಿವಧೂನಿಕರ

ಊದಿದುವು ಕಹಳೆಗಳು = ಸಂಭ್ರಮ ಸೂಚಕವಾಗಿ ಕಹಳೆಗಳು ಸದ್ದುಗೈದುವು; ಶಂಖವು ನಾದಿಸಿತು = ಮಂಗಳ ಸೂಚಕವಾಗಿ ಶಂಖವು ನಾದ ಮಾಡಿತು; ಭೇರೀಮೃದಂಗ = ಭೇರಿ ಮೃದಂಗ ಮುಂತಾದ ವಾದ್ಯಗಳು; ವಿನೋದದಿಂ ರಂಜಿಸಿತು = ಎಲ್ಲರ ಮನಸ್ಸಂತೋಷಪಡಿಸಿದುವು; ನಾನಾ ವಾದ್ಯರಭಸದಲಿ = ಅದೇ ರೀತಿ ವಿವಿಧ ವಾದ್ಯಗಳ ಮಹಾಘೋಷದಲ್ಲಿ ಜನರನ್ನು ರಂಜಿಸಿದುವು ಮೇದಿನಿ + ಈಶ್ವರರು + ಆಗ = ರಾಜಾಧಿರಾಜರು ಆಗ; ಮುಯ್ಯಗ್ಳನು + ಓದಿಸಿದರು + ಅವನಿ + ಪಗೆ = ನಳಮಹಾರಾಜನಿಗೆ ಕಾಣಿಕೆಗಳನ್ನು ನೀಡಿದರು; ಸತಿಗೆ + ಇನ್ನು + ಐದೆತನ = ನಳನ ಅರಸಿಯಾದ ದಮಯಂತಿಗೆ ಇನ್ನೂ ಬಹುಕಾಲ ಮುತ್ತೈದೆತನವು; ಮಿಗಲೆಂದು = ವೃದ್ಧಿಸಲೆಂದು; ಹರಸಿತು = ಆಶೀರ್ವದಿಸಿತು; ಮುನಿವಧೂನಿಕರ = ಮುನಿಪತ್ನಿಯರ ಸಮೂಹ.

ನಿಷಧರಾಜನ ಸಿಂಹಾಸನಾರೋಹಣದ ಮಂಗಳ ಸಮಯ ಸೂಚಕವಾಗಿ ಕಹಳೆಗಳು ಊದಿದುವು. ಶಂಖದ ಶುಭಸೂಚಕ ನಾದ ಪಸರಿಸಿತು; ಭೇರಿ, ಮೃದಂಗ ಮುಂತಾದ ವಾದ್ಯಗಳ ನುಡಿತಗಳು ಎಲ್ಲೆದೆ ವಿನೋದದ ವಾತಾ ವರಣವನ್ನು ಹರಡಿ, ಸಭಾಸದರನು ರಂಜಿಸಿದುವು. ಇವಲ್ಲದೆ ಇನ್ನಿತರ ವಿವಿಧ ವಾದ್ಯಘೋಷಗಳು ಆ ವಾತಾವರಣದ ರಂಜನೆಯನ್ನು ಇಮ್ಮಡಿಗೊಳಿಸಿದುವು. ಆ ಸಂತೋಷಕರ ಮೂಹೂ ರ್ತಕ್ಕೆ ಆಗಮಿಸಿದ್ದ ನಾನಾ ದೇಶಗಳ ಭೂಮಂಡಲಾಧೀಶ್ವರರು ತಮ್ಮ ಸಂತೋಷಾ ಭಿಮಾನ ಸಂಕೇತವಾಗಿ ನಳಮಹಾರಾಜನಿಗೆ ಕಾಣಿಕೆಗಳನ್ನು ನೀಡಿದರು. ಅರಸಿ, ದಮಯಂತಿಗೆ ಬಹುಕಾಲ ಮುತ್ತೈದೆತನವು ವೃದ್ಧಿಸಲಿ ಎಂದು ಮುನಿಪತ್ನಿಯರ ಸಮೂಹವು ಆಶೀರ್ವದಿಸಿತು.

13. ಅರಸ ಕೇಳು ವಿದರ್ಭಪತಿ ಮುನಿ
ವರರನುಪಚರಿಸಿದನು ಧರಣೀ
ಸುರರಿಗಿತ್ತನು ಗೋಹಿರಣ್ಯ ಸುವಸ್ತುದಾನವನು
ಕರೆಸಿ ಕೊಟ್ಟನು ನೃಪತಿಗಖಿಲಾ
ಭರಣಗಳ ಕರಿ ತುರಗ ರಥವನು
ಪುರಜನರ ಸಂತೈಸಿ ಕಳುಹಿದನಖಿಳಬಾಂಧವರ

ಅರಸ ಕೇಳು = ಧರ್ಮರಾಯನೇ ಕೇಳು; ವಿದರ್ಭಪತಿ = ವಿದರ್ಭ ರಾಜನಾದ ಭೀಮನು; ಮುನಿವರರನು + ಉಪಚರಿಸಿದನು = ಅಲ್ಲಿ ಉಪಸ್ಥಿತರಿದ್ದ ನಾನಾ ಮುನಿಶ್ರೇಷ್ಠರನ್ನು ಗೌರವಪೂರ್ವಕವಾಗಿ ಸತ್ಕರಿಸಿದನು; ಧರಣೀಸುರರಿಗೆ + ಇತ್ತನು = ಧರಣಿಯ ದೇವತೆಗಳೆನಿಸಿದ್ದ ಬ್ರಾಹ್ಮಣರಿಗೆ ದಾನಮಾಡಿದನು; ಗೋಹಿರಣ್ಯ ಸುವಸ್ತುದಾನವನು = ಗೋವು, ಬಂಗಾರ ಮತ್ತಿತರ ಉತ್ತಮೋತ್ತಮ ವಸ್ತುಗಳನ್ನು; ಕರೆಸಿಕೊಟ್ಟನು = ಗೌರವಪೂರ್ವಕವಾಗಿ ಆಹ್ವಾನಿಸಿ ನೀಡಿದನು; ನೃಪತಿಗೆ + ಅಖಿಲಾಭರಣಗಳ = ನಳಮಹಾರಾಜನಿಗೆ ವಿಧವಿಧವಾದ ಆಭರಣಾದಿ ಗಳನ್ನು; ಕರಿ, ತುರಗ, ರಥವನು = ಆನೆ, ಕುದುರೆ, ರಥ ಇತ್ಯಾದಿ ಚದುರಂಗ ಸಮಸ್ತವನ್ನೂ; ಪುರಜನರ = ಊರ ನಾಗರಿಕರನ್ನು; ಸಂತೈಸಿ = ಉಚಿತ ಮಾತುಕತೆಗಳಿಂದ ಲಕ್ಷಿಸಿ; ಕಳುಹಿದನು + ಅಖಿಳ ಬಾಂಧವರ = ಆಗಮಿಸಿದ್ದ ಬಂಧು ಬಾಂಧವರನ್ನೂ ಹೀಗೆಯೇ ಔಚಿತ್ಯ ಪೂರ್ವಕವಾದ ಸನ್ಮಾನ ಸುವಸ್ತುಗಳಿಂದ ಗೌರವಿಸಿ ಕಳುಹಿಸಿಕೊಟ್ಟನು.

ಅರಸ ಧರ್ಮರಾಯನೇ ಕೇಳು, ವಿದರ್ಭರಾಜನಾದ ಭೀಮನಿಗೆ ತನ್ನ ಮಗಳು ಅಳಿಯ ಒಂದಾದ ಕ್ಷಣ ಮತ್ತು ನಳನು ಸಿಂಹಾಸನಾರೂಢನಾದ ಕ್ಷಣಗಳ ಸಂತೋಷ ಸಂಭ್ರಮಗಳು ಮೇರೆಮೀರಿದಂತಾದುವು. ತನ್ನ ಅರಸುತನಕ್ಕೆ ತಕ್ಕಂತೆ ಅವನು ಆ ಸಂದರ್ಭದಲ್ಲಿ ಉಪಸ್ಥಿತರಿದ್ದ ಮುನಿವಂದಿತ ಸಮೂಹವನ್ನು ನಾನಾ ರೀತಿಯ ಗೌರವಾದರಗಳಿಂದ ಸತ್ಕರಿಸಿದನು; ಧರಣಿಯ ಪ್ರತ್ಯಕ್ಷದೇವತೆಗಳೆನಿಸಿದ ಬ್ರಾಹ್ಮಣರಿಗೆ ಗೋದಾನ, ಹಿರಣ್ಯದಾನ ಹಾಗೂ ನಾನಾ ರೀತಿಯ ಉತ್ತಮೋತ್ತಮ ವಾದ ವಸ್ತುಗಳನ್ನು ದಾನವಾಗಿತ್ತು ಗೌರವಿಸಿದನು. ನಳಮಹಾರಾಜನನ್ನು ಸತ್ಕಾರ ಪೂರ್ವಕವಾಗಿ ಆಹ್ವಾನಿಸಿ ಸಮಸ್ತ ಸೌಭಾಗ್ಯ ಸೂಚಕ ಆಖಿಲಾಭರಣಗಳ

ನ್ನಿತ್ತುದಲ್ಲದೆ ಕುದುರೆ, ಆನೆ, ರಥ ಮುಂತಾಗಿ ಚದುರಂಗ ಬಲವನ್ನೂ ಬಹು ಮಾನಿಸಿದನು. ಊರ ಜನರನ್ನೂ ಸವಿಮಾತುಗಳಿಂದ ಉಪಚರಿಸಿದ್ದಲ್ಲದೆ, ಆಗಮಿಸಿದ್ದ ಬಂಧುಬಾಂಧವ ರೆಲ್ಲರನ್ನೂ ಹೀಗೆಯೇ ಔಚಿತ್ಯಪೂರ್ಣ ಸನ್ಮಾನ ಗಳಿಂದ ಗೌರವಿಸಿ ಕಳುಹಿಸಿಕೊಟ್ಟನು.

14. ಹರೆದುದೋಲಗವಲ್ಲಿ ಯಾಚಕ
ವರರು ಕೊಂಡಾಡಿದರು ಧರಣೀ
ಶ್ವರರು ಕಳುಹಿಸಿಕೊಂಡು ಹೊಕ್ಕರು ತಮ್ಮನಗರಿಗಳ
ಮರುದಿವಸ ಋತುಪರ್ಣ ನಳನೃಪ
ಗೆರಗಿ ಕಳುಹಿಸಿಕೊಂಡಯೋಧ್ಯಾ
ಪುರವ ಹೊಕ್ಕನು ಚೈದ್ಯಭೂಪತಿ ಮರಳಿದನು ಪುರಕೆ

ಹರೆದುದು + ಓಲಗವು + ಅಲ್ಲಿ = ಆಸ್ಥಾನದಲ್ಲಿದ್ದ ಸಮಸ್ತರೂ ಚದು ರಿದರು; ಯಾಚಕವರರು ಕೊಂಡಾಡಿದರು = ವಿವಿಧ ರೀತಿಯಲ್ಲಿ ಬೇಡಿಕೆಯಿಟ್ಟ ಎಲ್ಲ ರೀತಿಯ ಯಾಚಕರು ಹೊಗಳಿದರು; ಧರಣಿ + ಈಶ್ವರರು = ವಿವಿಧ ಭೂಮಂಡ ಲಾಧೀಶ್ವರರು; ಕಳುಹಿಸಿಕೊಂಡು = ಅಲ್ಲಿಂದ ಬೀಳ್ಕೊಂಡು; ಹೊಕ್ಕರು ತಮ್ಮ ನಗರಿಗಳ = ತಂತಮ್ಮ ಪುರ ಪಟ್ಟಣ ಪ್ರವೇಶ ಮಾಡಿದರು; ಮರುದಿವಸ = ಇದಾದ ಮರುದಿನ; ಋತುಪರ್ಣ = ಋತುಪರ್ಣ; ನಳನೃಪಗೆ + ಎರಗಿ = ನಳಮಹಾರಾಜನಿಗೆ ನಮಸ್ಕರಿಸಿ; ಕಳುಹಿಸಿಕೊಂಡು + ಅಯೋಧ್ಯಾಪುರವ ಹೊಕ್ಕನು = ಅವನಿಂದ ಬೀಳ್ಕೊಂಡು ಅಯೋಧ್ಯಾಪುರಕ್ಕೆ ಬಂದು ಸೇರಿದನು; ಚೈದ್ಯಭೂಪತಿ ಮರಳಿದನು ಪುರಕೆ = ಅಂತೆಯೇ ಚೈದ್ಯಪುರದರಸನೂ ತನ್ನ ಸ್ವಸ್ಥಾನವನ್ನು ಸೇರಿದನು.

ಮಂಗಲಮಯವಾಗಿ ಸೇರಿದ ಆಸ್ಥಾನದಲ್ಲಿದ್ದ ಸಮಸ್ತರೂ ಸಂಭ್ರಮಾ ಚರಣೆಯ ತರುವಾಯದಲ್ಲಿ ಚದುರಿದರು. ರಾಜನಲ್ಲಿ ಬೇಡಿಬಂದ ವಿವಿಧ ರೀತಿಯ ಯಾಚಕರು ರಾಜನ ಶೌರ್ಯ, ಧೈರ್ಯ, ಔದಾರ್ಯ ಗುಣಗಳನ್ನು, ಅವನ ಗುಣಸೌಶೀಲ್ಯಗಳನ್ನೂ ವಿಧವಿಧವಾಗಿ ಹೊಗಳಿದರು. ಭೂಮಿಯ ಮೇಲಿನ ದೇವತೆ ಗಳೆಂಬ ಖ್ಯಾತಿ ಗಳಿಸಿದ್ದ ಬ್ರಾಹ್ಮಣ ಸಮೂಹವೂ, ಭೂಮಂಡಲಾಧೀಶ

ಸಮೂಹವೂ ಅಲ್ಲಿಂದ ಬೀಳ್ಕೊಂಡು ತಂತಮ್ಮ ಪುರ ಪಟ್ಟಣಗಳನ್ನು ಹೋಗಿ ಸೇರಿಕೊಂಡರು. ಇದಾದ ಮರುದಿವಸಕ್ಕೆ ಅಯೋಧ್ಯಾಧಿಪತಿಯಾದ ಋತುಪರ್ಣನು ನಳಮಹಾರಾಜನಿಗೆ ಬಂದು ನಮಸ್ಕರಿಸಿ ತನ್ನ ಸ್ಥಾನವನ್ನು ಸೇರಿಕೊಂಡನು. ಅಂತೆಯೇ ಚೈದ್ಯಭೂಪತಿಯು ತನ್ನ ಪುರಕ್ಕೆ ಮರಳಿದನು.

15. ಇಂದುಮುಖಿ ದಮಯಂತಿಯೊಡನಾ
ನಂದದಲಿ ನಳನೃಪತಿ ಮಾವನ
ಮಂದಿರದಿ ತಾನೊಂದು ವತ್ಸರವಿದ್ದವಿಭವದಲಿ
ಮುಂದೆ ನಮ್ಮಯ ನಿಷಧಪುರಿಗಾ
ವಿಂದು ಗಮಿಸಲು ಬೇಕೆನುತ ತಾ
ನಂದು ಭೀಮನೃಪಾಲನೊಡನಾಲೋಚಿಸಿದ ಹದನ

ಇಂದುಮುಖಿ = ಸುಂದರಿಯಾದ; ದಮಯಂತಿಯೊಡನೆ + ಆನಂದದಲಿ = ದಮಯಂತಿಯೊಂದಿಗೆ ಸಂತೋಷಚಿತ್ತನಾಗಿ; ನಳನೃಪತಿ = ನಳಮಹಾರಾಜನು; ಮಾವನ ಮಂದಿರದಿ = ಮಾವನಾದ ಭೀಮನೃಪನ ಅರಮನೆಯಲ್ಲಿ; ತಾನೊಂದು ವತ್ಸರವಿದ್ದ = ತಾನು ಒಂದು ವರ್ಷದವರೆಗೂ ಇದ್ದನು; ವಿಭವದಲಿ = ಮಹಾವೈಭವಪೂರ್ಣವಾಗಿ; ಮುಂದೆ ನಮ್ಮಯ = ತದನಂತರ ನಮ್ಮ; ನಿಷಧ ಪುರಿಗೆ + ಆ ವಿಂದು = ನಿಷಧ ನಗರಕ್ಕೆ ನಾವು ಈ ದಿನ; ಗಮಿಸಲು ಬೇಕೆನುತ = ಹೋಗಬೇಕು ಎನ್ನುತ; ತಾನಂದು = ಆ ದಿನ; ಭೀಮನೃಪಾಲನೊಡನೆ + ಆಲೋಚಿಸಿದ ಹದನ = ಮಾವನಾದ ಭೀಮನೃಪಾಲನೊಂದಿಗೆ ವಿಚಾರ ವಿನಿಮಯ ನಡೆಸಿದನು.

ನಳಮಹಾರಾಜರು ತನ್ನ ಮಾವನಾದ ಭೀಮನೃಪಾಲನ ಅರಮನೆ ಯಲ್ಲಿಯೇ ಮುಂದಿನ ಒಂದು ವರ್ಷದವರೆಗೆ ಮಹಾವೈಭವಪೂರ್ಣವಾಗಿ ಇದ್ದನು. ತದನಂತರ 'ನಾವು ನಮ್ಮ ನಿಷಧ ನಗರಕ್ಕೆ ಹಿಂದಿರುಗೋಣ' ಎಂದು ಆಲೋಚಿಸಿಕೊಳ್ಳುತ್ತ ಆ ಕುರಿತು ಭೀಮನೃಪಾಲನೊಂದಿಗೆ ಸಮಾಲೋಚಿಸಿದನು.

16. ದಂಡು ನಡೆಯಲಿ ನಿಷಧಪುರಿಗಾ
ಭಂಡ ನೃಪ ಪುಷ್ಕರನ ಮಾತೇ

ನಂಡಲೆದು ಫಲವಿಲ್ಲ ಸಾಕಿನ್ನೇಳಿಯೆಂದೆನುತ
ಮಂಡಲಾಧಿಪನೆನಲು ಭೂಪರ
ತಂಡವೆದ್ದುದು ಕೂಡೆ ಭಟರು
ದ್ದಂಡ ಕೈದುವ ಕೊಂಡು ನಡೆದರು ನಳನ ಸನ್ನೆಯಲಿ

ದಂಡು ನಡೆಯಲಿ = ಸೈನ್ಯವು ಹೊರಡಲಿ; ನಿಷಧಪುರಿಗೆ = ನಿಷಧನಗರಕ್ಕೆ; ಆ ಭಂಡ ನೃಪ ಪುಷ್ಕರನ = ಆ ನಾಚಿಕೆಗೆಟ್ಟ ನೃಪ ಪುಷ್ಕರನ; ಮಾತೇನು + ಅಂಡಲೆದು = ಕೋಟಲೆಯನ್ನು ಕುರಿತು ಯೋಚಿಸುವುದಕ್ಕಾದರೂ ಏನಿದೆ; ಫಲವಿಲ್ಲ ಸಾಕು + ಏಳಿ + ಎಂದು + ಎನುತ = ಇಲ್ಲಿಯವರೆಗೆ ಸುಮ್ಮನಿದ್ದುದೇ ಸಾಕು ಇನ್ನಾದರೂ ಎಲ್ಲರೂ ಹೊರಡಿ ಎನುತ; ಮಂಡಲಾಧಿಪನು + ಎನಲು = ವಿದರ್ಭ ಪುರಾಧೀಶನು ಅಪ್ಪಣೆ ಮಾಡಲು; ಭೂಪರ ತಂಡವೆದ್ದುದು = ಅವನ ಸಾಮಂತರಾಜ ಸಂಕುಲವೇ ಹೊರಟು ನಿಂತಿತು; ಕೂಡೆ ಭಟ್ಟರು = ಅವರೊಂದಿಗೆ ಆ ಕ್ಷಣವೇ ಸೈನಿಕರು; ಉದ್ದಂಡ ಕೈದುವ ಕೊಂಡು = ತೀಕ್ಷ್ಣವಾದ ಆಯುಧಗಳನ್ನು ಮೇಲೆತ್ತಿ ಹಿಡಿದುಕೊಂಡು ಧೈರ್ಯದಿಂದ ನಡೆದರು; ನಳನ ಸನ್ನೆಯಲಿ = ನಳನ ಸೂಚನೆಯನುಸಾರ.

ಭೀಮನೃಪಾಲನು ನಳನ ಆಲೋಚನೆಗೆ ಸಮ್ಮತಿಸಿ, ಆ ಕೂಡಲೇ ತನ್ನ ಸೈನಿಕ ಪಡೆಗೆ ಆದೇಶವಿತ್ತನು "ಸೈನ್ಯವು ಈ ಕೂಡಲೇ ಹೊರಡಲಿ ನಿಷಧನಗರಕ್ಕೆ. ಪುಷ್ಕರನ ಪೀಡನೆಗಳ ಕುರಿತಂತೆ ಯೋಚಿಸುವುದೋ, ಅವನನ್ನು ಬೆನ್ನಟ್ಟುವುದೋ ಅಗತ್ಯವಿಲ್ಲ. ಸಾಕು ಅವನನ್ನು ಹೀಗೇ ಸುಮ್ಮನಿರಲು ಬಿಟ್ಟಿದ್ದು. ಇನ್ನಾದರೂ ಎಲ್ಲ ಏಳಿ" ಎಂದು ಹುರಿದುಂಬಿಸುತ್ತಿದ್ದಂತೆ, ಅವನ ಸಾಮಂತ ವೀರರಾಜರ ಪಡೆ ಆ ಕ್ಷಣವೇ ಹೊರಟು ನಿಂತಿತು. ಅವರೊಂದಿಗಿದ್ದ ಸೇನಾ ಪಡೆಗಳು ತಂತಮ್ಮ ತೀಕ್ಷ್ಣವಾದ ಆಯುಧಗಳನ್ನು ಮೇಲೆತ್ತಿ ಹಿಡಿದು ಧೈರ್ಯದಿಂದ ನಳನ ಸೂಚನೆಗಳಿಗನುಸಾರವಾಗಿ ಮುನ್ನಡೆದರು.

17. ತುರಗ ಹಲ್ಲಣಿಸಿದುದು ರಥ ಮೋ
ಹರಿಸಿ ತೆರಳಿತು ಸಂಗರಕೆ ಮದ
ಕರಿಗಳಿಟ್ಟಣಿಸಿದುದು ಕಾಲಾಳಿರದೆ ಸಂದಣಿಸೆ

ನೆರೆದುದಗಣಿತ ಸೈನ್ಯ ಸಾಗರ
ಮೊರೆವವೊಲ್ ಗಂಭೀರಭೇರಿಗ
ಳುರವಣಿಸೆ ಹೊರವಂಟ ನಳನೃಪನರಸ ಕೇಳೆಂದ

ತುರಗ ಹಲ್ಲಣಿಸಿದುದು = ಕುದುರೆ ಪಡೆ ಜೀನು ಮುಂತಾದವುಗಳನ್ನು ತೊಡಿಸಿಕೊಂಡು ಸಜ್ಜಾದವು; ರಥ ಮೋಹರಿಸಿ ತೆರಳಿತು = ರಥಗಳ ಸೈನ್ಯವೂ ಗುಂಪು ಗುಂಪಾಗಿ ಸಾಗಿದವು; ಸಂಗರಕೆ = ಯುದ್ಧಕ್ಕೆ; ಮದಕರಿಗಳು + ಇಟ್ಟಣಿಸಿದುದು = ಮದ್ದಾನೆಗಳ ಪಡೆ ದಟ್ಟವಾಗಿ, ಒತ್ತೊತ್ತಾಗಿ ಹೊರಟವು; ಕಾಲಾಳು + ಇರದೆ ಸಂದಣಿಸಿ = ಪದಾತಿ ಪಡೆಯೂ ತಾವೂ ಗುಂಪುಗೂಡಿ ಹೊರಡಲು; ನೆರೆದುದು + ಅಗಣಿತ ಸೈನ್ಯ = ಅಪಾರ ಸಂಖ್ಯೆಯ ಸೈನ್ಯವು ಒಂದಾಗಿ ಹೊರಟವು; ಸಾಗರ ಮೊರೆವವೊಲ್ = ಸಮುದ್ರ ಘೋಷದಂತೆ ಮೊರೆಯುತ್ತ; ಗಂಭೀರ ಭೇರಿಗಳು + ಉರವಣಿಸೆ = ಕದನ ಭೇರಿಗಳು ಘನವಾಗಿ ಶಬ್ದಿಸಿ ಮೊಳಗಲು; ಹೊರವಂಟ = ಸಮರಕ್ಕೆ ಸಜ್ಜಾಗಿ ಹೊರಟನು; ನಳನೃಪನು + ಅರಸ ಕೇಳೆಂದ = ನಳರಾಜನು, ಧರ್ಮರಾಯನೇ ಆಲಿಸು ಎಂದನು.

ಅರಸ ಧರ್ಮರಾಯನೇ ಕೇಳು ಭೀಮ ನೃಪಾಲನಿಂದ ಕದನವೀರರಿಗೆ ಅಪ್ಪಣೆ ಹೊರಬೀಳುತ್ತಿದ್ದುದೇ ತಡ ಕುದುರೆ ಪಡೆಗಳು ಕುದುರೆಗಳಿಗೆ ಜೀನು ಮುಂತಾದುವುಗಳನ್ನು ತೊಡಿಸಿ ಸಜ್ಜಾದುವು. ರಥಗಳು ಗುಂಪುಗುಂಪಾಗಿ ಹೊರಟವು. ಯುದ್ಧರಂಗಕ್ಕೆ ಸಜ್ಜಾಗಿ ಮದ್ದಾನೆಗಳ ಪಡೆಯು ಹೊರಟು ಅಪಾರ ಸಂಖ್ಯೆಯ ಸೈನ್ಯವು ಹೊರಟಿತು. ಸಾಗರದ ಅಲೆಗಳಂತೆ ಮೊಳಗುತ್ತ ಕದನ ಭೇರಿಗಳು ಘನಶಬ್ದಗಳಿಂದ ಮೊಳಗಲು ನಳನೃಪನೂ ಹೊರಟನು.

18. ತುರಗಚಯ ವೆಂಟಣಿಸಿ ಹೂಡಿದ
ವರರಥಕೆ ಬಲವಂದು ಕೈದುವ
ಧರಿಸಿಯೇರಿದನರಸ ಮಂಗಳವಾದ್ಯರಭಸದಲಿ
ತೆರಳಿತಲ್ಲಿ ಮಹಾರಥರು ಸಂ
ಹರಕೆ ಮುಂಚುವ ಭಟರ ಗಡಣದಿ
ಧುರಕೆ ನಡೆದರು ಮುಂದೆ ಸಾರುತ ಗೌರುಗಹಳೆಯಲಿ

ತುರಗಚಯ = ಕುದುರೆಗಳ ಗುಂಪು; ವೆಂಟಣಿಸಿ = ಸುತ್ತುವರಿದು; ಹೂಡಿದ ವರರಥಕೆ = ಹೂಡಿದ ಉತ್ತಮವಾದ ರಥಕ್ಕೆ; ಬಲವಂದು = ಪ್ರದಕ್ಷಿಣೆ ಮಾಡಿ; ಕೈದುವ = ಆಯುಧವನ್ನು; ಧರಿಸಿ + ಏರಿದನು + ಅರಸ = ಕೈಗೆತ್ತಿಕೊಂಡು ಅರಸ ನಳನು ಹತ್ತಿದನು; ಮಂಗಳವಾದ್ಯ ರಭಸದಲಿ = ಮಂಗಳವಾದ್ಯಗಳು ಮಹಾಘೋಷ ನಿರತವಾಗಿರುತ್ತ; ತೆರಳಿತಲ್ಲಿ = ಅಲ್ಲಿ ತೆರಳಿತು; ಮಹಾರಥರು = ರಥದಲ್ಲಿಯೇ ಕುಳಿತು ಯುದ್ಧಮಾಡುವ ಮಹಾವೀರರು; ಸಂಹರಕೆ = ಯುದ್ಧಕ್ಕೆ; ಮುಂಚುವ = ಮುಂದುವರಿಯುವ; ಭಟರ ಗಡಣದಿ = ಸೈನಿಕ ಪಡೆಯೊಂದಿಗೆ; ಧುರಕೆ ನಡೆದರು = ಯುದ್ಧಕಣಕ್ಕೆ ಹೊರಟರು; ಮುಂದೆ ಸಾರುತ = ಮುಂದು ಮುಂದಕ್ಕೆ ಸಾಗುತ್ತಿರುವ; ಗೌರುಗಹಳೆಯಲಿ = ಕೊಂಬು ಕಹಳೆಗಳ ಮೊಳಗಿನೊಂದಿಗೆ.

ಕುದುರೆಗಳ ಗುಂಪು ಸುತ್ತುವರೆದು, ಹೂಡಿದ ರಥಕ್ಕೆ ಪ್ರದಕ್ಷಿಣೆ ಮಾಡಿದ ನಳನು ಕೈಯಲ್ಲಿ ಆಯುಧವನ್ನು ಹಿಡಿದು ರಥವೇರಿದನು. ಮಂಗಳವಾದ್ಯಗಳು ಮಹಾ ವೈಭವದಿಂದ ಮೊಳಗುತ್ತ ಅವನೊಂದಿಗೆ ತೆರಳಿತು. ರಥದಲ್ಲಿಯೇ ಕುಳಿತು ಯುದ್ಧ ಮಾಡಬಲ್ಲ ಮಹಾಶೂರರಾದ ಮಹಾರಥಿಗಳು ಯುದ್ಧವೆಂದರೆ ಉತ್ಸಾಹದಿಂದ ಮುಂದು ಬರುವ ಸೈನಿಕ ಪಡೆಯೊಂದಿಗೆ ಯುದ್ಧಕಣಕ್ಕೆ ತೆರಳಲು ಕೊಂಬು ಕಹಳೆಗಳು ಮೊಳಗಿದವು.

19. ಇದು ಕಣಾ ನಳನಂದು ವನವಾ
ಸದ ಪಯಣವಾದಲ್ಲಿ ಮಕ್ಕಳ
ಪದುಳದಿಂದೇರಿಸಿ ವಿದರ್ಭಕೆ ಕಳುಹಿಬಿಟ್ಟ ರಥ
ಗದಗದಿಪ ನವರತ್ನನಿಚಯದದೊ
ಳುದಿಸಿ ಮೆರೆವ ಸುವರ್ಣಕಲಶವ
ಮದನ ನೆಲೆವೀಡೆನಿಸಿ ಮೆರೆದುದು ವರವರೂಥವದು

ಇದು ಕಣಾ ನಳನು + ಅಂದು = ಇದೇ, ಆ ದಿನ ನಳನು; ವನವಾಸದ ಪಯಣವಾದಲ್ಲಿ = ತನ್ನ ವನವಾಸಕ್ಕೆ ಹೊರಟಂದು; ಮಕ್ಕಳ ಪದುಳದಿಂದೇರಿಸಿ = ತನ್ನ ಮಕ್ಕಳನ್ನು ಕ್ಷೇಮವಾಗಿ ಕರೆದೊಯ್ಯಲೆಂದು ಹತ್ತಿಸಿ; ವಿದರ್ಭಕೆ ಕಳುಹಿ ಬಿಟ್ಟ

ರಥ = ವಿದರ್ಭ ನಗರಕ್ಕೆ ಕಳುಹಿಕೊಟ್ಟ ರಥ; ಗದಗದಿಪ = ಹೊಳೆ ಹೊಳೆಯುವ; ನವರತ್ನ ನಿಚಯದೊಳು + ಉದಿಸಿ = ನವರತ್ನ ಖಚಿತವಾಗಿ; ಮೆರೆವ ಸುವರ್ಣ ಕಳಶದ = ಸುವರ್ಣಕಳಶವನ್ನು ಹೊಂದಿದ್ದು; ಮದನ ನೆಲೆವೀಡೆನಿಸಿ = ಮನ್ಮಥನ ನೆಲೆಮನೆಯೋ ಎಂದೆನಿಸುವಂತೆ; ಮೆರೆದುದು = ಕಣ್ಸೆಳೆದ; ವರವರೂಥವದು = ಶ್ರೇಷ್ಠತಮವಾದ ರಥ ಇದೇ.

ನಳನು ಹತ್ತಿ ಹೊರಟ ಆ ರಥವನ್ನು ಕಂಡವರು ಆ ರಥದ ಕುರಿತ ಸಂಗತಿಗಳನ್ನು ಆಡಿಕೊಂಡರು. "ನೋಡು, ಇದೇ ಈ ಹಿಂದೆ ನಳನು ತಾನು ವನವಾಸಕ್ಕೆ ಹೊರಟು ನಿಂತಾಗ ಮಕ್ಕಳು ಸುರಕ್ಷಿತವಾಗಿರಲೆಂದು ಅವರನ್ನು ವಿದರ್ಭನಗರಕ್ಕೆ ಕಳುಹಿಸಲು ಹತ್ತಿಸಿದ ರಥ" ಎಂದು ನೆನಪಿಸಿಕೊಂಡರು. ಆ ರಥವಾದರೂ ಹೊಳೆಹೊಳೆಯುವ ನವರತ್ನ ಖಚಿತವಾಗಿ ಶೋಭಾಯ ಮಾನವಾಗಿದ್ದ ಬಂಗಾರದ ಕಳಶವನ್ನು ಹೊತ್ತು ಮದನನು ವಿರಮಿಸುವ ಮನೆಯೋ ಎಂಬಂತೆ ವೈಭವಯುತವಾಗಿ ಮೆರೆಯುತ್ತಿತ್ತು.

20. ಹೊಳೆವ ಸಿಂಧದ ಸಾಲ ಝುಲ್ಲರಿ
ಗಳ ಪತಾಕದ ಛತ್ರ ಚಮರಾ
ವಳಿಗಳಿಂದಲಿ ಧಾತುಗುಂದಿದುದಭ್ರತಳ ಮುಸುಕಿ
ಉಲಿದ ಮಂಗಳಪಾಠಕರ ಕಳ
ಕಳಿಕೆ ಮಿಗೆ ಹೆಬ್ಬಲ ಛಡಾಳಿಸೆ
ನೆಲ ಬಿರಿಯಲೈತಂದು ಬಿಟ್ಟುದು ನಿಷಧನಗರಿಯಲಿ

ಹೊಳೆವ ಸಿಂಧದ ಸಾಲ = ರಥದ ಮೇಲೆ ಕಟ್ಟಿದ ಹೊಳೆಯುವ ಸಾಲು ನಿಶಾನೆಗಳ, ಸಾಲುಸಾಲಾಗಿ ಶೋಭಿಸುವ; ಝುಲ್ಲರಿಗಳ = ಮಕರ ತೋರಣಗಳ; ಪತಾಕದ = ಬಾವುಟಗಳ; ಛತ್ರ ಚಾಮರ + ಆವಳಿಗಳಿಂದಲಿ = ರಾಜಲಾಂಛನದ ಛತ್ರಿ, ಚಾಮರ ಸಮೂಹದಿಂದ; ಧಾತುಗುಂದಿದುದು + ಅಭ್ರತಳ = ಆಕಾಶ ಮಾರ್ಗವೇ ಇವುಗಳ ಶೋಭೆಯಿಂದ ನಿಸ್ತೇಜವಾಯಿತು; ಮುಸುಕಿ ಉಲಿದ = ಅಬ್ಬರದಿಂದ ಪಠಿಸುವ; ಮಂಗಳಪಾಠಕರ = ಮಂಗಳಕರ ಆಶೀರ್ವಚನಗಳ; ಕಳಕಳಿಕೆ ಮಿಗೆ = ಕಲಕಲ ಶಬ್ದವು ಅತಿಶಯವಾಗಿ ಕೇಳಿಬರುತ್ತಿರಲು; ಅತಿದೊಡ್ಡ

ಹೆಬ್ಬಲ = ಅತಿ ದೊಡ್ಡ ಸೈನ್ಯವು; ಘಡಾಳಿಸೆ = ರಭಸದಿಂದ ನುಗ್ಗುತ್ತ ಸದ್ದುಮಾಡಲು; ನೆಲ ಬಿರಿಯಲು + ಐತಂದು = ನೆಲವೇ ಬಿರಿಯುವಂತೆ ಅಬ್ಬರಿಸುತ್ತ ಬಂದ ರಥಗಳು; ಬಿಟ್ಟುದು ನಿಷಧನಗರಿಯಲಿ = ನಿಷಧನಗರಕ್ಕೆ ಬಂದು ತಲುಪಿದವು.

ರಥಗಳು ರಾಜನ ಪರಾಕ್ರಮದ ಚಿಹ್ನೆಗಳನ್ನು ಹೊತ್ತು ವೈಭವಯುತವಾಗಿ ಅಲಂಕೃತಗೊಂಡು ಕಣ್ಸೆಳೆಯುವಂತಿದ್ದವು. ರಥದ ಮೇಲೆ ಹೊಳೆಯುವ ರಾಜ ಲಾಂಛನಗಳು; ಕಟ್ಟಿದ ಮಕರ ತೋರಣಗಳು, ಬಾವುಟಗಳು, ರಾಜವೈಭವವನ್ನೂ, ರಾಜಾಧಿಕಾರವನ್ನೂ ಸಂಕೇತಿಸುವ ಛತ್ರಿ ಚಾಮರಗಳ ಸಮೂಹದ ಶೋಭೆಗೆ ಆಕಾಶದ ಹೊಳಪು ನಿಸ್ತೇಜವಾಯಿತು. ಅಬ್ಬರದಿಂದ ತಾರಸ್ವರದಲ್ಲಿ ಪಠಿಸುವ ಮಂಗಳಪಾಠಕರ ಆಶೀರ್ವಚನಗಳು, ಅವರ ಕಂಠದಲ್ಲಿದ್ದ ಕಲಕಲದ ಉತ್ಸಾಹವೂ ಮೇರೆ ಮೀರಿ ವಾತಾವರಣವನ್ನು ತುಂಬಿತ್ತು. ಇದೆಲ್ಲದರೊಂದಿಗೆ ಮಹಾ ಸೈನ್ಯವೂ ರಭಸದಿಂದ ಹರಿದು ಬರುತ್ತಿದ್ದ ರಥಗಳ ಅಬ್ಬರವೂ ನೆಲಬಿರಿಯುವಂತೆ ಗಡಚಿಕ್ಕುತ್ತ ನಿಷಧನಗರವನ್ನು ತಲುಪಿದುವು.

21. ದಾಳಿಯಿಟ್ಟರು ಹರಿದು ದಿಕ್ಕಿನ
ಮೂಲೆಯವರಂಜಿದರು ಮುಮ್ಮೊನೆ
ಯಾಳು ಕವಿದುದು ಹಿಡಿದರಗ್ಗದ ಸೆರೆಯ ಸೂರೆಗಳ
ಕೇಳಿದನು ಪುಷ್ಕರನು ನಿಷಧನ
ದಾಳಿ ಬರುತಿದೆ ಖತಿಯ ಭರದಲಿ
ಕಾಳಗಕೆ ನಳನೃಪತಿ ಬಂದನೆನುತ ಮುಳಿದೆದ್ದ

ದಾಳಿಯಿಟ್ಟರು ಹರಿದು = ನಳಮಹಾರಾಜನ ಸೈನ್ಯವು ನಿಷಧನಗರವನ್ನು ವೇಗವಾಗಿ ದಾಳಿಮಾಡಿತು; ದಿಕ್ಕಿನ ಮೂಲೆಯವರಂಜಿದರು = ದಿಕ್ಪಾಲಕರೇ ಸ್ವತಃ ನಳನ ಸೈನ್ಯದ ದಾಳಿಯ ಅಬ್ಬರಕ್ಕೆ ಅಂಜಿದರು; ಮುಮ್ಮೊನೆಯಾಳು ಕವಿದುದು = ಸೈನ್ಯದ ಮುಂಚೂಣಿಯಲ್ಲಿದ್ದ ಯೋಧಪಡೆ ಮುತ್ತಿಕೊಂಡಿತು; ಹಿಡಿದರು + ಅಗ್ಗದ ಸೆರೆಯ ಸೂರೆಗಳ = ಮುಖ್ಯವಾದ ಪ್ರದೇಶಗಳನ್ನೆಲ್ಲ ಕೈವಶ ಮಾಡಿಕೊಳ್ಳುತ್ತ ಯೋಧರು ನಿಷಧ ನಗರವನ್ನು ಸೂರೆ ಮಾಡಿದರು; ಕೇಳಿದನು ಪುಷ್ಕರನು =

ದಾಳಿಯ ಬಗ್ಗೆ ಪುಷ್ಕರನು ಕೇಳಿದನು; ಖತಿಯಭರದಲಿ = ಮಹಾಕೋಪದ ಭರದಲ್ಲಿ; ಕಾಳಗಕೆ = ಯುದ್ಧಕ್ಕೆ; ನಳನೃಪತಿ ಬಂದನು + ಎನುತ್ತ = ನಳಮಹಾರಾಜನೇ ಸ್ವತಃ ಆಗಮಿಸಿದ್ದಾನೆ ಎನ್ನುತ್ತ; ಮುಳಿದು + ಎದ್ದ = ಪುಷ್ಕರನು ಕೋಪಗೊಂಡು ಯುದ್ಧಕ್ಕೆ ಸಿದ್ಧನಾದನು.

ಅಬ್ಬರದಿಂದ ಹರಿದು ಬಂದ ನಳಮಹಾರಾಜನ ವೀರಸೈನಿಕ ಪಡೆಯು ಅತ್ಯಂತ ವೇಗವಾಗಿ ನಿಷಧ ನಗರವನ್ನು ಮುತ್ತಿ ದಾಳಿಮಾಡಿತು. ಅವರ ವೇಗಕ್ಕೂ ಅಬ್ಬರಕ್ಕೂ ದಿಕ್ಪಾಲಕರೇ ಅಂಜಿದರು. ಸೈನ್ಯದ ಮುಂಚೂಣಿಯಲ್ಲಿದ್ದ ಸೈನಿಕರು ನಿಷಧನಗರದ ಮುಖ್ಯ ಪ್ರದೇಶಗಳನ್ನೆಲ್ಲ ಆಕ್ರಮಿಸಿ ಕೈವಶ ಮಾಡಿಕೊಳ್ಳುತ್ತ ಬಹುತೇಕ ಆ ನಗರವನ್ನು ಸುತ್ತಿ ಸೂರೆಮಾಡಿದರು. ಈ ಸಂಗತಿ ಪುಷ್ಕರನ ಕಿವಿ ತಲುಪಿತು. ನಿಷಧನಗರಾಧಿಪತಿ ನಳನು ಸೈನ್ಯದೊಂದಿಗೆ ದಾಳಿಯಿಡುತ್ತಿದ್ದಾನೆ. ಮಹಾಕೋಪದ ಭರದಲ್ಲಿ ಅವನೇ ಸ್ವತಃ ಯುದ್ಧಕ್ಕಿಳಿದಿದ್ದಾನೆಂಬ ಸಂಗತಿಯಿಂದ ಸಿಟ್ಟಾದ ಪುಷ್ಕರನು ತಡ ಮಾಡದೆ ತಾನೂ ಯುದ್ಧಕ್ಕೆ ಸಿದ್ಧನಾದನು.

22. ಆಗಲಿದಕೇನೀಗ ರಾಜ್ಯವ
ನೀಗಿದಳಲಿನೊಳೊಮ್ಮೆ ಕದನಕೆ
ತಾಗಿದನು ತಪ್ಪೇನು ಬರಹೇಳೆಮ್ಮ ಸೈನಿಕರ
ಈಗಲೀತನ ಕಡಿದು ಸೆರೆಗಳ
ಬೇಗ ಹಿಡಿಯೆಂದೆನುತ ನಿಜಬಲ
ಸಾಗರವ ನೆರಹಿದನು ಕಳುಹಿದ ತನ್ನ ದಳಪತಿಯ

ಆಗಲಿ + ಇದಕೆ + ಏನೀಗ = ಬಂದರೆ ಬರಲಿ ಅದಕ್ಕೇನೀಗ; ರಾಜ್ಯವ = ತನ್ನ ರಾಜ್ಯವನ್ನು; ನೀಗಿದ + ಅಳಲಿನೊಳು + ಒಮ್ಮೆ = ಕಳೆದುಕೊಂಡ ನೋವಿನಲ್ಲಿ ಒಂದು ಬಾರಿ; ಕದನಕೆ ತಾಗಿದನು = ಯುದ್ಧಕ್ಕೆ ಮನಸು ಮಾಡಿರಬಹುದು; ತಪ್ಪೇನು = ಇದರಲ್ಲೇನೂ ಅವನ ತಪ್ಪಿಲ್ಲ; ಬರಹೇಳು + ಎಮ್ಮ + ಸೈನಿಕರ = ನಮ್ಮ ಸೈನಿಕರಿಗೂ ಕೂಡಲೇ ಸಿದ್ಧಗೊಂಡು ಹೊರಡಲು ಹೇಳು; ಈಗಲೀತನ = ಈಗಲೇ ಈತನನ್ನು; ಕಡಿದು = ಯುದ್ಧದಲಿ ಸೋಲಿಸಿ; ಸೆರೆಗಳ ಬೇಗ ಹಿಡಿ + ಎಂದು + ಎನುತ = ಸೆರೆಹಿಡಿಯಿರಿ ಬೇಗ ಎಂದೆನ್ನುತ್ತ; ನಿಜಬಲ

ಸಾಗರವ = ಸಾಗರದೋಪಾದಿಯಲ್ಲಿದ್ದ ತನ್ನ ಮಹಾಸೈನ್ಯವನ್ನು; ನೆರಹಿದನು = ತನ್ನೊಂದಿಗೆ ಒಂದೆಡೆ ಸೇರಿಸಿದನು; ಕಳುಹಿದನು ತನ್ನ ದಳಪತಿಯ = ಮತ್ತು ತನ್ನ ಸೈನ್ಯಕ್ಕೆ ಸಂದರ್ಭೋಚಿತವಾದ ಸೂಚನೆಗಳನ್ನು ನೀಡುವಂತೆ ಆಜ್ಞೆ ಮಾಡಿ ತನ್ನ ಸೇನಾ ದಳಪತಿಯನ್ನು ಕಳುಹಿದನು.

ನಳನು ಸೈನ್ಯಸಮೇತ ಯುದ್ಧಕ್ಕೆ ಸಿದ್ಧನಾಗಿ ಬಂದಿರುವ ಸುದ್ದಿಯನ್ನು ಕೇಳಿ ಸಿಟ್ಟಾದರೂ ಪುಷ್ಕರನಿಗೆ ನಳನೇನು ಮಾಡಿಯಾನು ಎಂಬಂತೆ ಉದಾಸೀನ ಮನೋಭಾವ ಇತ್ತು. ಹಾಗಾಗಿ ತನ್ನ ದಳಪತಿಯ ಹತ್ತಿರ "ಬಂದರೆ ಬರಲಿ, ಅದಕ್ಕೇನೀಗ? ತನ್ನ ರಾಜ್ಯಭೋಗಭಾಗ್ಯಗಳನ್ನು ಕಳೆದುಕೊಂಡ ಸಿಟ್ಟಿನಲ್ಲಿ ಬಂದಿದ್ದಾನೆ. ಇದರಲ್ಲೇನು ತಪ್ಪು? ಆ ಕುರಿತು ಗಂಭೀರವಾಗಿ ಚಿಂತಿಸುವ ಅಗತ್ಯವಿಲ್ಲ. ಅವನನ್ನು ಈಗಲೇ ಸೆರೆಹಿಡಿದು ತಂದರಾಯಿತು. ಬೇಗ ಅನುವಾಗಲು ನಮ್ಮ ಸೈನಿಕರಿಗೆ ಸೂಚಿಸಿ" ಎಂದು ಹೇಳಿ ತಾನೂ ಸ್ವಲ್ಪ ಮಾತ್ರವೂ ತಡಮಾಡದೆ ಸಾಗರದೋಪಾದಿಯಲ್ಲಿದ್ದ ತನ್ನ ಮಹಾಸೈನ್ಯವನ್ನು ಸೇರಿ ತನ್ನೊಂದಿಗೆ ಒಂದೆಡೆ ಸೇರಿಸಿದನು. ಹಾಗೂ ಆ ಸೈನ್ಯಕ್ಕೆ ಸಂದರ್ಭೋಚಿತವಾದ ಸೂಚನೆಗಳನ್ನು ನೀಡುವಂತೆ ದಳಪತಿಗೆ ಆಜ್ಞಾಪಿಸಿದನು.

23. ಹರಿಗೆ ಖಡ್ಗ ಕಠಾರಿ ತೋಮರ
ಪರಶು ಮುದ್ಗರ ಕುಂತ ಬಲ್ಲೆಹ
ಪರಿಘ ಚಕ್ರ ತ್ರಿಶೂಲ ಕಕ್ಕಡ ಭಿಂಡಿವಾಳಚಯ
ಸುರಗಿ ಸಬಳ ಮುಸುಂಡಿ ಮೊದಲಾ
ದುರುತರದ ಕೈದುಗಳ ಪಟುಭಟ
ರುರವಣಿಸಿ ತಾಗಿದರು ರಿಪುಮೋಹರವನನುಗೊಳಿಸಿ

ಹರಿಗೆ = ಗುರಾಣಿ; ಖಡ್ಗ ಕಠಾರಿ = ಖಡ್ಗಗಳು, ಚೂಪಾದ ವಿವಿಧ ಆಕಾರದ ಚೂರಿಗಳು; ತೋಮರ = ಈಟಿ; ಪರಶು = ಕೊಡಲಿ; ಮುದ್ಗರ = ಗದೆ; ಕುಂತ = ಭರ್ಜಿ; ಬಲ್ಲೆಹ = ಈಟಿಯಂತಹ ಚುಚ್ಚುವ ಆಯುಧ; ಪರಿಘ = ಗದೆಯಂತಹ ಕಬ್ಬಿಣದ ದೊಣ್ಣೆ; ಚಕ್ರ = ಚಕ್ರ; ತ್ರಿಶೂಲ ಮೂರು ಮೊನೆಗಳ ಶೂಲ; ಕಕ್ಕಡ = ಒಂದು ಬಗೆಯ ಕಠಾರಿ; ಭಿಂಡಿವಾಳಚಯ = ಒಂದು ಬಗೆಯ

ಭಲ್ಲೆಗಳ ರಾಶಿ; ಸುರಗಿ = ಚೂಪಾದ ಅಲಗಿನ ಕತ್ತಿ; ಸಬಳ = ಕೊಂತ; ಮುಸುಂಡಿ = ಮೂರು ಮೂಲೆಗಳಿರುವ ಆಯುಧ; ಮೊದಲಾದ + ಉರುತರದ = ಕೈದುಗಳ = ಉತ್ತಮವಾದ ಆಯುಧಗಳನ್ನು ಹಿಡಿದ; ಪಟುಭಟರು + ಉರವಣಿಸಿ = ವೀರಯೋಧರು ಬಿರುಸಿನಿಂದ; ತಾಗಿದರು = ಎದುರಿಸಿದರು; ರಿಪುಮೋಹರವನು + ಅನುಗೊಳಿಸಿ = ಶತ್ರುಸೈನ್ಯವನ್ನು.

ನಳ – ಪುಷ್ಕರರ ಸೈನ್ಯಗಳು ಪರಸ್ಪರರನ್ನು ಎದುರಿಸಲು ಸಿದ್ಧವಾಗಿ ತಂತಮಗೆ ಉಚಿತವೆನಿಸಿದ ಆಯುಧಗಳನ್ನು ಹಿಡಿದು ಹೊರಟರು. ವೀರಯೋಧ ಪಡೆಗಳು ಬಿರುಸಿನಿಂದ ಖಡ್ಗಗಳು, ಚೂಪಾದ ವಿವಿಧಾಕಾರದ ಚೂರಿಗಳು, ಈಟಿ, ಭರ್ಜಿ, ಕೊಡಲಿ, ಗದೆ, ಈಟಯಂತಹ ಮತ್ತು ತ್ರಿಶೂಲದಂತಹ ವಿವಿಧ ರೀತಿಯ ಚುಚ್ಚುವ ಆಯುಧಗಳು, ಕಠಾರಿ, ಚಕ್ರ, ಶೂಲ, ಭಿಂಡಿವಾಳ, ಸಬಳಗಳಂತಹ ಆಯುಧಗಳು, ಚೂಪಾದ ಕತ್ತಿ ಗುರಾಣಿ ಕಠಾರಿ ಮುಂತಾದುವುಗಳನ್ನು ಹಿಡಿದು ಭಯಂಕರವಾಗಿ ಹೋರಾಡಿದರು.

24. ಹೊಕ್ಕರಾಹವದೊಳಗೆ ಮೊನೆಯ
ಲ್ಲಿಕ್ಕಲಿಸಿ ಬರೆ ಕಂಡು ಮಝುರೇ
ಚುಕ್ಕಿಗಳಿರಾ ಎನುತ ಹೊಯ್ದರು ಬೆರಸಿ ಪಟುಭಟರ
ಇಕ್ಕಿದರು ಸುರಗಿಯಲಿ ಕರಿಗಳ
ತಿಕ್ಕಿ ತಿವಿದರು ತೇರುಗಳ ಮುರಿ
ದಿಕ್ಕಿ ಪರಿಘದೊಳೊರಸಿದರು ಕಾಲಾಳ ಮೂದಲಿಸಿ

ಹೊಕ್ಕರು + ಆಹವದೊಳಗೆ = ಯೋಧಪಡೆ ರಣರಂಗದಲ್ಲಿ ಯುದ್ಧಕ್ಕಿಳಿದುವು; ಮೊನೆಯಲ್ಲಿ + ಇಕ್ಕಲಿಸಿ ಬರೆ = ಮುಂಚೂಣಿಯಲ್ಲಿ ಅವು ಜೊತೆಗೂಡಿ ಬರಲು ಕಂಡ; ಮಝುರೇ = ಬಪ್ಪರೇ! (ಉದ್ಗಾರ); ಚುಕ್ಕಿಗಳಿರಾ = ಅಲ್ಪಬಲಗಳೇ; ಎನುತ ಹೊಯ್ದರು = ಎನ್ನುತ್ತಾ ಪರಸ್ಪರರನ್ನು ಹೊಡೆದರು; ಬೆರೆಸಿ = ಅಟ್ಟಿಸಿಕೊಂಡು ಹೋಗಿ; ಪಟುಭಟರ ವೀರಯೋಧರನ್ನು; ಇಕ್ಕಿದರು = ಬಡಿದರು; ಸುರಗಿಯಲಿ = ಚೂಪಾದ ಕತ್ತಿಗಳಿಂದ; ಕರಿಗಳ = ಆನೆಗಳನ್ನು; ತಿಕ್ಕಿ ತಿವಿದರು = ತಿಕ್ಕಿ ತಿವಿದರು; ತೇರುಗಳ ಮುರಿದಿಕ್ಕಿ = ರಥಗಳನ್ನು ಇನ್ನಿಲ್ಲದಂತೆ

ಮುರಿದು ಹಾಕಿ; ಪರಿಘದೊಳು + ಒರಸಿದರು = ಕಬ್ಬಿಣದ ದೊಣ್ಣೆಗಳಿಂದ ನಾಶಗೊಳಿಸಿದರು; ಕಾಲಾಳ = ಪದಾತಿ ಸೈನ್ಯವನ್ನು; ಮೂದಲಿಸಿ = ಛೇಡಿಸುತ್ತ.

ಯೋಧರ ಪಡೆಗಳು ರಣರಂಗದಲ್ಲಿ ಯುದ್ಧಕ್ಕಿಳಿದುವು. ಎರಡೂ ಕಡೆಯ ಸೈನ್ಯಗಳು ಮುಂಚೂಣಿಯಲ್ಲಿ ಜೊತೆಗೂಡಿಯೇ ಬರಲು, ಅಲ್ಪಬಲಗಳಿರಾ ಎಂದು ಅಬ್ಬರಿಸುತ್ತ ಪರಸ್ಪರರನ್ನು ಹೊಡೆದರು. ಎರಡೂ ಕಡೆಯ ಪಡೆಗಳು ಪರಸ್ಪರರ ಬಲವು ತಮ್ಮ ಬಲದ ಮುಂದೆ ಚುಕ್ಕಿ ಸಮಾನವೆಂದೇ ಭಾವಿಸಿದ್ದುದು ವಿಶೇಷವಾಗಿತ್ತು. ಪರಸ್ಪರರನ್ನು ಬೆನ್ನಟ್ಟಿ ಅಟ್ಟಿಸಿಕೊಂಡು ಹೋಗಿ, ವೀರಯೋಧರು ಬಡಿದಿಕ್ಕುತ್ತ, ಚೂಪಾದ ಕತ್ತಿಗಳಿಂದ ಆನೆಗಳನ್ನು ತಿವಿಯುತ್ತ, ರಥಗಳನ್ನು ಮುರಿದು ಹಾಕುತ್ತ ಕಬ್ಬಿಣದ ದೊಣ್ಣೆಗಳಿಂದ ಬಡಿದು ಪರಸ್ಪರರನ್ನು ಮೂದಲಿಸುತ್ತ ಪದಾತಿ ಸೈನ್ಯವನ್ನು ನಾಶಗೊಳಿಸಿದರು.

25. ಇಟ್ಟಣಿಸಿ ಬರೆ ತೇಜಿಗಳ ನೆರೆ
ಕಟ್ಟಿ ಖಂಡಿಸಿ ಭಟರನಾ ಬೆ
ನ್ನಟ್ಟಿ ಕಡಿದರು ಬೆರಸಿ ಬಹ ಬಲು ವೀರನಾಯಕರ
ಹೊಟ್ಟುಗುಟ್ಟಿದರರುಣಜಲ ಸಾ
ಲಿಟ್ಟುದವನಿಯೊಳಮಮ ನೆರೆ ಜಗ
ಜಟ್ಟಿಗಳು ಕಾದಿದರು ರಣದಲಿ ಸುರರು ಬೆರಗಾಗೆ

ಇಟ್ಟಣಿಸಿ ಬರೆ = ಕಿಕ್ಕಿರಿದು ನುಗ್ಗುತ್ತಿದ್ದಂತೆ ಬರಲು; ತೇಜಿಗಳ = ಕುದುರೆಗಳನ್ನು; ನೆರೆಕಟ್ಟಿ ಖಂಡಿಸಿ = ಚಾತುರ್ಯದಿಂದ ಬಂಧಿಸಿ ಕಡಿದು ತುಂಡು ಮಾಡಿದರು; ಭಟರನು + ಆ + ಬೆನ್ನಟ್ಟಿ ಕಡಿದರು = ಆ ವೀರ ಯೋಧರನ್ನು ಬೆನ್ನಟ್ಟಿ ತುಂಡುಗಡೆದರು; ಬೆರಸಿಬಹ ಬಲು ವೀರನಾಯಕರ = ಅಟ್ಟಿಸಿಕೊಂಡು ಒಟ್ಟೊಟ್ಟಾಗಿ ಬರುತ್ತಿದ್ದ ಮಹಾಶೂರನಾಯಕರನ್ನು ಸಹ; ಹೊಟ್ಟುಗುಟ್ಟಿದರು + ಅರುಣಜಲ = ನಿಷ್ಪ್ರಯೋಜಕವಾಗಿಸಿದರು ನೆತ್ತರು; ಸಾಲಿಟ್ಟುದು + ಅವನಿಯೊಳು + ಅಮಮ = ಭೂಮಿಯಲ್ಲಿ ನೆತ್ತರ ಹೊಳೆ ಹರಿದುವು ಅಬ್ಬಬ್ಬ!; ನೆರೆ ಜಗಜಟ್ಟಿಗಳು = ಹೆಸರಾಂತ ಜಗದ್ವಿಖ್ಯಾತ ವೀರಾಳುಗಳು; ಕಾದಿದರು ರಣದಲಿ =

ರಣಕಣದಲ್ಲಿ ಪರಾಕ್ರಮದಿಂದ ಕಾದಾಡಿದರು; ಸುರರು ಬೆರಗಾಗೆ = ದೇವಾದಿದೇವತೆಗಳೂ ಬೆರಗಾಗುವಂತೆ.

ಕಿಕ್ಕಿರಿದಂತೆ ದಟ್ಟಯಿಸಿ ನುಗ್ಗಿ ಬರುತ್ತಿದ್ದ ಕುದುರೆಗಳನ್ನು ವೀರಯೋಧರು ಚಾತುರ್ಯದಿಂದ ಬಂಧಿಸಿ ಕಡಿದು ಹಾಕಿದರು. ವೈರಿ ಯೋಧರನ್ನು ಬೆನ್ನಟ್ಟಿ ಹೋಗಿ ತುಂಡುಗಡೆದರು. ಅಟ್ಟಿಸಿಕೊಂಡು ಒಟ್ಟೊಟ್ಟಾಗಿ ಬರುತ್ತಿದ್ದ ಮಹಾಶೂರ ನಾಯಕರನ್ನೂ ನಿಷ್ಪ್ರಯೋಜಕರಾಗಿಸಿದರು. ಭೂಮಿಯಲ್ಲಿ 'ಅಬ್ಬಬ್ಬ!' ಎನ್ನುವಂತೆ ನೆತ್ತರ ಹೊಳೆ ಹರಿಯಿತು. ಹೆಸರಾಂತ, ಜಗದ್ವಿಖ್ಯಾತ ವೀರಾಳುಗಳು ರಣಕಣದಲ್ಲಿ ಅಸೀಮ ಪರಾಕ್ರಮದಿಂದ ದೇವರುಗಳೂ ಬೆರಗಾಗುವಂತೆ ಹೋರಾಡಿದರು.

26. ಸಾರಥಿಯನೆಚ್ಚರಿಸಿ ರಥಿಕರು
ತೋರಿದರು ಕೈಗುಣವ ಸರಳಿನ
ಸಾರದಲಿ ರಿಪುಭಟರ ತಲೆಗಳ ತರಿದರಲ್ಲಲ್ಲಿ
ಕಾರಿದರು ರಕುತವನು ತೇರಿನ
ವಾರುವಂಗಳು ಮುಗ್ಗಿದುವು ರಣ
ಧೀರರೆಚ್ಚಾಡಿದರು ಗಾಯದೊಳೊರಲಿತುಭಯಬಲ

ಸಾರಥಿಯನು + ಎಚ್ಚರಿಸಿ = ರಥಾರೂಢರಾಗಿ ಹೋರಾಡುತ್ತಿದ್ದ ಕದನಕಲಿಗಳು ತಂತಮ್ಮ ಸಾರಥಿಗಳನ್ನು ಆಗಾಗ್ಗೆ ಎಚ್ಚರಿಸಿ; ರಥಿಕರು ತೋರಿದರು = ರಥಿಕರು ಪ್ರದರ್ಶಿಸಿದರು; ಕೈಗುಣವ ಸರಳಿನ ಸಾರದಲಿ = ಬಾಣ ಪ್ರಯೋಗ ಚಾತುರ್ಯದಲ್ಲಿ; ರಿಪುಭಟರ = ವೈರಿ ವೀರರ; ತಲೆಗಳ ತರಿದರು + ಅಲ್ಲಲ್ಲಿ = ತಲೆಗಳನ್ನು ಸಿಕ್ಕ ಸಿಕ್ಕಲ್ಲಿ ಕೊಚ್ಚಿಹಾಕಿದರು; ಕಾರಿದರು ರಕುತವನು = ನೆತ್ತರು ಕಕ್ಕಿದರು; ತೇರಿನ = ರಥದ; ವಾರುವಂಗಳು = ಕುದುರೆಗಳು; ಮುಗ್ಗಿದುವು = ಮುಗ್ಗರಿಸಿ ಜೋಲಿ ಹೊಡೆದುವು; ರಣಧೀರರು + ಎಚ್ಚಾಡಿದರು = ರಣಕಲಿಗಳು ಪರಸ್ಪರ ಬಾಣಗಳನ್ನು ವರ್ಷಿಸಿದರು; ಗಾಯದೊಳು + ಒರಲಿತು + ಉಭಯಬಲ = ಇತ್ತಂಡದ ರಣಗಲಿಗಳೂ ಗಾಯಗೊಂಡು ನೋವಿನಿಂದ ಬೊಬ್ಬಿಟ್ಟು ನರಳಿದರು.

ರಥಾರೂಢರಾಗಿ ಹೋರಾಡುತ್ತಿದ್ದ ಕದನಗಲಿಗಳು ತಂತಮ್ಮ ಸಾರಥಿ ಗಳನ್ನು ಆಗಾಗ್ಗೆ ತಂತಮಗೆ ಬೇಕಾದಂತೆ ರಥವನ್ನು ನಡೆಸುವಂತೆ ನಿರ್ದೇಶಿಸುತ್ತ

ತಮ್ಮ ಬಾಣಪ್ರಯೋಗದ ಕೌಶಲ್ಯವನ್ನು ಮೆರೆದರು. ಅಲ್ಲಲ್ಲಿ ಸಿಕ್ಕ ವೈರಿಭಟರ ತಲೆಗಳನ್ನು ಕೊಚ್ಚಿ ಹಾಕಿದರು, ರಕ್ತವನ್ನು ಕಕ್ಕಿದರು. ಕುದುರೆಗಳು ಈ ದಾಳಿಯಲ್ಲಿ ಮುಗ್ಗರಿಸಿ ಜೋಲಿ ಹೊಡೆದವು. ರಣಕಲಿಗಳು ಪರಸ್ಪರ ಬಾಣಗಳ ಸುರಿಮಳೆ ಕರೆದರು. ಈ ಭೀಕರ ರಣಕಲಿಗಳ ಕದನದಲ್ಲಿ ಇತ್ತಂಡದ ವೀರರೂ ಅಪಾರವಾಗಿ ಗಾಯಗೊಂಡು ನೋವಿನಿಂದ ಬೊಬ್ಬಿಟ್ಟು ನರಳಿದರು.

27. ಕೆಡೆದ ತಲೆಗಳ ಸಿಡಿದ ಹುಬ್ಬಿನ
ಕಡಿದ ತೋಳ್ಗಳ ನೆಗ್ಗಿದೆಲುಗಳ
ಉಡಿದ ತೊಡೆಗಳ ಮಿದುಳ ಖಂಡದ ಹರಿದ ಕರುಳುಗಳ
ಒಡೆದ ನೆತ್ತಿಗಳಿಂದ ರಕುತದ
ಮಡು ಹರಿಯೆ ತರಹರಿಸಲಾರದೆ
ಪಡೆಮುರಿದು ಬರುತಿರಲು ಕಂಡನು ಖಾತಿಯೊಳು ನಳನು

ಕೆಡೆದ ತಲೆಗಳ = ಧರೆಗೆ ಉರುಳಿಬಿದ್ದ ಸೈನಿಕರ ತಲೆಗಳನ್ನು; ಸಿಡಿದ ಹುಬ್ಬಿನ = ಸಿಡಿದ ಹುಬ್ಬುಗಳ; ಕಡಿದ ತೋಳ್ಗಳ = ಕಡಿದು ಬಿದ್ದ ತೋಳುಗಳ; ನೆಗ್ಗಿದೆಲುಗಳ = ಪುಡಿಗಟ್ಟಿದ ಎಲುಬುಗಳ; ಉಡಿದ ತೊಡೆಗಳ = ಮುರಿದು ಬಿದ್ದ ತೊಡೆಗಳ; ಮಿದುಳ ಖಂಡದ = ತುಂಡು ತುಂಡಾಗಿ ಕಡಿದು ಬಿದ್ದ ಮಿದುಳಿನ; ಹರಿದ ಕರುಳುಗಳ = ಹರಿದುಹೋದ ಕರುಳುಗಳ; ಒಡೆದ ನೆತ್ತಿಗಳಿಂದ = ತಲೆ ಒಡೆದು ಹೋಗಿ ಅಲ್ಲಿಂದ; ರಕುತದ ಮಡು ಹರಿಯೆ = ರಕ್ತದ ಸುಳಿಯೇ ಹರಿಯುತ್ತಿರಲು; ತರಹರಿಸಲಾರದೆ = ಇನ್ನೂ ಸೈರಿಸಲಾರದೆ; ಪಡೆಮುರಿದು ಬರುತಿರಲು = ತನ್ನ ಪಡೆವಳರು ಹಿಂದಿರುಗಿ ಬರುತ್ತಿರಲು; ಕಂಡನು ಖಾತಿಯೊಳು ನಳನು = ನಳ ಮಹಾರಾಜನು ಸಿಟ್ಟಿನಿಂದ ವ್ಯಗ್ರನಾದನು.

ರಣರಂಗವು ಭೀಕರ ರೂಪತಾಳಿತು. ಎಲ್ಲೆಲ್ಲಿ ನೋಡಿದರೂ ಅಲ್ಲಲ್ಲಿ ಧರೆಗೆ ಉರುಳಿಬಿದ್ದ ವೀರ ಯೋಧರ ತಲೆಗಳು, ಸಿಡಿದು ಬಿದ್ದ ಹುಬ್ಬುಗಳು, ಕಡಿದುಬಿದ್ದ ಪರಾಕ್ರಮ ಮೆರೆದ ತೋಳುಗಳು; ಪುಡಿಗಟ್ಟಿದ ಎಲುಬಿನ ರಾಶಿಗಳು; ಮುರಿದು ನೆಲದಲ್ಲಿ ಅನಾಥವಾಗಿ ಕಡೆದು ಬಿದ್ದಿದ್ದ ತೊಡೆಗಳು; ಚೆಲ್ಲಾಡಿದ ಮಿದುಳಿನ ಖಂಡತುಂಡುಗಳು, ಹರಿದುಹೋದ ಕರುಳುಗಳು, ಒಡೆದ ನೆತ್ತಿಗಳಿಂದ ಧಾರಾ

ಕಾರವಾಗಿ ಹರಿಯುತ್ತಿದ್ದ ರಕ್ತದೋಕುಳಿ ಇವನ್ನೆಲ್ಲ ನೋಡಿ ಸೈರಿಸಲಾರದೇ, ಇನ್ನೂ ನಿಧಾನಿಸಿದರೆ ತಮಗೂ ಅಪಾಯ ಕಟ್ಟಿಟ್ಟದ್ದು ಎಂದು ರಣಕಣದಿಂದ ಹಿಂದೆಗೆದು ಮರಳುತ್ತಿದ್ದ ತನ್ನ ಪಡೆವಳರನ್ನು ಕಂಡು ನಳಮಹಾರಾಜನು ಸಿಟ್ಟಿನಿಂದ ವ್ಯಗ್ರನಾದನು.

28. ಕರೆದು ಸಾರಥಿಗರುಹಿದನು ಪು
ಷ್ಕರನ ಬಲ ಕೈಮೀರಿ ಬರುತಿರೆ
ತಿರುಹು ತೇಜಿಯನಿತ್ತಲಿವದಿರನೊರಸಿ ಬೆನ್ನಿನಲಿ
ಕರುಳ ತೆಗೆವೆನೆನುತ ಚಾಪಕೆ
ತಿರುವನೇರಿಸಿ ಸರಳಿನಲಿ ಬೊ
ಬ್ಬಿರಿಯೆ ಧರೆ ತಲ್ಲಣಿಸಿತವನೀಪಾಲ ಕೇಳೆಂದ

ಕರೆದು ಸಾರಥಿಗೆ + ಅರುಹಿದನು = ನಳನು ತನ್ನ ಸಾರಥಿಗೆ ಆದೇಶಿಸಿದನು; ಪುಷ್ಕರನ ಬಲ ಕೈಮೀರಿ ಬರುತಿರೆ = ಪುಷ್ಕರನ ಸೈನ್ಯವು ಅತಿಕ್ರಮಿಸಿ ಬರುತ್ತಿದೆ; ತಿರುಹು = ಇತ್ತ ತಿರುಗಿಸು; ತೇಜಿಯನು + ಇತ್ತಲು + ಇವದಿರನು + ಒರಸಿ = ಕುದುರೆಯನ್ನು ಈ ಕಡೆ ಇವರುಗಳನ್ನು ಇನ್ನಿಲ್ಲದಂತೆ ಒರೆಸಿ ಹಾಕುತ್ತೇನೆ; ಬೆನ್ನಿನಲಿ = ದೇಹದ ಬೆನ್ನುಭಾಗದಿಂದ; ಕರುಳ ತೆಗೆವೆನೆನುತ = ಅವರ ಕರುಳುಗಳನ್ನು ತೆಗೆಯುತ್ತೇನೆ ಎನುತ; ಚಾಪಕೆ = ತನ್ನ ಬಿಲ್ಲಿಗೆ; ತಿರುವನೇರಿಸಿ = ಬಿಲ್ಲಿನ ಹಗ್ಗ ಎದೆಯೇರಿಸಿ; ಸರಳಿನಲಿ = ಬಾಣ ಹೂಡಿ; ಬೊಬ್ಬಿರಿಯೆ ಧರೆ = ಭಯಂಕರವಾಗಿ ಬೊಬ್ಬಿರಿಯಲು, ಭೂಮಿಯು; ತಲ್ಲಣಿಸಿತು + ಅವನೀಪಾಲ ಕೇಳೆಂದ = ಭೂಮಿಯೇ ಭಯಗೊಂಡು ಕಳವಳಿಸಿತು ಅರಸನೇ ಕೇಳು ಎಂದನು.

ಅರಸನೇ ಕೇಳು, ತನ್ನ ರಣಧೀರರು ಕ್ರಮೇಣ ಧೈರ್ಯಗುಂದುತ್ತಿರುವುದನ್ನೂ, ನಿಶ್ಶಕ್ತರಂತೆ ಮರಳುತ್ತಿರುವುದನ್ನು ಕಂಡ ನಳನು ಆ ಕ್ಷಣವೇ ತನ್ನ ಸಾರಥಿಯನ್ನು ಕರೆದು ಪುಷ್ಕರನ ಬಲವು ವಿಪರೀತವಾಗಿ ಅತಿಕ್ರಮಿಸಿ ಬರುತ್ತಿದೆ. ನನ್ನ ಕುದುರೆಯನ್ನು ಇತ್ತ ತಿರುಗಿಸು. ಈಗಲೇ ಇವರೆಲ್ಲರನ್ನೂ ಇನ್ನಿಲ್ಲದಂತೆ ಒರೆಸಿ ಹಾಕುತ್ತೇನೆ. ಅವರ ಕರುಳುಗಳನ್ನು ಬೆನ್ನಕಡೆಯಿಂದ ಹೊರಗೆಡುವುತ್ತೇನೆ; ಎಂದು

ಅಬ್ಬರಿಸುತ್ತ ತನ್ನ ಬಿಲ್ಲನ್ನು ಹೆದೆಯೇರಿಸಿ ಬಾಣವನ್ನು ಹೂಡಿ ಠೇಂಕಾರಯುತವಾಗಿ ಬೊಬ್ಬಿರಿದು ಎಳೆಯಲು, ಆ ಭಯಂಕರತೆಗೆ ಭೂಮಿಯೇ ಹೆದರಿ ಕಳವಳಿಸು ವಂತಾಯಿತು.

29. ಮುರಿದ ಬಲ ಸಂವರಿಸಿಕೊಂಡುದು
ಮೊರೆವ ಕಹಳಾರವದ ಸನ್ನೆಯೊ
ಳುರುಬಿತಾ ಬಲದೊಳಗೆ ಬೆರಸಿತು ನಳನ ಪರಿವಾರ
ಅರಸನಾ ಸಮಯದಲಿ ಹೂಡಿದ
ಸರಳ ಕೆನ್ನೆಗೆ ಸೇದಿ ಬಿಡೆ ಕ
ತ್ತರಿಸಿ ಬಿಸುಟುದು ರಿಪುನೃಪರ ಶಿರಗಳನು ಖಂಡಿಸುತ

ಮುರಿದ ಬಲ = ಹಿಂದಿರುಗುತ್ತಿದ್ದ ಸೈನ್ಯಬಲವು; ಸಂವರಿಸಿಕೊಂಡುದು = ಚೇತರಿಸಿಕೊಂಡಿತು; ಮೊರೆವ ಕಹಳಾರವದ = ಮೊಳಗಿದ ಕಹಳೆಯ ಧ್ವನಿಯು; ಸನ್ನೆಯೊಳು + ಉರುಬಿತು = ನೀಡಿದ ಸಂಕೇತದಿಂದ ಪಡೆಯ ಶೌರ್ಯವು ಮರಳಿ ವಿಜೃಂಭಿಸಿತು; ಆ ಬಲದೊಳಗೆ ಬೆರಸಿತು = ಹೀಗೆ ಪುನಶ್ಚೇತನಗೊಂಡ ಬಲದೊಂದಿಗೆ ನಳನ ಪರಿವಾರವೂ ಬೆನ್ನಟ್ಟಿತು; ಅರಸನು + ಆ ಸಮಯದಲಿ = ಅದೇ ಸಮಯಕ್ಕೆ ಸರಿಯಾಗಿ ನಳಮಹಾರಾಜನು; ಹೂಡಿದ ಸರಳ = ಬಾಣವನ್ನು ಹೂಡಿ; ಕೆನ್ನೆಗೆ ಸೇದಿ ಬಿಡೆ = ಕಿವಿಯವರೆಗೂ ಎಳೆದು ಬಿಡಲು; ಕತ್ತರಿಸಿ ಬಿಸುಟುದು = ಆ ಬಾಣಗಳು ಕತ್ತರಿಸಿ ಚೆಂಡಾಡಿದುವು; ರಿಪುನೃಪರ = ವೈರಿ ರಾಜರ; ಶಿರಗಳನು ಖಂಡಿಸುತ = ತಲೆಗಳನ್ನು ತುಂಡಾಗಿಸುತ್ತ.

ಹಿಂದಿರುಗುತ್ತಿದ್ದ ಸೈನ್ಯಬಲವು ನಳಮಹಾರಾಜನು ಹುರಿದುಂಬಿಸಲು, ದುಪ್ಪಟ್ಟು ಬಲದಿಂದ ಚೇತರಿಸಿಕೊಂಡಿತು. ಮೊರೆಯುತ್ತಿದ್ದ ಕಹಳೆಗಳ ಧ್ವನಿಯು ನೀಡುತ್ತಿದ್ದ ಯುದ್ಧ ವೀರೋತ್ಸಾಹದ ಸಂಕೇತಗಳಿಂದ ನಳನ ಪಡೆಯಲ್ಲಿ ಶೌರ್ಯವು ವಿಜೃಂಭಿಸಿತು. ಹೀಗೆ ಪುನಶ್ಚೇತನಗೊಂಡ ಪಡೆಯು ನಳನ ಇನ್ನಿತರ ಪರಿವಾರ ದೊಂದಿಗೆ ಬೆನ್ನಟ್ಟಿ ಯುದ್ಧೋತ್ಸಾಹವನ್ನು ತೋರಲಾರಂಭಿಸಿದ ಅದೇ ಸಮಯಕ್ಕೆ ಸರಿಯಾಗಿ ನಳನು ಬಿಲ್ಲಿಗೆ ಬಾಣವನ್ನು ಹೂಡಿ ಕಿವಿಯವರೆಗೂ

ನಾರಿಯನ್ನೆಳೆದು ಬಿಡಲು ಬಾಣಗಳು ವೈರಿನೃಪರ ತಲೆಗಳನ್ನು ತುಂಡು ತುಂಡಾಗಿ ಚೆಂಡಾಡಿದವು.

30. ಇಳೆ ಸರಳಮಯವಾಯ್ತು ಕೆಂಡದ
ಮಳೆ ಕರೆದುದೆನೆ ಪುಷ್ಕರನ ಬಲ
ದೊಳಗೆ ಬಿದ್ದುದನೇಕರಿಪುನೃಪಸೈನ್ಯ ಸಾಗರವು
ಮಲೆತವರ ಶಿರಗಳನು ಖಂಡಿಸಿ
ತಲೆಯ ಚೆಂಡಾಡಿದರು ರಥಿಕರು
ಬಲುಗುದುರೆ ಕಾಲಾಳು ನೆಗ್ಗಿತು ನಳನ ಶರಹತಿಗೆ

ಇಳೆ = ಭೂಮಂಡಲವು; ಸರಳಮಯವಾಯ್ತು = ಬಾಣಗಳಿಂದ ತುಂಬಿಹೋಯಿತು; ಕೆಂಡದ ಮಳೆ ಕರೆದುದೆನೆ = ಕೆಂಡದ ಮಳೆ ಸುರಿಯಿತೋ ಎಂದು ಭ್ರಮಿಸುವಂತೆ; ಪುಷ್ಕರನ ಬಲದೊಳಗೆ = ಪುಷ್ಕರನ ಸೇನೆಯ ಮೇಲೆ; ಬಿದ್ದುದು + ಅನೇಕ ರಿಪು ನೃಪಸೈನ್ಯ ಸಾಗರವು = ಆಕ್ರಮಣ ಮಾಡಿತು ಸಾಗರದೋಪಾದಿ ಹರಿದು ಬಂದ ಶತ್ರುಸೈನ್ಯಗಳು; ಮಲೆತವರ = ಇದಿರಿಸಿದವರ; ಶಿರಗಳನು ಖಂಡಿಸಿ = ತಲೆಗಳನ್ನು ತುಂಡರಿಸಿ; ತಲೆಯ ಚೆಂಡಾಡಿದರು = ತಲೆಯನ್ನು ಚೆಂಡಾಟವಾಡಿದರು; ರಥಿಕರು = ರಥಿಕ ಮಹಾಸೇನಾನಿಗಳು; ಬಲುಗುದುರೆ ಕಾಲಾಳು = ಶ್ರೇಷ್ಠವೂ ಬಲಯುತವೂ ಆಗಿದ್ದ ಕುದುರೆಗಳೂ ಕಾಲಾಳುಗಳೂ; ನೆಗ್ಗಿತು = ನೆಗ್ಗಿಹೋಗಿ ನಾಶವಾದುವು; ನಳನ ಶರಹತಿಗೆ = ನಳನ ಬಾಣಗಳ ಹೊಡೆತಕ್ಕೆ.

ನಳ-ಪುಷ್ಕರರ ಕದನವು ಭೀಕರವಾಗಿತ್ತು. ಮರುಜೀವ ಪಡೆದಂತೆ ಉತ್ಸಾಹವು ಗರಿಗೆದರಿದ ನಂತರದ ನಳಮಹಾರಾಜನ ಪಡೆವಳರ ಸಾಹಸಮಯ ಕದನದ ಪರಿಣಾಮವಾಗಿ ಇಡೀ ಭೂಮಂಡಲಕ್ಕೆ ಕೆಂಡದ ಮಳೆಯು ಸುರಿಯಿತೇನೋ ಎಂದು ಭ್ರಮಿಸುವಂತೆ ಭೂಮಿಯು ಬಾಣಗಳಿಂದ ತುಂಬಿಹೋಯಿತು. ಪುಷ್ಕರನ ಸೇನೆಯ ಮೇಲೆ ಸಾಗರದೋಪಾದಿಯಲ್ಲಿ ಹರಿದು ಬಂದ ನಳನ ಸೈನ್ಯವು ಆಕ್ರಮಣ ಮಾಡಿತು. ತಮ್ಮನ್ನು ಇದಿರಿಸಿದವರ ತಲೆಗಳನ್ನು

ತುಂಡು ತುಂಡಾಗಿಸಿ ನಳನ ಮಹಾರಥಿಗಳು ಚಂಡಾಟವಾಡಿದರು. ಶ್ರೇಷ್ಠವೂ ಬಲಯುತವೂ ಆಗಿದ್ದ ಕುದುರೆಗಳೂ ಪದಾತಿ ಸೈನ್ಯವೂ ನಳನ ಬಾಣಾಘಾತಕ್ಕೆ ಸಿಲುಕಿ ನೆಗ್ಗಿಹೋಗಿ ನಾಶವಾದುದು.

31. ತೆರಹುಗೊಟ್ಟೊಳಹೊಗಿಸಿ ಸದೆದನು
ಬರಸಿಡಿಲು ಬಡಿವಂತೆ ರಿಪುಬಲ
ಮುರಿದು ನಿಂದುದು ಗಾಯವಡೆದರು ವೀರಪಟುಭಟರು
ಹುರಿಯೊಡೆದು ಮೈದೆಗೆದು ಸಲೆ ಕೈ
ಮುರಿಯೆ ಕೈದುವ ಬಿಸುಟು ಪಡೆ ಮೊಗ
ದಿರುಹಲೆಚ್ಚನು ಕೊಚ್ಚಿದನು ಪುಷ್ಕರಚತುರ್ಬಲವ

ತೆರೆಹುಗೊಟ್ಟು + ಒಳಹೊಗಿಸಿ = ವೈರಿಸೈನ್ಯವು ಒಳನುಗ್ಗಲು ಅವಕಾಶ ಮಾಡಿಕೊಟ್ಟು ಉಪಾಯದಿಂದ ಅವರು ಒಳನುಗ್ಗುವಂತೆ ಮಾಡಿ; ಸದೆದನು = ಅಪ್ಪಳಿಸಿ ಜಜ್ಜಿದನು; ಬರಸಿಡಿಲು ಬಡಿವಂತೆ = ಬರಸಿಡಿಲು ಬಡಿದಂತಾಗಿ; ರಿಪುಬಲ ಮುರಿದು ನಿಂದುದು = ವೈರಿಬಲವು ಹಿಮ್ಮೆಟ್ಟಿತು; ಗಾಯವಡೆದರು = ಗಾಯಗೊಂಡರು; ವೀರಪಟುಭಟರು = ವೀರಯೋಧರು; ಹುರಿಯೊಡೆದು = ಇದರಿಂದ ಉತ್ಸಾಹಗೊಂಡು; ಮೈದೆಗೆದು = ಇಮ್ಮಡಿ ಹುರುಪಿನಿಂದ; ಸಲೆ ಕೈಮುರಿಯೆ = ಶತ್ರುಗಳ ಕೈಗಳನ್ನು ಮುರಿದುಹಾಕಲು; ಕೈದುವ ಬಿಸುಟು = ಕೈಗಳಲ್ಲಿದ್ದ ಆಯುಧಗಳನ್ನು ಬಿಸಾಡಿ; ಪಡೆ = ಸೈನ್ಯವು; ಮೊಗದಿರುಹಲು + ಎಚ್ಚನು = ಹಿಂದಿರುಗಲು ಅದೇ ಬಾಣಗಳನ್ನು ಪ್ರಯೋಗಿಸಿದನು; ಕೊಚ್ಚಿದನು = ಕೊಚ್ಚಿಹಾಕಿದನು; ಪುಷ್ಕರ ಚತುರ್ಬಲವ = ಪುಷ್ಕರನ ಚತುರ್ಬಲವನ್ನು.

ಚತುರ ಸೇನಾನಿಯಾದ ನಳನು ಯುದ್ಧದ ನಾನಾ ಪಟ್ಟುಗಳನ್ನು ಚೆನ್ನಾಗಿ ಅಭ್ಯಸಿಸಿದವನು. ಪುಷ್ಕರ ಸೈನ್ಯವು ತನ್ನ ಸೈನ್ಯದ ಸುತ್ತುವರಿಕೆಯ ಒಳಗಿರುವಂತೆ ಪ್ರವೇಶಿಸಲು ಅನುವು ಮಾಡಿಕೊಟ್ಟು, ಅವರು ಒಳನುಗ್ಗುತ್ತಿದ್ದಂತೆ ಅವರೆಲ್ಲರನ್ನು ಅಪ್ಪಳಿಸಿ ಜಜ್ಜಿಹಾಕಿದನು. ಆಘಾತಗೊಂಡ ವೈರಿಬಲವು ಬರಸಿಡಿಲು ಬಡಿದಂತಾಗಿ ಹಿಮ್ಮೆಟ್ಟಿತು. ವೀರ ಯೋಧರು ಅಪಾರವಾಗಿ ಗಾಯಗೊಂಡರು. ಇದರಿಂದ ಉತ್ಸಾಹಗೊಂಡ ನಳನ ಪಡೆವಳರು ಇಮ್ಮಡಿ ಹುರುಪಿನಿಂದ ಶತ್ರುಗಳ ಕೈಗಳನ್ನು

ಮುರಿದು ಹಾಕಿದರು. ಶತ್ರುಪಡೆಯು ಕೈಯಲ್ಲಿ ಹಿಡಿದಿದ್ದ ಆಯುಧಗಳನ್ನು ಬಿಸುಟು ಹಿಂದಿರುಗಲು ಸಜ್ಜಾಯಿತು. ಅದೇ ಸಮಯವನ್ನು ನೋಡಿ ನಳನು ಬಾಣ ಪ್ರಯೋಗ ಮಾಡಿ ಪುಷ್ಕರನ ಚತುರ್ಬಲವನ್ನು ಕೊಚ್ಚಿ ಹಾಕಿದನು.

32. ಗಾಳಿ ಮುರಿದೌಕಿದಡೆ ಘನಮೇ
ಘಾಳಿ ನಿಲುವುದೆ ನಿಷಧಪತಿ ಶರ
ಜಾಲದಲಿ ಕಡಿವಡೆದು ಬಿದ್ದರು ರಾಯರಾವುತರು
ಆಳು ಮುರಿದುದು ಕಂಡ ಮುಖದಲಿ
ಹೇಳಲೇನಾನವರ ವಿಧಿಯನು
ಸೋಲದಲಿ ಮನಗುಂದಿ ಹಾಯ್ದರು ಬಿಟ್ಟ ಮಂಡೆಯಲಿ

ಗಾಳಿ ಮುರಿದೌ + ಅವುಕಿದೊಡೆ = ಬಲವಾದ ಗಾಳಿಯು ಅದುಮಿ ಹಿಡಿಯಲು; ಘನಮೇಘಾಳಿ = ಮೋಡಗಳ ಹಿಂಡು; ನಿಲುವುದೆ = ಅದನ್ನೆದುರಿಸಲು ಸಾಧ್ಯವೇ?; ನಿಷಧಪತಿ ಶರಜಾಲದಲಿ = ನಳಮಹಾರಾಜನ ಪಡೆಯು ಬಾಣಗಳ ಜಾಲವನ್ನೇ ಕರೆಯುವ; ಕಡಿವಡೆದು ಬಿದ್ದರು ರಾಯರಾವುತರು = ತುಂಡು ತುಂಡಾಗಿ ಧರಾಶಾಯಿಯಾದರು ರಾಜ ರಾಜರೂ, ರಾವುತರೂ; ಆಳು ಮುರಿದುದು = ವೀರ ಸೇನಾನಿಗಳೂ ಹಿಮ್ಮೆಟ್ಟಿ ಪಲಾಯನ ಮಾಡತೊಡಗಿದರು; ಕಂಡ ಮುಖದಲಿ = ದಿಕ್ಕು ದಿಕ್ಕಿಗೆ; ಹೇಳಲೇನು + ಆನು + ಅವರ ವಿಧಿಯನು = ಅವರ ಶೋಚನೀಯ ಸ್ಥಿತಿಯನ್ನು ಹೇಳಲೇನಿದೆ; ಸೋಲದಲಿ = ಸೋಲಿನಿಂದ; ಮನಗುಂದಿ = ಧೈರ್ಯಗೆಟ್ಟು; ಹಾಯ್ದರು = ಓಡಿಹೋದರು; ಬಿಟ್ಟ ಮಂಡೆಯಲಿ = ತಲೆಯ ಮೇಲೆ ಏನಿದೆಯೆಂಬುದನ್ನು ಗಮನಿಸಿಕೊಳ್ಳುವುದಕ್ಕೂ ವ್ಯವಧಾನವಿಲ್ಲದೆ.

ನಳನ ಪಡೆಯ ವೀರಾವೇಶವಾದ ಕದನ ಚಾತುರ್ಯದ ಮುಂದೆ ಪುಷ್ಕರನ ಪಡೆ ಅತ್ಯಂತ ಹೀನಾಯವಾಗಿ ಸೋತು ಓಡಿಹೋಯಿತು. ಬಲವಾದ ಗಾಳಿಯ ಹೊಡೆತಕ್ಕೆ ಮೋಡಗಳ ಹಿಂಡು ಎದುರಿಸಿ ನಿಲ್ಲಲು ಸಾಧ್ಯವೆ? ನಳಮಹಾರಾಜನ ಪಡೆಯು ಎಡೆಬಿಡದೆ ಪ್ರಯೋಗಿಸಿದ ಬಾಣಗಳ ಜಾಲಕ್ಕೆ ಪುಷ್ಕರನ ಕಡೆಯ ರಾಜರಾಜರೂ,

ರಾವುತರೂ ತುಂಡು ತುಂಡಾಗಿ ನೆಲಕ್ಕೆ ಬಿದ್ದರು. ಅಳಿದುಳಿದ ವೀರ ಸೇನಾನಿಗಳು ಧೈರ್ಯಗೆಟ್ಟು ದಿಕ್ಕಾಪಾಲಾಗಿ ಓಡತೊಡಗಿದರು. ತಮ್ಮ ತಲೆಯ ಮೇಲೆ ಏನಿದೆಯೆಂಬುದನ್ನು ಗಮನಿಸಿಕೊಳ್ಳುವುದಕ್ಕೂ ವ್ಯವಧಾನವಿಲ್ಲದಂತಾದ ಅವರ ಆ ಶೋಚನೀಯ ಸ್ಥಿತಿಯನ್ನಾದರೂ ಏನೆಂದು ಹೇಳುವುದು?

33. ಆರು ಸಾಸಿರ ತೇರುಗಳು ಹದಿ
ನಾರುಸಾಸಿರ ಕರಿಗಳಿಪ್ಪ
ತ್ತಾರುಸಾವಿರ ತುರಗ ಕಾಲಾಳೊಂದು ಲಕ್ಷದಲಿ
ಸೇರಿತಂತಕಪುರಿಗೆ ಸರಳಿನ
ಸಾರದಲಿ ರಿಪುಸೇನೆ ಮುರಿದುದು
ಆರು ಬಲ್ಲರು ಮಿಕ್ಕ ಸೇನೆಯನರಸ ಕೇಳೆಂದ

ಆರು ಸಾಸಿರ ತೇರುಗಳು = ಆರು ಸಾವಿರ ರಥಗಳು; ಹದಿನಾರು ಸಾಸಿರ = ಹದಿನಾರು ಸಾವಿರ; ಕರಿಗಳು + ಇಪ್ಪತ್ತಾರು ಸಾವಿರ ತುರಗ = ಆನೆಗಳು, ಇಪ್ಪತ್ತಾರು ಸಾವಿರ ಕುದುರೆಗಳು; ಕಾಲಾಳು + ಒಂದು ಲಕ್ಷದಲಿ = ಒಂದು ಲಕ್ಷದಷ್ಟು ಪದಾತಿ ಸೈನಿಕರು; ಸೇರಿತು + ಅಂತಕಪುರಿಗೆ = ಯಮನ ಲೋಕಕ್ಕೆ ಸೇರಿದುವು; ಸರಳಿನ ಸಾರದಲಿ = ಬಾಣಗಳ ನಿರಂತರ ಧಾರೆಗೆ ಸಿಲುಕಿ; ರಿಪುಸೇನೆ ಮುರಿದುದು = ಶತ್ರು ಸೈನ್ಯ ಸಂಪೂರ್ಣ ಹಿಮ್ಮೆಟ್ಟಿತು; ಆರು ಬಲ್ಲರು = ಯಾರಿಗೆ ಗೊತ್ತು; ಮಿಕ್ಕ ಸೇನೆಯನು + ಅರಸ ಕೇಳೆಂದ = ಧರ್ಮರಾಯನೇ, ಅಳಿದುಳಿದು ಮಿಕ್ಕಿದ ಸೇನೆಯ ಪಾಡೇನೆಂಬುದನ್ನು ತಿಳಿದವರು ಯಾರು?

ಆರು ಸಾವಿರ ರಥಗಳು ಮುರಿದು ಕೆಡೆದುವು; ಹದಿನಾರು ಸಾವಿರ ಆನೆಗಳೂ, ಇಪ್ಪತ್ತಾರು ಸಾವಿರ ಕುದುರೆಗಳೂ, ಒಂದು ಲಕ್ಷದಷ್ಟು ಪದಾತಿ ಸೈನಿಕದಳ ಮಡಿದು ಯಮಪುರಿಗೆ ಸೇರಿದುವು. ನಳನ ಕಡೆಯವರು ಪ್ರಯೋಗಿಸಿದ ಬಾಣಗಳ ಧಾರಾಕಾರ ಸುರಿಮಳೆಗೆ ಸಿಲುಕಿ ಶತ್ರು ಸೈನ್ಯವು ಹಿಮ್ಮೆಟ್ಟಿತು. ಧರ್ಮರಾಯನೇ ಅಳಿದುಳಿದ ಪುಷ್ಕರಸೇನೆಯ ಪಾಡೇನಾಯಿತೆಂಬುದನ್ನು ತಿಳಿದವರು ಯಾರು? ಎಂದನು ರೋಮಶಮುನಿ.

34. ಮರನ ಹುತ್ತವನೇರಿದರು ಸಂ
ಗರದಿ ಕೈದುವ ಬಿಸುಟು ಸಲೆ ಮೈ
ಮರೆದು ತೇಜಿಯನಿಳಿದು ರಾವ್ತರು ಕೊರಳ ಸಲಹೆನುತ
ಕರವ ಮುಗಿದರು ಜೋದರರು ಕೈ
ಮರೆದು ಕದನದ ಗಾಯದಲಿ ನೊಂ
ದೊರಲಿ ಬಾಯಲಿ ಬೆರಳನಿಟ್ಟಿದ್ದ ವೈರಿ ಪಾಯದಳ

ಮರನ ಹುತ್ತವನೇರಿದರು = ಪುಷ್ಕರನ ಸೇನಾವೀರರನೇಕರು, ಹುತ್ತಗಳನ್ನು, ಮರಗಳನ್ನು ಹತ್ತಿದರು; ಸಂಗರದಿ = ಸಂಗ್ರಾಮದಲ್ಲಿ; ಕೈದುವ ಬಿಸುಟು = ತಮ್ಮ ಕೈಗಳಲ್ಲಿದ್ದ ಆಯುಧಗಳನ್ನು ಬಿಸಾಕಿ; ಸಲೆ ಮೈಮರೆದು = ವಿಪರೀತ ಆಯಾಸದಿಂದ; ತೇಜಿಯನಿಳಿದು = ಕುದುರೆಗಳ ಮೇಲಿನಿಂದ ಇಳಿದು; ರಾವ್ತರು = ರಾಹುತರು; ಕೊರಳ ಸಲಹೆನುತ = 'ಜೀವವನ್ನು ಉಳಿಸಿ' ಎನ್ನುತ್ತ; ಕರವ ಮುಗಿದರು = ಕೈಮುಗಿದು ಬೇಡಿದರು; ಜೋದರರು = ಯೋಧರು; ಕೈ ಮರೆದು = ಕೈ ಮುಗಿದು; ಕದನದ ಗಾಯದಲಿ = ಯುದ್ಧದಲ್ಲಿ ಉಂಟಾದ ಗಾಯಗಳಿಂದ; ನೊಂದು + ಒರಲಿ = ಉಂಟಾದ ನೋವಿನಿಂದ ಅರಚುತ್ತ; ಬಾಯಲಿ ಬೆರಳನಿಟ್ಟಿದ್ದ = ಬಾಯಲ್ಲಿ ಬೆರಳನ್ನು ಕಚ್ಚಿಕೊಂಡು ಶರಣಾಗತಿಯನ್ನು ಬೇಡಿದುವು; ವೈರಿಪಾಯದಳ = ಶತ್ರುಪದಾತಿ ಸೈನ್ಯ.

ಪುಷ್ಕರನ ಸೈನ್ಯವು ದೈನ್ಯಾವಸ್ಥೆಯನ್ನು ತಲುಪಿತ್ತು. ಸೇನಾವೀರರನೇಕರು ನಳನ ಬಾಣಗಳಿಂದ ಘಾತಗೊಳ್ಳುವುದರಿಂದ ಪಾರಾಗಲು ತಾವು ಏನನ್ನು ಹತ್ತುತ್ತಿದ್ದೇವೆ ಎಂಬುದನ್ನು ಲಕ್ಷಿಸುವುದಕ್ಕೂ ವ್ಯವಧಾನವಿಲ್ಲದೆ ಹುತ್ತಗಳನ್ನೇ ಏರಿದರು. ಕೆಲವರು ಮರಗಳನ್ನೇರಿದರು. ಸಮರ ವೀರರಾದರೂ ಪ್ರಾಣದ ಹಂಗಿಲ್ಲದೆ ಹೋರಾಡುವ ಎದೆಗಾರಿಕೆಯನ್ನವರು ಕಳೆದುಕೊಂಡು ಕೈಯಲ್ಲಿದ್ದ ಆಯುಧಗಳನ್ನು ಬಿಸಾಕಿ, ಕುದುರೆಗಳಿಂದ ಕೆಳಗಿಳಿದು ಆಯಾಸದಿಂದ ಬಳಲಿ ಹೋಗಿದ್ದರು. ಕೈ ಮುಗಿದು 'ಜೀವವನ್ನುಳಿಸಿ' ಎಂದು ಬೇಡಿಕೊಳ್ಳುತ್ತ ಯುದ್ಧದಲ್ಲಿ ಉಂಟಾದ ಗಾಯಗಳಿಂದ ನೋಯುತ್ತ ಅರಚುತ್ತ, ಬಾಯಲ್ಲಿ ಬೆರಳಿಟ್ಟು ಕಚ್ಚುತ್ತ ಶರಣಾಗತಿಯನ್ನು ಬೇಡಿದರು.

35. ಮುರಿದು ಬರುತಿದೆ ಜೀಯ ಬಲ ನಿಲ
ಲರಿದು ನಮ್ಮದು ನಳನೃಪಾಲನ
ಸರಹತಿಗೆ ನೆರೆ ಮುಗ್ಗಿ ಕೆಡೆದುದು ತಾರುತಟ್ಟಿನಲಿ
ತರಹರವ ನಾ ಕಾಣೆನೀ ಮೋ
ಹರಕೆ ಗತಿಯೇನೆನಲು ಪುಷ್ಕರ
ಭರದಿ ಕೋಪದೊಳಂದು ಕರೆಸಿದನಾಗ ನಿಜಬಲವ

ಮುರಿದು ಬರುತಿದೆ = ನಮ್ಮ ಸೇನೆಯ ಕದನದಲಿ ಹಿಮ್ಮೆಟ್ಟಿ ಹಿಂದಿರುಗುತ್ತಿದೆ ಜೀಯ; ನಿಲಲು + ಅರಿದು ನಮ್ಮದು = ನಮ್ಮ ಬಲವು ಶತ್ರುಸೇನೆಯ ಎದುರು ನಿಂದು ಹೋರಾಡಲು ಅಸಮರ್ಥವಾಗಿದೆ; ನಳನೃಪನ = ನಳಮಹಾರಾಜನ; ಸರಹತಿಗೆ = ಬಾಣಗಳ ಹೊಡೆತಕ್ಕೆ; ನೆರೆ ಮುಗ್ಗಿ ಕಡೆದುದು = ಎಡವಿ ಜೋಲಿ ಹೊಡೆದು ಬಿದ್ದವು; ತಾರುತಟ್ಟಿನಲಿ = ಚೆದುರಿ ಚೆಲ್ಲಾಪಿಲ್ಲಿಯಾಗಿ; ತರಹರವ ನಾ ಕಾಣೆನು + ಈ ಮೋಹರಕೆ = ಈ ಯುದ್ಧವನ್ನು ಹೇಗೆ ಸೈರಿಸಿಕೊಳ್ಳುವುದೋ ನಾನರಿಯೆ; ಗತಿಯೇನು + ಎನಲು = ಮುಂದೇನು ಮಾಡುವುದು ಎನ್ನಲು; ಪುಷ್ಕರ ಭರದಿ = ಪುಷ್ಕರನು ತ್ವರೆಯಿಂದ; ಕೋಪದೊಳು + ಅಂದು; ಕ್ರೋಧಭರಿತನಾಗಿ; ಕರೆಸಿದನಾಗ ನಿಜಬಲವ = ಮಿಕ್ಕ ಸೈನ್ಯವನ್ನು ಕರೆಸಿದನು.

ಸೋಲಿನ ಭೀತಿಯಲ್ಲಿ ಪುಷ್ಕರನ ಸೈನ್ಯ ಕಂಗೆಟ್ಟು ಹೋಗಿತ್ತು. ಅದನ್ನು ಕಂಡ ಒಬ್ಬನು ಅರಸನಲ್ಲಿಗೆ ಬಂದು ಅರಸನೇ ನಮ್ಮ ಸೈನ್ಯವು ಕದನದಲ್ಲಿ ಎದುರಾಳಿಗಳಿಂದ ಘಾತಗೊಳ್ಳುತ್ತ ಅವರೆದುರು ನಿಂತು ಹೋರಾಡಲು ಅಸಮರ್ಥವಾಗಿದೆ. ಜೀಯ, ನಳಮಹಾರಾಜನ ಬಾಣಗಳ ಹೊಡೆತಕ್ಕೆ ಜೋಲು ಹೊಡೆಯುತ್ತ ಚೆದುರಿ ಚೆಲ್ಲಾಪಿಲ್ಲಿಯಾಗುತ್ತಿದೆ ನಮ್ಮ ಪಡೆ. ಯುದ್ಧದ ಈ ಪರಿಸ್ಥಿತಿಗೆ ಯಾವುದು ಅಂತ್ಯವೋ ಕಾಣೆ. ನಮ್ಮ ಗತಿಯೇನು ಮುಂದೇನು ಮಾಡುವುದು ಎಂದು ಅಸಹಾಯಕತೆಯನ್ನು ತೋಡಿಕೊಳ್ಳಲು ಕನಲಿ ಹೋದ ಪುಷ್ಕರನು ಧೃತಿಗೆಡದೆ ತ್ವರೆಯಿಂದ ಮಿಕ್ಕ ಸೈನ್ಯವನ್ನು ಕರೆಸಿದನು.

ಎಂತಹ ಕೈ ಮೀರುವ ಪರಿಸ್ಥಿತಿಯಲ್ಲೂ ಪುಷ್ಕರನು ವೀರ ಕ್ಷತ್ರಿಯ ನಾಗಿಯೇ ಕಾರ್ಯಪ್ರವೃತ್ತನಾಗುವಂಥವನು ಎಂಬುದಕ್ಕೆ ಈ ಸಂದರ್ಭ ಸಾಕ್ಷಿಯಾಗಿದೆ.

36. ಅರಸ ಕೇಳರಮನೆಗೆ ಬಂದನು
ಉರುತರದ ಕೈದುಗಳ ತರಿಸಿಯೆ
ಧುರವಿಜಯರಿಗೆ ಕರೆಸಿಕೊಟ್ಟನು ಚಾಪಮಾರ್ಗಣವ
ಕರಿತುರಗ ಕಾಲಾಳು ನೆರೆದುದು
ಮೊರೆವ ವಾದ್ಯದ ರಭಸದಲಿ ಸಂ
ಗರಕೆ ಪಯಣವ ಮಾಡುತಿರ್ದನು ನೃಪತಿ ಕೇಳೆಂದ

ಅರಸ ಕೇಳ್ + ಅರಮನೆಗೆ ಬಂದನು = ಧರ್ಮರಾಯನೇ, ಪುಷ್ಕರನು ಆ ಕೂಡಲೇ ತನ್ನ ಅರಮನೆಗೆ ಬಂದನು; ಉರುತರದ ಕೈದುಗಳ = ಉತ್ತಮೋತ್ತಮವಾದ ಆಯುಧಗಳನ್ನು; ತರಿಸಿಯೆ = ತರಿಸಿ; ಧುರವಿಜಯರಿಗೆ = ಯುದ್ಧದಲ್ಲಿ ಹೆಸರಾದ ವೀರಾಧಿವೀರರಿಗೆ; ಕರೆಸಿಕೊಟ್ಟನು = ಆದರದಿಂದ ಕರೆಸಿಕೊಂಡು ನೀಡಿದನು; ಚಾಪಮಾರ್ಗಣವ = ಬಿಲ್ಲು ಬಾಣಗಳನ್ನು; ಕರಿತುರಗ ಕಾಲಾಳು = ಆನೆ, ಕುದುರೆ, ಪದಾತಿ ಸೈನ್ಯಗಳು; ನೆರೆದುದು = ಬಂದು ಸೇರಿದುವು; ಮೊರೆವ = ಮೊಳಗುವ; ವಾದ್ಯದ ರಭಸದಲಿ = ವಾದ್ಯಗಳ ಅಬ್ಬರದಲ್ಲಿ; ಸಂಗರಕೆ = ಯುದ್ಧಕ್ಕೆ; ಪಯಣವ ಮಾಡುತಿರ್ದನು = ತಾನೇ ಸ್ವತಃ ಹೊರಟನು; ನೃಪತಿ ಕೇಳೆಂದ = ದೊರೆಯೇ ಕೇಳು ಎಂದನು.

ದೊರೆಯೇ ಕೇಳು, ಪುಷ್ಕರನು ಚಾರರಿಂದ ಯುದ್ಧಕಣದಲ್ಲಿ ಅವನ ಸೇನೆಯು ಪರಾಜಯದ ಹಂತ ತಲುಪಿದುದನ್ನು ಕೇಳಿ ವ್ಯಗ್ರನಾದನು. ಆ ಕೂಡಲೇ ಅರಮನೆಗೆ ಬಂದು ಯುದ್ಧದಲ್ಲಿ ಸದಾ ವಿಜಯಿಗಳೆಂದು ಹೆಸರಾದ ವೀರಾಧಿ ವೀರರನ್ನು ಕರೆಸಿ ಅವರಿಗೆ ಉತ್ತಮೋತ್ತಮವಾದ ಆಯುಧಗಳನ್ನೂ, ಬಿಲ್ಲುಬಾಣ ಗಳನ್ನೂ ತರಿಸಿಕೊಟ್ಟನು. ಆನೆ, ಕುದುರೆ, ಪದಾತಿ ಸೈನ್ಯಗಳು ಅಬ್ಬರದಿಂದ ಯುದ್ಧೋ ತ್ಸಾಹವನ್ನು ಮೊಳಗಿಸುತ್ತಿರಲು, ಪುಷ್ಕರನು ಸ್ವತಃ ತಾನೇ ಯುದ್ಧಕ್ಕೆ ಸಿದ್ಧವಾಗಿ ಹೊರಟನು.

37. ತೆಗೆದು ಹಿಂದಕೆ ನಿಷಧಪತಿ ಕಾ
ಳಗದಿ ಹಿಡಿಸಿದ ಧರ್ಮಗಹಳೆಯ
ವಿಗಡಪುಷ್ಕರನಿತ್ತ ಕೋಪಾಗ್ನಿಯಲಿ ಖತಿಮಸಗಿ
ಹಗೆಗೆ ಜಯವಾಯ್ತಿಂದಿನಲಿ ತಾ
ಹೊಗುವೆನಹಿತರ ಮುರಿವೆನೆನೆ ಕೈ
ಮುಗಿದು ಬಿನ್ನೈಸಿದನು ವರಮಂತ್ರೀಶ ಪುಷ್ಕರಗೆ

ತೆಗೆದು ಹಿಂದಕ್ಕೆ ನಿಷಧಪತಿ = ಈ ಹಿಂದೆ, ನಿಷಧಾಧಿಪತಿಯಾಗಿದ್ದ ನಳನು; ಕಾಳಗದಿ ಹಿಡಿಸಿದ = ಯುದ್ಧದಲ್ಲಿ ಬಳಸಿದ್ದ; ಧರ್ಮ + ಕಹಳೆಯ = ಧರ್ಮಗಹಳೆಯನ್ನು ತೆಗೆದುಕೊಂಡು; ವಿಗಡ ಪುಷ್ಕರನು + ಇತ್ತ; ಮಹಾಕೆಡುಕನಾದ ಪುಷ್ಕರನು ಇತ್ತಕಡೆ; ಕೋಪಾಗ್ನಿಯಲಿ = ಬೆಂಕಿಯಂತಹ ಕೋಪದಲ್ಲಿ; ಖತಿಮಸಗಿ = ಹೆಚ್ಚು ಹೆಚ್ಚಾದ ಕೋಪದಿಂದ; ಹಗೆಗೆ = ಶತ್ರುವಿಗೆ; ಜಯವಾಯ್ತು + ಇಂದಿನಲಿ = ಇಲ್ಲಿಯವರೆಗೆ ಶತ್ರುವಿಗೆ ಜಯವಾಯಿತು; ತಾ = ನಾನೇ; ಹೊಗುವೆನು + ಅಹಿತರ = ಹೋಗುತ್ತೇನೆ ನಮಗಾಗದ ಶತ್ರುಗಳ; ಮುರಿವೆನು + ಎನೆ = ನಾಶಮಾಡುತ್ತೇನೆ ಎನ್ನಲು; ಕೈ ಮುಗಿದು ಬಿನ್ನೈಸಿದನು = ಅವನಿಗೆ ಕೈ ಮುಗಿದು ವಿನಂತಿಸಿದನು; ವರಮಂತ್ರೀಶ = ಒಬ್ಬ ಉತ್ತಮನಾದ ಮಂತ್ರಿಯು; ಪುಷ್ಕರಗೆ = ಪುಷ್ಕರನಲ್ಲಿ.

ತನ್ನ ವೀರ ಸೈನಿಕರ ಸೋಲು ಪುಷ್ಕರನಲ್ಲಿ ಕೋಪಾಗ್ನಿಯನ್ನು ಹೊತ್ತಿಸಿತು. ಕ್ಷಣ ಕ್ಷಣಕ್ಕೂ ಕೋಪವು ಹೆಚ್ಚುತ್ತಿರಲು, ಈ ಹಿಂದೆ ನಿಷಧಾಧಿ ಪತಿಯಾಗಿದ್ದ, ನಳನು ಕಾಳಗದಲ್ಲಿ ಬಳಸಿದ್ದ ಧರ್ಮಗಹಳೆಯನ್ನು ತೆಗೆದುಕೊಂಡು, “ಶತ್ರುವಿಗೆ ಇಂದು ಜಯವಾಯಿತು. ಇನ್ನು ತಡವಾಗುವುದು ಅನರ್ಥವಾಗುವುದಕ್ಕೆ ದಾರಿ. ಹಾಗಾಗಿ ನಾನೇ ಸ್ವತಃ ಯುದ್ಧಕ್ಕೆ ಹೊರಡುತ್ತೇನೆ” ಎಂದು ಗರ್ಜಿಸುತ್ತ ಹೊರಡಲನುವಾದನು. ಅದನ್ನು ಕಂಡ ಅವನ ಉತ್ತಮ ಮಂತ್ರಿಗಳಲ್ಲೊಬ್ಬ ಅವನಿಗೆ ವಿನಯದಿಂದ ಕೈಮುಗಿದು ಹೀಗೆ ಭಿನ್ನವಿಸಿದನು.

38. ಅರಿಭಯಂಕರ ನೈಷಧನ ಸಂ
ಗರದಿ ಗೆಲುವವರಾರು ದೇವಾ

ಸುರರು ನಿಲಲರಿದರಸ ಮಿಕ್ಕಿನ ನರರ ಪಾಡೇನು
ಮರುಳುತನ ಬೇಡಿನ್ನು ನೃಪನನು
ಕರೆಸಿ ಸಂಧಿಯ ಮಾಡಿ ಜೂಜಿನ
ಮರುವಲಗೆಯಲಿ ಗೆಲುವುದುಚಿತವಿದೆಂದನಾ ಮಂತ್ರಿ

ಅರಿಭಯಂಕರ ನೈಷಧನ = ಶತ್ರುಗಳಿಗೆ ಭಯಂಕರನಾದ ನಳಮಹಾರಾಜ ನನ್ನು; ಸಂಗರದಿ = ಯುದ್ಧದಲ್ಲಿ; ಗೆಲುವವರಾರು = ಯಾರು ಜಯಿಸಲು ಸಾಧ್ಯ?; ದೇವ + ಅಸುರರು = ದೇವರಾಗಲೀ ರಾಕ್ಷಸರಾಗಲೀ; ನಿಲಲರಿದು + ಅರಸ = ರಾಜನೇ, ಅವನೆದುರು ನಿಲ್ಲಲು ಸಾಧ್ಯವಿಲ್ಲ; ಮಿಕ್ಕಿನ ನರರ ಪಾಡೇನು = ಇನ್ನು ಮಿಕ್ಕ ನರಮನುಷ್ಯರ ಪಾಡೇನು?; ಮರುಳುತನ ಬೇಡ + ಇನ್ನು = ಇನ್ನು ಹುಚ್ಚು ಸಾಹಸ ಮಾಡುವುದು ಬೇಡ; ನೃಪನನು = ನಳನನ್ನು; ಕರೆಸಿ = ಆಹ್ವಾನಿಸಿ; ಸಂಧಿಯ ಮಾಡಿ = ಸಂಧಿಯನ್ನು ಮಾಡಿಕೊಳ್ಳಿ; ಜೂಜಿನ = ದ್ಯೂತದ; ಮರುವಲಗೆಯಲಿ = ಮರು ದ್ಯೂತದಲ್ಲಿ; ಗೆಲುವುದು + ಉಚಿತ + ಇದು + ಎಂದನು + ಆ ಮಂತ್ರಿ = ಗೆಲ್ಲುವುದು ಔಚಿತ್ಯಪೂರ್ಣವಾಗಿದೆ ಎಂದನು ಆ ಮಂತ್ರಿ.

ಪುಷ್ಕರನು ಸಿಟ್ಟಿನಿಂದ ಅಬ್ಬರಿಸುತ್ತ ಹೊರಡಲು ಅನುವಾದುದನ್ನು ಅವನ ಉತ್ತಮ ಮಂತ್ರಿಗಳಲ್ಲೊಬ್ಬನು ವಿವೇಕಶಾಲಿಯಾಗಿ ಚಿಂತಿಸಿ, ಅರಸನನ್ನು ಕಂಡು ಹೀಗೆ ಭಿನ್ನವಿಸಿದನು. “ರಾಜನೇ, ನಳನು ಅಸೀಮ ಪರಾಕ್ರಮಿ. ಯುದ್ಧದಲ್ಲಿ ಅವನನ್ನು ಗೆಲುವುದು ಸುಲಭ ಸಾಧ್ಯವಲ್ಲ. ದೇವಾಧಿದೇವತೆಗಳೂ ಅಸುರರೂ ಸಹ ಅವನೆದುರು ನಿಂತು ಜಯಿಸಲಾರರು. ಇನ್ನು ಸಾಮಾನ್ಯ ಮನುಷ್ಯರ ಪಾಡೇನು? ಹಾಗಾಗಿ ಅವನೆದುರು ನಿಂತು ಕಾದುವುದು ಮರುಳುತನವಾದೀತು. ಅದನ್ನು ಬಿಟ್ಟು ಅವನನ್ನು ಮರುದ್ಯೂತಕ್ಕೆ ಆಹ್ವಾನಿಸಿ ಆ ಮೂಲಕ ಗೆಲ್ಲುವುದೇ ಔಚಿತ್ಯ ಪೂರ್ಣವಾದುದು” ಎಂದು ಹೇಳಿದನು.

39. ವೀರಸೇನನ ತನಯ ನಿಷಧನ
ಸೇರಿಹಳು ಜಯಲಕ್ಷ್ಮಿ ಸೇನಾ
ಭಾರದಲಿ ಋತುಪರ್ಣ ಚೈದ್ಯ ವಿದರ್ಭ ಮೊದಲಾದ

ಭೂರಿನೃಪರೋಲೈಸುತಿದೆ ಸರಿ
ಯಾರು ಸಂಗ್ರಾಮದಲಿ ನಳನಲಿ
ಮೀರಿ ಕೈಮಾಡಿದರೆ ತಪ್ಪದು ಮರಣ ನಿನಗೆಂದ

ವೀರಸೇನನ ತನಯ ನಿಷಧನ = ಮಹಾಪರಾಕ್ರಮಿಯೆಂದು ಖ್ಯಾತನಾಗಿದ್ದ ವೀರಸೇನನ ಮಗ ನಿಷಧಾಧಿಪತಿಯಾದ ನಳಮಹಾರಾಜನನ್ನು; ಸೇರಿಹಳು ಜಯಲಕ್ಷ್ಮಿ = ಜಯಲಕ್ಷ್ಮಿಯು ಅವನನ್ನು ಒಲಿದಿದ್ದಾಳೆ; ಸೇನಾಭಾರದಲಿ = ಸೈನ್ಯಬಾಹುಳ್ಯದಲ್ಲಿ; ಋತುಪರ್ಣ ಚೈದ್ಯ ವಿದರ್ಭ ಮೊದಲಾದ = ಋತುಪರ್ಣ, ಚೈದ್ಯ, ವಿದರ್ಭ ಮೊದಲಾದ; ಭೂರಿನೃಪರು + ಓಲೈಸುತಿದೆ = ಮಹಾವೀರನೃಪರು ಅವನನ್ನು ಸಮರ್ಥಿಸುತ್ತಿದ್ದಾರೆ; ಸರಿಯಾರು = ಅವನಿಗೆ ಸರಿಸಾಟಿಯಾದವರು ಯಾರಿದ್ದಾರೆ; ಸಂಗ್ರಾಮದಲಿ = ಯುದ್ಧದಲ್ಲಿ; ನಳನಲಿ = ನಳನೊಂದಿಗೆ; ಮೀರಿ = ವಿರೋಧ ಮಾಡಿಕೊಂಡು; ಕೈಮಾಡಿದರೆ = ಯುದ್ಧಕ್ಕಿಳಿದರೆ; ತಪ್ಪದು ಮರಣ ನಿನಗೆಂದ = ನಿನಗೆ ಮರಣವು ತಪ್ಪದು ಎಂದನು.

"ರಾಜನೇ, ಮಹಾ ಪರಾಕ್ರಮಿ ಎಂದು ಖ್ಯಾತನಾಗಿದ್ದ ವೀರಸೇನನ ಮಗನಾದ ಈ ನೈಷಧಾಧಿಪತಿ ನಳಮಹಾರಾಜನಿಗೆ ಸದಾ ವಿಜಯಲಕ್ಷ್ಮಿಯು ಒಲಿದಿರುತ್ತಾಳೆ. ಅದರೊಂದಿಗೆ ಮಹಾವೀರರಾದ ಋತುಪರ್ಣ, ಚೈದ್ಯ, ಹಾಗೂ ವಿದರ್ಭಾಧಿಪತಿಗಳು ಸದಾ ತಮ್ಮ ಸೇನಾಬಲದೊಂದಿಗೆ ಅವನ ಬೆನ್ನಿಗೆ ರಕ್ಷಣೆಗೂ ಸಮರ್ಥನೆಗೂ ನಿಂತಿರುತ್ತಾರೆ. ಅವನಿಗೆ ಸರಿಸಾಟಿಯಾದವರು ಯಾರಿದ್ದಾರೆ ಯುದ್ಧ ದಲ್ಲಿ? ಅಂಥವನೊಂದಿಗೆ ಈಗ ಯುದ್ಧಕ್ಕಿಳಿದರೆ ನಿನಗೆ ಮರಣ ಶತಸಿದ್ಧ" ಎಂದನು ಮಂತ್ರಿ.

40. ಎನಲು ಕೇಳ್ದಾ ಮಾತಿನಲಿ ಬಂ
ದನು ನಳನ ಕಂಡನು ಮಹೀಪತಿ
ಯೆನಗೆ ನಿಮ್ಮಲಿ ಕದನವೇತಕೆ ಸಾಕದಂತಿರಲಿ
ಜನಪತಿಗಳೀಕ್ಷಿಸಲಿ ಮರುಜೂ
ಜಿನಲಿ ನಿಪುಣರು ನಾವು ನಿಮ್ಮಲಿ
ಮನಕೆ ಹರುಷಿತವಾಗಲಾಡುವೆನೆಂದ ನಸುನಗುತ

ಎನಲು ಕೇಳ್ದು + ಆ ಮಾತಿನಲಿ ಬಂದನು = ಎಂದು ಹೇಳಲು ಆ ಮಾತಿಗೆ ಒಪ್ಪಿದನು; ನಳನ ಕಂಡನು = ನಳನನ್ನು ಹೋಗಿ ಭೇಟಿ ಮಾಡಿದನು; ಮಹೀಪತಿ + ಎನಗೆ = ಭೂಮಂಡಲಾಧೀಶ್ವರನೇ ನನಗೆ; ನಿಮ್ಮಲಿ ಕದನವು + ಏತಕೆ = ನಾನೇಕೆ ಇನ್ನು ನಿನ್ನೊಂದಿಗೆ ಯುದ್ಧ ಮಾಡಲಿ; ಸಾಕು + ಅದು + ಅಂತಿರಲಿ = ಯುದ್ಧದ ಮಾತು ಸಾಕು ಇರಲಿ; ಜನಪತಿಗಳು + ಈಕ್ಷಿಸಲಿ = ಇಲ್ಲಿ ನೆರೆದಿರುವ ರಾಜ ಸಮೂಹವೇ ಸಾಕ್ಷಿಯಾಗಿರಲಿ; ಮರುಜೂಜಿನಲಿ = ಮರು ದ್ಯೂತದಲ್ಲಿ; ನಿಪುಣರು ನಾವು = ನಾವು ಹೇಗಿದ್ದರೂ ಜೂಜಿನಲ್ಲಿ ನಿಪುಣರಾಗಿದ್ದೇವೆ; ನಾವು ನಿಮ್ಮಲಿ = ನಾನು ನಿಮ್ಮೊಂದಿಗೆ; ಮನಕೆ = ಮನಸ್ಸಿಗೆ; ಹರುಷಿತವಾಗಲು + ಆಡುವೆನೆಂದ = ಸಂತೋಷವಾಗುವಂತೆಯೇ ಜೂಜಾಡುತ್ತೇನೆ ಎಂದನು; ನಸುನಗುತ = ನಸುನಗುತ (ಕುಹಕ).

ಮಂತ್ರಿಯ ಮಾತು ಪುಷ್ಕರನ ಮನಸ್ಸಿಗೆ ನಾಟಿತು. ಒಪ್ಪಿಗೆಯಿಂದ ಮಂತ್ರಿಯ ಸಲಹೆಯಂತೆ ಹೋಗಿ ನಳನನ್ನು ಭೇಟಿಮಾಡಿದನು. ಪೃಥ್ವೀವಲ್ಲಭನೇ, ನಮ್ಮೊಳಗೆ ಇನ್ನು ಈ ಕದನವೇತಕೆ? ಇದನ್ನು ಸಾಕು ಮಾಡೋಣ. ಇದರಿಂದ ಇಬ್ಬರಿಗೂ ಯಾವ ಪ್ರಯೋಜನವೂ ಇಲ್ಲ. ಇಲ್ಲಿ ನೆರೆದಿರುವ ಅರಸರ ಸಮೂಹವೇ ಸಾಕ್ಷಿಯಾಗಿ ನೋಡುತ್ತಿರಲಿ. ನಾವಿಬ್ಬರೂ ಹೇಗಿದ್ದರೂ ಜೂಜಿನಲ್ಲಿ ನಿಪುಣ ರಾಗಿದ್ದೇವೆ. ಹಾಗಾಗಿ, ಈಗ ಮರುದ್ಯೂತವಾಡೋಣ. ನಾನು ನಿನ್ನ ಮನಸ್ಸಿಗೆ ಸಂತೋಷವಾಗುವಂತೆಯೇ ಆಡುತ್ತೇನೆ. ಎಂದನು (ಕುಹಕ ನಗೆ) ನಸುನಗುತ.

41. ಎಲವೊ ಕೇಳಿನ್ನಾದುದಾಗಲಿ
ಕಲಹಕಂಜುವೆ ನೀನು ಜೂಜಿನ
ಬಳಕೆಯಲಿ ಬಲ್ಲಿದನು ನಮ್ಮನು ಕರೆದೆ ತಪ್ಪೇನು
ಕಲಹವಾಗಲಿ ಜೂಜದಾಗಲಿ
ಗೆಲುವೆ ನಿನ್ನನು ಕುಟಿಲಹೃದಯದ
ನೆಲೆಯ ಬಲ್ಲೆನು ನಿನಗೆ ಮನವೊಲಿದುದನು ಮಾಡೆಂದ

ಎಲವೋ ಕೇಳು + ಇನ್ನು + ಆದುದು + ಆಗಲಿ = ಎಲವೋ! ಕೇಳು. ಆಗಬೇಕಾದುದು ಏನಿದೆಯೋ ಅದೇ ಆಗಲಿ; ಕಲಹಕಂಜುವೆ ನೀನು = ನೀನು ಯುದ್ಧಕ್ಕೆ ಅಂಜುತ್ತಿದ್ದೀಯೆ; ಜೂಜಿನ ಬಳಕೆಯಲಿ ಬಲ್ಲಿದನು = ಹೇಗೂ ನೀನೂ ಜೂಜಾಟದಲ್ಲಿ ಬಲು ಚತುರನಲ್ಲವೆ?! ನಮ್ಮನ್ನು ಕರೆದೆ ತಪ್ಪೇನು = ನನ್ನನ್ನು ಪ್ರತಿಸ್ಪರ್ಧಿಯನ್ನಾಗಿ ಆಹ್ವಾನಿಸಿದ್ದೀಯೆ ತಪ್ಪೇನೂ ಇಲ್ಲ; ಕಲಹವಾಗಲಿ ಜೂಜು + ಅದು + ಆಗಲಿ = ಅದು ಯುದ್ಧವೋ ಜೂಜೋ ಏನಾದರೂ ಆಗಲಿ; ಗೆಲುವೆ ನಿನ್ನನು = ನಿನ್ನನ್ನು ನಾನು ಗೆಲ್ಲುತ್ತೇನೆ; ಕುಟಿಲ ಹೃದಯದ = ನಿನ್ನ ಕಪಟ ಮನಸ್ಸಿನ ಕುಹಕದಾಟದ; ನೆಲೆಯ ಬಲ್ಲೆನು = ನಡೆ ಎಂಥದೆಂಬುದು ನನಗೆ ತಿಳಿದಿದೆ; ನಿನಗೆ ಮನ + ಒಲಿದುದನು ಮಾಡೆಂದ = ಯುದ್ಧವೋ ದ್ಯೂತವೋ ನಿನಗೆ ಯಾವುದು ಇಷ್ಟವೋ ಅದನ್ನೇ ಮಾಡು ಎಂದನು.

“ಎಲವೋ ಪುಷ್ಕರ, ಏನಾಗಬೇಕೆಂದಿದೆಯೋ ಅದೇ ಆಗಲಿ ನೋಡೋಣ. ನೀನು ಯುದ್ಧ ಮಾಡಲು ಅಂಜುತ್ತೀಯೆ. ಹೇಗೋ ನೀನು ಜೂಜಿನಲಿ ಬಲು ಚತುರನಲ್ಲವೆ? ನನ್ನನ್ನು ಆಡಲು ಆಹ್ವಾನಿಸುತ್ತಿದ್ದೀಯೆ. ಇದರಲ್ಲಿ ತಪ್ಪೇನೂ ಇಲ್ಲ. ಕಲಹವಾಗಲಿ, ಜೂಜಾಗಲಿ ಯಾವುದಿದ್ದರೂ ನಿನ್ನನ್ನು ನಾನು ಗೆಲ್ಲುತ್ತೇನೆ. ನಿನ್ನ ಕಪಟ ಬುದ್ಧಿಯ ನಡೆ ಏನೆಂಬುದನ್ನು ನಾನು ಚೆನ್ನಾಗಿಯೇ ತಿಳಿದಿದ್ದೇನೆ. ಯುದ್ಧವೋ ದ್ಯೂತವೋ ನಿನಗೆ ಯಾವುದು ಇಷ್ಟವೋ ಅದನ್ನೇ ಮಾಡು” ಎಂದನು ನಳ.

42. ಅರಸ ಕೇಳಾ ಪುಷ್ಕರನು ತ
ನ್ನರಮನೆಗೆ ಕರೆತಂದನಾ ಕಲಿ
ಪುರುಷನಿಂದಲಿ ಮುನ್ನ ಗೆಲಿದಗ್ಗಳಿಕೆಯಲಿ ನೃಪನ
ಪಿರಿದು ತಾ ಗೆಲಬಲ್ಲೆನೆಂದಾ
ಪ್ತರನು ಕರೆಸಿದನೋಲಗದಿ ಕು
ಳ್ಳಿರಲು ತಂದರು ಸಾರಿಗಳನಿರಿಸಿದರು ಸಮ್ಮುಖದಿ

ಅರಸ ಕೇಳು + ಆ ಪುಷ್ಕರನು = ಧರ್ಮರಾಯನೇ ಕೇಳು, ಆ ಪುಷ್ಕರನು; ತನ್ನ + ಅರಮನೆಗೆ ಕರೆತಂದನು + ಆ = ನಳಮಹಾರಾಜನನ್ನು ತನ್ನ

ಅರಮನೆಗೆ ಕರೆದುಕೊಂಡು ಬಂದನು; ಆ ಕಲಿಪುರುಷನಿಂದಲಿ = ಆ ಕಲಿಪುರುಷನ ಸಹಾಯದಿಂದ; ಮುನ್ನ = ಈ ಹಿಂದೆ; ಗೆಲಿದ + ಅಗ್ಗಳಿಕೆಯಲಿ = ಗೆದ್ದಿದ್ದ ಹಿರಿಮೆಯಿಂದ; ನೃಪನ = ನಳನನ್ನು; ಪಿಡಿದು ತಾ = ಬಹಳ ಅನಾಯಾಸವಾಗಿ ತಾನು; ಗೆಲ್ಲಬಲ್ಲೆನೆಂದು + ಆಪ್ತರನು = ಗೆಲ್ಲಬಲ್ಲೆನೆಂಬ ಮಹೋತ್ಸಾಹದಿಂದ ತನ್ನ ಆಪ್ತ ಬಳಗವನ್ನು; ಕರೆಸಿದನು + ಓಲಗದಿ ಕುಳ್ಳಿರಲು = ಕರೆಸಿ ಓಲಗವನ್ನು ಕರೆಸಿ ತಾನೂ ಪೀಠಸ್ಥನಾಗಿರಲು; ತಂದರು = ದ್ಯೂತದ ಸರಕುಗಳನ್ನು ತಂದರು; ಸಾರಿಗಳನು + ಇರಿಸಿದರು = ಪಗಡೆಕಾಯಿಗಳನ್ನು ವ್ಯವಸ್ಥಿತಗೊಳಿಸಿದರು; ಸಮ್ಮುಖದಿ = ಆಟಗಾರರು ಮತ್ತು ಆಹ್ವಾನಿತರ ಎದುರು ಕಾಣುವಂತೆ.

ಧರ್ಮರಾಯನೇ ಕೇಳು, ಪುಷ್ಕರನು ಜೂಜಾಡುವುದಕ್ಕೆ ಉತ್ಸಾಹದಿಂದ ತಯಾರಾಗಿ ನಳಮಹಾರಾಜನನ್ನು ತನ್ನ ಅರಮನೆಗೆ ಕರೆತಂದನು. ಹಿಂದೆ ಕಲಿಪುರುಷನ ಸಹಾಯದಿಂದ ತಾನು ದ್ಯೂತವನ್ನು ಗೆದ್ದಿದ್ದ ಹಿರಿಮೆಯ ಗುಂಗಿನಲ್ಲೇ ಈಗಲೂ ಇದ್ದುದರಿಂದ, ನಳನನ್ನು ತಾನು ಬಹಳ ಅನಾಯಾಸವಾಗಿ ಗೆಲ್ಲಬಲ್ಲೆನೆಂದುಕೊಂಡಿದ್ದನು. ಆ ನಂಬಿಕೆಯಿಂದಲೇ ದ್ಯೂತವನ್ನು ವೀಕ್ಷಿಸಲು ತನ್ನ ಆಪ್ತೇಷ್ಟರನ್ನೆಲ್ಲ ಕರೆಸಿ ತಾನೂ ಕುಳ್ಳಿರಲು, ಅರಮನೆಯ ಪರಿಜನರು ಸ್ಪರ್ಧಿಗಳ ನಡುವೆ ದ್ಯೂತಕ್ಕಾಗಿ ಪಗಡೆಕಾಯಿಗಳನ್ನು ತಂದಿರಿಸಿದರು.

43. ನಳನೃಪತಿ ನೀ ಗೆಲಿದೊಡೀ ಭೂ
ಲಲನೆಯನು ತಾ ಬಿಡುವೆ ಸೋತರೆ
ಬಳಿಕ ದಮಯಂತಿಯನು ನನಗೊಪ್ಪಿಸುವುದೆಂದೆನಲು
ಇಳೆಯೊಳಿಹ ಭೂರುಹದ ಹೃದಯದ
ನೆಲೆಯ ಬಲ್ಲಗ್ಗಳಿಕೆಯಲಿ ತಾ
ಗೆಲುವೆನೆಂದೊಪ್ಪಿದನು ಮನದಲಿ ಧೈರ್ಯಪರನಾಗಿ

ನಳನೃಪತಿ = ನಳಮಹಾರಾಜನೇ; ನೀ ಗೆಲಿದೊಡೆ + ನೀನೇನಾದರೂ ಈ ಆಟದಲ್ಲಿ ಗೆದ್ದರೆ; ಭೂಲಲನೆಯನು = ಈ ರಾಜ್ಯ ವನಿತೆಯನ್ನು; ತಾ ಬಿಡುವೆ = ನಾನು ನಿನಗೆ ಬಿಟ್ಟುಕೊಡುತ್ತೇನೆ; ಸೋತರೆ = ನೀನು ಸೋತರೆ; ಬಳಿಕ

ದಮಯಂತಿಯನು = ದಮಯಂತಿಯನ್ನು; ನನಗೊಪ್ಪಿಸುವುದು + ಎಂದು + ಎನಲು = ನನಗೆ ಒಪ್ಪಿಸಿಕೊಡು ಎನ್ನಲು; ಇಳೆಯೊಳು + ಇಹ = ಈ ಭೂಮಿಯಲ್ಲಿರುವ; ಭೂರುಹದ = ಗಿಡಮರಗಳ; ಹೃದಯದ ನೆಲೆಯ = ಸ್ವಭಾವವನ್ನು; ಬಲ್ಲ + ಅಗ್ಗಳಿಕೆಯಲಿ = ವಿದ್ಯೆಯನ್ನು ತಿಳಿದ ಹೆಗ್ಗಳಿಕೆಯಿಂದ; ತಾ ಗೆಲುವೆನು + ಎಂದು + ಒಪ್ಪಿದನು = ತಾನು ಗೆಲ್ಲಬಲ್ಲೆನೆಂದು ಒಪ್ಪಿಕೊಂಡನು; ಮನದಲಿ ಧೈರ್ಯಪರನಾಗಿ = ಮನಸ್ಸಿನೊಳಗೇ ಧೈರ್ಯಹೊಂದಿ.

ಪಂದ್ಯಕ್ಕೆ ಆಹ್ವಾನಿಸಿದ ಪುಷ್ಕರನು ಪಂದ್ಯಕ್ಕೆ ಇಡಬೇಕಾದ ಪಣವನ್ನು ಸೂಚಿಸಿದನು. ನಳಮಹಾರಾಜನೇ, ಪಂದ್ಯದಲ್ಲಿ ನೀನು ಜಯಶಾಲಿಯಾದರೆ, ನಾನು ಈ ರಾಜ್ಯ ವನಿತೆಯನ್ನು ನಿನಗೆ ಬಿಟ್ಟುಕೊಡುತ್ತೇನೆ, ನೀನು ಸೋತರೆ ನನಗೆ ದಮಯಂತಿಯನ್ನು ಒಪ್ಪಿಸಬೇಕು ಎಂದನು. ಋತುಪರ್ಣ ಮಹಾರಾಜನಿಂದ ಗಿಡಮರಗಳ ಹೃದಯದ ಆಗುಹೋಗುಗಳನ್ನು ಅರಿತಿರುವೆನೆಂಬ ಆತ್ಮ ವಿಶ್ವಾಸದಲ್ಲಿ ನಳನು ಪುಷ್ಕರನನ್ನು ತಾನು ಗೆಲ್ಲಬಲ್ಲೆನೆಂದು ಪಣಕ್ಕೆ ಒಪ್ಪಿದನು. ಮನಸ್ಸಿನಲ್ಲಿಯೇ ಧೈರ್ಯ ತಾಳಿ.

ರಾಜ್ಯ ಭೋಗಗಳು, ಹೆಣ್ಣು ಎರಡನ್ನೂ ಯಾವ ಮನುಷ್ಯತ್ವದ ಸ್ಪರ್ಶವೂ ಇಲ್ಲದೆ ಒಂದೇ ಮೌಲ್ಯವೆಂಬಂತೆ ಪಣಕ್ಕಿಡುವ ಗಂಡುಗರ್ವವನ್ನಿಲ್ಲಿ ಕಾಣಬಹುದು.

44. ಹೂಡಿದರು ಸಾರಿಗಳ ನೆತ್ತವ
ನಾಡಿದರು ಮನ ನಲಿದು ಖಾಡಾ
ಖಾಡಿಯಲಿ ದುಗ ಬಾರ ಇತ್ತಿಗವೆಂಬವ ರಭಸದಲಿ
ಬೇಡಿದರೆ ಬೀಳುವುದು ದಾಯದ
ರೂಢಿ ಜಳುಪಿಸೆ ಹೊಳೆವ ದಾಳದ
ರೂಢಿಗಚ್ಚರಿಯಾಗೆ ನಳನೃಪ ಗೆಲಿದು ಬೊಬ್ಬಿರಿದ

ಹೂಡಿದರು ಸಾರಿಗಳ = ಆಟವನ್ನಾರಂಭಿಸಲು ಈರ್ವರೂ ಪಗಡೆಕಾಯಿಗಳನ್ನು ಜೋಡಿಸಿದರು; ನೆತ್ತವನಾಡಿದರು = ಪಗಡೆಯಾಟವನ್ನಾಡಿದರು; ಮನನಲಿದು = ಸಂತೋಷದಿಂದ; ಖಾಡಾಖಾಡಿಯಲಿ = ಯುದ್ಧಾವೇಶದಿಂದಲೂ; ದುಗ ಬಾರ ಇತ್ತಿಗವೆಂಬವ = ಪಗಡೆಯಾಟದಲ್ಲಿ ಬೀಳುವ ಎರಡು – ಹನ್ನೆರಡು

ಮತ್ತು ಮೂರರ ಜೋಡಿ ಎಂಬ ಎಣಿಕೆಗಳನ್ನು; ರಭಸದಲಿ = ಉತ್ಸಾಹದಿಂದಲೆಂಬಂತೆ; ಬೇಡಿದರೆ = ಬೀಳಲಿ ಎಂದು ಕೇಳಿಕೊಡರೆ; ಬೀಳುವುದು = ಬೀಳಲಾರಂಭಿಸಿತು; ದಾಯದ ರೂಢಿ = ಪಗಡೆಯಾಟದ ಒಳರಹಸ್ಯವು; ಜಳುಪಿಸೆ = ಕೈಹತ್ತಲು; ಹೊಳೆವ ದಾಳದ = ಮನಸ್ಸಿಗೆ ಗ್ರಹಿಕೆಗೆ ನಿಲುಕುವ ದಾಳದ; ರೂಢಿಗೆ + ಅಚ್ಚರಿಯಾಗೆ = ರೀತಿ ನೀತಿಗಳು ಅಚ್ಚರಿಯನ್ನು ತರಲು; ನಳನೃಪ = ನಳಮಹಾರಾಜನು; ಗೆಲಿದು ಬೊಬ್ಬಿರಿದ = ಗೆದ್ದು ಹರ್ಷೋದ್ಗಾರ ಮಾಡಿದನು.

ನಳ-ಪುಷ್ಕರರು ಈರ್ವರೂ ಆಟಕ್ಕೆ ಪಗಡೆಗಳನ್ನು ಜೋಡಿಸಿ, ದಾಳಗಳನ್ನೆಸೆದರು. ಯುದ್ಧಾವೇಶದಿಂದಲೂ, ಆನಂದದಿಂದಲೂ ದಾಳಗಳನ್ನು ಬೀಸಲು ನಳನು ಆಗ್ರಹಿಸಿ ಎರಡೆರಡು, ಮೂಮ್ಮೂರು, ಎಂಟು-ಹನ್ನೆರಡು ಎಂದೆಲ್ಲ ಬೇಡಿಕೊಂಡಂತೆ ಸಂಖ್ಯೆಗಳು ಬೀಳತೊಡಗಿದವು. ಅವನಿಗೀಗ ಪಗಡೆಯಾಟದ ಒಳರಹಸ್ಯವೆಲ್ಲ ಕೈ ಹತ್ತಿ ತನ್ನ ಒಳಮನಸ್ಸಿನ ಗ್ರಹಿಕೆಗನುಗುಣವಾಗಿ ಹೊಳೆಯುವ ಸಂಖ್ಯೆಗಳನ್ನು ಬೀಳಿಸಿಕೊಂಡನು. ಅವನಿಗೇ ಅಚ್ಚರಿಯಾಗುವಂತೆ ಗೆಲುವು ಅವನದಾಗಲು ಆಶ್ಚರ್ಯದಿಂದಲೂ, ಸಂತೋಷದಿಂದಲೂ ಬೊಬ್ಬಿರಿದನು.

45. ಖಿನ್ನನಾದನು ಪುಷ್ಕರನು ಹರು
ಷೋನ್ನತಿಯ ಬೀಳ್ಕೊಡಲು ಗುಣಸಂ
ಪನ್ನನೇರಿದ ರತ್ನಸಿಂಹಾನವ ನಳನೃಪತಿ
ಪನ್ನಗಾರಿಧ್ವಜನ ಕೃಪೆ ನಿನ
ಗಿನ್ನು ಸಿದ್ಧಿಸಲೆಂದು ಮುನಿಜನ
ರುನ್ನತದಿ ಕೊಂಡಾಡಿ ಹರಸಿದರೆಲ್ಲ ಧರಣಿಪನ

ಖಿನ್ನನಾದನು ಪುಷ್ಕರನು = ಸೋಲನ್ನು ನಿರೀಕ್ಷಿಸಿರದ ಪುಷ್ಕರನು ದುಃಖದಿಂದ ಚಿಂತೆಗೊಳಗಾದನು; ಹರುಷ + ಉನ್ನತಿಯ ಬೀಳು + ಕೊಡಲು = ಉಕ್ಕೇರಿದ್ದ ಹರ್ಷವು ಮರೆಯಾಗಲು; ಗುಣಸಂಪನ್ನನು + ಏರಿದ = ಗುಣವೇ ಸಂಪತ್ತನ್ನಾಗಿ ಹೊಂದಿದ್ದವನು ಏರಿದನು; ರತ್ನ ಸಿಂಹಾಸನವ = ರತ್ನ ಸಿಂಹಾಸನವನ್ನು; ನಳನೃಪತಿ = ನಳಮಹಾರಾಜನು; ಪನ್ನಗ + ಅರಿ + ಧ್ವಜನ =

ಹಾವಿನ ವೈರಿಯಾದ ಗರುಡನನ್ನು ಧ್ವಜಸಂಕೇತವನ್ನಾಗಿ ಉಳ್ಳ ಕೃಷ್ಣನ; ಕೃಪೆ ನಿನಗಿನ್ನು ಸಿದ್ಧಿಸಲಿ + ಎಂದು = ಕೃಪಾಕಟಾಕ್ಷವು ನಿನಗೆ ದೊರೆಯಲಿ ಎಂದು; ಮುನಿಜನರು + ಉನ್ನತದಿ = ಮುನಿಜನರೆಲ್ಲ ಉಚ್ಚಕಂಠದಲ್ಲಿ; ಕೊಂಡಾಡಿ = ಹೊಗಳಿ; ಹರಸಿದರೆಲ್ಲ = ಆಶೀರ್ವದಿಸಿದರು; ಧರಣಿಪನ = ಧರಣೀಶನಾದ ನಳಮಹಾರಾಜನನ್ನು.

ದ್ಯೂತದಲ್ಲಿ ತಾನು ಗೆದ್ದೇ ಗೆಲ್ಲುವವನು ಎಂಬ ದೃಢವಿಶ್ವಾಸವಿರಿಸಿಕೊಂಡಿದ್ದ ಪುಷ್ಕರನು ಸೋಲನ್ನು ನಿರೀಕ್ಷಿಸಿರಲಿಲ್ಲ. ಹಾಗಾಗಿ ನಳನಿಂದ ಸೋಲುಂಟಾದಾಗ ಅತೀವ ದುಃಖದಿಂದ ಚಿಂತೆಗೊಳಗಾದನು. ಆಪ್ತೇಷ್ಟರೆದುರು ಉಕ್ಕೇರಿದ್ದ ಹರ್ಷವು ತಟ್ಟನೆ ಮರೆಯಾಯಿತು. ಇತ್ತ ಗುಣ ಸಂಪನ್ನನಾದ ನಳಮಹಾರಾಜನು ರತ್ನ ಸಿಂಹಾಸನಾರೂಢನಾಗಲು ಮುನಿವರರು ಪನ್ನಗಾರಿಧ್ವಜನಾದ ಕೃಷ್ಣನ ಕೃಪೆ ನಿನ್ನ ಮೇಲಿರಲಿ ಎಂಬ ಆಶೀರ್ವಚನಗಳಿಂದ ಉಚ್ಚಕಂಠದಲ್ಲಿ ಹರಸಿದರು.

46. ದೇವದುಂದುಭಿ ಮೊಳಗಿದುದು ದಿವಿ
ಜಾವಳಿಗಳಭ್ರದಲಿ ಸಂಧಿಸಿ
ಹೂವಿನಲಿ ಮಳೆಗರೆದರಾಗ ನೃಪಾಲನಂಗದಲಿ
ಕೋವಿದರು ಸುಜನಾವನೀಶರು
ಸೇವಿಸಲು ಧರೆ ನಲಿಯೆ ನೃಪ ರಾ
ಜೀವಲೋಚನನಂತೆ ಸಿಂಹಾಸನದಿ ರಂಜಿಸಿದ

ದೇವದುಂದುಭಿ ಮೊಳಗಿದುದು = ದೇವದುಂದುಭಿಗಳು ಸಂಭ್ರಮ ವೈಭವಗಳನ್ನು ಸಾರಿಸಾರಿ ಮೊಳಗಿಸಿದುವು; ದಿವಿಜಾವಳಿಗಳು + ಅಭ್ರದಲಿ ಸಂಧಿಸಿ = ದೇವದೇವತೆಯರ ಸಮೂಹವು ಆಕಾಶದಲ್ಲಿ ಒಟ್ಟಾಗಿ ನೆರೆದು; ಹೂವಿನಲಿ + ಮಳೆ + ಕರೆದರು + ಆಗ = ಆ ಸಂದರ್ಭದಲ್ಲಿ ಹೂಮಳೆ ಸುರಿಸಿದರು; ನೃಪಾಲನ + ಅಂಗದಲಿ = ನಳಮಹಾರಾಜನ ಮೈಮೇಲೆ; ಕೋವಿದರು = ಪಂಡಿತರು; ಸುಜನ + ಅವನೀಶರು = ಸಜ್ಜನರು, ರಾಜಾಧಿರಾಜರು; ಸೇವಿಸಲು = ನಳನಿಗೆ ಔಚಿತ್ಯಪೂರ್ಣವಾಗಿ ಗೌರವ ಉಪಚಾರಗಳನ್ನು ಮಾಡಲು; ಧರೆ ನಲಿಯೆ =

ಭೂಮಂಡಲ ಸಮಸ್ತವೂ ಸಂಭ್ರಮಿಸಲು; ನೃಪ = ರಾಜನು; ರಾಜೀವ ಲೋಚನನಂತೆ = ಮಹಾವಿಷ್ಣುವಿನಂತೆ; ಸಿಂಹಾಸನದಿ ರಂಜಿಸಿದ = ಸಿಂಹಾಸನದಲ್ಲಿ ಶೋಭಾ ಯಮಾನವಾಗಿ ಉಪಸ್ಥಿತನಿದ್ದನು.

ದೇವದುಂದುಭಿಗಳು ಆ ಸುಸಂದರ್ಭದ ಮಹತ್ವವನ್ನು ಸಾರುವಂತೆ ವೈಭವಪೂರ್ಣವಾಗಿ ಮೊಳಗಿದುವು. ದೇವಾಧಿದೇವತೆಯರು ಆಗಸದಲ್ಲಿ ಗುಂಪು ಗುಂಪಾಗಿ ಸೇರಿ ನಳನಿಗೆ ಹೂಮಳೆ ಕರೆದರು. ಪಂಡಿತರು, ಸಜ್ಜನರು, ರಾಜಾಧಿರಾಜರು ನಳನಿಗೆ ಉಚಿತ ಗೌರವೋಪಚಾರಗಳನ್ನು ಮಾಡಲು, ಭೂಮಂಡಲ ಸಮಸ್ತವೂ ಸಂಭ್ರಮಿಸುತ್ತಿರಲು, ನಳಮಹಾರಾಜನು ಶೋಭಾಯಮಾನವಾಗಿ ಸಿಂಹಾಸನದಲ್ಲಿ ಉಪಸ್ಥಿತನಿದ್ದನು.

47. ಬಂದು ಕಂಡರು ಪುರಜನರು ನಲ
ವಿಂದ ಕಾಣಿಕೆಗೊಟ್ಟು ಸುರಕುಲ
ವೃಂದ ನಲಿಯಲು ಮಂತ್ರಿಬಾಂಧವರೆಲ್ಲ ಕೈಮುಗಿದು
ವಂದಿಸುತ ಕುಳ್ಳಿರಲು ಸಭೆಯಲಿ
ತಂದರಾರತಿಗಳನು ನೃಪಗರ
ವಿಂದಮುಖಿಯರು ಹರುಷದಿಂದೆತ್ತಿದರು ಮನವೊಲಿದು

ಬಂದು ಕಂಡರು ಪುರಜನರು = ಪುರಜನರೆಲ್ಲ ಆಗಮಿಸಿ ನಳನನ್ನು ಕಂಡು; ನಲವಿಂದ ಕಾಣಿಕೆಗೊಟ್ಟು = ಸಂತೋಷಚಿತ್ತರಾಗಿ ಕಾಣಿಕೆಗಳನ್ನಿತ್ತರು; ಸುರಕುಲ ವೃಂದ ನಲಿಯಲು = ದೇವ ಸಂಕುಲದವರೆಲ್ಲರೂ ಮಹಾನಂದದಿಂದ ಕುಣಿದಾಡಿದರು; ಮಂತ್ರಿಬಾಂಧವರೆಲ್ಲ = ಮಂತ್ರಿ ಮಾಗಧರು, ಬಂಧುಬಾಂಧವರೂ ಎಲ್ಲರೂ; ಕೈಮುಗಿದು ವಂದಿಸುತ = ಕೈಮುಗಿದು ನಮಸ್ಕಾರೋಪಚಾರಗಳನ್ನು ಮಾಡಿ; ಕುಳ್ಳಿರಲು ಸಭೆಯಲಿ = ಸಭೆಯಲ್ಲಿ ಕುಳಿತಿರಲು; ತಂದರು + ಆರತಿಗಳನು = ವಿವಿಧ ರೀತಿಯ ಆರತಿಗಳನ್ನು ತಂದು; ನೃಪಗೆ + ಅರವಿಂದಮುಖಿಯರು = ಸುಂದರ ವದನದ ಸುಮಂಗಲಿಯರು ಅರಸನಿಗೆ; ಹರುಷದಿಂದ + ಎತ್ತಿದರು; ಮನವೊಲಿದು = ಮನಸ್ಸಂತೋಷದಿಂದ ಬೆಳಗಿದರು.

ಪುರಜನರೆಲ್ಲ ಬಂದು ನಳನನ್ನು ಕಂಡು ಗೌರವಾದರಗಳಿಂದಲೂ, ಮಹದಾನಂದದಿಂದಲೂ ಕಾಣಿಕೆಗಳನ್ನಿತ್ತರು. ಸುರಸಂಕುಲವು ಸಂತೋಷದಿಂದ ಕುಣಿದಾಡಿತು. ಮಂತ್ರಿ ಮಾಗಧರು, ಬಂಧು ಬಾಂಧವರು ಅರಸನಿಗೆ ಕೈಮುಗಿದು ನಮಸ್ಕಾರೋಪಚಾರಗಳನ್ನು ಸಲ್ಲಿಸಿ ಸಭಾಸೀನರಾದರು. ತದನಂತರದಲ್ಲಿ ಅರಮನೆಯ ಹಿರಿಯ ಮುತ್ತೈದೆಯರು ಸಂತೋಷದಿಂದ ತಮ್ಮರಸನಿಗೆ ವಿವಿಧ ರೀತಿಯ ಆರತಿಗಳನ್ನು ಬೆಳಗಿದರು.

48. ನಲವು ಹಿಂಗಿದ ಪುಷ್ಕರನ ಮನ
ವೊಲಿದು ಮನ್ನಿಸಿ ಕರೆದು ನಳನೃಪ
ಕಲಿಪುರುಷನಿಂದಾದುದುಪಹತಿ ನಿನ್ನ ತಪ್ಪೇನು
ಹಲವ ಹಂಬಲಿಸದಿರು ನಿನ್ನಲಿ
ಚಲವು ನಮಗಿನಿತಿಲ್ಲ ಮುನ್ನವೊ
ಲಿಳೆಯ ಪಾಲಿಸು ನಮ್ಮ ನೀನೋಲಗಿಸು ಹೋಗೆಂದ

ನಲವು ಹಿಂಗಿದ = ಸಂತೋಷವನ್ನೆಲ್ಲ ಕಳೆದುಕೊಂಡು ದುಃಖಿತನಾಗಿದ್ದ; ಪುಷ್ಕರನ ಮನವೊಲಿಸಿ ಮನ್ನಿಸಿ = ಪುಷ್ಕರನನ್ನು ಮನವೊಲಿಸಿ, ಗೌರವಾದರ ಗಳಿಂದ; ಕರೆದು ನಳನೃಪ = ಕರೆತಂದ ನಳನೃಪನು; ಕಲಿಪುರುಷನಿಂದ + ಆದ + ಉಪಹತಿ = ಹಿಂದೆ ಆದುದೆಲ್ಲವೂ ಕಲಿಪುರುಷನ ಮಹಿಮೆಯ ಕಾರಣದಿಂದ ಆದದ್ದು; ನಿನ್ನ ತಪ್ಪೇನು = ಇದರಲ್ಲಿ ನಿನ್ನ ತಪ್ಪೇನೂ ಇಲ್ಲ; ಹಲವ ಹಂಬಲಿಸದಿರು = ಬೇರೆ ಏನೇನೋ ಅಂದುಕೊಳ್ಳಬೇಡ; ನಿನ್ನಲ್ಲಿ ಚಲವು = ನಿನ್ನಲ್ಲಿ ಹಗೆ ಸಾಧಿಸುವಂಥದು ಏನೂ; ನಮಗಿನಿತಿಲ್ಲ = ನನಗೆ ಎಳ್ಳಷ್ಟೂ ಇಲ್ಲ; ಮುನ್ನವೋಲ್ + ಇಳೆಯ ಪಾಲಿಸು = ನೀನು ಮುಂಚಿನಂತೆಯೇ ನಿನ್ನ ರಾಜ್ಯವನ್ನು ಪಾಲಿಸು; ನಮ್ಮ ನೀನು + ಓಲಗಿಸು = ನಮ್ಮನ್ನು ಗೌರವಿಸುತ್ತಿರು; ಹೋಗು + ಎಂದ = ಹೋಗು ಎಂದನು.

ಸೋತ ಪುಷ್ಕರನು ಸಂತೋಷವನ್ನು ಕಳೆದುಕೊಂಡು ದುಃಖಿತ ನಾಗಿದ್ದುದನ್ನು ಕಂಡ ನಳಮಹಾರಾಜನು ಅವನ ಮನವೊಲಿಸಿ ಸಮಾಧಾನಮಾಡಿ ಗೌರವಯುತವಾಗಿ ಕರೆತಂದನು. “ಹಿಂದೆ ನಡೆದುದೆಲ್ಲವೂ ಕಲಿಪುರುಷನ

ಮಹಿಮೆಯ ಕಾರಣದಿಂದಾದುದು. ಇದರಲ್ಲಿ ನಿನ್ನ ತಪ್ಪೇನು ಇಲ್ಲ. ಬೇರೆ ರೀತಿಯಲ್ಲಿ ಏನೇನನ್ನೋ ಚಿಂತಿಸದಿರು. ನಿನ್ನಲ್ಲಿ ಕೋಪಗೊಳ್ಳುವುದೋ ಅಥವಾ ಹಗೆ ಸಾಧಿಸುವುದೋ ಯಾವುದೂ ಎಳ್ಳಷ್ಟೂ ನನ್ನಲ್ಲಿಲ್ಲ. ನೀನು ಮೊದಲಿನಂತೆಯೇ ನಿನ್ನ ರಾಜ್ಯವನ್ನಾಳಿಕೊಂಡಿರು. ನಮ್ಮನ್ನು ಗೌರವಿಸುತ್ತಿರು'' ಎಂದು ಹೇಳಿ ಕಳುಹಿದನು.

49. ಎನಲು ಲಜ್ಜಿತನಾಗಿ ಪುಷ್ಕರ
ವಿನಯದಲಿ ತಾನೆರಗಿ ನಿಮ್ಮಡಿ
ವನಜದೆಡೆಗಪರಾಧಿಯಾದೆನಗಾವ ಗತಿಯಹುದೊ
ಜನಪ ಸಲಹು ಕೃತಘ್ನನನು ಸ
ಜ್ಜನಶಿರೋಮಣಿ ನೀನು ಗುಣಹೀ
ನನನು ಕೃಪೆಯಲಿ ರಕ್ಷಿಸೆಂದೆರಗಿದನು ಪದಯುಗಕೆ

ಎನಲು = ಎಂದು ಹೇಳಲು; ಲಜ್ಜಿತನಾಗಿ = ನಾಚಿ; ಪುಷ್ಕರ ವಿನಯದಲಿ = ಪುಷ್ಕರನು ವಿನೀತನಾಗಿ; ತಾನೆರಗಿ = ನಳನ ಪಾದಗಳಿಗೆ ನಮಸ್ಕರಿಸಿ; ನಿಮ್ಮಡಿ = ನಿಮ್ಮ ಪಾದ; ವಜನದ + ಎಡೆಗೆ + ಅಪರಾಧಿಯಾದ + ಎನಗೆ + ಆವ = ಕಮಲಗಳಲ್ಲಿ ಅಪರಾಧಿಯಾದ ನನಗೆ ಯಾವ; ಗತಿಯಹುದೊ = ಗತಿ ಬರುವುದೋ; ಜನಪ = ಜನಾಧಿಪತಿಯೇ; ಸಲಹು = ಕಾಪಾಡು; ಕೃತಘ್ನನನು = ನೀಚನನ್ನು; ಸಜ್ಜನ ಶಿರೋಮಣಿ = ಸಜ್ಜನರಲ್ಲಿ ಶ್ರೇಷ್ಠನೇ; ನೀನು ಗುಣಹೀನನನು = ಕೆಟ್ಟವನಾದ ನನ್ನನ್ನು; ಕೃಪೆಯಲಿ = ಕರುಣೆಯಿಂದಲಿ; ರಕ್ಷಿಸು + ಎಂದು + ಎರಗಿದನು = ರಕ್ಷಿಸು ಎಂದು ನಮಸ್ಕರಿಸಿದನು; ಪದಯುಗಕೆ = ನಳನ ಪಾದಗಳಿಗೆ.

ನಳನ ಉದಾರ ಗುಣವನ್ನು ಕಂಡು ಪುಷ್ಕರನಿಗೆ ನಾಚಿಕೆಯಾಯಿತು. ವಿನೀತನಾಗಿ ನಳನ ಪಾದಗಳಿಗೆ ನಮಸ್ಕರಿಸಿ ''ನಿಮ್ಮ ಪಾದಾರವಿಂದಗಳಿಗೆ ವಂದಿಸುತ್ತೇನೆ. ಅಪರಾಧಿಯಾದ ನನಗೆ ಯಾವ ಗತಿ ಬರುತ್ತದೆಯೋ! ಜನಾಧಿಪತಿಯೇ, ನನ್ನನ್ನು ಕರುಣೆಯಿಂದ ಕಾಪಾಡು ನಾನು ನೀಚನಾದೆ. ಉಪಕಾರ

ಸ್ಮರಣೆಯಿಲ್ಲದ ಗುಣಹೀನನಾದ ನನ್ನನ್ನು ಸಜ್ಜನನೂ ಶ್ರೇಷ್ಠನೂ ಆದ ನೀನು ರಕ್ಷಿಸು" ಎನ್ನುತ್ತಾ ನಳಮಹಾರಾಜನ ಎರಡೂ ಪಾದಗಳಿಗೆ ಬಿದ್ದು ನಮಸ್ಕರಿಸಿದನು.

50. ತನುವ ಸೈಗೆಡೆದಿಹನನೆಬ್ಬಿಸಿ
ಜನಪನೆಂದನು ಪೂರ್ವಫಲ ಸಂ
ಜನಿಸಿತಿದಕಿನ್ನಾರು ಮಾಡುವುದೇನುಯೆನುತವನ
ವಿನಯವಚನಕೆ ಮೆಚ್ಚಿ ಕೊಟ್ಟನು
ಕನಕಮಣಿಭೂಷಣಗಳನು ಕಾಂ
ಚನವರೂಥವನಿತ್ತು ಮನ್ನಿಸಿ ಕಳುಹಿದನು ಮನೆಗೆ

ತನುವ = ದೇಹವನ್ನು; ಸೈ + ಕೆಡೆದಿಹನನು + ಎಬ್ಬಿಸಿ = ನೆಲಕ್ಕೆ ಚಾಚಿ ನಮಸ್ಕರಿಸಿದವನನ್ನು ಮೇಲಕ್ಕೆಬ್ಬಿಸಿ; ಜನಪನೆಂದನು = ಜನಾಧಿಪತಿಯಾದ ನಳನೆಂದನು; ಪೂರ್ವಫಲ = ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮದ ಫಲವು; ಸಂಜನಿಸಿತು + ಇದಕೆ + ಇನ್ನಾರು = ಈ ರೀತಿಯಲ್ಲಿ ಸಂಭವಿಸಿದೆ ಇದಕೆ ಇನ್ನು ಯಾರು; ಮಾಡುವುದೇನು + ಎನುತ + ಅವನ = ಏನು ಮಾಡಲು ಸಾಧ್ಯ ಎಂದು ಸಂತೈಸುತ್ತ ಅವನ; ವಿನಯವಚನಕೆ = ವಿನಯಪೂರ್ವಕ ನುಡಿಗಳಿಗೆ; ಮೆಚ್ಚಿ ಕೊಟ್ಟನು = ಸಂತೋಷಗೊಂಡು ಕೊಟ್ಟನು; ಕನಕಮಣಿಭೂಷಣಗಳನು = ಮಣಿಖಚಿತವಾದ ಚಿನ್ನಾಭರಣಗಳನ್ನು; ಕಾಂಚನ ವರೂಥವನು + ಇತ್ತು = ಚಿನ್ನದ ರಥವನ್ನು ಉಡುಗೊರೆಯಾಗಿ ನೀಡಿ; ಮನ್ನಿಸಿ = ಗೌರವಿಸಿ; ಕಳುಹಿದನು ಮನೆಗೆ = ಮನೆಗೆ ಕಳುಹಿಸಿಕೊಟ್ಟನು.

ನೆಲದಲ್ಲಿ ಮೈಚಾಚಿ ನಮಸ್ಕರಿಸಿದ ಪುಷ್ಕರನನ್ನು ಕೈ ಹಿಡಿದು ಮೇಲಕ್ಕೆಬ್ಬಿಸಿ ಜನಾಧಿಪತಿ ನಳಮಹಾರಾಜನೆಂದನು. ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಫಲವು ಈ ಜನ್ಮದಲ್ಲಿ ಈ ರೀತಿ ಸಂಭವಿಸಿದೆ. ಇದಕ್ಕೆ ಯಾರು ಏನು ಮಾಡಲು ಸಾಧ್ಯವಿಲ್ಲ ಎಂದು ಸಂತೈಸುತ್ತ, ಪುಷ್ಕರನ ವಿನಯಪೂರ್ವಕ ನುಡಿಗಳಿಗೆ ಮೆಚ್ಚಿ ಅವನಿಗೆ ಅಪಾರವಾದ ಮಣಿಖಚಿತ ಚಿನ್ನಾಭರಣಗಳನ್ನು ಕಾಣಿಕೆಯಾಗಿ ಕೊಟ್ಟದ್ದಲ್ಲದೆ, ಚಿನ್ನದ ರಥವೊಂದನ್ನೂ ಉಡುಗೊರೆಯಾಗಿ ನೀಡಿ ಗೌರವಾದರಗಳಿಂದ ಸತ್ಕರಿಸಿ ಮನೆಗೆ ಕಳುಹಿಸಿಕೊಟ್ಟನು.

51. ಕರೆಸಿದನು ಬಾಂಧವರ ಮಂತ್ರೀ
ಶ್ವರರ ವಿದ್ವಾಂಸರ ನೃಪಾಲರ
ಕರಣಿಕರನಾಪ್ತರನು ಹಿರಿಯರ ವೀರಪಟುಭಟರ
ವರಸಚಿವ ಸಾಮಂತ ಮಲ್ಲರ
ತರುಣಿಯರ ನಟ ಗಾಯಕರ ಸುಜ
ನರಿಗೆ ಮನ್ನಿಸಿ ಕೊಟ್ಟನುಡುಗೊರೆಗಳ ಮಹೀಪಾಲ

ಕರೆಸಿದನು ಬಾಂಧವರ = ನಳನು ಕರೆಸಿದನು ತನ್ನ ಬಂಧು ಬಾಂಧವರನ್ನೂ; ಮಂತ್ರೀಶ್ವರರ = ಮಂತ್ರಿಮುಖ್ಯರನ್ನೂ; ವಿದ್ವಾಂಸರ = ವಿದ್ವಾಂಸ ರನ್ನೂ; ನೃಪಾಲರ = ಭೂಮಂಡಲಾಧೀಶ್ವರರನ್ನೂ; ಕರಣಿಕರನು + ಆಪ್ತರನು = ಲೆಕ್ಕಿಗರು ಮತ್ತು ಶಾನುಭೋಗರನ್ನೂ, ಆಪ್ತ ಹಿತೈಷಿಗಳನ್ನೂ; ಹಿರಿಯರ = ಗುರುಹಿರಿಯರನ್ನೂ; ವೀರ ಪಟುಭಟರ = ವೀರಾಧಿವೀರ ಸೇನಾನಿಗಳನ್ನೂ; ವರಸಚಿವ = ಶ್ರೇಷ್ಠ ಸಚಿವಗಣವನ್ನೂ; ಸಾಮಂತ = ಸಾಮಂತರನ್ನೂ; ಮಲ್ಲರ = ಜಗಜಟ್ಟಿಗಳನ್ನೂ; ತರುಣಿಯರ = ಯುವತಿಯರನ್ನೂ; ನಟ = ನಟರನ್ನೂ; ಗಾಯಕರ = ಹಾಡುಗಾರರನ್ನೂ; ಸುಜನರಿಗೆ = ಸಮಾಜದ ಸಜ್ಜನರನ್ನೂ; ಮನ್ನಿಸಿ, ಗೌರವಿಸಿ, ಕೊಟ್ಟನು + ಉಡುಗೊರೆಗಳ = ಉಡುಗೊರೆಗಳನ್ನಿತ್ತು ಕಳುಹಿದನು; ಮಹೀಪಾಲ = ಭೂಪತಿ ನಳಮಹಾರಾಜನು.

ನಳಮಹಾರಾಜನು ಆಹ್ವಾನವಿತ್ತು ಕರೆಕಳುಹಿಸಿ ಕರೆಸಿಕೊಂಡನು ತನ್ನ ಬಂಧು ಬಾಂಧವರನ್ನೂ, ಮಂತ್ರಿ ಮುಖ್ಯರನ್ನೂ, ವಿದ್ವಾಂಸರನ್ನೂ, ಭೂಮಂಡ ಲಾಧೀಶ್ವರರನ್ನೂ, ಲೆಕ್ಕಿಗರನ್ನೂ, ಶಾನುಭೋಗರನ್ನೂ, ಆಪ್ತ ಹಿತೈಷಿಗಳನ್ನೂ, ಗುರುಹಿರಿಯರನ್ನೂ, ವೀರಾಧಿವೀರ ಸೇನಾನಿಗಳನ್ನೂ, ಸಚಿವ ಸಮೂಹವನ್ನೂ, ಸಾಮಂತ ರಾಜರನ್ನೂ, ಜಗಜಟ್ಟಿಗಳನ್ನೂ, ಸ್ತ್ರೀ ಸಮೂಹವನ್ನೂ, ನಟರನ್ನೂ, ಗಾಯಕರನ್ನು, ಸಮಾಜದ ಇನ್ನಿತರ ಸಜ್ಜನರನ್ನೂ, ಗೌರವಾದರಗಳಿಂದ ಸತ್ಕರಿಸಿ, ಸೂಕ್ತ ಉಡುಗೊರೆಗಳನ್ನು ಕೊಟ್ಟು ಕಳುಹಿಸಿದನು.

52. ಕನಕರತ್ನಪ್ರಭೆಯ ಸಿಂಹಾ
ಸನದೊಳೊಪ್ಪಿದನುಭಯಪಾರ್ಶ್ವದಿ

ವನಿತೆಯರು ಚಿಮ್ಮಿದರು ಸಿತಚಾಮರಪವನಾ ನೃಪಗೆ
ಜನಪತಿಗಳಿಕ್ಕೆಲದಲಿ ಮಂತ್ರಿ
ಜನ ಪುರೋಹಿತ ಮಲ್ಲ ಗಾಯಕ
ವನಿತೆಯರ ಗಡಣದಲಿ ಮೆರೆದುದು ನೃಪತಿಯಾಸ್ಥಾನ

ಕನಕರತ್ನಪ್ರಭೆಯ = ತದನಂತರ ನಳನು ಆಸ್ಥಾನಮಂಟಪದಲ್ಲಿ ಶೋಭಾಯಮಾನವಾದ ಚಿನ್ನದ; ಸಿಂಹಾಸನದೊಳು + ಒಪ್ಪಿದನು + ಉಭಯ ಪಾರ್ಶ್ವದಿ = ಸಿಂಹಾಸನದಲ್ಲಿ ಉಪಸ್ಥಿತನಾದನು ಅವನ ಎರಡೂ ಪಕ್ಕಗಳಲ್ಲಿ; ವನಿತೆಯರು = ಸ್ತ್ರೀಯರು; ಚಿಮ್ಮಿದರು = ಬೀಸಿದರು; ಸಿತಚಾಮರವನು + ಆ ನೃಪಗೆ = ಬೆಳ್ಳಂಬಿಳುಪಿನ ಚಾಮರವನ್ನು ಆ ರಾಜನಿಗೆ; ಜನಪತಿಗಳು + ಇಕ್ಕೆಲದಲಿ = ಅವನ ಎರಡೂ ಬದಿಗಳಲ್ಲಿ; ಮಂತ್ರಿಜನ = ಮಂತ್ರಿಗಳ ಸಮೂಹವು; ಪುರೋಹಿತ = ಪುರೋಹಿತ; ಮಲ್ಲ = ಮಲ್ಲರೂ; ಗಾಯಕ = ಗಾಯಕರೂ; ವನಿತೆಯರ = ಸ್ತ್ರೀಯರೂ; ಗಡಣದಲಿ = ಸಮೂಹದಲ್ಲಿ; ಮೆರೆದುದು = ಶೋಭಿಸಿತು; ನೃಪತಿಯ + ಆಸ್ಥಾನ = ನಳನ ಅಸ್ಥಾನ ಸಭೆಯು.

ತದನಂತರ, ನಳಮಹಾರಾಜನು ರತ್ನಮಣಿಖಚಿತ ಸಿಂಹಾಸನಾ ರೂಢನಾಗಿರಲು, ಅವನ ಉಭಯ ಪಾರ್ಶ್ವಗಳಲ್ಲಿ ಸ್ತ್ರೀಯರು ನಿಂತು, ಬೆಳ್ಳಂಬಿಳುಪಿನ ಚಮರೀ ಮೃಗದಲ್ಲಿ ಮಾಡಿದ ಮನೋಹರವಾದ ಚಾಮರಗಳನ್ನು ಬೀಸಿದರು. ಅಂತೆಯೇ ಅವನ ಇಕ್ಕೆಲಗಳಲ್ಲಿ ಮಂತ್ರಿಜನರೂ, ಸ್ತ್ರೀಯರೂ, ಮಲ್ಲರೂ, ಗಾಯಕರೂ, ನೆರೆದಿರಲು ನಳಮಹಾರಾಜನ ಆಸ್ಥಾನಸಭೆಯು ಶೋಭಾಯ ಮಾನವಾಗಿ ಕಣ್ಸೆಳೆಯಿತು.

53. ಚಿಂತೆ ಬಲಿದು ವಿದರ್ಭದಲಿ ದಮ
ಯಂತಿ ಕೆಳದಿಯರೊಡನೆ ನುಡಿದಳು
ಪಂತದಲಿ ಪುಷ್ಕರನ ಗೆಲಿದನೋ ಸೋತನೋ ನೃಪತಿ
ಕಂತುಪಿತನ ಕೃಪಾವಲೋಕನ
ವೆಂತಿಹುದೊ ತನಗೆಂಬ ಸಮಯದೊ
ಳಂತರಿಸದೈತಂದರಲ್ಲಿಗೆ ನಳನ ಮಂತ್ರಿಗಳು

ಚಿಂತೆ ಬಲಿದು ವಿದರ್ಭದಲಿ = ಇತ್ತ ವಿದರ್ಭ ದೇಶದಲ್ಲಿ ಚಿಂತೆಯು ಹೆಚ್ಚಾಗಿ; ದಮಯಂತಿ ಕೆಳದಿಯರೊಡನೆ = ದಮಯಂತಿಯು ಗೆಳತಿಯರೊಂದಿಗೆ; ನುಡಿದಳು = ಹೇಳಿದಳು; ಪಂತದಲಿ = ದ್ಯೂತದಲ್ಲಿ; ಪುಷ್ಕರನ + ಗೆಲಿದನೋ + ಸೋತನೋ + ನೃಪತಿ = ನಳಮಹಾರಾಜನು ಸೋತನೋ, ಗೆದ್ದನೋ ಪುಷ್ಕರನನ್ನು; ಕಂತುಪಿತನ = ಮನ್ಮಥ ಜನಕನಾದ ಕೃಷ್ಣನ; ಕೃಪಾವಲೋಕನವು = ಕೃಪಾಕಟಾಕ್ಷ; ಎಂತಿಹುದೋ = ಹೇಗಿದೆಯೋ; ತನಗೆಂಬ = ಎಂಬ; ಸಮಯದೊಳು + ಅಂತರಿಸದೆ + ಐತಂದರಲ್ಲಿಗೆ ನಳನ ಮಂತ್ರಿಗಳು = ಚಿಂತೆಯಲ್ಲಿದ್ದ ಸಮಯದಲ್ಲಿಯೇ ತಡಮಾಡದೆ ಅಲ್ಲಿಗೆ ಬಂದರು ನಳನ ಮಂತ್ರಿಗಳು.

ಇತ್ತ ವಿದರ್ಭ ದೇಶದಲ್ಲಿದ್ದ ದಮಯಂತಿಗೆ ನಳನ ಕುರಿತಾದ ಯಾವುದೇ ಸುದ್ದಿ ಸಮಾಚಾರಗಳು ಇನ್ನೂ ತಲುಪಿರಲಿಲ್ಲ. ಹಾಗಾಗಿ ದಮಯಂತಿಯು ಚಿಂತೆಗೊಳಗಾಗಿದ್ದಳು. ತನ್ನ ಗೆಳತಿಯರೊಂದಿಗೆ ತನ್ನ ಮನದಳಲನ್ನು ತೋಡಿಕೊಂಡಳು. “ದ್ಯೂತದಲ್ಲಿ ನಳಮಹಾರಾಜನು ಗೆದ್ದನೋ, ಸೋತನೋ ತಿಳಿಯಲಿಲ್ಲ. ಆ ಕೃಷ್ಣನ ಕೃಪಾಕಟಾಕ್ಷವು ತನ್ನ ಮೇಲೆ ಹೇಗಿರುವುದೋ ಏನೋ” ಎಂದು ಚಿಂತಿಸುತ್ತಿದ್ದ ಅದೇ ಸಮಯಕ್ಕೆ ಸರಿಯಾಗಿ ಸ್ವಲ್ಪವೂ ತಡಮಾಡದೆ ನಳಮಹಾರಾಜನ ಮಂತ್ರಿಗಳು ಅಲ್ಲಿಗೆ ಆಗಮಿಸಿದರು.

54. ತಾಯೆ ಬಿನ್ನಹವಿಂದು ನಮ್ಮನು
ರಾಯನಟ್ಟಿದ ನಿಮ್ಮ ಬಳಿಗೆ ನಿ
ರಾಯಸದಿ ಪುಷ್ಕರನ ಗೆಲಿದನು ಸಕಲರಾಜ್ಯವನು
ನ್ಯಾಯದಲಿ ಕೈಕೊಂಡು ನಿಮ್ಮನು
ಪ್ರೀಯದಿಂ ಬರಹೇಳಿದನು ಕಮ
ಲಾಯತಾಂಬಕಿ ಬಿಜಯಮಾಡೆಂದೆರಗಿದರು ಪದಕೆ

ತಾಯೆ ಬಿನ್ನಹವು + ಇಂದು = ತಾಯೀ ಒಂದು ಸಂದೇಶವಿದೆ ಈ ದಿನ; ನಮ್ಮನು ರಾಯನಟ್ಟಿದ ನಿಮ್ಮ ಬಳಿಗೆ = ನಮ್ಮನ್ನು ನಿಮ್ಮ ಬಳಿಗೆ ಮಹಾರಾಜನು ಕಳುಹಿದ್ದಾನೆ; ನಿರಾಯಸದಿ = ಅನಾಯಾಸವಾಗಿ; ಪುಷ್ಕರನ ಗೆಲಿದನು = ನಳನು

ಪುಷ್ಕರನನ್ನು ಗೆದ್ದನು; ಸಕಲ ರಾಜ್ಯವನು ನ್ಯಾಯದಲಿ ಕೈಕೊಂಡು = ನ್ಯಾಯಬದ್ಧವಾಗಿ ಸಕಲ ಸಾಮ್ರಾಜ್ಯ ಭೋಗ ಭಾಗ್ಯಗಳನ್ನು ಪಡೆದುಕೊಂಡು; ನಿಮ್ಮನು ಪ್ರೀಯದಿಂ = ನಿಮ್ಮನ್ನು ಸಂತೋಷದಿಂದ; ಬರಹೇಳಿದನು = ಬರುವಂತೆ ಹೇಳಿ ಕಳುಹಿದ್ದಾರೆ; ಕಮಲಾಯತ + ಅಂಬಕಿ = ಕಮಲದಂತೆ ವಿಶಾಲವಾದ ಕಣ್ಣುಳ್ಳವಳೇ; ಬಿಜಯಮಾಡು + ಎಂದು + ಎರಗಿದರು = ಹೊರಡುವಂಥವಳಾಗು ಎನ್ನುತ್ತ ನಮಸ್ಕರಿಸಿದರು; ಪದಕೆ = ದಮಯಂತಿಯ ಪಾದಗಳಿಗೆ.

ಮಂತ್ರಿಗಳು ದಮಯಂತಿಗೆ ನಳಮಹಾರಾಜನ ಸ್ಥಿತಿಗತಿಗಳನ್ನು ಕುರಿತು ವರದಿ ಮಾಡಿದರು. “ತಾಯೇ, ನಿಮಗೊಂದು ಸಂದೇಶವಿದೆ. ಈ ದಿನ ನಿಮ್ಮ ಬಳಿಗೆ ನಮ್ಮನ್ನು ನಳಮಹಾರಾಜನು ಕಳುಹಿದ್ದಾನೆ. ರಾಜನು ದ್ಯೂತದಲ್ಲಿ ಪುಷ್ಕರನನ್ನು ಅನಾಯಾಸವಾಗಿ ಗೆದ್ದಿದ್ದಾನೆ. ನ್ಯಾಯಬದ್ಧವಾಗಿ ಸಕಲ ರಾಜ್ಯ ಭೋಗಭಾಗ್ಯಗಳನ್ನು ಪಡೆದುಕೊಂಡಿದ್ದಾನೆ. ನಿಮ್ಮನ್ನು ಸಂತೋಷದಿಂದ ಅಲ್ಲಿಗೆ ಬರಬೇಕೆಂದು ಹೇಳಿ ಕಳುಹಿದ್ದಾನೆ. ಆದ್ದರಿಂದ ನೀನು ಈಗಿಂದೀಗಲೇ ಅವನಿರುವೆಡೆಗೆ ಹೊರಡುವಂಥ ವಳಾಗು” ಎನ್ನುತ್ತ ದಮಯಂತಿಯ ಪಾದಗಳಿಗೆ ಎರಗಿದರು.

55. ಕೇಳಿ ಹರುಷಿತೆಯಾದಳವರಿಗೆ
ಪಾಲಿಸಿದಳಾಭರಣವಸ್ತುವ
ಲೋಲಲೋಚನೆ ಬಂದು ತಂದೆಗೆ ನಮಿಸಿ ವಿನಯದಲಿ
ನಾಳೆ ಪಯಣವ ಮಾಡೆ ನಿಷಧನೃ
ಪಾಲನಲ್ಲಿಗೆ ತನ್ನ ಕಳುಹೆನೆ
ಬಾಲಕಿಯ ನುಡಿಗೇಳಿ ತೆಗೆದಪ್ಪಿದನು ಭೀಮನೃಪ

ಕೇಳಿ = ಸಿಹಿ ಸುದ್ದಿಯನ್ನಾಲಿಸಿದ ದಮಯಂತಿಯು; ಹರುಷಿತೆಯಾದಳು + ಅವರಿಗೆ = ಸಂತೋಷಚಿತ್ತಳಾಗಿ ಅವರಿಗೆ; ಪಾಲಿಸಿದಳು + ಆಭರಣ ವಸ್ತುವ = ದಯಪಾಲಿಸಿದಳು ಆಭರಣಗಳನ್ನು ಉತ್ತಮ ವಸ್ತ್ರಾದಿಗಳನ್ನು; ಲೋಲಲೋಚನೆ = ಸುಂದರಿಯಾದ ದಮಯಂತಿಯು (ಲೋಲ = ಚಲನಶೀಲವಾದ, ಲೋಚನ = ಕಣ್ಣು) ಬಂದು ತಂದೆಗೆ ನಮಿಸಿ = ಎದ್ದು ಬಂದು ತಂದೆಗೆ ನಮಸ್ಕರಿಸಿ; ವಿನಯದಲಿ = ವಿನೀತಳಾಗಿ; ನಾಳೆ ಪಯಣವ ಮಾಡೆ = ನಾಳೆ ಪ್ರಯಾಣವನ್ನು

ಕೈಗೊಳ್ಳಲು; ನಿಷಧ ನೃಪಾಲನಲ್ಲಿಗೆ = ನಿಷಧರಾಜನಿರುವೆಡೆಗೆ; ತನ್ನ ಕಳುಹೆನೆ = ನನ್ನನ್ನು ಕಳುಹಿಕೊಡು ಎಂದು ಕೇಳಲು; ಬಾಲಕಿಯ ನುಡಿಕೇಳಿ = ಮಗಳಿಂದ ನಳಮಹಾ ರಾಜನ ಕುರಿತ ವಿವರಗಳನ್ನು ಕೇಳಿ; ತೆಗೆದಪ್ಪಿದನು = ಅವಳನ್ನು ಸಂತೋಷಾ ದರಗಳಿಂದ ಅಪ್ಪಿಕೊಂಡನು; ಭೀಮನೃಪ = ಭೀಮರಾಜನು.

ಚಿಂತಿತಳಾಗಿದ್ದ ದಮಯಂತಿಯು ಮಂತ್ರಿಗಳಿಂದ ಸಿಹಿಸುದ್ದಿಯನ್ನಾಲಿಸಿ ಸಂತೋಷಚಿತ್ತಳಾಗಿ ಸಡಗರ ಸಂಭ್ರಮಗಳಿಂದ ಅವರಿಗೆ, ಆಭರಣಗಳನ್ನು ಉತ್ತಮ ವಸ್ತ್ರಾದಿಗಳನ್ನು ದಯಪಾಲಿಸಿದಳು. ಬಳಿಕ ಬಂದು ತಂದೆಗೆ ವಿನಯ ಪೂರ್ವಕವಾಗಿ ನಮಸ್ಕರಿಸಿ ನಾಳೆ ಪ್ರಯಾಣವನ್ನು ಕೈಗೊಳ್ಳಲು, ನಳನೆಡೆಗೆ ನನ್ನನ್ನು ಕಳುಹಿಸಿಕೊಡಿ ಎಂದು ಭಿನ್ನವಿಸಲು, ಅವಳಿಂದ ನಳನ ಕುರಿತಾದ ಎಲ್ಲ ಶುಭಸಮಾಚಾರಗಳನ್ನು ಕೇಳಿ ತಿಳಿದ ಭೀಮನೃಪಾಲನು ಪ್ರೀತಿಯಿಂದಲೂ ಸಂತೋಷಾದರಗಳಿಂದಲೂ ಮಗಳನ್ನು ಅಪ್ಪಿಕೊಂಡನು.

56. ತೆಗೆಸಿದನು ಭಂಡಾರದಲಿ ಬಗೆ
ಬಗೆಯ ವಸ್ತುವ ಸುಭಟರಿಗೆ ಝುಗ
ಝುಗಿಪ ಹೊನ್ನಾಯುಧವ ನವರತ್ನಗಳ ತೊಡಿಗೆಗಳ
ಸುಗುಣೆಯರು ಮೊದಲಾದ ಪರಿವಾ
ರಗಳಿಗಿತ್ತನು ಪಯಣದಲಿ ತೇ
ರುಗಳ ಶೃಂಗರಿಸಿದರು ಬಿರುದಿನ ಸಿಂಧಗಳ ನೆಗಹಿ

ತೆಗೆಸಿದನು ಭಂಡಾರದಲಿ = ಸಂತೋಷ ಸಂಭ್ರಮಗಳಿಂದ ತೆಗೆಸಿದನು ಭಂಡಾರದಲ್ಲಿದ್ದ; ಬಗೆಬಗೆಯ ವಸ್ತುವ= ನಾನಾ ಬಗೆಯ ವಸ್ತು ವೈವಿಧ್ಯವನ್ನು; ಸುಭಟರಿಗೆ = ತನ್ನ ವೀರ ಸೈನಿಕರಿಗೆ; ಝುಗಝುಗಿಪ = ಹೊಳೆಹೊಳೆಯುವ; ಹೊನ್ನ + ಆಯುಧವ = ಚಿನ್ನದ ಆಯುಧಗಳನ್ನು; ನವರತ್ನಗಳ ತೊಡಿಗೆಗಳ = ನವರತ್ನಖಚಿತವಾದ ಆಭರಣಗಳನ್ನು; ಸುಗುಣೆಯರು ಮೊದಲಾದ = ಸದ್ಗುಣಿಯರೇ ಮೊದಲಾದ; ಪರಿವಾರಗಳಿಗೆ + ಇತ್ತನು = ಪರಿವಾರದವರಿಗೆ ನೀಡಿದನು; ಪಯಣದಲಿ = ಪ್ರಯಾಣಕ್ಕಾಗಿ; ತೇರುಗಳ ಶೃಂಗರಿಸಿದರು =

ರಥಗಳನ್ನು ಅಲಂಕೃತಗೊಳಿಸಿದರು; ಬಿರುದಿನ ಸಿಂಧಗಳ ನೆಗಹಿ = ಬಿರುದು ಬಾವಲಿಗಳ ಸಂಕೇತಗಳನ್ನುಳ್ಳ ಬಾವುಟಗಳನ್ನು ಕಟ್ಟಿ.

ಮಗಳ ಜೀವನವು ಸುಮುಖವಾದ ಸ್ಥಿತಿಯನ್ನು ತಲುಪಿದುದು ಭೀಮ ನೃಪಾಲನಿಗೆ ಅತ್ಯಂತ ಸಂತೋಷವನ್ನು ನೆಮ್ಮದಿಯನ್ನು ತಂದಿತು. ಆದರಾಭಿ ಮಾನಗಳಿಂದ ತನ್ನ ಅರಮನೆಯ ಪರಿವಾರಕ್ಕೆ ಕಾಣಿಕೆಗಳನ್ನು ನೀಡಲುದ್ಯುಕ್ತನಾಗಿ, ಅರಮನೆಯ ಭಂಡಾರದಲ್ಲಿದ್ದ ನಾನಾ ಬಗೆಯ ವಸ್ತು ವೈವಿಧ್ಯಗಳನ್ನು ಹೊರತೆಗೆಯಿಸಿದನು. ತನ್ನ ವೀರ ಸೈನಿಕರಿಗೆ ಝಗಮಗಿಸುವ ಚಿನ್ನದ ಆಯುಧಗಳನ್ನು ನೀಡಿದನು. ಅರಮನೆಯ ಪರಿವಾರದ ಹೆಂಗಳೆಯರಿಗೆ ನಾನಾ ರೀತಿಯ ರತ್ನಖಚಿತವಾದ ಚಿನ್ನಾಭರಣಗಳನ್ನಿತ್ತನು. ಮರುದಿನದ ಪ್ರಯಾಣಕ್ಕಾಗಿ ಅರಮನೆಯ ಸಿಬ್ಬಂದಿಯು ರಥವನ್ನು ಸಿದ್ಧಗೊಳಿಸಿದರು. ರಥಕ್ಕೆ ಭೀಮರಾಜನ ಬಿರುದು ಬಾವಲಿಗಳನ್ನು ಸಂಕೇತಿಸುವ ಬಾವುಟಗಳನ್ನು ಕಟ್ಟಿ ಶೃಂಗರಿಸಿದರು.

57. ಬಿಗುಹನೇರಿಸಿ ಹಯಗಳನು ರೆಂ
ಚೆಗಳ ಹಮ್ಮಿದರಾನೆಯಲಿ ಸ
ತ್ತಿಗೆಗಳನು ಪಲ್ಲೈಸಿದರು ಮೇಲೆಸೆವ ಕಳಶದಲಿ
ಸೊಗಸುದೋರುವ ಭಟರ ನೆರೆ ಕೈ
ದುಗಳ ಹೊರಹಿನ ನೃಪರ ಬಳಿಯಲಿ
ನೆಗಹಿ ಬೀಸುವ ಚೌರಿಗಳ ಸಂಭ್ರಮದೊಳೊದಗಿದರು

ಬಿಗುಹನೇರಿಸಿ ಹಯಗಳನು = ಕುದುರೆಗಳಿಗೆ ಜೀನುಗಳನ್ನು ಅಳವಡಿಸಿ; ರೆಂಚೆಗಳ = ಯುದ್ಧಕವಚಗಳನ್ನು; ಹಮ್ಮಿದರು + ಆನೆಯಲಿ = ಆನೆಗಳಿಗೆ ತೊಡಿಸಿದರು; ಸತ್ತಿಗೆಗಳನು = ರಾಜಲಾಂಛನದ ಛತ್ರಿಗಳನ್ನು; ಪಲ್ಲೈಸಿದರು = ಸಿಗಿಸಿದರು; ಮೇಲೆಸೆವ ಕಳಶದಲಿ = ರಥದ ಮೇಲ್ಭಾಗದಲ್ಲಿದ್ದ ರಮಣೀಯವಾದ ಕಳಶದಲ್ಲಿ; ಸೊಗಸುದೋರುವ ಭಟರ = ಹೊಳೆಹೊಳೆಯುತ್ತಿದ್ದ ವೀರ ಸೈನಿಕರ; ನೆರೆ ಕೈದುಗಳ = ಆಯುಧಗಳ; ಹೊರಹಿನ = ಉತ್ಸಾಹದ ಮೆರಗಿನ; ನೃಪರ ಬಳಿಯಲಿ = ರಾಜನ ಅಕ್ಕಪಕ್ಕಗಳಲ್ಲಿ; ನೆಗಹಿ ಬೀಸುವ = ಮೇಲೆತ್ತಿ ಬೀಸುವ;

ಚೌರಿಗಳ = ಚಾಮರಗಳ; ಸಂಭ್ರಮದೊಳು + ಒದಗಿದರು = ಸಂಭ್ರಮದಲ್ಲಿ ತೊಡಗಿದರು.

ದಮಯಂತಿಯನ್ನು ನಿಷಧನಗರಿಗೆ ಕಳುಹಿಸಿಕೊಡುವ ಸಂಭ್ರಮದ ತಯಾರಿಯು ಮುಂದುವರಿಯಿತು. ಕುದುರೆಗಳಿಗೆ ಜೀನುಗಳನ್ನು ಅಳವಡಿಸಿದರು. ಆನೆಗಳಿಗೆ ಯುದ್ಧಕವಚಗಳನ್ನು ತೊಡಿಸಿ ಸಿಂಗರಿಸಿದರು. ರಥದ ಮೇಲ್ಭಾಗದಲ್ಲಿನ ರಮಣೀಯವಾದ ಕಳಶದಲ್ಲಿ ರಾಜಲಾಂಛನಗಳುಳ್ಳ ಛತ್ರಿಗಳನ್ನು ಸಿಗಿಸಿದರು. ವೀರಾಧಿವೀರ ಸೈನಿಕರು ಕೈಗಳಲ್ಲಿ ಹೊಳೆಹೊಳೆಯುವ ಆಯುಧಗಳನ್ನು ಹಿಡಿದರು. ಈ ಮೆರಗಿನ ಉತ್ಸಾಹವುಕ್ಕುವ ಸಂಭ್ರಮದಲ್ಲಿ ರಾಜನ ಅಕ್ಕಪಕ್ಕಗಳಲ್ಲಿ ಚಾಮರಗಳನ್ನು ಮೇಲೆತ್ತಿ ಬೀಸುವ ಸಂಭ್ರಮದಲ್ಲಿ ತೊಡಗಿದರು.

58. ಮಣಿರಥಂಗಳ ನಡುವೆ ಸುಳಿವಂ
ದಣದ ಸಾಲಿನ ಮಧ್ಯದಲಿಯುರ
ವಣಿಪ ಮತ್ತಗಜಂಗಳಲಿ ಮಾವುತರ ಕಳಕಳದ
ಕುಣಿವ ತೇಜಿಯ ರಾವುತರ ಸಂ
ದಣಿಗಳಲಿ ಚತುರಂಗಬಲವಿ
ಟ್ಟಣಿಸಿ ನಡೆದುದು ಸಾಲುಸತ್ತಿಗೆಗಳ ವಿಡಾಯಿಯಲಿ

ಮಣಿರಥಂಗಳ ನಡುವೆ = ಮಣಿಖಚಿತವಾದ ರಥಗಳ ನಡುವೆ; ಸುಳಿವ ಅಂದಣದ ಸಾಲಿನ = ಸುಳಿಯುವ ಪಲ್ಲಕ್ಕಿಗಳ ಸಾಲುಗಳ; ಮಧ್ಯದಲಿ + ಉರವಣಿಪ = ಮಧ್ಯದಲ್ಲಿ ಕಂಗೊಳಿಸುವ; ಮತ್ತಗಜಂಗಳಲಿ = ಮದ್ದಾನೆಗಳೊಂದಿಗೆ; ಮಾವುತರ ಕಳಕಳದ + ಮಾವುತರ ಕಲಕಲಶಬ್ದವೂ; ಕುಣಿವ ತೇಜಿಯ = ಕುಣಿತದ ಹೆಜ್ಜೆಹಾಕುವ ಕುದುರೆಗಳ; ರಾವುತರ = ಸವಾರರ; ಸಂದಣಿಗಳಲಿ = ಸಮೂಹದಲ್ಲಿ; ಚತುರಂಗಬಲವು + ಇಟ್ಟಣಿಸಿ = ಚತುರಂಗ ಬಲವು ದಟ್ಟವಾಗಿ ನೆರೆದು; ನಡೆದುದು = ನಡೆದವು; ಸಾಲು ಸತ್ತಿಗೆಗಳ = ಸಾಲುಸಾಲಾದ ಛತ್ರಿಗಳ ಮೆರವಣಿಗೆಯೊಂದಿಗೆ; ವಿಡಾಯಿಯಲಿ + ಶೋಭಾಯಮಾನವಾಗಿ.

ಮೆರವಣಿಗೆ ಹೊರಟಿತು. ಸಾಲುಸಾಲಾಗಿ ಹೊರಟ ಮಣಿಖಚಿತ ರಥಗಳ ನಡುನಡುವೆ ಸುಳಿವ ಪಲ್ಲಕ್ಕಿಗಳ ಸಾಲುಗಳು ಕಣ್ಣಿಗೆ ಹಿತವಾಗಿ ಮೆರೆಯುತ್ತಿದ್ದುವು. ಮದ್ದಾನೆಗಳ ಗುಂಪಿಗೆ ನಿರ್ದೇಶಿಸುವ ಮಾವುತರ ಕಲಕಲಶಬ್ದ, ಉತ್ಸಾಹದಿಂದ ಕುಣಿತದ ಹೆಜ್ಜೆಯಲ್ಲಿ ಹೊರಟ ಕುದುರೆಗಳ ಹಾಗೂ ರಾವುತರ ಶಬ್ದ ಸಮೂಹದಲ್ಲಿ ಚತುರಂಗ ಬಲವೂ ದಟ್ಟವಾಗಿ ಕಿಕ್ಕಿರಿದು ಹೊರಟಿದ್ದುವು. ಇವೆಲ್ಲಕ್ಕೂ ಶೋಭೆಯನ್ನು ತಂದಿರಿಸಿದ್ದುದು ಸಾಲುಸಾಲಾದ ರಾಜ ಲಾಂಛನಗಳಿದ್ದ ಛತ್ರಿಗಳ ಸಾಲು. ಹೀಗೊಂದು ಸೊಗಯಿಸುವ ಮೆರವಣಿಗೆಯು ನಿಷಧಕ್ಕೆ ಹೊರಟಿತು.

59. ನಾರಿಯರ ಸಂದಣಿಯು ನೆರೆದುದು
ತೇರಿನಲಿ ಕೆಲರಂದಣದಿ ಕೆಲ
ರೇರಿದರು ವಾಜಿಗಳ ಗಜಕಂಧರದ ಗದ್ದುಗೆಯ

ಸೇರಿ ನಡೆದರು ಮುಂದೆ ಘನಗಂ
ಭೀರವಾದ್ಯದ ರಭಸ ತಾನದು
ಭೋರಿಡಲು ಹೊರವಂಟಳಂಗನೆ ಸಕಲ ವಿಭವದಲಿ

ನಾರಿಯರ ಸಂದಣಿಯು = ಸ್ತ್ರೀಸಮೂಹವು; ನೆರೆದುದು ತೇರಿನಲಿ = ತೇರಿನಲ್ಲಿ ಗುಂಪುಗುಂಪಾಗಿ ಹತ್ತಿತು; ಕೆಲರು + ಅಂದಣದಿ = ಕೆಲವರು ಪಲ್ಲಕ್ಕಿಗಳನ್ನೇರಿದರು; ಕೆಲರು + ಏರಿದರು ವಾಜಿಗಳ = ಕೆಲವರು ಕುದುರೆಗಳನ್ನು ಹತ್ತಿದರು; ಗಜಕಂಧರದ ಗದ್ದುಗೆಯ = ಆನೆಯ ಬೆನ್ನ ಮೇಲೆ ಹಾಸಿದ್ದ ಪೀಠದ ಮೇಲೆ ಹತ್ತಿ ಕುಳಿತವರು ಕೆಲವರು; ಸೇರಿ ನಡೆದರು ಮುಂದೆ = ಎಲ್ಲರೂ ಹೀಗೆ ಒಂದಾಗಿ ಸೇರಿ ಮುನ್ನಡೆದರು; ಘನಗಂಭೀರವಾದ್ಯದ ರಭಸ = ಅಬ್ಬರದಿಂದ ಮೊರೆಯುವ ಘನಗಂಭೀರ ವಾದ್ಯಗಳು; ತಾನದು ಭೋರಿಡಲು = ಮೊಳಗಲು; ಹೊರವಂಟಳು + ಅಂಗನೆ = ನಿಷಧನಗರಿಯ ಅಭಿಮುಖವಾಗಿ ಹೊರಟಳು ದಮಯಂತಿ; ಸಕಲ ವಿಭವದಲಿ = ಸಕಲ ರಾಜ ವೈಭವಗಳೊಂದಿಗೆ.

ನಿಷಧನಗರಕ್ಕಭಿಮುಖವಾಗಿ ಸಕಲ ರಾಜ ವೈಭವದೊಂದಿಗೆ ಹೊರಟ ನಳನ ರಾಣಿಯೊಂದಿಗೆ ಸ್ತ್ರೀ ಸಮೂಹವೂ ಗುಂಪು ಸೇರಿತು. ಕೆಲವರು ರಥಗಳಲ್ಲಿ

ಗುಂಪುಗುಂಪಾಗಿ ಹತ್ತಿ ಕುಳಿತರು. ಕೆಲವರು ಪಲ್ಲಕ್ಕಿಗಳನ್ನು ಏರಿದರು. ಕೆಲವರು ಕುದುರೆಗಳನ್ನು ಹತ್ತಿ ಕುಳಿತರೆ ಮತ್ತೆ ಕೆಲವರು ಆನೆಯ ಬೆನ್ನ ಮೇಲೆ ಹಾಸಿದ್ದ ಪೀಠದ ಮೇಲೆ ಹತ್ತಿ ಕುಳಿತರು. ಹೀಗೆ ಸ್ತ್ರೀ ಸಂದೋಹವನ್ನು ಘನಗಂಭೀರ ವಾದ್ಯಗಳ ಮಹಾ ಅಬ್ಬರದ ಮೊಳಗುವಿಕೆಯನ್ನು ಮುಂದಿಟ್ಟುಕೊಂಡು ದಮಯಂತಿಯು ಸಕಲ ವೈಭವದಲ್ಲಿ ಹೊರಟಳು.

60. ಬಂದಳಾ ದಮಯಂತಿ ದೇವ ಮು
ಕುಂದ ರಕ್ಷಿಸುಯೆನುತ ತನ್ನಯ
ನಂದನರ ಸಹಿತೇರಿದಳು ಮಣಿಮಯವರೂಥವನು
ಹಿಂದೆ ಮುಂದಿಕ್ಕೆಲದ ನಾರೀ
ವೃಂದ ನಡೆಯಲು ಮನದ ಹರ್ಷಾ
ನಂದದಲಿ ನಡೆತಂದು ಹೊಕ್ಕಳು ನಿಷಧಪಟ್ಟಣವ

ಬಂದಳು + ದಮಯಂತಿ = ಬಂದಳು ದಮಯಂತಿ; ದೇವ ಮುಕುಂದ ರಕ್ಷಿಸು + ಎನುತ = ದೇವಾ, ಮುಕುಂದ, ಕಾಪಾಡು ಎಂದು ಪ್ರಾರ್ಥಿಸಿಕೊಳ್ಳುತ್ತ; ತನ್ನಯ ನಂದನರ = ತನ್ನ ಮಕ್ಕಳ; ಸಹಿತ + ಏರಿದಳು = ಸಹಿತ ಹತ್ತಿ ಕುಳಿತಳು; ಮಣಿಮಯ ವರೂಥವನು = ಮಣಿರತ್ನಮಯ ಖಚಿತವಾದ ರಥವನ್ನು; ಹಿಂದೆ ಮುಂದೆ ಇಕ್ಕೆಲದ = ಹಿಂದೆ ಮುಂದೆ ಮತ್ತು ರಥದ ಎರಡು ಕಡೆಗಳಲ್ಲಿ; ನಾರೀ ವೃಂದ ನಡೆಯಲು = ಅರಮನೆಯ ಸ್ತ್ರೀ ಸಮೂಹವು ನಡೆದು ಬರುತ್ತಿರಲು; ಮನದ ಹರ್ಷ + ಆನಂದದಲಿ = ಮನಸ್ಸಿನಲ್ಲಿ ಉಕ್ಕೇರಿದ ಸಂತೋಷ, ಸಂಭ್ರಮಗಳಿಂದ; ನಡೆತಂದು = ಬಂದು; ಹೊಕ್ಕಳು = ಪ್ರವೇಶಿಸಿದಳು; ನಿಷಧ ಪಟ್ಟಣವ = ನಿಷಧ ನಗರವನ್ನು.

ಪ್ರಯಾಣಕ್ಕೆ ಸಿದ್ಧಳಾದ ದಮಯಂತಿಯು ಹೊರಡುವ ಮುನ್ನ 'ದೇವ ಮುಕುಂದ, ಕಾಪಾಡು' ಎಂದು ದೈವಸ್ಮರಣೆ ಮಾಡುತ್ತ, ತನ್ನ ಮಕ್ಕಳ ಸಹಿತ ಮಣಿಖಚಿತ ರತ್ನಮಯವಾದ ರಥವನ್ನು ಹತ್ತಿ ಕುಳಿತಳು. ರಥದ ಹಿಂದೆಯೂ ಮುಂದೆಯೂ, ಎರಡು ಬದಿಗಳಲ್ಲಿಯೂ ಅರಮನೆಯ ಸ್ತ್ರೀ ಸಮೂಹವು ನಡೆದು

ಬರುತ್ತಿರಲು ಮನಸ್ಸಿನಲ್ಲಿ ಉಕ್ಕೇರುತ್ತಿರುವ ಆನಂದ, ಸಂಭ್ರಮಗಳಿಂದ ನಿಷಧನಗರವನ್ನು ಬಂದು ತಲುಪಿದಳು.

61. ನೋಡುತಿರ್ದರು ಪುರಜನರು ನೆಲೆ
ಮಾಡದುಪ್ಪರಿಗೆಯಲಿ ಮಿಗೆ ಕರು
ಮಾಡದೆಡೆಯಲಿ ಸೌಧಗಳ ಜಾಲಂಧ್ರಶಿಖರದಲಿ
ನೋಡುವರ ತಾ ನೋಡಿ ನಸುನಗು
ತಾಡುವರ ನೃತ್ಯದಲಿ ಗಾನವ
ಪಾಡುವರ ಕಂಡಲ್ಲಿ ನಲಿಯುತ ಬಂದಳರಮನೆಗೆ

ನೋಡುತಿರ್ದರು ಪುರಜನರು = ಪುರಜನರೆಲ್ಲ ದಮಯಂತಿಯ ಆಗಮನವನ್ನು ನೋಡುತ್ತಿದ್ದರು; ನೆಲೆ ಮಾಡದ + ಉಪ್ಪರಿಗೆಯಲಿ = ಮಹಡಿ ಮನೆಯ ಉಪ್ಪರಿಗೆಗಳಲ್ಲಿ; ಮಿಗೆ ಕರುಮಾಡದೆಡೆಯಲಿ = ಎತ್ತರದ ಉಪ್ಪರಿಗೆ ಮನೆಗಳ ಸಂದುಗೊಂದಿನಲ್ಲಿ; ಸೌಧಗಳ = ಅರಮನೆಗಳ; ಜಾಲಂದ್ರ ಶಿಖರಗಳಲ್ಲಿ = ಕಿಟಕಿ ಜಾಲರಿಗಳಲ್ಲಿ; ಹಾಗೂ ತುತ್ತತುದಿಭಾಗಗಳಲ್ಲಿ; ನೋಡುವರ ತಾ ನೋಡಿ = ತನ್ನನ್ನು ಹಾಗೆ ನಿಂತು ನೋಡುವವರನ್ನು ತಾನೂ ನೋಡಿ; ನಸುನಗುತ + ಆಡುವರ = ನಸುನಗೆ ನಗುತ್ತ ಆಡುವವರ; ನೃತ್ಯದಲಿ = ನೃತ್ಯ ನಿರತರಾಗಿರುವವರನ್ನೂ; ಗಾನವ ಪಾಡುವರ = ಹಾಡನ್ನು ಹಾಡುತ್ತಿರುವವರನ್ನೂ; ಕಂಡು + ಅಲ್ಲಿ ನಲಿಯುತ; ನೋಡಿ ಸಂತೋಷಪಡುತ ಬಂದಳು ಅರಮನೆಗೆ = ಅರಮನೆಗೆ ಬಂದಳು.

ತಮ್ಮ ನಗರದ ಅರಸಿ ಆಗಮಿಸುತ್ತಿರುವುದನ್ನು ತಿಳಿದು ಹರ್ಷಚಿತ್ತರಾದ ನಿಷಧ ನಗರದ ಪೌರರು ಅವಳನ್ನು ನೋಡಲು ಉತ್ಸುಕರಾಗಿಯೂ, ಅವಳನ್ನು ಆದರದಿಂದ ಸ್ವಾಗತಿಸುವ ಸಲುವಾಗಿಯೂ ಎಲ್ಲೆಂದರಲ್ಲಿ ಗುಂಪು ಗುಂಪಾಗಿ ನೆರೆದು, ನರ್ತಿಸಿ ಹಾಡಿ ಸಂತೋಷಪಟ್ಟರು. ಕೆಲವರು ಮನೆಯ ಮಾಡದ ಉಪ್ಪರಿಗೆಗಳಲ್ಲಿ, ನೆಲಮಾಳಿಗೆಗಳಲ್ಲಿ, ಮಹಡಿ ಉಪ್ಪರಿಗೆಗಳಲ್ಲಿ, ಎತ್ತರೆತ್ತರದ ಮನೆಗಳ ಸಂದುಗೊಂದಿನಲ್ಲಿ, ಅರಮನೆಗಳ ಕಿಟಕಿ, ಜಾಲಂಧ್ರಗಳಲ್ಲಿ, ಅರಮನೆಯ ಗೋಪುರದ ತುತ್ತತುದಿಗಳಲ್ಲಿ ನಿಂತು ನೋಡುತ್ತಿರುವವರನ್ನು ದಮಯಂತಿಯು

ತಾನೂ ನೋಡಿದಳು. ನಸುನಗೆ ನಗುತ್ತ, ಸಡಗರದಿಂದ ಬೀದಿಬೀದಿಗಳಲ್ಲಿ ನರ್ತಿಸುತ್ತಿರುವವರನ್ನೂ, ಹಾಡುತ್ತಿರುವವರನ್ನೂ ಕಂಡು ತಾನೂ ಹರ್ಷದಿಂದ ನಲಿಯುತ್ತ ಅರಮನೆಗೆ ಬಂದು ಸೇರಿದಳು.

62. ಬಾಗಿಲಲಿ ರಥವಿಳಿದು ಬಳಿಕ ಸ
ರಾಗದಿಂದೊಳಹೊಗುತಿರಲು ಪು
ಣ್ಯಾಂಗನೆಯರಾರತಿಯನೆತ್ತಿದರತುಳವಿಭವದಲಿ
ಭೋಗಿಶಯನನ ಕರುಣ ನಿಮಗುಂ
ಟಾಗಿ ಸುಖಿಯಾಗೆಂದು ಹರಸಿದ
ರಾಗ ಮುನಿನಿಕುರುಂಬವಕ್ಷತೆ ತಳಿದರಂಗನೆಗೆ

ಬಾಗಿಲಲಿ ರಥವಿಳಿದು = ಅರಮನೆಯ ಮುಖ್ಯದ್ವಾರದಲ್ಲಿ ರಥವಿಳಿದ ದಮಯಂತಿಯು; ಬಳಿಕ = ತರುವಾಯ; ಸರಾಗದಿಂದ + ಒಳಹೊಗುತಿರಲು = ನೇರವಾಗಿ ತಡೆಯಿಲ್ಲದಂತೆ ಒಳ ಪ್ರವೇಶಿಸುತ್ತಿರಲು; ಪುಣ್ಯಾಂಗನೆಯರು + ಆರತಿಯನು + ಎತ್ತಿದರು + ಅತುಳ ವಿಭವದಲಿ = ಅತ್ಯಂತ ವೈಭವಪೂರ್ಣವಾಗಿ ನಿತ್ಯ ಸುಮಂಗಲಿಯರು ಅವಳಿಗೆ ಸಾಂಪ್ರದಾಯಿಕವಾಗಿ ಆರತಿಯೆತ್ತಿ ಸ್ವಾಗತಿಸಿದರು; ಭೋಗಿಶಯನನ ಕರುಣ = ಆದಿಶೇಷನ ಮೇಲೆ ಪವಡಿಸಿರುವ ವಿಷ್ಣುವಿನ ಕೃಪೆಯು; ನಿಮಗುಂಟಾಗಿ = ನಿಮಗೆ ದೊರೆತು; ಸುಖಿಯಾಗು + ಎಂದು = ಸುಖಿಯಾಗಿರು ಎಂದು; ಹರಸಿದರು + ಆಗ = ಅವಳನ್ನು ಆಶೀರ್ವದಿಸಿದರು; ಮುನಿನಿಕುರುಂಬವು + ಅಕ್ಷತೆ = ಆಗ ಮುನಿಸಮೂಹವು ಅಕ್ಷತೆಗಳನ್ನು; ತಳಿದರು + ಅಂಗನೆಗೆ = ಅವಳಿಗೆ ತಳಿದರು.

ಅರಮನೆಯ ಮಹಾದ್ವಾರದ ಬಳಿ ಬಂದಿಳಿದ ದಮಯಂತಿಯು ತನ್ನ ಸ್ವಸ್ಥಾನ ಸೇರಿದ ಆನಂದಾತಿರೇಕದಲ್ಲಿ ನೇರವಾಗಿ ಯಾವ ಅಡೆತಡೆಯಿಲ್ಲದೆ ಒಳ ಪ್ರವೇಶಿಸುತ್ತಿರಲು, ನಿತ್ಯ ಸುಮಂಗಲಿಯರು ಅತ್ಯಂತ ವೈಭವಪೂರ್ಣವಾಗಿ ಅವಳಿಗೆ ಸಾಂಪ್ರದಾಯಿಕ ಆರತಿಗಳನ್ನೆತ್ತಿ ಸ್ವಾಗತಿಸಿದರು. ಆದಿಶೇಷಶಾಯಿಯಾದ ಮಹಾ ವಿಷ್ಣುವಿನ ಕರುಣಾಕಟಾಕ್ಷ ಸದಾ ನಿನಗೆ ದೊರೆತು ನಿತ್ಯ ಸುಖಿಯಾಗಿರು ಎಂದು

ಹರಸಿದರು. ಅಲ್ಲಿ ನೆರೆದಿದ್ದ ಮುನಿಸಂಕುಲವು ಅವಳ ಮೇಲೆ ಆಶೀರ್ವಾದ ಪೂರ್ವಕವಾಗಿ ಮಂತ್ರಾಕ್ಷತೆಗಳನ್ನು ಹಾಕಿದರು.

63. ಹರಕೆಗಳ ಕೈಕೊಳುತ ಸತಿ ಬಂ
ದರಮನೆಯ ಹೊಕ್ಕಳು ನೃಪಾಲನ
ಚರಣಕಮಲಕೆ ನಮಿಸಿ ಪಡೆದಳು ಪತಿಯ ಚಿತ್ತವನು
ಅರಸ ಕೇಳೈ ನಿಷಧಪತಿ ನಿಜ
ತರುಣಿ ಸುತರೊಡಗೂಡಿ ಮಂಗಳ
ಕರದೊಳೊಪ್ಪಿದ ಸಕಲದೇವಾಮರರು ಕೊಂಡಾಡೆ

ಹರಕೆಗಳ ಕೈಕೊಳುತ = ಆಶೀರ್ವಾದಗಳನ್ನು ಭಕ್ತಿಗೌರವಗಳಿಂದ ಸ್ವೀಕರಿಸುತ್ತ; ಸತಿ = ದಮಯಂತಿಯು ಬಂದು; ಅರಮನೆಯ ಹೊಕ್ಕಳು = ಅರಮನೆ ಯೊಳಗೆ ಪ್ರವೇಶಿಸಿದಳು; ನೃಪಾಲನ = ನಳಮಹಾರಾಜನ; ಚರಣಕಮಲಕೆ ನಮಿಸಿ = ಪಾದಕಮಲಗಳಿಗೆ ನಮಸ್ಕರಿಸಿ; ಪಡೆದಳು ಪತಿಯ ಚಿತ್ತವನು = ರಾಜನ ಮನಸ್ಸಿಗೆ ಸಂತೋಷವನ್ನುಂಟು ಮಾಡಿದಳು; ಅರಸ ಕೇಳೈ = ಧರ್ಮರಾಯನೇ ಕೇಳು; ನಿಷಧಪತಿ = ನಿಷಧಾಧಿಪತಿಯು; ನಿಜ ತರುಣಿ ಸುತರ + ಒಡಗೂಡಿ = ತನ್ನ ಪ್ರೀತಿಯ ಸತಿಸುತರೊಂದಿಗೆ; ಮಂಗಳಕರದೊಳು + ಒಪ್ಪಿದ = ಮಂಗಳಕರವಾಗಿ ಕಾಣಿಸಿಕೊಂಡನು; ಸಕಲದೇವ + ಅಸುರರು ಕೊಂಡಾಡೆ = ಸಮಸ್ತ ದೇವಾಸುರ ಸಂಕುಲಗಳೂ ಮೆಚ್ಚಿ ಹೊಗಳುತ್ತಿರಲು.

ಮುನಿಸಮೂಹವೂ, ಪುಣ್ಯಾಂಗನೆಯರೂ ಹರಸಲು ಅವರ ಆಶೀರ್ವಾದ ಗಳನ್ನು ಭಕ್ತಿ ಗೌರವಗಳಿಂದ ಸ್ವೀಕರಿಸುತ್ತ ದಮಯಂತಿಯು ಅರಮನೆಯೊಳಗೆ ಪ್ರವೇಶಿಸಿದಳು. ಬಳಿಕ ಮಹಾರಾಜ ನಳನ ಪಾದಕಮಲಗಳಿಗೆ ನಮಸ್ಕರಿಸಲು, ನಳನ ಮನಸ್ಸು ಸಂತೋಷದಿಂದ ಉಬ್ಬಿತು. ಧರ್ಮರಾಯನೇ ಕೇಳು, ತನ್ನ ಪ್ರೀತಿಯ ಸತಿಸುತರು ಜೊತೆಗೂಡಿದ ಸಂತೋಷದಲ್ಲಿ, ನಳಮಹಾರಾಜನು ಸಕಲ ದೇವಾ ಸುರರು ಹೊಗಳುತ್ತಿರಲು ಮಂಗಳಕರವಾಗಿ ಶೋಭಿಸಿದನು.

64. ಪರಮಪುಣ್ಯೋದಯನು ಸದ್ಗುಣ
ಭರಿತ ಸತ್ಯಸುಭಾಷಿತನು ಸಂ

ಗರಸುಧೈರ್ಯನು ನಿತ್ಯನಿರ್ಮಲ ನಿಗಮಕೋವಿದನು
ಅರಸುಕುಲಪಾವನನು ನಳಭೂ
ವರನು ಸಿಂಹಾಸನದಿ ರಂಜಿಸಿ
ಧರೆಯನಾಳಿದ ವರಪುರದ ಚೆನ್ನಿಗನ ಕರುಣದಲಿ

ಪರಮ ಪುಣ್ಯೋದಯನು = ನಳನು ಮಹಾ ಪುಣ್ಯಶಾಲಿಯಾದವನು; ಸದ್ಗುಣಭರಿತ = ಸದ್ಗುಣಗಳಿಂದ ಕೂಡಿದವನು; ಸತ್ಯಸುಭಾಷಿತನು = ಸತ್ಯನಿಷ್ಠನಾದವನು, ಸುಲಕ್ಷಣ ಭಾಷಿಕನು; ಸಂಗರಸುಧೈರ್ಯನು = ಕ್ಷತ್ರಿಯೋಚಿತವಾಗಿ ನಿರ್ವಹಿಸಬೇಕಾದ ಯುದ್ಧವಿದ್ಯೆಗಳಲ್ಲಿ ಧೈರ್ಯವಂತನೆಂದು ಹೆಸರಾದವನು; ನಿತ್ಯನಿರ್ಮಲ ನಿಗಮಕೋವಿದನು = ಶುಚಿರ್ಭೂತನಾಗಿದ್ದು ವೇದಾದಿ ವಿದ್ಯೆಗಳಲ್ಲಿ ಪ್ರವೀಣನು; ಅರಸುಕುಲಪಾವನನು = ಅರಸು ಕುಲವನ್ನು ಪಾವನಗೊಳಿಸಿದವನು; ನಳಭೂವರನು = ಭೂಮಂಡಲಕ್ಕೆ ಶ್ರೇಷ್ಠನೆಂದು ಹೆಸರಾದವನೂ ಆದ ನಳನು; ಸಿಂಹಾಸನದಿ = ಸಿಂಹಾಸನರೂಢನಾಗಿ; ರಂಜಿಸಿ ಧರೆಯನು + ಆಳಿದ = ಜನಹಿತನಾಗಿ ರಂಜಿಸಿ ತನ್ನ ಸಾಮ್ರಾಜ್ಯವನ್ನಾಳಿದನು; ವರಪುರದ ಚೆನ್ನಿಗನ ಕರುಣದಲಿ = ವರಪುರದ ಚೆನ್ನಿಗನ ಕೃಪೆಯಿಂದ.

ಮಹಾ ಪುಣ್ಯಶಾಲಿಯಾದವನೂ, ಸದ್ಗುಣಗಳಿಂದ ಕೂಡಿದವನೂ, ಸತ್ಯನಿಷ್ಠನಾದವನೂ, ಒಳ್ಳೆಯ ನಡೆನುಡಿಗಳಿಂದ ಜನಪ್ರಿಯನಾದವನೂ, ಕ್ಷತ್ರಿಯೋಚಿತವಾದ ಯುದ್ಧವಿದ್ಯೆಗಳಲ್ಲಿ ಧೈರ್ಯವಂತನೂ, ಸಾಹಸಿಯೂ ಆಗಿ ಮೆರೆದವನೂ, ಸದಾ ಶುಚಿರ್ಭೂತವಾದವನೂ, ವೇದವಿದ್ಯಾಪ್ರವೀಣನೂ, ಪರಂಪರೆಯ ನಿರ್ದೇಶಿಸುವ ಮಾರ್ಗವನ್ನು ತಪ್ಪದೆ ನಡೆಯಿಸಿದವನೂ, ಅರಸು ಕುಲಕ್ಕೇ ಪುಣ್ಯವನ್ನು ತಂದಿತ್ತವನೂ, ಭೂಮಂಡಲಕ್ಕೆ ಶ್ರೇಷ್ಠನೆಂದು ಹೆಸರಾದವನೂ ಆದ ನಳಮಹಾರಾಜನು ಸಿಂಹಾಸನಾರೂಢನಾಗಿ, ಜನಹಿತನಾಗಿ ರಂಜಿಸಿ ವರಪುರದ ಚೆನ್ನಿಗನ ಕೃಪಾಶೀರ್ವಾದಗಳಿಂದ ತನ್ನ ಸಾಮ್ರಾಜ್ಯವನ್ನಾಳಿದನು.

65. ಮುನಿಕುಲಾಂಬುಧಿಚಂದ್ರ ರೋಮಶ
ಮುನಿಪ ವಿಸ್ತರಿಸಿದನು ನಳಭೂ
ಪನ ಚರಿತ್ರೆಯ ಕೇಳಿ ತಲೆದೂಗಿದನು ಯಮಸೂನು

ಮನಕೆ ಹರುಷಾನಂದವಾಯ್ತೆಲೆ
ಮುನಿಪ ನಿಮ್ಮಡಿ ಕರುಣದಲಿಯಿಂ
ದೆನಗೆ ಫಲಿಸಿತು ಪುಣ್ಯವೆಂದೆರಗಿದನು ಚರಣದಲಿ

ಮುನಿಕುಲಾಂಬುಧಿಚಂದ್ರ = ಮುನಿಕುಲವೆಂಬ ಸಮುದ್ರಕ್ಕೆ ಚಂದ್ರನಂತೆ ಇದ್ದ; ರೋಮಶ ಮುನಿಪ = ರೋಮಶ ಮುನಿಯು; ವಿಸ್ತರಿಸಿದನು ನಳಭೂಪನ ಚರಿತ್ರೆಯ = ವಿಸ್ತಾರವಾಗಿ ನಳಭೂಪನ ಬದುಕಿನ ಕಥೆಯನ್ನು ಹೇಳಿದನು; ಕೇಳಿ ತಲೆದೂಗಿದನು ಯಮಸೂನು = ಯಮಸುತನಾದ ಧರ್ಮರಾಯನು ಅದನ್ನು ಕೇಳಿ ಮೆಚ್ಚಿ ಆಸ್ವಾದಿಸಿದನು; ಮನಕೆ = ಕೇಳಿ ಮನಸ್ಸಿಗೆ; ಹರುಷಾನಂದವಾಯ್ತು + ಎಲೆ ಮುನಿಪ = ಬಹಳ ಆನಂದವುಂಟಾಯಿತು ಮುನಿಯೇ; ನಿಮ್ಮಡಿ ಕರುಣದಲಿ + ಇಂದು + ಎನಗೆ = ನಿಮ್ಮ ಪುಣ್ಯಪಾದಗಳ ದರ್ಶನ ಭಾಗ್ಯ ದೊರೆತುದರಿಂದ ಇಂದು ನನಗೆ; ಫಲಿಸಿತು ಪುಣ್ಯವೆಂದು + ಎರಗಿದನು ಚರಣದಲಿ = ನನ್ನ ಪುಣ್ಯಫಲವು ಸಿದ್ಧಿಸಿದಂತಾಯಿತು ಎನ್ನುತ್ತಾ ಭಕ್ತಿ ಗೌರವಾದರಗಳಿಂದ ಮುನಿಯ ಪಾದಗಳಿಗೆ ನಮಸ್ಕರಿಸಿದನು.

ಮುನಿಕುಲವೆಂಬ ಸಮುದ್ರಕ್ಕೆ ಚಂದ್ರನಂತೆ ಸುಸಂಬಂಧ ಬಂಧುವೂ, ರಮಣೀಯ ಶೋಭಾಕರನೂ ಆದ ರೋಮಶ ಮುನಿಯು ಯಮಸುತನಾದ ಧರ್ಮರಾಯನಿಗೆ ಹೀಗೆ ನಳಭೂಪನ ಜೀವನ ಚರಿತ್ರೆಯನ್ನು ವಿಸ್ತಾರವಾಗಿ ಹೇಳಿದನು. ಅದನ್ನು ಕೇಳಿ ಮೆಚ್ಚುಗೆಯಿಂದ ತಲೆದೂಗಿದ ಧರ್ಮರಾಯನು, ಈ ಕಥೆಯನ್ನು ಕೇಳಿ ಮನಸ್ಸಿಗೆ ಬಹಳ ಸಂತೋಷ, ಆನಂದಗಳುಂಟಾದುವು ಮುನಿಯೇ. ನಿನ್ನ ಪುಣ್ಯಪಾದ ದರ್ಶನದಿಂದ ನನಗೆ ಇಂದು ನನ್ನ ಪುಣ್ಯ ಫಲವು ಸಿದ್ಧಿಸಿದಂತಾಗಿದೆ ಎನ್ನುತ್ತಾ ಭಕ್ತಿ, ಗೌರವಗಳಿಂದ ಮುನಿಯ ಪಾದಗಳಿಗೆ ನಮಸ್ಕರಿಸಿದನು.

66. ದೇವಮುನಿಗಳು ನೀವು ನಮ್ಮನು
ಪಾವನವ ಮಾಡಿದಿರಿ ನಮಗಿ
ನ್ನಾವುದರಿದುಂಟಿನ್ನು ಪಾರ್ಥನ ಹದನವೇನರಿಯೆ
ಆ ವಿವರವೆನಗಿನ್ನು ತಿಳುಹೆನೆ

ದೇವನಗರಿಯೊಳಿಂದ್ರನಲಿ ಗಾಂ
ಡೀವಿ ಸುಸ್ಥಿರನರಸ ಚಿಂತಿಸಬೇಡ ನೀನೆಂದ

ದೇವ ಮುನಿಗಳು ನೀವು = ದೇವರ್ಷಿಗಳಾದ ನೀವು; ನಮ್ಮನ್ನು ಪಾವನವ ಮಾಡಿದಿರಿ = ನೀತಿಯುಕ್ತವಾದ ಕಥೆಯ ಮೂಲಕ ನಮ್ಮನ್ನು ಪಾವನರನ್ನಾಗಿಸಿದಿರಿ; ನಮಗೆ + ಇನ್ನು + ಯಾವುದರಿಂದ + ಉಂಟು = ನಮಗೆ ಇನ್ನು ಯಾವುದರಿಂದ ತೊಂದರೆಯುಂಟು?; ಇನ್ನು ಪಾರ್ಥನ = ಇನ್ನು ಅರ್ಜುನನ; ಹದನವು + ಏನರಿಯೆ = ಪಾಡು ಏನಾಯಿತೆಂಬುದೊಂದು ತಿಳಿಯಲಿಲ್ಲ; ಆ ವಿವರವ + ಎನಗೆ + ಇನ್ನು ತಿಳುಹೆನೆ = ಆ ಕುರಿತಾದ ವಿವರಗಳನ್ನು ನನಗೆ ತಿಳಿಸು ಎನ್ನಲು; ದೇವನಗರಿಯೊಳು + ಇಂದ್ರನಲಿ = ದೇವೇಂದ್ರನ ಅಮರಾವತಿಯಲ್ಲಿ, ಇಂದ್ರ ನೊಂದಿಗೆ; ಗಾಂಡೀವಿ = ಅರ್ಜುನನು; ಸುಸ್ಥಿರನು + ಅರಸ = ಸೌಖ್ಯದಿಂದಿದ್ದಾನೆ ಅರಸನೇ; ಚಿಂತಿಸಬೇಡ ನೀನೆಂದ = ಅವನಿಗಾಗಿ ಚಿಂತಿಸುವ ಅಗತ್ಯವಿಲ್ಲ ಎಂದನು.

ದೇವರ್ಷಿಗಳಾದ ನೀವು ನಮ್ಮನ್ನು ಕಂಡುದರಿಂದಲೂ, ನೀತಿಯುಕ್ತವಾದ ಕಥೆಯನ್ನು ಹೇಳಿದುದರಿಂದಲೂ ನಾವು ನಮ್ಮ ಚಿಂತೆಗಳಿಂದ ದೂರವಾಗು ವಂತಾಯಿತು, ನಮ್ಮ ಬದುಕು ಪಾವನವಾಯಿತು. ನಮಗಿನ್ನೇತರ ಚಿಂತೆ? ಆದರೆ ನಮ್ಮ ಪಾರ್ಥನ ಪಾಡು ಏನಾಯಿತೆಂಬುದೊಂದು ತಿಳಿಯದಾಗಿದೆ. “ಮುನಿಯೇ, ಆ ಕುರಿತ ವಿವರಗಳನ್ನು ನನಗೆ ತಿಳಿಸು” ಎನ್ನಲು ರೋಮಶನು, “ಯುಧಿಷ್ಠಿರನೇ, ಪಾರ್ಥನ ವಿಷಯದಲ್ಲಿ ಚಿಂತಿಸುವುದಕ್ಕಾದರೂ ಏನಿದೆ? ಅವನು ದೇವ ನಗರಿಯಾದ ಅಮರಾವತಿಯಲ್ಲಿ ಇಂದ್ರನೊಂದಿಗೆ ಸೌಖ್ಯವಾಗಿದ್ದಾನೆ, ಚಿಂತಿಸದಿರು” ಎಂದನು.

67. ಎಲೆ ಯುಧಿಷ್ಠಿರ ಕೇಳು ಲೋಕದ
ಲಲನೆಯರ ಪರಿಯಲ್ಲ ನಾಲ್ವರು
ಚೆಲುವೆಯರು ಗುಣಶೀಲಸಂಪನ್ನೆಯರು ಭುವನದಲಿ
ನಳಿನಮುಖಿ ದಮಯಂತಿ ಸೀತಾ
ಲಲನೆ ದ್ರೌಪದಿ ಚಂದ್ರಮತಿ ಕೋ
ಮಲೆಯರಚ್ಯುತನಚ್ಚುಮೆಚ್ಚಿನ ರಾಜವನಿತೆಯರು

ಎಲೆ ಯುಧಿಷ್ಠಿರ ಕೇಳು = ಧರ್ಮರಾಯನೇ ಕೇಳು; ಲೋಕದ ಲಲನೆಯರ ಪರಿಯಲ್ಲ = ಇವರು ಲೋಕದಲ್ಲಿರುವ ಇತರ ಸ್ತ್ರೀಯರಂತಲ್ಲ; ನಾಲ್ವರು ಚೆಲುವೆಯರು = ಈ ನಾಲ್ಕು ಜನ ಎಲ್ಲರಿಗಿಂತ ಅತಿ ಚೆಲುವೆಯರು; ಗುಣಶೀಲಸಂಪನ್ನೆಯರು ಭುವನದಲಿ = ಗುಣಶೀಲಗಳಲ್ಲಿ ಇಡೀ ಜಗತ್ತಿನಲ್ಲಿ ಎಲ್ಲರಿಗಿಂತ ಶ್ರೇಷ್ಠರು; ನಳಿನಮುಖಿ ದಮಯಂತಿ = ಸುಂದರಿ ದಮಯಂತಿ; ಸೀತಾ ಲಲನೆ ದ್ರೌಪದಿ ಚಂದ್ರಮತಿ = ಸೀತೆ, ದ್ರೌಪದಿ ಹಾಗೂ ಚಂದ್ರಮತಿಯರು; ಕೋಮಲೆಯರು + ಅಚ್ಯುತನ + ಅಚ್ಚುಮೆಚ್ಚಿನ = ಇವರೆಲ್ಲರೂ ಮಹಾವಿಷ್ಣುವಿನ ಭಕ್ತೆಯರು ಮತ್ತು ಅವನಿಗೆ ಪ್ರಿಯ; ರಾಜವನಿತೆಯರು = ರಾಜಪತ್ನಿಯರು.

ಯುಧಿಷ್ಠಿರನೇ ಕೇಳು, ನಾನು ಹೇಳುವ ಈ ನಾಲ್ವರು ರಾಜವನಿತೆಯರು ಲೋಕದಲ್ಲಿ ಸಾಮಾನ್ಯವಾಗಿ ನಾವು ಕಾಣುವ ವನಿತೆಯರಂತಲ್ಲ. ಎಲ್ಲರಿಗಿಂತ ಮಿಗಿಲಾದ ಸೌಂದರ್ಯವನ್ನು, ಗುಣಶೀಲ ಸಂಪತ್ತನ್ನು ಪಡೆದಿರುವಂಥವರು, ಶ್ರೀಮಹಾವಿಷ್ಣುವಿನ ಪರಮಭಕ್ತೆಯರು.

68. ನಿನಗೆ ಪಟ್ಟದ ಮಹಿಳೆ ದ್ರೌಪದಿ
ವನಿತೆಯರ ಸಾಮ್ರಾಜ್ಯಸಂಪದ
ವಿನಿತು ಸತಿಯಿಂದಾಗುವುದು ಕಾಮ್ಯಗಳು ಸಿದ್ಧಿಪುವು
ಜನಪ ಚಿಂತಿಸಬೇಡ ನಾಳಿನ
ದಿನದಿ ಬಹ ನಿನ್ನನುಜನರ್ಜುನ
ಮನದ ಚಿಂತೆಯ ಬೀಳುಕೊಡು ಸುಖಿಯಾಗು ನೀನೆಂದ

ನಿನಗೆ ಪಟ್ಟದ ಮಹಿಳೆ ದ್ರೌಪದಿ = ದ್ರೌಪದಿಯು ನಿನ್ನ ಸಾಮ್ರಾಜ್ಯದ ಪಟ್ಟಮಹಿಷಿ; ವನಿತೆಯರ = ಇಂತಹ ಸ್ತ್ರೀಯ; ಸಾಮ್ರಾಜ್ಯಸಂಪದವು + ಇನಿತು = ಕಾರಣದಿಂದಲೇ ಸಾಮ್ರಾಜ್ಯ, ಸಿರಿ ಸಂಪತ್ತು, ಭೋಗಭಾಗ್ಯಗಳು ಎಲ್ಲವೂ; ಸತಿಯಿಂದಾಗುವುದು = ಇವೆಲ್ಲವೂ ಈ ಶ್ರೇಷ್ಠ ಸತಿಯಿಂದಲೇ ನಿನಗೆ ಒದಗುವುದು; ಕಾಮ್ಯಗಳು = ನಿನ್ನ ಇಷ್ಟಾರ್ಥಗಳೆಲ್ಲವೂ; ಸಿದ್ಧಿಪುವು = ಸಿದ್ಧಿಸುತ್ತವೆ; ಜನಪ ಚಿಂತಿಸಬೇಡ = ಆದ್ದರಿಂದ ರಾಜನೇ, ಚಿಂತಿಸಬೇಡ; ನಾಳಿನ ದಿನದಿ ಬಹ = ನಾಳೆಯೇ ಬರಲಿದ್ದಾನೆ; ನಿನ್ನನುಜನು + ಅರ್ಜುನ = ನಿನ್ನ ತಮ್ಮನಾದ ಅರ್ಜುನ;

ಮನದ ಚಿಂತೆಯ ಬೀಳುಕೊಡು = ಮನಸ್ಸಿನಲ್ಲಿರುವ ಚಿಂತೆಯನ್ನು ಬಿಟ್ಟುಬಿಡು; ಸುಖಿಯಾಗು ನೀನೆಂದ = ನೆಮ್ಮದಿಯಿಂದ ಸುಖವಾಗಿರು ಎಂದನು.

"ಶ್ರೇಷ್ಠಳೂ, ಗುಣಶೀಲ ನಿಧಿಯೂ ಆದಂತಹ ದ್ರೌಪದಿಯು ನಿನ್ನ ಸಾಮ್ರಾಜ್ಯದ ಪಟ್ಟಮಹಿಷಿಯಾಗಿದ್ದಾಳೆ. ಇಂತಹ ಸ್ತ್ರೀಯರಿಂದಲೇ ಸಾಮ್ರಾಜ್ಯ ಸುಖ ಭೋಗಭಾಗ್ಯಗಳು ಸಿದ್ಧಿಸುವುದು. ಇವೆಲ್ಲವೂ ನಿನ್ನ ಸತಿಯಿಂದಲೇ ನಿನಗೂ ಒದಗಿಬರುತ್ತವೆ. ನಿನ್ನ ಇಷ್ಟಾರ್ಥಗಳೆಲ್ಲವೂ ಈಡೇರುತ್ತವೆ. ಆದ್ದರಿಂದ ರಾಜನೇ ಚಿಂತಿಸಬೇಡ. ನಿನ್ನ ತಮ್ಮನಾದ ಅರ್ಜುನನು ನಾಳೆಯೇ ಹಿಂದಿರುಗಿ ಬರಲಿದ್ದಾನೆ. ಹಾಗಾಗಿ ಮನಸ್ಸಿನಲ್ಲಿರುವ ಚಿಂತೆಯನ್ನು ಹೋಗಲಾಡಿಸಿಕೊಂಡು ಸುಖಿಯಾಗಿರು" ಎಂದನು ರೋಮಶಮುನಿ.

69. ಹರನು ನಿಮಗೆ ಸಹಾಯ ದೇವಾ
ಸುರರು ನಿಮಗೊಳ್ಳಿದರು ಲಕ್ಷ್ಮೀ
ವರನು ನಿಮಗಿನ್ನಂತರಂಗದ ಪರಮಸಖನಿರಲು
ಮರುಗಲೇಕಿನ್ನಾವುದರಿದೆಲೆ
ಧರಣಿಪತಿ ಸಾಕಿನ್ನು ರಾಜ್ಯದ
ಸಿರಿ ನಿನಗೆ ಬಂದಪುದು ರಿಪು ಸಂಹಾರವಹುದೆಂದ

ಹರನು ನಿಮಗೆ ಸಹಾಯ = ಸಾಕ್ಷಾತ್ ಶಿವನೇ ನಿಮಗೆ ಸಹಾಯಕವಾಗಿದ್ದಾನೆ; ದೇವ + ಅಸುರರು = ದೇವತೆಗಳೂ ಅಸುರರೂ ಸಹ; ನಿಮಗೆ + ಒಳ್ಳಿದರು = ನಿಮಗೆ ಒಳ್ಳೆಯದನ್ನೇ ಬಯಸುವವರಾಗಿದ್ದಾರೆ; ಲಕ್ಷ್ಮೀವರನು = ಮಹಾವಿಷ್ಣುವು; ನಿಮಗೆ + ಇನ್ನು + ಅಂತರಂಗದ = ನಿಮಗೆ ಅತ್ಯಂತ ಆತ್ಮೀಯನಾದ; ಪರಮಸಖನಿರಲು = ಸನ್ಮಿತ್ರನೇ ಆಗಿದ್ದಾನೆ, ಇಂತಿರುವಾಗ; ಮರುಗಲೇಕೆ + ಇನ್ನು + ಆವುದರಿದು + ಎಲೆ = ಚಿಂತಿಸುವುದಕ್ಕೇನಿದೆ? ನಿನಗೆ ಸಾಧ್ಯವಾಗದುದು ಇನ್ನಾವುದಿದೆ ಎಲೆ; ಧರಣಿಪತಿ = ಮಹಾರಾಜನೇ; ಸಾಕಿನ್ನು = ದುಃಖಿಸಿದುದು ಇನ್ನು ಸಾಕು; ರಾಜ್ಯದ ಸಿರಿ ನಿನಗೆ ಬಂದಪುದು = ರಾಜ್ಯಾಧಿಕಾರವು ಇನ್ನು ನಿನಗೇ ಸಿದ್ಧಿಸಲಿದೆ; ರಿಪುಸಂಹಾರವಹುದು + ಎಂದ = ಶತ್ರುನಾಶವೂ ಆಗಲಿದೆ ಎಂದನು.

ಸಕಲರಿಗೂ ಮಂಗಳವನ್ನುಂಟುಮಾಡುವ ಶಿವನೇ ನಿಮ್ಮ ಸಹಾಯಕನಾಗಿ ನಿಮ್ಮ ಬೆಂಬಲಕ್ಕೆ ನಿಂತಿದ್ದಾನೆ. ದೇವತೆಗಳು ರಾಕ್ಷಸರೂ ಸಹಾ ನಿಮಗೆ ಹಿತವನ್ನು ಬಯಸುವವವರೇ ಆಗಿದ್ದಾರೆ. ಜಗತ್ತಿನ ಸ್ಥಿತಿಸ್ಥಾಪಕನಾದ ಸಾಕ್ಷಾತ್ ಮಹಾವಿಷ್ಣುವೇ ನಿಮಗೆ ಆಪ್ತಮಿತ್ರನಾಗಿದ್ದಾನೆ. ಆದ್ದರಿಂದ ಎಲೈ ಮಹಾರಾಜನೇ ಇನ್ನು ಚಿಂತಿಸು ವುದಕ್ಕಾದರೂ ಏನಿದೆ? ದುಃಖಿಸಿದುದು ಸಾಕು. ಮುಂದೆ ಶತ್ರು ಸಂಹಾರವಾಗಿ ನಿನಗೆ ರಾಜ್ಯಾಧಿಕ್ಯವು ಪುನಃ ಪ್ರಾಪ್ತವಾಗಲಿದೆ ಎಂದು ಧರ್ಮಜನನ್ನು ಸಮಾಧಾನಿಸಿದನು.

70. ಎಂದು ಬುದ್ಧಿಯ ಪೇಳಿ ಮುನಿ ಯಮ
ನಂದನನ ಬೀಳ್ಕೊಂಡು ತಾಪಸ
ವೃಂದಸಹಿತಲ್ಲಿಂದ ಹೊರವಂಟನು ನಿಜಾಶ್ರಮಕೆ
ಅಂದು ಯಮಳರು ಧೌಮ್ಯ ದ್ರೌಪದಿ
ಸಂದ ಮುನಿಜನಸಹಿತ ಯಮಸುತ
ಬಂದು ಹೊಕ್ಕನು ಪರ್ಣಶಾಲೆಯನಧಿಕ ಹರುಷದಲಿ

ಎಂದು ಬುದ್ಧಿಯ ಪೇಳಿ ಮುನಿ = ಎಂದು ಧರ್ಮರಾಯನಿಗೆ ಧೈರ್ಯವಿತ್ತು, ಬುದ್ಧಿಹೇಳಿದ ರೋಮಶ ಮುನಿಯು; ಯಮನಂದನನ ಬೀಳ್ಕೊಂಡು = ಯಮಸುತ ನಾದ ಧರ್ಮರಾಯನಿಂದ ಬೀಳ್ಕೊಂಡು; ತಾಪಸ ವೃಂದಸಹಿತ + ಅಲ್ಲಿಂದ = ತನ್ನೊಂದಿಗೆ ಬಂದಿದ್ದ ಮುನಿಸಮೂಹದೊಂದಿಗೆ ಅಲ್ಲಿಂದ; ಹೊರ ವಂಟನು ನಿಜಾಶ್ರಮಕೆ = ತನ್ನ ಆಶ್ರಮಕ್ಕೆ ಹೊರಟನು; ಅಂದು = ಆ ದಿನವೇ; ಯಮಳರು = ನಕುಲ ಸಹದೇವರು; ಧೌಮ್ಯ ದ್ರೌಪದಿ ಸಂದ ಮುನಿಜನ ಸಹಿತ = ಧೌಮ್ಯ ಋಷಿ, ದ್ರೌಪದಿ ಹಾಗೂ ಮುನಿಜನರ ಸಹಿತ; ಯಮಸುತ = ಧರ್ಮರಾಯನು; ಬಂದು ಹೊಕ್ಕನು = ಹಿಂದಿರುಗಿ ಬಂದು ಪ್ರವೇಶಿಸಿದನು; ಪರ್ಣಶಾಲೆಯನು + ಅಧಿಕ ಹರುಷದಲಿ = ಪರ್ಣಶಾಲೆಯನ್ನು ಪರಮ ಸಂತೋಷಚಿತ್ತನಾಗಿ.

ಹೀಗೆ ರೋಮಶ ಮುನಿಯು ಧರ್ಮರಾಯನಿಗೆ ಧೈರ್ಯದ ಮಾತುಗಳನ್ನೂ, ಬುದ್ಧಿಯನ್ನೂ ಹೇಳಿ, ಧರ್ಮರಾಯನನ್ನು ಬೀಳ್ಕೊಂಡು

ತನ್ನೊಂದಿಗೆ ಬಂದಿದ್ದ ತಾಪಸವೃಂದ ಸಮೇತ ತನ್ನ ಆಶ್ರಮಕ್ಕೆ ಹೊರಟನು. ಇತ್ತ ಧರ್ಮರಾಯನೂ ನಕುಲ, ಸಹದೇವ, ದ್ರೌಪದಿ, ಧೌಮ್ಯ ಋಷಿ, ಮತ್ತಿತರ ಮುನಿವೃಂದದೊಂದಿಗೆ ಚಿಂತಾಮುಕ್ತನಾಗಿ ಹರ್ಷಚಿತ್ತನಾಗಿ ಪರ್ಣಶಾಲೆಗೆ ಹಿಂದಿರುಗಿದನು.

71. ಈ ಕಥೆಯನಾಲಿಸುವ ಜನರಿಗ
ನೇಕ ಸುಖಸಾಮ್ರಾಜ್ಯ ಪದವಿಯ
ನಾ ಕಮಲಲೋಚನನು ವರಪುರದರಸ ಪಾಲಿಸುವ
ಲೋಕಪಾವನ ನಳನ ಕಥೆಯ ನಿ
ರಾಕರಿಸಿದವರಧಿಕನರಕದ
ಲೋಕವಾಳುವರೆಂದು ರೋಮಶ ನುಡಿದನರಸಂಗೆ

ಈ ಕಥೆಯನಾಲಿಸುವ ಜನರಿಗೆ + ಅನೇಕ = ಯಾರು ಈ ಕಥಾ ಪ್ರಸಂಗವನ್ನು ಶ್ರದ್ಧೆಯಿಂದ ಆಲಿಸುತ್ತಾರೋ ಅಂಥವರಿಗೆ ಅನೇಕ; ಸುಖ ಸಾಮ್ರಾಜ್ಯ ಪದವಿಯನು = ಸುಖ ಸೌಭಾಗ್ಯಗಳನ್ನೂ, ಸಾಮ್ರಾಜ್ಯ ಪದವಿಯನ್ನೂ; ಆ ಕಮಲಲೋಚನನು = ಮಹಾವಿಷ್ಣುವು; ವರಪುರದ + ಅರಸನ = ವರಪುರದರಸ; ಪಾಲಿಸುವ = ನೀಡುತ್ತಾನೆ; ಲೋಕಪಾವನ = ಈ ಲೋಕದಲ್ಲಿ ಪವಿತ್ರನಾಗಿ ಹೆಸರಾದ; ನಳನ ಕಥೆಯ = ನಳನ ಕಥೆಯನ್ನು; ನಿರಾಕರಿಸಿದವರು + ಅಧಿಕ ನರಕದ = ಕೇಳಲು ಯಾರು ನಿರಾಕರಿಸುವರೋ ಅಂಥವರು ಅತ್ಯಂತ ಕ್ರೂರವಾದ ನರಕದ; ಲೋಕವನು + ಆಳುವರೆಂದು = ಲೋಕವನ್ನು ಸೇರುವರು ಎಂದು; ರೋಮಶ ನುಡಿದನು + ಅರಸಂಗೆ = ಧರ್ಮರಾಯನಿಗೆ ರೋಮಶ ಮುನಿಯು ಹೇಳಿದನು.

“ಯಾರು ಈ ಭೂಮಂಡಲದಲ್ಲಿ ಪವಿತ್ರಾತ್ಮನೆಂದು ಹೆಸರಾಗಿದ್ದನೋ ಆ ನಳನ ಚರಿತ್ರೆಯನ್ನು ಆಲಿಸಿದವರಿಗೆ ವರಪುರದರಸನಾದ ಆ ಮಹಾವಿಷ್ಣುವು ಸುಖ ಸಂಪತ್ತನ್ನು ಸಾಮ್ರಾಜ್ಯ ಪದವಿಯನ್ನು ಕರುಣಿಸಿ ರಕ್ಷಿಸುತ್ತಾನೆ. ಈ ಕಥೆಯನ್ನು ಕೇಳಲು ನಿರಾಕರಿಸುವಂಥವರು ಅತ್ಯಂತ ಕ್ರೂರವಾದ ರೌರವ ನರಕವನ್ನು ಸೇರುತ್ತಾರೆ” ಎಂದು ಧರ್ಮರಾಯನಿಗೆ ರೋಮಶನು ನುಡಿದನು.

72. ಮೇದಿನಿಯೊಳೀ ಪುಣ್ಯಚರಿತೆಯ
ನಾದರಿಸಿ ಬರೆದೋದಿ ಕೇಳುವ
ಸಾಧುಸಜ್ಜನರಾದವರಿಗಹುದಖಿಳ ಕೈವಲ್ಯ
ವೇದಗೋಚರ ಕೃಷ್ಣವರಪುರ
ದಾದಿಕೇಶವನಮರವಂದಿತ
ನಾದಿನಾರಾಯಣನು ಸಲಹುವನಖಿಳಸಜ್ಜನರ

ಮೇದಿನಿಯೊಳು + ಈ ಪುಣ್ಯ ಚರಿತೆಯನು = ಈ ಭೂಲೋಕದಲ್ಲಿ ಇಂತಹ ಲೋಕಪಾವನನ ಪುಣ್ಯ ಚರಿತ್ರೆಯನ್ನು; ಆದರಿಸಿ = ಗೌರವಿಸಿ; ಬರೆದು + ಓದಿ ಕೇಳುವ = ಬರೆದು, ಓದಿ ಕೇಳುವ; ಸಾಧು ಸಜ್ಜನರಾದವರಿಗೆ + ಅಹುದು + ಅಖಿಳ = ಸಾಧು ಸಜ್ಜನರಿಗೆ ಆಗುವುದು ಎಲ್ಲ ರೀತಿಯ; ಕೈವಲ್ಯ = ಮೋಕ್ಷಪ್ರಾಪ್ತಿ; ವೇದಗೋಚರ ಕೃಷ್ಣ = ವೇದ ಗೋಚರನಾದ ಕೃಷ್ಣನು; ವರಪುರದ ಆದಿ ಕೇಶವನು = ವರಪುರದ ಆದಿಕೇಶವನು; ಅಮರ ವಂದಿತನು = ಎಲ್ಲ ದೇವ ಗಣಗಳಿಂದ ನಮಸ್ಕರಿಸಲ್ಪಟ್ಟವನೂ ಆದ; ಆದಿ ನಾರಾಯಣನು = ಆದಿ ನಾರಾಯಣನು; ಸಲಹುವನು = ರಕ್ಷಿಸುವನು; ಅಖಿಳ ಸಜ್ಜನರ = ಎಲ್ಲ ಸಜ್ಜನರನ್ನೂ.

ಭೂಮಂಡಲದಾದ್ಯಂತ ಇಂತಹ ಲೋಕಪಾವನವಾದ ಪುಣ್ಯ ಚರಿತ್ರೆ ಯನ್ನು ಗೌರವಿಸಿ, ಓದಿ, ಕೇಳುವ ಸಹೃದಯ ಸಮೂಹಕ್ಕೆ, ಸಾದು ಸಜ್ಜನರಿಗೆ ಎಲ್ಲ ರೀತಿಯ ದುಃಖ ಸಂಕಟಗಳಿಂದ ಮೋಕ್ಷ ಪ್ರಾಪ್ತಿಯೂ ಲಭಿಸುತ್ತದೆ. ವೇದ ಗೋಚರನಾದ ಕೃಷ್ಣ, ವರಪುರದ ಆದಿಕೇಶವನು, ಎಲ್ಲ ದೇವಗಣಗಳಿಂದ ನಮಸ್ಕರಿಸಲ್ಪಟ್ಟ ಆದಿ ನಾರಾಯಣನು ಎಲ್ಲ ಸಜ್ಜನರನ್ನೂ ರಕ್ಷಿಸುತ್ತಾನೆ.

ಈ ಪದ್ಯವು ಇಡೀ ಕಾವ್ಯದ ಫಲಶ್ರುತಿಯನ್ನು ಹೇಳುತ್ತಿದೆ. ದೇವರಲ್ಲಿ ನಂಬಿಕೆಯನ್ನು ಸ್ಥಿರಗೊಳಿಸುವುದು, ಅಂತಹ ಕಥೆಗಳನ್ನು ವಾಚಿಸುವುದು, ಕೇಳುವುದು, ಸಜ್ಜನ ಹಿತ ಸಮಾಜ ನಿರ್ಮಾಣಕ್ಕೆ ಅವಶ್ಯ ಎಂಬ ಪ್ರಾಚೀನ ನಂಬಿಕೆಯನ್ನಿದು ಸೂಚಿಸುತ್ತದೆ.

ಅನುಬಂಧ –1

ಆಕರ ಗ್ರಂಥಗಳು

1. ಸಾ.ಶಿ.ಮರುಳಯ್ಯ(ಸಂ) – ಕನಕದಾಸ ಕಾವ್ಯ, ಭಾಗ–1 ನಳಚರಿತ್ರೆ. (ಪ್ರ).ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂ.2012. ದ್ವಿತೀಯ ಮುದ್ರಣ.
2. ಹಾತೂರು ಶಂಕರನಾರಾಯಣ ಭಟ್ಟ– ಕನಕದಾಸ ನಳ ಚರಿತ್ರೆ ಗದ್ಯಾನುವಾದ. (ಪ್ರ).ಕನ್ನಡ ಸಾಹಿತ್ಯ ಪರಿಷತ್ತು. ಬೆಂ. 2011

ಅನುಬಂಧ -2

ಸಹಾಯಕ ಗ್ರಂಥಗಳು

1. ಅಮರ ಸಿಂಹ - ಅಮರಕೋಶ ಎಂಬ ನಾಮಲಿಂಗಾನುಶಾಸನ
(ಸಂ). ಲೂಯಿ ರೈಸ್
ಪರಿಷ್ಕೃತ ಸಂಸ್ಕರಣ ಎನ್. ಬಾಲಸುಬ್ರಮಣ್ಯ
(ಪ್ರ). ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ
1989

2. ಕಟ್ಟೆ ಶೇಷಾಚಾರ್ಯರು - ಕವಿ ಕನಕದಾಸರು
(ಪ್ರ). ಕನ್ನಡ ಪುಸ್ತಕ ಪ್ರಾಧಿಕಾರ
ಬೆಂ.2010. ದ್ವಿತೀಯ ಮುದ್ರಣ

3. ಕೃಷ್ಣಶರ್ಮ ಬೆಟಗೇರಿ - ಕನಕದಾಸರ ಹಾಡುಗಳು
ಹುಚ್ಚರಾಯ ಬೆಂಗೇರಿ
ಸಮಾಜ ಪುಸ್ತಕಾಲಯ, ಧಾರವಾಡ, 1965

4. ಸಿ.ಗೋಪಾಲಕೃಷ್ಣ ಮೂಡಂಬೈಲು - ಮಹಾಭಾರತ ಕೋಶ.

5. ದೇ. ಜವರೇಗೌಡ - ಕನಕದಾಸ ಸಾಹಿತ್ಯ ಸಂಪುಟ-1
(ಸಂ) ಕರ್ನಾಟಕ ಸರ್ಕಾರ,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ನಿರ್ದೇಶನಾಲಯ, ಬೆಂ. 1991.

6. ಡಾ. ಟಿ. ಎನ್. ನಾಗರತ್ನ - ಶ್ರೀ ಕನಕದಾಸರ ಕೀರ್ತನೆಗಳು
ಪಂಡಿತ ಆವೃತ್ತಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು,
2014

7. ಡಾ. ಪಿ.ವಿ. ನಾರಾಯಣ – ಹಳಗನ್ನಡ ಪದಸಂಪದ
(ಪ್ರ) ಕನ್ನಡ ಸಾಹಿತ್ಯ ಪರಿಷತ್ತು
ಬೆ. 2013, ಮೂರನೇ ಮುದ್ರಣ

8. ನಿಜಗುಣ ಶಿವಯೋಗಿ – ವಿವೇಕ ಚಿಂತಾಮಣಿ
ಸಂ. ಜಿ. ವಿ. ಶಿವಲಿಂಗಯ್ಯ
ಕನ್ನಡ ಪುಸ್ತಕ ಪ್ರಾಧಿಕಾರ,
ಬೆಂಗಳೂರು, 2017

9. ಪಂಡಿತ. ಐರೋಡಿ. ಯಜ್ಞನಾರಾಯಣ ಉಡುಪ – ಪುರಾಣ ಭಾರತ ಕೋಶ,
(ಪ್ರ) ಸ್ವಪ್ನ ಬುಕ್ ಹೌಸ್, ಬೆಂ.2014
ತೃತೀಯ ಮುದ್ರಣ

10. ಪಂಡಿತ ಕವಲಿ – ಸಚಿತ್ರ ಕನ್ನಡ–ಕನ್ನಡ ಕಸ್ತೂರೀ ಕೋಶ
ಶ್ರೀ ರಾಮಾಶ್ರಯ ಪ್ರಕಾಶನ
ಧಾರವಾಡ–2013

11. ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರಿ – ಶ್ರೀವತ್ಸ ನಿಘಂಟು
(ಸಂಖ್ಯಾ ವಿಶಿಷ್ಟ ಶಬ್ದಕೋಶ)
(ಪ್ರ) ಕನ್ನಡ ಪುಸ್ತಕ ಪ್ರಾಧಿಕಾರ, ಬೆಂ.2009

12. Monior Williams – A Sanskrit English Dictionary
Motilal Banarasidass Private Ltd.
Delhi, 16th reprint 2011

ಅನುಬಂಧ –3

ಶಬ್ದಾರ್ಥಕೋಶ

ಶಬ್ದಾರ್ಥಗಳ ಮುಂದೆ ಸೂಚಿಸಿರುವ ಸಂಖ್ಯೆಗಳಲ್ಲಿ ಮೊದಲನೆಯದು ಸಂಧಿಯನ್ನೂ, ನಂತರದ್ದು ಪದ್ಯ ಸಂಖ್ಯೆಯನ್ನೂ ಸೂಚಿಸುತ್ತದೆ. ಇಲ್ಲಿಯ ಶಬ್ದಾರ್ಥಗಳು ಪ್ರಸ್ತುತ ಪಠ್ಯಸಂದರ್ಭಗಳಿಗೆ ಅನುಗುಣವಾಗಿವೆ.

ಅಂಗಜ	– ಮನ್ಮಥ	– 1. 41
ಅಂಗೈಸು	– ಆಸೆ ಹುಟ್ಟಿಸು	– 2. 33
ಅಂಟಿನಕೋಲು	– ಬೇಟೆಗಳಲ್ಲಿ ಮೃಗಗಳನ್ನು ಅಟ್ಟುವ, ಎಬ್ಬಿಸುವ ಕೋಲು	– 2. 10
ಅಂಡಲೆ	– ಪೀಡಿಸು, ಕೋಟಲೆ	– 9. 16; 3. 62
ಅಂತರಿಸು	– ತಡಮಾಡು	– 9. 53
ಅಗ್ಗ	– 1. 6; 3. 40; 4. 16; 5. 19; 4. 9;	
ಅಗ್ಗಳ –	– 6. 4; 7. 3; 8. 10, 50; 9. 21,	
ಅಗ್ಗಳಿಕೆ	– ಶ್ರೇಷ್ಠ, ಉತ್ತಮೋತ್ತಮ, ಅಧಿಕ	– 42, 43.
ಅಗಳು	– ಕಂಕದ	– 1. 21; 6. 25
ಅಘಾಡ	– ಅತ್ಯಧಿಕ	– 1. 12; 3.36
ಅಣೆ	– ಮುಟ್ಟು, ಅಡರು	– 1. 22
ಅತಿಗಳೆ	– ಅಲ್ಲಗಳೆ, ನಿರಾಕರಿಸು	– 4. 17

ಅನಿಮಿಷ	– ರೆಪ್ಪೆ ಹೊಯ್ಯದವನು, ದೇವತೆ	– 3. 33, 45;
ಅನೂನ	– ಕುಂದಿಲ್ಲದ	– 2. 45
ಅಬ್ಧಿ	– ಸಮುದ್ರ	– 7. 27
ಅಭಿಧಾನ	– ಹೆಸರು, ನಾಮಧೇಯ	– 1. 25; 3. 38; 3, 26
ಅಭಿನಮಿಸು	– ನಮಸ್ಕರಿಸು	– 1. 32
ಅಭ್ರತಳ	– ಆಕಾಶ	– 9. 20, 46
ಅರಸಂಚೆ	– ರಾಜಹಂಸ	– 1. 37; 5. 24
ಅರುಣಜಲ	– ರಕ್ತ	– 5. 1
ಅರಲು	– ಹೂವು	– 3. 32
ಅರ್ಕಪತ್ರ	– ಎಕ್ಕದೆಲೆ	– 4. 19
ಅರ್ಘ್ಯಪಾದ್ಯ	– ಕೈಕಾಲು ತೊಳೆಯಲು ನೀಡುವ ನೀರು	– 1.11
ಅವನಿಪ	– ಭೂಮಿಯನ್ನು ಪಾಲಿಸುವವ, ಅರಸ	– 1. 25; 3. 58; 4. 1
ಅಕ್ಷಹೃದಯ	– ಅಶ್ವವಿದ್ಯೆ	– 6. 17
ಅಷ್ಟಭೋಗ	– ಎಂಟು ರೀತಿಯ ಭೋಗಗಳು (ಗೃಹ, ತಲ್ಪ, ವಸ್ತ್ರ, ಆಭರಣ, ಸ್ತ್ರೀ, ಪುಷ್ಪ, ಗಂಧ, ತಾಂಬೂಲ)	– 5. 8
ಅಸ್ತಾಂಬುಧಿ	– ಪಶ್ಚಿಮ ಸಮುದ್ರ	– 2. 9
ಅಹಿ	– ಸರ್ಪ	– 5. 29
ಆಖಂಡಲ	– ಇಂದ್ರ	– 3. 62
ಆಚಮನ	– ಆತ್ಮಶುದ್ಧಿಗಾಗಿ ಅಂಗೈಯಲ್ಲಿ ನೀರನ್ನು ಹಾಕಿಕೊಂಡು ಮಂತ್ರಪೂರ್ವಕವಾಗಿ	

		ಕುಡಿಯುವುದು; ಸಂಧ್ಯಾವಂದನೆಯ ಒಂದು ವಿಧಿ.	
	–	4. 21	
ಆನತ	–	ನಮಸ್ಕರಿಸಿದ, ಬಾಗಿದ	– 1. 26; 3. 64
ಆಪ್ಯಾಯನ	–	ತೃಪ್ತಿ, ಹಿತಕರ	– 2. 19
ಆಯತ	–	ಚೆಲುವು, ಸೌಂದರ್ಯಾಧಿಕ್ಯ	– 3. 30
ಆಯತನ	–	ಕ್ರಮ, ರೀತಿಗಳು	– 4. 33; 8.50
ಆಲವಟ್ಟ	–	ಬೀಸಣಿಗೆ, ಚಾಮರ	– 1. 40
ಆಹವ	–	ಯುದ್ಧ	– 9. 24
ಆಳ್ವೇರಿ	–	ಕಂದಕದ ಸುತ್ತೂ ಇರುವ ಎತ್ತರದ ಗೋಡೆ	
	–	1. 21; 6. 25	
ಇಕ್ಕಲಿಸು	–	ಜೊತೆಗೂಡು	– 9. 2
ಇಕ್ಕೆ	–	ಆಶ್ರಯಸ್ಥಾನ, ತಂಗುದಾಣ	– 2. 15
ಇಕ್ಕೆಲ	–	ಎರಡು ಬದಿ	– 9. 52; 9. 6
ಇಕ್ಷು	–	ಕಬ್ಬು	– 4. 15
ಇಟ್ಟಣಿಸು	–	ಕಿಕ್ಕಿರಿ, ಒತ್ತೊತ್ತಾಗು	– 9. 17,25, 58
ಇತ್ತಿಗೆ/ಗ	–	ಮೂರರ ಜೋಡಿ	– 4. 29, 9. 44
ಇತ್ತೆರ	–	ಎರಡೂ ಕಡೆ	– 3. 27, 57; 4. 4
ಇಭ	–	ಆನೆ	– 5. 49
ಈಡಾಡು	–	ಚೆಲ್ಲಾಡು, ಬೀಸಾಡು	– 5. 25
ಉಗಿ	–	ಎಳೆ, ಕಳಚು	– 7. 24

ಉಗು – ಉಕ್ಕು, ಚಿಮ್ಮು, ಸುರಿ – 7. 43

ಉಗ್ಗಡ – ಉತ್ಕಟ, ಉಕ್ಕೇರಿದ – 5. 10

ಉಗ್ಗದ – ಅತಿಶಯ – 7. 5; 7. 35

ಉತ್ಕರ – ಸಮೂಹ – 1.11

ಉದ್ದಂಡ – ಮೇಲೆತ್ತಿದ ತೀಕ್ಷ್ಣವಾದ – 9. 11

ಉದ್ಭ್ರಮಿಸು – ಹುಚ್ಚಾಗು – 4. 10

ಉಡಿ – ಒಡೆ, ಮುರಿ – 9. 27

ಉಪಲ – ಕಲ್ಲು, ಶಿಲೆ – 1.44

ಉಪಹತಿ – ತೊಂದರೆ, ನಾಶ, ಕೇಡು– 4. 40; 5. 59; 9. 48

ಉಪ್ಪರಿಗೆ – ಮೇಲುಮಾಳಿಗೆ, ಸೌಧ – 1.20; 3.28; 5.51,54

ಉಮ್ಮಳ/ಉಮ್ಮಳಿಸು– ವ್ಯಥೆಪಡು, ದುಃಖಿಸು, ಕಳವಳಿಸು – 1.15, 19,28; 8.44

ಉರವಣಿ – ತ್ವರೆ, ಅವಸರ, ತುರ್ತು – 5.4, 32; 6.13; 7.6, ,40; 8.38; 9.17,58

ಉರುತರ –ಬಹಳ ದೊಡ್ಡ, ಅಸಾಮಾನ್ಯವಾದ 1.16. 20, 33; 3. 14, 27; 4.19, 6. 24; 8.14

ಉರುಬು – ವಿಜೃಂಭಿಸು, ರಭಸವಾದ, ಆಕ್ರಮಣ, ಆರ್ಭಟ – 3. 50, 73; 5. 45, 47

ಉರುಹು – ದಹಿಸು – 6. 7

ಉಲುಪೆ – ಉಡುಗೊರೆ – 8. 39

ಎಚ್ಚು – ಬಾಣ ಪ್ರಯೋಗಮಾಡು, ಎಸೆ – 1. 37; 9.26

ಎಣೆ – ಸರಿಸಮಾನ – 1. 34

ಎಲು	– ಎಲುಬು	– 9. 27
ಎಸುಗೆ	– ಎಸೆತ	– 3. 28
ಎಸೆ	– ಶೋಭಿಸು	– 1.27; 2.6, 16,29; 4. 17; 7. 1
ಏಕಾವಳಿ	– ಒಂಟಿಳೆಸರ	– 2. 34
ಏಣಲೋಚನೆ	– ಜಿಂಕೆಯಂತೆ ಕಣ್ಣುಳ್ಳವಳು	– 5. 24
ಐದು, ಐತರು	– ಹೋಗಿ ಸೇರು, ತಲಪು	– 4.13, 24; 5. 45
ಒಗ್ಗು	– ರಾಶಿ, ಸಮೂಹ, ಗುಂಪಾಗು	– 3. 10; 7. 4
ಒರಲು	– ಅರಚು, ಗೋಳಿಡು, ಕೂಗು	– 5.28; 9. 34
ಒರಸು	– ತಿಕ್ಕು, ಉಜ್ಜು, ನಾಶಮಾಡು	– 9. 28
ಒಸಗೆ	– ಮಂಗಲವಾರ್ತೆ, ಸಮಾರಾಧನೆ	– 7. 41
ಒಸೆದು	– ಪ್ರೀತಿಸಿ	– 3. 17; 4. 17
ಓದಿಸು	– ಉಡುಗೊರೆ ನೀಡು	– 9. 12
ಓಪಾದಿ	– ಹಾಗೆ, ರೀತಿಯಲ್ಲಿ	– 5. 16, 60
ಓಸರಿಸು	– ಸರಿಸು, ಹಿಂದೆಗೆ, ಪಕ್ಕಕ್ಕೆ ಹೋಗು	– 4. 27; 7. 7
ಔಕು	– ಅದುಮಿ ಹಿಡಿ, ಒತ್ತು	– 5. 12; 9. 32
ಕಂಚುಕಿ	– ರಾಣಿವಾಸದ ಪರಿಚಾರಿಕೆ	– 3. 55
ಕಂತುಪಿತ	– ಮನ್ಮಥನ ತಂದೆ, ವಿಷ್ಣು	– 9. 53
ಕಂಧರ	– ಕತ್ತು, ಕೊರಳು	– 7. 40
ಕಂಬುಕಂಠ	– ಶಂಖದಂಥ ಕೊರಳು	– 1. 33

ಕಕ್ಕಡೆ / ಕಕ್ಕಡೆ	– ಕರ್ಕಟಕಾ(ಸಂ); ಒಂದು ಬಗೆಯ ಚುಚ್ಚು ಆಯುಧ, ಕಠಾರಿ	– 9. 23
ಕಕ್ಷಪಾಳ	– ಕಂಕುಳ ಚೀಲ	– 8. 24
ಕಟವಾಯಿ	– ಬಾಯಿಯ ತುದಿ	– 5. 30
ಕಠಾರಿ	– ಚೂರಿ	– 2. 10; 9. 23
ಕಣ್ಣಿ	– ಹಗ್ಗ, ಕುಣಿಕೆ	– 2. 10
ಕದಂಬ	– ಈಚಲು	– 1. 24
ಕದಳಿ	– ಬಾಳೆ	– 1. 24
ಕಪಿತ್ಥ	– ಬೇಲ	– 1. 24, 42
ಕಮಲಾಯತಾಂಬಕಿ	– ತಾವರೆಯ ದಳದಂತೆ ವಿಶಾಲವಾದ ಕಣ್ಣುಳ್ಳವಳು	– 9. 54
ಕಮಲಾಕ್ಷ	– ವಿಷ್ಣು, ಕಮಲದಂತೆ ವಿಶಾಲವಾದ ಕಣ್ಣುಳ್ಳವನು	– 3. 33
ಕಮಲಾಸನ	– ಬ್ರಹ್ಮ	– 4. 7
ಕರಕರೆ	– ಕತ್ತಿ, ಖಡ್ಗ	– 5. 29
ಕರಿಗಮನ	– ದೇವೇಂದ್ರ	– 3. 18
ಕರುಮಾಡ	– ಉಪ್ಪರಿಗೆ	– 9. 61
ಕವಾಟ	– ಬಾಗಿಲು	– 1. 20; 6. 25
ಕಹಳೆ	– ತುತ್ತೂರಿ	– 9. 29
ಕಳಕಳಿಕೆ	– ಕಲಕಲ ಶಬ್ದ	– 9. 20, 58
ಕಾಕಬಳಸು	– ಕೆಟ್ಟದನ್ನು ಯೋಚಿಸು	– 6. 17

ಕಾಪುರುಷ	– ಕೆಟ್ಟವನು	– 7. 14
ಕಾಮ್ಯ	– ಬಯಕೆ, ಇಚ್ಛೆ	– 9. 68
ಕಾಯಜ	– ಮನ್ಮಥ	– 3. 30
ಕಾರಣೆ	– ಬಣ್ಣದ ಗೆರೆ	– 3. 7
ಕಾರ್ಕೋಟಕ	– ಒಬ್ಬ ವಿಷಯುಕ್ತ ಸರ್ಪರಾಜ	– 6. 11, 22
ಕಾಳಕೂಟ	– ಭಯಂಕರ ವಿಷ, ಹಾಲಾಹಲ	– 5. 23
ಕಾಲಭುಜಗ	– ಕಾಳಸರ್ಪ	– 5. 29
ಕುಂತ	– ಭರ್ಜಿ, ಈಟಿ	– 9. 23
ಕುಟಜ	– ಕೊಡಸಿಗೆ, ಕೊಡಂಜಿ	– 1. 24, 42
ಕುಟಿಲ	– ದುಷ್ಟ, ಕುತಂತ್ರದ	– 3.47; 4.3; 9. 41
ಕುರವಕ	– ಗೋರಂಟಿ, ಗೋರಟೆ, ಮದರಂಗಿ – 1. 24	
ಕೇತಕಿ	– ಕೇದಿಗೆ, ತಾಳೆಗಿಡ	– 1. 24; 4. 15
ಕೇಳಮೇಳ	– ಕೈಗೋಲು ಹಿಡಿದವರು	– 3. 58
ಕೈದು	– ಆಯುಧ, ಶಸ್ತ್ರ	– 2. 10; 3.27; 9.18
ಕೈನೆಗಹು	– ಕೈ ಮೇಲೆತ್ತು, ಉದ್ಘೋಷಿಸು	– 8. 14
ಕೈಮರೆ	– ಕೈಮುಗಿ	– 9. 34
ಕೈವಾರಿಸು	– ಹೊಗಳು	– 3. 3; 4. 25
ಕೈಸದರದವರು	– ಕೈಸೆರೆಯಾಗಿರುವವರು	– 2. 17
ಕೊತ್ತಳ	– ಬುರುಜು, ಕೋಟೆಯ ಮೇಲ್ಭಾಗ	– 1.20; 3.26; 6.25

ಕೋಲುಗಾರ	– ಬಿಲ್ಗಾರ, ಬೇಟೆಗಾರ	– 5. 29
ಕ್ರತು	– ಯಾಗ, ಯಜ್ಞ	– 7. 22
ಕ್ರಮುಕ	– ಕಂಗು, ಅಡಕೆ	– 1.24; 7. 42
ಕ್ಷೋಣಿಪತಿ	– ಭೂಪತಿ, ರಾಜ	– 3. 68
ಖಂಡಿಸು	– ಕಡಿದು ತುಂಡಾಗಿಸು	– 5.29; 9.29, 30
ಖಗ	– ತೋಡಿದ	– 2. 26
ಖತಿ / ಖಾತಿ	– ಕೋಪ, ವ್ಯಗ್ರ	–3.22;4.8,11; 5.31; 9. 21, 27, 37
ಖಯಖೋಡಿ	– ದಾಕ್ಷಿಣ್ಯ	– 9. 5
ಖಾಡಾಖಾಡಿ	– ಹುರುಪಿನ ಸ್ಪರ್ಧೆ	– 9. 44
ಖಾತಗಳು	– ಅಗೆದ ಕಂದಕ	– 1. 21
ಗಂಧವಟ್ಟಿಗೆ	– ಬಾಗಿಲಿಗೆ ಆಧಾರವಾಗಿ ಅಳವಡಿಸುವ ಗಂಧದ ಪಟ್ಟಿಕೆ	– 1. 20
ಗಂಭೀರ ಭೇರಿ	– ಘನವಾಗಿ ಶಬ್ದಿಸುವ ಟೊಳ್ಳು ನಗಾರಿ	– 9. 17
ಗಡಣ	– ಸಮೂಹ, ಗುಂಪು	– 1.9; 7. 40
ಗದಗದಿಸು	– ಆತಂಕಗೊಳ್ಳು, ಬೆದರಿ ನಡುಗು	– 6. 7
ಗನ್ನ	– ಮೋಸ, ಕಪಟ, ಕಳ್ಳತನ	– 3. 60
ಗಮನ	– ಹೋಗು, ಸಂಚರಿಸು	– 2. 9, 32, 47; 3.9, 56; 4. 44; 7. 22; 8.37

ಗರಗರಿಕೆ	– ತಾಜಾತನ, ಚೆಲುವು	– 8. 51
ಗರಳ	– ವಿಷ	– 5.23,27; 6.17,18
ಗಹ್ವರ	– ಪ್ರವೇಶಿಸಲು ಅಸಾಧ್ಯವಾದ, ಗವಿ	– 4. 37; 6.23
ಗಾಂಡೀವಿ	– ಅರ್ಜುನ	– 9. 66
ಗಾರುಗೆಡಿಸು	– ಹಿಂಸಿಸು, ಗಾಸಿಮಾಡು	– 8. 5
ಗಾವಳಿ	– ಕೂಗಾಟ, ಗದ್ದಲ, ಗುಂಪು	– 4. 41
ಗೀರ್ವಾಣಿ	– ಸರಸ್ವತಿ	– 3. 63
ಗುಪಿತ	– ಗುಪ್ತ, ರಹಸ್ಯ	– 3. 24; 8. 2
ಗುಹ್ಯಕ	– ಕುಬೇರ	– 3. 49
ಗೆಲಿ	– ಲೇಪಿಸು	– 3. 53
ಗೊರವಂಕ	– ಮೈನಾ	– 1. 42
ಗೌರುಗಹಳೆ	– ಬೃಹದ್ಘೋಷ ಮಾಡುವ ಕೊಂಬು ಕಹಳೆ	– 9. 18
ಘಲ್ಲಣೆ	– ತೊಂದರೆ, ಕಾಟ	– 2. 12
ಘಳಿಲನೆ	– ಕೂಡಲೆ, ತಟ್ಟನೆ	– 3. 67
ಘಾತ	– ಆಳ	– 6. 25
ಚಡಾಳಿಸು	– ಆಧಿಕ್ಯ, ಹೆಚ್ಚಳ	– 4. 1; 9. 1
ಚತುರ್ಥರು	– ಶೂದ್ರರು	– 6. 27
ಚಯ	– ಸಮೂಹ	– 9. 10
ಚಾಪ	– ಬಿಲ್ಲು	– 9. 36

ಚಾರಿ	– ಪಗಡೆಕಾಯಿ	– 4. 37
ಚೀತ್ಕೃತಿ	– ಕಿರುಗಟ್ಟುವಿಕೆ	– 8. 38
ಚೌರಿ	– ಚಾಮರ	– 9. 59
ಛಡಾಳಿಸು	– ಶೀಘ್ರವಾಗಿ, ರಭಸವಾಗಿ	– 4. 1; 9. 20
ಜಂಬಾರಿ	– ಇಂದ್ರ (ಜಂಬನೆಂಬ ರಾಕ್ಷಸನ ವೈರಿ)	– 1.5; 4.5
ಜನಪದ	– ಜನಸಮುದಾಯ, ನಾಡು	– 6. 23
ಜಾನುಜಂಘೆ	– ಮೊಣಕಾಲು ಮತ್ತು ಪಾದದ ಗಂಟು	– 2. 14
ಜಾಲಂದ್ರ	– ಸಣ್ಣ ಸಣ್ಣ ರಂಧ್ರಗಳಿರುವ ಕಿಟಕಿ	– 8. 49; 9. 61
ಜಿಲಿಬಿಲಿಗ	– ಒಂದು ಹಕ್ಕಿ	– 1. 42
ಜೋಧ	– ಯೋಧ	– 9. 34
ಝುಲ್ಲರಿ	– ಕುಚ್ಚು, ಕೊಂಡೆ	– 9. 20
ಡೊಂಬಿ	– ಬಾಹ್ಯಾಡಂಬರ	– 8. 57
ಢಾಳ	– ಉಜ್ವಲಕಾಂತಿ, ಮೆರುಗು	– 2. 6
ತಂಬಟ	– ತಮಟೆ	– 3. 50
ತಕ್ಕೋಲ	– ಸುಗಂಧಿತ ಚಕ್ಕೆಯ ವೃಕ್ಷ	– 1. 24
ತಟಾಕ	– ದಡದಿಂದಾವೃತವಾದ ಕೆರೆ	– 6. 34
ತಮಾಲ	– ಹೊಂಗೆ	– 1. 24
ತರಣಿ	– ಸೂರ್ಯ	– 5. 20
ತರಹರಿಸು	– ಸೈರಿಸು, ಸಹಿಸಿಕೊ	– 5. 47; 9. 27, 35
ತಳಿಗೆ	– ಹರಿವಾಣ	– 3. 7

ತಳಿತ	– ಚಿಗುರಿದ	– 3. 16
ತಳಿದ	– ತುಂಬಿದ	– 4. 41
ತಳಿತ	– ಚಿಮುಕಿಸಿದ	– 2. 32
ತಳೋದರಿ	– ತೆಳ್ಳಗಿನ ನಡುವುಳ್ಳವಳು	– 1. 17; 2.46; 3. 19, 20
ತಳ್ಕಿಸು	– ಆಲಂಗಿಸು	– 7. 32
ತಾಮರಸ	– ಕೆಂದಾವರೆ	– 5. 54; 7. 13
ತಾರುತಟ್ಟು	– ಚೆಲ್ಲಾಪಿಲ್ಲಿ, ಅವ್ಯವಸ್ಥೆ	– 9. 35
ತಾರೆಯ ಮರ	– ಕಲಿದ್ರುಮ, ಶಾಂತಿಮರ (ತ್ರಿಫಲಗಳಲ್ಲೊಂದು)	– 8. 33
ತಾಲವೃಕ್ಷ	– ತಾಳೆಮರ	– 1.24
ತಾಳಿಗೆ	– ನಾಲಗೆ	– 5. 1
ತಿಗುರು	– ಸುಗಂಧದ್ರವ್ಯ	– 3. 53
ತಿರು	– ಹೆಡೆ, ಬಿಲ್ಲಿನ ಹಗ್ಗ	– 9. 28
ತುಂಗ ವಿಕ್ರಮ	–	– 3. 69
ತುಡುಕು	– ಮುಟ್ಟು, ತಾಗು	– 1. 21
ತುರಗ	– ಕುದುರೆ	– 1.7;2.11,15;8.13, 18, 19, 26, 31, 38
ತೂಪಿರಿ	– ದೃಷ್ಟಿ ತೆಗೆಯಲು ಉಫ್ ಎಂದು ಊದು	– 5. 14
ತೂಳಿದುವು	– ತುಳಿದು ಮುನ್ನುಗ್ಗಿದುವು	– 5. 46

ತೂಳು	– ಬೆನ್ನಟ್ಟು	– 5. 46
ತೆನೆ	– ಕೋಟೆಯ ಅತ್ಯುನ್ನತ ತುದಿ	–6. 25
ತೆರಹು	– ಸ್ಥಳಾವಕಾಶ	– 9. 31
ತೇಜಿ	– ಕುದುರೆ	– 7.5; 8.29,37; 9. 34,58
ತೊಡಚು	– ತೊಡಗು	– 9. 9
ತೋಮರ	– ಈಟಿಯಂತಹ ಆಯುಧ	– 9. 23
ತೋಯಜಾಪ್ತ	– ಸೂರ್ಯ(ಕಮಲದ ಹೂವಿಗೆ ಆಪ್ತ)	– 5. 42
ತೋರಹತ್ತ	– ಶಕ್ತಿಯುತ ಬಾಹು	– 4. 5
ತಳ್ಕೈಸು	– ಆಲಂಗಿಸು	– 7. 41, 43
ದಂಡಿಗೆ	– ಮೇನೆ	– 7. 40
ದರ್ಭಾಸ್ತರಣ	– ದರ್ಭಾಸನ, ಗರಿಕೆ ಹುಲ್ಲಿನಿಂದ ಮಾಡಿದ ಆಸನ	– 1. 11
ದಳ್ಳುರಿ	– ದಹಿಸುವ ಉರಿ	– 6. 6
ದಾರವಟ್ಟ	– ಹೆಬ್ಬಾಗಿಲು	– 3. 27
ದುಂದುಭಿ	– ಒಂದು ಚರ್ಮವಾದ್ಯ	– 8. 0, 64; 9.46
ದುಕೂಲ	– ನಯವಾದ ರೇಶಿಮೆಯ ಮೇಲು ವಸ್ತ್ರ, ಚೀನಾಂಬರ	– 5. 57; 8. 64
ದುಗ	– ಎರಡರ ಜೊತೆ, ಎರಡರ ಎಣಿಕೆ	– 4. 29; 9. 44
ದ್ಯೂತ	– ಜೂಜು	– 4. 23; 5. 36
ದೇಸಿ	– ಚೆಲುವು	– 2. 31

ದೇಸಿಗ	– ಪರದೇಶಿ, ಅನಾಥ	– 5. 58
ದೋರ್ಬಲ	– ಬಾಹುಬಲ	– 1. 26
ದ್ಯುಮಣಿ	– ಸೂರ್ಯ	– 4. 35
ಧರಧುರ	– ಅಬ್ಬರ	– 8. 38
ಧಾತುಗುಂದು	– ಶಕ್ತಿಹೀನವಾಗು, ನಿಸ್ತೇಜವಾಗು	– 2. 46; 5. 36; 7.9; 9.20
ಧುರ	– ಯುದ್ಧ	– 1.26; 4.27; 9. 36
ದೈವಜ್ಞ	– ಜ್ಯೋತಿಷಿ	– 3.9; 8. 26
ನಭೋನಿನದ	– ಆಕಾಶವಾಣಿ	– 7. 16
ನಯಸು	– ಕರುಣೆ ತೋರು	– 7. 9
ನಸಿ	– ಬಾಡು, ಕಳೆಗುಂದು	– 5. 52
ನಿಕುರುಂಬ	– ಸಂದಣಿ, ಸಮೂಹ	– 3. 63, 70; 9. 62
ನಿಗಮ	– ವೇದ	– 3. 65
ನಿಚಯ	– ಸಮೂಹ, ರಾಶಿ	– 1. 7, 24; 6. 26
ನಿಜಾಯತ	– ನಿಜರೂಪ, ಸಹಜವಾದ ಚೆಲುವು	– 3. 30, 61
ನಿಬ್ಬರ	– ವೇಗ, ರಭಸ	– 2. 20; 7. 6
ನಿರಿಗುರುಳು	– ಮೆಟ್ಟಿಲು ಮೆಟ್ಟಿಲಾದ ಕೇಶರಾಶಿ, ಗುಂಗುರು ಕೂದಲು	– 1. 33
ನಿರೀಕ್ಷಿಸು	– ಕಣ್ಣಲ್ಲಿ ಕಣ್ಣಿಟ್ಟು ನೋಡು, ಸೂಕ್ಷ್ಮವಾಗಿ ಅವಲೋಕಿಸು	– 8. 12

ನಿರ್ಜರ	– (ಜರಾ–ಮುಪ್ಪು) ಮುಪ್ಪಿಲ್ಲದವನು, ದೇವತೆ	– 1. 1
ನಿರ್ದಾಯ	– ಸಂಪೂರ್ಣ, ಶಾಶ್ವತ	– 4. 33; 8. 32
ನಿಧಾನ	– ಆಶ್ರಯ	– 8. 21
ನಿವಹ	– ಗುಂಪು, ಸಮೂಹ	– 1. 10; 2. 8; 4
ನಿವಹ	– ಸಮೂಹ	– 3. 57
ನಿಶಿತ	– ತೀಕ್ಷ್ಣ, ಹರಿತ	– 4. 36
ನಿಸ್ಸಾಳ	– ಭೇರಿ	– 3. 50, 73
ನೆಗಹು	– ಮೇಲೆತ್ತು	– 9. 56, 57
ನೆಗಳು	– ಯೋಜಿಸು, ರಚಿಸು, ಸೃಷ್ಟಿಸಿಕೋ	– 4. 22
ನೆಗ್ಗು	– ಪುಡಿಪುಡಿಯಾಗು, ನಾಶವಾಗು	– 9. 27, 30
ನೆತ್ತ	– ಪಗಡೆಯಾಟ	– 4, 23, 26; 9. 44
ನೆರಹು	– ಜೊತೆಗೂಡು	– 9. 22
ನೆಲೆ, ನೆಲೆಮಾಡ	– ಉಪ್ಪರಿಗೆ	– 5. 51; 9. 61
ನೋನು / ನೋಂಪಿ	– ವ್ರತಾಚರಣೆ	– 5. 35; 8. 5
ಪಂಚಕ	– ಐದು	– 4. 29
ಪಜ್ಜಳಿಸು	– ಪ್ರಜ್ವಲಿಸು, ಹೊಳೆ, ಪ್ರಕಾಶಿಸು	– 1. 27
ಪಟುಭಟ	– ದೃಢಕಾಯನಾದ ಶೂರಸೈನಿಕ, ಸಮರ್ಥ ಶೂರ	– 3.27; 5.47; 9,51
ಪಣ್ಯಾಂಗನೆ	– ಹಣಕ್ಕೆ ಹೊಂದಿಕೊಳ್ಳುವವಳು, ವೇಶ್ಯೆ	– 9. 62
ಪತಾಕದ ಛತ್ರ	– ರಾಜಮನೆತನದ ಸಂಕೇತಗಳುಳ್ಳ ಛತ್ರಿ	– 9. 20

ಪತಿಕರಿಸು	– ಅನುಗ್ರಹಿಸು, ದಯೆತೋರು	–3. 66
ಪತಿತ	– ನೀತಿಹೀನ, ಧರ್ಮ ಭ್ರಷ್ಟ	– 8. 21
ಪದುಳ	– ಕುಶಲ, ಕ್ಷೇಮ, ಹದುಳ	– 9. 19
ಪದ್ಮ ಸಂಖ್ಯೆ	– ಶತ ಲಕ್ಷಕೋಟಿ (10,00,00,00,00,00,000)	– 8. 34
ಪನ್ನಗಾರಿಧ್ವಜ	– ಕೃಷ್ಣ, ಹಾವಿನ ಶತ್ರುವಾದ ಗರುಡನನ್ನು ತನ್ನ ಧ್ವಜ ಸಂಕೇತವಾಗಿ ಉಳ್ಳವನು	– 6.16, 21; 4. 5
ಪರಮೇಷ್ಠಿ	– ಬ್ರಹ್ಮ	– 8. 24
ಪರಶು	– ಕೊಡಲಿ	– 9. 23
ಪರಿಘ	– ಕಬ್ಬಿಣದ ದೊಣ್ಣೆ, ಗದೆಯಂತಹ ಆಯುಧ	– 9.23, 24
ಪರಿಚರಿಸು	– ಉಪಚರಿಸು	– 6. 13
ಪರಿತೋಷ	– ಆನಂದ, ಹಿಗ್ಗು	– 3. 35
ಪರಿಹೃತ	– ನಿವಾರಿಸಿಕೊಂಡ	– 2. 14
ಪರುಠವ	– ವಿಸ್ತಾರ, ವಿಶಾಲ	– 1. 20
ಪರುಠವಿಸು	– ವಿಶೇಷವಾಗಿ ಗಮನಿಸು, ಪರೀಕ್ಷಿಸು, ವಿಸ್ತರಿಸಿ ಹೇಳು	– 8. 19
ಪಲ್ಲೈಸು	– ತುಂಬು, ಕೋರೈಸು	– 9. 57
ಪಾಕಶಾಸನ	– ಇಂದ್ರ(ಕಾಪನೆಂಬ ರಾಕ್ಷಸನನ್ನು ಶಾಸಿಸಿದವನು)	– 3. 11
ಪಾರ್ಥಿವರು	– ಅರಸರು	– 4. 27
ಪಾಠಕ	– ಹೊಗಳು ಭಟ	– 3. 72

ಪಾಟಳಿ	– ಪಾದರಿ	– 1. 42
ಪಾಯದಳ	– ಕಾಲಾಳುಸೇನೆ, ಪದಾತಿ	– 1.23; 3.50; 6.27; 8. 29; 9. 34
ಪಾಯವಧಾರು	– ಎಚ್ಚರಿಕೆ, ಜಾಗ್ರತೆ	– 3. 55
ಫಾಲಲೋಚನ	– ಹಣೆಗಣ್ಣ, ಶಿವ	– 3. 40
ಪಾವಕ	– ಅಗ್ನಿ	– 3.25; 5. 23; 6. 9
ಪಾಸಟಿ	– ಸರಿಸಾಟಿ, ಸರಿದೊರೆ	– 2. 25
ಪಿಟ್ಟಣಿಸು	– ದಟ್ಟೈಸು	– 5. 47
ಪುಳಿಂದ	– ಬೇಡ	– 5. 32
ಪುರುಹೂತ	– ಇಂದ್ರ	– 3. 39; 9. 2
ಪೂಗಣೆಯ	– ಮನ್ಮಥ	– 3. 26
ಪೂರಾಯ	– ಬಹಳ ದೊಡ್ಡ, ಅತೀವ	– 5. 55
ಪೆರನೊಸಲು	– ಚಂದ್ರನಂತೆ ಕಾಂತಿಯುತವಾದ ಹಣೆ	– 1. 33; 2. 31
ಪೊಂಬೊಗರು	– ಹೊನ್ನಿನ ಪ್ರಭೆ	– 2. 24
ಪ್ರಚ್ಛನ್ನ	– ಗುಪ್ತ, ಮರೆಯಾದ	– 3. 67
ಪ್ರಣತಿಸು	– ನಮಸ್ಕರಿಸು	– 1. 34
ಪ್ರಸರ	– ಸಮೂಹ	– 4. 25
ಪ್ರಾಕೃತರು	– ಅಸಂಸ್ಕೃತರು, ಮೂಢರು	– 3. 44
ಬಕುಳ	– ನಾಗಕೇಸರಿ	– 1. 24, 42

ಬಟ್ಟೆ	– ದಾರಿ	– 5. 1
ಬಡಬಾನಲ	– ಸಮುದ್ರದ ಮಧ್ಯದಲ್ಲಿ ಏಳುವ ಹೆಣ್ಣು ಕುದುರೆಯಾಕಾರದ ಪ್ರಳಯಕಾಲದ ಕಿಚ್ಚು	– 6. 9
ಬಣಗು	– ಕ್ಷುದ್ರ, ಅಲ್ಪ	– 1. 34
ಬಣಜಿಗ	– ವ್ಯಾಪಾರಿ	– 5. 39
ಬಲ್ಲೆಹ	– ಭರ್ಜಿ	– 9. 23
ಬಾಸುರ	– ಸುಂದರ	– 1.9; 3.10; 4.26; 8. 26
ಬಾಹಿರ	– ಬಹಿಷ್ಕೃತ, ಹೊರಗಿನ	– 2.38; 4.37; 5. 7; 6.3; 8. 16; 8. 55
ಬಾಹೆ	– ಹೊರಗೆ	– 2. 10
ಬಿಂಡಿವಾಲ	– ಈಟಿ	– 9. 23
ಬಿಗುಹು	– ಜೀನು	– 9. 57
ಬಿರುದಾಯಕ	– ಬಿರುದಿಗೆ ಅರ್ಹನಾದವನು	– 8. 32
ಬಿಸರುಹಾಕ್ಷಿ	– ತಾವರೆಯಂತೆ ಕಣ್ಣುಳ್ಳವಳು	– 2. 6; 4. 36
ಬೀಯ	– ವ್ಯರ್ಥ, ನಿಷ್ಪ್ರಯೋಜಕ	– 3. 23; 4. 33
ಬೆಗಡುಗೊಳಿಸು	– ಗಾಬರಿಗೊಳಿಸು	– 3. 65
ಬೆರಸು	– ಅಟ್ಟಿಸಿಕೊಂಡು ಹೋಗು	– 9. 24, 25, 29
ಬೆಲ್ಲನತ್ತ	– ಬಿಲ್ವಪತ್ರೆ	– 4. 15
ಬೇಹಾರಿ	– ವ್ಯವಹಾರಿ, ವ್ಯಾಪಾರಿ	– 5. 38

ಬೊಬ್ಬಿರಿ	– ಹರ್ಷೋದ್ಗಾರ ಮಾಡು	– 9. 44
ಬೋದಿಗೆ	– ಕಂಭದ ಮೇಲಿರಿಸುವ ಅಡ್ಡಹಲಗೆ	– 2. 30
ಭಣಿತೆ	– ಶೈಲಿ	– 1. 34
ಭವದೂರ	– ಸಂಗದ ಆಕರ್ಷಣೆಗಳಿಂದ ದೂರವಾದ	– 1. 14
ಭವನಿಕೆ	– ಸಭಾಭವನ	– 1. 22
ಭುಜಂಗ	– ಸರ್ಪ	– 6. 18
ಭೂರಿ	– ವಿಶೇಷ. ಅಧಿಕ, ಅತಿಶಯ	– 1.5, 25; 5.39; 8.25;9.39
ಭೂರುಹ	– ವೃಕ್ಷ, ಮರ(ಮಣ್ಣಿನಲ್ಲಿ ಬೆಳೆದದ್ದು)	– 9. 43
ಭೋಗಿ	– ಸರ್ಪ	– 6. 10
ಮಂಡಲಾಧಿಪ	– ಪ್ರಾಂತ್ಯಾಧಿಪತಿ	– 3. 62
ಮಕರ ಕೇತನ	– ಮನ್ಮಥ (ಮೊಸಳೆಯಚಿಹ್ನೆ ಯಿರುವ ಧ್ವಜವುಳ್ಳವ)	– 7. 10
ಮಖ	– ಯಾಗ	– 8. 13
ಮಟ್ಟಿ	– ಗೋಪಿಚಂದನ	– 8. 24
ಮಡ	– ಹಿಮ್ಮಡಿ	– 7. 5, 7
ಮದನಾರಿ ಸತಿ	– ಪಾರ್ವತಿ (ಶಿವನ ಪತ್ನಿ)	– 5. 39
ಮನ್ನಿಸು	– ಗೌರವಿಸು, ಸನ್ಮಾನಿಸು	– 3. 72; 9. 51
ಮರಾಳ	– ಹಂಸ	– 2. 28, 48
ಮರುವಲಗೆ	– ಮರುದ್ಯೂತ	– 9. 38

ಮಸಗು – ರೇಗು, ಕೋಪಗೊಳ್ಳು– 4. 41; 9. 37

ಮಸಗು – ವಿಜೃಂಭಿಸು, ಅರಳು – 2. 6

ಮಾರಾಂಗನೆ – ರತಿ – 5. 39

ಮಾರುತ ಸಖ – ಅಗ್ನಿ – 7. 16

ಮಾರ್ಗಣ – ಬಾಣ – 9. 36

ಮಿಡುಕು – ವ್ಯಥೆಪಡು – 4. 13; 5. 4

ಮಿಸುನಿ – ಚಿನ್ನ – 1. 19; 2.6; 4.25; 5. 52; 6. 26

ಮುಂಚು – ಮುನ್ನುಗ್ಗು, ಮುಂದುವರಿ – 9. 18

ಮುಕ್ತಾಫಲ – ಮುತ್ತು – 3. 35

ಮುಗ್ಗು – ಮುಗ್ಗರಿಸು, ಎಡಹು – 9. 26, 35

ಮುಟ್ಟಿ – ಗೋಪಿಚಂದನ

ಮುದ್ಗರ – ಗದೆ – 9. 28

ಮುಮ್ಮೊನೆ/ಮೊನೆ – ಮುಂಚೂಣಿ – 5.46; 9. 21, 24

ಮುರಾಂತಕ/ಮುರಹರ – ಕೃಷ್ಣ (ಮುರನೆಂಬ ರಾಕ್ಷಸನನ್ನು ಕೊಂದವನು) – 1. 2; 2. 5

ಮುರಿ – ತಿರುಗಾಡು, ಅಲೆದಾಡು – 4. 18; 5. 46, 47

ಮುರಿ – ಮುರಿದುಹೋಗು, ನಾಶಗೊಳಿಸು – 5. 19; 9. 37

ಮುರಿ – ನಿರಾಕರಿಸು – 7. 36

ಮುರಿಮುರಿದ – ತಿರುವು ತಿರುವಾದ – 1. 20

ಮುರುಹು – ತಿರುಗಿಸು, ಬಾಗು – 7. 7

ಮುಸುಂಡಿ – ಮೂರು ಮೊನೆಯ ಆಯುಧ

ಮುಸು – ಗೋಲಾಂಗೂಲ, ಕಪ್ಪು ಮುಖದ ಕಪಿ – 2. 12

ಮೃಗತತಿ – ಜಿಂಕೆಗಳ ಗುಂಪು – 2. 12; 6. 7

ಮೃಗಪತಿ – ಸಿಂಹ – 1. 13

ಮೇದಿನಿ – ಭೂಮಿ – 1.17; 9. 72

ಮೇದಿನೀಪತಿ – ಅರಸ – 4. 28

ಮೇಲ್ವಾಸು – ಮೇಲು ಹಾಸಿಗೆ – 5. 2

ಮೊನೆ – ಯುದ್ಧ, ಮುಂಭಾಗ –

ಮೊರಡಿ – ಕಲ್ಲು ದಿಣ್ಣೆ – 5. 45

ಮೋಹರ – ಸೈನ್ಯ – 2.11; 9.17, 23,35

ಮೋಹರಿಸು – ಗುಂಪುಗೂಡು – 3. 73; 9. 17

ಮೌನಿವ್ರಾತ – ಮುನಿಸಮೂಹ – 1. 18; 5. 38

ಮೌಳಿ – ಹಣೆ – 4. 1

ಯಮಸೂನು/ಯಮಸುತ – ಯಮನ ಮಗ, ಧರ್ಮರಾಯ –9. 65, 70

ಯಮಳರು – ಜೊತೆಯಾಗಿ ಹುಟ್ಟಿದವರು,
ನಕುಲ, ಸಹದೇವರು – 9. 70

ಯೋಜನ – ಎರಡು ಗಾವುದ ದೂರ
(12 ಮೈಲುಗಳು) – 5. 18; 6.23; 8. 23, 32

ರಂಜಿಸು – ಪ್ರಕಾಶಿಸು, ಶೋಭಿಸು – 1. 4, 27,21, 20; 2. 24

ರವಗಾಲು – ಶಬ್ಧಾರ್ಭಟ ಸಹಿತಹೆಜ್ಜೆ ಹಾಕುವುದು – 7. 5

ರವಿಶಶಿಯ ವೀದಿ/ಶಾಲೆ – ಪೂರ್ವ ಪಶ್ಚಿಮ,
ದಕ್ಷಿಣೋತ್ತರ ಬೀದಿಗಳು –1.22; 626

ರಸಾಯನ – ರುಚಿಕರವಾದ – 8. 46

ರಹಿ – ಸೊಗಸು, ವೈಭವ – 1. 22

ರಾಜಿಸು – ಶೋಭಿಸು – 3. 0

ರಾಜಮರಾಳ – ರಾಜಹಂಸ – 2. 48

ರಾಜವದನೆ – ಚಂದ್ರನಂತಿರುವ ಮುಖವುಳ್ಳವಳು – 1. 39

ರಾಮಣೀಯಕ – ಮನೋಹರ – 1. 27

ರಾವುತ / ರಾವ್ತ – ರಾಹುತ, ಕುದುರೆ ಸವಾರ – 9. 31, 58

ರೆಂಚೆ – ಆನೆ ಕುದುರೆಗಳಿಗೆ
ಮೇಲೆ ಹಾಕುವ ಯುದ್ಧ ಕವಚ – 9. 57

ವಟ – ಆಲದಮರ – 1. 24

ವರೂಥ – ರಥ – 8. 27; 9. 50

ವಹಿಲ – ವೇಗ, ತ್ವರೆ – 3. 46; 7. 18

ವಾಘೆ – ಕಡಿವಾಣ – 6.20; 7.6; 8.3, 31,37

ವಾರನಾರಿ – ವೇಶ್ಯೆ – 3. 7

ವಾರುವ – ಕುದುರೆ – 7. 7; 9. 26

ವಾವೆವರ್ತನ – ಸಂಬಂಧಿಗಳ ಬಗ್ಗೆ ಇರುವ ಪ್ರೀತಿ – 3. 25

ವಾಸವ – ಇಂದ್ರ – 3. 10

ವಿಗಡ – ದುಷ್ಟ, ಕೆಡುಕ – 4. 29; 9. 37

ವಿಗಡಿಸು	– ಗಾಬರಿಗೊಳ್ಳು	– 3. 65
ವಿಟಾಳಿಸು	– ಹಾಳಾಗು, ಕಳೆದುಹೋಗು	– 7. 31
ವಿಡಾಯ	– ಶೋಭೆ, ಸಾಮರ್ಥ್ಯ, ಆಡಂಬರ	– 8. 50; 9. 58
ವಿತರಣ	– ದಾನ	– 1. 33
ವಿತಳ	– ಏಳು ಅಧೋಲೋಕಗಳಲ್ಲಿ ಒಂದು	– 2. 25; 9.6
ವಿಬುಧ	– ವಿದ್ವಾಂಸ, ಬ್ರಾಹ್ಮಣ	– 7. 35
ವಿರಿಂಚಿ	– ಬ್ರಹ್ಮ	– 5. 3; 8. 65
ವೃಕೋದರ	– ಭೀಮ (ತೋಳದಂತೆ ತೆಳು ಹೊಟ್ಟೆಯನ್ನೂ, ಅಪಾರ ಹಸಿವನ್ನೂ ಉಳ್ಳವನು)	– 1. 16
ವೆಂಟಣಿಸು	– ಸುತ್ತುವರಿ, ಆವರಿಸು	– 9. 18
ವೆಗ್ಗಳಿಸು	– ಅಧಿಕವಾಗು	– 1. 41
ವೈಮಾನಿಕರು	– ಸುರರು	– 6. 6
ಶತಮನ್ಯು	– ಇಂದ್ರ	– 6. 21
ಶಬರ	– ಬೇಡ, ಕಿರಾತ	– 2. 9; 5.29,30,31
ಶರಭ	– ಎಂಟು ಕಾಲುಗಳುಳ್ಳ ಸಿಂಹಕ್ಕಿಂತ ಬಲಿಷ್ಠವಾದ ಒಂದು ಕಾಲ್ಪನಿಕ ಪ್ರಾಣಿ	– 5. 33
ಸ / ಶರಹತಿ	– ಬಾಣಾಘಾತ	– 2. 27; 3. 30, 37; 9. 30, 35
ಶರ್ವಾಣಿ	– ಪಾರ್ವತಿ	– 1. 34
ಶಶಿಕಾಂತೋಪಲ	– ಚಂದ್ರಕಾಂತ ಶಿಲೆ	– 1. 44

ಶಾಕಪಾಕ	– ಸಸ್ಯಾಹಾರ	– 7. 3; 5. 46
ಶಾರ್ದೂಲ	– ಹೆಬ್ಬುಲಿ	– 6. 8
ಸಂಗರ	– ಯುದ್ಧ	– 2. 20; 9.17, 34, 36, 37, 37
ಸಂಜಣಿಸು	– ಹುಟ್ಟು, ಸಂಭವಿಸು	– 7.17; 9. 50
ಸಂದಣಿ	– ಗುಂಪು	– 2. 10, 11, 29; 8. 35, 58, 5.51; 6.27; 7.40; 8.30; 9. 8, 11, 58, 59
ಸತ್ತಿಗೆ	– ಛತ್ರಿ, ಕೊಡೆ	– 6.26; 9.57, 5
ಸದೆ	– ಜಜ್ಜು, ಅಪ್ಪಳಿಸು	– 9. 0,31
ಸಬಳ	– ಕೊಂತ	– 5. 45
ಸಬಳ	– ಈಟಿ	– 8. 56; 9. 23
ಸರಳ	– ಧೂಪದ ಮರ	– 1. 24; 4. 3
ಸರಳು	– ಬಾಣ	– 9. 26, 30, 33
ಸರಾಗ	– ದಯಾರ್ದ್ರ	– 6. 10
ಸರಾಗ	– ತಡೆಯಿಲ್ಲದೆ, ನೇರವಾಗಿ	– 1.30; 2.28, 43;5. 5; 8. 60; 9.62
ಸವಡಿನುಡಿ	– ಎರಡು ಬಗೆಯ ಮಾತುಗಳು, ಇಬ್ಬಗೆಯ ನೀತಿ	– 2. 26; 7. 3
ಸಾಮಜ	– ಆನೆ	– 9. 4

ಸಾರಣೆ	– ಸಾರಿಸು, ಪಸರಿಸು	– 3. 7
ಸಾರಿ	– ಪಗಡೆ	– 9. 42, 44
ಸಾಲ	– ಸಾಲವೃಕ್ಷ, ಮತ್ತಿಮರ	– 1. 24
ಸಿಂಧ	– ನಿಶಾನೆ, ಬಾವುಟ	– 4. 25; 9. 51
ಸಿತಚಾಮರ	– ಬಿಳಿ ಬೀಸಣಿಕೆ	– 4. 25; 9. 51
ಸಿತಾಬ್ಜ	– ಬೆಳ್ದಾವರೆ	– 3. 55
ಸುತಾರೆ	– ಶುಭನಕ್ಷತ್ರ	– 1. 31
ಸುತ್ರಾಮ	– ದೇವೇಂದ್ರ	– 1. 27; 5. 54
ಸುಮನಸ	– ದೇವತೆ	– 4. 9
ಸುಮಾಲ್ಯ	– ತಾಜಾಹೂವಿನ ಹಾರ	– 5. 57
ಸುರಗಿ	– ಚೂಪಾದ ಅಲುಗಿನ ಕತ್ತಿ, ಖಡ್ಗ	– 9. 23
ಸೂತ	– ಸಾರಥಿ, ರಥವನ್ನು ನಡೆಸುವವ	– 8. 33, 51
ಸೂಪಕಾರ	– ಅಡುಗೆಯವ	– 7. 4; 8. 45
ಸೆಳೆನಡು	– ತೆಳುನಡು	– 2. 24, 34
ಸೆಳ್ಳುಗುರು	– ತೆಳುವಾದ, ಚೂಪಾದ ಉಗುರು	– 2. 24
ಸೈಗೆಡೆ	– ಸಾಷ್ಟಾಂಗ ನಮಸ್ಕಾರ ಮಾಡು	– 9. 50
ಸೈರಂಧ್ರಿ	– ಅಂತಃಪುರದ ಸೇವಕಿ, ಪರಿಚಾರಿಕೆ	– 5. 59
ಸೋರ್ಮುಡಿ	– ಸಡಿಲವಾದ ತುರುಬು	– 2. 6; 5. 53
ಸೋಹು	– ಬೇಟೆಯಲ್ಲಿ ಅಟ್ಟು, ಹುಡುಕು, ಎಬ್ಬಿಸು	– 2. 13
ಸ್ತೋಮ	– ಗುಂಪು, ಸಮೂಹ	– 1. 27

ಹಕ್ಕೆ	– ಆಶ್ರಯ	– 5. 26
ಹಚ್ಚಡ	– ಬಟ್ಟೆ, ಮೇಲು ವಸ್ತ್ರ	– 5. 4; 6. 20
ಹಡಪ	– ತಾಂಬೂಲದ ಚೀಲ, ಸಂಚಿ	– 3. 55
ಹಮ್ಮು	– ತೊಡಿಸು	– 9. 57
ಹರವು	– ಹರಡು	– 4. 26
ಹರಿ	– ಸಿಂಹ	– 1. 33; 7. 2
ಹರಿ	– ಅವಸರದಿಂದ ತೆರಳು	– 3. 5
ಹರಿಗೆ	– ಗುರಾಣಿ	– 9. 23
ಹರಿವುದು	– ಸಾಧ್ಯವಾಗುವುದು, ಒಯ್ಯುವುದು	– 4. 7
ಹಲ್ಲಣಿಸು	– ಜೀನನ್ನು ತೊಡಿಸು	– 9. 17
ಹವಣು	– ಪ್ರಮಾಣ, ಅಳತೆ, ಮಿತಿ	– 6. 21
ಹವಣು	– ರೀತಿ	– 8. 63
ಹವಣು	– ಪ್ರಯತ್ನ, ಸಾಧ್ಯತೆ	– 4. 21
ಹಸುಬ	– ಹಸಿರು ಪಾರಿವಾಳ, ಶಕುನದ ಹಕ್ಕಿ	– 1. 42
ಹಳುವು	– ಕಾಡು	– 1. 15; 2. 47; 5. 10; 8. 10, 15
ಹಾಯ್ಕು	– ಬೀಸಿ ಹರಡು, ಬೀಸಿಹಾಕು	– 3. 57; 5. 44
ಹಾಸಂಗಿ	– ಪಗಡೆ ಮಣೆ, ಪಗಡೆ ಹಾಸು	– 4. 26
ಹಾಸರೆ	– ಹಾಸುಗಲ್ಲು	– 5. 23
ಹಿಂತಾಲ	– ಓಲೆಯ ಮರ, ಕಿರು ತಾಳೆಮರ	– 1. 24

ಹಿಮಾಂಶು	– ಚಂದ್ರ	– 4. 12
ಹುತವಹ	– ಅಗ್ನಿ	– 6. 5
ಹೃತಸುಖ	– ಸುಖವಂಚಿತ	– 1. 14
ಹೆಬ್ಬಲ	– ಬೃಹತ್ ಸೈನ್ಯ	– 9. 20
ಹೇವರಿಸು	– ನಾಚು	– 2. 26
ಹೇಷಾರವ	– ಕುದುರೆಯ ಕೆನೆತ	– 8. 30
ಹೊಂಗೊಪ್ಪರಿಗೆ	– ಚಿನ್ನದ ಅಗಲಬಾಯಿಯ ಕಡಾಯಿ	– 3. 54
ಹೊಂಪುಳಿವೋಗು	– ರೋಮಾಂಚನಗೊಳ್ಳು	– 2.8; 3.46; 7. 37
ಹೊಗರು	– ಕಾಂತಿ	– 6. 25
ಹೊಟ್ಟುಗಟ್ಟು	– ವ್ಯರ್ಥಗೊಳಿಸು	– 9. 25
ಹೊದ್ದು	– ಸಮೀಪಿಸು	– 5. 13
ಹೊಯ್ಲು	– ಹೊಡೆತ	– 5. 2
ಹೊರಳಿ	– ಆಧಿಕ್ಯ	– 6. 6
ಹೊರಹು	– ಮೆರುಗು	– 9. 57
ಹೊರಿಗೆ	– ಸಮೀಪ, ಬಳಿಯಲ್ಲಿ	– 5. 19
ಹೊರೆ	– ಸಮೀಪ, ಹತ್ತಿರ	– 4. 22
ಹೊರೆ	– ಭಾರ	– 6. 18
ಹೊರೆ	– ಪೊರೆ, ರಕ್ಷಿಸು	– 1.13; 7.39; 8. 3
ಹೊಲಬು	– ಮಾರ್ಗ, ಕ್ರಮ	– 3. 2; 4. 37
ಹೊಳಲು	– ಪಟ್ಟಣ	– 1.39; 5.53; 8.23

ಅನುಬಂಧ -4

ಭಾರತೀಯ ಮತ್ತು ಇತರ ಭಾಷೆಗಳಲ್ಲಿ ನಳಚರಿತ್ರೆ

	(ಕನ್ನಡ) ಕೃತಿ		ಕರ್ತೃ
1.	ನಳೋಪಖ್ಯಾನ (ಚಂಪು)	-	ಸಿ. ಶಿವಶಂಕರ ಶಾಸ್ತ್ರಿ
2.	ನಳನಾಟಕ	-	ಡಿ. ಶಾಮರಾವ್
3.	ದಮಯಂತೀ ಚರಿತ್ರೆ(ಷಟ್ಪದಿ)	-	ಸೋಸಲೆ ಅಯ್ಯಾಶಾಸ್ತ್ರಿ
4.	ನಳಚರಿತ್ರೆ (ಯಕ್ಷಗಾನ)	-	ಎ. ಪುಟ್ಟಣ್ಣ
5.	ನಳದಮಯಂತೀ ಪುಣ್ಯಚರಿತ್ರೆ	-	ಸಿ. ಶಿವಶಂಕರ ಶಾಸ್ತ್ರಿ
6.	ನಳದಮಯಂತಿಯರ ಕಥೆ (ವಚನ ಕಾವ್ಯ)	-	?
7.	ದಮಯಂತೀ ಸ್ವಯಂವರ	-	ಬಸವಪ್ಪ ಶಾಸ್ತ್ರಿ
8.	ನಳಚಂಪು	-	ಚೌಂಡರಸ
9.	ನಳಚರಿತ್ರೆ (ಷಟ್ಪದಿ)	-	ಕನಕದಾಸ
10.	ವೈಕುಂಠ ನಳಚರಿತ್ರೆ (ಯಕ್ಷಗಾನ)	-	ಅಳಿಯ ಲಿಂಗರಾಜ
11.	ನಳನಾಟಕ	-	ಪುಟ್ಟಣ್ಣ ಕವಿ
12.	ನಳಚರಿತ್ರೆ (ಯಕ್ಷಗಾನ)	-	ಅಳಿಯ ಲಿಂಗರಾಜ
13.	ನಳಚರಿತ್ರೆ (ಯಕ್ಷಗಾನ)	-	ದೇವ ಶಿಖಾಮಣಿ ಶ್ರೀನಿವಾಸಯ್ಯಂಗಾರ್
14.	ನಳಚರಿತ್ರೆ (ಯಕ್ಷಗಾನ)	-	ಭೀಮಪ್ಪ
15.	ನಳಚರಿತ್ರೆ (ಯಕ್ಷಗಾನ)	-	ಧ್ವಜಪುರದ ನಾಗಪ್ಪಯ್ಯ
16.	ನಳದಮಯಂತೀ ನಾಟಕ	-	ಕೃಷ್ಣಾಜೀ ಭಿಷ್ಠೋ
17.	ನಳಮಹಾರಾಯನ ಚರಿತ್ರೆ(ಯಕ್ಷಗಾನ)	-	ಮಹಾಂತ ದೇಶಿಕಿ
18.	ನಳದಮಯಂತಿ	-	ಕೆರೂರು ವಾಸುದೇವಾಚಾರ್ಯ

19. ನಳ ಚರಿತ್ರೆ – ವೆಂಕಟೇಶ ತಿರಕೋ ಕುಲಕರ್ಣಿ(ಗಳಗನಾಥ) 1938

<u>ಸಂಸ್ಕೃತ</u>

	ಕೃತಿ	ಕರ್ತೃ	ವಿಶೇಷಾಂಶ
1.	ನಲೋಪಾಖ್ಯಾನಂ	ವ್ಯಾಸ ಮಹರ್ಷಿ	ಮಹಾಭಾರತ, ವನಪರ್ವ (49–77 ಅಧ್ಯಾಯಗಳು)
2.	ನಲೋಪಾಖ್ಯಾನಂ	ಸೋಮದೇವ ಭಟ್ಟ	ಕಥಾಸರಿತ್ಸಾಗರ (ತರಂಗ 56)
3.	ನಲೋಪಾಖ್ಯಾನಂ	ಗುಣಾಢ್ಯ	ಬೃಹತ್ಕಥಾಂತರ್ಗತ
4.	ಅಂತರ್ನಲಾಖ್ಯಾಯಿಕಾ	ಕ್ಷೇಮೇಂದ್ರ	ಬೃಹತ್ಕಥಾಮಂಜರೀ (ಲಂಬಕ15)
5.	ನಲೋಪಾಖ್ಯಾನಂ	ಕ್ಷೇಮೇಂದ್ರ	ಭಾರತ ಮಂಜರೀ; ಅರಣ್ಯಪರ್ವ (ಶ್ಲೋ: 372–604)
6.	ನಲೋಪಾಖ್ಯಾನಂ	ದೇವಪ್ರಭಾ ಸೂರಿ	ಪಾಂಡವ ಚರಿತಾಂತರ್ಗತ
7.	ನಲಚರಿತಂ	ಹೇಮ ಚಂದ್ರಾಚಾರ್ಯ	ತ್ರಿಷಷ್ಟಿ ಶಲಾಕಾಪುರುಷ ಚರಿತ (ಪರ್ವ 8.ಸಂ.3)
8.	ನೈಷಧ ಚರಿತಂ	ಶ್ರೀ ಹರ್ಷ	
9.	ರಾಘವ ನೈಷಧೀಯಂ	ಶ್ರೀ ಹರಿದತ್ತ ಸೂರಿ	
10.	ನಲೋದಯ ಕಾವ್ಯಂ	ರವಿದೇವ	
11.	ನಲೋದಯ ಕಾವ್ಯಂ	ಕಾಳಿದಾಸ (?)	
12.	ನಲಾಭ್ಯುದಯಃ	ವಾಮನಭಟ್ಟ ಬಾಣ	
13.	ನಲ ಚಂಪೂಃ	ತ್ರಿವಿಕ್ರಮ ಭಟ್ಟ	
14.	ನಲವಿಲಾಸ ನಾಟಕಂ	ರಾಮಚಂದ್ರ ಸೂರಿ	
15.	ನಲಚರಿತ್ರ ನಾಟಕಂ	ನೀಲ ಕಂಠ ದೀಕ್ಷಿತ.	

<u>ತಮಿಳು</u>

ಕವಿ	ಕಾವ್ಯ	ವಿಶೇಷತೆ
1. ನಳವೆಣ್ಬಾ (13 ನೇ. ಶ)	ಪುಗಳೇಂದಿ ಪುಲವರ್	

<u>ತೆಲುಗು</u>

1. ಶೃಂಗಾರ ನೈಷಧಮು	ಶ್ರೀನಾಥ ಕವಿ	
2. ಹರಿಶ್ಚಂದ್ರ ನಲೋಪಾಖ್ಯಾನಮು (ದ್ವ್ಯರ್ಥಿ ಕಾವ್ಯಂ)	ರಾಮರಾಜ ಭೂಷಣುಡು	

<u>ಮಲಯಾಳಂ</u>

1. ನಳಚರಿತಂ (ಅಟ್ಟಕಥ)	ಉನ್ನಯಿ ವಾರಿಯಾರ್	

<u>ಹಿಂದಿ</u>

1. ನಳಚರಿತ (ಕ್ರಿ. ಶ. 1874)	ಶೀತಲ ಪ್ರಸಾದ್ ತಿವಾರಿ	ಮಹಾಭಾರತದ ಕಥೆ

<u>ಗುಜರಾತಿ</u>

1.ನಲಾ ಆಖ್ಯಾನ	ಪ್ರೇಮಾನಂದ ಭಟ್	
2.ಬಾಹುಕ್	ಚಿನು ಮೋದಿ	ಆಧುನಿಕ ದೀರ್ಘ ಕಾವ್ಯ

<u>ಬೆಂಗಾಲಿ</u>

1. ನಲ ದಮಯಂತಿ	ಗಿರೀಶ್ ಚಂದ್ರ ಘೋಷ್	ನಾಟಕ

ಮರಾಠಿ

1. ನಲ ದಮಯಂತಿ(1879)	ವಿಷ್ಣುದಾಸ್ ಭಾವೆ	(ಒಪೆರಾ) ಗೀತನಾಟಕ

ಒಡಿಯಾ

1.ನಲ ದಮಯಂತಿ	ವಿವಿಧರು	ಜಾತ್ರಾ–ಪಾಳಾವಿಶೇಷ ಕಿರುಪುಸ್ತಿಕೆ

<u>ಪರ್ಷಿಯನ್</u>

1.ನಲ್–ಒ–ದಮನ್	ಅಬುಲ್–ಐ–ಫಯಾಜ	ಮಸ್ನವಿ ಕಾವ್ಯ (Abul–I–Fayyaji)

<u>ಇಂಗ್ಲಿಷ್</u>

1. ನಲೋಪಾಖ್ಯಾನಮ್(1860)	ಮೋನಿಯರ್ ವಿಲಿಯಮ್ಸ್	ಅನುವಾದ ಮತ್ತು ಟಿಪ್ಪಣಿ (Monier–Williams)

<u>ರಷ್ಯನ್</u>

1.ನಲ್–ಇ–ದಮಜಾಂತಿ(1904)	ಅರೆನ್ಸ್ಕಿ(Anton Arensky)

<u>ಜರ್ಮನ್/ ಯುರೋಪಿಯನ್</u>

1. ನಳ ಅಂಡ್ ದಮಯಂತಿ	ವಿವಿಧ ಅನುವಾದಕರು

ಅನುಬಂಧ –5

ಪಾರಿಭಾಷಿಕಗಳು

(ಅ) ವ್ಯಕ್ತಿ ನಾಮಗಳು

1. <u>ಅತ್ರಿ:</u>

ಸಪ್ತರ್ಷಿಗಳಲ್ಲಿ ಒಬ್ಬನಾದ ಈತ, ಬ್ರಹ್ಮನ ಮಾನಸಪುತ್ರ ಎಂದು ಖ್ಯಾತನಾಗಿದ್ದ ಒಬ್ಬ ಬ್ರಹ್ಮರ್ಷಿ. ಎಲ್ಲ ಲೋಕಗಳ ಉತ್ಪತ್ತಿ ಮತ್ತು ಪ್ರತಿಷ್ಠೆಗೆ ಆಧಾರ ಭೂತವಾದ ಅಷ್ಟಪ್ರಕೃತಿಗಳೆಂದು ಖ್ಯಾತರಾದ ಪ್ರಜಾಪತಿಗಳಲ್ಲಿ ಈತನೂ ಒಬ್ಬ. ಮಹಾ ಪತಿವ್ರತೆ ಯೆಂದು ಹೆಸರಾದ ಅನಸೂಯೆ ಇವನ ಪತ್ನಿ. ಕೆಲಕಾಲ ಈತ ಬ್ರಹ್ಮನ ಅಧಿಕಾರದಲ್ಲಿ ಇದ್ದ. ಹಗಲಲ್ಲಿ ಸೂರ್ಯನಾಗಿಯೂ ಇರುಳಲ್ಲಿ ಚಂದ್ರನಾಗಿಯೂ ಕೆಲಕಾಲ ಇದ್ದ.

2. <u>ಕಲಿಪುರುಷ:</u>

ಇವನ ಮೂಲ ಹೆಸರು ಕಲಹ. ಅಧರ್ಮವೇ ಇವನ ಪ್ರಧಾನ ಗುಣ. ಪಾಪದ ಅಭಿಮಾನಿ ಪುರುಷ ಇವನು. ಅನೃತ, ಮದ, ಕಾಮ, ಹಿಂಸೆ, ಹಾಗೂ ವೈರ– ಈ ಐದೂ ಕಲಿಸ್ಥಾನಗಳೆಂದೂ: ದ್ಯೂತ, ಸುರಾಪಾನ, ಸ್ತ್ರೀ ವ್ಯಾಮೋಹ ಹಾಗೂ ವಧಾಸ್ಥಾನಗಳಲ್ಲಿ (ಸೂನಾ)ಇವನು ಸದಾ ವಿರಮಿಸುತ್ತಾನೆಂದೂ ಖ್ಯಾತಿ. ಲೋಕದಲ್ಲಿ ನಡೆಯುವ ಸಮಸ್ತ ಅನ್ಯಾಯಗಳಿಗೂ ಪಾಪಕಾರ್ಯಗಳಿಗೂ ಇವನೇ ಮೂಲ, ಇವನ ಜನನಿ ಹಿಂಸೆ; ಜನಕ, ಕ್ರೋಧ: ಹಾಗಾಗಿ ಇವನಿಂದ ಘಟಿಸುವ ಎಲ್ಲವೂ ವಿನಾಶ ಮೂಲವಾದ ಅಕಾರ್ಯಗಳೇ ಆಗಿರುತ್ತವೆ ಎಂಬುದಾಗಿ ಪುರಾಣಗಳು ವರ್ಣಿಸುತ್ತವೆ.

ನಳ ಚರಿತ್ರೆಯಲ್ಲಿ ಕವಿ ಕನಕದಾಸರು ಕಲಿಯನ್ನು ವರ್ಣಿಸಿರುವ ಶೈಲಿಯು ಅವನ ತಮೋಗುಣದ ಪ್ರತೀಕವಾಗಿವೆ. ಗುಂಗುರು ಕೂದಲು, ತಗ್ಗಿದ ಕೊರಳು,

ಕೆಂಗರಿಗಣ್ಣಿನ ಮುಖ, ಹರಕುಗಡ್ಡ, ಕೆಂಚು ಮೀಸೆ, ಮಲಿನವಸನ, ಅವನ ಎಡ ಬಲಗಳಲ್ಲಿ ಕರಾಳಭಟರು– ಹೀಗೆ ಒರಟುತನದ, ಅವ್ಯವಸ್ಥ ಗುಣಶೀಲಶರೀರ ಧರ್ಮದವನು ಕಲಿ.

3. ರೋಮಶ ಮುನಿ:

ಈತ ಪೂರ್ವಾಶ್ರಮದಲ್ಲಿ ಇಕ್ಷ್ವಾಕು ವಂಶದ ಕ್ಷತ್ರಿಯನಾಗಿದ್ದವನು. ನಂತರದಲ್ಲಿ ಒಬ್ಬ ಬ್ರಹ್ಮರ್ಷಿಯಾಗಿ ಪ್ರಸಿದ್ಧನಾದ ಬಳಿಕ ರೋಮಶ ಮುನಿಯೆಂದೂ, ಸೂತನೆಂದೂ, ಹೆಸರಾದವನು. ಅರ್ಜುನನು ಅಸ್ತ್ರಲಾಭಕ್ಕಾಗಿ ಇಂದ್ರಲೋಕಕ್ಕೆ ಹೋಗಿದ್ದಾಗ ಕಾಮ್ಯಕವನದಲ್ಲಿ ಅವನಿಗಾಗಿ ಕಾದು ಚಿಂತಿತರಾಗಿದ್ದ ಪಾಂಡವರಿಗೆ ರೋಮಶನು ನಳಚರಿತ್ರೆಯನ್ನು ಹೇಳಿ ಸಾಂತ್ವನಗೊಳಿಸಿದನು.

4. ಋತುಪರ್ಣ:

ಇವನು ಅಯೋಧ್ಯೆಯನ್ನಾಳುತ್ತಿದ್ದ ಇಕ್ಷ್ವಾಕು ಕುಲದ ಒಬ್ಬ ರಾಜ. ಈತ ದ್ಯೂತ ವಿದ್ಯೆಯ ಮರ್ಮಜ್ಞನಾಗಿದ್ದನು. ನಳನು ದ್ಯೂತದಲ್ಲಿ ಸೋತಾಗ ಬಾಹುಕನೆಂಬ ಹೆಸರಿನಿಂದ ಇವನಲ್ಲಿ ಕೆಲಕಾಲ ಅಶ್ವಾಧ್ಯಕ್ಷನಾಗಿ ನೇಮಕಗೊಂಡಿದ್ದ. ಗಣಿತ ವಿದ್ಯೆಯಲ್ಲಿ ಈತನಿಗೆ ಅದ್ಭುತ ಶಕ್ತಿ ಇತ್ತು. ದಮಯಂತಿಯ ದ್ವಿತೀಯ ಸ್ವಯಂವರಕ್ಕೆ ಈತ ಕನ್ಯಾರ್ಥಿಯಾಗಿ ವಿದರ್ಭ ದೇಶಕ್ಕೆ ಹೋಗಿದ್ದನು. ನಳನಿಗೆ ಅಕ್ಷಹೃದಯವನ್ನು ಕಲಿಸಿ ಅವನಿಂದ ಅಶ್ವ ಹೃದಯವನ್ನು ಕಲಿತುಕೊಂಡನು.

5. ಕಾರ್ಕೋಟಕ:

ಕಶ್ಯಪ ಮತ್ತು ಕದ್ರುವಿನ ಸಂತಾನಗಳಲ್ಲಿ ಪ್ರಮುಖನಾದ ಒಬ್ಬ ಮಹಾವಿಷಕಾರಿ ನಾಗ. ಈತನು ಹಿಂದೆ ಬ್ರಹ್ಮರ್ಷಿಯಾದ ನಾರದನನ್ನು ವಂಚಿಸಿದ್ದರಿಂದ ಅವನು ಕ್ಷುದ್ರನಾಗಿ, 'ನೀನು ಚಲನರಹಿತನಾಗಿ ಇಲ್ಲೇ ಬಿದ್ದಿರು' ಎಂದು ಶಾಪ ಕೊಟ್ಟನು. ಮುಂದೊಂದು ಕಾಲಕ್ಕೆ ನಳನಿಂದ ನಿನಗೆ ಶಾಪವಿ ಮೋಚನೆ ಎಂಬ ಉಪಶಾಪವನ್ನು ಕೊಟ್ಟನು. ನಳನು ಕಾಡ್ಗಿಚ್ಚಿನಿಂದ ಕಾರ್ಕೋಟಕನನ್ನು ರಕ್ಷಿಸಿದಾಗ ಅವನನ್ನೇ ಕಚ್ಚಿ ಕುರೂಪಿಯಾಗಿಸಿ, ಕಲಿಯಿಂದಾಗಿ ಉಂಟಾದ ಎಲ್ಲ ತೊಂದರೆಗಳಿಂದಲೂ ಹೊರಬರಲು ಈ ಕುರೂಪವು

ಉಪಾಯವಾಗಿ ಫಲಿಸುವುದೆಂದು ಹರಸಿದನು. ಬಾಹುಕನೆಂಬ ಹೆಸರಿನಿಂದ ಅಯೋಧ್ಯಾಧಿ ಪತಿಯಲ್ಲಿ ಅಶ್ವಾಧಿಪತಿಯಾಗಿರಲು ಸೂಚಿಸಿ, ನಳನು ಬಯಸಿದಾಗ ಅವನ ಪೂರ್ವರೂಪಕ್ಕೆ ಮರಳಲು ಒದಗುವ ಎರಡೂ ದಿವ್ಯ ವಸ್ತ್ರಗಳನ್ನು ಪ್ರದಾನ ಮಾಡಿದನು. ಇವನು ದಕ್ಷಬ್ರಹ್ಮನ ಮಗಳಾದ ಕದ್ರೂವಿಗೆ ಕಶ್ಯಪ ಮುನಿಯಿಂದ ಜನಿಸಿದ ಸರ್ಪಗಳಲ್ಲೊಬ್ಬ.

6. <u>ಶತಮನ್ಯು:</u>

ಇಂದ್ರನ ಹೆಸರುಗಳಲ್ಲೊಂದು. ಕಶ್ಯಪ ಮುನಿಯ ಪತ್ನಿಯರಲ್ಲಿ ಒಬ್ಬಳಾದ ದನಾಯುವಿನ ಮಗನಾದ ವೃತ್ರನೆಂಬ ಅಸುರರು ದೇವತೆಗಳಿಗೆ ವೈರಿ. ಇವನು ಮಹಾ ಶಕ್ತಿವಂತ. ಇಂದ್ರನು ಒಮ್ಮೆ ಈ ಮಹಾ ಅಸುರನ ಮಸ್ತಕದ ಮೇಲೆ ಪ್ರಹಾರ ಮಾಡಿದುದರಿಂದ ಅಬೇಧ್ಯವೆನಿಸಿದ್ದ ಅವನ ವಜ್ರಾಯುಧವು ಹತ್ತು ದೊಡ್ಡ ತುಂಡುಗಳಾಗಿಯೂ ನೂರು ಸಣ್ಣ ತುಂಡುಗಳಾಗಿಯೂ ಛಿದ್ರಗೊಂಡಿತ್ತು. ಇವನಿಗೂ ಇಂದ್ರನಿಗೂ ದೀರ್ಘಕಾಲ ಯುದ್ಧವಾಗಿ ಇಂದ್ರನು ಇವನನ್ನು ಸಂಹರಿಸಿದನು. ಇದರಿಂದಾಗಿ ಅವನಿಗೆ ಬ್ರಹ್ಮಹತ್ಯಾದೋಷ ಬಂದಿತು. ಈ ಮಹಾ ಹತ್ಯಾದೋಷದ ಪರಿಣಾಮವಾಗಿ ಇಂದ್ರನು ಅಮರಾವತಿಯ ಅಗ್ರಪಟ್ಟವನ್ನು ಕಳೆದುಕೊಂಡು, ಪತ್ನಿಯಾದ ಶಚೀದೇವಿಯನ್ನು ಅಗಲಿದನು. ಸ್ಥಾನಭ್ರಷ್ಟನಾದ ಇಂದ್ರ ತದನಂತರ ಎಲ್ಲೆಲ್ಲಿಯೋ ಅಲೆದಾಡಿ ತೊಳಲಬೇಕಾಗಿ ಬಂತು. ಕೆಲ ಕಾಲಾನಂತರ ವಿಷ್ಣುವಿನ ಸಲಹೆಯಂತೆ ಪಾಪ ಪರಿಹಾರಾರ್ಥವಾಗಿ ಅಶ್ವಮೇಧಯಾಗವನ್ನು ಮಾಡಿದನು. ಕರ್ಮಫಲವೆಂಬುದು ಯಾರನ್ನೂ ಲಕ್ಷಿಸದು ಎಂಬುದಕ್ಕೆ ಇವನ ಕಥೆ ನಿದರ್ಶನ ವಾಯಿತು. ನಳಚರಿತ್ರೆಯಲ್ಲಿ ದಮಯಂತಿಯ ಸ್ವಯಂವರದಲ್ಲಿ ಇವನೂ ಒಬ್ಬ ಕನ್ಯಾರ್ಥಿಯಾಗಿದ್ದ.

7. <u>ಪಶುಪತಿ:</u>

ಪ್ರಥಮ ಗಣಗಳ ಒಡೆಯನಾದ ಶಿವನ ರೂಪಗಳಲ್ಲಿ ಒಂದು. ಮಹಾವಿಷ್ಣುವಿನ ನಾಭಿಕಮಲದಿಂದ ಹುಟ್ಟಿದ ಬ್ರಹ್ಮನಿಗೆ ಪಂಚಮುಖಗಳಿದ್ದುವು. ಇದರಿಂದ ತ್ರಿಮೂರ್ತಿಗಳಲ್ಲಿ ಮತ್ತೊಬ್ಬನಾದ ಶಿವನಿಗಿಂತ ತಾನೇ ಮೇಲು ಎಂಬ ಗರ್ವದಿಂದ ಇವನು ವೇದಗಳನ್ನು ಹಳಿಯುತ್ತ ತಿರುಗಾಡುವುದನ್ನು ಕಂಡ ವಿಷ್ಣುವು

ಸಂಹಾರ ಕರ್ತನಾದ ಶಿವನೇ ಮೇಲು ಎಂದನು. ಇದರಿಂದ ಕುಪಿತನಾದ ಬ್ರಹ್ಮನು ಶಿವನನ್ನು ಹಳಿದನು. ಇದರಿಂದ ಕ್ಷುದ್ರನಾದ ಶಿವನು ಭೈರವನನ್ನು ಸೃಷ್ಟಿಸಿ ಅವನ ಮೂಲಕ ಬ್ರಹ್ಮನ ಐದನೆಯ ತಲೆಯನ್ನು ಕತ್ತರಿಸಿದನು. ಕತ್ತರಿಸಿದ ಆ ತಲೆಯು ಶಿವನ ಕೈಗೆ ಅಂಟಿಕೊಂಡಿತು. ಇದರಿಂದ ಅವನಿಗೆ ಬ್ರಹ್ಮಹತ್ಯಾ ದೋಷ ತಗುಲಿಕೊಂಡಿತು. ಆ ಬ್ರಹ್ಮಕಪಾಲ ಸಮೇತ ಶಿವನು ಕಾಪಾಲಿಕನಾಗಿ ಭಿಕ್ಷಾರ್ಥಿಯಾಗಿ ತಿರುಗುತ್ತ ವಿಷ್ಣು ವನ್ನು ಸಂದರ್ಶಿಸಿ ಅವನ ಸಲಹೆಯಂತೆ ಕಾಶೀ ಕ್ಷೇತ್ರವನ್ನು ಸೇರಲು ಬ್ರಹ್ಮಹತ್ಯಾ ರೂಪವಾದ ಕಪಾಲವು ಪಾತಾಳಕ್ಕೆ ಕುಸಿದು ಬಿತ್ತು. ಪೂರ್ವಜನ್ಮ ಕರ್ಮವೆಂಬುದು ಯಾರನ್ನೂ ಲಕ್ಷಿಸದು ಎಂಬುದಕ್ಕೆ ಇದು ನಿದರ್ಶನವಾಯಿತು.

8. <u>ರಾಘವ ನೃಪ:</u>

ಇಕ್ಷ್ವಾಕು ವಂಶದ ರಘುಮಹಾರಾಜನ ವಂಶಾವಳಿಯಲ್ಲಿದ್ದ ಕಾರಣ ದಶರಥ ಪುತ್ರನಾದ ರಾಮನು ರಾಘವನೆನಿಸಿದ. 19ನೆಯ ತ್ರೇತಾಯುಗದಲ್ಲಿ ಮಹಾ ವಿಷ್ಣುವಿನ ಹತ್ತು ಅವತಾರಗಳಲ್ಲಿ ಇವನು ಏಳನೆಯ ಅವತಾರ ಪುರುಷನಾಗಿ ಜನಿಸಿದ. ಮಿಥಿಲೆಯ ರಾಜರ್ಷಿ ಜನಕರಾಜನ ಮಗಳು ಸೀತೆ ಇವನ ಧರ್ಮಪತ್ನಿ. ಪಿತೃವಾಕ್ಯ ಪರಿಪಾಲನಾರ್ಥವಾಗಿ ಇವನು ಸಕಲ ಸುಖಸೌಭಾಗ್ಯಗಳನ್ನು, ರಾಜ ಪದವಿಯನ್ನೂ ತೊರೆದು ಪತ್ನಿ ಮತ್ತು ತಮ್ಮನಾದ ಲಕ್ಷ್ಮಣನ ಸಹಿತ ವನವಾಸಕ್ಕೆ ತೆರಳಬೇಕಾಯಿತು. ಹದಿನಾಲ್ಕು ವರ್ಷ ವನವಾಸ ಕಾಲದಲ್ಲಿ ತನ್ನ ಪತ್ನಿಯನ್ನು ಅಪಹರಿಸಿದ್ದ ರಾವಣನೊಂದಿಗೂ, ಅರಣ್ಯವಾಸಿಗಳಾಗಿ ಜನವಿರೋಧಿ ಮನಸ್ಥಿತಿಯ ಅಸುರರೊಂದಿಗೂ ಕಾದಾಡಬೇಕಾಗಿ ಬಂತು. ರಾಜಾಧಿರಾಜನಾದರೂ ದೈವಾಂಶ ಸಂಭೂತನಾದರೂ ಕಷ್ಟ ಕರ್ಮವಶನಾಗಿ ತೊಳಲಬೇಕಾಗಿ ಬಂತು.

9. <u>ಯಮನಂದನ:</u>

ದಕ್ಷಿಣ ದಿಕ್ಕಿನ ಒಡೆಯನಾದ ಸೂರ್ಯಪುತ್ರ ಯಮನೇ ಪಾಂಡುಪತ್ನಿ ಕುಂತಿಯಲ್ಲಿ ಪಾಂಡುವಿನ ಕ್ಷೇತ್ರಪುತ್ರನಾಗಿ ಜನಿಸಿದನು. ಅಜಾತಶತ್ರು ಎನಿಸಿದರೂ ಧರ್ಮರಾಯನೆಂದೂ, ಯುಧಿಷ್ಠಿರನೆಂದೂ ಹೆಸರು. ಇವನ ಮುಖ್ಯಪತ್ನಿ ದ್ರುಪದ

ರಾಜನ ಯಾಗಪುತ್ರಿ ದ್ರೌಪದಿ. ರಾಜಸೂಯಯಾಗಾನಂತರ ಚಕ್ರವರ್ತಿ ಪೀಠವನ್ನಲಂಕರಿಸಿದ ಇವನು ಶಕುನಿಯೊಂದಿಗೆ ದ್ಯೂತದಲ್ಲಿ ಪರಾಜಿತನಾಗಿ ರಾಜ್ಯ ಭೋಗಭಾಗ್ಯಾಧಿಕ್ಯಗಳನ್ನು ಪಣಕ್ಕಿಟ್ಟು ಸ್ಥಾನಭ್ರಷ್ಟನಾಗಿ ತಾಯಿ, ಪತ್ನಿ, ಮತ್ತು ಸಹೋದರರರೊಂದಿಗೆ ವನವಾಸಕ್ಕೆ ತೆರಳಬೇಕಾಯಿತು. ರೋಮಶ ಮುನಿ ಸಮೇತನಾಗಿ ತೀರ್ಥಯಾತ್ರೆ ಮಾಡುವ ಸಂದರ್ಭದಲ್ಲಿ ಅರ್ಜುನನು ಪಾಶುಪತಾಸ್ತ್ರವನ್ನು ಪಡೆಯಲು ಸ್ವರ್ಗಕ್ಕೆ ತೆರಳಿ, ಬರಲು ತಡವಾದಾಗ ಚಿಂತಿತನಾಗಿದ್ದನು. ಆಗ ರೋಮಶ ಮುನಿ ಕಾಮ್ಯಕವನದಲ್ಲಿ ತಂಗಿದ್ದ ಸಂದರ್ಭ. ರೋಮಶ ಮುನಿಯು ಅವನಿಗೆ ನಳಮಹಾರಾಜನು ಇವನಂತೆಯೇ ಕಷ್ಟಪಟ್ಟ ಚರಿತ್ರೆಯ ವಿವರಗಳನ್ನು ಹೇಳಿದನು.

10. ಧೌಮ್ಯಮುನಿ:

ಅಷ್ಟವಸುಗಳಲ್ಲೊಬ್ಬನಾದ ಪ್ರತ್ಯೂಷನ ಮಗನಾದ ಈತನೇ ಪಾಂಡವರ ರಾಜಪುರೋಹಿತ. ಧರ್ಮರಾಜನಿಗೆ ಸೂರ್ಯಾಷ್ಟೋತ್ತರ ಮಂತ್ರವನ್ನು ಉಪದೇಶಿಸಿ ಸೂರ್ಯನಿಂದ ಅಕ್ಷಯಪಾತ್ರೆಯನ್ನು ಪ್ರದಾನ ಮಾಡಿಸಿದವನು ಇವನೇ. ಪಾಂಡವರ ಅರಣ್ಯವಾಸ ಕಾಲದಲ್ಲಿ ಅವರ ಜೊತೆಜೊತೆಗೇ ಇದ್ದು ಅವರಿಗೆ ಅನೇಕ ಪೂರ್ವಸೂರಿಗಳ ಕುರಿತಂತೆಯೂ ರಾಜ ಮಹಾರಾಜರ ಕುರಿತ ಸತ್ಕತೆಗಳನ್ನು ಹೇಳುತ್ತ ಅವರ ಕಷ್ಟ ಶಮನಾರ್ಥವಾಗಿ ಇದ್ದವನು. ಪಾಂಡವರ ಅಜ್ಞಾತವಾಸ ಕಾಲದಲ್ಲಿ ಅವರ ಅಗ್ನಿ ಹೋತ್ರಗಳನ್ನು ರಕ್ಷಿಸಿಕೊಂಡು ಅರಣ್ಯದಲ್ಲೇ ಇದ್ದವನು.

11. ಸೂತ:

ಸೂತಕುಲದ ಒಬ್ಬ ಮಹರ್ಷಿ. ಇವನು ವ್ಯಾಸಮುನಿಯ ಶಿಷ್ಯ. ನೈಮಿಷಾರಣ್ಯದಲ್ಲಿ ಈತನು ಋಷಿಮುನಿಗಳಿಗೆಲ್ಲ ಪುರಾಣ, ಇತಿಹಾಸಗಳನ್ನು ಹೇಳಿದ. ಇವನಿಗೆ ರೋಮಹರ್ಷಣನೆಂಬ ಹೆಸರೂ ಇದೆ. ರೋಮಶಮುನಿಯು ನಳನ ಕಥೆಯನ್ನು ಧರ್ಮರಾಯನಿಗೆ ಹೇಳುವಾಗ ಅದು ಮೊದಲಿಗೆ ಸೂತ ಮುನಿಯ ಮುಖಾಂತರ ಈ ಪೌರಾಣಿಕ ಕಥಾ ಪ್ರಸಂಗಗಳು ಹೇಗೆ ಪ್ರಚುರ ವಾದುವೆಂದು ತಿಳಿಸಿದನು.

12. ಹರಿಶ್ಚಂದ್ರ:

ಈತ ಸೂರ್ಯವಂಶದ ತ್ರಿಶಂಕುವಿನ ಮಗ. ವಶಿಷ್ಠ–ವಿಶ್ವಾಮಿತ್ರರ ನಡುವಿನ ವಾಗ್ವಾದದಲ್ಲಿ ಭೂಲೋಕದಲ್ಲಿರುವ ಸತ್ಯವಂತರು ಯಾರು ಎಂಬ ಪ್ರಶ್ನೆಗೆ ಹರಿಶ್ಚಂದ್ರನ ವಿಷಯ ಪ್ರಸ್ತಾಪವಾಯಿತು. ವಿಶ್ವಾಮಿತ್ರನು ಹರಿಶ್ಚಂದ್ರನ ಸತ್ಯ ನಿಷ್ಠೆಯನ್ನು ಪರೀಕ್ಷಿಸುವ ಸಲುವಾಗಿ ಆತನಿಗೆ ನಾನಾರೀತಿಯ ಕಷ್ಟ ಪರಂಪರೆಯನ್ನೇ ಸೃಷ್ಟಿಸಿದನು. ತತ್ಪರಿಣಾಮವಾಗಿ ಹರಿಶ್ಚಂದ್ರನು ರಾಜ್ಯ ಕೋಶಗಳನ್ನು ಕಳೆದುಕೊಂಡನು. ಹೆಂಡತಿಯನ್ನು, ಮಗನನ್ನು ಮಾರಿದನು. ತಾನು ಚಾಂಡಾಲನಿಗೆ ದಾಸನಾಗಿ ಸ್ಮಶಾನವನ್ನು ಕಾಯ್ದನು. ಆದರೂ ಸತ್ಯವನ್ನು ಬಿಡಲಿಲ್ಲ. ವೇದ, ಪುರಾಣ, ಸಾಹಿತ್ಯಗಳಲ್ಲಿಯೂ ಪ್ರಸ್ತಾಪವಾಗಿರುವ ಈ ಕಥೆಯನ್ನು ರೋಮಶ ಮುನಿಯು ಕಾಮ್ಯಕವನದಲ್ಲಿ ಧರ್ಮರಾಯಾದಿ ಪಾಂಡವರಿಗೆ ಹೇಳಿದನು.

(ಆ) ಸ್ಥಳ ನಾಮಗಳು

1. ಕಾಮ್ಯಕವನ:

ಇಂದ್ರಪ್ರಸ್ಥದ (ಪಾಂಡವಪ್ರಸ್ಥವೆಂದೂ ಖ್ಯಾತಿ) ಪಶ್ಚಿಮಕ್ಕಿರುವ ಒಂದು ಪುಣ್ಯವನ. ಸರಸ್ವತೀ ನದೀ ತೀರದಲ್ಲಿರುವ ಈ ವನ ಋಷಿಮುನಿಗಳಿಗೆ ಅತಿಪ್ರಿಯವಾದದ್ದು. ಪಾಂಡವರು ವನವಾಸದಲ್ಲಿರುತ್ತ ಪರ್ಯಟನಾರ್ಥವಾಗಿದ್ದಾಗ ಮಾರ್ಗ ಮಧ್ಯೆ ಕಂಡ ಈ ವನದಲ್ಲೇ ವಾಸಮಾಡತೊಡಗಿದ್ದರು. ಇಲ್ಲಿಯೇ ಸ್ವರ್ಗಕ್ಕೆ ಕಾರ್ಯಾರ್ಥವಾಗಿ ತೆರಳಿದ್ದ ಅರ್ಜುನನಿಗಾಗಿ ಕಾಯುತ್ತ ಚಿಂತಿತರಾಗಿದ್ದ ಧರ್ಮರಾಯಾದಿ ಪಾಂಡವರಿಗೆ ರೋಮಶಮುನಿಯು ನಳಮಹಾರಾಜನ ಚರಿತ್ರೆ ಯನ್ನು ಹೇಳುತ್ತಾನೆ.

2. ಅಯೋಧ್ಯಾನಗರ:

ಇದು ಸರಯೂ ನದಿ ತೀರದಲ್ಲಿದ್ದ ಕೋಸಲ ದೇಶದ ರಾಜಧಾನಿ ಹಾಗೂ ಇಕ್ಷ್ವಾಕು ವಂಶದ ರಾಜನ ರಾಜಧಾನಿಯೂ ಹೌದು. ಇಲ್ಲಿ ರಾಜನಾಗಿದ್ದ ಋತುಪರ್ಣನ ಆಸ್ಥಾನದಲ್ಲಿ ನಳಚಕ್ರವರ್ತಿಯು ಕುರೂಪಿಯಾಗಿ ಬಾಹುಕನೆಂಬ ಅಶ್ವವಿದ್ಯಾಪರಿಣತನಾಗಿಯೂ, ಪಾಕಶಾಕ ಚತುರನೂ ಆಗಿ ಕೆಲಕಾಲ ಇದ್ದನು.

3. ನಿಷಧ ನಗರ:

ಇದು ನಳಚಕ್ರವರ್ತಿಯ ರಾಜಧಾನಿ. ನಗರದ ತುಂಬ ಎಲ್ಲೆಲ್ಲಿಯೂ ಗೋಪುರ, ಪ್ರಾಕಾರಗಳು, ಚಿನ್ನರನ್ನಗಳಿಂದ ವರ್ಣಮಯವಾಗಿ ಕಂಗೊಳಿಸುತ್ತಿದ್ದ ದೇವಾಲಯಗಳು ನಗರದ ಅಂದವನ್ನು ಹೆಚ್ಚಿಸಿದ್ದುವು. ತಿರುವು ತಿರುವಾದ ಕೋಟೆಯ ಬುರುಜುಗಳು, ವಿಸ್ತಾರವಾದ ಹುಲಿಮುಖದ ದ್ವಾರಗಳಿಂದಲೂ ಅಲ್ಲಲ್ಲಿ ಇದ್ದ ಎತ್ತರೆತ್ತರವಾದ ವೇದಿಕೆಗಳಿಂದಲೂ ಸ್ವರ್ಣಮಯವಾದ ಮೇಲ್ಮಾಳಿಗೆಗಳೂ ಹಾಗೂ ಪಾವಟಿಗೆಗಳಿಂದಲೂ, ಸೂರ್ಯಚಂದ್ರರು ಸಾಗಿ ಹೋಗುವ ಬೀದಿಗಳಿಂದಲೂ ಸದಾ ಸಂಗೀತ, ವಾದ್ಯಗಳ ನಾದ ವೈಭವದಿಂದ ಕಲಕಲಗೊಂಡ ಕೇರಿಗಳಿಂದಲೂ ನಾನಾ ರೀತಿಯ ಫಲವೃಕ್ಷಗಳಿಂದ ಸಮೃದ್ಧವಾದ ಉದ್ಯಾನವನಗಳಿಂದಲೂ ಆ ನಗರ ವೈಭವೋಪೇತವಾಗಿ ಕಂಗೊಳಿಸುತ್ತಿತ್ತು. ಇದು ಅತ್ಯಂತ ಪ್ರಾಚೀನವಾದ ನಗರವೆಂದು ಖ್ಯಾತಿವೆತ್ತು ನಳ ಚಕ್ರವರ್ತಿಯ ತಂದೆಯಾದ ವೀರಸೇನನೆಂಬ ರಾಜನ ಆಳ್ವಿಕೆಯಿಂದ ಮೂರೂಲೋಕಗಳಲ್ಲೂ ಪ್ರಸಿದ್ಧವಾಗಿತ್ತು.

4. ಚೇದಿ ನಗರ:

ಇದು ಪೂರ್ವಪ್ರಸಿದ್ಧವಾದ ಒಂದು ಪ್ರಾಚೀನ ದೇಶ. ಈ ನಗರದಲ್ಲಿ ದಮಯಂತಿಯು ನಳನನ್ನು ಹುಡುಕುತ್ತ ಆಶ್ರಯಾಕಾಂಕ್ಷಿಯಾಗಿ ಬಂದು ಸೇರಿದಳು. ಚೇದಿರಾಜನ ರಾಣಿ ವಾತ್ಸಲ್ಯಮಯಿಯಾದ ತಾಯಿಯಂತೆ ಅವಳಿಗೆ ರಕ್ಷಣೆ ನೀಡಿದ್ದಳು. ನಿಷಧ ನಗರದಂತೆಯೇ ಈ ದೇಶವೂ ಹೊಳೆಹೊಳೆಯುವ ಸ್ವರ್ಣಮಯವಾದ ಮಾಳಿಗೆಗಳಿಂದಲೂ, ಸುಖ ಸಮೃದ್ಧಿಗಳಿಂದಲೂ ಕೂಡಿತ್ತು.

ನಳಮಹಾರಾಜನನ್ನು ಹುಡುಕಿಕೊಡುವ ಪ್ರಥಮ ಪ್ರಯತ್ನಗಳು ನಡೆದದ್ದು ಇಲ್ಲಿಯೇ ಎಂಬಂತೆ ನಳಚರಿತ್ರೆ ಈ ಪ್ರದೇಶಕ್ಕೆ ಪ್ರಾಮುಖ್ಯವನ್ನು ನೀಡಿದೆ.

❒ ❒ ❒